ನಾದ ಸುನಾದ

('ನಾದವೈಭವಂ' ಉಡುಪಿ ವಾಸುದೇವ ಭಟ್ಟರ ಅಭಿನಂದನ ಗ್ರಂಥ)

ಸಂಪಾದಕ :

ಬೆಳಗೋಡು ರಮೇಶ ಭಟ್



ನಾದ ಸುನಾದ

('ನಾದವೈಭವಂ' ಉಡುಪಿ ವಾಸುದೇವ ಭಟ್ಟರ ಅಭಿನಂದನ ಗ್ರಂಥ)

ಸಂಪಾದಕ:
ಬೆಳಗೋಡು ರಮೇಶ ಭಟ್

ಪ್ರಕಾಶಕರು:
'ನಾದವೈಭವಂ' ವಾಸುದೇವ ಭಟ್ಟರ ಅಭಿನಂದನ ಸಮಿತಿ, ಉಡುಪಿ
ಇವರ ಪರವಾಗಿ
ಕನ್ನಡ ಸಂಘ, ಕಾಂತಾವರ - 574129
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

Naada Sunaada - A collection of articles of critical perspective on 'Nadavaibhavam' Udupi Vasudeva Bhat, Edited by Belagodu Ramesh Bhat, Published by Kannada Sangha, Kanthavara - 574129 on behalf of 'Nadavaibhavam' Vasudeva Bhattara Abhinandana Samithi, Udupi.

Pages : xx+292

Price : Rs. 250.00

First Edition : May, 2007

ಸಲಹೆ, ಸಹಕಾರ ಮಾರ್ಗದರ್ಶನ:

ಡಾ. ನಾ. ಮೊಗಸಾಲೆ, ಕಾಂತಾವರ

ಎಂ. ಪಿ. ಓಂಕಾರೇಶ್ವರಿ

ಎ. ಈಶ್ವರಯ್ಯ

ಜಯರಾಮ ಕಾರಂತ

ಅಂಶುಮಾಲಿ

ನೆಂಪು ನರಸಿಂಹ ಭಟ್ಟ

DTP : Graphics @ NEMPU, ಪರ್ಕಳ

Printed at : Vishwas Prints
Chamarajpet, Bangalore-18.
Ph: 26604835

ಅಭಿನಂದನೆ

'ನಾದವೈಭವಂ'ನ ವಾಸುದೇವ ಭಟ್ಟರೆಂದೇ ಹೆಸರು ಗಳಿಸಿರುವ ಉಡುಪಿಯ ಶ್ರೀ ವಾಸುದೇವ ಭಟ್ಟರು ತಾವೇ ಹುಟ್ಟುಹಾಕಿದ ಸಂಗೀತ ಶಿಕ್ಷಣ ಮತ್ತು ಸಂಶೋಧನೆಗೆ ಸಂಬಂಧಿಸಿದ ಸಂಸ್ಥೆ 'ನಾದವೈಭವಂ' ಮೂಲಕ ಉಡುಪಿಯ ಪರಿಸರದಲ್ಲಿಂದು ಚಿರಪರಿಚಿತರು. ತಮ್ಮ ತಂದೆ ದಿ। ಯು. ಎಸ್. ಭಟ್ ಇವರ ಪ್ರೋತ್ಸಾಹದಿಂದ ಎಂಟನೇ ವಯಸ್ಸಿನಿಂದಲೇ ಸಂಗೀತದ ಕಡೆ ಒಲವು ತೋರಿ, ಅಲ್ಲಿಂದ ಇಲ್ಲಿಯವರೆಗೆ ಸಂಗೀತಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟವರು. ಆದರೆ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಕಲಾಕ್ಷೇತ್ರದಲ್ಲಿ ಸದಾ ಮುಂಚೂಣಿಯಲ್ಲಿರುವ ಮತ್ತು ತನ್ನದೇ ಆದ ಛಾಪು ಒತ್ತಿರುವ ದಕ್ಷಿಣ ಕನ್ನಡ ಹಾಗೂ ಉಡುಪಿಯ ಸಾಹಿತ್ಯ ಸಂಗೀತಾಸಕ್ತರು ವಾಸುದೇವ ಭಟ್ಟರ ಪ್ರತಿಭೆಯನ್ನು ಗುರುತಿಸಿ ಬಳಸಿಕೊಂಡದ್ದು ಕಡಿಮೆಯೇ ಎನ್ನಬೇಕು. ಶ್ರೀಯುತರಿಗೆ ನಾಡಿನ ಹಾಗೂ ಹೊರನಾಡಿನ ಕೆಲವು ಪ್ರಶಸ್ತಿ, ಸನ್ಮಾನಗಳು ಸಂದಿವೆಯಾದರೂ ಅವರ ಸಂಗೀತಾಭಿರುಚಿಯ, ಸಂಗೀತ ಕ್ಷೇತ್ರದಲ್ಲಿನ ಅವರ ಸಾಧನೆಯ ನಿಜವಾದ ಅನಾವರಣ ಆಗಲಿಲ್ಲ ಎಂದೇ ಹೇಳಬೇಕು.

ಉಡುಪಿ ವಾಸುದೇವ ಭಟ್ಟರಲ್ಲಿರುವ ಜೀವನೋತ್ಸಾಹ, ಸಂಗೀತ ಸಾಧನೆ, ಅಹರ್ನಿಶಿ ದುಡಿದರೂ ದಣಿಯದ ಅವರ ಮನಸ್ಸು ಎಂತಹವರನ್ನೂ ಆಶ್ಚರ್ಯಚಕಿತರನ್ನಾಗಿಸುತ್ತದೆ. ಅವರು 'ಸತ್ಯ ಶುದ್ಧ ಕಾಯಕವೆ ದಿವ್ಯ ಕರ್ಮಯೋಗ' ಎನ್ನುವಂತೆ ಸಂಗೀತ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅಲ್ಲದೆ, ಪತ್ರಿಕೋದ್ಯಮ, ನಾಟಕ ಮೊದಲಾದ ಕ್ಷೇತ್ರಗಳಲ್ಲಿ ಸಹ ಕೆಲಸ ಮಾಡಿದವರು.

"ಮಾಡುವಂತಿರಬೇಕು ಮಾಡದಂತಿರಬೇಕು, ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು..." ಎಂದು ವ್ಯಕ್ತಿ ತಾ ಮಾಡುವ ಕೆಲಸದಲ್ಲಿ ಇದ್ದೂ ಇಲ್ಲದಂತಿರುವ ಸೂಕ್ಷ್ಮದ ಕುರಿತು ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹೇಳುತ್ತಾರೆ.ಯಾರೇ ಗುರುತಿಸಲಿ ಬಿಡಲಿ, ಮನ್ನಣೆ, ಸಿಗಲಿ ಸಿಗದಿರಲಿ, ತನಗೆ ಇಷ್ಟವಾದ ಹಾಗೂ ತೃಪ್ತಿ ತರುವ ಕೆಲಸವನ್ನು ಶ್ರೀಯುತ ವಾಸುದೇವ ಭಟ್ಟರು ನಿಷ್ಠೆಯಿಂದ ಕೈಗೊಳ್ಳುತ್ತಾರೆ. ಅವರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು ಗುರುತಿಸಿ ಅವರ ಸ್ನೇಹಿತರು, ಶಿಷ್ಯರು, ಹಿತೈಷಿಗಳು, ಅಭಿಮಾನಿಗಳೆಲ್ಲರೂ ಸೇರಿ 'ನಾದ ಸುನಾದ' ಎಂಬ ಅರ್ಥಪೂರ್ಣವಾದ ಅಭಿನಂದನ ಗ್ರಂಥವನ್ನು ಅರ್ಪಿಸುವ ಮೂಲಕ ಅವರನ್ನು ಸನ್ಮಾನಿಸಬೇಕೆಂದು ತೀರ್ಮಾನಿಸಿದ್ದಾರೆ. ಇದು ಸಹ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಆತ್ಮಸಂತೋಷಕ್ಕಾಗಿ ಮಾಡುತ್ತಿರುವ ಕೆಲಸ.

ಸಾಹಿತ್ಯ, ಸಂಗೀತ, ಕಲೆ, ವ್ಯಾಪಾರ, ರಾಜಕೀಯ, ಶಿಕ್ಷಣ, ವೈದ್ಯಕೀಯ ಹೀಗೆ ವಿವಿಧ ರಂಗಗಳ ವ್ಯಕ್ತಿಗಳು ವಿಶಿಷ್ಟ ಸಾಧನೆ ಮಾಡಿದಾಗ, ಪ್ರಶಸ್ತಿ ಪಡೆದಾಗ ಅಥವಾ ನಿರ್ದಿಷ್ಟ ವಯೋಮಾನವನ್ನು ತಲುಪಿದಾಗ ಅಂಥವರನ್ನು ಅಭಿನಂದನ ಗ್ರಂಥಗಳ ಮೂಲಕ

ಅಭಿನಂದಿಸುವ ಸಂಪ್ರದಾಯ ಕನ್ನಡದಲ್ಲಿ ಇತ್ತೀಚಿನ ದಿನಗಳಲ್ಲಿ ಹೇರಳವಾಗಿ ಕಂಡು ಬರುತ್ತಿದೆ. ಸಂಖ್ಯೆಯ ದೃಷ್ಟಿಯಿಂದ ಹೇರಳವಾಗಿರುವ ಅಭಿನಂದನ ಗ್ರಂಥಗಳು ಗುಣಮಟ್ಟದ ವಿಷಯಕ್ಕೆ ಬಂದಾಗ ಕಳಪೆಯಾಗಿರುವುದೂ ಗಮನಕ್ಕೆ ಬರುತ್ತದೆ. 'ಅಭಿನಂದನೆ' ಅಥವಾ 'ಅಭಿನಂದನ' ಎಂಬ ಪದಕ್ಕೆ ನಿಘಂಟಿನಲ್ಲಿ 'ಕೊಂಡಾಟ, ಹೊಗಳಿಕೆ, ಪ್ರಶಂಸೆ' ಎಂಬ ವಿವಿಧ ಅರ್ಥಗಳಿವೆ. ಹಾಗಾಗಿ 'ಅಭಿನಂದಿಸುವುದು' ಎಂದರೆ ಒಬ್ಬ ವ್ಯಕ್ತಿಯನ್ನು ಹೊಗಳುವುದು, ಕೊಂಡಾಡುವುದು ಎಂಬ ಅರ್ಥ ಮೇಲ್ನೋಟಕ್ಕೆ ಹೊಳೆಯುತ್ತದೆ. ಹಾಗಾಗಿ ಅಭಿನಂದನ ಗ್ರಂಥಗಳನ್ನು ಪ್ರಕಟಿಸುವುದು ಅಭಿನಂದಿಸುವ ವ್ಯಕ್ತಿಯನ್ನು ಹೊಗಳಲಿಕ್ಕೆ ಹೊರತು ವಿಮರ್ಶಿಸಲು ಅಲ್ಲ ಎಂಬ ಅಭಿಪ್ರಾಯ ಸಾಮಾನ್ಯವಾಗಿ ಕಂಡುಬರುತ್ತದೆ. ಹೀಗೆ ಕೇವಲ ಹೊಗಳುವ, ಕೊಂಡಾಡುವ ಸೀಮಿತ ಉದ್ದೇಶವನ್ನಿಟ್ಟುಕೊಂಡು ರಚಿತವಾದ ಅಭಿನಂದನ ಗ್ರಂಥಗಳ ವ್ಯಾಪ್ತಿ ಕೂಡ ಸೀಮಿತವಾಗಿರುತ್ತದೆ.

'ಅಭಿನಂದನ ಗ್ರಂಥ' ಎನ್ನುವುದು ಒಂದು ಸಾಹಿತ್ಯ ಪ್ರಕಾರವಾಗಿ ಗುರುತಿಸಿಕೊಳ್ಳುವ ಮಟ್ಟಿಗೆ ಬೆಳೆದಿದೆ ಎಂಬುದು ಸಂತೋಷದ ಸಂಗತಿಯಾದರೂ ಅವುಗಳನ್ನು ಅವಲೋಕಿಸಿದರೆ ಕೇವಲ ಅಭಿನಂದಿತರ ಪರಿಚಯ, ಸಾಧನೆ, ಮುಖಸ್ತುತಿ, ಹೊಗಳಿಕೆಗೆ ಸೀಮಿತವಾದ ಗ್ರಂಥಗಳ ಪಾಲು ಅಧಿಕವಾಗಿದ್ದು, ಈ ಪ್ರಕಾರದ ಗಂಭೀರತೆಯನ್ನು ಕುಗ್ಗಿಸಿದೆ ಎನಿಸುತ್ತದೆ. ಆದರೆ ಕೆಲವು ಅಭಿನಂದನ ಗ್ರಂಥಗಳಾದರೂ ಸಂಶೋಧಕರಿಗೆ, ಬರಹಗಾರರಿಗೆ ಅಧ್ಯಯನಕ್ಕೆ ಆಹಾರ ಒದಗಿಸುವ ಮಟ್ಟಕ್ಕೆ ಇವೆ. ಅಭಿನಂದನ ಗ್ರಂಥಗಳನ್ನು ಕುರಿತು ನಾನು ಕೈಗೊಂಡ ವಿಶೇಷ ಅಧ್ಯಯನದ ಸಂದರ್ಭದಲ್ಲಿ ಮೇಲಿನ ಅಂಶ ಗಮನಕ್ಕೆ ಬಂದಿದೆ.

ಬಿ. ಎಂ. ಶ್ರೀಯವರಿಗೆ ಅವರ ಶಿಷ್ಯಂದಿರು, ಸ್ನೇಹಿತರು ಸೇರಿ 1940ರ ಸುಮಾರಿಗೆ ಅರ್ಪಿಸಿದ 'ಅಭಿನಂದನ' ಎಂಬ ಹೆಸರಿನ ಗ್ರಂಥವೇ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಭಿನಂದನ ಗ್ರಂಥಗಳ ಸಾಲಿನಲ್ಲಿ ಮೊದಲನೆಯದು. ಅದು ಇಂದಿಗೂ ಪರಾಮರ್ಶೆಗೆ ಯೋಗ್ಯವಾದ ಮಾದರಿ ಅಭಿನಂದನ ಗ್ರಂಥವಾಗಿದೆ. 1940ರಲ್ಲಿ ಪ್ರಾರಂಭವಾದ ಈ ಸಂಪ್ರದಾಯ ಸುಮಾರು 1980ರ ದಶಕದವರೆಗೆ ನಿಧಾನಗತಿಯಲ್ಲಿ ಸಾಗುತ್ತ ಬಂದದ್ದು ಕಂಡುಬರುತ್ತದೆ. ನಂತರ ಕಾಲಘಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ, ವಿವಿಧ ಸಂದರ್ಭಗಳಲ್ಲಿ ಅಭಿನಂದನ ಗ್ರಂಥಗಳನ್ನು ಸಮರ್ಪಿಸುವ ಕೆಲಸ ವಿಪುಲವಾಗಿ ನಡೆಯುತ್ತಿರುವುದು ಕಂಡುಬರುತ್ತದೆ. ಸಂಖ್ಯೆಯ ದೃಷ್ಟಿಯಿಂದ ಹೇರಳವಾಗಿರುವ ಅಭಿನಂದನ ಗ್ರಂಥಗಳು ಸಾಹಿತ್ಯಿಕ ಮೌಲ್ಯದ ವಿಷಯಕ್ಕೆ ಬಂದಾಗ ಕಳಪೆಯಾಗಿರುವುದು ಗಮನಕ್ಕೆ ಬರುತ್ತದೆ.

ಮೇಲಿನ ಅಂಶವನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಶ್ರೀ ವಾಸುದೇವ ಭಟ್ಟರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ ಗಣನೀಯ ಸೇವೆ ಹಾಗೂ ಅವರ ಮಾನವೀಯ ಅಂತಃಕರಣವನ್ನು ಗುರುತಿಸಿ ಹೊರತರುತ್ತಿರುವ 'ನಾದ ಸುನಾದ' ಎಂಬ ಅಭಿನಂದನ ಗ್ರಂಥವನ್ನು ಅರ್ಥಪೂರ್ಣವಾಗಿಸುವ ನಿಟ್ಟಿನಲ್ಲಿ ಸಂಪಾದಕರಾದ ರಮೇಶ ಭಟ್ ಬೆಳಗೋಡುರವರು ಡಾ. ನಾ. ಮೊಗಸಾಲೆಯವರೊಂದಿಗೆ ಹಾಗೂ ಅಭಿನಂದನ ಸಮಿತಿಯ ಸದಸ್ಯರು ಮತ್ತು ಹಿತೈಷಿಗಳೊಂದಿಗೆ ಚರ್ಚಿಸಿ ಗ್ರಂಥದ ಸ್ವರೂಪವನ್ನು ನಿರ್ಧರಿಸಿದ್ದಾರೆ. ಪ್ರಸ್ತುತ 'ನಾದ

ಸುನಾದ'ದ ಅಂತರಂಗದಲ್ಲಿ ಎರಡು ಪರ್ವಗಳಿದ್ದು, ಮೊದಲನೆಯ ಪರ್ವ 'ವಾಸುದೇವ ನಾದಾಭಿಯಾನ'ದಲ್ಲಿ ವಾಸುದೇವ ಭಟ್ಟರನ್ನು ತೀರ ಸನಿಹದಿಂದ ಬಲ್ಲ ಸಂಗೀತಾಸಕ್ತ ಸ್ನೇಹಿತರು, ಶಿಷ್ಯರು ಮತ್ತು ಬಂಧುಗಳು ಕೃತಜ್ಞತೆಯಿಂದ ದಾಖಲಿಸಿದ ಬರಹಗಳು - 'ಸಖ್ಯ-ಸಾಮೀಪ್ಯ', 'ಶ್ರುತಿ-ಅನುಶ್ರುತಿ' ಮತ್ತು 'ಬಾಂಧವ್ಯದ ಬೆರಗುಗಳು' ಎಂಬ ಮೂರು ಭಾಗಗಳಲ್ಲಿ ಅನಾವರಣಗೊಂಡಿವೆ.

ವಾಸುದೇವ ಭಟ್ಟರ ಜೀವನಾಡಿಯೇ ಆಗಿರುವ ಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಹಿರಿಯ ವಿದ್ವಾಂಸರುಗಳು ಬರೆದ 17 ಲೇಖನಗಳು ವಾಸುದೇವ ಭಟ್ಟರ ಒಂದು ಪ್ರಾತಿನಿಧಿಕ ಲೇಖನದೊಂದಿಗೆ ಎರಡನೆಯ ಪರ್ವದಲ್ಲಿವೆ. ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ, ವಾದ್ಯಗಳು, ಯಕ್ಷಗಾನ ಭಾಗವತಿಕೆ, ಸಂಗೀತ ಮತ್ತು ಶ್ರೀಸಾಮಾನ್ಯ, ಭಾರತೀಯ ಸಂಗೀತದಲ್ಲಿ ದಾರ್ಶನಿಕತೆ, ವಿದೇಶಗಳಲ್ಲಿ ಕರ್ನಾಟಕ ಸಂಗೀತ, ತ್ಯಾಗರಾಜರು ಮತ್ತು ದೀಕ್ಷಿತರ ರಚನೆಗಳಲ್ಲಿ ಸಂಗೀತದ ಅಭಿವ್ಯಕ್ತಿ ಮೊದಲಾದ ಹಲವಾರು ಅಮೂಲ್ಯ ವಿಷಯಗಳಿಗೆ ಸಂಬಂಧಿಸಿದ ಲೇಖನಗಳು ಸಹಜವಾಗಿಯೇ ಗ್ರಂಥದ ಮಹತ್ವವನ್ನು ಹೆಚ್ಚಿಸಿವೆ.

ಉಡುಪಿ 'ನಾದವೈಭವಂ'ನ ವಾಸುದೇವ ಭಟ್ಟರು ಶುಭ್ರಮನಸ್ಸಿನ ಮಾತೃಹೃದಯಿಗಳು. ಅಪಾರ ವಿದ್ವತ್ತನ್ನು ಹೊಂದಿರುವ ಅವರು ಮೇಲುಕೀಳು, ಜಾತಿಭೇದವೆಣಿಸದೆ ಎಲ್ಲರನ್ನೂ ತನ್ನವರೆಂದು ಒಪ್ಪಿಕೊಂಡು ಆದರಿಸುವವರು. ಅದೇ ರೀತಿ ವ್ಯವಹಾರಶೂನ್ಯರು ಕೂಡ. ಸೌಜನ್ಯದ ಮೂರ್ತಿಯಂತಿರುವ ಅವರ ನಿರಪೇಕ್ಷ ಸಾಧನೆಯನ್ನು ಕಿಂಚಿತ್ತಾದರೂ ಗುರುತಿಸುವ ಒಂದು ಹೆಜ್ಜೆ ಮಾತ್ರ ಇದು.

ಪ್ರಸ್ತುತ ಅಭಿನಂದನ ಗ್ರಂಥವನ್ನು ಸಿದ್ಧಪಡಿಸಲು ಸಂಪಾದಕರಾದ ಬೆಳಗೋಡು ರಮೇಶ ಭಟ್‌ರವರು ತುಂಬ ಶ್ರಮವಹಿಸಿದ್ದಾರೆ. ಲೇಖನ ಬರೆಯಿಸುವುದರಿಂದ ಹಿಡಿದು, ಅವುಗಳನ್ನು ಸಂಗ್ರಹಿಸಿ, ಸಂಗ್ರಹಿಸಿದ ಲೇಖನಗಳನ್ನು ಸಂಪಾದಿಸಿ, ಮುದ್ರಣಕ್ಕೆ ಕಳುಹಿಸುವವರೆಗೆ ಎಲ್ಲ ಹಂತದ ಕೆಲಸಗಳನ್ನು ಶ್ರದ್ಧೆಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಹಿರಿಯರಾದ ಡಾ.ನಾ. ಮೊಗಸಾಲೆಯವರ ಪ್ರೋತ್ಸಾಹ, ಸಹಕಾರದೊಂದಿಗೆ ಅವರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರಿಂದ ಈ ಕೆಲಸ ಸಮರ್ಪಕವಾಗಿ ನಡೆಯಲು ಸಾಧ್ಯವಾಗಿದೆ. ಮಿತ್ರರಾದ ಬಿ. ಮಧುಕರ ಕಾಮತರು ಈ ವಿಷಯದಲ್ಲಿ ತೋರಿಸಿದ ಪ್ರೀತಿ ಮತ್ತು ಸಹಕಾರವನ್ನು ಗೌರವದಿಂದ ನೆನೆಯುತ್ತೇನೆ. ಅಂತೆಯೇ ಅಭಿನಂದನ ಸಮಿತಿಯ ಇತರೆ ಪದಾಧಿಕಾರಿಗಳು ಹಾಗೂ ಸದಸ್ಯರು ಮತ್ತು ಶ್ರೀ ವಾಸುದೇವ ಭಟ್ಟರ ಅಭಿಮಾನಿಗಳ ಸಲಹೆ-ಸಹಕಾರವನ್ನು ಸಹ ಕೃತಜ್ಞತಾಪೂರ್ವಕವಾಗಿ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಕೆ.ಸಿ. ವಿರೂಪಾಕ್ಷ

ಮೇ 12, 2007

ಅಧ್ಯಕ್ಷರು
'ನಾದವೈಭವಂ' ವಾಸುದೇವ ಭಟ್ಟರ
ಅಭಿನಂದನ ಸಮಿತಿ, ಉಡುಪಿ

ಹೃದ್ಗತ ಸಂಗೀತ

ಎರಡು ಸಾವಿರದ ಆರನೇ ಇಸವಿ, ಎಪ್ರಿಲ್ 30, ರವಿವಾರ ಮಧ್ಯಾಹ್ನ 10 - 11 ಘಂಟೆಗಳ ನಡುವಿನ ಅವಧಿ. ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆ. ವಾಸುದೇವ ಭಟ್ಟರು ತಲೆಯ ಆಪರೇಶನ್‌ಗೆ ಒಳಪಟ್ಟು, ಐಸಿಯುದಲ್ಲಿದ್ದರು. ಅಂಶುಮಾಲಿ, ಕು.ಗೋ., ವಾಸುದೇವ ಭಟ್ಟರ ಮಗಳು ಸುಮಾ ಮತ್ತು ನಾನು ಹೊರಗಿನ ವರಾಂಡದಲ್ಲಿ ಕುಳಿತಿದ್ದೆವು. ಒಳಹೋಗಿ ಭಟ್ಟರನ್ನು ನೋಡಿ, ಮಾತನಾಡಿಸಿ ಬರಲು ಬೇಕಾದ ಅನುಮತಿಗಾಗಿ ಕಾಯುತ್ತಿದ್ದೆವು. ಸುಮಾರು ಒಂದು ಘಂಟೆಯ ಕಾಯುವಿಕೆಯ ನಂತರವೂ ನಮಗೆ ಬೇಕಾದ ಅನುಮತಿ ಸಿಗದೇ ಹೋದಾಗ, ನಾನು ಕೊಂಚ ಉದ್ಧಟತನದಿಂದಲೇ ವಾರ್ಡಿನ ಬಾಗಿಲು ತೆಗೆದು ಪ್ರವೇಶಿಸಿ, ಪ್ರವೇಶ ನಿಷಿದ್ಧವಾದ ಐಸಿಯುದ ಒಳಹೊಕ್ಕು, ತಲೆಗೆಲ್ಲ ಬ್ಯಾಂಡೇಜ್ ಸುತ್ತಿಕೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿ ಮಲಗಿದ್ದ ವಾಸುದೇವ ಭಟ್ಟರನ್ನು ಗುರುತಿಸಿದೆ. ಅವರ ಕಾಲುದಿಸೆಯಲ್ಲಿ ಕುಳಿತಿದ್ದ ಮುದುಕರೊಬ್ಬರು ಯದುಕುಲ ಕಾಂಭೋಜಿ ರಾಗದಲ್ಲಿ 'ಪಾಹಿರಾಮಚಂದ್ರ ರಾಘವಾ' ಕೀರ್ತನೆಯನ್ನು ಪಲುಕುತ್ತಿದ್ದರು. ಕೀರ್ತನೆಯ ಕೊನೆಯ ಚರಣ ಬರುವ ಹೊತ್ತಿಗೆ, ನನ್ನ ಅನಪೇಕ್ಷಿತ ಪ್ರವೇಶವನ್ನು ಗುರುತಿಸಿದ ವೈದ್ಯರೊಬ್ಬರು ನನ್ನನ್ನು ಹೊರಕ್ಕೆ ತಳ್ಳಿಕೊಂಡು ಬಂದು ಭಯಂಕರವಾಗಿ ಕೂಗತೊಡಗಿದರು. ಶಿಕ್ಷಿತರಾಗಿ, ಪ್ರವೇಶ ನಿಯಮವನ್ನು ಮುರಿದದ್ದು ನನ್ನ ತಪ್ಪು ಎಂದವರ ವಾದ. "ಹಾಗಿದ್ದರೆ, ಆ ಮುದುಕನನ್ನು ಒಳಗೆ ಹೇಗೆ ಬಿಟ್ಟಿರಿ? ನಿಮ್ಮ ನಿಯಮ ಅವರಿಗೆ ಅನ್ವಯವಾಗದೆ?" "ಅಲ್ಲಿ ನರ್ಸುಗಳನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಯಾರೂ ಹೋಗುವಂತೆಯೂ ಇಲ್ಲ".

ಒಂದು ಕ್ಷಣ ಏನೊಂದೂ ಅರಿವಾಗದೇ, ನನಗಾಗಿ ಕಾಯುತ್ತ ಉಳಿದವರೊಡನೆ ಒಂದೂ ಮಾತನಾಡದೆ ಮೆಟ್ಟಿಲಿಳಿದು ಕೆಳಬರುತ್ತಿರುವಾಗ, ಯಾರಾತ ಮುದುಕ, ಅಲ್ಲಿ ಹೇಗೆ ಬಂದ, ಅಲ್ಲಿ ಆತನಿದ್ದರೂ ಯಾರೂ ಇಲ್ಲ ಎಂದು ವೈದ್ಯರು ಹೇಗೆ ಹೇಳಿದರು ಎಂಬೆಲ್ಲ ಪ್ರಶ್ನೆಗಳು ನನ್ನನ್ನು ಗಲಿಬಿಲಿಗೊಳಿಸಿದ್ದವು. ವೈದ್ಯರು ನನ್ನ ಪ್ರವೇಶವನ್ನು ಗುರುತಿಸುವ ಹೊತ್ತಿಗೆ ಆ ಮುದುಕ 'ರಾಜರಾಜಿತ ಪೂಜಿತ ಪ್ರಭೋ ಹರೇ ತ್ಯಾಗರಾಜ ರಾಜ ರಾಘವ ಪ್ರಭೋ" ಎಂಬ ಚರಣವನ್ನು ಹಾಡುತ್ತಿದ್ದಿರಬೇಕು ಎಂಬ ಸಂಶಯವೂ ನನ್ನನ್ನು ಕಾಡತೊಡಗಿತ್ತು.

ಆ ಮುದುಕರನ್ನು ನಾನು ಹಿಂದೆಲ್ಲೂ ಕಂಡಂತಿಲ್ಲ. ತ್ಯಾಗರಾಜರ ಆ ಕೀರ್ತನೆಯನ್ನು ಈ ನಿರ್ದಿಷ್ಟ ರಾಗದಲ್ಲಿ ಸುಮಾರು ಹದಿನೈದು ವರ್ಷಗಳ ಹಿಂದೆ ನನ್ನ ಹೈದರಾಬಾದ್

ವಾಸದ ದಿನಗಳಲ್ಲಿ ಕೇಳಿದ್ದಿರಬೇಕು. 'ನನ್ನ ಭ್ರಮೆ' ಎಂದು ನನ್ನ ಹೆಂಡತಿ ತಿಳಿದುಕೊಂಡಿರುವ ಈ ಘಟನೆ ನನ್ನ ಪಾಲಿಗೆ ಈಗಲೂ ಒಂದು ವಿಸ್ಮಯ. ನನ್ನ ಪಾಲಿನ ಕದನಕುತೂಹಲ, ಭೈರವಿ, ಆನಂದಭೈರವಿ, ವರಾಳಿ, ಮುಖಾರಿ ಎಲ್ಲವೂ ಆಗಿರುವ ಆಕೆ ನನ್ನ ಅನುಭೂತಿಗಳನೇಕವನ್ನು 'ಭ್ರಮೆ' ಎಂದು ಹಿಂದೆಯೂ ಸಾರಾಸಗಟಾಗಿ ತಳ್ಳಿ ಹಾಕಿದ್ದುಂಟು. ಆದರೆ ಈ ಒಂದು ನಿರ್ದಿಷ್ಟ ಘಟನೆ ಮತ್ತು ಆ ಹೊತ್ತಿಗೆ ನನ್ನ ನಡವಳಿಕೆಗೆ ಯಾವ ವಿವರವನ್ನು ಕೊಡುವುದೂ ನನ್ನಿಂದ ಸಾಧ್ಯವಾಗಿಲ್ಲ.

* * *

ನಾದವೈಭವಂ ಉಡುಪಿ ವಾಸುದೇವ ಭಟ್ಟರು ವಯಸ್ಸಿನ ಅಂತರದ ಹೊರತಾಗಿಯೂ ನನ್ನ ನಿಡುಗಾಲದ ಮಿತ್ರರು. ನನ್ನ ಸಂಗೀತ ಜ್ಞಾನವೆಲ್ಲ ಅಭ್ಯಾಸಕ್ಕಿಂತ ಹೆಚ್ಚು ಓದಿನಿಂದ ಪ್ರಾಪ್ತವಾದದ್ದು. ಆರ್ಮ್‌ಚೇರ್ ಕ್ರಿಕೆಟ್ ವಿಮರ್ಶಕರಿರುತ್ತಾರಲ್ಲ, ಅವರ ಹಾಗೆ. ಸ್ವರಶುದ್ಧಿ, ಶ್ರುತಿಮೇಲನ, ತಾಳಗತಿಗಳ ಕುರಿತು ನನ್ನ ಭಯಂಕರ ವಾದಗಳನ್ನು ತಾಳಿಕೊಂಡು ಅವರು ನನ್ನ ಮಿತ್ರರಾಗಿಯೇ ಉಳಿದಿದ್ದಾರೆ ಎನ್ನುವುದು ಅವರ ಹಿರಿಮೆಯನ್ನು ತೋರಿಸುತ್ತದೆ. ಅವರ ಸಮಕ್ಷಮದಲ್ಲಿಯೇ ಒಮ್ಮೆ ಸುಳಾದಿಗಳ ಮಾತು ಬಂದಾಗ 'ಚತುರ್ದಂಡೀ ಪ್ರಕಾಶಿಕೆ'ಯ 'ಸೂಡು' ಎಂಬ ಪ್ರಬಂಧಜಾತಿಯೇ ಇದೆಂದು ನಾನು ಖಚಿತವಾಗಿ ಹೇಳಿದ್ದೆ. ಮತ್ತೊಮ್ಮೆ ಇದು 'ಸುಳುಹಾದಿ' ಎಂದರೆ 'ಸುಲಭವಾದ ದಾರಿ' ಎಂಬಲ್ಲಿಂದ ಹುಟ್ಟಿದ್ದು ಎಂದೂ ಹೇಳಿದ್ದೆ. ಇನ್ನೊಮ್ಮೆ 'ಉಗಾಭೋಗ'ಗಳ ಬಗ್ಗೆ ಹೇಳುವಾಗ, 'ಚತುರ್ದಂಡೀ ಪ್ರಕಾಶಿಕೆ'ಯಲ್ಲಿ ಬರುವ 'ಉದ್ಗ್ರಾಹಕ' ಮತ್ತು 'ಆಭೋಗ' ಎಂಬ ಗಾನಪ್ರಕಾರಗಳ ರೂಪಾಂತರ ಎಂದಿದ್ದೆ. ಈ ಎಲ್ಲಾ ಸಂದರ್ಭಗಳಲ್ಲಿ ಉಪಸ್ಥಿತರಿದ್ದ ವಾಸುದೇವ ಭಟ್ಟರು 'ಇದ್ದೀತು ಇದ್ದೀತು' ಎಂದರೇ ವಿನಾ ನನ್ನೊಂದಿಗೆ ವಾದಕ್ಕಿಳಿಯಲಿಲ್ಲ ಎನ್ನುವುದನ್ನು ನೆನಪಿಸಿಕೊಂಡಾಗ ಅವರ ಸೌಜನ್ಯ ನೆನಪಾಗುತ್ತದೆ; ಕೊಂಚ ನಾಚಿಕೆಯೂ ಆಗುತ್ತದೆ.

ಕರ್ನಾಟಕ ಸಂಗೀತಕ್ಕೆ 'ತೆಲುಗು ಕೀರ್ತನೆಗಳಷ್ಟೇ ಸಲ್ಲುತ್ತವೆ' ಎಂಬ ನನ್ನ ನಂಬಿಕೆಯನ್ನು ಅಸ್ಥಿರಗೊಳಿಸಿದವರು ವಾಸುದೇವ ಭಟ್ಟರು. ಅವರು ಎಷ್ಟೆಲ್ಲ ಕನ್ನಡ ಹಾಡುಗಳಿಗೆ ಸ್ವರಪ್ರಸ್ತಾರವನ್ನು ಸಿದ್ಧಪಡಿಸಿ ಇಟ್ಟಿದ್ದಾರೆ ಎನ್ನುವುದನ್ನು ಬಹಳ ಹತ್ತಿರದಿಂದ ಕಂಡು, ಕೇಳುವ ಭಾಗ್ಯ ನನ್ನದಾಗಿದೆ. 'ಕರ್ನಾಟಕ ಸಂಗೀತದ ಶಾಸ್ತ್ರಕರ್ತರು ಕರ್ಣಾಟಕರು, ಲಕ್ಷ್ಯಕರ್ತರು ಆಂಧ್ರರು, ಪ್ರಯೋಗಕರ್ತರು ತಮಿಳರು' ಎಂಬ ಸಾಮಾನ್ಯ ಹೇಳಿಕೆಗೆ ತೀರಾ ಅಪರೂಪದ 'ಅಪವಾದ' ವಾಸುದೇವ ಭಟ್ಟರು ಎನ್ನುವುದು ಈ ನಿಡುಗಾಲದ ಆಪ್ತದಿನಗಳಲ್ಲಿ ನನಗೆ ಖಚಿತವಾಗಿದೆ.

ವಾಸುದೇವ ಭಟ್ಟರು ಅವರನ್ನು ಬಲ್ಲವರಿಗೆಲ್ಲ ಚತುರ್ಮುಖರು. ಸಂಗೀತ ಗುರುಗಳು, ನಿರ್ದೇಶಕರು; ಚಲನಚಿತ್ರ ನಟರು, ನಿರ್ದೇಶಕರು; ರಂಗಭೂಮಿ ಕಲಾವಿದರು ಮತ್ತು ಪತ್ರಿಕಾ ವರದಿಗಾರರು. ನನಗಾದರೋ ಅವರು ಕ್ಷಣಕ್ಷಣ ವಿಸ್ಮಯ ಹುಟ್ಟಿಸುವ ಬಹುಮುಖ

ಪ್ರತಿಭಾವಂತರು. ಎಲ್ಲಕ್ಕೂ ಮಿಗಿಲಾಗಿ ಸಾಚಾ ಸಾಚಾ ಮನುಷ್ಯರು. ಮನುಷ್ಯಸಹಜವಾದ ಎಲ್ಲಾ ದೌರ್ಬಲ್ಯಗಳ ಹೊರತಾಗಿಯೂ ಅವರ ಒಳಗೊಬ್ಬ ಅಪ್ಪಟ ಮನುಷ್ಯನಿದ್ದಾನೆ. ಆ ಅಪ್ಪಟತನ ನಮ್ಮೆದುರು ಬಿಡಿಸಿಟ್ಟ ಸೌಜನ್ಯ, ಸಹೃದಯತೆಗಳ ಖಾಸಗೀ ಜಗತ್ತು ಉಡುಪಿಯ ಸಾಂಸ್ಕೃತಿಕ ಲೋಕದ ಅವರ್ಣನೀಯ ಅನುಭವಗಳಲ್ಲಿ ಒಂದು.

ನನಗೆ ಅವರು ಪರಿಚಿತರಾದದ್ದು ಸಾಹಿತಿ ಮಿತ್ರ ಕು.ಗೋ. ಮೂಲಕ. ಆಪ್ತರಾದದ್ದು ಹಿರಿಯ ಕವಿಮಿತ್ರರಾದ ಡಾ. ನಾ. ಮೊಗಸಾಲೆ ಮತ್ತು ಜಯರಾಮ ಕಾರಂತರ ಮುಖೇನ. ಅಂತರಂಗಕ್ಕೆ ಸಂದದ್ದು ಕುಟುಂಬ ಮಿತ್ರರೇ ಆಗಿಬಿಟ್ಟಿರುವ ಸುಹಾಸಂ ಅಧ್ಯಕ್ಷ, ಶಾಂತರಾಜ ಐತಾಳ್ ಹಾಗೂ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರಾಗಿರುವ ಕೆ. ಸಿ. ವಿರೂಪಾಕ್ಷ ಮತ್ತು ಸಾರಿಗೆ ಅಧಿಕಾರಿ, ಶ್ರೀಮತಿ ಎಂ. ಪಿ. ಓಂಕಾರೇಶ್ವರಿ ದಂಪತಿಯ ಮುಖಾಂತರ. ಈಚಿನ ದಿವಸಗಳಲ್ಲಿ ವಾಸುದೇವ ಭಟ್ಟರು ನನ್ನ ಕುಟುಂಬಕ್ಕೆ ಹತ್ತಿರವಾಗುತ್ತಾ ಬಂದರು; ಎಲ್ಲ ಸಂಗೀತ ಮಾಸ್ಟರ ಒಳಗಿರುವ ಮಾರ್ದವತೆ, ಎಲ್ಲ ಪತ್ರಕರ್ತರ ಒಳಗಿರುವ ನಿಷ್ಠುರತೆ, ಎಲ್ಲ ಸಂಗೀತ ನಿರ್ದೇಶಕರ ಒಳಗಿರುವ ಭೂಮಕಲ್ಪನೆ, ಎಲ್ಲ ನಾಟಕ ನಿರ್ದೇಶಕರ ಒಳಗಿರುವ ಪ್ರಯೋಗಶೀಲತೆ, ಎಲ್ಲ ನಟರ ಒಳಗಿರುವ ತಾದಾತ್ಮ್ಯ, ಎಲ್ಲ ಬರಹಗಾರರ ಒಳಗಿರುವ ಸೃಜನಶೀಲತೆ, ಎಲ್ಲ ಮನುಷ್ಯರ ಒಳಗಿರುವ ಜೀವಪ್ರೀತಿಯನ್ನು ಇಷ್ಟಿಷ್ಟಾಗಿ ಹೆಪ್ಪುಗೂಡಿಸಿಟ್ಟ ನೆರೆಮನೆಯ ಹಿರಿಯ ವ್ಯಕ್ತಿತ್ವವೊಂದು ಬಿಚ್ಚಿಕೊಳ್ಳುತ್ತಾ ಹೋದ ಹಾಗೆ.

* * *

ಕನ್ನಡ ಕೀರ್ತನೆಗಳಿಗೆ ವಿದ್ವತ್ಸಂಗೀತದಲ್ಲಿ ಪ್ರಥಮ ಪಂಕ್ತಿಯ ಮನ್ನಣೆ ಸಂಪಾದಿಸಿ ಕೊಟ್ಟವರು ಬಿಡಾರಂ ಕೃಷ್ಣಪ್ಪನವರು. ದೇವರನಾಮದ ಹಾಡುವಿಕೆಯಿಂದಲೇ ಅವರು ತಮಿಳುನಾಡನ್ನು ಗೆದ್ದರು. ಅವರ ಪರಂಪರೆಯ ಒಂದು ಪ್ರಮುಖ ಕೊಂಡಿಯೆನ್ನಿಸಿದ್ದ ಪಿಟೀಲು ಮಂಜುನಾಥಯ್ಯನವರು ವಾಸುದೇವ ಭಟ್ಟರ ತಾಯಿಯ ಮಾವ. ಅವರಿಂದಲೂ ಗಾಯನ, ವೀಣೆ, ಪಿಟೀಲುಗಳ ಶಿಕ್ಷಣ ಪಡೆದಿದ್ದ ಇವರಿಗೆ ಲಕ್ಷ್ಯ-ಲಕ್ಷಣಗಳಲ್ಲಿ ಗಟ್ಟಿಯಾದ ಅಡಿಪಾಯ ಸಿಕ್ಕಿತ್ತು. ಇವರ ಶಿಷ್ಯರೂ ಆಗಿರುವ, ನನ್ನ ಹಿರಿಯ ಮಿತ್ರ ಡಾ. ಉಪ್ಪಂಗಳ ರಾಮ ಭಟ್ಟರು ತಮ್ಮ ಲೇಖನವೊಂದರಲ್ಲಿ ದಾಖಲಿಸಿದಂತೆ, "ವಿದ್ವತ್ತಿನ ಪರಂಪರೆಯೇ ಜೀವ ಕಣದಲ್ಲಿ ಬಳುವಳಿಯಾಗಿ ಬಂದಂತೆ, ಸಂಗೀತವು ಎಳವೆಯಲ್ಲಿಯೇ ಅವರಿಗೊಲಿಯಿತು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ಕಛೇರಿ ಮಾಡಲಾರಂಭಿಸಿದ ಅವರು ಹದಿನೇಳರ ವಯಸ್ಸಿನಲ್ಲಿ ವಿದ್ವಾನ್ ಪದವೀಧರರಾದರೆಂದರೆ ಅವರ ಸಹಜ ಪ್ರತಿಭೆಯನ್ನು ಗುರುತಿಸಬಹುದು".

ವಾಸುದೇವ ಭಟ್ಟರ ತಂದೆ ಯು. ಸೀತಾರಾಮ ಭಟ್ಟರು ಪತ್ರಿಕೋದ್ಯಮಿಯಾಗಿದ್ದರು. ತಂದೆಯವರು ವಿಧಿವಶರಾದ ನಂತರ ಇವರು ಪತ್ರಿಕಾ ವರದಿಗಾರರಾಗಿ ಕೆಲಸ ಮಾಡಿದ್ದರು. 1980ರ ಸುಮಾರಿಗೆ ರಾತ್ರಿ ಹನ್ನೊಂದು ಘಂಟೆಯ ನಂತರ ಸುದ್ದಿ ರವಾನೆಗಾಗಿ ಉಡುಪಿಯ ಮಾರುತಿ ವೀಥಿಕಾದಲ್ಲಿರುವ ತಂತಿ ಕಚೇರಿಗೆ ಬರುತ್ತಿದ್ದುದನ್ನು, ಈಗ ಇವರ ಶಿಷ್ಯರಾಗಿರುವ

ಎ. ಕೃಷ್ಣಮೂರ್ತಿಯವರು ರಸವತ್ತಾಗಿ ವರ್ಣಿಸುತ್ತಾರೆ. 1962ರಿಂದ 1984ರ ವರೆಗೆ 'ಮದ್ರಾಸ್ ಮೈಲ್', 'ಸಂಯುಕ್ತ ಕರ್ನಾಟಕ', 'ನವಭಾರತ', 'ಜನರಾಜ್', 'ಪ್ರಜಾಪ್ರಭುತ್ವ', 'ಪ್ರಜಾವಾಣಿ' ಮೊದಲಾದ ಪತ್ರಿಕೆಗಳಿಗೆ ಇವರು ವರದಿಗಾರರಾಗಿ ಕೆಲಸ ಮಾಡಿದ್ದ ದಾಖಲೆಗಳೂ ಈಗ ಲಭ್ಯವಿವೆ. 'ಸ್ವಾತಿಭೂಷಣ' ಎಂಬ ಕಾವ್ಯನಾಮದಿಂದ ಅವರು ಲೇಖನಗಳನ್ನೂ ಬರೆದದ್ದುಂಟಂತೆ.

ದಕ್ಷಿಣ ಭಾರತದ ಪ್ರಸಿದ್ಧ ಗಾಯಕರುಗಳಾದ ಪಿ. ಬಿ. ಶ್ರೀನಿವಾಸ್, ಎಸ್. ಜಾನಕಿ, ರಾಜಕುಮಾರ್ ಭಾರತಿ, ಕಲ್ಯಾಣಿ ಮೆನೋನ್, ಮದ್ರಾಸ್ ಲತಾ, ಮಂಜುಳಾ ಗುರುರಾಜ್, ಎ. ವಿ. ಎಂ. ಮೂರ್ತಿ ಮೊದಲಾದವರು ವಾಸುದೇವ ಭಟ್ಟರ ಸಂಗೀತ ನಿರ್ದೇಶನದಲ್ಲಿ ಹಾಡಿದ ಬಗ್ಗೆ ಹಲವು ದಾಖಲೆಗಳು ಹೊರಜಗತ್ತಿನಲ್ಲಿ ಕಾಣಸಿಗುತ್ತವೆಯಾದರೂ ವಾಸುದೇವ ಭಟ್ಟರು ಅಂತಹ ದಾಖಲೆಗಳನ್ನು ಕಾಪಿಡುವಲ್ಲಿ ವಿಶೇಷ ಆಸಕ್ತಿ ತೋರಿಸಿಲ್ಲ. ತಮ್ಮ ಸಾಧನೆಯ ಕುರಿತು ಅವರ ನಿರ್ಲಿಪ್ತತೆ ಒಂದು ಕುತೂಹಲಕಾರಿ ಸಂಗತಿ.

ಅವರು ಹದಿನೆಂಟನೆಯ ವಯಸ್ಸಿನಲ್ಲಿಯೇ ಕಟ್ಟಿದ್ದ 'ಆಧುನಿಕ ನಾಟ್ಯ ಸಂಘ', ಇಪ್ಪತ್ತೊಂಭತ್ತನೆಯ ವಯಸ್ಸಿನಲ್ಲಿ ಕಟ್ಟಿದ 'ವಾಸನ್ ಫೆಟಮೆನ್ಸ್ ಟ್ರೂಪ್' ನಾಟಕ ಸಂಸ್ಥೆಗಳು ಅವರ ನಟನೆ, ಸಂಗೀತ ಮತ್ತು ನಿರ್ದೇಶನ ಚಾತುರ್ಯವನ್ನು ಬೆಳಕಿಗೆ ತಂದಿದ್ದವು. ಅವರ ಕಲಾಚಾತುರ್ಯ ಏನೇ ಇರಲಿ, ಅವರು 'ವ್ಯವಹಾರಜ್ಞಾನ ಶೂನ್ಯರು' ಎನ್ನುವುದನ್ನು ಖಾತ್ರಿಪಡಿಸುವಂತೆ ಈ ಸಂಸ್ಥೆಗಳು ನಾಲ್ಕೈದು ವರ್ಷಗಳಲ್ಲಿ ಮುಚ್ಚಿಕೊಂಡಿದ್ದವು.

1957ರಿಂದ 1994ರ ವರೆಗೆ ವಾಸುದೇವ ಭಟ್ಟರು ಬೆಥನಿ ವಿದ್ಯಾಸಂಸ್ಥೆಗಳಲ್ಲಿ ಸಂಗೀತ ಅಧ್ಯಾಪಕರಾಗಿ ದುಡಿದ ದಿನಗಳ ವಿವರಗಳೂ ಈಗಲೂ ಉಪಲಬ್ಧವಿವೆ. ಮೂಲ್ಕಿಯ ಮೆಡಲಿನ್ ಹೈಸ್ಕೂಲ್, ಕಿನ್ನಿಗೋಳಿಯ ಲಿಟ್ಲ್‌ಫ್ಲವರ್ ಹೈಸ್ಕೂಲ್, ಕುಲಶೇಖರದ ಸೇಕ್ರೆಡ್ ಗರ್ಲ್ಸ್ ಹೈಸ್ಕೂಲ್ ಮತ್ತು ಬಲ್ಮಠದ ಥಿಯೊಲೊಜಿಕಲ್ ಕಾಲೇಜುಗಳಲ್ಲಿ. ಈ ಅವಧಿಯಲ್ಲಿ ಅವರು ಕ್ರಿಶ್ಚಿಯನ್ ಗೀತೆಗಳನ್ನು ಹಾಡಲು ಕರ್ನಾಟಕ ಸಂಗೀತ ಶಿಬಿರಗಳನ್ನು ನಡೆಸಿದರು; ನೃತ್ಯರೂಪಕಗಳನ್ನು ಮಕ್ಕಳಿಗಾಗಿ ಸಿದ್ಧಪಡಿಸಿದರು; ಸಂಬಳ ರಹಿತ ರಜೆ ಪಡೆದು ನಾಟಕ, ಸಿನಿಮಾ, ಸಂಗೀತ ನಿರ್ದೇಶನದ ಬೆನ್ನು ಹತ್ತಿದರು. ಅವರ ಪ್ರತಿಭೆಯ ಪರಾಕಾಷ್ಠೆ 'ಭುವನಜ್ಯೋತಿ' ಸಂಗೀತ ರೂಪಕದಲ್ಲಿ ಮತ್ತು ಅದೇ ಹೆಸರಿನ ಚಲನಚಿತ್ರದಲ್ಲಿ ಕಾಣಸಿಗುತ್ತದೆ. 1992ರಲ್ಲಿ ಇದನ್ನು ಗುರುತಿಸಿ ಪೋಪ್ ದ್ವಿತೀಯ ಜಾನ್ ಪಾಲ್ ಇವರನ್ನು ಅಭಿನಂದಿಸಿದ್ದರು.

ಈ ಅವಧಿಯಲ್ಲಿ ಅವರು ರೇಡಿಯೋ ಸಿಲೋನ್‌ಗಾಗಿ ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಕ್ರಿಸ್ತಗೀತಾಂಜಲಿ, ಕ್ರಿಸ್ತಪುಷ್ಪಾಂಜಲಿಗಳನ್ನು ನಿರ್ದೇಶಿಸಿ, ಹಾಡಿಸಿ, ಧ್ವನಿಸುರುಳಿಗಳಾಗಿ ಹೊರತಂದರು. ಶ್ರೀ ವಾದಿರಾಜರ ಕೀರ್ತನೆಗಳನ್ನು ಎಲ್.ಪಿ. ರೆಕಾರ್ಡ್‌ಗಳಲ್ಲಿ ತಂದರು. ಕನ್ನಡ, ತುಳು ಭಾಷೆಗಳ ಹಾಡುಗಳನ್ನು, ಅಸಂಖ್ಯ ದೇವಸ್ಥಾನಗಳ

ಭಕ್ತಿಗೀತೆಗಳನ್ನು ನಿರ್ದೇಶಿಸಿ, ಹಾಡಿ, ಹಾಡಿಸಿ 90ಕ್ಕೂ ಹೆಚ್ಚಿನ ಧ್ವನಿಸುರುಳಿ/ಧ್ವನಿತಟ್ಟೆಗಳು ಹೊರಬರಲು ಕಾರಣರಾದರು. ಊರ್ವಶಿ, ಅಂತ, ಜಂಗಲ್‌ಗರ್ಲ್ ಚಲನಚಿತ್ರಗಳಲ್ಲಿ ಅಭಿನಯಿಸಿ, ಸಂಗೀತ ನಿರ್ದೇಶಿಸಿದರು.

ಮುಂದೆ ಪ್ರೊ. ಉದ್ಯಾವರ ಮಾಧವಾಚಾರ್ಯರ 'ಸಮೂಹ' ರಂಗ ಪ್ರಯೋಗಗಳ ಸಂದರ್ಭದಲ್ಲಿ ವಾಸುದೇವ ಭಟ್ಟರ ಪ್ರತಿಭೆಯ ಇನ್ನೊಂದು ಮಜಲು ಕಾಣಸಿಕ್ಕಿತು. "ರಂಗಕ್ರಿಯೆಯ ನಿರ್ಮಾಣಕ್ಕೆ ಅತ್ಯಂತ ಸಂಗತವಾದ ಅವರ ಸಂಗೀತವೇ ತನ್ನ ಪ್ರಯೋಗಗಳ ಜೀವಶಕ್ತಿ" ಎಂದು ಮಾಧವಾಚಾರ್ಯರು ಹೇಳಿದ್ದೂ ಉಂಟು.

1980ರಲ್ಲಿ ಇವರು ಪ್ರಾರಂಭಿಸಿದ 'ನಾದವೈಭವಂ' ಸಂಸ್ಥೆ ಸಂಗೀತ ಶಿಕ್ಷಣದೊಂದಿಗೆ ಸಂಗೀತ ವಿಷಯದಲ್ಲಿ ಸಂಶೋಧನೆಯನ್ನು ಗುರಿಯಾಗಿ ಇರಿಸಿಕೊಂಡಿದೆ. 'ನಾದಾಭಿಯಾನ' ಪರಿಕ್ರಮದೊಂದಿಗೆ 'ಸಂಗೀತ ಥೆರಪಿ' ಚಿಕಿತ್ಸೆಯ ಮಹತ್ವಾಕಾಂಕ್ಷೆ ವಾಸುದೇವ ಭಟ್ಟರದು. 'ಸಾ ವಿದ್ಯಯಾ ವಿಮುಕ್ತಯೇ' ಎಂಬ ಮಾತಿದೆ. ನಮ್ಮನ್ನು ಮುಕ್ತರನ್ನಾಗಿ ಮಾಡಬಲ್ಲದ್ದು ಯಾವುದೋ, ಅದೇ ವಿದ್ಯೆ. ಲೌಕಿಕ ವಿದ್ಯೆ ನಮ್ಮನ್ನು ಲೌಕಿಕ ದಾಹದಿಂದ ಮುಕ್ತರನ್ನಾಗಿಸಿದರೆ ಆಧ್ಯಾತ್ಮಿಕ ವಿದ್ಯೇ ನಮ್ಮ ಆತ್ಮತೃಷೆಯನ್ನು ಹಿಂಗಿಸುತ್ತದೆ. ಸಂಗೀತ ವಿದ್ಯೆಯಿಂದ ಸಾಧ್ಯವಾಗುವ ಸಾಧ್ಯತೆಗಳು ವಾಸುದೇವ ಭಟ್ಟರ ಅನ್ವೇಷಣೆಯ ಗುರಿ.

* * *

ವಾಸುದೇವ ಭಟ್ಟರ ಮಹಾನ್ ದೌರ್ಬಲ್ಯವೆಂದರೆ ಅವರಿಗೆ 'ಸಾಧ್ಯವಿಲ್ಲ' ಎಂದು ಹೇಳುವ ಕಲೆಯೇ ಗೊತ್ತಿಲ್ಲ (The art of telling 'no'). ಇದರಿಂದಾಗಿಯೇ ಅವರು ಸಾಕಷ್ಟು ಹಣ ಕಳೆದುಕೊಂಡದ್ದೂ ಇದೆ. ಅವರ ಎಷ್ಟೋ ಕಾರ್ಯಕ್ರಮಗಳ ಲೆಕ್ಕಪತ್ರಗಳು ಇವತ್ತಿಗೂ 'ಲೆಕ್ಕಾಚಾರ'ವಾಗದೇ ಹಾಗೆಯೇ ಉಳಿದು ಹೋಗಿವೆ. ಇದೆಲ್ಲಕ್ಕಿಂತ ದೊಡ್ಡ ಅಪಾಯ ಘಟಿಸುವ ಸಾಧ್ಯತೆಯೂ ಇದೆ. ಒಮ್ಮೆ ಅವರು ಉಡುಪಿಯ ಬಳಕೆದಾರರ ವೇದಿಕೆಯ ಎಚ್. ಶಾಂತರಾಜ ಐತಾಳರ ಮನೆಗೆ ಹೋದಾಗ ಐತಾಳರ ತಾಯಿ ಮೂರು ಹೋಳಿಗೆಗಳನ್ನು ತಂದಿತ್ತರಂತೆ. ಇವರು ತಾವು ಮಧುಮೇಹಿ ಎಂಬುದನ್ನೂ ಮರೆತು ಮೂರೂ ಹೋಳಿಗೆಗಳನ್ನು ತಿಂದುಬಂದರಂತೆ. "ಅದು ಬೇಡ ಅಂತ ನಿಮಗೆ ಹೇಳಲಿಕ್ಕೆ ಆಗುವುದಿಲ್ಲವಾ?" ಎಂದು ಗದರಿಸಿದಾಗ ಅವರು, "ಆ ಹಿರಿಯರು ಅಷ್ಟು ಪ್ರೀತಿಯಿಂದ ತಂದುಕೊಟ್ಟಾಗ ಹೇಗೆ ಬೇಡ ಎನ್ನಲಿ?" ಎಂದರು.

ವಾಸುದೇವ ಭಟ್ಟರಂತಹ ಮಹಾನ್ ಕಲಾವಿದರೊಳಗೂ ಮನುಷ್ಯಸಹಜ ದೌರ್ಬಲ್ಯಗಳಿವೆ ಎಂದೆನಷ್ಟೆ? ಅವರ ಸಿಟ್ಟು, ಹಠಮಾರಿತನ, ನಶ್ಯದ ಚಟ ಎಲ್ಲರಿಗೂ ಗೊತ್ತಿರುವಂತಹದೇ. ಮಹಾಭಾರತ ಕಾಲದ ಗುರುಗಳ ಕುದುರೆ ಸವಾರಿಯ ಹಾಗೆ ಶರವೇಗದಿಂದ ಸ್ಕೂಟರ್ ಓಡಿಸುವ ಈ ಗುರುಗಳನ್ನು ಈ ಕಾರಣಕ್ಕಾಗಿಯೇ ನಾನು ಹಲವಷ್ಟು ಬಾರಿ ನಿಂದಿಸಿದ್ದಿದೆ. "ಅವರ ಡ್ರೈವಿಂಗ್ ಲೈಸೆನ್ಸ್ ಹಿಂದೆ ತೆಗೆದುಕೊಳ್ಳಿ," ಎಂದು ಅವರ

ಶಿಷ್ಯೆಯಾಗಿರುವ ಸಾರಿಗೆ ಅಧಿಕಾರಿಗಳಲ್ಲಿ ವಿನಂತಿಸಿದ್ದೂ ಇದೆ.

ತಮ್ಮ ಮುನಿಸಿನಿಂದಾಗಿಯೇ ಹಲವು ಮಿತ್ರರನ್ನು, ಬಂಧುಗಳನ್ನು ಕಳೆದುಕೊಳ್ಳಬೇಕಾಗಿ ಬಂತೆಂಬುದನ್ನು ಅವರೇ ನನ್ನಲ್ಲಿ ಹೇಳಿಕೊಂಡಿದ್ದಾರೆ. ತಪ್ಪು ತನ್ನದೇ ಇದ್ದೀತು ಎಂದು ಪ್ರಾಂಜಲವಾಗಿ ಒಪ್ಪಿಕೊಂಡಿದ್ದಾರೆ. ಯಾವುದೋ ಮಾತಿಗೆ ಮುನಿಸು ತೋರಿ ದೂರ ಹೋದ ಮಿತ್ರರು ಈ ಇಳಿವಯಸ್ಸಿನಲ್ಲಿ ತಮ್ಮ ಸನಿಹಕ್ಕೆ ಬಂದರೆ ಎಷ್ಟು ಸೊಗಸು! ಎಂದು ಹಂಬಲಿಸಿದ್ದಾರೆ. ವಾಸುದೇವ ಭಟ್ಟರ ಒಳಗಿನ ಈ 'ಮನುಷ್ಯತನ', ಈ 'ಮನುಷ್ಯ ಪ್ರೀತಿ', ಈ 'ಸಾಚಾತನ' ನನ್ನನ್ನು ಮುಗ್ಧಗೊಳಿಸಿವೆ.

* * *

ವಾಸುದೇವ ಭಟ್ಟರ ಸಂಗೀತ ಕ್ಷೇತ್ರದ ದುಡಿಮೆ - ಕೊಡುಗೆಗಳನ್ನು ಸಮಾಜ ಗುರುತಿಸಿ ಅವರಿಗೆ ಹಲವು ಪುರಸ್ಕಾರ, ಅಭಿನಂದನೆಗಳನ್ನು ಸಲ್ಲಿಸಿದೆ. ಉಡುಪಿ ಸರ್ವಜ್ಞ ಪೀಠದಿಂದ 'ದಾಸ ಸಂಗೀತ ವಿಶಾರದ'; ಮದ್ರಾಸು ಗಾಯನ ಕೂಟದ ಪರವಾಗಿ ಪ್ರಸಿದ್ಧ ಹಿನ್ನೆಲೆ ಗಾಯಕ ಶ್ರೀ ಪಿ. ಬಿ. ಶ್ರೀನಿವಾಸ್ ಅವರಿಂದ 'ಕಲಾರತ್ನ'; ಬೆಂಗಳೂರು ಸಾರಸ್ವತ ಮಹಾ ವಿದ್ಯಾಲಯದ ಪರವಾಗಿ ಪ್ರಸಿದ್ಧ ಜ್ಯೋತಿಷ್ಯ ಶಾಸ್ತ್ರಜ್ಞ ಶ್ರೀ ಬಿ. ವಿ. ರಾಮನ್ ಅವರಿಂದ 'ಸಂಗೀತಸೇವಾ ದುರಂಧರ'; ಮಣಿಪಾಲ ಪತ್ರಕರ್ತರ ಅಭ್ಯುದಯ ಸಂಘದಿಂದ 'ಗಾನಕಲಾವಿಭೂಷಣ'; ಪೋಪ್ ಜಾನ್ ಪಾಲ್ ಅವರಿಂದ 'ಅಭಿನಂದನ ಪ್ರಶಸ್ತಿ'; ಉಡುಪಿ ರಂಗಭೂಮಿ ಸಂಸ್ಥೆಯಿಂದ 'ಸಂಗೀತ ವಿಭೂಷಣ'; ಶ್ರೀಶ್ರೀ ಪೇಜಾವರ ವಿಶ್ವೇಶತೀರ್ಥ ಶ್ರೀಪಾದರಿಂದ 'ಶ್ರೀರಾಮವಿಠಲ ಪ್ರಶಸ್ತಿ'; ಉಡುಪಿ ಜಾಯಂಟ್ಸ್ ಅವರಿಂದ 'ಇಂಟರ್‌ನ್ಯಾಶನಲ್ ಗ್ರೂಪ್ ಪ್ರಶಸ್ತಿ'; ಉಡುಪಿ ಜಿಲ್ಲೆಯಿಂದ 'ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ -2006'; ಕಲಾವೃಂದ, ಯುಗಪುರುಷ, ಅನಂತ ಪ್ರಕಾಶ, ನೂತನ ಪಬ್ಲಿಕೇಷನ್ಸ್, ಉಡುಪಿ ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮುಂತಾದ ವೇದಿಕೆಗಳಿಂದ ಅಸಂಖ್ಯ 'ಗೌರವ ಸಮ್ಮಾನ'; ಕಾಂತಾವರ ಕನ್ನಡ ಸಂಘದಿಂದ 'ರಾಜ್ಯಮಟ್ಟದ ಗೌರವಾರ್ಪಣೆ' - ಅವರಿಗೆ ಸಂದಿವೆ.

ವಾಸುದೇವ ಭಟ್ಟರಂತಹ ಅಪ್ಪಟ ಕಲಾವಿದರಿಗೆ ಶಾಸನಗಳ, ದತ್ತಿ ಪತ್ರಗಳ, ಅಭಿನಂದನ ಗ್ರಂಥಗಳ, ಪ್ರಶಂಸಾ ಸರ್ಟಿಫಿಕೇಟ್‌ಗಳ ಅಗತ್ಯ ಇರುವುದಿಲ್ಲ. ಆದರೆ ಹಾಗಿನ ಕಲಾವಿದರನ್ನು ಗುರುತಿಸದೇ ಹೋದಲ್ಲಿ, ಮುಂದೆ ಆ ತೆರನಾದ 'ತಳಿ'ಗಳನ್ನೇ ನಾವು ಕಳೆದುಕೊಳ್ಳಬೇಕಾದೀತು.

* * *

ಈ 'ನಾದ ಸುನಾದ'ದ ಸಂಪಾದಕತ್ವದ ಜವಾಬ್ದಾರಿಯನ್ನು ನಾನು ವಹಿಸಿಕೊಂಡದ್ದಕ್ಕೆ ಡಾ. ನಾ. ಮೊಗಸಾಲೆಯವರ ಒತ್ತಾಯವೇ ಕಾರಣ. 'ಯಾವತ್ತೂ ಜೊತೆಗಿದ್ದೇನೆ' ಎಂಬ ಭರವಸೆ ಕೊಟ್ಟವರು ಕವಿಮಿತ್ರ ಜಯರಾಮ ಕಾರಂತರು. ಅಭಿನಂದನ ಗ್ರಂಥದ ಸ್ವರೂಪ

ಹೀಗೆಯೇ ಇರಬೇಕು ಎಂದು ನಿರ್ಣಯಿಸುವಲ್ಲಿ ನೆರವಾದವರು ಕೆ. ಸಿ. ವಿರೂಪಾಕ್ಷ ಮತ್ತವರ ಶ್ರೀಮತಿ ಎಂ. ಪಿ. ಓಂಕಾರೇಶ್ವರಿಯವರು. ಅಭಿನಂದನ ಗ್ರಂಥದ ಮೂರನೆಯ ಒಂದು ಭಾಗ ಸಂಗೀತಕ್ಕೆ ಸಂಬಂಧಿಸಿದ ಲೇಖನಗಳಿಂದ ಸಮೃದ್ಧವಾಗಿರಬೇಕೆಂಬ ಸಲಹೆಯೂ ಅವರದ್ದೇ. "ಈ ಭಾಗ ಕರ್ನಾಟಕ ಸಂಗೀತಕ್ಕೆ ರೆಫರೆನ್ಸ್‌ನಂತಿರಬೇಕು" ಎಂದೂ ಅವರು ಹೇಳತೊಡಗಿದರು.

"ಹಾಗೆ ಆಗಬೇಕಿದ್ದರೆ ಹೀಗೆ ಮಾಡಬಹುದು" ಎಂಬ ಸಲಹೆ ಕೊಟ್ಟವರು ಆತ್ಮೀಯರಾದ ಉದ್ಯಾವರ ಮಾಧವಾಚಾರ್ಯರು. ತಮ್ಮಲ್ಲಿರುವ ರೆಫರೆನ್ಸ್ ಗ್ರಂಥಗಳನ್ನೆಲ್ಲ ನನ್ನೆದುರು ಹರಡಿ ತಕ್ಕ ಕಾಲಕ್ಕೆ ತಕ್ಕ ಮಾರ್ಗದರ್ಶನ ಕೊಟ್ಟರವರು. ನಂತರ ನೆರವಿಗೆ ಬಂದವರು 'ಉದಯವಾಣಿ'ಯ ಹಿರಿಯ ಸಂಪಾದಕ ಎ. ಈಶ್ವರಯ್ಯ. ಕರ್ನಾಟಕ ಸಂಗೀತದ ಹಿರಿಯ ವಿದ್ವಾಂಸರ ವಿಳಾಸದೊಂದಿಗೆ, ಯಾರಿಂದ ಯಾವ ಲೇಖನಗಳನ್ನು ಬರೆಸಬಹುದೆಂಬ ಸಲಹೆ ಕೊಟ್ಟವರೂ ಅವರೇ.

ಡಾ. ವಿ. ಎಸ್. ಸಂಪತ್ಕುಮಾರಾಚಾರ್ಯ, ಡಾ. ಸುಕನ್ಯಾ ಪ್ರಭಾಕರ್, ಆರ್. ಕೆ. ಶ್ರೀಕಂಠನ್, ಡಾ. ಆರ್. ಸತ್ಯನಾರಾಯಣ, ಸುಕುಮಾರ ಅಲಂಪಾಡಿ, ಡಾ. ಮೈಸೂರು ಮಂಜುನಾಥ್, ಜಿ. ಟಿ. ನಾರಾಯಣ ರಾವ್, ಆನಂದರಾಮ ಉಡುಪ, ಅರವಿಂದ ಹೆಬ್ಬಾರ್, ಉದ್ಯಾವರ ಮಾಧವಾಚಾರ್ಯ, ಎ. ಈಶ್ವರಯ್ಯ, ಎಸ್. ದಿವಾಕರ್, ಶ್ರೀಧರ ಹಂದೆ, ಶ್ರೀಧರ ಉಪ್ಪೂರ್, ಸರೋಜಾ ಆಚಾರ್ಯ, ಟಿ. ಎಸ್. ಅಂಬುಜಾ, ವಿಭಾವರಿ ಭಟ್ ಮೊದಲಾದ ಬಲ್ಲಿದರು ಪ್ರಬುದ್ಧ ಲೇಖನಗಳನ್ನು ಅತ್ಯಲ್ಪ ಅವಧಿಯಲ್ಲಿ ತಯಾರು ಮಾಡಿಕೊಟ್ಟು ಈ ಭಾಗವನ್ನು ಸಮೃದ್ಧವಾಗಿಸಿದ್ದಾರೆ. ಈ ಎಲ್ಲ ಮಹಾನುಭಾವರ ಹೃದಯ ವೈಶಾಲ್ಯತೆ ಅನರ್ಘ್ಯ, ಅನನ್ಯ, ಚಿರಸ್ಮರಣೀಯ.

ವಾಸುದೇವ ಭಟ್ಟರ ಒಡನಾಟದ ಬಗ್ಗೆ ಲೇಖನಗಳನ್ನು ಬರೆದುಕೊಟ್ಟ ಸಹೃದಯೀ ಬಂಧುಗಳು, ಡಿಟಿಪಿ ಮಾಡಿಕೊಟ್ಟ ಶುಭದಾ, ಕರಡಚ್ಚು ತಿದ್ದಿದ ಮಾಲಿನಿ, ಫೋಟೋಗಳನ್ನು ಸ್ಕ್ಯಾನ್ ಮಾಡಿದ ಅನಂತಕೃಷ್ಣ ಭಾಗವತ್ ಮತ್ತು ಯೋಜನೆಯುದ್ದಕ್ಕೆ ನೆರವಿಗೆ ನಿಂತ ಮೊಗಸಾಲೆ - ಇವರನ್ನೆಲ್ಲ ಕೃತಜ್ಞತೆಯಿಂದ ನೆನೆಯದೇ ಈ ಹೃದ್ಗತ ಸಂಗೀತ ಮುಖೋದ್ಗತವಾಗದು.

ಉಡುಪಿ
ಮೇ 12, 2007

ಬೆಳಗೋಡು ರಮೇಶ ಭಟ್
ಸಂಪಾದಕ

ಅಂತರಂಗ...

ಭಾಗ ಎರಡು : ಶ್ರುತಿ - ಅನುಶ್ರುತಿ

ಭಾಗ ಮೂರು : ಬಾಂಧವ್ಯದ ಬೆರಗುಗಳು

ಪರ್ವ ಎರಡು : ಸುನಾದ ವಿನೋದಿನಿ

ಪರಿಶಿಷ್ಟ

18679



ಸಂಜೆ ಬಾನಿನ ತುಂಬ ಹಗಲು ಗನಸಿನ ಚಿತ್ರ.

ಪ್ರತಿಕ್ಷಣ

ನನ್ನ ಗುರು, ಪಿಟೀಲು ಮಂಜುನಾಥಯ್ಯ

✍ ಉಡುಪಿ ವಾಸುದೇವ ಭಟ್

ನನ್ನ ಪೂಜ್ಯ ಗುರು, ಉಡುಪಿ ಪಿಟೀಲು ಮಂಜುನಾಥಯ್ಯನವರ ಬಗ್ಗೆ ನಾನು ಎಷ್ಟು ಹೇಳಿದರೂ ಕಡಿಮೆಯೇ. ಅದೊಂದು ಮುಗಿಯದ ಕತೆ! ಸಂಬಂಧದಲ್ಲಿ ಅವರು ನನ್ನ ಅಜ್ಜ. ಆದರೆ ನಾವೆಲ್ಲ ಅವರನ್ನು ಕರೆಯುತ್ತಿದ್ದುದು ಮಾವ ಎಂದೇ.

ಅವರು ಸಂಸಾರಿಯಲ್ಲದ ಕಾರಣ, ಅರ್ಥಾತ್ ಮದುವೆ ಮಾಡಿಕೊಂಡಿರದಿದ್ದ ಕಾರಣ, ಅವರಲ್ಲಿ ಮನೆಕೆಲಸ ನಿರ್ವಹಿಸಲು ಅವರಿಗೆ ಯಾರಾದರೂ ಒಂದಿಬ್ಬರು ಮಕ್ಕಳು ಅಥವಾ ದೊಡ್ಡವರು ಬೇಕೇ ಬೇಕಿತ್ತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮರುವರ್ಷದಿಂದ ನಾನು ಸಂಗೀತಾಭ್ಯಾಸಿಯಾಗಿ ಅವರ ಮನೆಸೇರಿದೆ. ಆಗ ನನಗೆ ಒಂಭತ್ತು ವರ್ಷ ವಯಸ್ಸು.

ನನ್ನ ಅಮ್ಮನ ಮಾವ ಅವರು. ನನ್ನ ಅಮ್ಮ, ಅಜ್ಜಿ, ಮಾವಂದಿರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಎಲ್ಲರೂ ಅವರನ್ನು 'ಮಾವ' ಎಂದೇ ಸಂಬೋಧಿಸುತ್ತಿದ್ದುದರಿಂದ, ಅವರ ಮನೆಗೆ ಬಂದ ವಿದ್ಯಾರ್ಥಿಗಳೂ ಅವರನ್ನು ಕರೆಯುತ್ತಿದ್ದುದು 'ಮಾವ' ಎಂದೇ. ಹಾಗಾಗಿ ಅವರು ಎಲ್ಲರಿಗೂ ಮಾವ!

ಬಂಧುಗಳೆಲ್ಲರೂ ಅವರನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಅವರು ಸಂಗೀತದ ಗುರು, ಮೇಲಾಗಿ ನಮ್ಮೆಲ್ಲರ ಮಾರ್ಗದರ್ಶಕರೆಂಬ ಗಾಢಾಭಿಮಾನ ನಮ್ಮೆಲ್ಲರದಾಗಿತ್ತು. ಹೀಗಾಗಿ ನನ್ನ ಅಜ್ಜಿ (ಅಮ್ಮನ ಅಮ್ಮ), ಚಿಕ್ಕಮ್ಮ, ದೊಡ್ಡಮ್ಮ ಹಾಗೂ ಮೊಮ್ಮಕ್ಕಳಲ್ಲಿ ಯಾರಾದರೂ ಇಬ್ಬರು ಅವರ ಮನೆಯಲ್ಲೇ ಇರುತ್ತಿದ್ದರು.

ನಾನು ಸಂಗೀತ ಅಭ್ಯಾಸಕ್ಕಾಗಿ ಅವರಲ್ಲಿ ಪ್ರವೇಶ ಪಡೆದಾಗ ಎಲ್ಲರಿಗೂ ಸಂತೋಷವಾಗಿತ್ತು. ಕಾರಣ, ಪಾಠದೊಂದಿಗೆ ಮನೆಯ ಕೆಲಸಗಳನ್ನೂ ನಿರ್ವಹಿಸುವ ಜವಾಬ್ದಾರಿ ಇತ್ತು.

ಗುರುಕುಲ ಪದ್ಧತಿಯಂತೆ ನನ್ನ ಪಾಠ ಪ್ರವಚನ. ಬೆಳಿಗ್ಗೆ ಬೇಗನೆ ಎದ್ದು ಮುಖ ತೊಳೆದು ಅವರ ಪೂಜೆಗಾಗಿ ಹೂ, ತುಳಸಿ ಅಣಿಗೊಳಿಸಬೇಕಿತ್ತು. ಈ ಸಿದ್ಧತೆಯ ಜೊತೆಗೇ ಕಟ್ಟಿಗೆ ಒಲೆ ಉರಿಸಿ, ನೀರು ಕಾಯಿಸಬೇಕಿತ್ತು. ಸಾರು, ಅನ್ನ, ಪಲ್ಯ ಎಲ್ಲವೂ ನನ್ನದೇ ಜವಾಬ್ದಾರಿ.

ನಾನು ಅವರ ಮನೆಸೇರಿದ್ದು ನನ್ನ ಒಂಬತ್ತನೆಯ ವರ್ಷ ಪ್ರಾಯದಲ್ಲಿ ಎಂದೆನಲ್ಲ. ಸಂಗೀತಾಭ್ಯಾಸ ಪಡೆದು ನನ್ನ 17ನೆಯ ವಯಸ್ಸಿನಲ್ಲಿ ಮದ್ರಾಸು ಸರಕಾರದ (ಆಗ ದಕ್ಷಿಣ

ಕನ್ನಡ ಜಿಲ್ಲೆಯು ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು) ಪರೀಕ್ಷೆಗಳಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣನಾದೆ.

ಸಂಗೀತ ಪರೀಕ್ಷೆಯ ಫಲಿತಾಂಶ ಆಗೆಲ್ಲ ವಾರ್ತಾಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದಿಲ್ಲ. ಸರಕಾರದ ಗಜೆಟ್‌ನಲ್ಲಿ ನನ್ನ ಫಲಿತಾಂಶ ಹೊರಬಿದ್ದಿತ್ತು. ಆ ಕಾಲದಲ್ಲಿ ಅವರಲ್ಲಿಗೆ ಸಂಗೀತ ಕಲಿಯಲೆಂದು ಬರುತ್ತಿದ್ದ ಚಿತ್ರಕಲಾಧ್ಯಾಪಕ ವೆಂಕಟರಾಯ ಕಾಮತ್ ಅವರು ಆ ಗಜೆಟ್ ತಂದು ಗುರುಗಳಿಗೆ ತೋರಿಸಿದರು.

ಆ ಸಮಯದಲ್ಲಿ ನನ್ನೊಂದಿಗೆ ಹಲವಾರು ಮಕ್ಕಳು ಸಂಗೀತ ಕಲಿಯುತ್ತಿದ್ದರು. ಹೆಣ್ಣುಮಕ್ಕಳೇ ಹೆಚ್ಚಿನವರು. ಗಂಡುಮಕ್ಕಳು ನಾವು ಕೇವಲ ಏಳು ಮಂದಿ.

ಅಂದು ಸಂಜೆ, ಶಾಲೆಯಿಂದ ಬಂದು ಎಂದಿನಂತೆ ಮನೆಹೊಕ್ಕಾಗ, ಒಳಗಡೆಯಿಂದ ಎಂದೂ ಇಲ್ಲದ ನಗು-ಗದ್ದಲ ಕೇಳಿಸಿತು. ಎಲ್ಲರೂ ನನ್ನನ್ನು ಕಂಡು ಕೈಸನ್ನೆ ಮಾಡಿದರು. ಗುರುಗಳು, "ಫಲಿತಾಂಶ ಗೊತ್ತಿದೆಯಾ?" ಎಂದರು. ಸ್ತಬ್ಧನಾದೆ. ಅವರು ತೋರಿದ ಕೈಸನ್ನೆ, 'ಪರೀಕ್ಷೆಯಲ್ಲಿ ಮುಗ್ಗರಿಸಿದ್ದಿ' ಎಂಬ ಅರ್ಥ ಬರುವಂಥದ್ದಾಗಿತ್ತು. ಉಸಿರು ಬಿಗಿಹಿಡಿದು, ಮತ್ತೆ ತಲೆ ಎತ್ತಿ ಅವರನ್ನೆಲ್ಲ ನೋಡಿದೆ.

ಅಷ್ಟರಲ್ಲಿ ಗುರುಗಳೇ ಶಾಂತಸ್ವರದಿಂದ, "ನೀನು ಪಾಸಾಗಿದ್ದಿ. ಬರೇ ಪಾಸ್ ಅಲ್ಲ, ಪ್ರಥಮದರ್ಜೆ!" ಎಂದರು. ನನಗೆ ಸ್ವರ್ಗಕ್ಕೆ ಮೂರೇ ಗೇಣು! ಫಲಿತಾಂಶವನ್ನು ಆ ರೀತಿ ಘೋಷಿಸಿದ ಗುರುಗಳು ಅದರ ಬೆನ್ನಲ್ಲೇ ಒಂದು ಜರಿಯ ಪಂಚೆಯನ್ನು ನನ್ನ ಕೈಲಿರಿಸಿ, ಒಂದು ಶಾಲನ್ನೂ ಹೊದಿಸಿದರು. ಅಂದು ನನಗೆ ಆದಷ್ಟು ಆನಂದ ಹಿಂದೆಂದೂ ಆಗಿರಲಿಲ್ಲ.

ಬಳಿಕ, ಪರೀಕ್ಷೆಗೆ ಕುಳಿತಿರದಿದ್ದ ನನ್ನ ಹಿರಿಯ ಸಹಪಾಠಿಗಳೂ ಅಭಿನಂದನೆ ಹೇಳಿದರು. 'ಈ ಪರಿಯ ಪ್ರೀತಿ, ಇನ್ನಾವ ಗುರುವಲ್ಲೂ ಕಾಣೆ!' ಹೀಗಿದ್ದರು ನನ್ನ ಗುರುಗಳು.

ತಾಳ್ಮೆಯ ಪಾಠ

ತರಗತಿ ಆರಂಭವಾಗಿ ಆರು ತಿಂಗಳೇ ಸಂದರೂ ಅವರು ನನಗೆ 'ಸರಿಗಮ' ಬರೆದು ಕೊಟ್ಟಿರಲೇ ಇಲ್ಲ. ಉಳಿದ ಎಲ್ಲರಿಗೂ ಪ್ರತಿದಿನವೂ ಪಾಠದ ಜೊತೆಗೇ ಬರೆದು ಕೊಡುತ್ತಿದ್ದರು. ಹೀಗೆ ಆರು ತಿಂಗಳು ಕಾದು ಕಾದು, ಕೊನೆಗೆ ಬೇಸರಗೊಂಡು ಮನೆಗೆ ಬಂದು ಅಮ್ಮನಲ್ಲಿ ಹೇಳಿದೆ, "ಮಾವ ನನಗೆ ಏನೂ ಕಲಿಸುತ್ತಿಲ್ಲ; ನಾನೀಗ ಅಲ್ಲಿ ಬರೇ ಕೆಲಸದವನಂತೆ ಆಗಿದ್ದೇನೆ!"

ಹೀಗೆ ನನ್ನನ್ನೇ ನಾನು ಹೀಯಾಳಿಸಿಕೊಂಡಾಗ ಅಮ್ಮ ಅಷ್ಟೇ ಶಾಂತವಾಗಿ ಹೇಳಿದರು, "ಅವರಿಗೆ ಗೊತ್ತು, ಯಾವಾಗ, ಹೇಗೆ ಕಲಿಸಬೇಕೆಂದು! ಮಾವನ ಬಗ್ಗೆ ಈ ರೀತಿ ಇನ್ನೆಂದಿಗೂ ಹೇಳಬೇಡ, ಆಯಿತಾ?"

ಈಗ ಎಲ್ಲವೂ ಅರ್ಥವಾಗುತ್ತಿದೆ. ಸಂಗೀತಾಭ್ಯಾಸಿಗೆ ಗಮನ, ಏಕಾಗ್ರತೆ ಅತಿ ಅಗತ್ಯ. ನನ್ನದು ತೀರಾ ಅವಸರದ ಸ್ವಭಾವ. ಇಂಥ ಗಡಿಬಿಡಿಯ ಹುಡುಗನನ್ನು ಅವರು ನಡೆಸಿಕೊಂಡ ರೀತಿ... ಅದು ಬೇರೆ ಯಾರಿಂದ ಸಾಧ್ಯ?

ನಾನು ಶಿಷ್ಯನಾಗಿ ಅವರ ಮನೆಯನ್ನು ಸೇರುವ ಮುನ್ನ ಅವರ ಬಳಿ ಅದೆಷ್ಟೋ ಮಂದಿ ಅಭ್ಯಾಸ ಮಾಡಿ ಹೊರಬಂದಿದ್ದರು. ಅವರೆಲ್ಲ ಆಗಾಗ ಬಂದು ಅವರನ್ನು ಕಂಡು ಮಾತಾಡಿ ವಂದಿಸಿ ಹೋಗುತ್ತಿದ್ದರು. ಪ್ರೊ. ಎಂ. ರಾಜಗೋಪಾಲಾಚಾರ್ಯ, ಭುಜಂಗ ರಾವ್, ಗಣಪತಿ ರಾವ್, ಎ. ಪುತ್ರಾಯ, ಪುತ್ತಿಗೆ ನಾರಾಯಣ ಭಟ್, ಚಿತ್ರನಟಿ ಹರಿಣಿ, ಚಿತ್ರನಟ ವಾದಿರಾಜ್, ಕೆ. ಸುಂದರ ಆಚಾರ್ಯ, ವಿಷ್ಣುಮೂರ್ತಿ ಭಾಗವತರು, ಅನಂತರಾಮ ಉಡುಪ, ಸರಸ್ವತಿ ಬಾಯಿ ರಾಜವಾಡೆ, ಯಶೋದಾ ಆಚಾರ್ಯ, ಸುಮೀರಾ ರಾಧಾಕೃಷ್ಣ, ಸೂರಾಲು ಪರಮೇಶ್ವರ ಭಟ್, ಲೀಲಾ, ತಾರಾದೇವಿ, ಟಿ. ವಿ. ರಾವ್, ಕೊಕ್ಕಡ ಸುಬ್ರಾಯ ಆಚಾರ್ಯ, ಟಿ. ರಂಗ ಪೈ, ಸರಳಾ ಕಲ್ಮಾಡಿ, ಸುನಂದಾ, ವತ್ಸಲಾ (ಅವರ ಹಿರಿಯ ಮೊಮ್ಮಗಳು), ರಮಾ ಪಡುಬೆಟ್ನಾಯಕ್, ಶಕುಂತಲಾ..... ಹೀಗೆ ಕೆಲವರು ನೆನಪಾಗುತ್ತಿದ್ದಾರೆ. ಜೊತೆಗೆ, ಹಿಂದೆಯೇ ಹೇಳಿದಂತೆ ನನ್ನೊಂದಿಗೆ ಅನೇಕ ಮಂದಿ ವಿದ್ಯಾರ್ಥಿನಿಯರು, ಅಲ್ಲದೆ ಹಲವರು ಹಿರಿಯರೂ ಅಭ್ಯಾಸ ಮಾಡುತ್ತಿದ್ದರು.

ಗುರು ಮಂಜುನಾಥಯ್ಯನವರ ಕೊನೆಗಾಲದ ಶಿಷ್ಯ ನಾನೊಬ್ಬನೇ ಆಗಿದ್ದೆ. ನನ್ನ 18ನೆಯ ವಯಸ್ಸಿನವರೆಗೂ (1956) ಅವರಲ್ಲಿ ದಿನವೂ ಸಂಗೀತಾಭ್ಯಾಸ ನಡೆಸಿದೆ. 1957ರಲ್ಲಿ ಮೆಡಲಿನ್ ಬಾಲಿಕೆಯರ ಪ್ರೌಢಶಾಲೆಯಲ್ಲಿ ಗಾನವಿದ್ಯಾಬೋಧಕನಾಗಿ ಕಾರ್ಯನಿರ್ವಹಿಸಲು ತೊಡಗಿದೆ. ವಾರಕ್ಕೆರಡು ದಿನ, ಪೂರ್ತಿಯಾಗಿ ಗುರುಗಳ ಜೊತೆಗೇ ಇರುತ್ತಿದ್ದೆ. ಆಗಲೇ ಅವರ ಆರೋಗ್ಯ ಹದಗೆಡಲಾರಂಭಿಸಿದ್ದು. ಅದು ಬರಬರುತ್ತ ಉಲ್ಬಣಿಸತೊಡಗಿತ್ತು. ಔಷಧೋಪಚಾರಗಳನ್ನು ಮಾಡುತ್ತಲೇ ಇದ್ದೆವು. ಹೀಗಿದ್ದರೂ ಅವರು ದಿನವೂ ಮುಂಜಾನೆಯೇ ಎದ್ದು ಪಿಟೀಲು ಕೈಗೆತ್ತಿಕೊಂಡು ನಾದಸಾಧನೆ ನಡೆಸುತ್ತಿದ್ದರು. ಸಂಗೀತಗಾರನ ಸಾಧನೆ ಹೇಗಿರಬೇಕೆಂದು ಅವರು ಹೀಗೆ ತೋರಿಸಿಕೊಟ್ಟರು.

ಮಾತಿನ ನಡುವೆ, 'ಸಾಧಕ ಶಿಸ್ತು, ಸಂಯಮ ಉಳ್ಳವನಾಗಿರಬೇಕೆಂ'ದು ಅವರು ಒತ್ತಿಹೇಳುತ್ತಿದ್ದರು. ಪ್ರತಿ ವಿದ್ಯಾರ್ಥಿಯೂ ಶುಚಿ-ರುಚಿ ಅರಿತಿರಬೇಕೆಂದು, ನಿಷ್ಠೆಯಿಂದ ಪಾಠವನ್ನು ಆಲಿಸುವವನಾಗಿರಬೇಕೆಂದು ತಿಳಿಹೇಳುತ್ತಿದ್ದರು. ಪಾಠದ ಸಮಯದಲ್ಲಿ ಎಲ್ಲರೂ ನೆಟ್ಟಗೆ ಕುಳಿತಿರಬೇಕಿತ್ತು. ಏಕಾಗ್ರಚಿತ್ತದಿಂದ ಪಾಠ ಆಲಿಸಬೇಕಿತ್ತು.

ಬಹುಮುಖ ಆಸಕ್ತಿ

'ತುಂಬಿದ ಕೊಡ ತುಳುಕದು' ಎಂಬಂತೆ ಮಂಜುನಾಥಯ್ಯನವರು ಅಪಾರ ಸಂಗೀತಜ್ಞಾನವನ್ನು ಹೊಂದಿದವರಾಗಿದ್ದರೂ ನಿರಾಡಂಬರ ವ್ಯಕ್ತಿಯಾಗಿದ್ದರು. ಬಿಳಿ ಪಂಚೆ,

ಬಿಳಿ ಷರಟು, ಒಂದು ಖದ್ದರ್ ಶಾಲು - ಇವುಗಳನ್ನಲ್ಲದೆ ಬೇರೆ ದಿರಿಸು ಧರಿಸಿದವರಲ್ಲ. ಪ್ರತಿ ಸಂಜೆಯೂ ಬಿಳಿಪಂಚೆಯನ್ನು ಕಚ್ಚೆ ಹಾಕಿ ಉಟ್ಟು, ಬಿಳಿ ಷರಟು ಧರಿಸಿ, ಹೆಗಲ ಮೇಲೆ ಶಾಲು ಧರಿಸಿ ಅವರು ಉಡುಪಿಯ ಶ್ರೀಕೃಷ್ಣ - ಮುಖ್ಯಪ್ರಾಣರ, ಶ್ರೀ ಅನಂತೇಶ್ವರ - ಶ್ರೀ ಚಂದ್ರಮೌಳೇಶ್ವರರ ದರ್ಶನ ಪಡೆದು ರಥಬೀದಿಗೆ ಒಂದು ಮಹಾಪ್ರದಕ್ಷಿಣೆ ಬಂದು ತೆಂಕಪೇಟೆಯ ಮೂಲಕ ತಮ್ಮ ಮನೆಯತ್ತ ನಡೆದುಹೋಗುತ್ತಿದ್ದ ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಅವರು ರಥಬೀದಿಗೆ ಬಂದರೆಂದರೆ ನೂರಾರು ಕಣ್ಣುಗಳು ಅವರನ್ನೇ ಗೌರವದಿಂದ ದಿಟ್ಟಿಸುತ್ತಿದ್ದವು. ಚಿತ್ರನಟನೊಬ್ಬನನ್ನು ಕಂಡರೆ ಹೇಗೋ ಹಾಗೆ! ನೂರಾರು ನಮಸ್ಕಾರಗಳು ಅವರಿಗೆ ಸಲ್ಲುತ್ತಿದ್ದವು.

ಮಂಜುನಾಥಯ್ಯನವರು ಸಂಗೀತ ವಿದ್ಯೆಯಲ್ಲಿ ಹೇಗೆ ವಿದ್ವಾಂಸರಾಗಿದ್ದರೋ ಹಾಗೆಯೇ, ನಾಟಕ, ಸಿನಿಮಾ, ಹರಿಕೀರ್ತನೆ, ಪ್ರವಚನ, ಯಕ್ಷಗಾನದಂತಹ ಕಲೆಗಳಲ್ಲೂ ಒಳ್ಳೆಯ ಆಸಕ್ತಿ ಹೊಂದಿದ್ದರು. ಕವಿ, ಬರಹಗಾರರೆಂದರೆ ಅವರಿಗೆ ಬಹು ಗೌರವವಿತ್ತು. ಚಿತ್ರಕಲೆಯಲ್ಲೂ ಅವರಿಗೆ ಒಲವಿತ್ತು. ಅವರ ಮನೆಯ ಗೋಡೆಗಳನ್ನು ರಾಜಾ ರವಿವರ್ಮನ ವರ್ಣಚಿತ್ರಗಳು ಅಲಂಕರಿಸಿದ್ದವು. ರಾಧಾವಿಲಾಸ, ರಾಸಕ್ರೀಡೆ, ಗೋಪಿಕಾ ಸ್ತ್ರೀಯರೊಂದಿಗಿನ ಕೃಷ್ಣ... ಒಂದೇ, ಎರಡೇ, ಸುಮಾರು ನೂರಕ್ಕೂ ಮಿಕ್ಕು ವರ್ಣಚಿತ್ರಗಳನ್ನು ಕಟ್ಟು ಹಾಕಿಸಿ ಮನೆತುಂಬ ತೂಗುಹಾಕಿದ್ದರು. ಆಗಾಗ ಅವುಗಳನ್ನು ವೀಕ್ಷಿಸುತ್ತ ನಿಲ್ಲುತ್ತಿದ್ದರು. ಮನೆಗೆ ಬಂದ ಆತ್ಮೀಯರಲ್ಲಿ ಆ ಚಿತ್ರಗಳ ವಿಶೇಷತೆಯನ್ನು ವಿವರಿಸುತ್ತಿದ್ದರು. ದಿನವೂ ವಾರ್ತಾಪತ್ರಿಕೆ (ಸಂಯುಕ್ತ ಕರ್ನಾಟಕ) ಓದುತ್ತಿದ್ದರು. ದೈನಂದಿನ ವಿದ್ಯಮಾನಗಳನ್ನು ಚರ್ಚಿಸುತ್ತಿದ್ದರು. ಎಷ್ಟೇ ಅನಾರೋಗ್ಯವಿದ್ದರೂ ತಮ್ಮ ನಿತ್ಯವಿಧಿಗಳನ್ನು ಇತರರ ಅವಲಂಬನೆಯಿಲ್ಲದೆ ನಿರ್ವಹಿಸುತ್ತಿದ್ದರು.

ಅವರು ಶಿಷ್ಯರಿಗೆ ಬರೇ ಪಾಠವನ್ನಷ್ಟೇ ಹೇಳಿಕೊಡಲಿಲ್ಲ. ಶಿಕ್ಷಣ ನೀಡುತ್ತಲೇ ಅಭ್ಯಾಸದ ಶಿಸ್ತು ವ್ಯವಸ್ಥಿತವಾಗಿ ಮುಂದುವರಿಯುವಂತೆಯೂ ಅವರ ವ್ಯಕ್ತಿತ್ವವನ್ನು ತಿದ್ದಿದರು. ಹಾಡುಗಾರಿಕೆ, ವೀಣೆ, ಪಿಟೀಲು, ಕೊಳಲು ಈ ಎಲ್ಲ ವಾದ್ಯಗಳಲ್ಲಿ ಸ್ವತಃ ಪರಿಣತರಾಗಿದ್ದ ಅವರು ಅನೇಕ ಮಂದಿ ಶಿಷ್ಯ ಶಿಷ್ಯೆಯರಿಗೆ ತನ್ನ ಗಾಯನ-ವಾದನ ಪರಿಣತಿಯ ಫಲವನ್ನು ಧಾರೆಯೆರೆದರು. ಅದುವರೆಗೆ ಕೇವಲ ಹಾರ್ಮೋನಿಯಂ, ತಬ್ಲಾದೊಂದಿಗಷ್ಟೇ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಪಿಟೀಲು, ವೀಣೆ, ಕೊಳಲುಗಳು ಪಾತ್ರವಹಿಸುವಂತಾದುದು ಅವರ ಮುತುವರ್ಜಿಯಿಂದ. ಅಲ್ಲದೆ ಈ ಒಂದೊಂದು ವಾದ್ಯದಲ್ಲೂ ಸ್ವತಂತ್ರ ಕಾರ್ಯಕ್ರಮಗಳನ್ನು ಅವರ ಶಿಷ್ಯ ಶಿಷ್ಯೆಯರು ನೀಡುವಂತಾಯಿತು. ಉಡುಪಿಯಲ್ಲಿ ನಡೆಯುತ್ತಿದ್ದ ಸಂಗೀತ ಕಾರ್ಯಕ್ರಮಗಳಿಗೆ ಈ ವಾದ್ಯಗಳಿಂದಾಗಿ ಹೆಚ್ಚಿನ ಮೆರುಗು ಬರುವಂತಾಯಿತು.

ಭವಿಷ್ಯ ಅರಸಿ ಮೈಸೂರಿಗೆ

ಮಂಜುನಾಥಯ್ಯನವರ ಜನನ ಉಡುಪಿ ಸಮೀಪದ ಕನ್ಯಾಕುದುರು ಎಂಬಲ್ಲಿ (ಅಗಸ್ಟ್ 30, 1887). ಅವರ ತಂದೆ ವೆಂಕಪ್ಪ ನಾರಾಯಣಯ್ಯ, ತಾಯಿ ಕೃಷ್ಣವೇಣಿ. ಅವರ ಹಿರಿಯ ಸಹೋದರ ರಾಮಚಂದ್ರಯ್ಯ (ಮಲ್ಲಣ್ಣ), ಕಿರಿಯ ಸಹೋದರ ಕೆ. ಕೃಷ್ಣರಾಯರು. ಸಹೋದರಿಯರು ಶ್ರೀಮತಿ ಶೇಷಮ್ಮನವರು ಮತ್ತು ರುಕ್ಮಿಣಿದೇವಿ.

ಹಿರಿಯ ಪುತ್ರರಾಗಿದ್ದ ರಾಮಚಂದ್ರಯ್ಯನವರು ಮನೆ, ಕೃಷಿಭೂಮಿ, ತೆಂಗಿನತೋಟವನ್ನು ನೋಡಿಕೊಳ್ಳುತ್ತಿದ್ದರು. ಕೃಷಿವಿರಾಮದ ವೇಳೆ ಹಾಡುವ ಗೀಳು ಇವರನ್ನು ಆವರಿಸಿತ್ತು. ಆ ಕಾಲದಲ್ಲಿನ ಯಕ್ಷಗಾನ ಭಾಗವತರ ಪಾತ್ರಧಾರಿಗಳ ಸ್ನೇಹವಿತ್ತು. ಯಕ್ಷಗಾನ ಭಾಗವತಿಕೆಯ ಹಾಡುಗಳನ್ನು ಕೇಳಿ, ಬಲ್ಲವರಿಂದ ಕಲಿತು, ಯಕ್ಷಗಾನ ಭಾಗವತರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮುಂದೆ ಹಲವು ಪ್ರಸಂಗಗಳನ್ನೂ ಬರೆದರು.

ಆ ಕಾಲದಲ್ಲಿ (1903) ಇವರೆಲ್ಲರ ಜೀವನ ನಿರ್ವಹಣೆಗೆ ಆರ್ಥಿಕವಾಗಿ ತೊಂದರೆಗಳು ಉದ್ಭವಿಸಿದಾಗ, ಮಂಜುನಾಥಯ್ಯ ತಮ್ಮ 14ನೆಯ ವಯಸ್ಸಿನಲ್ಲಿ ಕಲಿಯುವ ಹಾಗೂ ದುಡಿಯುವ ಹುಮ್ಮಸ್ಸಿನಿಂದ ಮೈಸೂರಿಗೆ ತೆರಳಿದರು. ಮೈಸೂರಲ್ಲಿ ಅವರ ಬಂಧುಗಳೊಬ್ಬರ ಹೋಟೆಲು ಉದ್ಯಮದಲ್ಲಿ ಸೇರಿಕೊಂಡು ತಮ್ಮ ವಿದ್ಯಾಭ್ಯಾಸ ಮುಂದುವರಿಸಿದರು.

ಮೈಸೂರು ಪ್ರವೇಶಿಸಿದ ಮಂಜುನಾಥಯ್ಯನವರಿಗೆ ಅಪಾರ ಸಂತೋಷವೇ ಆಯಿತಂತೆ. ಆಗ ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತ. ರಾಜಾಶ್ರಯದಲ್ಲಿ ಅನೇಕ ಮಂದಿ ಸಂಗೀತ ವಿದ್ವಾಂಸರಿರುವುದನ್ನು ಗಮನಿಸಿದರು. ಆ ಕಾಲದಲ್ಲಿ ಶಿಷ್ಯರನ್ನಾಗಿ ಸ್ವೀಕರಿಸಲು ಹೆಚ್ಚಿನ ಸಂಗೀತ ವಿದ್ವಾಂಸರು ಒಪ್ಪುತ್ತಿರಲಿಲ್ಲ. ಆ ವಿದ್ವಾಂಸರೆಲ್ಲ ರಾಜಾಶ್ರಯದಲ್ಲೇ ಇರುತ್ತಿದ್ದು, ಬಹಳಷ್ಟು ಸಾಧನೆಗಾಗಿ, ಪಾಂಡಿತ್ಯಕ್ಕಾಗಿ ಹಂಬಲಿಸುತ್ತಿದ್ದ ಕಾಲ. ಆಗೆಲ್ಲ ಸಂಗೀತ ಶಿಕ್ಷಣಾಕಾಂಕ್ಷಿಗಳಿಗೆ ಯಾವನೇ ಒಬ್ಬ ಗುರುವಿನ ಬಳಿ ಶಿಷ್ಯತ್ವ ದೊರಕುವುದೆಂದರೆ, ಅದು ಸಣ್ಣ ವಿಚಾರವಾಗಿರಲಿಲ್ಲ. ಎಲ್ಲ ರೀತಿಯ ಸೂಕ್ಷ್ಮ ಪರೀಕ್ಷೆ ನಡೆದೇ ಶಿಷ್ಯನ ಸ್ವೀಕಾರ.

ಮಂಜುನಾಥಯ್ಯನವರಿಗೆ ಒಂದೆಡೆ ಬದುಕಿಗಾಗಿ ದುಡಿತದ ಅನಿವಾರ್ಯ ಸ್ಥಿತಿ, ಮತ್ತೊಂದೆಡೆ ಸಂಗೀತ ಕಲಿಕೆಯ ಹಂಬಲ. ಮೈಸೂರಿಗೆ ತೆರಳಿ ನಾಲ್ಕು ವರ್ಷಗಳೇ ಸಂದರೂ ಸಂಗೀತ ಕಲಿಕೆ ಆರಂಭಿಸಲಾಗಲಿಲ್ಲ.

ಮೈಸೂರು ನಗರ ಆ ಕಾಲದಲ್ಲೂ ಅತಿ ಸುಂದರ, ಆಕರ್ಷಕವಾಗಿಯೇ ಇದ್ದಿತ್ತಂತೆ. ವರ್ಷದಲ್ಲಿ ಕೆಲವು ತಿಂಗಳ ಕಾಲ, ಆ ಕಾಲದ ಘನ ವಿದ್ವಾಂಸರಿಂದ ಅನುದಿನವೂ ಕಛೇರಿಗಳು ನಡೆಯುತ್ತಿದ್ದುವು. ಮಂಜುನಾಥಯ್ಯ ದುಡಿಮೆ ಮಾಡುತ್ತಲೇ ಈ ಎಲ್ಲ ಸಂಗೀತ ಕಛೇರಿಗಳನ್ನು

ಆಲಿಸುತ್ತಿದ್ದರು. ನಿಧಾನವಾಗಿ ಒಬ್ಬೊಬ್ಬರನ್ನೇ ಪರಿಚಯಿಸಿಕೊಂಡು, ಅವರಲ್ಲಿ ತನ್ನ ಸಂಗೀತಾಸಕ್ತಿಯನ್ನು ನಿವೇದಿಸಿಕೊಂಡರು. ಯಾವ ಸಂಗೀತ ವಿದ್ವಾಂಸರಿಂದಲೂ ಪ್ರತಿಕ್ರಿಯೆ ಬಾರದಿದ್ದಾಗ ಅವರಲ್ಲಿನ ಹುಮ್ಮಸ್ಸು ತಣ್ಣಗಾಯಿತು.

ಸುಂದರ ನಗರ, ಮೇಲಾಗಿ ರಾಜರ ಆಡಳಿತ. ಸದಾ ಒಂದಿಲ್ಲೊಂದು ಹರಿಕಥೆ, ನಾಟಕ ಮೊದಲಾದ ಕಾರ್ಯಕ್ರಮಗಳು ನಡೆಯುತ್ತಾ ಇದ್ದುದರಿಂದ ಆ ಕಾರ್ಯಕ್ರಮಗಳಲ್ಲೂ ಪ್ರೇಕ್ಷಕನಾಗಿ ಭಾಗಿಯಾಗುತ್ತಿದ್ದರು. ಹಲವು ಕಂಪೆನಿ ನಾಟಕಗಳು ಮೈಸೂರು ನಗರ ಕೇಂದ್ರದಲ್ಲಿ ನಾಟಕವನ್ನು ತಿಂಗಳುಗಟ್ಟಲೆ ಪ್ರದರ್ಶಿಸುತ್ತಿದ್ದವು. ಹೆಚ್ಚಿನವು ಪುರಾಣ ಕತೆಗಳನ್ನು, ರಾಮಾಯಣ, ಮಹಾಭಾರತದ ಕತೆಗಳನ್ನು ಆಧರಿಸಿ ನಾಟಕ ಪ್ರದರ್ಶಿಸುತ್ತಿದ್ದವು. ಈ ಕಲಾವಿದರಲ್ಲಿ ಅನೇಕರು ಇವರು ಕೆಲಸ ಮಾಡುತ್ತಿರುವ ಹೋಟೆಲ್‌ಗೆ ಬರುತ್ತಿದ್ದು, ಅವರೊಂದಿಗಿನ ಪರಿಚಯ ಆತ್ಮೀಯತೆಗೆ ಬೆಳೆಯಿತು.

ನಾಟಕಗಳಲ್ಲಿ ಪಾತ್ರಧಾರಿಗಳೇ ಪಾತ್ರಕ್ಕನುಗುಣವಾಗಿ ಹಾಡಬೇಕಿದ್ದ ಕಾಲ ಅದು. ಸಂಗೀತಾಸಕ್ತರಾಗಿದ್ದ ಮಂಜುನಾಥಯ್ಯನವರು ಆ ಹಾಡುಗಳನ್ನೆಲ್ಲ ಕೇಳಿ ಕಂಠಪಾಠ ಮಾಡಿಕೊಂಡಿದ್ದರು. ಹೋಟೆಲ್ ಕೆಲಸ ಮಾಡುವಾಗಲೇ ಅವುಗಳನ್ನು ಗುನುಗುನಿಸುತ್ತಿದ್ದುದನ್ನು ಕೆಲ ರಂಗಕರ್ಮಿಗಳು ಕಂಡು, ಹರ್ಷಿತರಾಗಿ ತಮ್ಮ ನಾಟಕ ಕಂಪೆನಿ ಯಜಮಾನರಿಗೆ ಈ ಹುಡುಗನ ಬಗ್ಗೆ ತಿಳಿಸಿದರು.

ಒಂದು ದಿನ ಆ ನಾಟಕ ಕಂಪೆನಿ ಪ್ರದರ್ಶಿಸುತ್ತಿದ್ದ ನಾಟಕದಲ್ಲಿ ಸ್ತ್ರೀ ಪಾತ್ರಧಾರಿಯಾಗಿದ್ದವರಿಗೆ ಅಸೌಖ್ಯವುಂಟಾಗಿ ನಾಟಕ ಪ್ರದರ್ಶನವನ್ನು ಕೆಲವು ದಿನಗಳ ಮಟ್ಟಿಗೆ ನಿಲ್ಲಿಸಬೇಕಾದ ಪ್ರಮೇಯ ಒದಗಿ ಬಂತು. ಆಗ, ಮೊದಲೇ ಆ ಪಾತ್ರವನ್ನು ಮಾಡಬಲ್ಲೆನೆಂಬ ಆತ್ಮವಿಶ್ವಾಸ ಹೊತ್ತಿದ್ದ ಮಂಜುನಾಥಯ್ಯ, "ಆ ಪಾತ್ರ ನಾನೂ ಮಾಡಬಲ್ಲೆ. ನಿಮ್ಮ ಆ ನಾಟಕವನ್ನು ಪ್ರತಿದಿನವೂ ನೋಡುತ್ತಿದ್ದೇನಲ್ಲ. ನೋಡಿ, ನನಗೆಲ್ಲವೂ ಬಾಯಿಪಾಠ ಬರುತ್ತದೆ" ಎಂದು ಹೋಟೆಲಿಗೆ ಬಂದಿದ್ದ ವೃದ್ಧ ನಟರೊಬ್ಬರಲ್ಲಿ ಹೇಳಿಯೂ ತೋರಿಸಿದರು.

'ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ' ಎಂಬಂತಾಯಿತು, ನಾಟಕ ಕಂಪೆನಿಯ ಯಜಮಾನರಿಗೆ! ಪಾತ್ರಧಾರಿಯೊಬ್ಬನಿಲ್ಲದೆ ಒಂದು ವಾರ ಕಾಲ ನಾಟಕ ಕಂಪೆನಿಯನ್ನು ಮುಚ್ಚುವ ಬದಲು, ಈತನಿಗೆ ಅವಕಾಶ ಕೊಟ್ಟು, ನೋಡೋಣ ಎಂದು ಯೋಚಿಸಿದ ಯಜಮಾನರು, ಮಂಜುನಾಥಯ್ಯನನ್ನು ಕರೆಸಿಕೊಂಡು ಅವಕಾಶವಿತ್ತರು.

ದಿನವೂ, 'ದ್ರೌಪದಿ ವಸ್ತ್ರಾಪಹರಣ' ನಾಟಕದ ಸಂಭಾಷಣೆಯನ್ನು, ಹಾಡುಗಳನ್ನು ಕೇಳಿ ಕೇಳಿ ಕಂಠಪಾಠ ಮಾಡಿಕೊಂಡಿದ್ದ ಮಂಜುನಾಥಯ್ಯ ಚೆನ್ನಾಗಿಯೇ ನಿರ್ವಹಿಸಿದರು. ದ್ರೌಪದಿ ಹಾಡಬೇಕಾಗಿದ್ದ ಹಾಡನ್ನು ಸೊಗಸಾಗಿ ಹಾಡಿದರು. ಚೆನ್ನಾಗಿ ಅಭಿನಯಿಸಿದರು.

ಪಾತ್ರನಿರ್ವಹಣೆಯಲ್ಲಿ ಈ ರೀತಿ ಆದ ಬದಲಾವಣೆ ಅದೇನು ಮೋಡಿ ಮಾಡಿತ್ತೋ, ಪ್ರೇಕ್ಷಕರು ಪ್ರಭಾವಿತರಾದರು. ಊರಿಡೀ ಇದು ಸುದ್ದಿಯಾಯಿತು. 'ದ್ರೌಪದಿ ಈಗ ಹೊಸಬಳು. ಚೆನ್ನಾಗಿ ಹಾಡ್ತಾಳೆ' ಎಂಬ ಪ್ರಶಂಸೆ ಎಲ್ಲೆಡೆ ಪ್ರಕಟವಾಯಿತು.

ಹೀಗೆ ಅಪಾರ ಜನಮೆಚ್ಚುಗೆಯ ಪರಿಣಾಮವಾಗಿ ನಾಟಕ ನಿರಂತರವಾಗಿ ಒಂದು ತಿಂಗಳ ಕಾಲ ಪ್ರದರ್ಶನ ಕಂಡಿತು. ನಾಟಕ ಕಂಪೆನಿಯ ಹೆಸರು 'ಮಾಡರ್ನ್ ಥಿಯೇಟರ್ಸ್'. ಅದರ ಪ್ರಯೋಗದಲ್ಲಿ ಆದ ಬದಲಾವಣೆಯಿಂದಾಗಿ ನಾಟಕವನ್ನು ಒಮ್ಮೆ ನೋಡಿದವರು ಮತ್ತೆ ಮತ್ತೆ ನೋಡಿದರು.

ಈ ಬದಲಾವಣೆ ಮಂಜುನಾಥಯ್ಯನವರ ಬದುಕಿನಲ್ಲೂ ಒಂದು ಬದಲಾವಣೆ ತಂದಿತೆನ್ನಬೇಕು.

ಬಿಡಾರಂ ಭೇಟಿ, ಶಿಷ್ಯತ್ವ

ಮೈಸೂರಿನಲ್ಲಿದ್ದ ಆ ಕಾಲದ ಸಂಗೀತ ವಿದ್ವಾಂಸರು ಕಂಪೆನಿ ನಾಟಕಗಳನ್ನು ನೋಡಲು ಬರುತ್ತಿದ್ದರು. ಅವರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಇರುತ್ತಿತ್ತು. ತನ್ಮಧ್ಯೆ ನಾಟಕ ವೀಕ್ಷಣೆಗಾಗಿ ಬಂದಿದ್ದ, ಮೂಲತಃ ಉಡುಪಿ ಜಿಲ್ಲೆಯ ನಂದಳಿಕೆಯವರೇ ಆಗಿದ್ದ ಸಂಗೀತ ವಿದ್ವಾಂಸ ಬಿಡಾರಂ ಕೃಷ್ಣಪ್ಪನವರು ನಾಟಕದಲ್ಲಿನ ದ್ರೌಪದಿ ಪಾತ್ರವನ್ನು ಕಂಡು ಮೆಚ್ಚಿದರು. ಈ ನಟ ಯಾರು, ಎಲ್ಲಿಯವನು ಎಂದೆಲ್ಲ ವಿಚಾರಿಸಿ, ಖುದ್ದಾಗಿ ಮಂಜುನಾಥಯ್ಯನವರನ್ನು ಸಮೀಪಿಸಿ ಅವರ ಯೋಗಕ್ಷೇಮ ವಿಚಾರಿಸಿದರು. ಮಂಜುನಾಥಯ್ಯನವರಿಗೆ ಸ್ವರ್ಗವೇ ಧರೆಗಿಳಿದು ಬಂದಂತಾಯಿತು. ತನ್ನ ಊರು, ತಾನೀಗ ಮಾಡುತ್ತಿರುವ ಉದ್ಯೋಗ ಇತ್ಯಾದಿಗಳ ಬಗ್ಗೆ ತಿಳಿಸಿ, ಸಂಗೀತದ ಮೇಲಿದ್ದ ತನ್ನ ಆಸೆಯನ್ನು ತೋಡಿಕೊಂಡರು.

"ನೀನು ನಾಟಕದಲ್ಲಿ ಮುಂದುವರಿಯುವುದು ಒಳ್ಳೆಯದಲ್ಲ" ಎಂದರಂತೆ ಬಿಡಾರಂ.

"ನನಗೆ ಮಹತ್ತರ ಆಸೆ ಇರುವುದು ಸಂಗೀತದ ಮೇಲೆ. ತಾವು ಅಪ್ಪಣೆ ಕೊಟ್ಟರೆ ಬರುತ್ತೇನೆ ಗುರುಗಳೇ" ಎಂದು ಉತ್ತರಿಸಿದರು ಮಂಜುನಾಥಯ್ಯ.

ನಕ್ಕು ತಲೆಯಾಡಿಸಿದ ಅವರು, "ಹಾಗಾದರೆ ಮುಂದಿನ ಶನಿವಾರ ಬಾ. ನಮ್ಮಲ್ಲಿ ಶ್ರೀರಾಮ ಭಜನೆ ಇದೆ. ಬಂದು ಕೇಳು, ಆಮೇಲೆ ನೋಡೋಣ" ಎಂದು ಹೊರಟು ಹೋದರು.

ಶನಿವಾರವನ್ನೇ ಎದುರು ನೋಡುತ್ತಿದ್ದ ಮಂಜುನಾಥಯ್ಯ ಅಂದು ಫಲಪುಷ್ಪಗಳೊಂದಿಗೆ ಭಜನಾ ಸ್ಥಳಕ್ಕೆ ತೆರಳಿದರು. ಅಲ್ಲಿ ನಡೆಯುತ್ತಿದ್ದ ಸಾಮೂಹಿಕ ಭಜನೆಯಲ್ಲಿ ಪಾಲ್ಗೊಂಡರು. ಪುಲಕಿತರಾಗಿ, ತಾನು ಮೈಸೂರಿಗೆ ಬಂದ ಮೇಲೆ ಅಷ್ಟು ಕಾಲ ಅವರಿವರ ಬಾಯಿಂದ ಕೇಳಿದ್ದ 'ಜಾನಕೀರಮಣ ದಶರಥನಂದನ' ಎಂಬ ಹಾಡನ್ನು ನೆರೆದವರೆಲ್ಲರ ಮುಂದೆ ಹಾಡಿದರು.

ಆಗ ಮಂಜುನಾಥಯ್ಯನವರಿಗೆ ಸುಮಾರು 18 ವರ್ಷ ವಯಸ್ಸು. ಉತ್ತಮ ಶಾರೀರವೂ ಇತ್ತು. ಬಿಡಾರಂ ಮೆಚ್ಚಿದರು. "ನಾಳೆಯಿಂದಲೇ ಬಾ, ಪಾಠ ಹೇಳುವೆ" ಎಂದರು.

ಮಂಜುನಾಥಯ್ಯ, ಬಿಡಾರಂ ಕೃಷ್ಣಪ್ಪನವರ ಊರಿನವರೇ ಆಗಿದ್ದುದರಿಂದ ಅವರಿಗೆ ಈ ಬಾಲಕನ ಮೇಲೆ ವಿಶೇಷ ಪ್ರೀತಿ ಬೆಳೆಯಿತು. ಅದು ಕೊನೆಯವರೆಗೂ ಒಂದೇ ರೀತಿ ಇದ್ದದ್ದು ವಿಶೇಷ.

ಬಿಡಾರಂ ಅವರ ನಂದಳಿಕೆ ಗ್ರಾಮ, ಕನ್ನಡದ ಮೇರುಕವಿ ಮುದ್ದಣ (ನಂದಳಿಕೆ ಲಕ್ಷ್ಮೀನಾರಾಯಣಯ್ಯ)ನ ಊರೂ ಹೌದು. ಬಿಡಾರಂ ಅವರ ತಂದೆ ವಿಶ್ವನಾಥಯ್ಯನವರು ಆ ಕಾಲದ ದಶಾವತಾರ ಮಂಡಳಿಯಲ್ಲಿ ಸ್ತ್ರೀಪಾತ್ರ (ಸೀತೆಯ ಪಾತ್ರ, ವಿಶೇಷವಾಗಿ) ನಿರ್ವಹಿಸುತ್ತಿದ್ದರು.

ಒಮ್ಮೆ ಮುಮ್ಮಡಿ ಕೃಷ್ಣರಾಜ ಒಡೆಯರು ಸುಬ್ರಹ್ಮಣ್ಯ ಕ್ಷೇತ್ರ ಹಾಗೂ ಧರ್ಮಸ್ಥಳಕ್ಕೆ ಭೇಟಿ ಇತ್ತಿದ್ದ ಸಂದರ್ಭದಲ್ಲಿ, ಒಡೆಯರ ಗೌರವಾರ್ಥ ದಶಾವತಾರ ಮೇಳದ ಆಟಗಳನ್ನು ಏರ್ಪಡಿಸಿದ್ದರಂತೆ. ಮುಮ್ಮಡಿ ಒಡೆಯರು ಮೈಸೂರಿಗೆ ಹಿಂದಿರುಗಿದ ನಂತರವೂ ಈ ದಶಾವತಾರ ಮಂಡಳಿಯ ಕಾರ್ಯಕ್ರಮವನ್ನು ನೋಡಬೇಕೆಂಬ ಆಸೆಯಾಗಿ, ಮೇಳವನ್ನು ಮೈಸೂರಿಗೆ ಕರೆಸಿಕೊಂಡರಂತೆ. ವಿಶ್ವನಾಥಯ್ಯ ಆಮೇಲೆ ಮೈಸೂರಲ್ಲೇ ನೆಲೆನಿಂತರಂತೆ. ಒಡೆಯರು ಅವರಿಗೆ ಅಲ್ಲೇ ಬಿಡಾರ ನೀಡಿದರು. ಅವರು 'ಬಿಡಾರಂ'ದವರಾದರು.

ವಿಶ್ವನಾಥಯ್ಯನವರ ಪುತ್ರರೇ ಕೃಷ್ಣಪ್ಪನವರು. ಅವರ ಜನನವೂ ಮೈಸೂರಿನಲ್ಲೇ ಆಯಿತು. ಬಿಡಾರಂ ವಿಶ್ವನಾಥಯ್ಯ ಅವರ ಮಗ ಬಿಡಾರಂ ಕೃಷ್ಣಪ್ಪನವರೆಂದು ಪ್ರಸಿದ್ಧರಾದರು.

ಅಂತೂ ಮಂಜುನಾಥಯ್ಯನವರು ಕೃಷ್ಣಪ್ಪನವರ ಗರಡಿಯಲ್ಲಿ ಸಂಗೀತ ಗಾಯನ ಕಲೆಯ ಜೊತೆಗೇ ಪಿಟೀಲು, ವೀಣೆ, ಕೊಳಲು ವಾದನಗಳಲ್ಲೂ ನುರಿತರು. ಮೂರೂ ವಾದ್ಯಗಳನ್ನು ಅವರು ಚೆನ್ನಾಗಿ ನುಡಿಸುತ್ತಿದ್ದರು. ಪಿಟೀಲು ವಾದ್ಯವನ್ನು ಮೇರುವಾದ್ಯವನ್ನಾಗಿಸಿಕೊಂಡು ಅವರು ಅದ್ಭುತ ನಾದಮಾಧುರ್ಯದೊಂದಿಗೆ ಕೇಳುಗರನ್ನು ಪರವಶಗೊಳಿಸುತ್ತಿದ್ದರು.

ಒಂದೆಡೆ ದುಡಿಮೆ ಮಾಡುತ್ತ, ಮತ್ತೊಂದೆಡೆ ನಾಟಕಗಳಲ್ಲಿ ಅಭಿನಯಿಸುತ್ತ ಮಂಜುನಾಥಯ್ಯನವರು 1924ರ ವರೆಗೂ ಸಂಗೀತ ಅಧ್ಯಯನ ನಡೆಸಿದರು. ಆಗಾಗ ಗುರುಗಳೊಂದಿಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂಗೀತ ಸಂಪನ್ಮೂಲವನ್ನು ಕ್ರೋಢೀಕರಿಸಿ ಕೊಂಡರು.

ಮರಳಿ ಮನಗೆ

ಆಗಾಗ ತಾಯಿ ರುಕ್ಮಿಣಮ್ಮನವರನ್ನು ಕಾಣಲು ಊರಿಗೆ ತೆರಳುತ್ತಿದ್ದರು. ಬರಬರುತ್ತ

ಊರು-ಮನೆಯ ಆರ್ಥಿಕ ಪರಿಸ್ಥಿತಿ ಹದಗೆಡುತ್ತಿತ್ತು. ಹಿರಿಯ ಸಹೋದರ ರಾಮಚಂದ್ರಯ್ಯನವರು ಯಕ್ಷಗಾನ ತಾಳಮದ್ದಳೆಯ ನೆಪದಲ್ಲಿ ಮನೆಯ ವ್ಯವಹಾರದಲ್ಲಿ ಆಸಕ್ತಿ ಕಳೆದುಕೊಂಡರೇನೋ. ಆರ್ಥಿಕ ವ್ಯವಸ್ಥೆಯ ಅನುಕೂಲಕ್ಕಾಗಿ ಹಿರಿಯರ ಮನೆಯನ್ನು ಅಲ್ಪ ಮೊತ್ತಕ್ಕೆ ಪರಭಾರೆ ಮಾಡಿದರು. ಅದನ್ನು ಹಿಂದಕ್ಕೆ ಪಡೆಯಲಾರದ ಸ್ಥಿತಿಯನ್ನು ಅವರು ತಲುಪಿದ್ದರು. ಕೊನೆಗೆ ಹಿರಿಯರಿಂದ ಬಂದ ಸ್ಥಿರಾಸ್ತಿ ಕೈತಪ್ಪಿಯೇ ಹೋಯಿತು.

ಇದೇ ಹೊತ್ತಿಗೆ ಮಂಜುನಾಥಯ್ಯನವರಿಗೆ ಉಬ್ಬಸ ಸೋಂಕು ತಗುಲಿಕೊಂಡಿತು. ಔಷಧೀಯ ಉಪಚಾರಗಳು ಒಂದೂ ನಡೆಯದಾದುವು. ಒಂದೆಡೆ, ಅಣ್ಣನ ಆರ್ಥಿಕ ದುರ್ಬಲ ಸ್ಥಿತಿ (ಆ ಕುಟುಂಬದಲ್ಲಿ ಅಣ್ಣನೆಂದರೆ ಅಪಾರ ಗೌರವ. ಅವರ ನಡೆ-ನುಡಿಗೆ ಯಾರೂ ಮುನಿಸಿಕೊಳ್ಳುವವರಿಲ್ಲ); ಇನ್ನೊಂದೆಡೆ, ತನಗಂಟಿದ್ದ ಉಬ್ಬಸದ ಕಾಯಿಲೆ - ಇವುಗಳಿಂದಾಗಿ ಅವರು ತುಂಬಾ ಸೊರಗಿದರು.

1925ರ ಹೊತ್ತಿಗೆ ತಾಯಿಯನ್ನು ನೋಡಲು ಊರಿಗೆ ಬಂದಿದ್ದ ಅವರು ಮನೆಯ ಅವಸ್ಥೆ ಹಾಗೂ ತನ್ನ ಅನಾರೋಗ್ಯ ಇವುಗಳಿಂದ ಮತ್ತಷ್ಟು ಜರ್ಜರಿತರಾದರು. ಮತ್ತೆ ಮೈಸೂರು ಸೇರಿ ಸಂಗೀತ ಕ್ಷೇತ್ರದಲ್ಲಿ ದುಡಿಯಲಾಗುವುದೋ ಇಲ್ಲವೋ ಎಂಬ ಸಂದೇಹದಿಂದ, ಅದೇ ವರ್ಷ ಉಡುಪಿಯ ತೆಂಕುಪೇಟೆಯಲ್ಲಿ ಮನೆಯೊಂದನ್ನು ಬಾಡಿಗೆಗೆ ಹಿಡಿದು ಅಲ್ಲೇ ಗಾನವಿದ್ಯಾಬೋಧಕರಾಗಿ ಹೊಸ ಜೀವನವನ್ನು ಆರಂಭಿಸಿದರು.

ಆ ಕಾಲದ ಉಡುಪಿ

ಆ ಕಾಲದಲ್ಲಿ ಉಡುಪಿ ಈಗಿನಷ್ಟು ಬೆಳೆದಿರಲಿಲ್ಲ. ಉಡುಪಿ ಕೃಷ್ಣಮಠ ಮತ್ತು ಅಷ್ಟಮಠಗಳೇ ಉಡುಪಿಯ ಪ್ರಮುಖ ವೀಕ್ಷಣ ತಾಣಗಳು. ಬ್ಯಾಂಕುಗಳೂ ಆರಂಭವಾಗಿರಲಿಲ್ಲ. ಜನಸಮುದಾಯ ಸಂಗೀತ, ನಾಟ್ಯ ಇವುಗಳ ಬಗ್ಗೆ ಈಗಿನಂತೆ ಆಸಕ್ತಿ ತೋರದ ಕಾಲ ಅದು. ಯಕ್ಷಗಾನ, ತಾಳಮದ್ದಳೆ, ಪುರಾಣ ಪ್ರವಚನ, ಹರಿಕಥಾ ಕೀರ್ತನೆ ಇವುಗಳೇ ಪ್ರಧಾನವಾಗಿದ್ದ ಕಾಲ ಅದು.

ಪರ್ಯಾಯೋತ್ಸವವೂ ಬಹಳ ಸರಳವಾಗಿಯೇ ನಡೆಯುತ್ತಿದ್ದ ಕಾಲ. ಈಗಿರುವ ವಸಂತ ಮಹಲ್‌ನಲ್ಲೇ ಪರ್ಯಾಯೋತ್ಸವದ ದರ್ಬಾರು. ಪರ್ಯಾಯದ ಮೆರವಣಿಗೆಯಲ್ಲಿ ಶ್ರೀ ಕೃಷ್ಣ ಮಠದ ಛತ್ರ ಚಾಮರ, ಬಿರುದಾವಳಿ, ಒಂದೆರಡು ಆನೆಗಳು, ದೊಂದಿ, ದೀಪ, ಗ್ಯಾಸ್‌ಲೈಟ್‌ಗಳು, ಬಾಗವತರುಗಳ ಭಜನೆ - ಇಷ್ಟೇ ಇರುತ್ತಿದ್ದವು. ಜನರ ಸಾಂಪತ್ತಿಕ ಸ್ಥಿತಿಯೂ ಅಷ್ಟಕ್ಕಷ್ಟೇ. ಶ್ರೀಮಂತರೆಂಬುವರೂ ಸ್ವಲ್ಪ ಮಂದಿ ಮಾತ್ರ.

ಇಂತಹ ಉಡುಪಿಯಲ್ಲಿ ಮಂಜುನಾಥಯ್ಯನಂಥವರು ಪರಿಚಯವಾಗಲು, ಅವರ ಸಂಗೀತದ ಬಗ್ಗೆ ತಿಳಿಯುವಂತಾಗಲು ದೀರ್ಘ ಸಮಯವೇ ಬೇಕಾಯಿತು. ನೃತ್ಯ ಕಲಿಸುವ ಗುರುಗಳೂ ಆಗ ಇದ್ದಿಲ್ಲ. ನೃತ್ಯ ನಮ್ಮಂತಹ ಸಂಸಾರಿಗಳಿಗಲ್ಲ; ಅದು ದೇವದಾಸಿಯರಿಗೆ

ಸೇರಿದ್ದು - ಎಂಬ ಭಾವನೆ ಜನರಲ್ಲಿದ್ದಿತ್ತು. ಆದರೆ ಸಂಗೀತ ನಡೆದಾಗ ಆಲಿಸಬೇಕೆಂಬ ಪ್ರಜ್ಞೆ ಇತ್ತು. ದೇವಸ್ಥಾನಗಳಲ್ಲಿನ ವಿಶೇಷ ಪೂಜೆ, ಹಬ್ಬ ಹರಿದಿನಗಳಲ್ಲೇ ಮಂಜುನಾಥಯ್ಯನವರು ತಮ್ಮ ಕೆಲ ಶಿಷ್ಯರೊಂದಿಗೆ ದೇವಸನ್ನಿಧಿಯಲ್ಲಿ ಸಂಗೀತ ಕಾರ್ಯಕ್ರಮ ಮಾಡಿ ಬರುತ್ತಿದ್ದರು.

ಮುಂದೆ ಕೆಲವೇ ವರ್ಷಗಳಲ್ಲಿ ಜನರಲ್ಲಿ ಕಲಾಪ್ರಜ್ಞೆ ಅರಳತೊಡಗಿ, ಇದನ್ನು ಅಭ್ಯಸಿಸಬೇಕೆಂಬ ಒಲವು ಉಂಟಾಯಿತು. 'ಭಜನೆ ಹಾಡುವಷ್ಟಾದರೂ ಕಲಿಯೋಣ' ಎನ್ನುವ ಭಾವನೆ ಮೂಡತೊಡಗಿತು. ಆ ಕಾಲದಲ್ಲಿ ಪರವೂರು ಸುತ್ತಿಬಂದ ಹಿರಿಯರು, ವಿದ್ವಾಂಸರು, ವ್ಯಾಪಾರಿಗಳಲ್ಲೂ 'ಈ ಗಾನವಿದ್ಯೆ ನಮಗೆ ಬೇಕು, ನಾವೂ ಕಲಿಯೋಣ' ಎಂಬ ಆಸಕ್ತಿ ದಿನೇ ದಿನೇ ಮೂಡತೊಡಗಿ, ಸಂಗೀತ ರಂಜನೆ ಹಾಗೂ ಅಧ್ಯಯನದಲ್ಲಿ ಆಸ್ಥೆ ಚಿಗುರಿತು. ಆ ಕಾಲದಲ್ಲಿ ಶ್ರೀಕೃಷ್ಣ ದರ್ಶನಕ್ಕಾಗಿ ಬಂದ ಕಲಾವಿದರನೇಕರು ಶ್ರೀಕೃಷ್ಣನ ಮುಂದೆ ಹಾಡುತ್ತಿದ್ದರು. ಆದರೆ ಅವರಿಗೆ ಸರಿಸಮರಾಗಿ ನುಡಿಸುವ ಪಕ್ಕವಾದ್ಯಗಾರರ ಕೊರತೆ ಇದ್ದಿತ್ತು. ಅದಾಗಲೇ ಮೈಸೂರು, ಬೆಂಗಳೂರುಗಳಲ್ಲಿ ಗುರುವಿನೊಂದಿಗೆ ಕಾರ್ಯಕ್ರಮ ನೀಡಿದ್ದ ಮಂಜುನಾಥಯ್ಯನವರನ್ನು ಬಲ್ಲವರು ಹಲವು ಕಲಾವಿದರಿದ್ದರು. ಉಡುಪಿಗೆ ಮಂಜುನಾಥಯ್ಯ ಬಂದಾಗ ತಮ್ಮ ಕಾರ್ಯಕ್ರಮದಲ್ಲಿ ಸಹಕಾರ ಪಡೆಯುತ್ತಿದ್ದರು. ಹೀಗಾಗಿ ದಿನೇ ದಿನೇ ಮಂಜುನಾಥಯ್ಯನವರ ನಾದವಿದ್ಯೆಯ ಮಹತ್ತ್ವ ಇಲ್ಲಿನ ಸಮಸ್ತರಿಗೂ ಅರಿವಾಗತೊಡಗಿತು. ಅದುವರೆಗೆ, ಕೃಷ್ಣನನ್ನು ಕಾಣಲೆಂದೇ ಬರುತ್ತಿದ್ದ ಕೆಲವೇ ಮಂದಿ ಗಾಯಕರು, ವಾದಕರು ನೀಡುತ್ತಿದ್ದ ಸಂಗೀತ ಕಾರ್ಯಕ್ರಮವನ್ನಷ್ಟೇ ಜನ ಆಲಿಸುತ್ತಿದ್ದರು.

ಮುಂದೆ, ನಾವೂ ಈ ವಿದ್ವಾಂಸರಿಂದ (ಮಂಜುನಾಥಯ್ಯ) ಕಲಿಯಬಾರದೇಕೆ ಎಂದು ಹಲವಾರು ಮಂದಿ ಸಂಗೀತ ಶಿಕ್ಷಣಾರ್ಥಿಗಳು ಉಡುಪಿಯ ಆಸುಪಾಸಿನ ಊರುಗಳಿಂದ ಬಂದು ಅಧ್ಯಯನ ಆರಂಭಿಸಿದರು. ಸಂಗೀತ, ಪಿಟೀಲು, ವೀಣೆ, ಕೊಳಲು, ತಬಲ, ಮೃದಂಗ, ಖಂಜಿರ ಮೊದಲಾದ ವಾದ್ಯಗಳ ಅಭ್ಯಾಸ ಮಾಡತೊಡಗಿದರು.

ಬೋಧನೆಯ ವೈಶಿಷ್ಟ್ಯ

ತೆಂಕುಪೇಟೆಯ ಬಾಡಿಗೆ ಮನೆಯ ವಿಶಾಲ ಚಾವಡಿಯಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ನಾದವಿದ್ಯಾಬೋಧನೆ. ಶಾಸ್ತ್ರಬದ್ಧವಾಗಿ ಸಂಗೀತ ಕಲಿಸುತ್ತಿದ್ದ ಆ ಕಾಲದ ಘನ ವಿದ್ವಾಂಸರು ಅವರೊಬ್ಬರೇ ಆಗಿದ್ದರು. ಉಡುಪಿಯವರು ಮಾತ್ರವಲ್ಲದೆ, ಮಂಗಳೂರು, ಬ್ರಹ್ಮಾವರ, ಕುಂದಾಪುರ, ಮೂಡಬಿದಿರೆಗಳಂಥ ದೂರದ ಊರುಗಳಿಂದಲೂ ಆಸಕ್ತರನೇಕರು ಬಂದು ಇವರಲ್ಲಿ ಪಾಠ ಹೇಳಿಸಿಕೊಳ್ಳುತ್ತಿದ್ದರು. ಸಂಗೀತ ಕಲಿಸುವ ರೀತಿಯಲ್ಲಾಗಲಿ, ಸ್ವತಃ ಕಾರ್ಯಕ್ರಮವನ್ನು ನೀಡುವಾಗಲೇ ಆಗಲಿ ಅವರು ಅನುಸರಿಸುತ್ತಿದ್ದುದು ತನ್ನ ಗುರು, ಬಿಡಾರಂ ಕೃಷ್ಣಪ್ಪನವರ ಹಾದಿಯನ್ನೇ.

ಬಿಡಾರಂ ಅವರ ಶಿಷ್ಯರಾಗಿ ಮಂಜುನಾಥಯ್ಯ ಗಾನವಿದ್ಯೆಯ ಅಧ್ಯಯನವನ್ನು ಸುಮಾರು 20 ವರ್ಷಗಳ ಕಾಲ ನಡೆಸಿದ್ದರು. ಪಿಟೀಲು ಚೌಡಯ್ಯ, ಬಿ. ದೇವೇಂದ್ರಪ್ಪ, ಟಿ. ಆರ್. ನಾಗಮ್ಮ ಮೊದಲಾದವರ ಸಹಪಾಠಿಯಾಗಿದ್ದರು. ತನ್ನ ಗುರು ಬಿಡಾರಂ ಕೃಷ್ಣಪ್ಪನವರ ಜೊತೆಯಲ್ಲಿ ಗಾಯನ ಕಚೇರಿಗಳಲ್ಲೂ ಪಾಲ್ಗೊಳ್ಳುತ್ತಿದ್ದ ಮಂಜುನಾಥಯ್ಯ ಮೈಸೂರಿನಲ್ಲಿ ಆಗಿನ ಕಾಲದಲ್ಲಿ ನಡೆಯುತ್ತಿದ್ದ ಕಛೇರಿಗಳ ಬಗೆಗೊಂದು ಸ್ಥೂಲಚಿತ್ರವನ್ನು ಶಿಷ್ಯರಾದ ನಮ್ಮ ಮುಂದೆ ಇರಿಸುತ್ತಿದ್ದುದುಂಟು. ಆ ಕಾಲದ ಕಛೇರಿಗಳಲ್ಲಿ ಗಾಯಕರು ಹಾಡುವಾಗ, ಈಗಿರುವಂತೆ ಧ್ವನಿವರ್ಧಕಗಳಿರುತ್ತಿರಲಿಲ್ಲ. ಸಭಾಭವನದಲ್ಲಿ ಎಲ್ಲರಿಗೂ ಕೇಳುವ ರೀತಿಯಲ್ಲಿ ತುಂಬುಶಾರೀರವನ್ನು ಗಾಯಕ ಹೊಂದಿರಬೇಕಿತ್ತು. ಹಾಗೆ ಹಾಡುವ ಧ್ವನಿ ಬಿಡಾರಂರವರಲ್ಲಿತ್ತಂತೆ. ಆಜಾನುಬಾಹು ಶರೀರ, ದಪ್ಪನೆಯ ಮೀಸೆಯನ್ನು ಹೊಂದಿದ್ದ ಅವರು ಮೈಸೂರು ಪೇಟ ಧರಿಸಿ, ಭವ್ಯವಾದ ನಿಲುವಂಗಿ ತೊಟ್ಟು ಕಛೇರಿ ನಡೆಸುತ್ತಿದ್ದರಂತೆ. ಆ ವರ್ಣನೆಯನ್ನು ಮಂಜುನಾಥಯ್ಯನವರ ಬಾಯಿಂದಲೇ ಕೇಳಬೇಕು!

ಆಂಧ್ರ, ತಮಿಳುನಾಡಿನ ಸಂಗೀತಗಾರರೆಲ್ಲ ವರ್ಣ, ಕೃತಿ, ರಾಗಾಲಾಪನೆ, ನೆರವಲ್‌ನೊಂದಿಗೆ ರಾಗಮಾಲಿಕೆ (ಕೃತಿ) ಹಾಡಿ ಕಛೇರಿ ಪೂರೈಸುತ್ತಿದ್ದ ಕಾಲ ಅದು. ಆದರೆ ಬಿಡಾರಂ ಅವರ ಕಛೇರಿ ಕ್ರಮವೇ ತೀರಾ ಭಿನ್ನವಾಗಿತ್ತಂತೆ. ತನ್ನದೇ ರೀತಿಯಲ್ಲಿ ವೈಶಿಷ್ಟ್ಯಪೂರ್ಣವೂ ಆಗಿರುತ್ತಿತ್ತಂತೆ. ಅವರ ಹೃದಯದಿಂದ ಹೊಮ್ಮುತ್ತಿದ್ದ ನಾದವು ನೆರೆದ ಸರ್ವರನ್ನೂ ಆಕರ್ಷಿಸುತ್ತಿದ್ದು, ಕಛೇರಿಯು ಸತತ ಮೂರು ತಾಸುಗಳಷ್ಟು ದೀರ್ಘವಾಗಿದ್ದರೂ ಜನರು ಅಲುಗಾಡದೆ ತದೇಕಚಿತ್ತದಿಂದ ಆಲಿಸುತ್ತಿದ್ದರಂತೆ. ಕರ್ನಾಟಕ ಸಂಗೀತ ಕಛೇರಿಗಳಲ್ಲಿ ಪ್ರಪ್ರಥಮವಾಗಿ ದಾಸಸಾಹಿತ್ಯಕ್ಕೆ ರಾಗಸಂಯೋಜನೆ ಮಾಡಿ, ಉಳಿದೆಲ್ಲ ಕೃತಿಗಳಂತೆಯೇ ಅವುಗಳನ್ನು ಸವಿಸ್ತಾರವಾಗಿ ಹಾಡಿ, ಸ್ವರಪ್ರಸ್ತಾರ, ನೆರವಲ್ ಮಾಡಿ ತೋರಿಸುತ್ತಿದ್ದರಂತೆ. ದಾಸಸಾಹಿತ್ಯವನ್ನು ಹೀಗೆ ಕರ್ನಾಟಕ ಸಂಗೀತ ಕಛೇರೀಯಲ್ಲಿ ಪ್ರಪ್ರಥಮವಾಗಿ ಪ್ರಚಲಿತಗೊಳಿಸಿ ಅದನ್ನು ಗಾಯನದ ಮೂಲಕ ವೈಭವೀಕರಿಸಿದ ಕೀರ್ತಿ ಬಿಡಾರಂ ಅವರಿಗೆ ಸಲ್ಲುತ್ತದೆ. ಪುರಂದರದಾಸರು, ಕನಕದಾಸರು, ಗೋಪಾಲದಾಸರ ಅನೇಕ ಕೀರ್ತನೆಗಳಿಗೆ ಆ ಕಾಲದಲ್ಲೇ ರಾಗಸಂಯೋಜಿಸಿ ಹಾಡಿ ಮೆರೆಸಿದವರು ಗಾನಯೋಗಿ ಬಿಡಾರಂ ಕೃಷ್ಣಪ್ಪನವರು. ಗುರುವಿನ ಈ ವಿಧಾನವನ್ನೇ ಶಿಷ್ಯನೂ ಮುಂದುವರಿಸಿದರು. ಹೀಗೆ ಹಲವಾರು ದಾಸಕೀರ್ತನೆಗಳಿಗೆ ಮಂಜುನಾಥಯ್ಯನವರೇ ರಾಗಸಂಯೋಜಿಸಿ ಶಿಷ್ಯರಿಗೆ ಬೋಧಿಸಿದರು. ಮುಂದೆ ಅವರ ಶಿಷ್ಯರೂ (ಈ ಲೇಖಕನೂ ಸೇರಿದಂತೆ) ಇದೇ ದಾರಿಯಲ್ಲಿ ಮುಂದುವರಿಯುವಂತಾಯಿತು. ಮೈಸೂರಿನಲ್ಲಿ ಮಾತ್ರವಲ್ಲದೆ ನೆರೆಯ ಆಂಧ್ರ, ತಮಿಳುನಾಡುಗಳಲ್ಲೂ ಸಂಚಾರ ಕೈಗೊಂಡು ಕಛೇರಿ ನಡೆಸಿಕೊಟ್ಟ ಬಿಡಾರಂರವರು, ಹಾಡಿಕೆಯಲ್ಲಿ ದಾಸಸಾಹಿತ್ಯದ ಅಳವಡಿಕೆಯ ಮಟ್ಟಿಗೆ ಇತರ ವಿದ್ವಾಂಸರಿಗೂ ಒಂದು ರೀತಿಯಲ್ಲಿ ಮಾರ್ಗದರ್ಶಕರಾದರು. ಅವರಂತೆಯೇ ಮಂಜುನಾಥಯ್ಯನವರೂ ಅನೇಕ

ದಾಸರುಗಳ ಅರ್ಥಪೂರ್ಣ - ಭಾವಪೂರ್ಣ ಕೃತಿಗಳನ್ನು ಸ್ವಯಂ ರಾಗಸಂಯೋಜಿಸಿ ಶಿಷ್ಯರಿಗೆ ಪ್ರಾಂಜಲವಾಗಿ ಕಲಿಸಿಕೊಟ್ಟರು (ಸುಳಾದಿ, ಉಗಾಭೋಗ, ವರ್ಣನಾ ಕೀರ್ತನೆಗಳು... ಇತ್ಯಾದಿ).

ಕೇವಲ ಗಾಯನದಲ್ಲಿ ಮಾತ್ರವಲ್ಲದೆ ಪಿಟೀಲು ವಾದನದ ಮಟ್ಟಿಗೂ ಸಿದ್ಧಹಸ್ತರಾಗಿದ್ದ ಮಂಜುನಾಥಯ್ಯನವರು 1926ರಲ್ಲಿ ಪ್ರಥಮ ಬಾರಿಗೆ ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಕಛೇರಿ ನಡೆಸಿಕೊಟ್ಟು ಸಂಗೀತಾಸಕ್ತರ ಗಮನ ಸೆಳೆದಿದ್ದರು. ಬಳಿಕ ಹಲವಾರು ಕಾರ್ಯಕ್ರಮಗಳನ್ನು ನೀಡಿ ಪ್ರಸಿದ್ಧಿಯನ್ನೂ ಪಡೆದರು. ಉಡುಪಿಗೆ ಆಗಮಿಸುತ್ತಿದ್ದ ಸಂಗೀತ ವಿದ್ವಾಂಸರು, ಗಾಯಕರುಗಳಿಗೆ ಪಕ್ಕವಾದ್ಯಗಾರರಾಗಿ ಪಿಟೀಲು ನುಡಿಸಿ ಜನಪ್ರಿಯರಾದರು. ಇದೇ ವೇಳೆ ಅನೇಕ ಮಂದಿ ವಾದಕರನ್ನು ತಯಾರುಗೊಳಿಸಿದರು. ಪಿಟೀಲು, ವೀಣೆ, ಕೊಳಲು, ಹಾರ್ಮೋನಿಯಮ್ - ಈ ಎಲ್ಲ ವಾದ್ಯಗಳಲ್ಲೂ ಸಮರ್ಥ ಶಿಷ್ಯರನ್ನು ಅಣಿಗೊಳಿಸಿದ್ದು ಉಡುಪಿಯ ಸಂಗೀತ ಕ್ಷೇತ್ರದಲ್ಲಿ ಅವರ ಬಹುದೊಡ್ಡ ಸಾಧನೆ.

ಆ ಕಾಲದ ಯುವಕ ಯುವತಿಯರಲ್ಲದೆ ಗೃಹಿಣಿಯರನೇಕರು ಅವರ ಮನೆಗೆ ಬಂದು ಗಾನವಿದ್ಯೆಯನ್ನು ಅಭ್ಯಸಿಸಿದ್ದಿದೆ. ಆ ಕಾಲದಲ್ಲಿ ಮಂಜುನಾಥಯ್ಯನವರಲ್ಲಿ ಸಂಗೀತಾಭ್ಯಾಸಿಗಳಾಗಿ ಬರುವವರಿಗೆ ಸಮಾಜದಲ್ಲಿ ವಿಶಿಷ್ಟ ಗೌರವ ಇದ್ದಿತ್ತು.

1935ರಿಂದ ಇವರ ಬಳಿ ಸಂಗೀತಾಭ್ಯಾಸ ಮಾಡಿಕೊಂಡು ಬಂದ ಕಲಾವಿದರನೇಕರು ಉಡುಪಿ ಹಾಗೂ ಆಸುಪಾಸಿನ ಊರುಗಳ ಸಾಂಸ್ಕೃತಿಕ ವೇದಿಕೆಗಳಲ್ಲಿ ಗಾಯಕರಾಗಿಯೂ, ಹಲವರು ಗಮಕಿಗಳಾಗಿಯೂ ಜನಗಮನಕ್ಕೆ ಬಂದರು. ದಾಸಸಾಹಿತ್ಯ ಗಾಯನದೊಂದಿಗೆ ಗಮಕಿಗಳಾಗಿಯೂ ಪ್ರಸಿದ್ಧಿಗೆ ಬಂದವರಲ್ಲಿ ಮೃದು ಮಧುರ ಕಂಠದ ಕೋಟದ ವಿದ್ವಾನ್ ರಘುರಾಮ ಐತಾಳರು ಆ ಕಾಲದಲ್ಲೇ ಖ್ಯಾತರಾದವರು. ಅವರು ಮಂಜುನಾಥಯ್ಯನವರ ಬಗ್ಗೆ ಅತಿಯಾಗಿ ಪ್ರೀತಿ ಇರಿಸಿಕೊಂಡ ಶಿಷ್ಯೋತ್ತಮರಾಗಿದ್ದರು.

ಮಂಜುನಾಥಯ್ಯನವರ ಶಿಷ್ಯರ ಪೈಕಿ ಯಶೋದಾ ಆಚಾರ್ಯ, ಸಮೀರಾ ರಾಧಾಕೃಷ್ಣ, ಸರಸ್ವತೀಬಾಯಿ ರಾಜವಾಡೆ, ವಿಷ್ಣುಮೂರ್ತಿ ಭಟ್, ಅನಂತರಾಮ ಉಡುಪ, ರಮಾದೇವಿ, ವಸಂತಿ, ವತ್ಸಲಾ, ಲೀಲಾ ಪಾಂಗಣ್ಣಾಯ, ಸರೋಜಿನಿ, ಶ್ಯಾಮಲಾ, ಪಾಂಡುರಂಗ ಆಚಾರ್ಯ, ಪ್ರೊ. ಎಂ. ರಾಜಗೋಪಾಲಾಚಾರ್ಯ, ಶ್ರೀನಿವಾಸ ಕೊಡಂಚ, ಸುಂದರ ಆಚಾರ್ಯ, ಗೌತಮ್, ಕೌಶಿಕ್ ಇವರುಗಳು ಗಾಯನಕಲೆಯಲ್ಲಿ ಹಾಗೂ ಅದರ ಕಲಿಕೆಯಲ್ಲಿ ಸಿದ್ಧಹಸ್ತರಾದರು. ವೇಣುವಾದಕರಾಗಿ ರಾಮಚಂದ್ರ ಉಪಾಧ್ಯಾಯ, ಎ. ಪುತ್ರಾಯ, ನಾರಾಯಣ ಭಟ್, ಸೂರಾಲು ಪರಮೇಶ್ವರ ಭಟ್ ಇವರುಗಳು ಒಳ್ಳೆಯ ಸಾಧನೆ ದಾಖಲಿಸಿದರು. ವೀಣಾವಾದಕಿಯರಲ್ಲಿ ಶಾರದಾ ದೇವಿ, ಸರಸ್ವತೀಬಾಯಿ ರಾಜವಾಡೆ ಪ್ರಮುಖರು. ಇವರಲ್ಲಿ ಎ. ಪುತ್ರಾಯ, ಲಕ್ಷ್ಮೀ ಮೊದಲಾದವರು ಸಿಲೋನ್ (ಶ್ರೀಲಂಕಾ),

ರಷ್ಯಾ ದೇಶಗಳಿಗೂ ಹೋಗಿ ಕಾರ್ಯಕ್ರಮ ನೀಡಿದ್ದಾರೆ. ಹಲವರು ರೇಡಿಯೋ ಕಲಾವಿದರಾಗಿ, ರಂಗ ಕಲಾವಿದರಾಗಿ, ಗಾನವಿದ್ಯಾಬೋಧಕರಾಗಿ, ಸಂಗೀತ ವಿಷಯಕ ಪುಸ್ತಕಗಳ ಲೇಖಕರಾಗಿ ಮಠಮಾನ್ಯಗಳಲ್ಲಿ ಭಾಗವತರಾಗಿ ಯಶಸ್ವಿಯಾಗಿದ್ದಾರೆ.

ವಿದ್ಯಾದಾನ ಮುಂದುವರಿಕೆಗೆ ನೆರವು

ಹೀಗೆ ಆ ಕಾಲದಲ್ಲಿ ತನ್ನ ಬಳಿ ಸಂಗೀತ ವಿದ್ಯೆಯನ್ನು ಅಭ್ಯಸಿಸಿದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೂಲಕ ಇತರರಿಗೆ ವಿದ್ಯಾದಾನ ಮಾಡಿಸುವಲ್ಲಿಯೂ ಮಂಜುನಾಥಯ್ಯನವರು ಗಣನೀಯ ರೀತಿಯಲ್ಲಿ ನೆರವಾದರು. ಈ ನಾದವಿದ್ಯೆ ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುವಂತಾಗಬೇಕೆಂಬುದು ಅವರ ಆಶಯವಾಗಿದ್ದಂತೆ ತೋರುತ್ತದೆ.

ಆ ಕಾಲದಲ್ಲಿ ಅವರ ಬಳಿ ಕಲಿತ ಆಸಕ್ತ ವಿದ್ಯಾರ್ಥಿಗಳು ಒಬ್ಬೊಬ್ಬರೂ 250ಕ್ಕೂ ಮಿಕ್ಕು ವರ್ಣ, ಕೃತಿ, ರಾಗಮಾಲಿಕೆ, ತಿಲ್ಲಾನ, ಉಗಾಭೋಗ, ಸುಳಾದಿ, ದೇವರನಾಮ (ದಾಸಸಾಹಿತ್ಯ)ಗಳನ್ನು ಅಭ್ಯಾಸ ಮಾಡಿರುತ್ತಿದ್ದರು. ಇತರರಿಗೂ ಸಮರ್ಥವಾಗಿ ಕಲಿಸುವಷ್ಟು ಸಾಮರ್ಥ್ಯವನ್ನು ದಕ್ಕಿಸಿಕೊಂಡಿರುತ್ತಿದ್ದರು.

ಉದಾಹರಣೆಗೆ, ಮಂಜುನಾಥಯ್ಯನವರ ಮನೆಯ ಸನಿಹದಲ್ಲೇ ಇದ್ದ (ಅವರ ಬಂಧುಗಳೂ ಆಗಿದ್ದ) ಗುರುರಾಜ ಭಟ್ - ಜಾನಕಿ ದಂಪತಿಯ ಮಗಳು ಸುಮೀರಾ. ಅವರು ತನ್ನ ಏಳನೆಯ ವಯಸ್ಸಿನಲ್ಲೇ ಸಂಗೀತ ಕಲಿಕೆ ಆರಂಭಿಸಿ ನೂರಾರು ಕೃತಿಗಳನ್ನು ಸೊಗಸಾಗಿ ಹಾಡುತ್ತಿದ್ದರು. ಮಂಜುನಾಥಯ್ಯ ಮುಂದೆ ಆಕೆಯಿಂದಲೇ ತರಗತಿಗಳನ್ನು ಆರಂಭ ಮಾಡಿಸಿದರು. ಅವರ ಪ್ರೋತ್ಸಾಹದಿಂದ ಸುಮೀರಾ ಮುಂದೆ ಹಲವಾರು ಶಿಷ್ಯ-ಶಿಷ್ಯೆಯರನ್ನು ತಯಾರುಗೊಳಿಸುವಂತಾಯಿತು.

ರಾಧಾಕೃಷ್ಣ ಎಂಬವರು ಎಲ್‌ಐಸಿ ಉದ್ಯೋಗಿಯಾಗಿ ಉಡುಪಿಗೆ ಬಂದವರು. ಮಂಜುನಾಥಯ್ಯನವರಲ್ಲಿ ಸಂಗೀತ ಅಭ್ಯಾಸ ಮಾಡಲು ಬಹಳಷ್ಟು ಆಸೆ ಹೊಂದಿದ್ದರೂ ಅವರಿಗೆ ಸಾಧ್ಯವಾಗಿರಲಿಲ್ಲ. ಮುಂದೆ ಅವರ ಶಿಷ್ಯೆ ಸುಮೀರಾರವರನ್ನು ವಿವಾಹವಾಗಿ, ಪತ್ನಿಗೆ ಬಹಳಷ್ಟು ಪ್ರೋತ್ಸಾಹವಿತ್ತರು. ಫಲಿಮಾರು ಮಠಾಧೀಶ ಶ್ರೀ ರಘುಮಾನ್ಯತೀರ್ಥರೂ, ಬಳಿಕ ಪಟ್ಟವೇರಿದ ರಘುವಲ್ಲಭತೀರ್ಥರೂ ಮಂಜುನಾಥಯ್ಯನವರ ಸಂಗೀತ ಪರಿಣತಿಯ ಬಗ್ಗೆ ಬಹುವಾದ ಗೌರವಾದರ ಹೊಂದಿದ್ದವರು; ಪ್ರೋತ್ಸಾಹವನ್ನೂ ನೀಡಿದವರು. ರಾಧಾಕೃಷ್ಣರು ರಘುವಲ್ಲಭತೀರ್ಥರ ನಿಕಟವರ್ತಿಯಾಗಿದ್ದು, ಗುರುಗಳ ಒಪ್ಪಿಗೆಯೊಂದಿಗೆ ಸಂಗೀತ ವಿದುಷಿ ಸುಮೀರಾರನ್ನು ಮನೆತುಂಬಿಸಿಕೊಂಡು ಸಂಗೀತಕ್ಕೆ ಶಿಕ್ಷಕರೂ ಪೋಷಕರೂ ಎಂದೆನಿಸಿಕೊಂಡರು.

ಸಾಂಸ್ಕೃತಿಕ ಕಾರ್ಯಕ್ರಮಗಳು

ಉಡುಪಿ ಪರ್ಯಾಯೋತ್ಸವದ ದರ್ಬಾರು ಕಾರ್ಯಕ್ರಮದಲ್ಲಿ ಮಂಜುನಾಥಯ್ಯನವರು ಮುಖ್ಯವಾದಕರಾಗಿಯೂ ಪಕ್ಕವಾದ್ಯಗಾರರಾಗಿಯೂ ಸಂಗೀತಸುಧೆ ಹರಿಸಿದ್ದರು. 1950 - 60ರ ದಶಕಗಳಲ್ಲಿ ಧಾರ್ಮಿಕ ಕ್ಷೇತ್ರವಾಗಿ ಸಾಕಷ್ಟು ಪ್ರಸಿದ್ಧಿಗೊಂಡಿದ್ದ ಉಡುಪಿಯಲ್ಲಿ ಕಾಲಕಾಲಕ್ಕೆ ಸತ್ತ್ವಪೂರ್ವ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿದ್ದವು. ಆಗಾಗ ತಿಂಗಳುಗಟ್ಟಲೆ 'ಹರಿಕಥಾ' ಕಾಲಕ್ಷೇಪಗಳು ಶ್ರೀಮದನಂತೇಶ್ವರ ದೇವಾಲಯದಲ್ಲಿ ನಡೆಯುತ್ತಿದ್ದು, ಆ ಕಾಲದ ಪ್ರಸಿದ್ಧ ಕೀರ್ತನಕಾರರುಗಳಾಗಿದ್ದ ಗೋಪಾಲದಾಸರು, ಹಂದೆ ಶ್ರೀಪಾದದಾಸರಂಥವರು ನಡೆಸಿಕೊಡುತ್ತಿದ್ದ ಹರಿಕಥಾಶ್ರವಣ ಕಾರ್ಯಕ್ರಮಗಳಿಗೆ ಜನರು ಜಾತ್ರೆಯೋಪಾದಿಯಲ್ಲಿ ನೆರೆದಿರುತ್ತಿದ್ದರು.

ಹರಿಕಥಾ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಈ ದಾಸರುಗಳಿಗೆ ಮಂಜುನಾಥಯ್ಯನವರೇ ಪಿಟೀಲು ವಾದಕರಾಗಿ ಭಾಗವಹಿಸುತ್ತಿದ್ದರು. ತಬ್ಲಾ ವಾದನದಲ್ಲಿ ಶ್ರೀ ದಾಸಭಟ್ಟರು ಭಾಗವಹಿಸುತ್ತಿದ್ದು, ಹರಿಕಥಾಶ್ರವಣದೊಂದಿಗೆ ಉತ್ತಮ ಸಂಗೀತವನ್ನೂ ಆಲಿಸಬಹುದಾಗಿತ್ತು. ಈ ದಾಸರು ಅತ್ಯುತ್ತಮವಾಗಿ ಹಾಡುತ್ತಿದ್ದು, ಆ ಹಾಡನ್ನು ಮತ್ತಷ್ಟು ವೈಭವೀಕರಿಸಿ ಪಿಟೀಲು ವಾದ್ಯದಲ್ಲಿ ನುಡಿಸುತ್ತಿದ್ದರು. ಹೀಗೆ ಹಲವು ವರ್ಷಗಳ ಕಾಲ ಈ ಕಾರ್ಯಕ್ರಮಗಳು ಮುಂದುವರಿದು, ಅಧ್ಯಾತ್ಮ ಜಿಜ್ಞಾಸುಗಳಲ್ಲೂ ಸಂಗೀತದ ಅಭಿರುಚಿಯನ್ನು ಬೆಳೆಸುತ್ತ ಬಂದವು.

ರಾಮೋತ್ಸವ, ಯುಗಾದಿ, ವಸಂತೋತ್ಸವ ಹಾಗೂ ನವರಾತ್ರಿ ಮಹೋತ್ಸವಗಳ ಸಂದರ್ಭಗಳಲ್ಲಿ ಮಂಜುನಾಥಯ್ಯ ಶಿಷ್ಯರೊಂದಿಗೆ ದೇವಸನ್ನಿಧಿಯಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು. ಪ್ರತಿ ಶನಿವಾರ ತಮ್ಮ ಮನೆಯಲ್ಲಿ ಭಜನಾ ಕಾರ್ಯಕ್ರಮ ನಡೆಸುತ್ತಿದ್ದರು. ಇವುಗಳಲ್ಲಿ ಅವರ ಶಿಷ್ಯರುಗಳ ಜೊತೆಗೆ ವಿವಿಧ ಗಾಯಕರೂ ಭಾಗವಹಿಸುತ್ತಿದ್ದರು. ತಮ್ಮ ಜೀವಿತದ ಕೊನೆಯವರೆಗೂ ಅವರು ಭಜನಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದರು.

ವಾದನ - ಗಾಯನ ವೈಶಿಷ್ಟ್ಯ

ಅವರ ವಾದನ ಹಾಗೂ ಗಾಯನ ವೈಖರಿ ಉಳಿದವರಿಗಿಂತ ಭಿನ್ನವಾಗಿತ್ತು. ಪಲಿಮಾರು ಮಠಾಧೀಶ ಶ್ರೀ ರಘುಮಾನ್ಯತೀರ್ಥರ ಪರ್ಯಾಯ ಕಾಲದಲ್ಲಿ ನಡೆದ ಚೆಂಬೈ ವೈದ್ಯನಾಥ ಭಾಗವತರ ಸಂಗೀತ ಕಛೇರಿಯಲ್ಲಿ ಪಕ್ಕವಾದ್ಯಗಾರರಾಗಿ ಮಂಜುನಾಥಯ್ಯ ಅಮೋಘ ರೀತಿಯಲ್ಲಿ ಪಿಟೀಲು ನುಡಿಸಿದ್ದನ್ನು ನೋಡಿದ್ದ ಹಿರಿಯರು ಈಗಲೂ ಅದನ್ನು ನೆನಪಿಸಿಕೊಳ್ಳುತ್ತಾರೆ.

ಖರಹರಪ್ರಿಯ, ತೋಡಿ, ಕದನಕುತೂಹಲ, ಅಭೇರಿ, ಚಿತ್ತರಂಜನಿ, ಖಮಾಚ್,

ಹಿಂದೋಳ, ಆನಂದಭೈರವಿ, ಕಾನಡಾ, ಮೋಹನ, ಜಂಜೂಟಿ, ಶ್ರೀ, ಮಧ್ಯಮಾವತಿ, ಅಠಾಣ - ಈ ರಾಗಗಳನ್ನು ಎತ್ತಿಕೊಂಡು ಸುದೀರ್ಘ ಆಲಾಪನೆ ಮಾಡುತ್ತಿದ್ದುದು ಅವರ ವೈಶಿಷ್ಟ್ಯ. ಕಲ್ಯಾಣಿ ರಾಗದ 'ನಿಧಿಚಾಲಸುಖಮಾ ರಾಮುನಿ, ಸನ್ನಿಧಿ ಸೇವಾ ಸುಖಮಾ' ಎಂಬ ತ್ಯಾಗರಾಜರ ಕೀರ್ತನೆ, 'ನೀದುಚರಣ ಪಂಕಜ' ಎಂಬ ಗೋಪಾಲ ಅಯ್ಯರ್‌ರವರ ಕೃತಿ, 'ಬ್ರೋಚೇವಾ' ಎಂಬ ಮೈಸೂರು ವಾಸುದೇವಾಚಾರ್ಯರ ರಚನೆ, 'ಅನುಪಮ ಗುಣಾಂಬುಧಿ' ಎಂಬ ತ್ಯಾಗರಾಜರ ಅಠಾಣ ರಾಗದ ಕೃತಿಗಳಿಗೆ ಅವರು ಅದ್ಭುತವಾಗಿ ಜೀವಕೊಡುತ್ತಿದ್ದರು. ವಾಸುದೇವಾಚಾರ್ಯರ 'ನನ್ನು ಬ್ರೋವರಾದ', ದೀಕ್ಷಿತರ 'ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ', ಪತ್ತನಂ ಸುಬ್ರಹ್ಮಣ್ಯ ಅಯ್ಯರ್ ಅವರ ಕದನಕುತೂಹಲ ರಾಗದ 'ರಘುವಂಶ ಸುಧಾಂಬುಧಿ' ಇವೆಲ್ಲದರ ಜೊತೆಗೆ ದಾಸಕೀರ್ತನೆಗಳಾದ 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' (ಕಾಂಭೋಜಿ ರಾಗ), 'ಕೊಟ್ಟ ಬಿಡಾರದಲಿ ಎಷ್ಟು ದಿನ ಜೀವಿಸಲಿ' (ಮೋಹನ ರಾಗದಲ್ಲಿ) 'ಈ ಶರೀರದ ಭ್ರಾಂತಿ ಇನ್ನೇಕೆ ಮನವೇ' ಇತ್ಯಾದಿಗಳೂ ಅವರ ಕಂಠದಲ್ಲಿ ಹೊಸಹುಟ್ಟನ್ನು ಪಡೆದುಕೊಂಡಿರುತ್ತಿದ್ದವು. ವಾದಿರಾಜರ ಕೀರ್ತನೆಯಾದ 'ನೀರಜನಯನ', ಪುರಂದರದಾಸರ 'ಧರ್ಮಶ್ರವಣವೇತಕೆ ಮೂರ್ಖಗೆ' ಮುಂತಾದ ಕೀರ್ತನೆಗಳಂತೆಯೇ ತ್ಯಾಗರಾಜರ ಕೃತಿಯಾದ 'ಸಂಗೀತಜ್ಞಾನಮು ಭಕ್ತಿವಿನಾ', 'ನಿತ್ಯಕಲ್ಯಾಣಿ' (ರಾಗಮಾಲಿಕೆ) ಇವು ಕೂಡ ಪ್ರತಿಬಾರಿಯ ಹಾಡುವಿಕೆಯಲ್ಲೂ ನವೀನವಾಗಿ ತೋರಿಬಂದು, ಎಷ್ಟು ಬಾರಿ ಕೇಳಿದರೂ ಮತ್ತೆ ಮತ್ತೆ ಕೇಳೋಣ ಅನ್ನಿಸುವಂತೆ ಮಾಡುತ್ತಿದ್ದವು.

ಹೀಗೆ 1935ರಿಂದ ಮಂಜುನಾಥಯ್ಯನವರ ಸಂಗೀತ ಕಾರ್ಯಕ್ಷೇತ್ರ ವಿಸ್ತಾರಗೊಂಡು ಸಾಂಸ್ಕೃತಿಕ ಕಲಾಭಿಮಾನಿಗಳ ಮನದಲ್ಲಿ ಮಂಜುನಾಥಯ್ಯನವರು ನೆಲೆಗೊಳ್ಳುವಂತಾಯಿತು. ಅವರಿಂದಲೇ ಕಲಿತು ಮುಂದೆ ಬಂದ ಶಿಷ್ಯರನೇಕರು ನಾಡಿನೆಲ್ಲೆಡೆಗಳಲ್ಲೂ ನಾಡಿನ ಹೊರಗಡೆಯೂ ಸಾಂಸ್ಕೃತಿಕ ರಾಯಭಾರಿಗಳಾಗಿ ಕಾರ್ಯಕ್ರಮ ನೀಡಿ ಜಯಭೇರಿ ಬಾರಿಸುವಂತಾಯಿತು.

ಗೌರವಯುತ ವ್ಯಕ್ತಿತ್ವ

ಉಡುಪಿ, ಧರ್ಮಸ್ಥಳಗಳಿಗೆ ಕ್ಷೇತ್ರ ಸಂದರ್ಶನಕ್ಕೋ, ಕಾರ್ಯಕ್ರಮಕ್ಕೋ ಬರುತ್ತಿದ್ದ ಅನೇಕ ಮಂದಿ ಸಂಗೀತ ವಿದ್ವಾಂಸರುಗಳು ಮಂಜುನಾಥಯ್ಯನವರನ್ನು ಕಾಣದೆ ಹಿಂದಿರುಗುತ್ತಿರಲಿಲ್ಲ. ಅವರ ಸಹಪಾಠಿಗಳಾಗಿದ್ದ ಚೌಡಯ್ಯ, ಟಿ. ನಾಗರತ್ನಮ್ಮ, ರಾಚಪ್ಪ, ದೇವೇಂದ್ರಪ್ಪ ಇಂಥವರಲ್ಲದೆ ಗಾಯಕರುಗಳಾದ ಚಕ್ರಕೋಡಿ ನಾರಾಯಣ ಶಾಸ್ತ್ರಿ, ಮಾಣಿ ಭಾಗವತರು, ಕಾಂಚನ ಸುಬ್ರಹ್ಮಣ್ಯ ಅಯ್ಯರ್, ಪಿಟೀಲು ಕೃಷ್ಣರಾಯರು, ಫಿಡ್ಲ್ ವಾಸುದೇವರಾಯರು, ಮದ್ರಾಸಿನ ಗಾಯಕ ರಾಮಮೂರ್ತಿ, ಮೂಲತಃ ಉಡುಪಿಯವರಾಗಿದ್ದು ಮದ್ರಾಸಿನಲ್ಲಿ ನೆಲೆನಿಂತಿದ್ದ ನೃತ್ಯಗಾರ ಹಾಗೂ ನೃತ್ಯನಿರ್ದೇಶಕ

ಉಡುಪಿ ಲಕ್ಷ್ಮೀನಾರಾಯಣ ಆಚಾರ್ಯ, ಮೈಸೂರಿನ ಗಾಯಕಿಯರಾದ ಇಂದಿರಾ ಹಾಗೂ ಲೀಲಾ ಇವರುಗಳೆಲ್ಲ ಮಂಜುನಾಥಯ್ಯನವರ ದರ್ಶನಾಕಾಂಕ್ಷಿಗಳಾಗಿ ಬರುತ್ತಿದ್ದುದನ್ನು ಈ ಲೇಖಕ ಕಂಡಿದ್ದಾನೆ. ಮಂಗಳೂರಿನ ಸಂಗೀತಗಾರ ಶ್ರೀನಿವಾಸ ಉಡುಪ, ಉಡುಪಿ ಅಕಾಡೆಮಿ ಸಂಗೀತ ಶಾಲೆಯ ಪ್ರಾಂಶುಪಾಲ ಮಾಧವ ಭಟ್ ಇವರುಗಳೂ ಆಗಾಗ ಅವರನ್ನು ಭೇಟಿ ಮಾಡುತ್ತಿದ್ದರು.

ಅಷ್ಟಮಠಗಳ ಶ್ರೀಗಳೆಲ್ಲರೂ ಮಂಜುನಾಥಯ್ಯನವರನ್ನು ಗೌರವದಿಂದ ಕಾಣುತ್ತಿದ್ದರು. [illegible]ಕ್ಕೆ ಅವರ ಸಂಗೀತ ಸೇವೆಯನ್ನು ಬಯಸುತ್ತಿದ್ದರು. ಸೋದೆ ಮಠಾಧೀಶ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದರು, ಕಾಣಿಯೂರು ಮಠದ ಶ್ರೀ ವಿದ್ಯಾವಾರಿನಿಧಿತೀರ್ಥರು ವಿಶೇಷವಾಗಿ ಅವರಿಗೆ ಗೌರವ ನೀಡುತ್ತಿದ್ದರು.

1950ರ ಸಮಯದಲ್ಲಿ ಆಢ್ಯವ್ಯಕ್ತಿಗಳಾಗಿದ್ದ ಉಡುಪಿ ಮೆಜೆಸ್ಟಿಕ್ ಪ್ರೆಸ್ಸಿನ ಮಾಲೀಕ ಶ್ರೀ ಯೋಗೀಂದ್ರರಾಯರು, ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದ ಡಾ. ಕೆ. ಎಲ್. ಐತಾಳರು, ಕವಿ ಸಾಂತ್ಯಾರು ವೆಂಕಟರಾಜರು, ಮಣಿಪಾಲದ ಸೃಷ್ಟಿಕರ್ತ ಡಾ. ಟಿ. ಎಂ. ಎ. ಪೈ, ಆಗ ಸಂಗೀತ ಸಭಾದ ಅಧ್ಯಕ್ಷರಾಗಿದ್ದ ಕೆ. ಕೆ. ಪೈ, ಲೇಖಕ ಕೊರಡ್ಕಲ್ ಶ್ರೀನಿವಾಸ ರಾವ್, ಉಡುಪಿಯ ಪ್ರಸಿದ್ಧ ಪತ್ರಕರ್ತ ಯು. ಎಸ್. ಭಟ್ (ಉಡುಪಿ ಸೀತಾರಾಮ ಭಟ್), ಪುರಾಣ ವಾಚಸ್ಪತಿ ಅಡ್ವೆ ವೇದವ್ಯಾಸ ಆಚಾರ್ಯರು, ಡಿಪ್ಪೋ ಸುಬ್ಬಣ್ಣ ಆಚಾರ್ಯರು, ಡಾ. ಸುಂದರರಾಮ ಪೈ, 'ನೆಹರೂ ಕೆಫೆ'ಯ ಶೇಷಪ್ಪಯ್ಯ, ವೈದ್ಯಪಂಡಿತರಾದ ಉಪ್ಪೂರು ಮಂಜುನಾಥ ಮಧ್ಯಸ್ಥರು, ಸಂಗೀತಜ್ಞ ಧನ್ಯರಂಗರಾವ್, ಆಸ್ಥಾನ ಮೃದಂಗ ವಿದ್ವಾನ್ ಶಂಕರ ರಾವ್, ಯಕ್ಷಗಾನ ಕಲಾವಿದ ಕೆ. ನಾರಾಯಣ ರಾವ್, ಗುಂಡಿಬೈಲು ಸುಬ್ಬಣ್ಣ ಆಚಾರ್ಯರು, ಪತ್ರಕರ್ತ - ವಿದ್ವಾಂಸ ಬನ್ನಂಜೆ ರಾಮಾಚಾರ್ಯರು, 'ಯುಗಪುರುಷ' ಮಾಸಪತ್ರಿಕೆಯ ಸಂಪಾದಕ, ಕವಿ ಕೊಡೆತ್ತೂರು ಅನಂತಪದ್ಮನಾಭ ಉಡುಪರು, ಪಿಟೀಲು ವಾದಕ ದಾಮೋದರ ಆಚಾರ್ಯರು, ಪಂಡಿತ ಕೆ. ಎಲ್. ಎನ್. ಉಪಾಧ್ಯರು, ಚಿತ್ರಕಲಾವಿದ ವೆಂಕಟರಾಯ ಕಾಮತ್, ಪೈಂಟರ್ ಗಣಪತಿ ರಾವ್, ಪೈಂಟರ್ ಪದ್ಮನಾಭ ರಾವ್, ತಬ್ಲಾ ಕಲಾವಿದ - ರಂಗಕರ್ಮಿ ಉಡುಪಿ ದಾಸಭಟ್ಟರು, ಹಾರ್ಮೋನಿಯಮ್ ವಾದಕ ನರಸಿಂಹ ಶೇರಿಗಾರ್, ಹಾರ್ಮೋನಿಯಮ್ ಅಪ್ಪಿ, ಕಲ್ಮಂಜೆ ವ್ಯಾಸಾಚಾರ್ಯ, ಐರೋಡಿ ರಾಧಾಕೃಷ್ಣ ಪೈ, ಸಾಮಾಜಿಕ - ಸಾಂಸ್ಕೃತಿಕ ಕಾರ್ಯಕ್ರಮ ಸಂಘಟಕ ವಿಜಯನಾಥ ಶೆಣೈ, ಅಧ್ಯಾಪಕ ರೋಕಿ ಫೆರ್ನಾಂಡಿಸ್, ಯು. ಗೋಪಾಲಕೃಷ್ಣ ಆಚಾರ್ಯ, ಪ್ರೊ. ಯು. ಎಲ್. ಆಚಾರ್ಯ, ತೆಂಕುಪೇಟೆಯ ಗುರುರಾಜ ಭಟ್ ದಂಪತಿ, ಉಡುಪಿಯ ನಾನಾಲಾಲ್ ಶೇಟ್, ಉಡುಪಿ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾಗಿದ್ದ ಕೌಲಗಿ ಶೇಷಾಚಾರ್ಯರು, ಕಂಗನ್ ಸ್ಟೋರ್ಸ್‌ನ ಗೋವಿಂದರಾಜ್ ಮುಂತಾದವರು ಮಂಜುನಾಥಯ್ಯನವರ ಅಭಿಮಾನಿಗಳೂ ಆಪ್ತರೂ ಆಗಿದ್ದರು.

ತುಂಬಿದ ಮನೆ, ತುಂಬು ಮನ

ಮಂಜುನಾಥಯ್ಯ ತಮ್ಮ ಅಣ್ಣ ರಾಮಚಂದ್ರಯ್ಯನವರಂತೆ, ತಮ್ಮ ಕೃಷ್ಣರಾಯರಂತೆ ಅವಿವಾಹಿತರಾಗಿ ಉಳಿದರು. ರಾಮಚಂದ್ರಯ್ಯನವರಿಗೆ ಮನೆ - ತೋಟದ ಕೆಲಸಗಳ ನಿರ್ವಹಣೆಯೊಂದಿಗೆ ಯಕ್ಷಗಾನ ಭಾಗವತಿಕೆ, ತಾಳಮದ್ದಳೆ ಕೂಟದಲ್ಲಿ ಅತೀವ ಆಸಕ್ತಿ ಇದ್ದುದರಿಂದ, ಇದ್ದ ಇಬ್ಬರು ತಂಗಿಯರನ್ನು ಮದುವೆ ಮಾಡಿಕೊಟ್ಟು, ತಾವು ಮದುವೆಯಾಗದೆ ತಮ್ಮ ಹವ್ಯಾಸದಲ್ಲೇ ಮುಂದುವರಿದರು. ಅಣ್ಣ ಮದುವೆ ಮಾಡಿಕೊಳ್ಳಲಿಲ್ಲವೆಂಬ ಕಾರಣಕ್ಕಾಗಿ ತಮ್ಮನೂ ಮದುವೆಯ ಗೋಜಿಗೇ ಹೋಗಲಿಲ್ಲ. ಇಬ್ಬರು ಅಣ್ಣಂದಿರಿಗೆ ಇರದ ಮದುವೆ ತನಗೇಕೆ ಎಂದು ತಮ್ಮನೂ ಸುಮ್ಮನಾದರು. ಹೀಗೆ ಮೂವರೂ ಬ್ರಹ್ಮಚಾರಿಗಳಾಗಿಯೇ ಜೀವಿಸಿದರು. ತಮ್ಮ ಕೃಷ್ಣರಾಯರು ವಕೀಲಿ ವೃತ್ತಿ ನಡೆಸುತ್ತಿದ್ದು, ಮುಂದೆ 'ನವಭಾರತ' (ಮಂಗಳೂರು) ದಿನಪತ್ರಿಕೆಯ ಉಪಸಂಪಾದಕರಾಗಿ ಇಹಲೋಕ ತ್ಯಜಿಸಿದರು.

ಇಬ್ಬರು ತಂಗಿಯರ ಪೈಕಿ ಶೇಷಮ್ಮನವರಿಗೆ ಎಂಟು ಮಂದಿ ಮಕ್ಕಳು (ನಾಲ್ವರು ಪುತ್ರರು, ನಾಲ್ವರು ಪುತ್ರಿಯರು). ಇನ್ನೊಬ್ಬರು ಕಮಲಮ್ಮ (ಗಂಗಕ್ಕ), ಈ ಲೇಖಕನ ತಾಯಿ.

ಬ್ರಹ್ಮಚಾರಿಯ ಮನೆಯಾದರೂ ಮಂಜುನಾಥಯ್ಯನವರ ಮನೆ ಸದಾ ಜನರಿಂದ ತುಂಬಿ ತುಳುಕುತ್ತಿತ್ತು. ಅವರ ಮನೆಗೆ ದಿನವೂ ಸಂಗೀತಕ್ಕಾಗಿ, ದಿನದ ಬೇರೆ ಬೇರೆ ಹೊತ್ತುಗಳಲ್ಲಿ ಶಿಷ್ಯರು ಆಗಮಿಸುತ್ತಿದ್ದರು. ಕೆಲವರು ಆ ಕಾಲದ ಕುದುರೆಗಾಡಿಗಳಲ್ಲಿ ಬಂದರೆ, ಮತ್ತೆ ಕೆಲವರು ಆಗ ಅಪರೂಪವಾಗಿದ್ದ ಕಾರುಗಳಲ್ಲಿ ಬರುತ್ತಿದ್ದರು.

ಕೆಲವರು ಹೊರ ಊರುಗಳ ಸಂಗೀತಾಭ್ಯಾಸಿಗಳಿಗೆ ಅವರು ತಮ್ಮ ಮನೆಯಲ್ಲೇ ಆಶ್ರಯವಿತ್ತಿದ್ದರು. ಅವರೆಲ್ಲ ಗುರುಕುಲ ಪದ್ಧತಿಯಲ್ಲಿ ಅಧ್ಯಯನ ನಡೆಸುತ್ತಿದ್ದರು. ಇವರಿಗೆಲ್ಲ ಊಟ-ಉಪಚಾರದ ವ್ಯವಸ್ಥೆ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಮಂಜುನಾಥಯ್ಯನವರ ತಂಗಿಯೋ, ಸೊಸೆಯೋ ತಪ್ಪದೇ ಊಟ-ಉಪಚಾರಗಳ ವ್ಯವಸ್ಥೆಯ ಹೊಣೆಯನ್ನು ನಿರ್ವಹಿಸುತ್ತಿದ್ದರು. ಕೆಲವು ಮೊಮ್ಮಕ್ಕಳೂ ಶಿಷ್ಯರೂ ಮನೆಯ ಎಲ್ಲ ಕೆಲಸಕಾರ್ಯಗಳಲ್ಲಿ ಕೈಜೋಡಿಸುತ್ತಿದ್ದರು. ಹೀಗೆ ಮನೆ ಸದಾ ತುಂಬಿಕೊಂಡಿರುತ್ತಿದ್ದ ನಾದಾಲಯವಾಗಿತ್ತು.

ಸೊಸೆಯಂದಿರು ಒಂದೆರಡು ದಿನಗಳ ಕಾಲ ಮನೆಯಲ್ಲಿ ಇಲ್ಲದಿದ್ದ ಸಂದರ್ಭಗಳಲ್ಲಿ ಗುರುಗಳ ಉಪಚಾರದ ವ್ಯವಸ್ಥೆ, ಬಡಿಸುವ ವ್ಯವಸ್ಥೆ ನನ್ನ ಪಾಲಿನದಾಗಿತ್ತು.

ಊಟಕ್ಕೆ ಹೇಗೆ ಬಡಿಸಬೇಕು ಎಂಬುದನ್ನು ನಾನು ಅವರಿಂದಲೇ ಹೇಳಿಸಿಕೊಂಡು ಕಲಿತೆ. ಒಮ್ಮೆ ಪಲ್ಯ ಹಾಗೂ ಹುಳಿಯನ್ನು ನಾನೇ ತಯಾರಿಸಿ ಗುರುಗಳಿಗೆ ಬಡಿಸುತ್ತ, "ಹೇಗಾಗಿದೆ?" ಎಂದು ವಿಚಾರಿಸಿದೆ. ಗುರುಗಳು ನನ್ನನ್ನು ಗಂಭೀರವಾಗಿ ನೋಡಿ ತಲೆ ಅಲ್ಲಾಡಿಸುತ್ತ, "ಚೆನ್ನಾಗಿದೆ. ಆದರೆ...?" ಎಂದು ಮಾತನ್ನು ಅರ್ಧಕ್ಕೇ ನಿಲ್ಲಿಸಿದರು.

"ಆದರೆ... ಏನು?" ಎಂದೆ.

"ನೋಡು! ನೀನು ಮಾಡಿದ ಪಲ್ಯ, ಹುಳಿ ಎರಡೂ ಚೆನ್ನಾಗಿವೆ. ಆದರೆ ನೀನು ಹೆಚ್ಚಿದ ಈ ಅಲಸಂಡೆ ಕೋಡು ನೋಡು, ಯಾವ ಯಾವುದೋ ರೂಪದಲ್ಲಿವೆ! ಹುಳಿಗೆ ಹೆಚ್ಚಿದ ಸೌತೇಕಾಯಿಯ ಹೋಳುಗಳೂ ಒಂದೇ ತೆರನಾಗಿಲ್ಲ. ಬೇರೆ ಬೇರೆ ಗಾತ್ರಗಳಲ್ಲಿವೆ. ಈ ರೀತಿ ಆಗಬಾರದು. ಎಲ್ಲವೂ ಒಂದೇ ತೆರನಾಗಿದ್ದರೆ ಚಂದ ಅಲ್ಲವೇ! ಒಟ್ಟಾರೆ ತುಂಡುಮಾಡಿ ಬೇಯಿಸಿದರೆ ಪರಿಪೂರ್ಣತೆ ಬಾರದು!" ಎಂದರು. ಪಲ್ಯ, ಹುಳಿ ಮಾಡಿದರೆ, ಅವು ಇರಬೇಕಾದ ರೀತಿಯನ್ನು ಅವರು ಹೀಗೆ ವಿವರಿಸಿದಾಗ ನಾನು ದಂಗಾದೆ. ಅವರ ಮಾತು ಸರಿ! ಎನ್ನಿಸಿತು.

ಹೀಗೆ, ಅವರಿಂದ ಸಂಗೀತ ಕ್ಷೇತ್ರದಲ್ಲಷ್ಟೇ ಅಲ್ಲ, ನಿತ್ಯಜೀವನದ ಎಷ್ಟೋ ರೀತಿನೀತಿಗಳನ್ನು ಕಲಿತುಕೊಂಡಿದ್ದೇನೆ. ಒಂಬತ್ತನೆಯ ವಯಸ್ಸಿಗೇ ಸಂಗೀತದ ಹುಚ್ಚಿನಿಂದ ತಂದೆತಾಯಿಗಳ ನೆರಳಿಂದ ದೂರಾಗಿ ಅವರ ಮನೆಸೇರಿದ ನಾನು ಮುಂದೆ ಅವರ ಮನಕ್ಕೇ ಸೇರಿದೆ ಎನ್ನಬಹುದು! ಮೊದಲೇ ಹೇಳಿದಂತೆ ಮನೆಯ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಲೇ ಅವರಿಂದ ಪಾಠ ಹೇಳಿಸಿಕೊಂಡೆ. ನನ್ನ ಬೆಳವಣಿಗೆಯ ವರ್ಷಗಳಲ್ಲಿ ನನ್ನಲ್ಲಿ ಎಲ್ಲ ಶಿಸ್ತು, ಸಂಯಮ, ಸಂಕಲ್ಪ, ಶುದ್ಧಿ, ಏಕಾಗ್ರತೆ ಇತ್ಯಾದಿ ಮೌಲ್ಯಗಳನ್ನು ರೂಪಿಸಿದವರೇ ನನ್ನ ಗುರುಗಳು.

ಅವರಿಗೆ ಸಂಗೀತವೊಂದೇ ಎಲ್ಲವೂ ಆಗಿತ್ತು. ಕೀರ್ತಿ ಪ್ರತಿಷ್ಠೆಗಾಗಿ ಅವರು ಆಸೆ ಪಟ್ಟವರಲ್ಲ. ಯಾವ ಮಟ್ಟದ ಕಲಾಕಾರರೇ ಬರಲಿ, ಎಲ್ಲರನ್ನೂ ಸಮಚಿತ್ತದಿಂದ ಪ್ರೀತಿಸುವ ಸೌಜನ್ಯದ ಮೂರ್ತಿಯಾಗಿದ್ದ ಅವರು ಶಿಷ್ಯರು ತಾವಾಗಿ ನೀಡುತ್ತಿದ್ದ ಅಲ್ಪವೊತ್ತದ ಗುರುದಕ್ಷಿಣೆಯಲ್ಲೇ ತೃಪ್ತರಾಗಿದ್ದರು.

ಅವರ 70ರ ಇಳಿವಯಸ್ಸಿನ ಹೊತ್ತಿಗೆ, ಅನಾರೋಗ್ಯ ಬಾಧಿಸಿದ ದಿನಗಳಲ್ಲಿ ನಾನು ಅವರ ಬಳಿಯೇ ಇದ್ದು ನನ್ನಿಂದಾದಷ್ಟು ಉಪಚರಿಸಿದ್ದೇನೆ. ಹಂಡೆಗೆ ನೀರು ತುಂಬಿಸುವುದು, ಒಲೆ ಉರಿಸುವುದು, ಅಡುಗೆ ಮಾಡುವುದು, ಗಿಡಗಳಿಗೆ ನೀರು ಹನಿಸುವುದು ಇವನ್ನೆಲ್ಲ ಅವರ ಬಳಿಯಿದ್ದುಕೊಂಡೇ ಬಾಲ್ಯದಿಂದಲೂ ಮಾಡುತ್ತ ಬಂದವನು ನಾನು. ಹೂ ಹಣ್ಣು, ತರಕಾರಿ ಖರೀದಿ, ರೇಷನ್ ಖರೀದಿ ಇತ್ಯಾದಿಗಳಲ್ಲೂ ನಾನು ಸೈ ಎನಿಸಿಕೊಂಡಿದ್ದೆ. ಶನಿವಾರಗಳಂದು ನಡೆಯುತ್ತಿದ್ದ ಭಜನೆಯ ಕಾರ್ಯಕ್ರಮದ ಮುಕ್ತಾಯ ಹಂತದಲ್ಲಿ

ಪೂಜೆಯನ್ನು ನಾನೇ ಮಾಡುತ್ತಿದ್ದೆ. ನನ್ನ ಪ್ರತಿಯೊಂದು ಕೆಲಸದಲ್ಲೂ ಅವರ ಪ್ರೀತಿಯ ಮಾರ್ಗದರ್ಶನವಿತ್ತು. ನಮ್ಮ ಮನನೋಯದಂತೆ, ಹಿತಮಿತ ಹಾಸ್ಯಚಟಾಕಿಗಳೊಂದಿಗೆ ನಮ್ಮ ತಪ್ಪನ್ನು ತಿದ್ದುವ ಗುಣ ಅವರಲ್ಲಿತ್ತು.

ಅವರ ಇಳಿವಯಸ್ಸಿನಲ್ಲಿ ಅನಾರೋಗ್ಯದ ನಿಮಿತ್ತ ಆದಾಯದ ಬಹಳಷ್ಟು ಮೊತ್ತ ಔಷಧಿಗೇ ವೆಚ್ಚವಾಗುತ್ತಿತ್ತು. ಆದರೆ ಅವರು ಯಾರಲ್ಲೂ ಏನನ್ನೂ ಕೇಳದವರಾಗಿದ್ದರು. ಆದರೆ ಅವರ ಅಳಿಯಂದಿರು, ಸೊಸೆಯಂದಿರು ಮಾವನ ಅಗತ್ಯಗಳನ್ನು ಮನಗಂಡು ತಾವೇ ಎಲ್ಲವನ್ನೂ ಅಣಿಗೊಳಿಸುತ್ತಿದ್ದರು. ಅವರು ಸ್ವಲ್ಪವೂ ತೊಂದರೆ ಪಟ್ಟುಕೊಳ್ಳಬಾರದೆಂಬುದೇ ಅವರ ಹತ್ತಿರದ ಬಂಧುಗಳ ಮಹದಿಚ್ಛೆಯಾಗಿತ್ತು. ಹೀಗಾಗಿ ದಿನವೂ ಮನೆಯಲ್ಲಿ ಸಂಭ್ರಮದ ವಾತಾವರಣವೇ ಇರುತ್ತಿತ್ತು. 1959ರಲ್ಲಿ ಅವರ ಆರೋಗ್ಯ ತೀವ್ರವಾಗಿ ಉಲ್ಬಣಿಸಿದಾಗ, ಅವರು ಅತೀವವಾಗಿ ಸಂಕಟಪಡುತ್ತ ಮಲಗಿದ್ದಾಗ ರಾಜಗೋಪಾಲಾಚಾರ್ಯ, ಸೂರಾಲು ಪರಮೇಶ್ವರ ಭಟ್ಟರು ಹಾಗೂ ನನ್ನಂಥ ಶಿಷ್ಯರೂ ಸೊಸೆಯಂದಿರೂ ಅವರ ಸೇವೆಗೆ ಶ್ರದ್ಧೆಯಿಂದ ಮುಂದಾಗುತ್ತಿದ್ದರು. ಆ ದಿನಗಳಲ್ಲಿ ಅವರ ಬಂಧುಗಳೆಲ್ಲ ಯಾವುದೇ ರೀತಿಯಲ್ಲೂ ಬೇಸರ ಪಡದೆ ಪ್ರೀತಿಯಿಂದ ಉಪಚರಿಸುತ್ತಿದ್ದರು. ಇಂಥ ಪ್ರಾಮಾಣಿಕ ಉಪಚಾರವನ್ನು ನಾವು ಇಂದಿನ ದಿನಗಳಲ್ಲಿ ಸುಲಭದಲ್ಲಿ ಕಾಣಲಾರೆವು.

ಇಂಥ ನನ್ನ ಗುರು ತಮ್ಮ 77ನೇ ವಯಸ್ಸಿನಲ್ಲಿ, 1964ನೆಯ ಇಸವಿಯಲ್ಲಿ ಇಹಯಾತ್ರೆ ಮುಗಿಸಿದರು. ತೆಂಕಪೇಟೆಯ ಸ್ವಗೃಹದಲ್ಲಿ, ಅವರ ಶಿಷ್ಯಂದಿರಲ್ಲಿ ಕೊನೆಯವನಾದ ಈ ಲೇಖಕನ ತೊಡೆಯಲ್ಲಿ ತಲೆಯಿರಿಸಿಕೊಂಡೇ ಕೊನೆಯುಸಿರೆಳೆದರು. ನನ್ನ ಹಾಗೂ ಇತರ ಶಿಷ್ಯಂದಿರನೇಕರ ಪಾಲಿಗೆ ಸಂಗೀತ ತಪಸ್ಸೆಂದರೇನು ಎಂಬ ಪಾಠವನ್ನು ನಡೆ-ನುಡಿಯಿಂದ ಕಲಿಸಿಕೊಟ್ಟು ಹೋದರು.

'ತಂದೆಗೂ ಗುರುವಿಗೂ ಒಂದು ಅಂತರವುಂಟು। ತಂದೆ ತೋರುವನು ನಿಜಗುರುವ। ಗುರುರಾಯ ಬಂಧನವ ಕಳೆವ ಸರ್ವಜ್ಞ' ಎಂಬ ತ್ರಿಪದಿ ನನ್ನ ಪಾಲಿಗೆ ಅಕ್ಷರಶಃ ಸತ್ಯವಾಗಿದೆ.

ಅವರೊಂದಿಗೆ ಕಳೆದ ಸುದೀರ್ಘ ಅವಧಿಯಲ್ಲಿ (1948 ರಿಂದ 1964) ನಾನು ದೊರಕಿಸಿಕೊಂಡ ಜ್ಞಾನ, ನನ್ನ ಪಾಲಿಗೆ ದೊಡ್ಡ ನಿಧಿ. ನಾನು ಮುಂದೆ ಸಂಗೀತ ಬೋಧಕನಾಗಿ, ಗಾಯನ ಗೋಷ್ಠಿಗಳ ಸಂಘಟಕನಾಗಿ, ಸಂಗೀತ ನಿರ್ದೇಶಕನಾಗಿ, ದಕ್ಷಿಣ ಭಾರತದ ಪ್ರಸಿದ್ಧ ಗಾಯಕ ಗಾಯಕಿಯರಿಗೆ ಸಂಗೀತ ಸಂಯೋಜಕನಾಗಿ ಕೆಲಸ ಮಾಡುವಂತಾಗಲು, ಎಲ್‌ಪಿ ರೆಕಾರ್ಡ್, ಧ್ವನಿಸುರುಳಿ, ಧ್ವನಿಪೆಟ್ಟಿಗೆಗಳನ್ನು ನಿರ್ಮಾಣ ಮಾಡಲು, ಕನ್ನಡ ನಾಟಕಗಳಿಗೂ ಚಲನಚಿತ್ರಗಳಿಗೂ ಸಂಗೀತ ನಿರ್ದೇಶನ ಮಾಡಲು ಪ್ರೇರಣೆ, ಚಿತ್‌ಶಕ್ತಿ ಒದಗಿಸಿದವರೇ ನನ್ನ ಗುರುಗಳು.

ವಾಸುದೇವಾಂತರಂಗ - (ಸಂ)ದರ್ಶನ

✍ ಸಂದರ್ಶಕ: **ಜಯರಾಮ ಕಾರಂತ**

♦ **ನಿಮ್ಮ ಎಷ್ಟನೆಯ ವಯಸ್ಸಿನಲ್ಲಿ ಸಂಗೀತದ ಪ್ರಪಂಚವನ್ನು ಪ್ರವೇಶಿಸಿದಿರಿ? ಆ ಹಿನ್ನೆಲೆ ಸ್ವಲ್ಪ ವಿವರಿಸುತ್ತೀರಾ?**

- ಒಂಭತ್ತನೆಯ ವರ್ಷದ ಆರಂಭದಲ್ಲಿ ಸಂಗೀತ ಕಲಿಕೆಯ ಆಸೆ ಹೊತ್ತು, ಗುರು ಮಂಜುನಾಥಯ್ಯ - ನಮ್ಮ ಅಜ್ಜಿಯ ಅಣ್ಣ, ನಮ್ಮ ತಾಯಿಯವರಾದ ಕಮಲಮ್ಮ ಅಥವಾ ಗಂಗಕ್ಕನವರ ಸೋದರಮಾವ - ಅವರಲ್ಲಿ ಸಂಗೀತಾಸಕ್ತನಾಗಿ ಪ್ರವೇಶ ಪಡೆದೆ.

ಅಂದಿನ ದಿನಗಳಲ್ಲಿ ನಮ್ಮ ಕುಟುಂಬಿಕರೆಲ್ಲರಿಗೆ ಗುರು ಮಂಜುನಾಥಯ್ಯನವರ ಹಾಗೂ ಅವರ ಸಂಗೀತ ಸಾಧನೆಯ ಕುರಿತು ಅಪಾರ ಗೌರವಾಭಿಮಾನವಿತ್ತು. ನನ್ನ ಮಗನೂ ಅವರಿಂದ ಸಂಗೀತ ವಿದ್ಯೆ ಕಲಿತಲ್ಲಿ ಬದುಕು ಸಾರ್ಥಕವಾದೀತು ಅನ್ನುವುದು ನನ್ನ ತಾಯಿಯ ಆಸೆಯಾಗಿತ್ತು.

♦ **ಸಂಗೀತ ಕಲಿಕೆಗೆ ಮುಖ್ಯ ಪ್ರೇರಣೆ?**

- ನನ್ನ ತಾಯಿಯೇ. ಅವರು ಹಾಡುತ್ತಿದ್ದ 'ಉದಯರಾಗ', ಸಂಧ್ಯಾಕಾಲದಲ್ಲಿ ತುಳಸಿಗೆ ಪ್ರದಕ್ಷಿಣೆ ಹಾಕುತ್ತಿದ್ದಾಗ ಹಾಡುತ್ತಿದ್ದ 'ಶುದ್ಧಬ್ರಹ್ಮ ಪರಾತ್ಪರ ರಾಮ। ಕಲಾತ್ಮಕ ಪರಮೇಶ್ವರ ರಾಮ...' ಇತ್ಯಾದಿ ಹಾಡುಗಳನ್ನು ತಾಯಿಯವರ ಬಾಯಿಯಿಂದ ಕೇಳುತ್ತಲೇ ಇದ್ದು, ನಾನೂ ಅವರೊಂದಿಗೆ ದನಿಗೂಡಿಸುತ್ತಿದ್ದೆ. 'ನೀನೂ ಸಂಗೀತ ಕಲಿ' ಅಂದಾಗ ಭಾರೀ ಸಂತೋಷದಿಂದ ಅವರ ಸೋದರಮಾವನಲ್ಲಿ ಸೇರಿದೆ. ಹೀಗೆ ಇದಕ್ಕೆಲ್ಲ ಮುಖ್ಯ ಪ್ರೇರಣೆ, ಪ್ರೋತ್ಸಾಹ ನನ್ನ ತಾಯಿಯಿಂದಲೇ. ನನ್ನ ತಾಯಿಯ ಇಂಪಾದ ನಾದ - ಅದೇ ನನ್ನನ್ನು ಪ್ರೇರಿಸಿದ್ದು, ಸಂಗೀತ ಪ್ರಪಂಚಕ್ಕೆ ಪ್ರವೇಶಿಸುವಂತೆ ಮಾಡಿದ್ದು.

♦ **ನಿಮಗೆ ಗುರುಗಳಾಗಿ ಒದಗಿದ ನಿಮ್ಮ ಅಜ್ಜ ಯಾವ ರೀತಿ ಸಂಗೀತ ಕಲಿಕೆಯನ್ನು ಅಳವಡಿಸಿಕೊಂಡಿದ್ದರು? ಸ್ಫೂರ್ತಿ, ವಿಶೇಷ ಸಂದರ್ಭ, ಲಹರಿ (ಮೂಡ್) ಇತ್ಯಾದಿಗಳು ಅವರ ಸಂಗೀತಾಸಕ್ತಿಯ 'ನಿರಂತರತೆ'ಯ ಮೇಲೆ ಪರಿಣಾಮ ಬೀರಿದ್ದಿದೆಯೆ?**

- ನನಗೆ ಗುರುಕುಲ ಪದ್ಧತಿಯಲ್ಲೇ ಸಂಗೀತ ಶಿಕ್ಷಣ ದೊರೆಯಿತು. ನನ್ನ ಗುರು ಮಂಜುನಾಥಯ್ಯನವರು (ನಾವೆಲ್ಲ ಅವರನ್ನು ಕರೆಯುತ್ತಿದ್ದುದು 'ಮಾವ' ಎಂದೇ!) ಬಿಡಾರಂ ಕೃಷ್ಣಪ್ಪನವರಲ್ಲಿ ಮೈಸೂರಲ್ಲಿ, ಚೌಡಯ್ಯ, ದೇವೇಂದ್ರಪ್ಪನವರೊಂದಿಗೆ ಕಲಿತವರು. ಆಮೇಲೆ ಅವರಿಗೆ ಅಂಟಿಕೊಂಡ ಉಬ್ಬಸದ ಕಾರಣದಿಂದ, ಚಿಕಿತ್ಸೆಗಾಗಿ ಹುಟ್ಟೂರಿಗೆ (ಉಡುಪಿಗೆ)

ಬಂದು ನಿಂತರು. ಕಾಯಿಲೆ ಗುಣವಾಗಲಿಲ್ಲ. ಇಲ್ಲೇ ಇದ್ದು ಸಹೃದಯರಿಂದ ಗುರುತಿಸಿಕೊಂಡು ಸಂಗೀತಪಾಠ ಹೇಳಿಕೊಡಲಾರಂಭಿಸಿದರು. ದಿನಾ ಬ್ರಾಹ್ಮೀ ಮುಹೂರ್ತದಲ್ಲೆದ್ದು ಪಿಟೀಲು ಬಾರಿಸುತ್ತಿದ್ದರು. ಆ ಬಳಿಕ ಹಾಡುತ್ತಲೂ ಇದ್ದರು. ಅವರ ದಿನಚರಿಯೇ ನನ್ನಂಥವನಿಗೆ ಮಾರ್ಗದರ್ಶಿಯಾಯಿತು. ಅವರ ನಡೆ-ನುಡಿ, ಆಚಾರ-ವಿಚಾರ, ಆಹಾರ-ವಿಹಾರ ಎಲ್ಲವೂ ನನ್ನ ಮನಸ್ಸಿಗೆ ತುಂಬ ಮುದವನ್ನು ನೀಡುತ್ತಿತ್ತು. ಮಾತುಮಾತಿಗೂ 'ಶಿಸ್ತು' ಎಂಬ ಪದವನ್ನು ಉಚ್ಚರಿಸುವವರು ಅವರು! ಪಾಠಕ್ಕೆ ಕುಳಿತಾಗಲೂ 'ಶಿಸ್ತ'ನ್ನು ಗಮನಿಸುತ್ತಿದ್ದರು. ತಲೆ ಬಾಚಿ, ಶುಭ್ರವಸನಧಾರಿಯಾಗಿ ಕುಳಿತುಕೊಳ್ಳಬೇಕಿತ್ತು. ಸಾವಧಾನದಿಂದ ನಾದಾನುಮೋದದ ಭಾವ ತಿಳಿಹೇಳುತ್ತಿದ್ದರು. ಅವರೂ ಶುಭ್ರವಸನಧಾರಿಯಾಗಿರುತ್ತಿದ್ದರು. ಯಾವ ಕವಿಗೂ ಕಡಿಮೆ ಅನಿಸದ ಸಕಾಲಿಕ ಮಾತು, ಉತ್ತಮಿಕೆಯನ್ನು ಮೆಚ್ಚಿ ಹರಸುವ ನುಡಿ - ಎಲ್ಲವನ್ನೂ ಅವರಿಂದಲೇ ಕಲಿತದ್ದು ನಾನು.

'ತಂದೆಗೂ ಗುರುವಿಗೂ ಒಂದು ಅಂತರವುಂಟು - ತಂದೆ ತೋರುವನು ನಿಜಗುರುವ; ಗುರುರಾಯ ಬಂಧನವ ಕಳೆವ ಸರ್ವಜ್ಞ!'

♦ **ನಿಮ್ಮ ಕಲಿಕೆಯ ಕಾಲದ ಶ್ರೇಷ್ಠ ಸಾಧಕರ ದೃಷ್ಟಿಕೋನದ ಬಗ್ಗೆ ಸ್ವಲ್ಪ ಹೇಳುತ್ತೀರಾ?**

- ಅವರಿವರಿಂದ ಕೇಳಿದ್ದು ಇದೆ. ಪ್ರತ್ಯಕ್ಷ ಕಾಣುವ ಭಾಗ್ಯ ದೊರೆಯಲಿಲ್ಲ. ನನ್ನ ಗುರುಗಳವರ ಸಾಧನೆಯ ಬಗ್ಗೆ ಬಹಳಷ್ಟು ತಿಳಿದಿರುವೆ. ಮನುಷ್ಯ ಜೀವನದ ಸಾರ್ಥಕ್ಯಕ್ಕೆ ಅನೇಕ ಮಾರ್ಗಗಳುಂಟು. ನಾನಾ ಯೋಗ - ಭಕ್ತಿಯೋಗ, ಕ್ರಿಯಾಯೋಗ, ಸಾಧನಾಯೋಗ - ಗಳ ಜೊತೆ ನಾದಯೋಗವೂ ಒಂದೆಂಬುದನ್ನು ಅರಿತುಕೊಂಡೆ. ನಾದವೆಂದರೆ ವೇದ. ಅದಕ್ಕೆ ನಾಶವಿಲ್ಲ. ತೋರಿಕೆಗೆ, ಸಂಗೀತ ಎಂದರೆ ಉಸಿರು. ವಾಸ್ತವದಲ್ಲಿ ಉಸಿರೇ ನಾದ. ಶರೀರದಿಂದ ಹೊರಟ ನಾದ, ಅನಂತವನ್ನು ಸೇರಿ ಅನಂತವೇ ಆಗುತ್ತದೆ. ಅನಂತಕ್ಕೆ ಅಳಿವಿಲ್ಲ! ಅನಂತದಲ್ಲಿ ಒಂದಾಗುವುದೇ ನಿಜವಾದ ಮೋಕ್ಷ... ಈ ಎಲ್ಲ ಅಂಶಗಳನ್ನು ನನ್ನ ಸಂಗೀತಾಧ್ಯಯನದೊಂದಿಗೆ, ಗುರುಗಳ ಮನೆಯಲ್ಲೇ ಇದ್ದು, ನಾನಾ ಸನ್ನಿವೇಶಗಳಲ್ಲಿ ಅವರೊಂದಿಗೆ ಭಾಗಿಯಾಗಿ ಅರಿತುಕೊಂಡೆ. ಅವರೊಂದಿಗೆ ಕಲಿತು ಬೆಳೆದ ಅವಧಿಯಲ್ಲೂ ಆ ಬಳಿಕವೂ ಅವರ ಈ ನಿಲುವನ್ನು ಸ್ಮರಿಸಿಕೊಳ್ಳುತ್ತ ಬಂದಿರುವವನು ನಾನು.

♦ **ತಾನು ಕಲಿಸಿದ ಶಿಷ್ಯ/ಶಿಷ್ಯೆ ನಾಲ್ಕು ಜನರೆದುರಿಗೆ ತನ್ನ ಪ್ರತಿಭೆಯನ್ನು ಸಾರ್ವಜನಿಕರೆದುರು ಸಾದರಪಡಿಸುವ ಬಗ್ಗೆ ನಿಮ್ಮ ಕಾಲದ ಸಂಗೀತ ಶಿಕ್ಷಕರ ದೃಷ್ಟಿಕೋನ ಹೇಗಿತ್ತು?**

- ನಾಲ್ಕು ಜನರೆದುರಿಗೆ ಸೊಗಸಾಗಿ ಹಾಡಿ ಒಪ್ಪಿಸಿದಲ್ಲಿ ತೃಪ್ತಿ ಪಟ್ಟುಕೊಳ್ಳುತ್ತಿದ್ದರು - ಹೆಚ್ಚಿನ ಶಿಕ್ಷಕರು. ಇನ್ನು ಕೆಲವರು, ಇನ್ನೂ ಹೆಚ್ಚಿನ ಪ್ರತಿಭೆ ಸಾಧಿಸಿ, ಮನೋಧರ್ಮ ಬೆಳೆಸಿಕೊಂಡು ಸಿದ್ಧಿ-ಪ್ರಸಿದ್ಧಿ ಪಡೆಯುವಂತಾಗಲೆಂದು ಬಯಸುತ್ತಿದ್ದರು.

♦ **ನಿಮ್ಮ ಅಭ್ಯಾಸಕಾಲದಲ್ಲಿ, ನಿಮ್ಮ ಗುರುವಿನ ಮಾದರಿಯಲ್ಲಿ (ತಮ್ಮ ಸಂಕಲ್ಪ**

ಸಾಕಾರದ ವಿಷಯದಲ್ಲಿ) ನಿಮ್ಮ ಮೇಲೆ ಪ್ರಭಾವ ಬೀರಿದವರು ಯಾರಾದರೂ ಇದ್ದರೇ? ಈಗಿನ ಕಾಲದವರು - ನಿಮ್ಮ ದೃಷ್ಟಿಯಲ್ಲಿ - ಹೇಗಿದ್ದಾರೆ?

- ನನ್ನ ಕಾಲದ ನಿಜವಾದ ಸಂಗೀತ ವಿದ್ವಾಂಸರಾಗಿ ನನಗೆ ಕಾಣಿಸಿದ್ದು ನನ್ನ ಗುರು ಮಂಜುನಾಥಯ್ಯ ಒಬ್ಬರೇ. ಅವರ ರೀತಿ-ನೀತಿ, ಪಾಠ-ಪ್ರವಚನಗಳನ್ನು ಆಲಿಸಿದ ನನಗೆ ಇತರ ವಿದ್ವಾಂಸರು ಪ್ರಭಾವ ಬೀರಲು ಅಸಮರ್ಥರಿದ್ದಂತೆ ಅನಿಸುತ್ತಿತ್ತು. ನನ್ನ ಗುರು ತಮ್ಮ ಸಂಕಲ್ಪ ಸಾಕಾರಕ್ಕಾಗಿ ಸತತ ಸಾಧನೆಗೈಯುತ್ತಿದ್ದರು. ಅನುದಿನವೂ ಪಾಠ-ವಾದನ ನಡೆಸುತ್ತಿದ್ದರೂ ಉಷಃಕಾಲದಲ್ಲಿ ಸ್ವತಃ ವಿದ್ಯಾರ್ಥಿಯಂತೆ ಸಾಧನೆ ಮಾಡುತ್ತಿದ್ದರು. ಅವರ ಈ ರೀತಿ-ನೀತಿಗಳೇ ನನ್ನ ಸಾಧನೆಗೆ ಕಾರಣ.

ಈಗಿನ ಗುರುಗಳನೇಕರನ್ನು ಅಂದಿನ ಕಾಲದ ಸಂಗೀತ ಸಾಧಕರೊಂದಿಗೆ ಯಾವುದೇ ರೀತಿಯಲ್ಲೂ ಹೋಲಿಸುವಂತಿಲ್ಲ. ಇಂದಿನವರು ತಮ್ಮದೇ ಆದ ವಿಚಾರಗಳನ್ನು ಮೈಗೂಡಿಸಿಕೊಳ್ಳದೆ (ಸ್ವಂತಿಕೆಯಿಲ್ಲದೆ) ಸಾಗುತ್ತಿದ್ದಾರೆ.

ನನ್ನ ಅಭ್ಯಾಸಕಾಲದಲ್ಲಿ ನಮ್ಮ ಗುರುಗಳನ್ನು ಕಾಣಲು ಸ್ನೇಹಿತರಾಗಿಯೂ, ಸಂಗೀತಗಾರರಾಗಿಯೂ, ವಾದಕರಾಗಿಯೂ ಅದೆಷ್ಟೋ ಮಂದಿ ಬರುತ್ತಿದ್ದರು. ಅವರಲ್ಲೊಬ್ಬರಾದ ಶ್ರೀ ಬೆಳ್ಳೆಯವರು ಯಾವಾಗಲೂ ಕೊರಳಲ್ಲಿ ಪದಕವಿದ್ದ ಬಂಗಾರದ ಹಾರ ಹಾಕಿಕೊಂಡು ಬರುವವರು. ದಿನವೂ ನಮ್ಮ ಪಾಠ ನಡೆಯುವಾಗ ಉಪಸ್ಥಿತರಿದ್ದು, ತಾಳ ಹಾಕುತ್ತಿದ್ದರು. ಅವರು ಮದ್ರಾಸಿನಲ್ಲಿ ಅಮೋಘ ಕಾರ್ಯಕ್ರಮ ನೀಡಿ ಖ್ಯಾತರಾಗಿದ್ದವರಂತೆ. ನಮ್ಮ ಗುರುಗಳು ಪಾಠ ಮಾಡುವಾಗ, ಶಿಷ್ಯರೂ ಹಾಡುವಾಗ ಹಲವು ಬಾರಿ ಉತ್ತೇಜಿತರಾಗಿ ಅವರೂ ನಮ್ಮೊಂದಿಗೆ ಹಾಡುತ್ತಿದ್ದರು.

ಖ್ಯಾತ ಸಂಗೀತಗಾರರಾಗಿದ್ದರೂ ಅವರ ಗಾಯನವನ್ನು ಕೇಳಲಾಗುತ್ತಿರಲಿಲ್ಲ! ಕಾರಣ, ಎಲ್ಲ ಕೃತಿ - ಕೀರ್ತನೆಗಳೂ ಒಂದೇ ತೆರನಾಗಿ ಕೇಳುತ್ತಿದ್ದವು! 'ವಾತಾಪಿ ಗಣಪತಿಂ ಭಜೇಽಹಂ' (ಹಂಸಧ್ವನಿ ರಾಗದ) ಕೃತಿಗೂ 'ಪಕ್ಕಲ ನಿಲಬಡಿ' (ಖರಹರಪ್ರಿಯ ರಾಗದ) ಕೃತಿಗೂ ವ್ಯತ್ಯಾಸವೇ ಅರ್ಥವಾಗುತ್ತಿರಲಿಲ್ಲ. ಎರಡೂ ಒಂದೇ ತೆರನಾಗಿ ಕೇಳಿಸುತ್ತಿದ್ದವು. ಹಾಗೇ, ಕನ್ನಡ ಪದಗಳೂ! ನಮ್ಮ ಗುರುಗಳು ಸಾವಧಾನದಿಂದ ಅವರ ಗಾಯನ ಕೇಳುತ್ತಿದ್ದರು. ನನ್ನೊಂದಿಗೆ ಅಭ್ಯಾಸ ಮಾಡುತ್ತಿದ್ದ ಹಿರಿಯ ಶಿಷ್ಯರೂ ಆಗಾಗ ತಲೆದೂಗುತ್ತಿದ್ದರು.

ನಾನು ಮಾತ್ರ ತೆಪ್ಪಗಿದ್ದು, ತಲೆದೂಗದಿದ್ದುದನ್ನು ಕಂಡ ಅವರು, "ಏಕೋ ನಿನಗೆ ಅರ್ಥವಾಗಲಿಲ್ಲವಾ?" ಎಂದಾಗ ನಾನು (ಆಗ ಒಂಬತ್ತು ವರ್ಷ ವಯಸ್ಸಿನವನು), "ಇಲ್ಲ. ನಿಮ್ಮ ಎಲ್ಲಾ ಹಾಡುಗಳೂ ಒಂದೇ ರೀತಿ ಕೇಳಿಸುತ್ತವೆ. ಪದ್ಯವೇ ಅರ್ಥವಾಗುತ್ತಿಲ್ಲ. ರಾಗ ಎಲ್ಲಕ್ಕೂ ಒಂದೇ" ಎಂದುಬಿಟ್ಟೆ! ಅವರು ದುಃಖಿತರಾದರು, ಗುರುಗಳಲ್ಲಿ ತಮ್ಮ ಅಳಲನ್ನು ಹೇಳಿಕೊಂಡರು.

ಆಗ ಗುರುಗಳು (ನನ್ನನ್ನು ತೋರಿಸಿ), "ನೋಡಿ, ಇವನು ಭಾರೀ ಜೋರಾಗುತ್ತಾನೆ" ಎಂದರು. ಆಗಲೂ ನಾನು ಅವರನ್ನು ಸುಮ್ಮನೆ ದಿಟ್ಟಿಸುತ್ತಿದ್ದೆ. "ಹಿರಿಯರಿಗೆ ಹಾಗೆಲ್ಲ ಹೇಳಬಾರದು!" ಎಂದು ಗುರುಗಳು ಪಾಠ ಮುಗಿಸಿದ ಬಳಿಕ ತಿಳಿಹೇಳಿದರು.

♦ **ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದವರು ನೀವು. ಇದನ್ನೊಂದು ವೃತ್ತಿಯಾಗಿ ಸ್ವತಂತ್ರ ನೆಲೆಯಲ್ಲಿ ಮುಂದುವರಿಸಿಕೊಂಡು ಹೋಗುವುದು ಇಂದಿನ ದಿನಗಳಲ್ಲಿ ಸಾಧ್ಯ ಎನ್ನುತ್ತೀರಾ?**

- ಖಂಡಿತಾ ಸಾಧ್ಯ.

♦ **ಮುಂದುವರಿಸಿಕೊಂಡು ಹೋಗುವಲ್ಲಿ ನಿಮ್ಮ ಸಾಂಸಾರಿಕ ಸಂಗತಿಗಳು ತೊಡಕಾದದ್ದಿದೆಯೆ?**

- ಸಾಂಸಾರಿಕ ಸಂಗತಿಗಳು ತೊಡಕಾಗಿದ್ದರೂ ಮುಂದುವರಿಸಿಕೊಂಡು ಬರುವಲ್ಲಿ ಯಶಸ್ಸು ಸಾಧಿಸುತ್ತಿದ್ದೇನೆ. ಕಾರಣ, ನನ್ನ ಪತ್ನಿ ಸುನಂದಾಳ ಬೆಂಗಾವಲು; ಅವಳು ಕಾಲಕಾಲಕ್ಕೆ ನೀಡುವ ನೇರ ಸಲಹೆ.

♦ **'ನನ್ನ ಮಗುವಿಗೆ ಸಂಗೀತ ಕಲಿಸಿ' ಅಂತ ನಿಮ್ಮನ್ನು ವಿನಂತಿಸುವ ಅಪ್ಪ ಅಮ್ಮಂದಿರು ಹೀಗೆ ಅವರನ್ನು ನಿಮಗೆ ಒಪ್ಪಿಸುವಾಗ ಅವರ ಮನಸ್ಸಿನಲ್ಲಿರುವುದೇನು? ಇವನು/ಇವಳು ಈ ವಿದ್ಯೆಯನ್ನು ತಲಸ್ಪರ್ಶಿಯಾಗಿ ಕಲಿಯಲಿ ಅಂತಲೇ, ಅಥವಾ ಶಾಸ್ತ್ರೀಯ ಅಂಶಗಳನ್ನು ಪರಿಚಯಿಸಿಕೊಂಡರೆ ಸಾಕು, ಕಾರ್ಯಕ್ರಮ ನೀಡುವಷ್ಟಾದರೆ ಸಾಕು ಅಂತಲೇ?**

- ಸಂಗೀತ ಕಲಿಸಿ ಅಂತ ಒಪ್ಪಿಸುವ ಹೆಚ್ಚಿನ ಅಪ್ಪ ಅಮ್ಮಂದಿರಿಗೆ 'ಗುರಿ' ಇಲ್ಲದಿರುವುದು ದುಃಖದ ಸಂಗತಿ. ಎಲ್ಲರಂತೆ ನನ್ನ ಮಗಳೂ ಕಲಿತಿದ್ದಾಳೆ ಅಂತ ಹೇಳಿಕೊಳ್ಳುವುದು ಬೇಕು ಕೆಲವರಿಗೆ. ಇನ್ನು ಕೆಲವರಿಗೆ ಆಡಂಬರದ ಜ್ಯೂನಿಯರ್, ಸೀನಿಯರ್ ಕಲಿತರೆ ಸಾಕೆಂಬ ದೃಷ್ಟಿ. ಇನ್ನು ಕೆಲವರಿಗೆ... ಮಕ್ಕಳನ್ನು ಹಾಡಿಸಿ, ಪ್ರದರ್ಶಿಸುವ ಹುಚ್ಚು.

ಸಂಗೀತವೆಂಬುದೇನು ಲೌಕಿಕ ವಿದ್ಯೆಯಲ್ಲ, ಇದು ಪಾರಮಾರ್ಥಿಕ. ಸಾಧನೆಯಿಂದ ಸಾಧಿಸುವಂಥಾದ್ದು. ನಮ್ಮ ಮಕ್ಕಳಿಗೂ ಸಂಗೀತ ಗೊತ್ತು ಅನ್ನುವಷ್ಟಾದರೆ ಸಾಕು ಎಂಬುದಷ್ಟೇ ಆಸೆ, ಹೆಚ್ಚಿನ ಅಪ್ಪ ಅಮ್ಮಂದಿರಿಗೆ. ಅವರು ತಲಸ್ಪರ್ಶಿಯಾಗಿ ಅಭ್ಯಸಿಸಿ ಶಾಸ್ತ್ರೀಯ ಅಂಶಗಳನ್ನು ಪರಿಚಯಿಸಿಕೊಳ್ಳಲಿ ಅನ್ನುವ ದೃಢಮನಸ್ಸು ಹೆಚ್ಚಿನವರಲ್ಲಿ ಕಾಣುತ್ತಿಲ್ಲ. ವಿದ್ಯಾರ್ಥಿಯೇ ಸ್ವಂತ ಆಸಕ್ತಿಯಿಂದ ತಲಸ್ಪರ್ಶಿಯಾಗಿ ಮುಂದುವರಿದ ಉದಾಹರಣೆ ಇಲ್ಲವೆ? ಇದೆ. ಆದರೆ ಸಂಗೀತದಿಂದ ಸಂಪಾದನೆ ಅಸಾಧ್ಯ ಅನ್ನುವ ಅಂಜಿಕೆ ಮಕ್ಕಳ ಅಪ್ಪ ಅಮ್ಮಂದಿರಲ್ಲಿದೆ.

♦ **ಇಂಥ ಸಂದರ್ಭಗಳಲ್ಲಿ 'ಇವನಿಗೆ/ಇವಳಿಗೆ ತಲಸ್ಪರ್ಶಿಯಾಗಿ ಕಲಿಸಲೇಬೇಕು, ಆದರೆ ಇವರು ಅದು ಬೇಡ ಅನ್ನುತ್ತಾರಲ್ಲಾ' ಅಂತ ನಿಮಗೆ ಅನಿಸಿದ್ದಿದೆಯೆ?**

- ತಲಸ್ಪರ್ಶಿಯಾಗಿ ಕಲಿಯುವ ಮಕ್ಕಳು ಕಲಿತೇ ಕಲಿಯುತ್ತಾರೆ. ಕಲಿಯ ಬಂದವರೆಲ್ಲಾ ಸಂಗೀತಗಾರರಾಗಲು ಸಾಧ್ಯವಾಗದು. ವಿದ್ಯಾರ್ಥಿಯಲ್ಲಿ ಉತ್ಸಾಹ, ಸೂಕ್ಷ್ಮತೆ, ಸದ್ಭಾವನೆ, ಚಿಂತನೆಯಿದ್ದಲ್ಲಿ ಮಾತ್ರ ಸಾಧ್ಯ.

♦ **ಹೆಣ್ಣು ಮಕ್ಕಳಿಗೆ ಸಂಗೀತ ಕಲಿಸಬೇಕೆಂದು ಬಯಸುವ ಹೆತ್ತವರು ಒಂದು ಹಂತದ ಬಳಿಕ, ಎಂದರೆ, ಮಕ್ಕಳ 12-15ನೆಯ ವಯಸ್ಸಿನ ಬಳಿಕ ಅದನ್ನು ನಿಲ್ಲಿಸಿದ್ದಿದೆಯೆ? ಆಗ ನಿಮಗೆ ಏನೆನ್ನಿಸಿದೆ?**

- ಎಸ್ಸೆಸ್ಸೆಲ್ಸಿ - ಕಾಲೇಜು ಅಭ್ಯಾಸದ ಹೊತ್ತಿಗೆ ಮಕ್ಕಳನ್ನು ಸಂಗೀತ ಪಾಠಕ್ಕೆ ಕಳುಹಿಸದಿರುವ ಉದಾಹರಣೆಗಳೆಷ್ಟೋ ಇವೆ. ಕಾರಣ, ಶಾಲಾ ಶಿಕ್ಷಣದಲ್ಲಿ ಹಿಂದೆ ಬೀಳಬಾರದು; ಕಾಲೇಜು ಶಿಕ್ಷಣ ಪಡೆದಲ್ಲಿ ಮುಂದೆ ಉದ್ಯೋಗ ಅಥವಾ ಮದುವೆ ಕಷ್ಟವಾಗಲಾರದೆಂಬ ಮನೋಭಾವ. ಬರೇ ಶಿಕ್ಷಣದಿಂದ ಏನಾಗುತ್ತದೆ? ಎಂಬ ಭಾವನೆ ಶೇಕಡಾ 90 ಮಂದಿ ತಾಯ್ತಂದೆಯರಲ್ಲಿದೆ. ಆದರೆ ಈಬಗ್ಗೆ ನಾವು, ಸಂಗೀತ ಶಿಕ್ಷಕರು ಏನೂ ಹೇಳಲಾರದವರಾಗಿದ್ದೇವೆ. ಅವರವರ ಮಕ್ಕಳು ಅವರವರು ಬಯಸಿದಂತೆ ಬೆಳೆದು ಬರಬೇಕಲ್ಲ. ಇಂತಹ ತಾಯ್ತಂದೆಯರನ್ನು ಮಕ್ಕಳು ಶಪಿಸಿದ್ದೂ ಇದೆ. ಯಾವುದೇ ವಿದ್ಯೆಯನ್ನು (ಕಲೆಗೆ ಸಂಬಂಧ ಪಟ್ಟದ್ದು) ಕಾಲೇಜು ಶಿಕ್ಷಣದೊಂದಿಗೇ ಜೊತೆಜೊತೆಯಾಗಿ ಕಲಿತುಕೊಳ್ಳಲು ಹೆಚ್ಚಿನ ಮಕ್ಕಳು ಸಮರ್ಥರಿದ್ದೂ ತಾಯ್ತಂದೆಯರೇ ಅವರನ್ನು ಧೃತಿಗೆಡಿಸುತ್ತಿದ್ದಾರೆ. ಕಾಲೇಜು ಶಿಕ್ಷಣದ ಜೊತೆಗೇ ನನ್ನ ಮಗಳಂದಿರು ಸಂಗೀತ ಅಭ್ಯಾಸ ಮಾಡಿದ್ದು, ಆ ಕ್ಷೇತ್ರದಲ್ಲಿ ಸಾಧನೆ ತೋರಿದ್ದಾರೆ, ತೋರುತ್ತಿದ್ದಾರೆ.

♦ **ಹೊಸ ಶಿಕ್ಷಣ ಪದ್ಧತಿ ಸಂಗೀತ, ಚಿತ್ರಕಲೆಯಂಥ ಆಸಕ್ತ ಕ್ಷೇತ್ರಗಳಲ್ಲಿ ಮುಂದುವರಿಯಬೇಕೆಂಬವರಿಗೆ ತೊಡಕನ್ನೇ ಒಡ್ಡುತ್ತಿದೆ ಎನ್ನುವವರೂ ಸಾಕಷ್ಟು ಮಂದಿ ಇದ್ದಾರೆ!**

- ನಮ್ಮ ಶಿಕ್ಷಣ ಪದ್ಧತಿ ಆಗಾಗ ಬದಲಾಗುತ್ತಿರುತ್ತದೆ. ಶಿಕ್ಷಣ ಕ್ಷೇತ್ರದ ಕಥೆ, 'ಹಲವು ಸಮಗಾರರು ಸೇರಿ ಚರ್ಮದ ಹದಗೆಡಿಸಿದರು' ಎಂಬ ಗಾದೆಯನ್ನು ನೆನಪಿಸುತ್ತದೆ. ಹೀಗಿದ್ದರೂ ಯಾವುದೋ ರೀತಿಯಲ್ಲಿ ಕಲೆಗಾರರು, ಸಾಧಕರು, ಅಭ್ಯಾಸಿಗಳೂ ಬರುತ್ತಲೇ ಇರುತ್ತಾರೆ!

♦ **ಸಂಗೀತ ಪಠ್ಯಗಳು ಹೇಗಿದ್ದರೆ ಚೆನ್ನ?**

- ಪರಂಪರಾಗತವಾಗಿ ಬಂದಿರುವ ಪಠ್ಯಗಳು ಇಂದಿನ ಪೀಳಿಗೆಗೆ ಆಕರ್ಷಕವಾಗಿ ಇಲ್ಲ. ಸಂಗೀತಾಭ್ಯಾಸಿಗಳು ತಾವು ತಿಳಿದಿರುವ ಭಾಷೆಯ ವಿವಿಧ ಗಾನಬಂಧಗಳನ್ನು ಅರ್ಥವಿಸಿಕೊಂಡು ಸಂಗೀತದಲ್ಲಿ ಬಳಸಬೇಕಾಗಿದೆ. ಹಿಂದಿನ ಪಠ್ಯಗಳ ಅಭ್ಯಾಸಗಾನ ಪದ್ಧತಿಯ ಜೊತೆಗೇ ಕರ್ನಾಟಕದ ದಾಸಪರಂಪರೆಯಲ್ಲಿ ಮೂಡಿಬಂದಿರುವ ಉಗಾಭೋಗ, ಸುಳಾದಿ, ದೇವರನಾಮ, ಕನ್ನಡ ಕೃತಿ, ಭಕ್ತಿಗೀತೆ, ಭಾವಗೀತೆ, ತ್ರಿಪದಿಗಳು, ವಚನ ಸಾಹಿತ್ಯ, ಪಂಪ,

ರನ್ನ, ಪೊನ್ನ ಮೊದಲಾದ ಕವಿಗಳ ಸಾಹಿತ್ಯವನ್ನೂ ಕರ್ನಾಟಕ ಸಂಗೀತದಲ್ಲಿ ಬಳಸಿಕೊಳ್ಳುವಂತಾಗಬೇಕು. ಕನ್ನಡದ ಪರಂಪರೆ ಶತಶತಮಾನಗಳಷ್ಟು ಪ್ರಾಚೀನವಾದದ್ದು. ಆ ಕವಿಗಳೆಲ್ಲರ ಕೃತಿಗಳು ಆದ್ಯತೆಯಲ್ಲಿ ನಮ್ಮ ಸಂಗೀತ ಪಠ್ಯದಲ್ಲಿ ಸೇರ್ಪಡೆಯಾಗಬೇಕು. ಹೀಗಾದಲ್ಲಿ ಮಾತ್ರವೇ ಭಾಷೆ, ಸಾಹಿತ್ಯ, ಸಂಗೀತ ಎಲ್ಲವೂ ಜೊತೆಜೊತೆಯಾಗಿ ಮುಂದುವರಿಯಲು ಸಾಧ್ಯ.

♦ **ನೀವು ಹೆಮ್ಮೆ ಪಡುವಂಥ ಶಿಷ್ಯರು-ಶಿಷ್ಯೆಯರು ನಿಮಗೆ ಸಿಕ್ಕಿದ್ದಾರೆಯೆ? ಅವರು ಮುಂದೆ ಈ ವಿದ್ಯೆಯನ್ನು ಸಾರ್ಥಕವಾಗಿ ಮುಂದುವರಿಸಿಕೊಂಡು ಹೋಗಿದ್ದಾರೆಯೆ?**

- ನಾನು ಹೆಮ್ಮೆ ಪಡುವಂಥ ಶಿಷ್ಯರು ನನಗೆ ಸಿಕ್ಕಿದ್ದಾರೆ. ಆದರೆ ಕೆಲವರಿಗೆ ಅದರಲ್ಲಿ ಪೂರ್ಣತೆ ಸಾಧಿಸುವಲ್ಲಿ ಅವರದೇ ಆದ ಸಾಂಸಾರಿಕ, ಲೌಕಿಕ ತಾಪತ್ರಯಗಳು ಎದುರಾದವು. ಅವರು ಈ ಕಾರಣಗಳಿಂದ ಮುಂದುವರಿಸದೇ ಹೋದರು. ಇನ್ನು ಕೆಲವರು ಈ ವಿದ್ಯೆಯನ್ನು ಸಾರ್ಥಕವಾಗಿ ಮುಂದುವರಿಸಿ, ಸಾಧಿಸಿದವರೂ ಇದ್ದಾರೆ. ಸಾಧಿಸುತ್ತಲೂ ಇದ್ದಾರೆ. ಕನ್ನಡ ಭಾಷೆಯಲ್ಲಿನ ಕೃತಿಗಳನ್ನು, ದೇವರನಾಮಗಳನ್ನು, ವಚನಗಳನ್ನು, ಸುಳಾದಿಗಳನ್ನು, ಭಜನೆಗಳನ್ನು, ಭಾಮಿನಿ-ಸಾಂಗತ್ಯ-ತ್ರಿಪದಿ-ತಿಲ್ಲಾನ-ಸಂಸ್ಕೃತ ರಚನೆಗಳನ್ನೂ ಲೀಲಾಜಾಲವಾಗಿ ಹಾಡಿ ರಂಜಿಸುವ ಅನೇಕರಿದ್ದಾರೆ.

♦ **ಸಂಗೀತ ಕಲಿಸುವ ವಿಧಾನ ನಮ್ಮ ಕರ್ನಾಟಕದಲ್ಲಿ ತೃಪ್ತಿಕರವಾಗಿ ಇದೆಯೇ?**

- ನಮ್ಮ ಕರ್ನಾಟಕದಲ್ಲಷ್ಟೇ ಅಲ್ಲ, ಎಲ್ಲೆಡೆಯೂ ತೃಪ್ತಿಕರವಾಗಿ ಇಲ್ಲ! ಇಂದಿನ ಸಂಗೀತ ಶಿಕ್ಷಣ ಕ್ರಮವನ್ನು ಗಮನಿಸುವಾಗ ಹಿಂದಿನ ಗುರುಕುಲ ಪದ್ಧತಿಯ ಶಿಕ್ಷಣವೇ ಶ್ರೇಷ್ಠ ಎನ್ನುವ ಭಾವನೆ ಬರುತ್ತದೆ. ಇಂದು ಶಿಕ್ಷಣ ಪದ್ಧತಿಯಲ್ಲೂ, ಪ್ರತಿಭಾನ್ವೇಷಣೆಯಲ್ಲೂ ರಾಜಕೀಯವೇ ಕಾಣಿಸುತ್ತಿದೆ!

♦ **ಅಂದರೆ?**

- ಇಲ್ಲೂ ಕೆಲವು ಅನಿಷ್ಟ ಕ್ರಮಗಳು ಕಾಣಿಸಿಕೊಳ್ಳುತ್ತಿವೆ. ನಮ್ಮ ಇಂದಿನ ಶಿಕ್ಷಣ ಪದ್ಧತಿಯಂತೆಯೇ ಸಂಗೀತ ಶಿಕ್ಷಣ ಪದ್ಧತಿಯೂ ಗೊಂದಲಮಯವಾಗಿದೆ!

♦ **ಸಂಗೀತ ಕಲಿಸುವಾಗ ನಿಗದಿತ ಪಠ್ಯಬೋಧನೆಗಿಂತ 'ಆಚೆಗೆ' ಎಂದಾದರೂ ನೀವು ಹೆಜ್ಜೆ ಇಟ್ಟದ್ದಿದೆಯೆ? 'ಹಾಗೆ ಅತಿಕ್ರಮಿಸಲಾರೆ' - ಅನ್ನುವ ಶಿಕ್ಷಕರು ನಿಮಗೆ ಎದುರಾದದ್ದಿದೆಯೆ?**

- ಸಂಗೀತ ಕಲಿಸುವಾಗ ನಾನು ನಿಗದಿತ ಪಠ್ಯಬೋಧನೆಗಿಂತ 'ಆಚೆಗೆ' ಸದಾ ಹೆಜ್ಜೆ ಇಟ್ಟಿರುವುದು ಸತ್ಯ.

ಸಂಗೀತ ಕಲಿಕೆಯಲ್ಲಿ ವರ್ಷಪೂರ್ತಿಗೊಳ್ಳದೆ ಯಾವ ಶಿಕ್ಷಕನೂ ಹಾಡನ್ನಾಗಲಿ, ವಚನ, ಸುಳಾದಿ, ಭಾವಗೀತೆಗಳನ್ನಾಗಲಿ ಕಲಿಸುತ್ತಿಲ್ಲ ಎನ್ನುವ ವಿಚಾರವನ್ನು ಹಲವರಿಂದ ಕೇಳಿ ಬಲ್ಲೆ.

ಸಂಗೀತ ಪಾಠವೆಂದರೆ ಸರಳೆವರಸೆ, ಜಂಟಿವರಸೆ, ಅಲಂಕಾರ, ಗೀತೆ, ಸ್ವರಜತಿ, ಲಕ್ಷಣಗೀತೆ, ಜತಿಸ್ವರದಲ್ಲೇ ಸುದೀರ್ಘ ಸಮಯವನ್ನು ವ್ಯಯಿಸುವ ಶಿಕ್ಷಕರಿದ್ದಾರೆ. ಎರಡು ವರ್ಷಗಳ ಅಭ್ಯಾಸದ ಬಳಿಕವೇ 'ವರ್ಣ' ಪಾಠ ಆರಂಭ. ಈ ರೀತಿ ನಿಗದಿತ ಪಠ್ಯವನ್ನೇ ಆಧರಿಸಿ ಕಲಿಸುವ ಶಿಕ್ಷಕರೇ ಜಾಸ್ತಿ. ಸಂಗೀತವೆಂದರೆ ಇವಿಷ್ಟೇ ಅಲ್ಲ! ಇದು ಸಂಗೀತದ ಅಭ್ಯಾಸ ಗಾನ ಭಾಗ ಅಷ್ಟೇ. ಈ ಭಾಗವನ್ನು ಅಲ್ಪಕಾಲದಲ್ಲಿ ಅಭ್ಯಸಿಸಿ, ಸಂಗೀತದ ಮಾಧುರ್ಯ ಗಾನದ ಕೃತಿ, ಕೀರ್ತನೆ, ದೇವರನಾಮ, ವಚನ, ಭಾಮಿನಿ ಷಟ್ಪದಿ, ಸಂಸ್ಕೃತ ಸ್ತೋತ್ರಗಳನ್ನು ಹಾಡಲು ಸಮರ್ಥರಿದ್ದರೆ, ಸಂಗೀತ ಪಠ್ಯದಿಂದ 'ಆಚೆಗೆ' ಸಾಗಿ ಕಲಿಸಿಕೊಟ್ಟದ್ದಿದೆ. ಹಾಗೆ ಕಲಿತ ವಿದ್ಯಾರ್ಥಿಗಳಿಂದ ಸಹೃದಯರೆಲ್ಲ ಮೆಚ್ಚುವ ರೀತಿಯ ಅನೇಕ ಸಂಗೀತ ಕಾರ್ಯಕ್ರಮಗಳನ್ನು ನಾನು ನಡೆಸಿದ್ದಿದೆ.

♦ **ಮಕ್ಕಳಿಗೆ ಸಂಗೀತ ಕಲಿಸುವಾಗ, ಒಂದೊಂದು ಸಲ, ಶಾಸ್ತ್ರೀಯವಾದ ಈ ವಿದ್ಯೆಯನ್ನು ಕಲಿಸುವುದೆಷ್ಟು ಕಷ್ಟ - ಅನ್ನಿಸಿದ್ದಿದೆಯೆ?**

- ಅನ್ನಿಸಿದ್ದಿದೆ. ಕಿರಿಯರಲ್ಲೂ, ಹಿರಿಯರಲ್ಲೂ! ಆದರೆ ಹೆಚ್ಚಿನ ಮಂದಿಯಲ್ಲಿ ಇಂಥ ಕಷ್ಟ ನನಗೆ ಕಂಡುಬರಲಿಲ್ಲ.

♦ **ಸಂಗೀತ ಪರೀಕ್ಷೆಗಳ ನಿರೀಕ್ಷಕರಾಗಿ ಕರ್ನಾಟಕದಾದ್ಯಂತ ಸಂಚರಿಸಿದವರು ನೀವು. ಈ ಸಂದರ್ಭಗಳಲ್ಲಿ ನಿಮಗಾದ ಅನುಭವಗಳ ಬಗ್ಗೆ ಹೇಳುತ್ತೀರಾ?**

- ಪರೀಕ್ಷಾ ನಿರೀಕ್ಷಕನಾಗಿ ಸಂಚಾರ ಮಾಡುವಾಗ, ಮೊದಲ ಎರಡು ವರ್ಷಗಳು ಉತ್ತಮ ರೀತಿಯಲ್ಲೇ ಸಾಗಿದವು. ಆ ಬಳಿಕ ಪ್ರತಿವರ್ಷವೂ ಒಂದೊಂದು ಕೇಂದ್ರದಲ್ಲೂ ಕಹಿ ಅನುಭವಗಳಾದವು. ಪರೀಕ್ಷೆಗೆ ತರಬೇತಿಗೊಳಿಸಿದ ಶಿಕ್ಷಕರು ಪರೀಕ್ಷಾ ಕೊಠಡಿಯಲ್ಲೇ ಕುಳಿತು ಕೇಳುವ ಆಸೆ ವ್ಯಕ್ತಪಡಿಸಿದ್ದು, ತಮ್ಮ ತಮ್ಮ ವಿದ್ಯಾರ್ಥಿಗಳ ಹಿನ್ನೆಲೆ (ಯಾರ ಮಗ/ಮಗಳು, ಅವರ ಪರಂಪರೆಯೇನು ಇತ್ಯಾದಿ) ತಿಳಿಸಿ, ಉತ್ತಮ ಶ್ರೇಣಿಯನ್ನೇ ನೀಡುವಂತೆ ಒತ್ತಾಯಿಸಿದ್ದು, ನಿರೀಕ್ಷಕರ ಮೇಲೆಯೇ ಪ್ರಭಾವ/ಪ್ರಭುತ್ವ ತೋರಲು ಆರಂಭಿಸಿದ್ದು (ಶ್ರೇಣಿ ನೀಡುವುದಕ್ಕಾಗಿ ಆಸೆ-ಆಮಿಷ ತೋರಿದ್ದು) ಇತ್ಯಾದಿ. ಪರೀಕ್ಷಾ ನಿಯಮದ ಪ್ರಕಾರ ವಿದ್ಯಾರ್ಥಿ ಹಾಗೂ ಮೂವರು ನಿರೀಕ್ಷಕರ ಹೊರತಾಗಿ ಯಾರೂ ಇರಬಾರದೆಂಬ ನಿಯಮವನ್ನೇ ಪಾಲಿಸಬೇಕೆಂದು ಖಡಾಖಂಡಿತವಾಗಿ ಸಾರಿದಾಗ, 'ಇದೇನ್ರೀ, ಉಡುಪಿ ಮಂದಿಗೆ ಹೋಟೆಲ್, ವ್ಯಾಪಾರ ಮಾತ್ರ ಅಂತ ತಿಳಿದುಕೊಂಡಿದ್ದೆವು. ಈಗ ಸಂಗೀತ ಪರೀಕ್ಷೆಗೆ ನಿರೀಕ್ಷಕರಾಗಿಯೂ ಬಂದಿದ್ದೀರಲ್ರೀ, ಅಬ್ಬಬ್ಬಾ' ಎಂಬ ಉದ್ಗಾರ ಕೇಳಿಸಿಕೊಂಡದ್ದೂ ಇದೆ.

'ಸಂಗೀತದ ತವರೂರು' ಎಂಬ ಹೆಗ್ಗಳಿಕೆಯ ಮೈಸೂರಿನಲ್ಲಂತೂ ಸಂಗೀತ ಗುರುಗಳ ಉದ್ಧಟತನವನ್ನು ಇತರೆಡೆಗಳಿಗಿಂತ ಹೆಚ್ಚಾಗಿ ಗುರುತಿಸಿದ್ದೇನೆ.

ನಿರೀಕ್ಷಕನಾಗಿ ನಡೆಸಿದ ಕಾರ್ಯಭಾರವನ್ನು ಮೆಚ್ಚಿ ಅಭಿನಂದಿಸಿದವರೂ ಇದ್ದಾರೆ, ಇಲ್ಲವೆಂದಲ್ಲ.

♦ **ಶಾಸ್ತ್ರೀಯ ಗಾಯಕನೊಬ್ಬ ನಿರೀಕ್ಷಿತ ಚೌಕಟ್ಟಿನೊಳಗೆ ಸ್ವಂತಿಕೆ ತೋರುವುದು ಸಾಧ್ಯವೆ? ಹೀಗೆ ತನ್ನದೇ ಏನನ್ನಾದರೂ ತೋರಿಸುವಾಗ ಸಾಂಪ್ರದಾಯಿಕ ಸಂಹಿತೆಗಳು ಅವನಿಗೆ ತೊಡಕಾಗುವುದಿಲ್ಲವೆ?**

- ನಿರೀಕ್ಷಿತ ಚೌಕಟ್ಟಿನೊಳಗೆ ಸ್ವಂತಿಕೆ ತೋರುವುದು ಅಸಾಧ್ಯವಾಗಲಾರದು. ಏನೇ ಸಾಂಪ್ರದಾಯಿಕ ಸಂಹಿತೆಗಳಿದ್ದರೂ ಅವನು ಅಭಿವ್ಯಕ್ತಿಗೊಳಿಸುವ ಶಾಸ್ತ್ರೀಯ ಗಾಯನಕ್ಕೆ ತೊಡಕಾಗದು. ಅದರೊಂದಿಗೆ ತನ್ನದೇ ಆದ ಏನನ್ನಾದರೂ ತೋರಿಸಲು ಸಾಧ್ಯ. ಅದು ಆಯಾ ಗಾಯಕನ ಯೋಚನೆ ಹಾಗೂ ನಿರ್ವಹಣೆಗೆ ಬಿಟ್ಟ ವಿಚಾರ!

♦ **ಈ ನಿಟ್ಟಿನಲ್ಲಿ ನೀವು ಪ್ರಯತ್ನ ನಡೆಸಿದ್ದೀರಾ?**

- ನಾನು ಸಾಂಪ್ರದಾಯಿಕ ಕಛೇರಿಯನ್ನು ನಿರ್ವಹಿಸಿದ ಅನೇಕ ವೇದಿಕೆಗಳಲ್ಲಿ (ಗುರುವಾಯೂರು, ಕಾಸರಗೋಡು, ಚೆನ್ನೈ, ಮುಂಬಯಿ, ಹೈದರಾಬಾದ್, ವಿಶಾಖಪಟ್ಟಣ, ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ) ವರ್ಣ, ಕೃತಿ, ಕೀರ್ತನೆ, ದೇವರನಾಮ, ತಿಲ್ಲಾನ, ರಾಗಮಾಲಿಕೆ, ಆಲಾಪನೆ, ಸ್ವರಪ್ರಸ್ತಾರ, ನೆರವಲ್‌ನೊಂದಿಗೆ ವಚನ, ಸುಳಾದಿ, ಉಗಾಭೋಗ, ಸ್ತೋತ್ರಗಳ ಜೊತೆಗೆ ಭಾವಗೀತೆಗಳನ್ನೂ ಹಾಡಿದ್ದಿದೆ. ಭಾವಗೀತೆಗಳಾಗಲಿ, ತ್ಯಾಗರಾಜ, ಶ್ಯಾಮಾಶಾಸ್ತ್ರಿ, ದೀಕ್ಷಿತರು ಇವರೆಲ್ಲರ ರಚನೆಗಳಾಗಲಿ ದಾಸಪಂಥವನ್ನೇ ಪ್ರತಿಬಿಂಬಿಸುತ್ತವೆ. ಅವು ದಾಸಶ್ರೇಷ್ಠರ ಕೃತಿ-ಕೀರ್ತನೆಗಳಿಗಿಂತ ಮಿಗಿಲಾದವುಗಳೇನಲ್ಲ. ಕರ್ನಾಟಕ ಸಂಗೀತದಲ್ಲಿ ಭಾವಗೀತೆ, ಭಕ್ತಿಗೀತೆ, ಸ್ತೋತ್ರ ಸಂಗೀತ, ಹರಿಭಕ್ತಿಸಾರ ಇವೆಲ್ಲವನ್ನೂ ಅತಿ ಗಂಭೀರವಾಗಿ ಹಾಡಿ ರಂಜಿಸಬಹುದಾಗಿದೆ. ಎಲ್ಲವೂ ಶಾಸ್ತ್ರೀಯ ಸಂಗೀತಗಳೇ! ಇವೆಲ್ಲದರಲ್ಲೂ ರಾಗ-ತಾಳ-ಸಾಹಿತ್ಯಭಾವ ಎಲ್ಲವೂ ಸೇರಿಕೊಂಡಿವೆ. ಇವುಗಳನ್ನು ಹಾಡಿ ತೋರಿಸಿದರೆ ಆಪ್ಯಾಯಮಾನ ಸಂಗೀತವೇ ಆಗಿರುತ್ತದೆ. ತ್ಯಾಗರಾಜರ ತೆಲುಗು ಕೃತಿ, ಶ್ಯಾಮಾಶಾಸ್ತ್ರಿಗಳ ಕೃತಿ, ದೀಕ್ಷಿತರ ಕೃತಿ ಇವುಗಳಂತೆಯೇ ಕನ್ನಡದ ವಿವಿಧ ಬಗೆಯ ಪದ್ಯಗಳನ್ನೂ ಗಾಯಕ ಹಾಡಿ ತೋರಿಸಬಹುದು. ಈ ನಿಟ್ಟಿನಲ್ಲಿ ನನ್ನಂಥ ಅನೇಕರು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ.

ಪರಂಪರಾಗತವಾಗಿ ಬಂದಿರುವ ಹಳೆ ತಲೆಮಾರಿನ ಗಾಯಕರನೇಕರು ತೆಲುಗು, ತಮಿಳು ಸಾಹಿತ್ಯ ಕೃತಿಗಳಿಂದಲೇ ಆರಂಭಿಸಿ ವಿಸ್ತೃತ ರಾಗಾಲಾಪನೆ, ನೆರವಲ್, ಸ್ವರಪ್ರಸ್ತಾರಗಳನ್ನಷ್ಟೇ ಮಾಡಿ 'ಸಂಗೀತ ಕಛೇರಿ ಎಂದರೆ ಇದೇ' ಎನ್ನುವ ಹಾಗೆ ಮಾಡಿದ್ದಾರೆ. ಯಾವ ಕಛೇರಿಯಲ್ಲೂ ಒಂದೇ ಒಂದು ದಾಸರಪದ - ಪುರಂದರ-ಕನಕ-ವಾದಿರಾಜರ, ನರಹರಿತೀರ್ಥರ ಪದ, ಹರಿಭಕ್ತಿಸಾರ, ವಚನ, ತ್ರಿಪದಿಯನ್ನೂ ಹೇಳದೇ ಎದ್ದುಬಿಡುವವರೇ ಜಾಸ್ತಿ. ಕರ್ನಾಟಕ ಸಂಗೀತದ ಆದಿಗುರುವೇ ಪುರಂದರದಾಸರು. ಈ ಕ್ಷೇತ್ರಕ್ಕೆ ಇತರ ದಾಸವರೇಣ್ಯರ ಕೊಡುಗೆ ಅಪಾರ. ಇದನ್ನು ನಾವು ಮರೆಯಬಹುದೆ?

ಜನಪ್ರಿಯ ಕೃತಿಗಳನ್ನು ಕೇಳಿರುವ ಮಂದಿ, ಮತ್ತೆ ಮತ್ತೆ ನಡೆಯುವ ಕಛೇರಿಗಳಲ್ಲೂ ಅದನ್ನೇ ಕೇಳುತ್ತಾರೆ. ಅದಷ್ಟೇ ಸಂಗೀತ ಎಂಬ ಅಭಿಪ್ರಾಯ ರೂಪುಗೊಂಡಿದೆ! ನಾನು ನನ್ನ ಕಛೇರಿಯನ್ನು 'ಶ್ರೀ ಗಣನಾಥ'ದಿಂದ ಆರಂಭಿಸಿ, ದಾಸರಪದಗಳನ್ನೇ 'ಕೃತಿ'ಯ ರೀತಿಯಲ್ಲೇ ಹಾಡಿ, ರಾಗಾಲಾಪನೆ, ನೆರವಲ್, ಸ್ವರಪ್ರಸ್ತಾರದೊಂದಿಗೆ ನಿರ್ವಹಿಸಿದ್ದಿದೆ. ದಾಸರ ಹಾಡುಗಳನ್ನೇ ಆಯ್ದುಕೊಂಡು ರಾಗಮಾಲಿಕೆ, ಮಂಗಳ ಸ್ತೋತ್ರದೊಂದಿಗೆ ಕಛೇರಿ ಮಾಡಿದ್ದಿದೆ. ಹೀಗೆ ಈ ಹಾಡುಗಳ ಮೂಲಕವೇ ಆರಂಭ ಮಾಡಿ ಮುಂದುವರಿಸಲು ನನಗೆ ಕನ್ನಡದ ಜನರ ಆಸಕ್ತಿ, ಆಶ್ರಯಗಳ ಬಲ ದೊರಕದೆ ಹೋಯಿತು! ಆದರೆ ಬಲ್ಲವರನೇಕರು ಈ ಕ್ರಮವನ್ನು ಮೆಚ್ಚಿಕೊಂಡದ್ದೂ ಇದೆ.

♦ **ಸಂಗೀತ ಕಛೇರಿಯ ಅವಧಿ ಈಗೀಗ ಬಹಳ ಹ್ರಸ್ವವಾಗುತ್ತ ಬರುತ್ತಿದೆ. ಇದರಿಂದ, ಕಾರ್ಯಕ್ರಮ ನೀಡುವ ವಿದ್ವಾಂಸರ ಪ್ರತಿಭೆ ಪೂರ್ಣರೂಪದಲ್ಲಿ ಪ್ರಕಟಗೊಳ್ಳಲು ಸಾಧ್ಯವಿಲ್ಲ ಎಂಬ ಮಾತೊಂದಿದೆ. ನೀವೇನನ್ನುತ್ತೀರಿ?**

- ಅವಧಿ ಮುಖ್ಯವಲ್ಲ. ಲಭಿಸಿದ ಸಮಯಾವಕಾಶದಲ್ಲಿ ತನ್ನ ಪ್ರತಿಭೆ ಪ್ರಕಟ ಮಾಡಬಹುದಾದ ಸಾಮರ್ಥ್ಯ ಗಾಯಕನಿಗಿರಬೇಕು! ಪ್ರತಿಭೆ ಪ್ರಕಟಗೊಳ್ಳಬೇಕಾದರೆ ಸುದೀರ್ಘ ಅವಧಿಯೇ ಬೇಕು ಎಂದೇನಿಲ್ಲ. ಹಿಂದೆ, ಪೂರ್ಣಾವಧಿ ಕಛೇರಿ ಮೂರು ತಾಸುಗಳಿಗೂ ಮಿಕ್ಕಿ ನಡೆಯುತ್ತಿತ್ತು. ಗಾಯಕ ಸಮರ್ಥನಿದ್ದಲ್ಲಿ ಒಂದೇ ಗಂಟೆಯ ಅವಕಾಶ ದೊರೆತರೂ ಅವನು 'ಏನು' ಎನ್ನುವುದು ಶ್ರೋತೃಗಳಿಗೆ ಅರಿವಾಗಿಯೇ ಆಗುವುದು.

ನಾನು ಇಂಥ ಅನೇಕ ಕಡಿಮೆ ಸಮಯಾವಧಿಯ ಕಛೇರಿಗಳನ್ನು ಆಲಿಸಿ ಸಂತೋಷಗೊಂಡದ್ದಿದೆ.

♦ **ವ್ಯವಧಾನವಿಲ್ಲದ ಇಂದಿನ ದಿನಗಳಲ್ಲಿ ಸಂಗೀತ ಕಾರ್ಯಕ್ರಮದ, ಅದರಲ್ಲೂ ಶಾಸ್ತ್ರೀಯ ಸಂಗೀತ ಕಛೇರಿಯ ಏರ್ಪಾಡು ಒಂದು ಸವಾಲಿನ ವಿಷಯ ಅಂತ ನಿಮಗೆ ಅನ್ನಿಸಿದೆಯೆ?**

- ಸರಿಯಾದ ಪ್ರಚಾರ ನೀಡಿದಲ್ಲಿ, ಆಸಕ್ತರಿಗೆ ಮುಂದಾಗಿ ತಿಳಿಸಿ ಆಹ್ವಾನಿಸಿದಲ್ಲಿ ಶಾಸ್ತ್ರೀಯ ಸಂಗೀತವನ್ನು ಕೇಳಲೂ ಜನರು ಬಂದೇ ಬರುತ್ತಾರೆ. ಅನುಗೊಳಿಸುವ ವಿಧಾನವೇನು ಅನ್ನುವುದು ಮುಖ್ಯ.

ಹಲವು ವರ್ಷಗಳಿಂದ ನನ್ನ ಮನೆಯಲ್ಲೇ ವರ್ಷಕ್ಕೊಂದಾದರೂ ಕಛೇರಿ ನಡೆಸುತ್ತಿದ್ದೇನೆ. ಸಂಗೀತಾಸಕ್ತರು ಬರುತ್ತಾರೆ, ಮನೆತುಂಬ ಕುಳಿತು ಕೇಳುತ್ತಾರೆ. ಮಾತ್ರವಲ್ಲ, ಕಲಾವಿದರಿಗೆ ತಾವೂ ಏನಾದರೂ ಉಡುಗೊರೆ ನೀಡುವುದುಂಟು.

ಇದೊಂದು ಸವಾಲು ಎಂದು ನನಗೆ ಎಂದೂ ಅನ್ನಿಸಿಲ್ಲ!

♦ **ಭಕ್ತಿಗೀತೆ, ಜನಪದಗೀತೆ, ರಂಗಗೀತೆ, ಸಿನಿಮಾ ಹಾಡುಗಳಿಗೂ, ಅಲ್ಲದೆ ಎಷ್ಟೋ ಕ್ಯಾಸೆಟ್‌ಗಳ ನಿರ್ಮಾಣದಲ್ಲೂ ಸಂಗೀತ ನಿರ್ದೇಶನವಿತ್ತವರು ನೀವು. ಶಾಸ್ತ್ರೀಯ ಗಾಯನ, ಸುಗಮ ಸಂಗೀತ ಅಂತ ವಿಭಾಗ ಮಾಡಿ ನೋಡುವವರಿದ್ದಾರಲ್ಲ, ನೀವವರಿಗೆ ಏನು ಹೇಳಬಯಸುತ್ತೀರಿ?**

- ಈ ರೀತಿ ವಿಭಾಗ ಮಾಡಿ ನೋಡುವುದು ಸರಿಯಲ್ಲ. ಯಾರು ಯಾವುದನ್ನೇ ಹಾಡಲಿ, ಅದಕ್ಕೊಂದು ರಾಗ ಬೇಕಲ್ಲ. ತಾಳ ಇರಬೇಕಲ್ಲ. ಭಾವ ಬರಬೇಕಲ್ಲ. ಹಾಗಾದರೇನೇ ಸಂಗೀತ.

ಸಂಗೀತ ಹಾಡಲು ಬೇಕಾಗಿರುವುದು ಶ್ರುತಿ, ಲಯ, ತಾಳದೊಂದಿಗೆ ಉತ್ತಮ ಸಾಹಿತ್ಯ. ಶಾಸ್ತ್ರೀಯ ಗಾಯನದಲ್ಲಿರುವ ಎಲ್ಲ ಗುಣಗಳೂ ಜನರು ನಾನಾ ಹೆಸರಲ್ಲಿ ಕರೆಯುವ ಹಾಡಿನಲ್ಲೂ ಇವೆ.

ಭಾವಗೀತೆ, ದೇವರನಾಮ, ವಚನ ಇನ್ನಿತರ ರಚನೆಗಳನ್ನು ಹಾಡಿದಾಗ 'ಸುಗಮ' ಅಂತ ಹೆಸರಿಸಿ ತ್ಯಾಗರಾಜ, ಶ್ಯಾಮಾಶಾಸ್ತ್ರಿಗಳಂಥವರ, ದೀಕ್ಷಿತರಂಥವರ ರಚನೆಗಳನ್ನು 'ಶಾಸ್ತ್ರೀಯ ಸಂಗೀತ' ಅಂತ ಹೆಸರಿಸುವ ಪರಿಪಾಠ ಆರಂಭವಾಗಿದೆ. ಇದರಲ್ಲಿ ಅರ್ಥವಿದೆಯೆಂದು ನನಗೆ ಕಾಣಿಸುತ್ತಿಲ್ಲ. ಹೀಗೆ ವಿಭಾಗ ಮಾಡಿ ನೋಡುವವರನ್ನು ಬುದ್ಧಿಜೀವಿಗಳೆನ್ನೋಣವೇ, ಅಥವಾ ಬಲು ಬುದ್ಧಿವಂತರೆನ್ನೋಣವೇ?

ಭಾರತೀಯ ಸಂಗೀತದ ಘನಪರಂಪರೆಯಾದ ಕರ್ನಾಟಕ ಸಂಗೀತದ ಮೂಲಪುರುಷ, ಅರ್ಥಾತ್ ಆದಿಗುರುವೆನ್ನಿಸಿಕೊಂಡವರು ಪುರಂದರದಾಸರು. ತ್ಯಾಗರಾಜರು, ದೀಕ್ಷಿತರು, ಶ್ಯಾಮಾಶಾಸ್ತ್ರಿಗಳನ್ನೊಳಗೊಂಡಂತೆ ಕರ್ನಾಟಕ ಸಂಗೀತದ ಎಲ್ಲ ವಾಗ್ಗೇಯಕಾರರೂ ಸಂಗೀತಾಭ್ಯಾಸ ನಡೆಸಿರುವುದು ಅವರು ಹಾಕಿಕೊಟ್ಟ ಹಾದಿಯಲ್ಲೇ. ಹೀಗಿದ್ದೂ ಅವರ ರಚನೆಗಳನ್ನು ಹಾಡಿದರೆ ಲಘುಸಂಗೀತ ಅನ್ನುತ್ತಾರಲ್ಲ, ಇದೇಕೆ ಹೀಗೆ? ಇದು ಪ್ರಾಯಶಃ ಪಾಶ್ಚಾತ್ಯ ಪ್ರಭಾವದ ನುಡಿಬಳಕೆ. ಲೈಟ್ ಮ್ಯೂಸಿಕ್, ಲೈಟ್ ಸ್ಮೈಲ್, ಲೈಟ್ ಟಾಕ್ - ಇಂಥ ಪ್ರಯೋಗಗಳು ನಮ್ಮವಲ್ಲ; ಇಂಗ್ಲೀಷರಿಂದ ಪಡೆದುಕೊಂಡಂಥವು.

ಯಾವುದೇ ಹಾಡಿರಲಿ, ಅದನ್ನು ಹಾಡಲು - ಆಗಲೇ ಹೇಳಿದಂತೆ - ರಾಗ, ತಾಳ, ಲಯ ಇದ್ದು ರಚನೆಯು ಭಾವಪೂರ್ಣವಾಗಿರಬೇಕು. ಭಕ್ತಿಗೀತೆ, ಭಾವಗೀತೆ, ದಾಸರಪದ, ವಚನ, ಷಟ್ಪದಿ, ತ್ರಿಪದಿ... ಕೊನೆಗೆ ಚಿತ್ರಗೀತೆಯನ್ನೇ ತೆಗೆದುಕೊಳ್ಳಿ, ಇವೆಲ್ಲ ಶಿಷ್ಟಸಾಹಿತ್ಯಗಳು. ಇವುಗಳಿಗೆ ನೀಡಿದ ಸಂಗೀತ ಹೇಗೆ ಲಘುಸಂಗೀತವಾಗುತ್ತದೆ?

ಕ್ಯಾಸೆಟ್ ನಿರ್ಮಾಣದಲ್ಲೂ ಅಷ್ಟೇ - ದಾಸರ ಕೀರ್ತನೆಗಳನ್ನಾಗಲಿ, ಕವಿಗಳಿಂದ ರಚಿತವಾದ ಭಾವಗೀತೆ, ಭಕ್ತಿಗೀತೆಗಳನ್ನಾಗಲಿ ಹಾಡಬೇಕಿದ್ದರೆ ರಾಗ-ತಾಳ-ಲಯ-ಭಾವಗಳು ಇದ್ದೇ ತೀರಬೇಕು. ಇವುಗಳಲ್ಲಿರುವ ಸಾಹಿತ್ಯ ಭಾವಕ್ಕನುಗುಣವಾದ ರಾಗಗಳನ್ನು ಸಂಯೋಜಿಸಿ ಸಂಗೀತದಲ್ಲಿರತಕ್ಕ ತಾಳವನ್ನೇ ಅಳವಡಿಸಿ ಸಂಗೀತ ನಿರ್ದೇಶಕನೊಬ್ಬ ತನ್ನ ಕೆಲಸವನ್ನು

ನಿರ್ವಹಿಸುತ್ತಾನೆ. ಇವೆಲ್ಲವನ್ನು ಹಾಡುವುದೂ, ಮಾಡುವುದೂ ಸುಲಭದ ಕೆಲಸವೇನಲ್ಲ. ಸರಿಯಾದ ಜ್ಞಾನವಂತನಿಗಷ್ಟೇ ಇದೆಲ್ಲ ಸಾಧ್ಯ. ಭಕ್ತಿಪಂಥದ ಪ್ರಭಾವ ಇರುವ ದಾಸಶ್ರೇಷ್ಠರ ರಚನಾ ಪರಂಪರೆಯನ್ನೇ ತ್ಯಾಗರಾಜ, ದೀಕ್ಷಿತ, ಶ್ಯಾಮಾಶಾಸ್ತ್ರಿಗಳಂಥವರ ಕೃತಿಗಳೂ ಅನುಸರಿಸಿರುವುದಾಗಿದೆ. ಇವೆಲ್ಲ ಶಾಸ್ತ್ರೀಯ ಸಂಗೀತದ ವಿವಿಧ ಅವತಾರಗಳೆನ್ನುವುದು ಸ್ಪಷ್ಟ.

♦ **ಹೀಗೆ ಸಂಗೀತ ಮಾಧ್ಯಮದಲ್ಲಿ ಸಾಂಪ್ರದಾಯಿಕ ಕಟ್ಟುಪಾಡುಗಳಿಂದ 'ಜನಮುಖಿಯಾದ ಉಲ್ಲಂಘನೆ' ಸಾಧಿಸುವುದು ಸಾಧ್ಯ' ಅಂತ ನಿಮಗೆ ಅನ್ನಿಸಿದೆ! ಜನರು ಹೇಗೆ ಸ್ವೀಕರಿಸಿದ್ದಾರೆ?**

- ಜನಮುಖಿಯಾದ ಉಲ್ಲಂಘನೆ ಸಾಧ್ಯ. ಇಂಥ ಪ್ರಯೋಗ (ಉಲ್ಲಂಘನೆ)ಕ್ಕೆ ಯತ್ನಿಸಿದಾಗ ಇಂಥ ಸಂದರ್ಭಗಳಲ್ಲಿ ಜನರು ಅದನ್ನು ಸಂತೋಷದಿಂದಲೇ ಸ್ವೀಕರಿಸಿದ್ದಾರೆ. ಯಾವುದೇ ಕಲೆ, ಜನಮುಖಿಯಾಗಿದ್ದಾಗಲೇ ಜನರಿಗೆ ತಲುಪುವುದು.

ಏಸುಕ್ರಿಸ್ತನ ಜನನದ ಬಳಿಕ ಮರಿಯಳು ಏಸುವನ್ನು 'ದೇವಕುಮಾರ'ನಾಗಿ ಕಂಡು, ತೂಗುವ ಜೋಗುಳ ಹಾಡಿಗೆ ಹೊಸ ಬಗೆಯಲ್ಲಿ ರಾಗ ಸಂಯೋಜಿಸಿದ್ದೆ. ಅದು ಸಂಗೀತಪ್ರಿಯರ ಗಮನ ಸೆಳೆದಿತ್ತು. ಸರ್ವೇಸಾಮಾನ್ಯವಾಗಿ ಜೋಗುಳ ಗೀತೆಯನ್ನು ಹಿಂದುಗಳು ಹಾಡುವ ರೀತಿಗೂ, ಕ್ರಿಶ್ಚಿಯನ್ ಸಂಸ್ಕೃತಿಯ ಜನರು ಹಾಡುವ ರೀತಿಗೂ ವ್ಯತ್ಯಾಸ ಇದೆ. ಆ ವ್ಯತ್ಯಾಸ ಈ ಗೀತೆಯಲ್ಲಿ ಕಾಣಿಸಿಕೊಂಡಿದೆ. ಹಿಂದುಗಳೂ ಈ ಜೋಗುಳವನ್ನು ತುಂಬ ಮೆಚ್ಚಿಕೊಂಡದ್ದಿದೆ.

♦ **ಈ ನಡುವೆ, ಕೆಲವು ವರ್ಷಗಳ ಕಾಲ ಪತ್ರಿಕೋದ್ಯೋಗಿಯಾಗಿಯೂ ಕೆಲಸ ಮಾಡಿದವರು ನೀವು. ಕೆಲವು ಪತ್ರಿಕೆಗಳಿಗೆ ವರದಿಗಾರರಾಗಿದ್ದಿರಿ. ಆ ಅನುಭವ ಹೇಳಿ.**

- 1960ರ ದಶಕದಲ್ಲಿ ಪತ್ರಕರ್ತರ ಉದ್ಯೋಗ ಈಗಿರುವುದಕ್ಕಿಂತ ಹೆಚ್ಚು ಗೌರವಯುತವಾಗಿತ್ತು. ಈಗಿನ ಪತ್ರಕರ್ತರಿಗೆ ನಮ್ಮ ಕಾಲದಲ್ಲಿ ಸಿಗುತ್ತಿದ್ದ ಹಾರ್ದಿಕ ಗೌರವಾದರಗಳು ಲಭಿಸುತ್ತಿಲ್ಲವೆಂದೇ ಹೇಳಬಹುದಾಗಿದೆ!

ಆಗ ವಾರ್ತಾಪತ್ರಿಕೆಗಳು ಕಡಿಮೆ. 'ದ ಮೆಯಿಲ್', 'ಸಂಯುಕ್ತ ಕರ್ನಾಟಕ', 'ಪ್ರಜಾವಾಣಿ', 'ನವಭಾರತ', 'ತಾಯಿನಾಡು' ಇವು ಆಗಿನ ದಿನಪತ್ರಿಕೆಗಳು. 'ಪ್ರಭಾತ', 'ರಾಷ್ಟ್ರಬಂಧು', 'ನವಯುಗ', 'ಅಂತರಂಗ', 'ಪ್ರಕಾಶ', 'ರಾಯಭಾರಿ' ಇಂಥವು ವಾರ/ಮಾಸಪತ್ರಿಕೆಗಳು. ಒಂದೊಂದು ಪತ್ರಿಕೆಗೆ ಒಬ್ಬೊಬ್ಬರು ವರದಿಗಾರರು. ಸುದ್ದಿ ನೀಡಿಕೆಯಲ್ಲಿ ವಿಸ್ತೃತ ವಿವರಣೆ, ಗಂಭೀರತೆ ಇರುತ್ತಿದ್ದು, ಸುದ್ದಿ ಸುದ್ದಿಯಾಗಿಯೇ ಬರುತ್ತಿತ್ತು! ಯಾವ ತಿರುಚುವಿಕೆಯೂ ಇಲ್ಲದ ಕಾಲವಾಗಿತ್ತು ಅದು! ಮುಂದೆ ರಾಜಕೀಯ ಪಕ್ಷಗಳು ಒಂದೊಂದಾಗಿ ಸೃಷ್ಟಿಯಾಗಿ, ಒಂದೊಂದಕ್ಕೂ ಬೇರೆ ಬೇರೆ ನಾಯಕರು ಹುಟ್ಟಿಕೊಂಡು ತಮ್ಮ ಸಾಹಸಕಾರ್ಯಗಳು ಪತ್ರಿಕೆಯಲ್ಲಿ ಅಚ್ಚಾಗಬೇಕೆಂದು ಬಯಸಿದಾಗ, ಪತ್ರಿಕಾಧರ್ಮ

ಪರಿಪಾಲನೆಯೇ ಮುಖ್ಯ ತತ್ತ್ವವೆಂದು ಬಗೆದು ಬರೆಯುತ್ತಿದ್ದ ನೇರ ನಡೆ-ನುಡಿಯ ನಿರ್ಭೀತ ವರದಿಗಾರರಿಗೆ ನಾನಾ ಸಂಕಷ್ಟ, ತುಮುಲಗಳೇರ್ಪಟ್ಟುದುಂಟು. ಕೆಲವೊಮ್ಮೆ ಅಸಮಾಧಾನಗೊಂಡ ಮಂದಿಯ ಬೆದರಿಕೆ, ಗದರಿಕೆಗಳಿಗೆ ಒಳಗಾದ ಅನುಭವ ನನ್ನದು.

♦ **ಇಂಥ ಪರಿಸ್ಥಿತಿಯ ನಡುವೆಯೂ ಏನನ್ನಾದರೂ ಸಾಧಿಸಲು ಸಾಧ್ಯವಾದದ್ದಿದೆಯೆ?**

- ಸರಕಾರಿ ಹುದ್ದೆಗಳಲ್ಲಿದ್ದು ಅಧಿಕಾರ ದರ್ಪದಿಂದ ಮೆರೆದ ಮಂದಿಗೆ ಹಾಗೂ ಜನಸಾಮಾನ್ಯರಿಗೆ ತೊಂದರೆಯನ್ನುಂಟು ಮಾಡಿದ ಮಂದಿಗೆ ಸುದ್ದಿ ಮುಖೇನ ಗುದ್ದು ಕೊಟ್ಟು ಅವರ ನಡೆಯನ್ನು ಸರಿಪಡಿಸಿದ್ದೂ ಇದೆ. ಅಂಥವರನ್ನು ಅಧಿಕಾರದಿಂದ ನಿರ್ಗಮಿಸುವಂತೆ ಮಾಡಿದ್ದೂ ಇದೆ. ಇಂಥ ಮೂವರು ಅಧಿಕಾರಿಗಳನ್ನು ನನ್ನ ವರದಿಯ ಪರಿಣಾಮವಾಗಿ 'ಡಿಸ್‌ಮಿಸ್' ಮಾಡಲಾಗಿತ್ತು. ಇಂಥ ಸತ್ಯವರದಿಗಳು ಅಪ್ರಾಮಾಣಿಕ ಅಧಿಕಾರಿಗಳೊಳಗೆ ತಳಮಳ ಎಬ್ಬಿಸಿದ್ದುಂಟು.

♦ **ಪತ್ರಕರ್ತನ ಉದ್ಯೋಗದಿಂದ ನಿರ್ಗಮಿಸಲು ಕಾರಣ...**

- ಅಧಿಕಾರ ಬಲಿಷ್ಠತೆ, ಪ್ರಭುತ್ವವೇ ಮೆರೆಯುವ ಕಾಲ ಸನ್ನಿಹಿತವಾದುದನ್ನು ಕಂಡು 21 ವರ್ಷಗಳ ಬಳಿಕ ವರದಿಗಾರನ ಹುದ್ದೆಯನ್ನು ನಾನೇ ತ್ಯಜಿಸಿದೆ. ನಿತ್ಯ ನಿರಂತರ ಸಂತೋಷ ಕೊಡುವ, ಪರರನ್ನು ಪರಿವರ್ತಿಸಬಲ್ಲ ಸಂಗೀತ ಮಾಧ್ಯಮದೆಡೆಗೆ ಸಂಪೂರ್ಣ ಗಮನ ಕೊಟ್ಟೆ.

♦ **ನಿಮ್ಮ ತಂದೆ ಯು. ಎಸ್. ಭಟ್ ಅವರು ಕೂಡ ಪತ್ರಕರ್ತರಾಗಿದ್ದರು ಅಲ್ಲವೆ? ಅವರಿಗೆ ಸಂಗೀತದಲ್ಲಿ ಆಸಕ್ತಿ, ಪರಿಶ್ರಮ ಇತ್ತೇ?**

- ಅವರು ಉಡುಪಿಯ ಪ್ರಪ್ರಥಮ ಜರ್ನಲಿಸ್ಟ್! 'ಸಂಯುಕ್ತ ಕರ್ನಾಟಕ' ಆರಂಭವಾದಾಗಿನಿಂದಲೂ ಅದರ ಸುದ್ದಿಗಾರರು. ಆಗ ಅದು ಹ. ರಾ. ಪುರೋಹಿತ, ರಂಗನಾಥ ದಿವಾಕರರಾಯರಂಥವರ ಸಂಪಾದಕತ್ವದಲ್ಲಿ ಹೊರಬರುತ್ತಿತ್ತು. ಆ ಪತ್ರಿಕೆಯ ಉಡುಪಿ, ಕುಂದಾಪುರ, ಕಾರ್ಕಳ ಪರಿಸರದ ವರದಿಗಾರರಾಗಿದ್ದರು ನಮ್ಮ ತಂದೆ.

ಇದಕ್ಕೂ ಪೂರ್ವದಲ್ಲಿ ಅವರು ಆಗಿನ ಗಾಂಧೀ ಸ್ಕೂಲ್ (ಈಗಿನ - ಉಡುಪಿ ಮುನಿಸಿಪಲ್ ಕಛೇರಿಯ ಎದುರುಗಡೆ ಇರುವ - ಮೈನ್ ಶಾಲೆ)ನಲ್ಲಿ ಇಂಗ್ಲಿಷ್ ಮತ್ತು ಗಣಿತದ ಅಧ್ಯಾಪಕರಾಗಿದ್ದರು. ಸ್ವಾತಂತ್ರ್ಯಪೂರ್ವದ ವರ್ಷಗಳು ಅವು. ಇಂಗ್ಲಿಷ್ ದೊರೆಗಳು ಉಡುಪಿಗೆ ಬಂದಾಗ ಭಾಷಣ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ಇಂಗ್ಲಿಷ್ ಮಾತುಗಳನ್ನು ನಮ್ಮ ತಂದೆ ಕನ್ನಡಕ್ಕೆ ಅನುವಾದ ಮಾಡಿ ಹೇಳುತ್ತಿದ್ದರು.

ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಉಡುಪಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಪತ್ರಕರ್ತರಾಗಿದ್ದ ಎಸ್. ಯು. ಪಣಿಯಾಡಿ, ಎಂ. ವಿ. ಹೆಗ್ಡೆ, ಕೆ. ಕೆ. ಶೆಟ್ಟಿ ಇವರೊಂದಿಗೆ ನಮ್ಮ ತಂದೆಯವರಿಗೆ ನಿಕಟ ಸಂಪರ್ಕ ಇತ್ತು. ಅವರಂತೆ ಇವರೂ ಪತ್ರಕರ್ತರಲ್ಲವೆ?

ಹೊನ್ನಯ್ಯ ಶೆಟ್ಟಿಯವರ ನಿರ್ವಹಣೆಯಲ್ಲಿದ್ದ 'ನವಯುಗ', 'ಅಂತರಂಗ' ಪತ್ರಿಕೆಗಳ ಸಂಪಾದಕೀಯ ಕೆಲಸಗಳಲ್ಲೂ ಅವರು ಸಕ್ರಿಯರಾಗಿದ್ದರು. ಮಂಗಳೂರಿನ ಲೋಕಸಭಾ ಸದಸ್ಯ ಕೆ. ಆರ್. ಆಚಾರ್ ಅವರ 'ರಾಷ್ಟ್ರಬಂಧು', ಕುಡ್ಪಿ ವಾಸುದೇವ ಶೆಣೈ ಅವರ 'ಪ್ರಭಾತ' ಪತ್ರಿಕೆಗಳಿಗೆ ನಮ್ಮ ತಂದೆ ಸುದ್ದಿ, ವರದಿಗಳನ್ನು ಬರೆದು ಕಳುಹಿಸುತ್ತಿದ್ದರು. 'ಸಂಯುಕ್ತ ಕರ್ನಾಟಕ'ದ ಜೊತೆಗೆ 'ಮದ್ರಾಸ್ ಮೈಲ್'ನ ಪ್ರತಿನಿಧಿಯೂ ಆಗಿದ್ದ ನಮ್ಮ ತಂದೆ ಆ ಕಾಲದ ಉತ್ತಮ ಟೈಪಿಸ್ಟ್ ಆಗಿದ್ದರು. ಶಾರ್ಟ್ ಹ್ಯಾಂಡ್ ಕೂಡ ಅವರಿಗೆ ಗೊತ್ತಿತ್ತು. ಪೇಜಾವರ, ಅದಮಾರು, ಸೋದೆ ಮಠಾಧೀಶರೊಂದಿಗೆ ಅವರಿಗೆ ಆತ್ಮೀಯ ಸಂಬಂಧವಿತ್ತು; ಅವರುಗಳು ತಮ್ಮ ಪರ್ಯಾಯ ದೀಕ್ಷೆ ಮತ್ತಿತರ ಸಂದರ್ಭಗಳಲ್ಲಿ ಅನೇಕ ಬಾರಿ ನಮ್ಮ ತಂದೆಯವರಿಂದ ಸಲಹೆ-ಸೂಚನೆಗಳನ್ನು ಪಡೆದುಕೊಳ್ಳುತ್ತಿದ್ದುದಿತ್ತು.

1962ರಲ್ಲಿ ತಂದೆಯವರು ತೀರಿಕೊಂಡಾಗ ಅವರ ನಿಕಟವರ್ತಿಗಳಾಗಿದ್ದು ಅವರ ಕೆಲಸಕಾರ್ಯಗಳ ಮೇಲೆ ಗೌರವಭಾವವಿದ್ದ ಉಡುಪಿ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲ ಕೌಲಗಿ ಶೇಷಾಚಾರ್ಯ, ಉಡುಪಿ ಸಾವೆಲ್ಪಿ ಸಂಸ್ಥೆಯ ಜಿ. ಎ. ಆಚಾರ್ಯ, ಎಂ.ಜಿ.ಎಂ. ಕಾಲೇಜಿನ ಪ್ರೊಫೆಸರ್ ಪ್ರೊ. ಯು. ಎಲ್. ಆಚಾರ್ಯ, ಉಡುಪಿಯ ಆಢ್ಯ ಮಹನೀಯರಲ್ಲೊಬ್ಬರಾದ ಮಾನಂಚೆ ಶೇಷಗಿರಿರಾವ್ ಹಾಗೂ ಪುತ್ತಿಗೆ ಮಠದ ಹಿಂದಿನ ಸ್ವಾಮೀಜಿ ಇವರುಗಳೆಲ್ಲ ಯು. ಎಸ್. ಭಟ್ ಅವರ ಬಳಿಕ ಅವರ ಮಗನನ್ನು ಉಡುಪಿ ಪರಿಸರದ ವರದಿಗಾರನನ್ನಾಗಿ ಸ್ವೀಕರಿಸುವಂತೆ 'ಸಂಯುಕ್ತ ಕರ್ನಾಟಕ'ಕ್ಕೆ ಶಿಫಾರಸು ಮಾಡಿದ್ದರಿಂದ ನನಗೆ ಆ ಕೆಲಸ ಸಿಕ್ಕಿತು.

ನನ್ನ ತಂದೆಗೆ ಸಂಗೀತದಲ್ಲಿ ಒಳ್ಳೆಯ ಆಸಕ್ತಿ, ತಿಳಿವಳಿಕೆ ಇತ್ತು. ಸ್ವತಃ ಕಲಿಯಲಿಲ್ಲ. ಆದರೆ ಗೌರವ ಇತ್ತು. ಸಂಗೀತವನ್ನು ಆಲಿಸಿ ಆನಂದಿಸುವ ಮನೋಭಾವ ಇತ್ತು. ನನ್ನ ಸಂಗೀತ ಕಲಿಕೆಯ ಅಭಿಲಾಷೆಯನ್ನು ಮನಗಂಡ ಅವರು ನನ್ನ ಒಂಭತ್ತನೆಯ ವಯಸ್ಸಿನಲ್ಲೇ ನನ್ನನ್ನು ಸಂಗೀತ ಕಲಿಕೆಗಾಗಿ ಪಿಟೀಲು ಮಂಜುನಾಥಯ್ಯನವರಿಗೆ ಒಪ್ಪಿಸಿಬಿಟ್ಟರು.

♦ **ಪತ್ರಿಕಾ ವರದಿಗಾರಿಕೆ ಹೊರತುಪಡಿಸಿ ನೀವು ಬೇರೇನಾದರೂ ಬರವಣಿಗೆ ಮಾಡಿದ್ದಿತ್ತೇ?**

- ನಾನು ಕಥೆಗಳನ್ನು (ನೀಳ್ಗತೆಗಳನ್ನು) ಬರೆದದ್ದಿದೆ. 1957-58ರಲ್ಲಿ 'ಜನಜೀವನ ಸಾಹಿತ್ಯಮಾಲೆ' ಎಂಬ ಸ್ವಂತ ಪ್ರಕಾಶನ ಸಂಸ್ಥೆಯನ್ನು ಹುಟ್ಟುಹಾಕಿ 'ಅವಳ ಆತ್ಮಕಥೆ', 'ಇದು ಕೂಡ ಜೀವನ' ಹಾಗೂ 'ಮಾಸ್ಟರ್ ಮಲ್ಲ' ಎಂಬ ಮೂರು ನೀಳ್ಗತೆಗಳ ಪುಸ್ತಕಗಳನ್ನು ಪ್ರಕಟಿಸಿದೆ. ಕಿನ್ನಿಗೋಳಿಯ ಆನಂದ ಪ್ರಿಂಟರ್ಸ್ ಎಂಬ ಸಂಸ್ಥೆಯಲ್ಲಿ ಮುದ್ರಣಗೊಂಡ ಈ ಪುಸ್ತಕಗಳ ಬೆಲೆ ತಲಾ 25 ಪೈಸೆಗಳು. ಒಂದೊಂದು ಪುಸ್ತಕವೂ 50 ಪುಟಗಳದ್ದು. ಇವುಗಳಲ್ಲಿ ಒಂದೊಂದರಲ್ಲೂ ಒಂದೊಂದೇ ಕಥೆ. ಇವುಗಳಿಗೆ ಸ್ಫೂರ್ತಿ ಯಾರು ಗೊತ್ತೆ? ಒಂದಾಣೆ ಪ್ರಕಾಶನ ಮಾಲೆಯ ಸೃಷ್ಟಿಕರ್ತ ಕುಡ್ಪಿ ವಾಸುದೇವ ಶೆಣೈಯವರು. ಅವರ ಪುಸ್ತಕಗಳಿಗೆ

ತಲಾ ಒಂದಾಣೆ. ನನ್ನವುಗಳಿಗೆ ನಾಲ್ಕಾಣೆ. ಒಂದೊಂದನ್ನೂ 2000 ಪ್ರತಿಗಳಷ್ಟು ಮುದ್ರಿಸಿ ಮಾರಾಟ ಮಾಡುವ ಯೋಜನೆ ನನ್ನದು. ಆದರೆ ನಿರೀಕ್ಷಿಸಿದಷ್ಟು ಪ್ರೋತ್ಸಾಹ ಸಿಕ್ಕಲಿಲ್ಲ. ಹಾಕಿದ ದುಡ್ಡು ವಾಪಾಸು ಬರಲಿಲ್ಲ. ಕೆಲವರಿಗೆ ಉಚಿತವಾಗಿ ಕೊಟ್ಟರೂ ಉಳಿದೆಷ್ಟೋ ಪುಸ್ತಕಗಳು ಗೆದ್ದಲುಹುಳುಗಳಿಗೆ ಆಹಾರವಾದವು.

ಈಗ ಮತ್ತೆ ಪ್ರಕಾಶನದ ಸಾಹಸಕ್ಕೆ ಕೈಹಾಕಿದ್ದೇನೆ. ಕಳೆದ ವರ್ಷ (2006) ಡಿಸೆಂಬರಿನಲ್ಲಿ 'ನಾದವೈಭವಂ ಪ್ರಕಾಶನ' ಅಂತ ಶುರು ಮಾಡಿ ಬಿ.ಎ. ಮೊದಲ ವರ್ಷದ ವಿದ್ಯಾರ್ಥಿಗಳಿಗಾಗಿ (ಕನ್ನಡ ಮಾಧ್ಯಮ) ಇತಿಹಾಸ ಪಠ್ಯವನ್ನು ಒಬ್ಬ ನುರಿತ ಅಧ್ಯಾಪಕರಿಂದ ಬರೆಸಿ ಪ್ರಕಟಿಸಿದ್ದೇನೆ. ಎರಡನೆಯ ವರ್ಷದ ಬಿ.ಎ. ವಿದ್ಯಾರ್ಥಿಗಳಿಗಾಗಿ ಈ ವರ್ಷ ಇನ್ನೊಂದು ಇತಿಹಾಸ ಪಠ್ಯಪುಸ್ತಕ ಬಿಡುಗಡೆಯಾಗಿದೆ.

♦ **ಈ ಪ್ರಕಾಶನದಡಿಯಲ್ಲಿ ಸಂಗೀತಕ್ಕೆ ಸಂಬಂಧಿಸಿದಂತೆ...**

- ಇದೇ ಪ್ರಕಾಶನದಡಿಯಲ್ಲಿ ಇನ್ನೊಂದು ಬೃಹದ್ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದಿದ್ದೇನೆ. ಸಂಗೀತ ಶಾಸ್ತ್ರದ ಪ್ರಕಾರ ಒಟ್ಟು 72 ಜನಕರಾಗಗಳಿವೆ. ಒಂದೊಂದರಲ್ಲೂ 484 ಜನ್ಯರಾಗಗಳಿವೆ. ಇವುಗಳನ್ನೆಲ್ಲ ಸೇರಿಸಿದರೆ ಒಟ್ಟು 34,848 ರಾಗಗಳು. ಇವುಗಳನ್ನೆಲ್ಲ ಒಂದೊಂದಾಗಿ ವಿವರಿಸಿ ಒಂದು ವಿಶೇಷ ಮಾಲೆಯ ರೂಪದಲ್ಲಿ ಪ್ರಕಟಿಸಬೇಕೆಂಬುದು ನನ್ನ ಸಂಕಲ್ಪ. ಈ ಮೂಲಕ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿರುವ ರಾಗವೈವಿಧ್ಯ-ವಿಸ್ತಾರವನ್ನು ಕನ್ನಡ ಜನತೆಗೆ ಮನಗಾಣಿಸಿಕೊಡಬೇಕೆಂಬ ಆಶೆ.

♦ **ನಿಮ್ಮ ಮಕ್ಕಳು ಯಾವ ರೀತಿ ಈ ವಿದ್ಯೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ?**

- ಅವರೂ ನನ್ನಂತೆಯೇ ತಲಸ್ಪರ್ಶಿಯಾಗಿ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿ, ಅದರ ಗಟ್ಟಿ ತಳಹದಿಯಲ್ಲಿ ಅನುದಿನವೂ ಸಂಗೀತೋಪಾಸನೆ ಮಾಡುತ್ತ ಯಶಸ್ಸಿನ ಪಥದಲ್ಲಿ ಮುಂದುವರಿಯುತ್ತಿದ್ದಾರೆ. ಸಂಗೀತವೆನ್ನುವುದು ಪಾರಮಾರ್ಥಿಕ ವಿದ್ಯೆ. ಲೌಕಿಕ ವಿದ್ಯೆಯಲ್ಲ. ಈ ಅಂಶವನ್ನು ನನ್ನ ಮಕ್ಕಳಿಗೆ ಮನದಟ್ಟು ಮಾಡಿದ್ದೇನೆ.

ಹಿರಿಯ ಪುತ್ರಿ ವಸುದಾ ನನ್ನ ಎಲ್ಲ ಗುಣಗಳನ್ನು ರೂಢಿಸಿಕೊಂಡು ಉತ್ತಮ ಗಾಯಕಿ ಎಂಬ ಪ್ರಶಂಸೆ ಗಳಿಸಿಕೊಂಡು ತನ್ನ ಪತಿ ಎಂ. ಎಸ್. ಗಿರಿಧರ್ ಅವರೊಂದಿಗೆ ಪ್ರತಿದಿನವೂ ಎಂಟು ತಾಸುಗಳ ಅಧ್ಯಯನವನ್ನು ಈಗಲೂ ನಡೆಸುತ್ತಿದ್ದಾರೆ. ಗಿರಿಧರ್ ಅವರು ಒಳ್ಳೆಯ ಗೀತರಚನಾಕಾರ, ನಿರ್ದೇಶಕ. ಕೊನೆಯ ಪುತ್ರಿ ಸ್ಮಿತಾ ಕೂಡ ಈ ದಿಸೆಯಲ್ಲಿ ಅರ್ಥಪೂರ್ಣವಾಗಿ ಸಾಗುತ್ತಿದ್ದಾಳೆ. ಅವಳ ಪತಿ ರಾಘವೇಂದ್ರ ಅವರು ತುಂಬು ಪ್ರೋತ್ಸಾಹ ನೀಡುತ್ತಿದ್ದಾರೆ. ಹಿರಿಯಕ್ಕನೊಂದಿಗೆ ಅವಳೂ ಕಾರ್ಯಕ್ರಮ ನೀಡುತ್ತಿದ್ದಾಳೆ. 'ನಾದವೈಭವಂ'ನ ಭಜನಾ ಸತ್ಸಂಗದಲ್ಲಿ ಈ ಇಬ್ಬರೂ ಗುರುಗಳಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ. ಗಾಯಕಿಯರಾಗಿ ಈಗಲೂ ಕಾರ್ಯಕ್ರಮಗಳನ್ನು ಕೊಡುತ್ತಿದ್ದಾರೆ.

♦ **'ನಾದವೈಭವಂ' ಅಷ್ಟೇ ಅಲ್ಲದೆ 'ಗಾನೋಲ್ಲಾಸ ಕೂಟ', 'ದಾಸಲಹರಿ' ಮೊದಲಾದ ಸಂಘಟನೆಗಳನ್ನು ಹುಟ್ಟುಹಾಕಿದವರು ನೀವು. ಇವುಗಳ ಹಿಂದಿನ ಉದ್ದೇಶ ಹಾಗೂ ಇವುಗಳ ನಿರ್ವಹಣೆಯಲ್ಲಿ ನಿಮಗಾದ ಅನುಭವಗಳೇನು?**

- 1972ರ ಹೊತ್ತಿಗೆ 'ಗಾನೋಲ್ಲಾಸ ಕೂಟ'ವನ್ನು ಅಸ್ತಿತ್ವಕ್ಕೆ ತಂದು, ನಾನೊಬ್ಬನೇ ಗಾಯಕನಾಗಿದ್ದೆ. ಜೊತೆಗೆ ಐದಾರು ಮಂದಿ ವಾದ್ಯಗಾರರಿದ್ದರು. ತಂಬೂರ, ಹಾರ್ಮೋನಿಯಮ್, ಪಿಟೀಲು, ಖಂಜೀರ, ಮೋರ್ಸಿಂಗ್, ತಬ್ಲಾ ಇವುಗಳ ನಿರೂಪಣೆಯೊಂದಿಗೆ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದೆ.

ಆ ಬಳಿಕ ದಾಸಸಾಹಿತ್ಯವನ್ನೇ ಆಧರಿಸಿದ ಗಾನಕೂಟವೊಂದನ್ನು ಸಂಘಟಿಸಿ ಅದಕ್ಕೆ 'ದಾಸಲಹರಿ' ಎಂಬ ಹೆಸರಿಟ್ಟು, ಕಾರ್ಯಕ್ರಮಗಳನ್ನು ನೀಡತೊಡಗಿದೆ. ಮುಖ್ಯವಾಗಿ ಹಾರ್ಮೋನಿಯಮ್, ತಬ್ಲಾ, ಕೀಬೋರ್ಡ್, ಮೋರ್ಸಿಂಗ್, ಪಿಟೀಲು ವಾದನದೊಂದಿಗೆ 'ಶ್ರೀ ಗಣನಾಥ'ದಿಂದ ಆರಂಭಿಸಿ ಪುರಂದರದಾಸರಾದಿಯಾಗಿ ಹತ್ತಾರು ದಾಸರ ಹಾಡುಗಳನ್ನು ಸಾದರಪಡಿಸುತ್ತಿದ್ದೆ. ಈ ಕಾರ್ಯಕ್ರಮಕ್ಕೆ ನಿರೂಪಕರೊಬ್ಬರು ಇರುತ್ತಿದ್ದರು.

ಈ ಕಾರ್ಯಕ್ರಮಗಳು ಇತರ ಸಂಗೀತ ಕಾರ್ಯಕ್ರಮಗಳಿಗಿಂತ ಭಿನ್ನವಾಗಿರುತ್ತಿದ್ದವು. ಗಾಯನ ಆರಂಭಕ್ಕೆ ಮುನ್ನ ಕಾಲೋಚಿತವಾಗಿ, ಕಾರ್ಯಕ್ರಮದ ಉದ್ದೇಶ-ಆಶಯಗಳ ವಿವರಣೆ ಇರುತ್ತಿತ್ತು. ಒಬ್ಬರಾಗಿ, ಇಬ್ಬರಾಗಿ, ಸಾಮೂಹಿಕವಾಗಿ ಹಾಡುವ ಮೂಲಕ ದಾಸವಾಣಿಯಲ್ಲಿ ಅಂತರ್ಗತವಾದ ವಿಚಾರಗಳನ್ನು, ಸಾಹಿತ್ಯಿಕ-ಧಾರ್ಮಿಕ ಮಹತ್ತ್ವವನ್ನು ಸಂಗೀತದ ಮೂಲಕ ನಿರೂಪಿಸುತ್ತಿದ್ದೆವು.

ಸಂಗೀತ ಎಂದರೆ, ಬರೇ ಹಾಡು ಕೇಳಿಸುವುದಲ್ಲ. ಆ ಹಾಡಿನೊಳಗಿನ ಅಂತರ್ಭಾವ, ವಿಚಾರ, ತತ್ತ್ವ ಇವೆಲ್ಲವೂ ಜನರಿಗೆ ಮುಟ್ಟಬೇಕು. ತನ್ಮೂಲಕ ಆಧ್ಯಾತ್ಮಿಕ, ಸಾಮಾಜಿಕ ಚಿಂತನೆಗೆ ಪ್ರೇರಕಶಕ್ತಿಯಾಗಬೇಕೆಂಬ ಹಂಬಲ ಇದರ ಹಿಂದಿತ್ತು. ಕನ್ನಡ ಭಾಷೆಯಲ್ಲಿ ವಿವಿಧ ದಾಸರುಗಳ ಅರ್ಥಪೂರ್ಣ ಸಾಹಿತ್ಯ ಪ್ರಸಾರದೊಂದಿಗೆ ಸಂಗೀತ ಸುಧೆ ನೀಡುವುದು ಸಂಸ್ಥೆಯ ಘನ ಉದ್ದೇಶವಾಗಿತ್ತು. ಸಿನಿಮಾ ಸಂಗೀತದ ಆರ್ಕೆಸ್ಟ್ರಾ ಗ್ರೂಪ್ ಪ್ರಸ್ತುತ ಪಡಿಸುವ ಸಂಗೀತಕ್ಕೂ, ನನ್ನ ಈ ಸಂಗೀತಕ್ಕೂ ಬಹಳಷ್ಟು ಅಂತರವಿತ್ತು. ನನ್ನದು ಆಧ್ಯಾತ್ಮಿಕ, ಪಾರಮಾರ್ಥಿಕ, ಭಕ್ತಿಪ್ರಧಾನ ಸಂಗೀತವಾಗಿದ್ದರೆ, ಅವರದು ಉತ್ಸಾಹ, ಸಂತೋಷಗಳಿಂದ ಕುಣಿದು ಕುಪ್ಪಳಿಸುವಂತೆ ಮಾಡುವ ಗಾಯನ. ನನ್ನ ಸಂಗೀತವನ್ನು ಆಲಿಸುವವರು/ ಬಯಸುವವರು ಶೇಕಡಾ 50 ಮಂದಿಯಾದರೆ, ಅವರ ಆ ಸಂಗೀತವನ್ನು ಬಯಸಿ ಬರುವವರು ಶೇಕಡಾ 90 ಮಂದಿ! ಹೀಗಾಗಿ ಇದನ್ನೂ ಮುಂದುವರಿಸಲಾಗದೆ ಸರ್ವಜನಮೆಚ್ಚುಗೆಯ ಉದ್ದೇಶದ ಸಂಗೀತ ಕೂಟವೊಂದನ್ನು 1980ರಲ್ಲಿ ಆರಂಭಿಸಿದೆ. ಇದೇ 'ನಾದವೈಭವಂ' ಸಂಸ್ಥೆ. ಇದರಲ್ಲಿ ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿನ ಅಪೂರ್ವ ಹಾಡುಗಳನ್ನು

ವೃಂದಗಾನವಾಗಿ ಸಾದರಪಡಿಸಿದೆ. ಹಿಂದಿ, ತುಳು ಭಾಷೆಗಳ ಹಾಡುಗಳನ್ನೂ ಬಳಸಿಕೊಂಡು, ಶುದ್ಧ ಭಾರತೀಯ ಸಂಗೀತ ಪದ್ಧತಿಯಲ್ಲೇ ಪ್ರಸ್ತುತ ಪಡಿಸುತ್ತ ಬಂದಿರುವುದು ಇದರ ವೈಶಿಷ್ಟ್ಯ. ಮಾತ್ರವಲ್ಲದೆ, ವಿವಿಧ ಭಾಷೆಗಳ ಶಿಷ್ಟ ಸಾಹಿತ್ಯದ ಹಾಡುಗಳಿಗೂ ಇಲ್ಲಿ ಅವಕಾಶ ನೀಡುತ್ತಿದ್ದೇವೆ (ಹೆಚ್ಚಾಗಿ ಕನ್ನಡದ ದಾಸರ ಹಾಡುಗಳು ಮತ್ತು ವಚನಸಾಹಿತ್ಯ).

ಈ ಪ್ರಯೋಗ ಎಷ್ಟು ಜನಪ್ರಿಯವಾಗಿದೆ ಎಂದರೆ ಒಮ್ಮೆ ಆಲಿಸಿದ ಮಂದಿ, ಮತ್ತೆ ಕಾರ್ಯಕ್ರಮ ನೀಡುವಂತೆ ಕರೆದರು. ಹೀಗಾಗಿ ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ - ಈ ನಾಲ್ಕು ರಾಜ್ಯಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೊಡುವಂತಾಗಿ 'ನಾದವೈಭವಂ' ಬೆಳೆಯುವಂತಾಯಿತು. ಈ ಸಂಸ್ಥೆಯ ಮೂಲಕ ಕರ್ನಾಟಕ ಮತ್ತಿತರ ಮೂರು ರಾಜ್ಯಗಳಲ್ಲಿ ವಿವಿಧ ಸಾಂಸ್ಕೃತಿಕ ವೇದಿಕೆಗಳಲ್ಲಿ ಶಾಸ್ತ್ರೀಯ ಸಂಗೀತ, ನೃತ್ಯರೂಪಕ ಇತ್ಯಾದಿ ಕಾರ್ಯಕ್ರಮಗಳನ್ನು ನೀಡುತ್ತ ಬರಲಾಗಿದೆ.

♦ **ಕೇವಲ ಸಂಗೀತ ಸಂಸ್ಥೆಗಳನ್ನು ಕಟ್ಟಿದ್ದು ಮಾತ್ರವಲ್ಲ, ನಾಡಿನಾದ್ಯಂತ ಹಲವು ಗಾಯಕರು ಹಾಡಿದ ಗೀತೆಗಳಿಗೆ ಸಂಗೀತ ನಿರ್ದೇಶನ ನೀಡಿದ್ದೀರಿ. ರಂಗಭೂಮಿ ಮತ್ತು ಸಿನಿಮಾಗಳಲ್ಲೂ ಹಲವು ರೀತಿಗಳಲ್ಲಿ ದುಡಿದಿದ್ದೀರಿ. ಹವ್ಯಾಸಿ ನಟನಾಗಿಯೂ ತೊಡಗಿಸಿಕೊಂಡಿದ್ದೀರಿ,- ರಂಗಭೂಮಿಯಲ್ಲೂ, ಸಿನಿಮಾದಲ್ಲೂ! ಈ ಬಗ್ಗೆ ಸ್ವಲ್ಪ...**

- ರಂಗಭೂಮಿ, ಆಕಾಶವಾಣಿ, ದೂರದರ್ಶನ, ಚಲನಚಿತ್ರಗಳಲ್ಲಿ ಅನೇಕ ಸಮರ್ಥ ಶಿಷ್ಯರನ್ನು ರೂಪಿಸಿದ್ದು 'ನಾದವೈಭವಂ'ನ ಸಾಧನೆಗಳಲ್ಲೊಂದು. ಅನೇಕ ಖ್ಯಾತಿವೆತ್ತ ಗಾಯಕರನ್ನು ಸೃಷ್ಟಿಸಿದ ಹೆಗ್ಗಳಿಕೆ ಅದರದು.

ದಕ್ಷಿಣ ಭಾರತದ ಸುಪ್ರಸಿದ್ಧರಾದ ಪಿ. ಬಿ. ಶ್ರೀನಿವಾಸ್, ಎಸ್. ಜಾನಕಿ, ರಾಜ್‌ಕುಮಾರ್ ಭಾರತಿ, ಕಲ್ಯಾಣಿ ಮೆನೋನ್, ಮದ್ರಾಸ್ ಲತಾ, ಮಂಜುಳಾ ಗುರುರಾಜ್ - ಇಂಥವರ ಗಾಯನಕ್ಕೆ ಸಂಗೀತ ನಿರ್ದೇಶನ ಮಾಡಿದ್ದೇನೆ. ಇದಲ್ಲದೆ ಸಂಸ್ಥೆಯ ಲಾಂಛನದಡಿಯಲ್ಲಿ 90ಕ್ಕೂ ಹೆಚ್ಚು ಧ್ವನಿಸುರುಳಿ, ಸಿ.ಡಿ., ಎಲ್.ಪಿ. ರೆಕಾರ್ಡ್‌ಗಳಿಗೆ ಸಾಹಿತ್ಯ-ಸಂಗೀತ ನಿರ್ದೇಶನ ನೀಡಿದ್ದೇನೆ. ಪುಷ್ಪಾಂಜಲಿ, ಕ್ರಿಸ್ತ ಗೀತಾಂಜಲಿ, ವಾದಿರಾಜ ಕೀರ್ತನೆಗಳು - ಧ್ವನಿಸುರುಳಿ, ಎಲ್.ಪಿ. ರೆಕಾರ್ಡಿನಲ್ಲಿ ಮೊದಲ ಬಾರಿಗೆ ಮೂಡಿ ಬಂದವು.

ಇನ್ನು, ಹವ್ಯಾಸಿ ನಟನಾಗಿ ರಂಗಭೂಮಿಯಲ್ಲೂ ಚಲನಚಿತ್ರ ರಂಗದಲ್ಲೂ ಉತ್ಸಾಹದಿಂದ ತೊಡಗಿಕೊಂಡು ಬಂದಿದ್ದೇನೆ. 1958ರಷ್ಟು ಹಿಂದೆಯೇ 'ಆಧುನಿಕ ನಾಟ್ಯ ಸಂಘ' ಎಂಬ ಹವ್ಯಾಸಿ ಕಲಾವಿದರ ಕೂಟ ಸ್ಥಾಪಿಸಿದ್ದೆ. ಅದರಲ್ಲಿ ನಾನು ಹಾಡಿದ್ದ, ಸಂಗೀತ ನಿರ್ದೇಶನ ಮಾಡಿದ್ದ ಹಾಡುಗಳಿಗೆ ನನ್ನ ಗುರು ಮಂಜುನಾಥಯ್ಯನವರೇ ಪಿಟೀಲು ಸಾಥಿ ನೀಡಿದ್ದರು (1956).

ಆಮೇಲೆ 1967ರಲ್ಲಿ 'ವಾಸನ್ ಫೆಟಮೆನ್ಸ್ ಟ್ರೂಪ್' ಎಂಬ ಹವ್ಯಾಸಿ ಕಲಾ ಸಂಘ

ಸ್ಥಾಪಿಸಿದೆ. ಇವುಗಳಲ್ಲಿ ನಟನೆ ಮಾತ್ರವಲ್ಲದೆ ಸಂಗೀತ ನಿರ್ದೇಶನದೊಂದಿಗೆ ರಂಗ ಪ್ರಯೋಗಗಳ ಸರ್ವತೋಮುಖ ನಿರ್ದೇಶನವನ್ನೂ ಮಾಡಿದ್ದಿದೆ. ಅನೇಕ ನೃತ್ಯರೂಪಕಗಳಿಗೆ ಸಂಗೀತ ನಿರ್ದೇಶನವನ್ನೂ ಮಾಡಿದ್ದುಂಟು.

ಏಸುಕ್ರಿಸ್ತನ ಜೀವನವನ್ನಾಧರಿಸಿರುವ 'ಭುವನಜ್ಯೋತಿ' ಚಲನಚಿತ್ರಕ್ಕೆ 'ನಾದವೈಭವಂ' ಲಾಂಛನದಡಿಯಲ್ಲೇ ಸಂಭಾಷಣೆ ಬರೆದಿರುವುದಲ್ಲದೆ, ಸಂಗೀತ ನಿರ್ದೇಶನ ಮಾಡಿದ್ದೇನೆ. ಈ ಚಿತ್ರದಲ್ಲಿ ನಟಿಸಿದ್ದೂ ಮಾತ್ರವಲ್ಲದೆ ಚಿತ್ರನಿರ್ದೇಶನವೂ ನನ್ನದೇ ಆಗಿತ್ತು. ಅಲ್ಲದೆ 'ಊರ್ವಶಿ' ಚಿತ್ರದಲ್ಲಿ ಸಂಗೀತಗಾರನಾಗಿ ಅಭಿನಯಿಸಿದ್ದೇನೆ. 'ಅಂತ' ಹಾಗೂ 'ಜಂಗಲ್ ಗರ್ಲ್' ಚಿತ್ರಗಳಲ್ಲಿಯೂ ನಟಿಸಿದ್ದೇನೆ. ಜೊತೆಗೆ ಅವುಗಳ ತಾಂತ್ರಿಕ ಕೆಲಸಗಳಲ್ಲೂ ಪಾಲ್ಗೊಂಡಿದ್ದೇನೆ.

♦ **ಸಂಗೀತ ಶಿಕ್ಷಕರಾಗಿ ನಾಡಿನ ಹಲವೆಡೆಗಳಲ್ಲಿ ಗಾನಕಲೆಯನ್ನು ಬೋಧಿಸಿದ್ದುಂಟು ನೀವು...**

- 1957ರಿಂದ 1994ರ ವರೆಗೆ 37 ವರ್ಷಗಳ ಕಾಲ ಗಾನವಿದ್ಯಾಬೋಧಕನಾಗಿ ಬೆಥನಿ ಶಿಕ್ಷಣ ಸಂಸ್ಥೆಯ ವಿವಿಧ ವಿದ್ಯಾಕೇಂದ್ರಗಳಲ್ಲಿ ದುಡಿದಿದ್ದೇನೆ. ಮೂಲ್ಕಿ, ಬಜ್ಪೆ, ಕಿನ್ನಿಗೋಳಿ, ಕರ್ನಾಟಕ ಥಿಯಾಲಜಿಕಲ್ ಕಾಲೇಜು, ಮಂಗಳೂರು ಅಲ್ಲದೆ ಚಿಕ್ಕಮಗಳೂರಿನಲ್ಲೂ ಸೇವೆ ಸಲ್ಲಿಸುವ ಅವಕಾಶ ಒದಗಿ ಬಂದಿದೆ.

ಈಚಿನ ವರ್ಷಗಳಲ್ಲಿ ಉಡುಪಿಯಲ್ಲಿ 'ನಾದವೈಭವಂ' ಸಂಸ್ಥೆಯಲ್ಲಿ ಅನೇಕ ಸಂಗೀತಾಭಿಮಾನಿಗಳಿಗೆ ಗಾಯನದ ಶಿಕ್ಷಣ ನೀಡುವುದರಲ್ಲಿ ನಿರತನಾಗಿದ್ದೇನೆ.

♦ **ಸಂಗೀತ ಕಲಾರಾಧನೆಯ ದೃಷ್ಟಿಯಿಂದ ನಿಮಗೆ ಪ್ರೋತ್ಸಾಹ ನೀಡಿದ ವ್ಯಕ್ತಿಗಳ, ಸಂಘಸಂಸ್ಥೆಗಳ ಬಗ್ಗೆ ಹೇಳುತ್ತೀರಾ?**

- ಸರ್ವಪ್ರಥಮವಾಗಿ ತಾಯಿ. ಆಮೇಲೆ ಗುರು... ನನಗೆ ಉದ್ಯೋಗ ನೀಡಿದ ಮಂಗಳೂರಿನ ಬೆಥನಿ ವಿದ್ಯಾಸಂಸ್ಥೆ... ನನಗೆ ಸ್ನೇಹಿತರಾಗಿ ಒದಗಿದ ಅನೇಕ ಕವಿಗಳು... ಸಾಹಿತಿಗಳು... 'ನಾದವೈಭವಂ' ಸಂಸ್ಥೆಯ ಬಗೆಗಿನ ಕಲ್ಪನೆಗೆ ನೀರೆರೆದು, ಅದರ ಮೊದಲ ಹೆಜ್ಜೆಗಳನ್ನು ಗಟ್ಟಿಗೊಳಿಸಿದ ಅಂಬಲಪಾಡಿ ಶ್ರೀಪತಿ ಆಚಾರ್ಯರಂಥ ನಿರ್ವ್ಯಾಜ ಹಿತೈಷಿಗಳು... ಉಡುಪಿಯ ಕಲಾವೃಂದ...

ಅನೇಕ ಮಂದಿ ಸಾಹಿತ್ಯಾಸಕ್ತರು ನನ್ನ ಬದುಕು-ಸಾಧನೆ ಕುರಿತಂತೆ ವಿವಿಧ ಪತ್ರಿಕೆಗಳಲ್ಲಿ (ತರಂಗ, ಮಣಿಪಾಲ; ಯುಗಪುರುಷ - ಅನಂತಪ್ರಕಾಶನ, ಕಿನ್ನಿಗೋಳಿ; ಕಲಾದರ್ಶನ, ಮಂಗಳೂರು; ಉಡುಪಿಯ ರಂಗಭೂಮಿಯ ಕಲಾಕುಂಜ; ಉದಯವಾಣಿ, ಮಣಿಪಾಲ; ಪ್ರಜಾವಾಣಿ, ಬೆಂಗಳೂರು) ಬರೆದಿದ್ದಾರೆ.

ನನ್ನ ಇದುವರೆಗಿನ ಸಂಗೀತ ಸೇವಾ ಅಭಿಯಾನದಲ್ಲಿ ನಾಡ, ಹೊರನಾಡ ಅನೇಕ ಸಂಗೀತಾಭಿಮಾನಿಗಳಿಂದ, ಸಂಗೀತಾಭಿಜ್ಞರಿಂದ ನೂರಕ್ಕೂ ಹೆಚ್ಚು ಕಡೆಗಳಲ್ಲಿ ಸಮ್ಮಾನ - ಪುರಸ್ಕಾರಗಳು ನನಗೆ ಲಭಿಸಿವೆ. ಮುಖ್ಯವಾಗಿ ಉಡುಪಿ, ಮಂಗಳೂರು, ಕಾಸರಗೋಡು, ಮೈಸೂರು, ಬೆಂಗಳೂರು, ವಿಶಾಖಪಟ್ಟಣ, ಗುರುವಾಯೂರು, ಕಣ್ಣಾನೂರು, ಮುಂಬಯಿಯಂಥ ನಗರಗಳಲ್ಲಿ. 'ದಾಸಸಂಗೀತ ವಿಶಾರದ' (ಉಡುಪಿ ಸರ್ವಜ್ಞ ಪೀಠದಿಂದ - 1983), 'ಕಲಾರತ್ನ' (ಮದ್ರಾಸ್ ಗಾಯಕ ಪಿ. ಬಿ. ಶ್ರೀನಿವಾಸ್ ಅವರಿಂದ - 1984), 'ಸಂಗೀತ ಸೇವಾ ದುರಂಧರ' (ಬೆಂಗಳೂರು ಸಾರಸ್ವತ ಮಹಾವಿದ್ಯಾಲಯದ ಪರವಾಗಿ ಪ್ರಖ್ಯಾತ ಜ್ಯೋತಿಶ್ಶಾಸ್ತ್ರಜ್ಞ ಬಿ. ವಿ. ರಾಮನ್ ಅವರಿಂದ - 1986), 'ಗಾನಕಲಾವಿಭೂಷಣ' (ಮಣಿಪಾಲ ಪತ್ರಕರ್ತರ ಅಭ್ಯುದಯ ಸಂಘದಿಂದ - 1988), 'ಅಭಿನಂದನ ಪ್ರಶಸ್ತಿ' (ಪೋಪ್ ದ್ವಿತೀಯ ಜಾನ್ ಪಾಲ್ ಅವರಿಂದ - 1944), 'ಸಂಗೀತ ವಿಭೂಷಣ' (ಉಡುಪಿ ರಂಗಭೂಮಿ ಸಂಸ್ಥೆಯಿಂದ - 2002), ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಜಯಂಟ್ಸ್ ಇಂಟರ್‌ನ್ಯಾಶನಲ್ ಪುರಸ್ಕಾರ, 'ಶ್ರೀರಾಮ ವಿಠ್ಠಲ ಪ್ರಶಸ್ತಿ' (ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಂದ - 2004) - ಹೀಗೆ ಹಲವಾರು ಬಿರುದು, ಪ್ರಶಸ್ತಿಗಳಿಗೆ ಪಾತ್ರನಾಗಿದ್ದೇನೆ. ಇಂಥ ಎಲ್ಲ ಗೌರವಗಳೂ ನನ್ನಲ್ಲಿ ಧನ್ಯತಾ ಭಾವ ಮೂಡಿಸಿವೆ.

ಇನ್ನೊಂದು ಮುಖ್ಯವಾದ ಮಾತು - ನನಗೆ ಸಂಗೀತಗಾರರಿಗಿಂತಲೂ ಸಾಹಿತಿಗಳು ಹೆಚ್ಚು ಹತ್ತಿರ! ಅವರ ಸಾಮೀಪ್ಯ - ಸಹವಾಸ ನನ್ನಲ್ಲಿ ಅತೀವ ಸ್ಫೂರ್ತಿ, ಆನಂದ, ಸಾರ್ಥಕಭಾವ ಮೂಡಿಸುತ್ತವೆ.

♦ **ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ 'ಸಂಗೀತ ಚಿಕಿತ್ಸೆ'ಯ ಕಲ್ಪನೆಯನ್ನು ಕರ್ನಾಟಕದಲ್ಲಿ ಮೊತ್ತಮೊದಲಾಗಿ ಕಾರ್ಯರೂಪಕ್ಕೆ ತರುವ ಪ್ರಯತ್ನದಲ್ಲಿದ್ದೀರಿ ಎಂದು ಕೇಳಿದೆ. ಈ ಬಗ್ಗೆ ಸ್ವಲ್ಪ...**

- ಸಂಗೀತದಿಂದ ಸಂತೋಷ, ಸರ್ವತೋಮುಖ ಆನಂದ... ಎಂಬೆಲ್ಲಾ ಮಾತುಗಳಿವೆ... ಸಂಗೀತಕ್ಕೆ ಸಂಗೀತವೇ ಸಾಟಿ ಎನ್ನಬಹುದು. ಸಂಗೀತದಿಂದ ಪಶು-ಪಕ್ಷಿ-ಗಿಡ-ಮರ-ಬಳ್ಳಿ ಎಲ್ಲವೂ ಉತ್ತೇಜನ ಪಡೆಯಬಲ್ಲವು ಎಂದು ಬಲ್ಲವರು ಸ್ವಂತ ಅನುಭವದಿಂದ ಹೇಳುತ್ತಿದ್ದು, ಈಗಾಗಲೇ ಈ ನಿಟ್ಟಿನಲ್ಲಿ ಅನೇಕ ಪ್ರಯೋಗಗಳು ನಡೆದಿವೆ, ಯಶಸ್ಸು ಕಂಡಿವೆ.

'ನಾದ ಥೆರಪಿ' (ನಾದ ಚಿಕಿತ್ಸೆ)ಯ ಬಗ್ಗೆ ವಿಶ್ವದ ನಾನಾ ದೇಶಗಳಲ್ಲಿ ಪ್ರಯೋಗಗಳು ನಡೆಯುತ್ತಿರುವ ಬಗ್ಗೆ ಹಲವು ತೆರನ ಪ್ರಶಂಸೆಯ ಮಾತುಗಳು ಕೇಳಿಬರುತ್ತಿವೆ.

ಈಗಾಗಲೇ ನಾದ ಥೆರಪಿಯ ಧ್ವನಿಪೆಟ್ಟಿಗೆ (ಸಿ.ಡಿ.)ಗಳು ಮಾರುಕಟ್ಟೆಗೆ ಬಂದಿವೆ. ಆದರೆ ಅವುಗಳನ್ನು ಪರೀಕ್ಷಿಸಿದಾಗ, ಅವು ಚಿಕಿತ್ಸೆಗೆ ಪೂರಕವಾಗಲಾರದ ಧ್ವನಿಪೆಟ್ಟಿಗೆಗಳಾಗಿ

ನನಗೆ ಕಂಡು ಬಂದಿವೆ (ಬಿಡುಗಡೆಯಾಗಿರುವ ಧ್ವನಿಪೆಟ್ಟಿಗೆಗಳ ಬಗೆಗಷ್ಟೆ ಹೇಳುತ್ತಿದ್ದೇನೆ). ಧೃತಿಗೆಟ್ಟ ಮನುಷ್ಯನನ್ನು ಸಂಪರ್ಕಿಸಿ ಹಿತವಾದ ಮಾತುಗಳಿಂದ, ಪ್ರೀತಿಪೂರ್ವಕ ಸಲಹೆ - ಧೈರ್ಯ ನೀಡಿದಾಗ ಆತ ಶೇಕಡಾ 50ರಷ್ಟು ಚೇತರಿಸಿಕೊಳ್ಳುತ್ತಾನೆ. ಹಿತನುಡಿಗೇ ಇಷ್ಟು ಶಕ್ತಿ ಇರುವಾಗ ಅದಕ್ಕಿಂತಲೂ ಮಿಗಿಲಾದ ನಾದತರಂಗಕ್ಕೆ ಇನ್ನೆಷ್ಟು ಶಕ್ತಿ ಇರಬೇಡ! ಮನಸ್ಸಿನ ಸೂಕ್ಷ್ಮತೆಯನ್ನು ಕಳೆದುಕೊಂಡ ವ್ಯಕ್ತಿಯ ನರಮಂಡಲಕ್ಕೆ ನಾದಬ್ರಹ್ಮ, ಅರ್ಥಾತ್ ನಾದತರಂಗದ ಮೂಲಕ ವಿಶೇಷ ಉತ್ತೇಜನ ನೀಡುವುದು ಖಂಡಿತ ಸಾಧ್ಯ. ಸಂವೇದನೆ ಕಳೆದುಕೊಂಡು ಅಂತರ್ಮುಖಿಯಾದವನನ್ನು ಬಹಿರ್ಮುಖಿಯನ್ನಾಗಿ ಮಾಡಲು ನಾದತರಂಗಕ್ಕೆ (ನಾದಬ್ರಹ್ಮನಿಗೆ) ಅಪಾರ ಸಾಮರ್ಥ್ಯವಿದೆ!

ನಾದತರಂಗಗಳೆಂದರೆ ಬರೇ ಪದ್ಯ-ಪಠ್ಯಗಳಲ್ಲ ಅಥವಾ ಬರೇ ರಾಗಗಳ ಬಾರಿಸುವಿಕೆಯಲ್ಲ. ಅವು ವಾತಾವರಣದಲ್ಲಿ ಹರಡಿಕೊಂಡಿರುತ್ತವೆ. ಮಾನವನ ನರಮಂಡಲದಲ್ಲಿನ ಏರುಪೇರುಗಳಿಂದಾಗಿ ಉಂಟಾಗುವ ಖಿನ್ನತೆಗೆ 'ನಾದ ಥೆರಪಿ' ದಿವ್ಯೌಷಧವಾಗಿ ಪರಿಣಮಿಸುತ್ತದೆ.

ಈ ನಾದಚಿಕಿತ್ಸೆಯ ಸಂಶೋಧನ ತಂಡದಲ್ಲಿ ಸಂಗೀತಜ್ಞರಿದ್ದಾರೆ, ಜ್ಯೋತಿಷಿಗಳಿದ್ದಾರೆ, ಬರಹಗಾರರಿದ್ದಾರೆ, ಕವಿಗಳಿದ್ದಾರೆ, ವೈದ್ಯರುಗಳಿದ್ದಾರೆ, ಗಾಯಕ-ಗಾಯಕಿಯರಿದ್ದಾರೆ. ಇವರೆಲ್ಲರನ್ನೊಳಗೊಂಡ ಈ ಕಾರ್ಯತಂಡದ ಚಟುವಟಿಕೆ ಈಗ ಪ್ರಗತಿಯ ಪಥದಲ್ಲಿದೆ. ರೋಗಿಯನ್ನು ಸ್ಪರ್ಶಿಸದೆ, ಕೇವಲ ಅವನ/ಅವಳ ಹುಟ್ಟಿದ ದಿನಾಂಕ, ನಕ್ಷತ್ರ, ರಾಶಿ, ಆಹಾರ ಪದ್ಧತಿ ಇವುಗಳ ಆಧಾರದಲ್ಲಿ ಪರೀಕ್ಷೆಯನ್ನು ನಡೆಸಿ ಮೂರು, ಆರು ಅಥವಾ ಒಂಬತ್ತು ದಿನಗಳ ಅವಧಿಯ ಶುಶ್ರೂಷೆಯಾದ ಗುಣಪಡಿಸಬೇಕೆಂಬುದು ನಮ್ಮ ಪ್ರಯತ್ನ.

ಈ ಬಗ್ಗೆ ಈಗಾಗಲೇ ಎಂಟು - ಹತ್ತು ಪ್ರಯೋಗಗಳು ಯಶಸ್ವಿಯಾಗಿದ್ದು, ಸದ್ಯೋಭವಿಷ್ಯದಲ್ಲಿ ಈ ಚಿಕಿತ್ಸೆಯನ್ನು ಲೋಕಾರ್ಪಣ ಮಾಡಬೇಕೆಂಬುದೇ ನನ್ನ ಪ್ರಬಲ ಇಚ್ಛೆ.

♦ **ಈಗ ಈ ನಿಮ್ಮ 68ರ ಹರೆಯದಲ್ಲಿ ಸಂಗೀತ ಕ್ಷೇತ್ರದಲ್ಲಿ ನೀವು ಇದುವರೆಗೆ ಮಾಡಿರುವ ಕೆಲಸಗಳ ಬಗ್ಗೆ ನಿಮಗೆ ತೃಪ್ತಿ ಇದೆಯೆ? 'ನಾದ ಥೆರಪಿ'ಯನ್ನು ಹೊರತು ಪಡಿಸಿ, ನಿಮ್ಮ ಕಣ್ಣ ಮುಂದಿರುವ ಕನಸುಗಳೇನು? ಈ ಯೋಜನೆಗಳ ಹಿಂದಿನ ಉದ್ದೇಶಗಳೇನು?**

- ಇದುವರೆಗೆ ಮಾಡಿರುವ ಕೆಲಸಗಳ ಬಗ್ಗೆ ನಾನು ಪೂರ್ಣ ತೃಪ್ತನೇನಲ್ಲ. ನಾನು ಹುಟ್ಟಿ ಬೆಳೆದದ್ದು ಶ್ರೀಕೃಷ್ಣನ ನಾಡಾಗಿರುವ ಉಡುಪಿಯಲ್ಲಿ. ನಮ್ಮ ಕೃಷ್ಣ ದೂರದೃಷ್ಟಿಯುಳ್ಳವನು. ಅವನ ಭಕ್ತರೂ ಅಷ್ಟೇ! ಹೀಗಾಗಿ ನನ್ನೂರಿನಲ್ಲಿ ಮಾಡಿದ, ಮಾಡಬೇಕೆಂದಿರುವ ಕೆಲಸಗಳ ಬಗ್ಗೆ ನಾನು ಪೂರ್ತಿ ಹರ್ಷಿತನಾಗಿಲ್ಲ.

ಕನ್ನಡ ಭಾಷೆಯಲ್ಲಿ ವಚನ, ಸುಳಾದಿ, ಮುಕ್ತಕ, ತ್ರಿಪದಿ, ಭಾಮಿನಿ ಷಟ್ಪದಿ, ಭಾವಗೀತೆ,

ಭಕ್ತಿಗೀತೆ, ವಿವಿಧ ಧಾರ್ಮಿಕ ಗೀತೆ, ಸ್ತೋತ್ರಗಳು, ಹರಿಭಕ್ತಿಸಾರ, ಯಕ್ಷಗಾನದ ಹಾಡು, ಭಗವದ್ಗೀತೆಯ ಸಾಲುಗಳು - ಎಲ್ಲಕ್ಕೂ ರಾಗ ಹೊಂದಿಸಿ ಹಾಡುವ ಕ್ರಮವನ್ನು ಅನೇಕರಿಗೆ ಕಲಿಸಿಕೊಟ್ಟಿರುವ ಬಗ್ಗೆ ಹರ್ಷ ಇದೆ.

ಕನ್ನಡ ಭಾಷೆಯಲ್ಲೇ ವಿಪುಲವಾಗಿರುವ ಸಾಹಿತ್ಯವನ್ನು ಬಳಸಿಕೊಂಡೇ ನಮ್ಮ ಭಾರತೀಯ ಸಂಗೀತ ಮೆರೆಯಬೇಕು. ತನ್ಮೂಲಕ ಕನ್ನಡದ ಎಲ್ಲ ಪ್ರಕಾರಗಳ ಕಾವ್ಯವನ್ನು ಪರಿಚಯಿಸಿಕೊಂಡು, ಭಾಷೆಯ ಮಹತ್ತ್ವದ ಅರಿವಿನೊಂದಿಗೆ, ಸಂಗೀತದ ಪ್ರಭಾವವೂ ಎಷ್ಟಿದೆಯೆಂಬುದನ್ನು ಅರಿಯುವಂತಾಗಬೇಕು. ಇದು ನನ್ನ ಕನಸು.

'ವಚನ ಸಾಹಿತ್ಯ' - ಇದು ಕನ್ನಡ ಭಾಷೆಯಲ್ಲಿ ಮಾತ್ರವೇ ಇರುವ ಸಾಹಿತ್ಯ ಪ್ರಕಾರ. ಅಪಾರ ಅರ್ಥ-ಆಶಯ (ಪಾರಮಾರ್ಥಿಕ-ಲೌಕಿಕ) ಹೊಂದಿರುವ ಈ ವಚನಗಳು ಸಂಗೀತದ ಮಾಧ್ಯಮದ ಮೂಲಕ ಜನಮನ ತಟ್ಟುವಂತಾಗಬೇಕು. ಇದು ನನ್ನ ತೀವ್ರ ಆಶಯ.

72 ಜನಕರಾಗಗಳ ಪೈಕಿ ಪ್ರತಿಯೊಂದರಲ್ಲೂ ಸೃಷ್ಟಿಯಾಗುವ 484 ಜನ್ಯರಾಗಗಳ ಬಗೆಗಿನ ಪ್ರಾಥಮಿಕ ಪರಿಚಯ ಕೃತಿಗಳನ್ನು ಒಂದೊಂದಾಗಿ 'ನಾದವೈಭವಂ' ಪ್ರಕಾಶನದಡಿಯಲ್ಲಿ ಹೊರತರಬೇಕು. ಇದು ನನ್ನ ಮುಂದಿನ ಹೆಜ್ಜೆ.

ಆಗಲೇ ಹೇಳಿದಂತೆ, 'ನಾದವೈಭವಂ' ಸಂಸ್ಥೆಯ 'ನಾದಚಿಕಿತ್ಸಾ' (ನಾದ ಥೆರಪಿ) ಯೋಜನೆ ಸಹೃದಯರ ಸಹಕಾರದಿಂದ ಲೋಕಾರ್ಪಣಗೊಂಡು ಯಶಸ್ಸು ಪಡೆಯಬೇಕು. ಇದು ನನ್ನ ಸಂಕಲ್ಪ.

ಪರ್ವ : ಒಂದು

ವಾಸುದೇವ ನಾದಾಭಿಯಾನ

ಭಾಗ : ಒಂದು

ಸಖ್ಯ - ಸಾಮೀಪ್ಯ

ಮತ್ತೆ ಬಾರವೆ ಆ ದಿನಗಳು?

ಬಿ. ಮಧುಕರ ಕಾಮತ್

ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ಕಳೆದ ಒಂದಿಷ್ಟು ವರ್ಷಗಳನ್ನು ಹತ್ತಿರ ಹತ್ತಿರ ಐವತ್ತು ವರ್ಷಗಳ ನಂತರ ನೆನಪಿಸಿಕೊಂಡಾಗ 'ತೇಹಿ ನೋ ದಿವಸಾ ಗತಾಃ' ಎಂಬೊಂದು ಉದ್ಗಾರ ಹೊರಡುತ್ತದೆ. 'ಅಷ್ಟೊಂದು ಸುಂದರವಾದ ದಿನಗಳು ಮತ್ತೆ ಬಾರವೆ? ಎಂದೂ ಅನ್ನಿಸುತ್ತದೆ. ಈಗಿನ ಕಾಲದ ಮಕ್ಕಳು ಕಂಡು, ಕೇಳಿ ಅರಿಯದ ಸ್ವಾತಂತ್ರ್ಯ, ತಂಟೆ ಮತ್ತು ಕಲಿಕೆ ಒಟ್ಟೊಟ್ಟಿಗೇ ನಮ್ಮ ಜೀವನವನ್ನು ಸುಂದರವಾಗಿರಿಸಿದ್ದ ದಿವಸಗಳವು. ಐದಾರು ವರ್ಷಗಳ ಕಾಲ ಒಟ್ಟಿಗೆ ಕಲಿತು, ಬದುಕಿನ ಹಾದಿಯಲ್ಲಿ ಬೇರೆ ಬೇರೆ ದಿಕ್ಕಿಗೆ ಹೋದ ಸ್ನೇಹಿತರಲ್ಲಿ ದೀರ್ಘಕಾಲ ನನ್ನೊಂದಿಗೆ ಸಂಪರ್ಕ ಇರಿಸಿಕೊಂಡದ್ದು ವಾಸುದೇವ ಭಟ್ಟರು, ಶಾಂತರಾಜ ಐತಾಳರು ಮತ್ತು ಪ್ರಭಾಕರ ನಾಯಕರು. ಶಾಲಾದಿನಗಳಲ್ಲಿ ಅತ್ಯಂತ ಆತ್ಮೀಯರಾಗಿದ್ದ ಇವರೊಡನೆ ಕುಳಿತು ನಾಲ್ಕು ಮಾತನಾಡಿದಾಗ, ನಮ್ಮ ಶಾಲಾದಿನಗಳ ಸುಂದರ ನೆನಪು ಬಂದು, 'ಮತ್ತೆ ಬಾರವೆ ಆ ದಿನಗಳು?' ಎಂಬ ಮಧುರವಾದ ಯಾತನೆ ನನ್ನನ್ನು ಕಾಡುತ್ತದೆ.

ನನಗೆ ನೆನಪಿರುವ ಹಾಗೆ ನಾವಲ್ಲಿ ಆರನೆಯ ತರಗತಿಯಿಂದ ಎಸ್ಸೆಸ್ಸೆಲ್ಸಿ ತನಕ ಒಟ್ಟಿಗೆ ಕಲಿತಿದ್ದೆವು. ಏನು ಕಲಿತೆವು ಎನ್ನುವುದಕ್ಕಿಂತ ಏನೇನು ತಂಟೆ ಮಾಡಿದೆವು ಎನ್ನುವುದೇ ಈಗ ಹೆಚ್ಚೆಚ್ಚು ನೆನಪಾಗುತ್ತದೆ. 'ತುಂಬಾ ಸ್ಟ್ರಿಕ್ಟ್' ಎಂದು ಖ್ಯಾತರಾಗಿದ್ದ ಅನಂತಕೃಷ್ಣ ಸಾಮಗರು ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರೆಂಬ ಸಂಗತಿಗೆ ಹೊರತಾಗಿಯೂ, ಇವತ್ತಿನ ಮಕ್ಕಳು ಅನುಭವಿಸಲಿಕ್ಕೆ ಸಾಧ್ಯವಿಲ್ಲದಷ್ಟು ಸುಂದರವಾದ ಬಾಲ್ಯವನ್ನು ನಾವು ಕಂಡಿದ್ದೆವು.

ನಮ್ಮ ಮಿತ್ರವೃಂದಕ್ಕೆ ಕೊಂಚ ತಡವಾಗಿಯೇ ಸೇರಿಕೊಂಡ ವಾಸುದೇವ ಭಟ್ಟರು ವಯಸ್ಸಿನಲ್ಲಿ ನಮಗಿಂತ ಕೊಂಚ ಹಿರಿಯರು. ಈಗಿನ ಹಾಗೆ ಆಗಲೂ ಅವರು ಶುಭ್ರ ಶ್ವೇತವರ್ಣದ ಬಟ್ಟೆ ತೊಟ್ಟು ಬರುತ್ತಿದ್ದರು. ನೋಡಲೂ ಬೆಳ್ಳಗೆ ಚಂದವಾಗಿದ್ದರು. ಕ್ಲಾಸಿನ ಹುಡುಗರಿಗಿಂತ ಹೆಚ್ಚು ಗಂಭೀರವಾಗಿದ್ದರು. ಕೊಂಚ ಬುದ್ಧಿವಂತರೂ ಆಗಿದ್ದಿರಬೇಕು. ಆ ದಿವಸಗಳಲ್ಲೇ ಪತ್ರಿಕೆಗಳಲ್ಲಿ ಬರೆಯುತ್ತಿದ್ದಿರಬೇಕು. ನಮಗಿಂತ ಸ್ವಲ್ಪ ಬೇರೆಯೇ ಆಗಿ ಕಾಣಿಸುತ್ತಿದ್ದ ಅವರು ನಿಧಾನವಾಗಿ ನಮ್ಮ ಸ್ನೇಹದ ಪರಿಧಿಗೆ ಸೇರಿಹೋದರು.

ಆ ದಿವಸಗಳಲ್ಲಿಯೇ ಅವರು ಸಂಗೀತ ವಿದ್ವಾಂಸರಾಗಿದ್ದರು. ಅವರ ಸುಶ್ರಾವ್ಯವಾದ ಹಾಡುಗಾರಿಕೆ ಅವರನ್ನು ಮತ್ತಷ್ಟು ಹತ್ತಿರಕ್ಕೆ ತಂದಿತು. ಬಿಡುವಿನ ಅವಧಿಯಲ್ಲಿ ಅವರು ನನಗೆ ಬೇಕಾದಂತೆ ಹಾಡಿ ಸಂತೋಷ ಕೊಡುತ್ತಿದ್ದರು. ಆ ಹೊತ್ತಿಗೇ ಶಾಸ್ತ್ರೀಯ ಸಂಗೀತಗಾರನೆಂದು ಗುರುತಿಸಲ್ಪಟ್ಟ ಅಹಂಕಾರ ಅವರಲ್ಲಿರಲಿಲ್ಲ.

ವಾಸುದೇವ ಭಟ್ಟರಿಗೂ ನನಗೂ ಸಮಾನ ವ್ಯಸನವೊಂದಿತ್ತು, ನಶ್ಯಸೇವನೆ. ನಾವಿಬ್ಬರು ಗುಟ್ಟಿನಲ್ಲಿ ನಶ್ಯ ಹಂಚಿಕೊಳ್ಳುವ ಸಂಗತಿ ಅಧ್ಯಾಪಕರಿಗೆ ತಿಳಿದು ಒಂದಿಷ್ಟು ದಿನ ಬೇರೆ ಬೇರೆ ಕುಳಿತುಕೊಳ್ಳುವ ಶಿಕ್ಷೆಗೂ ಗುರಿಯಾಗಬೇಕಾಯಿತು.

ವಾಸುದೇವ ಭಟ್ಟರು ಬಹುಮುಖ ಪ್ರತಿಭಾವಂತರಾಗಿದ್ದರು. ಹಾಡುತ್ತಿದ್ದರು. ನಾಟಕಗಳನ್ನು ಮಾಡುತ್ತಿದ್ದರು. ಛದ್ಮವೇಷಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗೆಲ್ಲುತ್ತಿದ್ದರು. ಶಾಲೆಯ ವಿದ್ಯಾರ್ಥಿ ಮುಖಂಡನೂ ಆಗಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ, ನನ್ನ ಆತ್ಮೀಯ ಮಿತ್ರರಾಗಿದ್ದರು.

ನನ್ನ ತಂದೆ ಬುರ್ಡೆ ಸದಾನಂದ ಕಾಮತರು ಸ್ವರ್ಣೋದ್ಯಮಿಯಾಗಿದ್ದರು. 'ಚಿನ್ನ ಮಿತಿ' (gold control) ಕಾನೂನು ಬಂದಾಗ ವಾಹನಗಳ ವ್ಯಾಪಾರದತ್ತ ನನ್ನ ಗಮನ ಹರಿಯುವಂತೆ ಮಾಡಿದರವರು. ಮತ್ತೆ ಸ್ವರ್ಣೋದ್ಯಮಕ್ಕೆ ಹಿಂದಿರುಗಿ ಬಂದ ನಂತರ ನನ್ನ ಜಗತ್ತೇ ಬೇರೆಯಾಯಿತು. ನಿರಂತರ ದುಡಿಮೆ ನನ್ನ ಮಂತ್ರವಾಯಿತು. ಎಷ್ಟೋಂದು ಜನರಿಗೆ ಅನ್ನದ ಮಾರ್ಗ ತೋರಿಸಿ, ಉದ್ಯೋಗವನ್ನಿತ್ತ ನನ್ನ ಸಂಸ್ಥೆ ಇವತ್ತು ರಾಜ್ಯದಲ್ಲಿಯೇ ಅಗ್ರಪಂಕ್ತಿಯಲ್ಲಿದೆ. ನಾಲ್ಕು ಜನರಿಗೆ ನೆರವಿತ್ತು ಪಡೆವ ಆತ್ಮಸಂತೋಷ ಎಲ್ಲಕ್ಕಿಂತ ಹಿರಿಯ ಸಂತೋಷ ಎಂಬ ವಿಷಯವನ್ನು ಗುರುಹಿರಿಯರ ಕೃಪೆಯಿಂದ ನಾನು ಅರಿತಿದ್ದೇನೆ. 'ನಾನು ಕೊಡಬಲ್ಲೆ' ಎಂಬುದನ್ನು ಅರಿತು ಕೂಡಾ, ಈ ನನ್ನ ಬಾಲ್ಯಮಿತ್ರ ವಾಸು ನನ್ನಲ್ಲಿ ಕೈಚಾಚುವುದಿಲ್ಲವಲ್ಲ, ಈ ಒಂದು ಸಂಗತಿ ನನ್ನ ಸ್ನೇಹವನ್ನು ನೂರ್ಮಡಿ ಹೆಚ್ಚಿಸಿದೆ.

ಶಾಲೆ ಬಿಟ್ಟ ನಂತರ ನಮ್ಮ ವಾಸುದೇವ ಭಟ್ಟರು ದೊಡ್ಡ ಸಂಗೀತ ವಿದ್ವಾಂಸರಾದರು. ಅವರು ಸಂಗೀತ, ನಾಟಕಗಳನ್ನು ನಿರ್ದೇಶಿಸಿದರು, ಕ್ಯಾಸೆಟ್‌ಗಳನ್ನು ಮಾಡಿಸಿದರು, 'ಭುವನಜ್ಯೋತಿ' ಎಂಬ ಸಿನಿಮಾವನ್ನು ಮಾಡಿದರು, ಸಂಗೀತ ಶಿಕ್ಷಣವನ್ನು ಕೊಡತೊಡಗಿದರು, 'ನಾದವೈಭವಂ' ಕಟ್ಟಿದರು, ಬಹುದೊಡ್ಡ ಹೆಸರಾಗಿ ಬೆಳೆದರು; ಹಾಗೆ ಬೆಳೆಯುತ್ತಾ ಕೈಸುಟ್ಟುಕೊಂಡರು ಎಂದೆಲ್ಲಾ ಅವರಿವರು ನನ್ನಲ್ಲಿ ಹೇಳುತ್ತಿದ್ದರು. ನನ್ನ ಬಾಲ್ಯಕಾಲದ ಮಿತ್ರ ಒಂದು ದಿನ ತನ್ನ ಅಳಲನ್ನು ನನ್ನಲ್ಲಿ ಹೇಳಿಕೊಳ್ಳಲಿಲ್ಲ!

ಪತ್ರಿಕೆಗಳಲ್ಲಿ ಅವರ ಫೋಟೋ, ಹೆಸರುಗಳನ್ನು ಕಂಡಾಗೆಲ್ಲ ನನಗೆ ಬಾಲ್ಯದ್ದೇ ನೆನಪಾಗುತ್ತದೆ. ಶಾಂತರಾಜ ಐತಾಳರೋ, ಪ್ರಭಾಕರ ನಾಯಕರೋ ಫೋನ್ ಮಾಡಿದಾಗೆಲ್ಲ ವಾಸುದೇವ ಭಟ್ಟರ ಮಾತು ಬಂದೇ ಬರುತ್ತಿತ್ತು. ಜೊತೆಗೆ ಕುಳಿತು ಒಂದು ಚಿಟಿಕೆ ನಶ್ಯ ಹಂಚಿಕೊಂಡ ಸ್ನೇಹದ ಸ್ವಾದ ಬಲ್ಲವರಷ್ಟೇ ಬಲ್ಲರು!

ವಾಸುದೇವ ಭಟ್ಟರು ಆಗೀಗ ನನ್ನಲ್ಲಿ ಬಂದು ಮಾತನಾಡುತ್ತ ತಮ್ಮ 'ನಾದಥೆರಪಿ'ಯ ಕನಸನ್ನು ಹೇಳಿಕೊಳ್ಳುತ್ತಾರೆ. ಸಂಗೀತದ ಅಪರಿಮಿತ ಶಕ್ತಿಯ ಬಗ್ಗೆ ಅಪಾರವಾದ ನಂಬಿಕೆ ಅವರಿಗೆ. ಅವರ ಅಂತರಂಗದ ಮಾತುಗಳನ್ನು ಹಂಚಿಕೊಳ್ಳಲು ಈ ಗೆಳೆಯನಲ್ಲಿಯೂ ಅವರಿಗೆ ಅಷ್ಟೇ ನಂಬಿಕೆ. ಸಂಗೀತದಂತೆಯೇ ಅವರ ಸಾಹಚರ್ಯ ನನಗೆ ಕೊಡುತ್ತಿರುವ ಸಂತೋಷದ ಬಗ್ಗೆ ನಾಲ್ಕು ಮಾತು ನೆನಪಿಸಿಕೊಂಡಾಗ ಇಷ್ಟೆಲ್ಲ ನೆನಪಾಯಿತು ನೋಡಿ, ಇದೇ ಬಾಲ್ಯಕಾಲದ ಸ್ನೇಹದ ಅದ್ಭುತ ಶಕ್ತಿ!

ಶ್ರುತಿ ಮಾಡಿಟ್ಟ ವೀಣೆ

✍ ಡಾ. ನಾ. ಮೊಗಸಾಲೆ

ಶ್ರುತಿ ಮಾಡಿಟ್ಟ ವೀಣೆಯ ಹಾಗೆ ಇವರ ಭೇಟಿ
ಅಥವಾ ಬಿಟ್ಟುಬಂದ ಊರಿಗೆ ಮರಳಿ ಹೋದ ಹಾಗೆ

ಮಾತು, ಮಾತು, ಮಾತಿನಿಂದಲೆ ಪ್ರೀತಿ ಹುಟ್ಟಿ
ದೇಶ ಕಾಲವ ಗೆದ್ದು ನೂತಂತೆ ಅಂಬರವ
ನಡುವೆ ಹಾಲು ಚೆಲ್ಲಿದ ಹಾಗಿರುವ ನಗೆ
ಚಿಟಿಕೆ ನಸ್ಯದ ನಶೆ
ಸಂಗೀತದ ತೇರು ಬೀದಿಗೆ ಒಯ್ದು
ಅಲ್ಲಿ ತಾನೇ ತಾನಪಲ್ಲವಿಯಾಗುವ
ವರಸೆ.

ಅಯ್ಯ, ಭಟ್ಟರೇ! ನಿಮ್ಮದಾವ ನಮೂನೆಯ ಹಕ್ಕಿಗೂಡು ಇದು
ನಮಗೂ ಕೊಟ್ಟು ತಾವು
ಎಷ್ಟು ಮಂದಿಗೆ ಹಾರಕಲಿಸಿದಿರಿ!
ಯಾವ ದೂರ-ರಹದಾರಿಗಳ ಅಳತೆ ಮಾಡದೆ
ಹೇಗೆ ಎಳೆದಿರಿ ತೇರು ಇಷ್ಟು ವರುಷ?
(ಬಯಸದೇ ಶಿಷ್ಯರಿಂದ ಕಿಂಚಿತ್ತು ಪ್ರತಿಫಲವ?)

ನೆನೆಯುತ್ತದೆ ನನ್ನ ಮನ
ತುಂತುರು ಮಳೆಯ ಸುಖದಲ್ಲಿ ನಿಮ್ಮ ನೆನಪ!
ಸುಡುಬೇಸಗೆಯಲ್ಲಿ ಬಿರುಗಾಳಿ ಬೀಸುವ ಮೊದಲು
ಸಂಜೆ ಹೊತ್ತಿನ ತಂಗಾಳಿ - ಚಾವಡಿಯ ತನಕ

ನೋಡಿ
ಹಣ ಪದವಿ ಹೆಸರು ಅಹಂಕಾರಗಳ ಮೀರಿ
ಯಾಕೆ ದಾಟುತ್ತಿದ್ದೀರಿ ಹೊಳೆ?

ಅಥವಾ ಮತ್ತೆ ಬರುವಿರಿ ಏನು ಆ ಕಡೆಯ
ಶಿಷ್ಯರಿಗೆ ಮೊಗೆದು ಕೊಟ್ಟು, ಏತದ ನೀರು?

ವಾಸುದೇವ
ಇಲ್ಲ ಎಂದರು ನನಗೆ ಹೊಳೆಯ ಹರಿವಿನ ನಾದ
ದೊಡನೆ ಕೇಳುವ ಸುನಾದವು ನಿಮ್ಮದೇ?
ನಿಲ್ಲಿ; ಕಿವಿಗೊಟ್ಟು ಕೇಳೋಣ; ಅಥವಾ ಹೇಳಿ
ನಿಮ್ಮ ಮೈಮರೆವಿನಲಿ ಹುಟ್ಟೀತೆ ಈ ಬೆರಗು?

18679

ಒಂದಿಷ್ಟು ನೆನಪುಗಳು

✍ ಕಿನ್ನಿಮೂಲ್ಕಿ ರಾಮಭಟ್

1957 ರಿಂದ 1979 ರವರೆಗೆ ಮುಲ್ಕಿಯ ಮೆಡಲಿನ್ ಹೈಸ್ಕೂಲಿನಲ್ಲಿ ನಾನು ಕನ್ನಡ ಅಧ್ಯಾಪಕನಾಗಿದ್ದ ದಿವಸಗಳನ್ನು ಈ ಇಳಿವಯಸ್ಸಿನಲ್ಲಿ ನೆನಪಿಸಿಕೊಳ್ಳುವುದು ಕೊಂಚ ಕಷ್ಟವೇ. ಉಡುಪಿಯಲ್ಲಿ ಪತ್ರಕರ್ತರಾಗಿದ್ದ ಯು. ಎಸ್. ಭಟ್ಟರು ನನ್ನ ಸ್ನೇಹಿತರಾಗಿದ್ದರು. ಅವರ ಮಗ ವಾಸುದೇವ ಭಟ್ಟರು ನಮ್ಮಲ್ಲಿ ಸಂಗೀತ ಅಧ್ಯಾಪಕರಾಗಿ ಸೇರಿಕೊಂಡರು. ಅವರು ಅವಿವಾಹಿತರಾಗಿದ್ದರು. ನಾನು ವಿವಾಹಿತನಾಗಿದ್ದರೂ ನನ್ನ ಕುಟುಂಬ ಉಡುಪಿಯಲ್ಲಿಯೇ ಉಳಿದಿತ್ತು. ಮೂಲ್ಕಿಯ ಕೋಟೆಕೇರಿಯಲ್ಲಿ ಬಾಡಿಗೆ ಮನೆ ಹಿಡಿದು ನಾವಿಬ್ಬರೂ ಒಟ್ಟಿಗೆ ಇಪ್ಪತ್ತು ವರ್ಷಕ್ಕೂ ಹೆಚ್ಚು ಕಾಲ ಕಳೆದಿದ್ದೆವು. ನಮ್ಮ ಸಂಬಂಧ ಸ್ನೇಹದ ಎಲ್ಲೆ ಮೀರಿ ಗುರುಶಿಷ್ಯರ ಬಾಂಧವ್ಯವೋ ಅಣ್ಣತಮ್ಮಂದಿರ ಬಾಂಧವ್ಯವೋ ಆದಂತಿತ್ತು.

ನಾನು ಲೇಖಕನೂ ಆಗಿದ್ದ ದಿವಸಗಳವು. ಭಾಸಕವಿಯ 'ಸ್ವಪ್ನವಾಸವದತ್ತಾ' ಮತ್ತು 'ಪ್ರತಿಜ್ಞಾಯೌಗಂಧರಾಯಣ'ಗಳನ್ನು 'ವಾಸವದತ್ತೆ' ಮತ್ತು 'ಪ್ರತಿಜ್ಞೆ' ಎಂಬ ಹೆಸರಲ್ಲಿ ಕನ್ನಡದಲ್ಲಿ ತಂದಿದ್ದೆ. 'ವಾಸವದತ್ತೆ' ಬನ್ನಂಜೆ ರಾಮಾಚಾರ್ಯರ ಪತ್ರಿಕೆ 'ಸುದರ್ಶನ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. 'ಪ್ರತಿಜ್ಞೆ' ಪುಸ್ತಕರೂಪದಲ್ಲಿ ಪ್ರಕಟವಾಗುವುದಕ್ಕೆ ಮೊದಲು 'ಪ್ರಕಾಶ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. 'ಸಹವಾಸಿ'ಯಾದ ಕಾರಣಕ್ಕೆ ವಾಸುದೇವ ಭಟ್ಟರು ನನ್ನೆಲ್ಲಾ ಬರಹಗಳ ಮೊದಲ ಓದುಗರೂ, ವಿಮರ್ಶಕರೂ, ಪ್ರೋತ್ಸಾಹಿಗಳೂ ಆಗಿದ್ದರು.

ವಾಸುದೇವ ಭಟ್ಟರಿಗಾಗಿ ನಾನು ಗೀತರೂಪಕಗಳನ್ನು ಬರೆಯತೊಡಗಿದ್ದು ಆಗಲೇ. 'ಮಕ್ಕಳ ಮಿತ್ರ ಏಸು', 'ಮೇರಿ ಮೆಗ್ದಲೀನ್', 'ಇಸಾಕನ ಬಲಿದಾನ', 'ಸ್ವರ್ಣ ಹರಿಣ', 'ವಾಲ್ಮೀಕಿ' ಮೊದಲಾದ ರೂಪಕಗಳಿಗೆ ಸಾಹಿತ್ಯ ನನ್ನದಾದರೆ, ಸಂಗೀತ ಸಂಯೋಜನೆ ಮತ್ತು ನಿರ್ದೇಶನ ವಾಸುದೇವ ಭಟ್ಟರದ್ದು.

ಅವರ ಸಹವಾಸದಿಂದಲೋ ಏನೋ, ಕನ್ನಡ ಪದ್ಯಭಾಗಗಳನ್ನು ರಾಗವಾಗಿ ಹಾಡುತ್ತಾ ಪಾಠ ಮಾಡುವ ಹವ್ಯಾಸ ನನ್ನದಾಯಿತು. ಎಸ್.ಎಸ್.ಎಲ್.ಸಿ.ಗೆ ಆ ದಿವಸಗಳಲ್ಲಿ ನಾನು ಮಾಡುತ್ತಿದ್ದ ಕನ್ನಡ ಪಾಠ ನನ್ನ ಹಾಡುವಿಕೆಯಿಂದಾಗಿಯೇ ಜನಪ್ರಿಯವಾಗಿತ್ತು. ಒಮ್ಮೆ ಕೊರ್ನೇಲಿಯಸ್ ಎಂಬ subject inspector, ಕುಡುಬಿ ಎಂಬ DDPIಯವರ ಜೊತೆ ಶಾಲಾ ಇನ್ಸ್‌ಪೆಕ್ಷನ್‌ಗೆ ಬಂದಾಗ ನಾನು ಷಟ್ಪದಿ ಭಾಗವೊಂದನ್ನು ಹಾಡುತ್ತಾ ಪಾಠ ಮಾಡುತ್ತಿದ್ದೆ. 'ಪಠ್ಯವಿಷಯಕ್ಕೆ ನನ್ನ ರಾಗ ಹೊಂದಿಕೊಳ್ಳುತ್ತದೆಯೇ, ರಾಗಪ್ರಕಾರ ಆ ಹಾಡು ಹಾಡಿದ್ದು ಸರಿಯಾಗಿದೆಯೇ, ಯಾವ ರಾಗ ಅದು' ಎಂಬೆಲ್ಲ ಪ್ರಶ್ನೆಗಳನ್ನು ಅವರು

ವಿರುದ್ಧನಿಯಲ್ಲಿ ಕೇಳಿದರು. ಶಾಲೆಯ ಸಂಗೀತ ಅಧ್ಯಾಪಕರಾದ ವಾಸುದೇವ ಭಟ್ಟರನ್ನು ಕರೆಸಿ ಇದೇ ಪ್ರಶ್ನೆಗಳನ್ನು ಕೇಳಿದರು. ವಾಸುದೇವ ಭಟ್ಟರು ಒಂದು ಕ್ಷಣ ಕೂಡಾ ವ್ಯಯ ಮಾಡದೇ ರಾಗದ ಹೆಸರು ಹೇಳಿ, "ಅದ್ಭುತವಾದ ರಾಗ, ಚೆಂದವಾದ ರಾಗ, ವಿಷಯಕ್ಕೆ ಚೆನ್ನಾಗಿ ಹೊಂದಿಕೊಳ್ಳುವ ರಾಗ" ಎಂದು ಶಿಫಾರಸು ಮಾಡಿದರು. ಒಂದು ತಿಂಗಳ ನಂತರ ಬಂದ ಇನ್ಸ್‌ಪೆಕ್ಷನ್ ರಿಪೋರ್ಟಿನಲ್ಲಿ ನನ್ನ ಪಾಠದ ಬಗ್ಗೆ ಪ್ರತ್ಯೇಕವಾದ, ವಿವರವಾದ ಶ್ಲಾಘನೆಯ ಮಾತುಗಳಿದ್ದವು.

ನಾನು ಶ್ರೀ ರಾಘವೇಂದ್ರ ಗುರುಗಳ ಬಗ್ಗೆ ಕೆಲವು ಹಾಡುಗಳನ್ನು ಬರೆದಿದ್ದೆ. "ಆತ್ಮದ ತೇರು ಸಾಗುತಿದೆ" ಎಂಬ ಹಾಡಿನ ಕೆಲವು ಚರಣಗಳಷ್ಟೇ ಈಗ ನೆನಪಾಗುತ್ತಿವೆ. ಹಾಗೆಯೇ ಬಪ್ಪನಾಡು ಕ್ಷೇತ್ರದ ಬಗ್ಗೆಯೂ ಕೆಲವು ಹಾಡುಗಳನ್ನು ರಚಿಸಿದ್ದೆ. "ಜಯದುರ್ಗೇ ಮೂಲಿಕಾಪುರವಾಸಿನಿ" ಬಹಳ ಪ್ರಸಿದ್ಧವಾದ ನನ್ನ ರಚನೆ. ವಾಸುದೇವ ಭಟ್ಟರು ಈ ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿ, ಶ್ರೇಷ್ಠ ಗಾಯಕರಿಂದ ಹಾಡಿಸಿ, ಕ್ಯಾಸೆಟ್ ಮಾಡಿಸಿದರು. ಸಾಹಿತ್ಯದ ಬಗ್ಗೆ ಅವರಿಗೆ ತುಂಬ ಅಭಿಮಾನವಿತ್ತು. ಹಾಗೆಂದೇ ಎಲ್ಲಾ ಹಂತಗಳಲ್ಲಿ ನನಗೆ ಸಲ್ಲಬೇಕಾದ ಕೀರ್ತಿಯನ್ನು ಅವರು ನನಗೇ ಕೊಡಿಸಿದ್ದರು.

ಬಪ್ಪನಾಡು ಕ್ಷೇತ್ರದ ಭಕ್ತಿಗೀತೆಗಳ ಕ್ಯಾಸೆಟ್ ಬಹಳ ಜನಪ್ರಿಯವಾಯಿತು. ಈ ಸಂದರ್ಭದಲ್ಲಿ ಒಂದು ಸನ್ಮಾನ - ಅಭಿನಂದನ ಸಭೆಯೂ ನಡೆಯಿತು. ವಾಸುದೇವ ಭಟ್ಟರು ಸಾಹಿತ್ಯ ರಚಕನಾದ ನನಗೆ ಪುನರೂರು ಅವರ ಹಸ್ತದಿಂದ ಸನ್ಮಾನ ನಡೆಸಿಕೊಟ್ಟರು.

ನಮ್ಮಿಬ್ಬರ ನಡುವೆ ಹಲವು ಸಮಾನ ಪ್ರೀತಿಯ ವಿಷಯಗಳಿದ್ದವು. "ತೇನವಿನಾ ತೃಣಮಪಿ", "ಯಾವ ಮೋಹನ ಮುರಲಿ", "ಮುಂಗಾರ ಮುಗಿಲುಗಳೇ ಇಳಿದು ಬನ್ನಿ" ಮೊದಲಾದ ಭಾವಗೀತೆಗಳನ್ನು ನಾವಿಬ್ಬರೂ ಮೆಚ್ಚಿಕೊಂಡು ಹಾಡುತ್ತಿದ್ದೆವು. ಇಬ್ಬರಿಗೂ ಸಾಹಿತ್ಯ, ಸಂಗೀತ ಎಂದರೆ ಪ್ರೀತಿ. ಇಬ್ಬರಿಗೂ ನಶ್ಯದ ಹವ್ಯಾಸ. ಸುದೀರ್ಘ ಕಾಲ ಆ ಹುಡುಗಿಯರ ಶಾಲೆಯಲ್ಲಿ ಉಳಿದ ಅಧ್ಯಾಪಕರು ನಾವಿಬ್ಬರೇ ಆಗಿದ್ದರೂ, ಹೆಸರು ಕೆಡಿಸಿಕೊಳ್ಳದೇ ಗೌರವದಿಂದ ಬದುಕಿದ್ದೆವು. ನಮ್ಮ ಮತ್ತೊಬ್ಬ ಒಳ್ಳೆಯ ಸ್ನೇಹಿತ ಶ್ರೀ ಮಿತ್ತೂರು ಒಂದಿಷ್ಟು ವರ್ಷ ನಮ್ಮೊಂದಿಗೆ ಅಧ್ಯಾಪಕರಾಗಿದ್ದರು.

ವಾಸುದೇವ ಭಟ್ಟರು ತುಂಬಾ ನಮ್ರ ಸ್ವಭಾವದವರು. ನನ್ನ ಉಪದೇಶಗಳನ್ನು ವಿನಮ್ರನಾಗಿ ಕೇಳುತ್ತಿದ್ದರು. ನನ್ನ ಸಲಹೆಗಳನ್ನು ಗೌರವದಿಂದ ಸ್ವೀಕರಿಸುತ್ತಿದ್ದರು. ಮದುವೆಯ ಮಾತು ಬಂದಾಗ ಅವರು ನನ್ನ ಅಭಿಪ್ರಾಯ ಕೇಳಿಕೊಂಡು ಬಂದದ್ದು ಈಗ ನೆನಪಾಗುತ್ತದೆ. ನಾವಿಬ್ಬರೂ ಮೂಲ್ಕಿಯ ಪೋಸ್ಟ್‌ಆಫೀಸ್ ಗುಡ್ಡೆಯಲ್ಲಿ ಕುಳಿತು ಮಾತನಾಡುತ್ತಿದ್ದೆವು. ಬಡವರ ಮನೆಯ, ಒಳ್ಳೆಯ ಸ್ವಭಾವದ ಹುಡುಗಿಯನ್ನು ಮದುವೆಯಾಗೆಂದು ನಾನು ಹೇಳಿದ್ದೆ. ಅವರೆದುರು ಬಂದಿದ್ದ ಸಂಬಂಧ ನನಗೆ ಪರಿಚಿತವೇ ಆಗಿತ್ತು. ಅಂತೆಯೇ ಎರಡು ಶಿಫಾರಸು ಮಾತುಗಳನ್ನು ಹೇಳಿದ್ದ ನೆನಪು. ವಾಸುದೇವ ಭಟ್ಟರು ನನ್ನ ಮಾತು ತೆಗೆದು ಹಾಕಿರಲಿಲ್ಲ ಎಂಬ ಸಮಾಧಾನ ನನ್ನ ಮನಸಿನಲ್ಲಿ ಇವತ್ತೂ ಉಳಿದಿದೆ.

ನಾನು ನಿವೃತ್ತನಾಗಿ ಉಡುಪಿಯ ಒಂದು ಮೂಲೆಯಲ್ಲಿ ಎಂಭತ್ತು ವರ್ಷ ದಾಟಿದ ಬದುಕನ್ನು ಸವೆಸುತ್ತಿದ್ದೇನೆ. ಇಷ್ಟು ವರ್ಷಗಳಲ್ಲಿ ವಾಸುದೇವ ಭಟ್ಟರು ಏನೆಲ್ಲಾ ಸಾಧಿಸಿ ಎಷ್ಟು ಎತ್ತರ ಏರಿದ್ದಾರೆ. ಆದರೂ ಅದೇ ಸಹವಾಸದ, ಒಡನಾಟದ ಸೌಜನ್ಯವನ್ನು ಉಳಿಸಿಕೊಂಡು ತಿಂಗಳಿಗೋ ಹದಿನೈದು ದಿನಗಳಿಗೋ ಒಮ್ಮೆ ಭೇಟಿಯಾಗುತ್ತಾರೆ. ಹಳೆಯ ನೆನಪುಗಳನ್ನು ಚಿತ್ತಪಟಲದ ಮೇಲೆ ತಂದುಕೊಡುತ್ತಾರೆ. ಪ್ರೀತಿ ವಿಶ್ವಾಸಗಳ ಬಿಸುಪನ್ನು ಉಳಿಸಿಕೊಡುತ್ತಾರೆ. ಅವರು ಸ್ಕೂಟರ್ ಏರಿ ಹೋದ ನಂತರ ನನಗೆ ನೆನಪಾಗುವ ಒಂದು ಘಟನೆ, ಪ್ರತಿ ಸಲ ಅವರು ಬಂದು ಹೋದ ನಂತರ ನೆನಪಾಗುವುದು ಅದೇ ಘಟನೆ -

ಮೂಲ್ಕಿಯ ಒಡನಾಟದ ದಿನಗಳವು. ಅಸೌಖ್ಯದಿಂದ ನಾನು ಕೈಕಾಲುಗಳನ್ನೂ ಅಲುಗಿಸಲಾಗದ ಸ್ಥಿತಿಯಲ್ಲಿದ್ದೆ. ವಾಸುದೇವ ಭಟ್ಟರು ನನ್ನನ್ನು ಎತ್ತಿಕೊಂಡು ಹೋಗಿ ಸ್ನಾನ ಮಾಡಿಸುತ್ತಿದ್ದರು. ನಾನು ಸಂಕೋಚ ಪಟ್ಟರೆ, 'ನೀವು ನನ್ನ ಅಣ್ಣ, ನೀವು ನನ್ನ ತಂದೆ' ಎಂದೆಲ್ಲ ಹೇಳುತ್ತಿದ್ದರು. ನಿಜಕ್ಕೂ ನಾನಾಗ ಅವರ ಮಗುವೇ ಆಗಿದ್ದೆ.

ಅವರು ಈ ಘಟನೆಗಳನ್ನೆಲ್ಲ ಮರೆತಿರಬಹುದು.

ನಾನು ಹೇಗೆ ಮರೆಯಲಿ ಹೇಳಿ?

ಜೊತೆಯಲ್ಲಿ ಕಳೆದ ದಿನಗಳು

✍ ಎಂ. ವಿ. ಭಟ್, 'ಶ್ರೀ ಮಿತ್ತೂರು'

ಸಂಗೀತ ವಿದ್ವಾಂಸರಾದ ಉಡುಪಿಯ ಶ್ರೀ ವಾಸುದೇವ ಭಟ್ಟರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅಪರೂಪದ ಸಂಗೀತ ಘನವಿದ್ವಾಂಸರಲ್ಲಿ ಒಬ್ಬರು. ಮಾತ್ರವಲ್ಲ, ಉಳಿದವರಿಗಿಂತ ಇವರದ್ದು ಒಂದು ತೂಕ ಹೆಚ್ಚೇ ಅಂದರೂ ಅತಿಶಯವಾಗದೆಂದು ಭಾವಿಸುತ್ತೇನೆ. ತನ್ನ 'ನಾದವೈಭವಂ' ಸಂಸ್ಥೆಯ ಮೂಲಕ ನೂರಾರು, ಸಾವಿರಾರು ವಿದ್ಯಾರ್ಥಿಗಳಿಗೆ ಸಂಗೀತ ಕಲಿಸಿಕೊಟ್ಟ ಕೀರ್ತಿ ಅವರಿಗೆ ಸಲ್ಲಬೇಕು. ಧನ್ಯತೆ ಅವರ ಪಾಲಾಗಬೇಕು.

ಪುರಂದರದಾಸರ ಕೀರ್ತನೆಗಳನ್ನು ಭಾವುಕರಾಗಿ, ತನ್ಮಯತೆಯಿಂದ ಇವರಷ್ಟು ಸೊಗಸಾಗಿ ಹಾಡುವವರನ್ನು ನಾನು ನೋಡಲಿಲ್ಲ. ಅವರು ಹಾಡುವ ಪರಿಯನ್ನು ನೋಡಬೇಕಾದರೆ ನೋಡುವವರಿಗೆ ಪುಣ್ಯ ಬೇಕು. ಅಂತಹ ಮಾಟ, ಶ್ರೀ ಭಟ್ಟರ ಹಾಡುಗಾರಿಕೆಯಲ್ಲಿ. ಇಂತಿದ್ದರೂ ಅವರಿಗೆ ಸರ್ಕಾರದಿಂದಾಗಲಿ, ಖಾಸಗಿ ಸಂಘ ಸಂಸ್ಥೆಗಳಿಂದಾಗಲಿ ಸಲ್ಲಬೇಕಾದಷ್ಟು ಪ್ರಶಸ್ತಿಯಾಗಲಿ, ಪುರಸ್ಕಾರವಾಗಲಿ ಸಲ್ಲಲಿಲ್ಲವೆಂದೇ ನನ್ನ ತಿಳಿವಳಿಕೆ.

ವಾಸುದೇವ ಭಟ್ಟರ ಹಾಡುಗಾರಿಕೆ, ಹಾಡುವಾಗಿನ ಅವರ ಹಾವಭಾವ ಎಷ್ಟು ಆಕರ್ಷಕವೋ ಅಷ್ಟೇ ಆಕರ್ಷಕ, ಮೃದು ಅವರ ಮಾತು. ಸುಂದರ ಶರೀರ, ಬೆಳ್ಳಿಯ ಮಿಂಚುವ ಕಣ್ಣುಗಳು, ಶುಭ್ರವಾದ ಪಂಚೆ ಉಟ್ಟುಕೊಂಡು ಅಷ್ಟೇ ಶುಭ್ರವಾದ ಅಂಗಿ ಹಾಕಿಕೊಂಡು ನಗುನಗುತ್ತಾ ನೆಟ್ಟಗೆ ಬಂದುಬಿಟ್ಟರೆ ಎಂತಹವರೂ ಅವರತ್ತ ಒಮ್ಮೆ ದೃಷ್ಟಿ ಹಾಯಿಸದೆ ಖಂಡಿತ ಇರಲಾರರು. ಇದು ಸುಮಾರು ಮೂವತ್ತು, ಮೂವತ್ತೈದು ವರ್ಷಗಳ ಹಿಂದಿನ ಅವರ ಭಾವ ಭಂಗಿ. ಈಗಿನದ್ದನ್ನು ನಾನು ಹೇಳಲಾರೆ. ಯಾಕೆಂದರೆ ಇತ್ತೀಚೆಗಿನ ವರ್ಷಗಳಲ್ಲಿ ನಾನವರನ್ನು ನೋಡಲಿಲ್ಲ. ಒಂದೆರಡು ಸಲ ದೂರದರ್ಶನದಲ್ಲೇನೋ ನೋಡಿದ ಮಸುಕಾದ ನೆನಪು.

ವಾಸುದೇವ ಭಟ್ಟರು ಕೇವಲ ಶಾಸ್ತ್ರೀಯ ಸಂಗೀತದಲ್ಲಿ ಮಾತ್ರ ನಿಪುಣರಲ್ಲ. ನೃತ್ಯ ನಾಟಕಗಳಲ್ಲೂ ಪರಿಣತಿ ಪಡೆದ ಕಲಾವಿದರು. ಸ್ತ್ರೀವೇಷಕೊಪ್ಪುವ ಅವರ ಶರೀರ, ಮುಖ, ನಡೆ - ಸ್ತ್ರೀವೇಷ ಹಾಕಿಕೊಂಡು ಸ್ಟೇಜಿಗೆ ಬಂದರೆ ಇವರು ಗಂಡಸಲ್ಲ, ಹೆಂಗಸು ಎಂದು ಪಣ ತೊಟ್ಟುಕೊಳ್ಳಬಹುದು.

ನಾನು ಮೂಲ್ಕಿಯ ಮೆಡಲಿನ್ ಗರ್ಲ್ಸ್ ಹೈಸ್ಕೂಲಿನಲ್ಲಿ ಹಿಂದೀ ಪಂಡಿತನಾಗಿದ್ದಾಗ

ವಾಸುದೇವ ಭಟ್ಟರು ಸಂಗೀತ ಶಿಕ್ಷಕರಾಗಿ ಕಾನ್ವೆಂಟಿಗೆ ಸೇರಿದರು. ಅವರು ಅಕ್ಕಸಾಲಿಗರ ಕೇರಿಯಲ್ಲಿ ನಮ್ಮ ಮನೆಯ ಹತ್ತಿರವೇ ಒಂದು ರೂಮ್ ಮಾಡಿಕೊಂಡು ಅಲ್ಲಿರಲು ತೊಡಗಿದರು. ನಾವು ಮತ್ತೆ ನೆರೆಹೊರೆಯವರಾದುದರಿಂದ ಪ್ರತಿದಿನ ಒಟ್ಟಿಗೇ ಸ್ಕೂಲಿಗೆ ಹೋಗಿ ಬರುತ್ತಿದ್ದೆವು. ಕೆಲವು ವೇಳೆ ಅವರು ಮಧ್ಯಾಹ್ನದ ಊಟಕ್ಕೆ ಕನ್ನಡ ಪಂಡಿತರಾದ ಕಿನ್ನಿಮೂಲ್ಕಿ ರಾಮಭಟ್ಟರೊಂದಿಗೆ ಹಳೇ ಬಸ್ ಸ್ಟ್ಯಾಂಡಿನಲ್ಲಿದ್ದ ಗೋಪಾಲ ಭಟ್ಟರ 'ದುರ್ಗಾಭವನ'ಕ್ಕೆ ಹೋಗುವುದೂ ಇತ್ತು. ಅಪರೂಪಕ್ಕೊಮ್ಮೆ ರಜೆಯ ದಿನಗಳಲ್ಲಿ ಅವರು ಉಡುಪಿಗೆ ಹೋಗದೆ ಮೂಲ್ಕಿಯಲ್ಲೇ ಇದ್ದರೆ ನಮ್ಮ ಮನೆಗೆ ಬಂದು ನನ್ನ ತಾಯಿಯ ಯೋಗಕ್ಷೇಮ ವಿಚಾರಿಸುತ್ತಾ, ಅವರ ವಿನಂತಿಯ ಮೇರೆಗೆ ಒಂದೆರಡು ಹಾಡುಗಳನ್ನು ಹಾಡಿ ಕಾಫಿ ಕುಡಿದು ಹೊರಟು ಹೋಗುತ್ತಿದ್ದರು. ಮಾತ್ರವಲ್ಲ, ನನ್ನ ತಾಯಿಯನ್ನು ಉಡುಪಿಗೆ, ಅವರ ಮನೆಗೆ ಬರಬೇಕೆಂದು ಯಾವಾಗಲೂ ಹೇಳುತ್ತಿದ್ದರು. ಅವರ ಒತ್ತಾಯದ ಮೇರೆಗೆ ನಾನೊಮ್ಮೆ ತಾಯಿಯನ್ನು ಕರೆದುಕೊಂಡು ಬೈಲಕೆರೆ ಮನೆಗೆ ಹೋಗಿದ್ದೆ.

ವಾಸುದೇವ ಭಟ್ಟರ ತಂದೆ ಮದ್ರಾಸಿನಿಂದ (ಈಗ ಚೆನ್ನೈ) ಹೊರಡುತ್ತಿದ್ದ 'ದಿ ಮೈಲ್' ಆಂಗ್ಲ ಪತ್ರಿಕೆಯ ವರದಿಗಾರರಾಗಿದ್ದರು. ಅವರ ನಿಧನದ ನಂತರ ಮಗ ವಾಸುದೇವ ಭಟ್ಟರೂ ಕೆಲವು ವರ್ಷಗಳ ತನಕ ಅದರ ವರದಿಗಾರರಾಗಿ ದುಡಿದಿದ್ದರು. ಆ ಮೂಲಕ ಅವರಿಗೆ ತಕ್ಕಷ್ಟು ಸಂಭಾವನೆಯೂ ಬರುತ್ತಿತ್ತು.

ಮೂಲ್ಕಿ ಕಾನ್ವೆಂಟಿನಲ್ಲಿ ನಾನು, ರಾಮಭಟ್ಟರು, ವಾಸುದೇವ ಭಟ್ಟರು ಮತ್ತು ಕಟೀಲಿನ ದಿ. ವಾಸುದೇವ ಮುಗೇರಾಯರು - ಹೀಗೆ ನಾಲ್ಕು ಮಂದಿ ಪುರುಷಾಧ್ಯಾಪಕರಾಗಿದ್ದೆವು. ನಮ್ಮದು ಪ್ರತ್ಯೇಕ ಸ್ಟಾಫ್‌ರೂಮ್.

ರಾಮಭಟ್ಟರಿಗೆ ಸಂಗೀತದಲ್ಲಿ ಅಪರಿಮಿತ ಒಲವು. ಅವರ ಕಂಠಮಾಧುರ್ಯಕ್ಕೆ ಎಂತಹ ಅರಸಿಕನೂ ತಲೆದೂಗಬೇಕು. ಅವರು ಯಾವುದಾದರೂ ಒಂದು ಕ್ಲಾಸಿನಲ್ಲಿ ಪಾಠ ಮಾಡುತ್ತಿರುವಾಗ ಸಂದರ್ಭಾನುಸಾರ ಪಠ್ಯದ ಹಾಡೊಂದನ್ನು ಹಾಡಿದರೆ ಇಡೀ ಶಾಲೆ ಚೈತನ್ಯಶೂನ್ಯವಾಗಿ ಬಿಡುತ್ತಿತ್ತು. ಇತರ ಕ್ಲಾಸುಗಳಲ್ಲಿ ಪಾಠ ಮಾಡುತ್ತಿದ್ದ ಅಧ್ಯಾಪಕರು ಪಾಠ ಪ್ರವಚನ ನಿಲ್ಲಿಸಿ ಹಾಡಿನ ರಸಾಸ್ವಾದನೆಯಲ್ಲಿ ತಲ್ಲೀನರಾಗಿಬಿಡುತ್ತಿದ್ದರು. ಬಿಡುವಿನ ವೇಳೆ ನಮ್ಮ ಸ್ಟಾಫ್‌ರೂಮಿನಲ್ಲಿ ರಾಮಭಟ್ಟರು ಹಾಡೊಂದನ್ನು ಹಾಡಿದರೆ ವಾಸುದೇವ ಭಟ್ಟರು ತಾಳಹಾಕುತ್ತಿದ್ದರು. ಸಂಗೀತದ ರಸ ಗಂಧ ಅರಿಯದಿದ್ದರೂ ನಾನು ಅವರ ಸಂಗೀತ ಸುಧೆಯಲ್ಲಿ ತೇಲಿಹೋಗುತ್ತಿದ್ದೆ. ವಾಸುದೇವ ಮುಗೇರಾಯರು ಇಬ್ಬರು ಭಟ್ಟರ ಹತ್ತಿರವೂ ಇನ್ನೊಂದು ಹಾಡು, ಮತ್ತೊಂದು ಹಾಡು ಹಾಡುವಂತೆ ಒತ್ತಾಯಿಸುತ್ತಿದ್ದರು.

1966ರಲ್ಲಿ ನಾನು ಕಾನ್ವೆಂಟ್ ತೊರೆದು ಕೇಂದ್ರೀಯ ವಿದ್ಯಾಲಯಗಳಿಗೆ ಸಂಸ್ಕೃತಾಧ್ಯಾಪಕನಾಗಿ ಹೋದಮೇಲೆ ಭಟ್ಟದ್ವಯರ ಸಂಗೀತ ರಸಾಯನವನ್ನು ಸವಿಯುವ ನನ್ನ ಭಾಗ್ಯ ಶೂನ್ಯವಾಯಿತು. ಮುಂದೆ ಉದ್ಯೋಗನಿಮಿತ್ತ ವರ್ಗವಾಗಿ ಕರ್ನಾಟಕವನ್ನೇ

ಬಿಟ್ಟು, ಬೇರೆ ಬೇರೆ ಊರುಗಳಿಗೆ ಹೋದಮೇಲೆ ವಾಸುದೇವ ಭಟ್ಟರೊಂದಿಗಿನ ಮಧುರ ಬಾಂಧವ್ಯ, ಸಂಪರ್ಕ ಕೂಡಾ ತಪ್ಪಿಹೋಯಿತು. ಆದರೂ ಮುಗುಳುನಗೆಯ, ನಗುನಗುತ್ತಾ ಮಾತನಾಡುತ್ತಿದ್ದ ಭಟ್ಟರ ಸಿಹಿನೆನಪು ಮಾತ್ರ ಅಳಿದು ಹೋಗಲಿಲ್ಲ, ಹೋಗುವುದೂ ಇಲ್ಲ. ಅವರೂ ಅಷ್ಟೆ! ಕಳೆದ ವಾರ ಬೆಂಗಳೂರಿಗೆ ಬಂದವರು ಬಸವನಗುಡಿಯಿಂದ ಫೋನ್ ಮಾಡಿ ನಮ್ಮೆಲ್ಲರ ಯೋಗಕ್ಷೇಮವನ್ನು ವಿಚಾರಿಸಿಕೊಂಡರು. ಕಳೆದ ವರ್ಷ ನಾನು ಅವರಿಗೆ ನನ್ನ ಆತ್ಮಕಥೆ, 'ನೆನಪಿನ ಬಿಂಬಗಳು'ನ್ನು ಕಳುಹಿಸಿಕೊಟ್ಟಿದ್ದೆ. ತುಂಬಾ ಸಂತೋಷವಾಗಿತ್ತು ಅವರಿಗೆ. ನಮ್ಮ ಗ್ರೂಪಿನಲ್ಲಿ ಅತ್ಯಂತ ಚಿಕ್ಕ ವಯಸ್ಸಿನವರಾಗಿದ್ದ, ವಿಜ್ಞಾನ ಅಧ್ಯಾಪಕ ಮಿತ್ರ ವಾಸುದೇವ ಮುಗೇರಾಯರು ಮಾತ್ರ ಅಕಾಲ ಮರಣಕ್ಕೆ ಬಲಿಯಾಗಿ ಹೊರಟುಹೋದುದು ಅತೀವ ದುಃಖದ ಸಂಗತಿ. ಸದಾ ಹಾಸ್ಯದ ಹೊನಲನ್ನು ಹರಿಸುತ್ತಿದ್ದ ಅವರ ನೆನಪು ಸದಾ ಉಳಿಯುವಂತಹದ್ದು.

ಸಜ್ಜನರೂ ಸಹೃದಯಿಯೂ ಆದ ವಾಸುದೇವ ಭಟ್ಟರು ವಯಸ್ಸಿನಲ್ಲಿ ನನಗಿಂತ ಕಿರಿಯರು. ಆದರೆ ನಮ್ಮೊಳಗಿನ ಬಾಂಧವ್ಯಕ್ಕೆ, ಸ್ನೇಹಬಿಂದುವಿಗೆ ಮತ್ತು ಅವರ ಮೇಲಿನ ಮಮತೆಗೆ ಈ ವಯಸ್ಸಿನ ಅಂತರ ಅಡ್ಡಿ ಬರಲೇ ಇಲ್ಲ. ಅವರ ಮೇಲಿನ ಮಮತೆಗೆ ಇನ್ನೊಂದು ಕಾರಣವಿದೆ. ಅವರ ಹಿರಿಯರು ನಮ್ಮೂರು ಪುತ್ತೂರಿನ ಕಲ್ಲೇದವರಂತೆ. ಇದೊಂದು ನನಗೆ ಆಕರ್ಷಣೆಯಾಗಿತ್ತು. ಮನುಷ್ಯನಿಗೆ ಯಾರು ಎಲ್ಲಿದ್ದರೂ ಹೇಗಿದ್ದರೂ 'ನಮ್ಮೂರಿನ ಜನ' ಎಂದೊಡನೆ ಸ್ವಾಭಾವಿಕವಾಗಿ ಒಂದು ಬಗೆಯ ಆತ್ಮೀಯತೆ ಉಂಟಾಗಿ ಬಿಡುತ್ತದೆ. ಅದು ಸಹಜ. ಅಲ್ಲಿ ಜಾತಿ, ವಯಸ್ಸು, ಅಂತಸ್ತು ಅಡ್ಡಗೋಡೆಯಾಗಿ ನಿಲ್ಲುವುದಿಲ್ಲ.

ಭಟ್ಟರ ಹೆಣ್ಮಕ್ಕಳೂ ಸಂಗೀತ, ನೃತ್ಯದಲ್ಲಿ ಪ್ರವೀಣೆಯರು ಎಂಬುದನ್ನು ಕೇಳಿದ್ದೇನೆ. ದೂರದರ್ಶನದ ಕಾರ್ಯಕ್ರಮವೊಂದನ್ನು ನೋಡುತ್ತಾ ನನ್ನ ಪತ್ನಿ ಒಮ್ಮೆ "ವಾಸುದೇವ ಭಟ್ಟರ ಮಕ್ಕಳು" ಎಂದು ಹೇಳಿದಾಗ ನಾನು ಅವರನ್ನು ಕಣ್ಣು ಬಿಟ್ಟು ನೋಡಿದ ನೆನಪು.

18679

ಶುಭ್ರ ದಿರಿಸು, ನಡಿಗೆ ಬಿರುಸು - ಇವರೇ ನಮ್ಮ ವಾಸು!

✍ ಎಚ್. ಶಾಂತರಾಜ ಐತಾಳ್

ಉಡುಪಿಯ ಬೋರ್ಡ್ ಹೈಸ್ಕೂಲ್ ಎಂದರೆ 1950ರ ದಶಕದಲ್ಲಿ ಹರಿತ ಬುದ್ಧಿಶಕ್ತಿಯ ವಿದ್ಯಾರ್ಥಿಗಳ ಹಾಗೂ ನುರಿತ ಧೀಶಕ್ತಿಯ ಅಧ್ಯಾಪಕರ ಸಮಾಗಮ. ಆಂಗ್ಲ ಮಾಧ್ಯಮದ ಶಾಲೆ ಎಂದರೇನೆಂದೇ ತಿಳಿಯದ ಕಾಲವದು. ಮಾತೃಭಾಷೆ ಕನ್ನಡದಲ್ಲೇ ಎಲ್ಲ ಪಾಠಗಳೂ ನಡೆಯುತ್ತಿದ್ದುದರಿಂದ ವಿದ್ಯಾರ್ಥಿಗಳಿಗೆ ಶ್ರವಣದಲ್ಲಿ ತನ್ಮಯತೆ, ಮನನದಲ್ಲಿ ಆತ್ಮೀಯತೆ ಹಾಗೂ ನಿಧಿಧ್ಯಾಸನದಲ್ಲಿ ಸಂಪೂರ್ಣತೆ ಲಭಿಸುತ್ತಿದ್ದವು. ಒಂಬತ್ತನೇ ತರಗತಿ, ಅಂದರೆ ಫೋರ್ತ್ ಫಾರಂನಲ್ಲಿ ಆದ ತರಗತಿಗಳ ವಿಂಗಡಣೆಗಳು ಎಸ್.ಎಸ್.ಎಲ್.ಸಿ. ತನಕ ಮುಂದುವರಿಯುತ್ತಿದ್ದವು. 'ಎ' ವಿಭಾಗ ಎಂದರೆ ಕಾಂಪೋಸಿಟ್ ಲೆಕ್ಕ, ಸ್ಪೆಷಲ್ ಹಿಂದಿ ಕಲಿಯುವ ಆಸಕ್ತ ವಿದ್ಯಾರ್ಥಿಗಳ ಗುಂಪಾದರೆ, 'ಬಿ' ಮತ್ತು 'ಸಿ' ವರ್ಗಗಳಲ್ಲಿ ವಿಶೇಷ ಕನ್ನಡ ಹಾಗೂ ಇತರ ವಿಷಯಗಳನ್ನು ಕಲಿಯುವ ವಿದ್ಯಾರ್ಥಿಗಳು. ಆದರೆ ಯಾವುದೇ ವಿಭಾಗದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 35ರಿಂದ 40, ಅಷ್ಟೆ. ಇನ್ನು ವಿದ್ಯಾರ್ಥಿನಿಯರ ಸಂಖ್ಯೆ ಅಷ್ಟಕ್ಕಷ್ಟೆ.

ಆರು, ಏಳು ತರಗತಿಗಳನ್ನು ಉಡುಪಿಯ ಮಾಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪೂರೈಸಿ, ಎಂಟನೇ ತರಗತಿಗೆ ಬೋರ್ಡ್ ಹೈಸ್ಕೂಲಿನಲ್ಲಿ ಪ್ರವೇಶ ಗಿಟ್ಟಿಸಿದಾಗ ನನಗೆ ಎಲ್ಲವೂ ಹೊಸತು, ಹೊಸತು. ಆಗ ಸಹಪಾಠಿಗಳೆಲ್ಲರ ಲಕ್ಷ್ಯವಿದ್ದುದು ಎಲ್ಲಿಯೂ ಮುಗ್ಗರಿಸದೆ ಎಸ್.ಎಸ್.ಎಲ್.ಸಿಯನ್ನು ತಲುಪುವತ್ತ ಹಾಗೂ ಆ ಅಂತಿಮ ಘಟ್ಟದಲ್ಲಿ ಜಯಭೇರಿ ಬಾರಿಸುವತ್ತ ಮಾತ್ರ. ಬೇರೆ ಶಾಲೆಗಳಿಂದ ಸೇರ್ಪಡೆಗೊಂಡ ನನ್ನಂಥ ಹೊಸಬರಿಗೆ ಕೆಲ ಅಧ್ಯಾಪಕರು 'ಹಾಯರ್ ಎಲಿಮೆಂಟರಿ ಶಾಲೆಯ ಹಂಚು ಪುಡಿ ಮಾಡಿ ಇಲ್ಲಿಯ ಬೆಂಚು ಬಿಸಿ ಮಾಡಲಿಕ್ಕೆ ಬಂದವರು' ಎಂದು ಕೊಂಡಾಡಿದ್ದುಂಟು. ಆದರೆ ನಾನು ಮಾತ್ರ ಈ ಬಿರುದನ್ನು ಹುಸಿಗೊಳಿಸುವಲ್ಲಿ ಸಫಲನಾದೆ. ಒಂಬತ್ತನೇ ಕ್ಲಾಸ್ ಲೀಡರ್ ಆಗಿ, ಆ 'ರಿವಾಜ'ನ್ನು ಮುಂದಿನ ಎರಡು ವರ್ಷಕ್ಕೂ ಮುಂದುವರಿಸಲು ನನಗೆ ಸಾಧ್ಯವಾಯಿತು. ಇದಕ್ಕೆ ಕಾರಣ, ಆಗ ಶಾಲೆಯ ಹೆಡ್ಮಾಸ್ಟರ್ ಆಗಿದ್ದ ಬಿ. ಅನಂತಕೃಷ್ಣ ಸಾಮಗರು. ಈ ಎಚ್.ಎಂ. ಎಂಬ ಶಿಸ್ತಿನ ಸಿಪಾಯಿ ಶಾಲೆಯಲ್ಲಿ ಚುನಾವಣೆಗಳಿಗೆ ಅವಕಾಶ ನೀಡುತ್ತಿರಲಿಲ್ಲ. ಪ್ರತಿ ಕ್ಲಾಸಿನಲ್ಲಿ ಪ್ರತಿಭಾವಂತನೂ ಆಗಿದ್ದು ಸಾಧಾರಣವಾಗಿ ಎಲ್ಲರ ಜೊತೆ ಹೊಂದಿಕೊಳ್ಳುವ ವಿದ್ಯಾರ್ಥಿಯನ್ನು ಅವರು ಆ ತರಗತಿಯ ಮುಖಂಡ - ಮಾನಿಟರ್ ಆಗಿ ಆಯ್ಕೆ ಮಾಡುತ್ತಿದ್ದರು. ಆಗ ಸಿಲೆಕ್ಶನ್ ಇತ್ತೇ ವಿನಾ ಇಲೆಕ್ಶನ್ ಅಲ್ಲ. ಹೀಗಾಗಿ ನನಗೆ ಎಲ್ಲ

ಸಹಪಾಠಿಗಳ ನಿಕಟ ಬಾಂಧವ್ಯ ಇತ್ತು. ಇದರಿಂದಾಗಿ, ನಾನು ಗುಟ್ಟಾಗಿ ನಡೆಸಿಕೊಂಡು ಬರುತ್ತಿದ್ದ ಶ್ರೀ ಬಾಲಸರಸ್ವತೀ ಲೈಬ್ರೆರಿಯ ಪುಸ್ತಕಗಳನ್ನು ಕ್ಲಾಸ್‌ಮೇಟ್‌ಗಳಿಗೆ ಎರವಲು ನೀಡಿ ವಾಪಾಸು ಪಡೆದೇನೆಂಬ ಧೈರ್ಯವೂ ನನಗೆ ಬಂತು.

ಹುಡುಗಿಯರಿಗೆ ಕಲಿಯಲು ಸಮಾನ ಅವಕಾಶಗಳು ಇದ್ದರೂ, ವಾಸ್ತವವಾಗಿ ಹೈಸ್ಕೂಲ್ ಮಟ್ಟದಲ್ಲಿ ಕಲಿಯುತ್ತಿದ್ದ ಹುಡುಗಿಯರ ಸಂಖ್ಯೆ ತೀರ ಕಡಿಮೆ ಆಗಿತ್ತು. ಅದೂ 'ಎ' ವಿಭಾಗವೆಂದರೆ, 'ಅವ್ರೇನು ಮುಂದೆ ಕಾಲೇಜು ಕಲಿತು ಇಂಜಿನಿಯರ್, ಡಾಕ್ಟರ್ ಆಗ್ಬೇಕಾ' ಎಂಬ ಅಸಡ್ಡೆ ಹೆತ್ತವರಿಗೂ ಇತ್ತೋ ಏನೊ. ಅಂತೂ ನಮ್ಮ ಹಣೆಬರಹ! ನಮ್ಮ 'ಎ' ವರ್ಗವಂತೂ ಉದ್ದಕ್ಕೂ 'ಕನ್ನಡ ಗಂಡು ಹುಡುಗರ ಇಯತ್ತೆ'ಯಾಗಿಯೇ ಮುಂದುವರಿಯಿತು.

ಫೋರ್ತ್ ಫಾರಂ, ಅಂದರೆ ಒಂಬತ್ತನೇ ತರಗತಿ ಮುಗಿಸಿ, ಫಿಫ್ತ್ ಫಾರಂ ಎಂಬ ಹತ್ತನೇ ತರಗತಿಗೆ ಹತ್ತಿದಾಗ ನನಗೆ ಒಡನಾಡಿಯಾಗಿ ಲಭಿಸಿದವರು ಈ ವಾಸುದೇವ ಭಟ್ಟರು. ನನ್ನಂಥ ಚಡ್ಡಿ ಪೈಲ್ವಾನನಿಗೆ ಅವರ ಪ್ರಥಮ ದರ್ಶನ ಮುಜುಗರ ಉಂಟುಮಾಡಿತ್ತು. ಶುದ್ಧ ಬಿಳೀ ಪಂಚೆ, ಸ್ಪಾಟ್‌ಲೆಸ್ ಬಿಳೀ ಶರ್ಟು - ಈಗ ಅಂದರೆ ಸುಮಾರು ಐದು ದಶಕಗಳ ಮೇಲೆ ಹೇಗಿದ್ದಾರೋ ಆಗಲೂ ಹಾಗೇ ಇದ್ದರು, ಭಟ್ಟರು. ಕ್ಲಾಸಿನ ಮಾನಿಟರ್ ಎಂಬ ಬಿರುದು ಪೊತ್ತ ಮೇಲೆ ಅಂಜಿಕಿನ್ಯಾತಕಯ್ಯಾ ಎನ್ನುವ ರಕ್ಷಣೆ ಇದ್ದರೂ ಎಲ್ಲರ ಜತೆ ಸೌಹಾರ್ದದಿಂದ ಇರಬೇಕಾದ್ದೇ ನನ್ನ ಕರ್ತವ್ಯ ಎಂದು ನಾನು ಭಾವಿಸಿದ್ದೆ. ಈ 'ವಾಸು' ಎಂದರೆ ಅದೇಕೋ ನನಗೆ ಗೌರವಮಿಶ್ರಿತ ಆಕರ್ಷಣೆ ಮೂಡಿಬಂತು. ಟೆನ್ತಿನ ಒಬ್ಬ ವಿದ್ಯಾರ್ಥಿ ಇಷ್ಟೊಂದು ಬಿಳಿಯಾಗಿರಲು, ಇಷ್ಟೊಂದು ಹಸನ್ಮುಖಿನಾಗಿರಲು, ಪರಿಪಕ್ವನಾಗಿರಲು ಸಾಧ್ಯವೇ ಎಂಬ ಯೋಚನೆ ನನ್ನನ್ನು ಕಾಡುತ್ತಿತ್ತು. ಕ್ಲಾಸಿನಲ್ಲಿ ಎಲ್ಲರನ್ನೂ ನಾನು ಏಕವಚನದಿಂದ ಸಂಬೋಧಿಸುತ್ತಿದ್ದರೂ, ಈ ಶ್ವೇತಾಂಬರಧಾರಿಯನ್ನು ಮಾತ್ರ ನೀನು ತಾನು ಅಂತ ಕರೆಯುತ್ತಿರಲಿಲ್ಲ. ಬದಲಿಗೆ, 'ವಾಸು' ಎದುರು ಬಂದಾಗ ನನ್ನ ಚಡ್ಡಿಯ ತುದಿಯನ್ನು ಕೆಳಗೆ ಎಳೆದುಕೊಳ್ಳುತ್ತಿದ್ದೆ. ಇದು ಅವರಿಗೆ ಮರ್ಯಾದೆ ನೀಡುವ ಕ್ರಮವಾಗಿತ್ತೋ ಅಥವಾ ನನ್ನ ಮರ್ಯಾದೆ ಕಾಪಾಡುವ ಕ್ರಮವಾಗಿತ್ತೋ ಗೊತ್ತಿಲ್ಲ.

ಪಾಠದ ಸಮಯದಲ್ಲಿ 'ವಾಸು' ಜತೆಯೇ ಕುಳಿತುಕೊಳ್ಳಲು ನಾನು ಇಷ್ಟಪಡುತ್ತಿದ್ದೆ. ಆಗ ನನಗೆ ತಿಳಿದುಬಂದ ವಿಷಯವೇನೆಂದರೆ ಎಲ್ಲ ಉಪಾಧ್ಯಾಯರಿಗೂ ಈ ಸಭ್ಯ ವಿದ್ಯಾರ್ಥಿಯ ಮೇಲೆ ಒಂದು ವಿಶೇಷ ಅಭಿಮಾನವಿತ್ತು. ಇದಕ್ಕೆ ಒಂದು ಕಾರಣ, ಈತ ಓರ್ವ ಹಿರಿಯ ಪತ್ರಕರ್ತರ ಸುಪುತ್ರರಾದ ಯುವ ಪತ್ರಕರ್ತರೆಂಬುದು. ಅದಕ್ಕೂ ಮಿಗಿಲಾಗಿ ಅವರಿಗೆ ಶಾಸ್ತ್ರೀಯ ಸಂಗೀತದಲ್ಲಿದ್ದ ಜ್ಞಾನ ಹಾಗೂ ಅದರ ಸಾಧನೆಯಲ್ಲಿ ಆವಾಗಲೇ ಅವರು ಗಳಿಸಿದ್ದ ಔನ್ನತ್ಯ. ಹೌದು, ಆಗಲೇ ಸಂಗೀತದ ಹಲವು ಮಜಲುಗಳನ್ನು ನಮ್ಮ 'ವಾಸು' ಪಾಸು ಮಾಡಿಯಾಗಿತ್ತು. ಅವರ ಪಕ್ಕ ಕುಳಿತಾಗ, ಕ್ಲಾಸ್‌ನ ಚಿಕ್ಕ ವಿರಾಮಗಳಲ್ಲಿ ಅವರು ಅತಿ ಮೆಲ್ಲಗೆ ನನ್ನ ಕಿವಿಯಲ್ಲಿ ಗುನುಗುತ್ತಿದ್ದ ಕೆಲ ಹಾಡುಗಳು ಈಗಲೂ ಮೆಲುಕು

ಹಾಕುವಂತಿವೆ. ಅವರ ಕೋಮಲ ಕಂಠದಿಂದ ಕೆಲವೊಮ್ಮೆ ಶಾಸ್ತ್ರೀಯ ಸಂಗೀತದ ಆಲಾಪನೆಗಳ ತುಣುಕುಗಳು ಬಿತ್ತರವಾಗುತ್ತಿದ್ದವು - ನನಗೆ ಮಾತ್ರ ಎನ್ನುವಷ್ಟು ಮೃದುವಾಗಿ. ಇನ್ನೊಮ್ಮೆ 'ನಿಮ್ಮ ಮೆಚ್ಚಿನ ಚಿತ್ರಗೀತೆಗಳ' ಪ್ರಸಾರವಾಗುತ್ತಿತ್ತು. ಅದು 'ಕವಿರತ್ನ ಕಾಳಿದಾಸ'ದಲ್ಲಿ ಹೊನ್ನಪ್ಪ ಭಾಗವತರ್‌ರ ಹಾಡಿನ ಝಲಕ್ ಇದ್ದೀತು; ಅಥವಾ 'ಮುತ್ತೈದೆ ಭಾಗ್ಯ'ದ "ಮೊಂಡು ಹುಡುಗಿ ಕೇಳೊ ಈ ಹೆಣ್ಣು ಹುಳಿ ಮಾವಿನ ಹಣ್ಣು। ಗಂಡನಾದರೆ ಬಾಯ್ಗೆ ಕೆಮ್ಮಣ್ಣು" ಎಂಬ ಸ್ವಾರಸ್ಯಭರಿತ ಲೇವಡಿ ಹಾಡೂ ಆದೀತು. ಪಾಠಗಳ ನಡುವೆ ವಾಸುವಿನ ಕಂಠದಿಂದ ಹೊರಹೊಮ್ಮುತ್ತಿದ್ದ ಮೆಲುದನಿಯ ಗಾನಗಳು ನನ್ನನ್ನೂ ಸಂಗೀತಲೋಕದ ಸನಿಹಕ್ಕೆ ಒಯ್ಯುತ್ತಿದ್ದವು. ಆ ದಿನಗಳಲ್ಲಿ ನನ್ನ ಸಹಾಯವೇನಾದರೂ ಪ್ರಿಯ 'ವಾಸು'ಗೆ ಬೇಕಾಗಿದ್ದಿದ್ದರೆ, ಅದು ಇಂಗ್ಲಿಷ್ ಪ್ರಬಂಧಗಳನ್ನು ತಯಾರಿಸುವಾಗ ಮಾತ್ರ. ಅವರ ಗೆಳೆತನದ ಸೆಳೆತದೆದುರು ಈ ಕೆಲಸವಂತೂ ನನಗೆ ಕ್ಷುಲ್ಲಕವಾಗಿ ಕಾಣುತ್ತಿತ್ತು.

ಪಠ್ಯ ಹಾಗೂ ಪಾಠೇತರ ಚಟುವಟಿಕೆಗಳಲ್ಲಿ ಹಲವಾರು ವಾರ್ಷಿಕ ಸ್ಪರ್ಧೆಗಳು ನಮ್ಮ ಶಾಲೆಯಲ್ಲೂ ನಡೆಯುತ್ತಿದ್ದವು. ಕನ್ನಡ, ಆಂಗ್ಲ ಭಾಷಾ ಪ್ರಬಂಧಗಳು, ಲಘುಸಂಗೀತ ಸ್ಪರ್ಧೆಗಳಲ್ಲಿ ನನಗೂ ಯಶಸ್ಸು ಸಿಗುತ್ತಿತ್ತು. ಆದರೆ ಆಗ ನನಗೆ ಇದ್ದ ಮಹದಾಸೆ ಎಂದರೆ, ಆಗಲೇ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಉತ್ತುಂಗಕ್ಕೇರಿದ್ದ ಪ್ರಿಯ ಮಿತ್ರ 'ವಾಸು'ವಿನ ಜತೆ ನಾನೂ ಸ್ಪರ್ಧಿಸಬೇಕು ಎಂಬುದು. ಸರಿ, ಸ್ಪರ್ಧೆ ನಡೆಯುತ್ತಿರುವಾಗ ಅವರು ಲಯಬದ್ಧವಾಗಿ, ಸುಶ್ರಾವ್ಯವಾಗಿ ಸರಿಗಮಗಳ ಜತೆ ಸರಸವಾಡುತ್ತಾ ಕೇಳುಗರನ್ನೂ, ಸ್ಪರ್ಧೆಯ ನಿರ್ಣಾಯಕರನ್ನೂ ಏಕಪ್ರಕಾರವಾಗಿ ತಲ್ಲೀನರನ್ನಾಗಿಸಿ ಹಾಡುತ್ತಿದ್ದರು. ಆಗ ನನ್ನ ಕಾಲುಗಳು ಸಣ್ಣಗೆ ಕಂಪಿಸಲಾರಂಭಿಸುತ್ತಿದ್ದವು. ಆದರೂ ನನ್ನ ಸರದಿ ಬಂದಾಗ ಒಂದೋ ಬೈಜೂ ಬಾವ್ರಾದ 'ಹರಿ ಓಂ...', 'ತೂ ಗಂಗಾ ಕೀ ಮೌಝ್ ಮೆ...' ಹಾಡುಗಳನ್ನೋ 'ಪರ್‌ವರಿಶ್'ನ 'ಆಂಸೂ ಭರೀ ಹೆ' ಹಾಡನ್ನೋ ಪ್ರಸ್ತುತಪಡಿಸಿ ಸ್ಪರ್ಧೆಗಳಲ್ಲಿ ಠೇವಣಿ ಕಳಕೊಳ್ಳುವಷ್ಟರ ಮಟ್ಟಿಗೆ ಸೋಲುತ್ತಿದ್ದುದು ಈಗಲೂ ನೆನಪಾಗುತ್ತದೆ. ನನ್ನ ಸ್ಪರ್ಧಾಮನೋಭಾವವನ್ನು ಗುರುತಿಸಿ ಒಮ್ಮೆ ನನಗೆ ನೀಡಲಾದ ಸಮಾಧಾನಕರ ಬಹುಮಾನವನ್ನೇ ಮನೆಯಲ್ಲಿ ತೋರಿಸಿ, "ನೋಡಿ, ಸಂಗೀತ ವಿದ್ವಾನ್ ವಾಸುದೇವ ಭಟ್ಟರೊಡನೆ ಸ್ಪರ್ಧಿಸಿ ನಾನು ಗೆದ್ದ ಬಹುಮಾನ!" ಎಂದು ಬೊಗಳೆ ಹೊಡೆದು ಅವರಿಗೆ ಪ್ರಥಮ ಪ್ರಶಸ್ತಿ ಸಿಕ್ಕಿದ ಸಂಗತಿಯನ್ನೇ ಮರೆಮಾಚಿದ್ದೂ ಉಂಟು. ಆದರೆ ನಾನು ಸ್ಪರ್ಧೆಯಲ್ಲಿ ಹಾಡಿದ ಇವೇ ಹಾಡುಗಳು ಮುಂದಿನ ವರ್ಷಗಳಲ್ಲಿ ಇಂಜಿನಿಯರಿಂಗ್ ಕಾಲೇಜ್‌ನ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನಗಳನ್ನೇ ಗಿಟ್ಟಿಸಿಕೊಟ್ಟಿವೆ. ಯಾಕೆಂದರೆ ಅಲ್ಲಿ ನನ್ನ ಎದುರಾಳಿ ಆತ್ಮೀಯ ವಾಸುದೇವ ಭಟ್ಟರಾಗಿರಲಿಲ್ಲ!

ತನ್ನ ಜತೆಯೇ ಸ್ಪರ್ಧೆಗಿಳಿದವ ಎಂಬ ಕಾರಣದಿಂದ 'ವಾಸು'ಗೆ ನನ್ನ ಮೇಲೆ ಬೇಸರವಾಗುವ ಬದಲಿಗೆ ಪ್ರೀತಿ ಇಮ್ಮಡಿಯಾದಂತೆ ತೋರುತ್ತಿತ್ತು. ಹೀಗೆ ಎಸ್.ಎಸ್.ಎಲ್.ಸಿ. ಮುಗಿಯುವವರೆಗೆ ಎರಡು ವರ್ಷ ಕಾಲ ಕಳೆದುದೇ ಗೊತ್ತಾಗಲಿಲ್ಲ. ಆಗ ದೀರ್ಘ ಕಾಲದಿಂದ ನನ್ನ ಪ್ರಾಣಸ್ನೇಹಿತರಾಗಿದ್ದಂತಹ ಅನಿಲ ಚಂದ್ರ, ಮಧುಕರ,

ಪ್ರಭಾಕರ, ಅಣ್ಣಪ್ಪ ಇವರ ಒಡನಾಟ ಒಂದು ರೀತಿಯ ಹುಡುಗಾಟದ ಮುದ ನೀಡುತ್ತಿತ್ತು. ಈಗ ರಾಷ್ಟ್ರರಾಜಕಾರಣದಲ್ಲಿ ಮಿಂಚುತ್ತಿರುವ ಆಸ್ಕರ್ ಫೆರ್ನಾಂಡಿಸ್‌ರವರು ನಮ್ಮ ಇಡೀ ಕ್ಲಾಸಿನ ಎಲ್ಲ ವಿಭಾಗಗಳ ಸಹಪಾಠಿಗಳ ಮೆಚ್ಚಿನ ಮಿತ್ರ ಆಸ್ಕರ್ ಆಗಿದ್ದರು. ಅವರ ಮೈತ್ರಿಯಲ್ಲಿ ಹದಿಹರೆಯದವರನ್ನು ಪ್ರೌಢಿಮೆಗೆ ಒಯ್ಯುವ ಶಕ್ತಿ ಇತ್ತು. ಈ ವಾಸುದೇವ ಭಟ್ಟರ ಸಾಮೀಪ್ಯದಲ್ಲಿ ಮಾತ್ರ ಸಂಗೀತದ ಮಧುರತೆ; ತನಗೆ ಸಿದ್ಧಿಯಾದ ಸಂಗೀತದ ವಿದ್ಯೆಯನ್ನು ಪ್ರತಿಫಲಾಪೇಕ್ಷೆ ಇಲ್ಲದೆಯೂ ಧಾರೆ ಎರೆದು ಕೊಡುವ ಉದಾರತೆ; ತನ್ನ ನಡೆನುಡಿಗಳಲ್ಲಿ ನಮ್ರತೆ - ಇವುಗಳನ್ನು ಅಂದೂ ಕಂಡಿದ್ದೇನೆ, ಇಂದೂ ಕಾಣುತ್ತಿದ್ದೇನೆ.

ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ಮೇಲೆ ನಮ್ಮ ಪಥಗಳೇ ಬೇರೆಯಾದವು. ಆದರೆ ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ಚಿಗುರಿದ ಈ ಸ್ನೇಹ ನನ್ನನ್ನು ವಾಸುದೇವ ಭಟ್ಟರೊಡನೆ ಭದ್ರವಾಗಿ ಬೆಸೆದೇ ಬಿಟ್ಟಿತು. ಅವರು 'ನಾದವೈಭವಂ' ಸಂಸ್ಥೆಯನ್ನು ಹುಟ್ಟುಹಾಕಿದರು. ಸಂಗೀತ ಕ್ಷೇತ್ರದಲ್ಲಿ ಏನೆಲ್ಲ ಸಾಧನೆ ಮಾಡಿದರು. ಪ್ರಸಿದ್ಧ ಚಿತ್ರನಟರ, ಪತ್ರಿಕಾರಂಗದ ದಿಗ್ಗಜರ ಆತ್ಮೀಯ ವಲಯದಲ್ಲಿ ತಮ್ಮನ್ನು ಗುರುತಿಸಿಕೊಂಡರು. ಕನ್ನಡ, ತಮಿಳು ಚಿತ್ರರಂಗದ ಜನಪ್ರಿಯ ಗಾಯಕರಿಗೆ ತರಬೇತು ನೀಡಿದರು; ಹಿನ್ನೆಲೆ ಸಂಗೀತ ಒದಗಿಸಿದರು. ಸಿನಿಮಾ ನಿರ್ಮಾಣದಲ್ಲೂ ಕೈಯಾಡಿಸಿ, ಅಲ್ಲಿ ನಡೆದ ಷಡ್ಯಂತ್ರ, ಕುತಂತ್ರಗಳಿಂದಾಗಿ ಕೈ ಸುಟ್ಟುಕೊಂಡರು ಸಹ. ತನ್ನ ಬಿಳೀ ಬಣ್ಣದ ಹಾಗೆಯೇ ಎಲ್ಲರ ಮನಸ್ಸೂ ಶುಭ್ರ ಎಂದು ಭ್ರಮಿಸುವ ಈ ಬೋಳೇ ಸ್ವಭಾವದ ವಾಸುದೇವ ಭಟ್ಟರಿಗೆ ಅದೆಷ್ಟು ಜನ ನಂಬಿಸಿ ಟೋಪಿ ಹಾಕಿದ್ದಾರೋ!

ಸಂಗೀತ ಕ್ಷೇತ್ರದಲ್ಲಿ ಇವರ ಸಾಧನೆಯನ್ನು ಗಮನಿಸಿದರೆ, ಇವರಿಗೆ ಸಂದ ಗೌರವಗಳು, ಸನ್ಮಾನಗಳು, ಪ್ರಶಸ್ತಿಗಳು ಕಡಿಮೆ ಎಂದೇ ಹೇಳಬೇಕು. ಆದರೆ ಇದಕ್ಕಾಗಿ ಈ ವಾಸು ಎಂದಾದರೂ ತಲೆಕೆಡಿಸಿಕೊಂಡಿದ್ದಾರೆಯೇ? ಖಂಡಿತ ಇಲ್ಲ. "ನನ್ನ ಶಿಷ್ಯರು ಎಲ್ಲೆಡೆ ವಿಜೃಂಭಿಸಿ, ನನ್ನ ಸ್ಥಾನಮಾನಗಳನ್ನು ಎತ್ತಿಹಿಡಿದಿದ್ದಾರೆ. ಇದೇ ನಾನು ನಿರೀಕ್ಷಿಸುವ ಸನ್ಮಾನ! ನನ್ನ ಅಭಿಮಾನಿಗಳು, ಆತ್ಮೀಯ ಮಿತ್ರರು ನನ್ನ ಮೇಲೆ ನಿರಂತರವಾಗಿ ಎರೆಯುತ್ತಿರುವ ಪ್ರೀತಿಯ ಧಾರೆಯೇ ನನಗೆ ಪ್ರಾಪ್ತವಾಗಬೇಕಾದ ಪ್ರಶಸ್ತಿ" ಎಂದು ವಿನಮ್ರರಾಗಿ ನುಡಿಯುವ ವಾಸುದೇವ ಭಟ್ಟರನ್ನು ನೋಡುವಾಗ ಮಹಾತ್ಮಾ ಗಾಂಧಿಯವರು ಹೇಳಿದ ಮಾತು ನೆನಪಾಗುತ್ತದೆ - Humility is the only key to success - ಸೌಜನ್ಯ ಒಂದರಿಂದಲೇ ಯಶಸ್ಸನ್ನು ಸಂಪಾದಿಸಲು ಸಾಧ್ಯ - ಎಂದು.

ಸಾಧ್ಯತೆಗಳ ಹುಡುಕಾಟದ ಸಾರಥಿ

✍ ಕುರಾಡಿ ಸೀತಾರಾಮ ಅಡಿಗ

ಶ್ರೀ ಉಡುಪಿ ವಾಸುದೇವ ಭಟ್ಟರು ಕಾರ್ಯಕ್ಷೇತ್ರದಲ್ಲಿ ಶಿಕ್ಷಕರಾಗಿದ್ದುಕೊಂಡೂ ಜೀವನದುದ್ದಕ್ಕೂ ನಿರಂತರವಾಗಿ ಸಾಧ್ಯತೆಗಳ ಹುಡುಕಾಟದಲ್ಲಿ ಹಲವು ಸಾಧನೆಗಳೊಂದಿಗೆ ಸಂಗೀತದ ಹರವು, ಕೀರ್ತಿಗಳನ್ನು ಬೆಳಗಿಸಿದವರು. ಅವರನ್ನು ಪಡೆದು ಶ್ರೀಕೃಷ್ಣನ ಉಡುಪಿಯ ಮಣ್ಣಿಗೆ ಸಾಂಸ್ಕೃತಿಕ ಸೌಗಂಧ ತುಂಬಿದೆ. ಈ ಬಗ್ಗೆ ಅವರ ಸ್ನೇಹವರ್ತುಲದಲ್ಲಿರುವ ನಾವು - ಅವರ ಹಿರಿಕಿರಿಯ ಶಿಷ್ಯವೃಂದ - ಅಭಿಮಾನ ತಾಳಬೇಕಾಗಿದೆ; ಅವರ ಕುಟುಂಬ, ಬಂಧುವರ್ಗಕ್ಕೂ ಈ ಹಿರಿಮೆ ಅವಿಸ್ಮರಣೀಯವಾಗಿದೆ.

ಎಳವೆಯಿಂದಲೇ ಸಂಗೀತದ ಸಾಧ್ಯತೆಗಳ ಹುಡುಕಾಟದ ಪ್ರವೃತ್ತಿಯನ್ನು ಬೆಳೆಸಿಕೊಂಡವರು ಉಡುಪಿ ವಾಸುದೇವ ಭಟ್ಟರು. ಸಾಮಾನ್ಯವಾಗಿ ಸಂಗೀತ ಶಾಸ್ತ್ರದ ಸಂಪ್ರದಾಯವಾದಿಗಳು ಶಾಸ್ತ್ರೀಯ ಸಂಗೀತದಲ್ಲೇ ಪ್ರಾವೀಣ್ಯ ತೋರುತ್ತಾ ಸಂಗೀತ ವೈಭವವನ್ನು ಮೆರೆಸುತ್ತಿರುವರಾದರೂ, ಕನ್ನಡ ಸಾಹಿತ್ಯದ ವಿವಿಧ ಛಂದಸ್ಸುಗಳ ಪದ್ಯಗಳನ್ನು ಶಾಸ್ತ್ರಾಧಾರಿತವಾಗಿ ನಾದಮಾಧುರ್ಯದ ಸವಿಗೆ ಹಚ್ಚುವ ಪ್ರಯತ್ನ ಇತ್ತೀಚೆಗಷ್ಟೇ ರೂಢಿಯಲ್ಲಿ ಬಂದಿರುವುದು ನಮಗೆಲ್ಲ ತಿಳಿದ ಸಂಗತಿ. ಭಟ್ಟರು ತಮ್ಮ ಅಧ್ಯಾಪಕ ವೃತ್ತಿಯ ಪ್ರಾರಂಭದಿಂದಲೇ ಈ ಬಗೆಗೆ ಪ್ರಯತ್ನ ನಡೆಸುತ್ತ ಸಂಗೀತ ಶಾಸ್ತ್ರದ ಸಾಧ್ಯತೆಗಳನ್ನು ವಿಸ್ತಾರಗೊಳಿಸುವ ಪ್ರಯತ್ನ ಮಾಡುತ್ತಿದ್ದುದನ್ನು ನಾನು ಬಲ್ಲೆ. ಇದು ಪ್ರಾಯಶಃ ಐವತ್ತು ವರ್ಷಗಳ ಹಿಂದಿನ ಅನುಭವ.

ವಾಸುದೇವ ಭಟ್ಟರು ಮೂಲ್ಕಿ ಹೆಮ್ಮಕ್ಕಳ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿದ್ದ ವೇಳೆ ನಾನು ಫಲಿಮಾರು ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿದ್ದೆ. ನನ್ನ ಸಾಹಿತ್ಯ ಆಸಕ್ತಿಯಿಂದ ಆಗಾಗ್ಗೆ ಪದ್ಯಗಳನ್ನು ಬರೆಯುವ ಹವ್ಯಾಸ ಬೆಳೆಸಿಕೊಂಡದ್ದುಂಟು. ಈ ವೇಳೆಯಲ್ಲಿ ಅವರು ನನ್ನನ್ನು ಸಂಪರ್ಕಿಸಿ, ಅವರ ಶಿಕ್ಷಣಕ್ಕೆ ಅನುಕೂಲವಾಗಿರುವ ಪದ್ಯಗಳನ್ನು ಪಡೆದು ತಮ್ಮ ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟದ್ದುಂಟು. ಇಲ್ಲಿ, ಅಂತಹ ಪದ್ಯಗಳು ಅವರಿಗೆ ಎಲ್ಲೂ ಎಷ್ಟೋ ಸಿಗಬಹುದು, ಆದರೆ ನಮ್ಮವರೇ ಆಗಿ ಕವನ ಬರೆಯುವ ಪ್ರಾರಂಭದ ಹಂತದಲ್ಲಿದ್ದಾಗ ತಾನು ವಿದ್ಯಾರ್ಥಿಗಳಿಗೆ ಹೇಳಿಕೊಡುವ ಮೂಲಕ ಅವರಿಗೂ ಹೆಚ್ಚು ಉಲ್ಲಾಸ ಬರಲು ಸಾಧ್ಯವಾಗಬಹುದೆಂಬ ಸಹೃದಯತೆಯ ಸಹಾಯಭಾವವಿರುವುದೂ ಅವರ ಸೌಜನ್ಯದ ಹಿರಿಮೆ ಎನ್ನುವುದನ್ನು ಗುರುತಿಸಬಹುದು. ಆಮೇಲಿನ ದಿನಗಳಲ್ಲಿ, ಅವರು ನನ್ನ ಪತ್ನಿಯ ಕಡೆಯಿಂದ ಸಂಬಂಧಿಗಳಾದಮೇಲಂತೂ ನಮ್ಮೊಳಗಿನ ಆತ್ಮೀಯತೆ ಬೆಳೆದು ಇಂದಿನವರೆಗೂ

ಅವಿಚ್ಛಿನ್ನವಾಗಿ, ಪರಸ್ಪರ ಕಲಾತ್ಮಕ, ಸಾಹಿತ್ಯಿಕ ಹಾಗೂ ಭಾಂಧವ್ಯ ಸುಖವನ್ನು ಸವಿಯುವಂತಾಗಿರುವುದು ಭಾಗ್ಯವೆನ್ನಬೇಕು.

ನಮ್ಮೊಳಗಿನ ಸಂಗೀತ ಸಾಹಿತ್ಯಗಳ ಸಾಹಚರ್ಯ ಸದಾಕಾಲ ಹಸುರಾಗಿರುವಂತೆ ವಾಸುದೇವ ಭಟ್ಟರು ತೋರುವ ಸೌಜನ್ಯ, ಆತ್ಮೀಯ ಭಾವವನ್ನು ಸ್ಮರಿಸಲೇಬೇಕು. ನನ್ನ ಕವನ ಸಂಕಲನ ಪ್ರಕಟವಾದಾಗಲೆಲ್ಲ ಇದ್ದಕ್ಕಿದ್ದಂತೆ ಒಂದು ದಿನ ನಮ್ಮ ಅಂಗಣಕ್ಕೆ ಕಾರೊಂದು ಬಂದು ನಿಲ್ಲುತ್ತದೆ. ಯಾರು ಬಂದಿರಬಹುದೆಂದು ನಿರೀಕ್ಷಿಸುತ್ತಿರುವಾಗಲೇ ತಮ್ಮ ವಿಶಿಷ್ಟ ವೇಗದಿಂದಲೇ ನಗುನಗುತ್ತ ಕಾರಿನಿಂದಿಳಿದು ಒಳಬಂದು ಅಚ್ಚರಿ ಹುಟ್ಟಿಸುತ್ತಾರೆ. ಯೋಗಕ್ಷೇಮ - ಲೋಕಾಭಿರಾಮ ಮಾತುಕತೆಗಳಾದ ಬಳಿಕ, ತಮ್ಮ ಬಿಡುವಿಲ್ಲದ, ಗಂಟೆ-ಗಂಟೆ, ದಿನ-ದಿನದ, ಹಿಂದಿನ-ಮುಂದಿನ ಕಾರ್ಯ ಚಟುವಟಿಕೆಗಳ ಬಗೆಗೆ ಹೇಳುತ್ತಾರೆ. ಹೊರಟು ನಿಂತ ಬಳಿಕ, "ನಿಮ್ಮ ಕವನ ಸಂಕಲನದ 15-20 ಪುಸ್ತಕ ಕೊಡಿ. ನಾನು ನಮ್ಮ ವಿದ್ಯಾರ್ಥಿಗಳಿಗೆ ಕೊಡಬೇಕು" ಎನ್ನುತ್ತಾರೆ. ಪುಸ್ತಕಗಳ ಮೌಲ್ಯವನ್ನು ಕೊಟ್ಟು ಅವಸರವಸರವಾಗಿ ನಮಸ್ಕರಿಸಿ ಹೊರಡುತ್ತಾರೆ. ಇದು ವಾಸುದೇವ ಭಟ್ಟರ ಸ್ನೇಹಪ್ಪೈಖರಿ.

ಒಂದು ದಿನ ಬೆಳಬೆಳಗ್ಗೆ ನನಗೊಂದು ಫೋನ್ ಕರೆ, ಅದು ವಾಸುದೇವ ಭಟ್ಟರದು. "ಅಡಿಗರೆ, ನನಗೀಗ ಇಂದು ಮಧ್ಯಾಹ್ನಕ್ಕೆ ಒಂದು ಸ್ವಾಗತ ಗೀತೆ ರಚಿಸಿ ಕೊಡಬೇಕು ನೀವು" ಎನ್ನುತ್ತಾರೆ. ಅಷ್ಟು ಅಲ್ಪಾವಧಿಯಲ್ಲಿ ಕವನ ರಚಿಸಿ ಕೊಡಬೇಕೆಂದರೆ ನನಗೂ ಗೊಂದಲ. ಹಾಗೆಂದರೆ, "ಆಗುತ್ತದೆ; ನೀವು ಮಾಡಬೇಕು. ಮತ್ತೆ ಫೋನ್ ಮಾಡುತ್ತೇನೆ" ಅಂದರು. ಅನಿವಾರ್ಯತೆಯ ಸಂದಿಗ್ಧತೆಯಲ್ಲಿ, "ನೋಡುತ್ತೇನೆ - ಪ್ರಯತ್ನಿಸುತ್ತೇನೆ" ಎಂದು ಮಾತು ಮುಗಿಸಿದೆ. ಎಂದಿನಂತೆ ದೇವರ ಪೂಜೆಗೆ ಹೂ ಕೊಯ್ದು ತಂದು, ದೇವರೆದುರು ಕುಳಿತು ಬೆಳಗಿನ ಹ್ರಸ್ವವಾದ ಪ್ರಾರ್ಥನೆ ನಡೆಸಿದೆ. ಒಳಗೊಳಗೆ, ಮಧ್ಯಾಹ್ನದೊಳಗೆ ಒಂದು ಕವನ ರಚಿಸುವ ಅನಿವಾರ್ಯತೆಯ ಒತ್ತಡ! ಪ್ರಾರ್ಥನೆಯ ಗುಂಗಿನಲ್ಲೇ 'ಭಾವ ಕುಸುಮಾಂಜಲಿಯ ನಿಮ್ಮೆಡೆಗೆ ತಂದಿಹೆವು ಜೀವರಸ...' ಎಂದೇನೋ ಭಾವ ಸ್ಫುರಿಸಿತು. ಬೆಳಗಿನ ಹ್ರಸ್ವ ಪ್ರಾರ್ಥನೆ ಮುಗಿಸಿ, ನೇರವಾಗಿ ಕವನ ರೂಪಿಸುವ ಪ್ರಯತ್ನದಲ್ಲೇ ತೊಡಗಿದೆ. ಸಾಲುಗಳು ಸ್ಫುರಣೆಯಾಗುತ್ತ ಅಲ್ಪ ಅವಧಿಯಲ್ಲೇ ಕವನವೊಂದು ರಚನೆಯಾಗಿ ತೃಪ್ತಿಯ ಉಸಿರು ಬಿಡುವಂತಾಯ್ತು. ನನ್ನ ಮುಂದಿನ ಕೆಲಸಗಳಿಗೆ ಹೊರಟೆ. ಸಮಯವಾದಾಗ, ಮತ್ತೊಮ್ಮೆ ಲಯಬದ್ಧತೆ, ಅರ್ಥ ಸುಭಗತೆಗಳಿಗನುಸಾರವಾಗಿ ಸಂಸ್ಕರಿಸಿ, ಫೋನ್ ಬಂದಕೂಡಲೇ ಫೋನಿನಲ್ಲೇ ಓದಿ ಹೇಳಲು ಸಿದ್ಧವಾಗಿರಿಸಿದೆ. ಗಾಳಿಯಲ್ಲೇ ನನ್ನ ಕವನ 'ಸ್ವಾಗತ ಗೀತೆ' ಶ್ರೀ ವಾಸುದೇವ ಭಟ್ಟರನ್ನು ತಲುಪಿ ಅವರ ಕಂಠ ಮಾಧುರ್ಯದ ಸವಿಯುಂಡಿತು. ಆ ಕವನವು ನನ್ನ 'ಅಡಿಗಳ ಇಡಿ-ಕಡಿ ಪದ್ಯಗಳು' ಪುಸ್ತಕದಲ್ಲಿ ಸಂಕಲಿತವಾಗಿದೆ.

ಸಾಹಿತ್ಯ, ಸಂಗೀತದ ಭಾವಜೀವಿ, ಸ್ನೇಹಜೀವಿ, ಗೌರವಾನ್ವಿತ ಉಡುಪಿ ವಾಸುದೇವ ಭಟ್ಟರು ನಮ್ಮೆಲ್ಲರನ್ನು ತಟ್ಟಿದ, ಮುಟ್ಟಿದ ಪರಿ ಅವರ ಯಶೋಗಾನದ ಮುನ್ನುಡಿ.

ಮೊಗೆಮೊಗೆದರೂ ಬಲಗೊಂಡು ಬೆಳೆಯುವ, ಬೆಳೆಬೆಳೆದು ಸಾರ ವಿಸ್ತಾರದ ಹಸುರು ಬಯಲಾಗುವ ಅವರ ಸೌಜನ್ಯ ಸಾತ್ವಿಕತೆಯ ನಿಧಿ.

ವಾಸುದೇವ ಭಟ್ಟರ ಅಪೇಕ್ಷೆಯಂತೆ ಆ ಹೊತ್ತು ಬರೆದ ಸ್ವಾಗತಗೀತೆ -

ಭಾವ ಕುಸುಮಾಂಜಲಿಯ ನಿಮ್ಮೆಡೆಗೆ ತಂದಿಹೆವು
ಜೀವರಸ ಹನಿಹನಿಯ ಸಿಂಪಡಿಸುತಿಹೆವು
ಕಾವ ಕರುಣಾಳುವಿನ ದಯೆಯ ಪರಿಮಳ ಉಕ್ಕಿ
ನೀವು ನಾವೊಂದಾಗಿ ಬೆರೆಯುತಿಹೆವು
ಸ್ವಾಗತದ ಶೈಲಿಯಲಿ ಮಂಗಳವ ಕೋರುವೆವು
ಸ್ವಾಗತ ಸ್ವಾಗತ ಸುಸ್ವಾಗತ

ಎಳೆ ಚಿಗುರ ತೋರಣವ ಕಂಬ ಕಂಬಕೆ ಕಟ್ಟಿ
ಚೆಲುವ ಮಿಂಚಿಪ ಬಣ್ಣ ರಂಗೋಲಿ ಇಕ್ಕಿ
ಕುಲು ಕುಲುವಿನಲೆ ಹಾಯ್ದು ನಗೆಯ ಪನ್ನೀರ ಹನಿ
ಹಲ ಬಗೆಯ ಹೂವೆಸಳ ದಾರಿಯಲಿ ಹಚ್ಚಿ
ಸ್ವಾಗತದ ಶೈಲಿಯಲಿ ಮಂಗಳವ ಕೋರುವೆವು
ಸ್ವಾಗತ ಸ್ವಾಗತ ಸುಸ್ವಾಗತ

ಬದುಕು ಜೀವದ ಹಬ್ಬ ಸವಿದಷ್ಟು ಸಂತೋಷ
ಎದೆಯ ಪ್ರೇಮದ ಪುಲಕದಾರತಿಯ ತಟ್ಟೆ
ಭಕ್ತಿ ತೈಲದ ಬತ್ತಿ ಶ್ರದ್ಧೆಯುರಿಯುವ ಕಿಡಿಯ
ಹಚ್ಚಿ ಜಗ ಬೆಳಗಿಸುವ ನೋಂಪಿ ನಮಗಿರಲಿ
ಸ್ವಾಗತದ ಶೈಲಿಯಲಿ ಮಂಗಳವ ಕೋರುವೆವು
ಸ್ವಾಗತ ಸ್ವಾಗತ ಸುಸ್ವಾಗತ

ಗೆಳೆತನದ ಪಳಕುಗಳು

✍ ಸುಮುಖಾನಂದ ಜಲವಳ್ಳಿ

ನನ್ನ ಅನುಭವದ ಪರಿಮಿತಿಯಲ್ಲಿ ಸಂಗೀತ ಮತ್ತು ಸಾಹಿತ್ಯದಲ್ಲಿ ನಾನು ಕಂಡ ಈ ಇಬ್ಬರು ವ್ಯಕ್ತಿಗಳು ನನ್ನನ್ನು ವಿಶೇಷವಾಗಿ ಆವರಿಸಿಕೊಂಡಿದ್ದಾರೆ. ಜೀವನದ ನೋವು, ಕಷ್ಟ-ಕಾರ್ಪಣ್ಯಗಳನ್ನೇ ತಮ್ಮ ಕಲೆಗೆ ಸ್ಫೂರ್ತಿಯಾಗಿ ಸ್ವೀಕರಿಸಿ ಅಲ್ಲೇ ಬದುಕನ್ನು ಕಂಡವರು, ಸಾಹಿತ್ಯದಲ್ಲಿ ವಿ. ಗ. ನಾಯಕ; ಸಂಗೀತದಲ್ಲಿ ಉಡುಪಿ ವಾಸುದೇವ ಭಟ್ಟರು. ಸಾಹಿತ್ಯ ಸಂಗೀತದ ಶಕ್ತಿಯೇ ಅಂಥದ್ದೇನೊ. ಲೌಕಿಕವಾಗಿ ಸೋತಲ್ಲಿ ತಾನೇ ಅಲ್ಲಿ ಶಕ್ತಿಯಾಗಿ ಆ ಉಪಾಸಕರ ಒಡಲಲ್ಲಿ ಅರಳಿಕೊಂಡು ಅವರನ್ನು ಕೈಹಿಡಿದು ನಡೆಸುತ್ತದೆಯೇನೋ. ವಾಸುದೇವ ಭಟ್ಟರ ಸಂಗೀತ ಚಟುವಟಿಕೆ ಒಂದಿಷ್ಟು ಕಳೆಗುಂದಿಲ್ಲ. 'ನಾದವೈಭವಂ' ಅವರಿಗೆ ಮರುಹುಟ್ಟು ನೀಡಿದೆ. ಎಷ್ಟೊಂದು ತಂತಿಗಳನ್ನು ಅವರು ಮಿಡಿಯುತ್ತಿದ್ದಾರೆ! ಒಂದೊಂದು ತಂತಿಗೂ ಒಂದೊಂದು ಸ್ವರದೀಕ್ಷೆ! 'ನಾದವೈಭವಂ' ಸಂಗೀತ ಗರಡಿಯಾಗಿ ಅಲ್ಲಿ ಪಳಗುವವರ ಸಂಖ್ಯೆ ಹೆಚ್ಚುತ್ತಿರುವುದು ಶಿಷ್ಯಸಮೂಹವನ್ನು ಕಟ್ಟುತ್ತಿರುವುದು ಅವರ ಗುರುತನಕ್ಕೇ ಮಾದರಿ. ಅವರ ಸಂಗೀತ ಥೆರಪಿ - ಇದೊಂದು ಶೋಧನೆ - ಸಾಧನೆ. ಹೊಸತನ್ನು ಹುಡುಕುವ ಅವರ ಲವಲವಿಕೆಗೆ ಹೆಗ್ಗುರುತು.

ನಾನು ಮತ್ತು ವಾಸುದೇವ ಭಟ್ಟರು ಬೆಥನಿ ಶಿಕ್ಷಣ ಸಂಸ್ಥೆಯ ಶಿಕ್ಷಕರು. ಅವರು ಮೂಲ್ಕಿ ಮೆಡಲಿನ್ ಪ್ರೌಢಶಾಲೆಯಲ್ಲಿ ಶಿಕ್ಷಕರು, ನಾನು ಕಿನ್ನಿಗೋಳಿ ಲಿಟ್ಲ್ ಫ್ಲವರ್ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕ. ನಮ್ಮಿಬ್ಬರನ್ನು ಒಟ್ಟುಗೂಡಿಸಿದ್ದು ನಮ್ಮ ಶಾಲೆಯ ಸುವರ್ಣ ಮಹೋತ್ಸವ. ನಮ್ಮ ಶಾಲೆ ನಮ್ಮ ಬೆಥನಿ ಶಿಕ್ಷಣ ಸಂಸ್ಥೆಯ ಮೊದಲ ಪ್ರೌಢಶಾಲೆ. 1991ನೇ ಇಸವಿ ಅದರ ಸುವರ್ಣ ಮಹೋತ್ಸವ ವರ್ಷ. ಆಗ ನಮ್ಮ ಸಂಸ್ಥೆಯ ಕಾರ್ಯದರ್ಶಿಯಾಗಿದ್ದವರು ವಂದನೀಯ ಭಗಿನಿ ಜ್ಯೋತಿಯವರು. ಈ ಶಾಲೆ ಅವರು ಕಲಿತ ಶಾಲೆಯೂ ಹೌದು. ಸುವರ್ಣ ಮಹೋತ್ಸವದ ಸವಿನೆನಪಿಗೆ ಒಂದು ವಿಶಿಷ್ಟ ಕಲಾಕಾಣಿಕೆಯನ್ನು ಅರ್ಪಿಸಬೇಕೆಂಬುವುದು ಅವರ ಸಂಕಲ್ಪ. ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಯೇಸುಕ್ರಿಸ್ತರ ಬದುಕಿನ ಘಟನಾವಳಿಗಳನ್ನು ಆಧಾರವಾಗಿಟ್ಟುಕೊಂಡು ಒಂದು ನೃತ್ಯರೂಪಕವನ್ನು ನಿರ್ಮಾಣ ಮಾಡಬೇಕು ಎಂಬ ನಿರ್ಧಾರಕ್ಕೆ ಅವರು ಬಂದಿದ್ದರು. ಮೊತ್ತಮೊದಲಿಗೆ ವಾಸುದೇವ ಭಟ್ಟರೇ ಅವರಿಗೆ ಈ ಸಲಹೆ ನೀಡಿದ್ದರೋ ಅಥವಾ ಜ್ಯೋತಿಯವರೇ ಇವರಿಗೆ ಸೂಚನೆ ಕೊಟ್ಟಿದ್ದರೋ ಗೊತ್ತಿಲ್ಲ. ಬೆಥನಿ ಸಂಸ್ಥೆಯಲ್ಲಿ ಒಂದು

ದಿನ ಸಭೆ ಕರೆದು ನನಗೆ ಬರಹೇಳಿದರು. ಅಲ್ಲೇ ನನ್ನ ಮತ್ತು ವಾಸುದೇವ ಭಟ್ಟರ ಮೊದಲ ಭೇಟಿ. ಆ ಸಭೆಯಲ್ಲಿ ನೃತ್ಯರೂಪಕ ನಿರ್ಣಯವಾಗಿ, ನನಗೆ ಅದರ ರಚನೆಯ ಜವಾಬ್ದಾರಿ ನೀಡಿದರು. ಮತ್ತು ಅದರ ರಂಗ ಪ್ರದರ್ಶನ ಹೊಣೆಯನ್ನು ವಾಸುದೇವ ಭಟ್ಟರಿಗೆ ಕೊಟ್ಟರು. ಸಭೆ ಮುಗಿಸಿ ಬರುವಾಗ ನಾವಿಬ್ಬರೂ ಒಟ್ಟಿಗೆ ಬಂದೆವು. ಬರುವಾಗ ನೃತ್ಯರೂಪಕದ ಬಗ್ಗೆ ಮತ್ತೆ ಚರ್ಚಿಸಿದೆವು. ಆ ಬಗ್ಗೆ ಅವರದ್ದು ಉನ್ನತ ಕಲ್ಪನೆಯಾಗಿತ್ತು. ಜೊತೆಯಲ್ಲಿ ಮಹತ್ವಾಕಾಂಕ್ಷೆಯೂ ಇತ್ತು. ಈ ತನಕ ಯಾರೂ ಮಾಡದಿರುವ ರೀತಿಯಲ್ಲಿ ಈ ರೂಪಕವನ್ನು ನಿರ್ವಹಿಸಬೇಕೆಂಬುವುದು ಅವರ ಮನೀಷೆಯಾಗಿತ್ತು. ನೃತ್ಯಕ್ಕನುಗುಣವಾಗುವಂತೆ ವೈವಿಧ್ಯಮಯ ರಾಗಗಳಲ್ಲಿ ಪದ್ಯ ರಚನೆಯಿರಲಿ ಎಂಬ ಸಲಹೆಯನ್ನೂ ನೀಡಿದರು. ಆ ಭೇಟಿಯಲ್ಲಿ ನನಗೆ ಬಹಳ ಆಪ್ಯಾಯಮಾನವಾದುದು ಅವರ ಆತ್ಮೀಯ ಮಾತುಕತೆ. ಇಂದಿಗೂ ಅದು ಹಾಗೆಯೇ ಇದೆ ಎಂದರೆ ಖಂಡಿತ ದೊಡ್ಡ ಮಾತೇ.

ಒಂದೆರಡು ತಿಂಗಳಲ್ಲಿ ನಾನು ನೃತ್ಯರೂಪಕವನ್ನು ಬರೆದು ಜ್ಯೋತಿಯವರಿಗೆ ಒಪ್ಪಿಸಿದೆ. ವಾಸುದೇವ ಭಟ್ಟರು ಅದನ್ನು ಓದಿ ಸಂತಸ ಪಟ್ಟರು. ಮುಕ್ತಕಂಠದ ಪ್ರಶಂಸೆ ಅಲ್ಲಿತ್ತು. ಪುನಃ ಬೆಥನಿಯಲ್ಲಿ ಸಭೆ ಸೇರಿ ಅದರ ನಿರ್ವಹಣೆಯ ಬಗ್ಗೆ ಚರ್ಚೆ ನಡೆಯಿತು. ಈ ಸಮಯದಲ್ಲಿ ಅದರ ಶೀರ್ಷಿಕೆಯ ಬಗ್ಗೆಯೂ ಮಾತುಕತೆ ನಡೆಯಿತು. ನಾನು ಬೇರೇನೋ ಹೆಸರು ಕೊಟ್ಟಿದ್ದೆ. 'ಭುವನಜ್ಯೋತಿ' ಇಟ್ಟರೆ ಹೇಗೆ ಎಂದು ಹೇಳಿ ಅವರು ನನ್ನ ಕಡೆ ನೋಡಿದರು. ಶೀರ್ಷಿಕೆ ಚೆನ್ನಾಗಿಯೇ ಇದೆ. ಅದನ್ನೇ ಇಡೋಣ ಎಂದೆ. 'ಭುವನಜ್ಯೋತಿ' ನೃತ್ಯರೂಪಕ ಎಂದಾಯಿತು.

ಸಾಹಿತ್ಯ ರಚನೆಗೆ ಒಬ್ಬ ಸಾಕು. ರಂಗಪ್ರದರ್ಶನಕ್ಕೆ ಹಲವರು ಬೇಕು. ನನಗೆ ತಿಳಿದಂತೆ ವಾಸುದೇವ ಭಟ್ಟರಿಗೆ ಇದೊಂದು ಸವಾಲೇ. ಭಾರತೀಯ ಸಂಸ್ಕೃತಿಯಲ್ಲಿ ಪ್ರಚಲಿತವಿರುವ ಕತೆಯನ್ನು ನೃತ್ಯರೂಪಕಕ್ಕೆ ಅಳವಡಿಸಿರುವುದು ಸುಲಭ. ಆದರೆ ಬೈಬಲ್‌ನಂಥ ಕತೆ ತುಂಬಾ ತೊಡಕಿನದ್ದು. ಅದರಲ್ಲೂ ಯೇಸುಕ್ರಿಸ್ತರ ಕುರಿತ ರೂಪಕ - ಈ ಪಾತ್ರಗಳನ್ನು ನೃತ್ಯಾಭಿನಯಕ್ಕೆ ಸರಿಜೋಡಿಸುವುದು ಅಷ್ಟು ಸುಲಭವಲ್ಲ. ಯಾಕೆಂದರೆ ಯಾವುದೇ ಸಂಸ್ಕೃತಿಯಲ್ಲಿರಲಿ, ಅಲ್ಲಿಯ ಕಥಾಪಾತ್ರಗಳಿಗೆ ಅವುಗಳದ್ದೇ ಆದ ಒಂದು ಇರುವಿಕೆ ಇರುತ್ತದೆ. ಜನ ತಮ್ಮ ಮನಸ್ಸಿನಲ್ಲಿ ಅದನ್ನು ಮೂಡಿಸಿಕೊಂಡಿರುತ್ತಾರೆ. ಸುಲಭದಲ್ಲಿ ಬದಲಾವಣೆಯನ್ನು ಒಪ್ಪುವುದಿಲ್ಲ. ನಮ್ಮ ಪುರಾಣ ಪಾತ್ರಗಳಿಗೆಲ್ಲ ಅವುಗಳದ್ದೇ ಆದ ಒಂದೊಂದು ನೃತ್ಯಾಭಿನಯದ ಸ್ವರೂಪವಿದೆ. ನಾಟ್ಯಶಾಸ್ತ್ರ ಅದನ್ನು ನಿರ್ಧರಿಸಿದೆ. ಆ ರೀತಿಯ ಸ್ವರೂಪ ಬೈಬಲ್ ಪಾತ್ರಗಳಿಗೆ ಇಲ್ಲ. ಈಗ ಭಾರತೀಯ ನೃತ್ಯ-ಸಂಗಿತ ಪದ್ಧತಿಯಲ್ಲಿ ಆ ಪಾತ್ರಗಳನ್ನು ರಂಗಕ್ಕೆ ತರಬೇಕೆಂದರೆ ನಿಜವಾಗಿಯೂ ಸಮಸ್ಯೆಯೇ. ಈ ಬಗ್ಗೆ ವಾಸುದೇವ ಭಟ್ಟರು ಸಾಕಷ್ಟು ಚಿಂತನೆ ಮಾಡಿದಂತೆ ಕಂಡಿತು. ನನ್ನಲ್ಲಿ ಈ ವಿಷಯವನ್ನು ಹೇಳಿದ್ದೂ ಉಂಟು. ಪೂರ್ತಿ

ಪಾಶ್ಚಾತ್ಯ ಸಂಗೀತವನ್ನೂ ಬಳಸುವಂತಿಲ್ಲ, ಪೂರ್ತಿ ಭಾರತೀಯ ಸಂಗೀತವನ್ನೂ ತರುವಂತಿಲ್ಲ. ಅದರಲ್ಲೂ ಬರೀ ಶಾಸ್ತ್ರೀಯ ಸಂಗೀತವೂ ಜನಾಕರ್ಷಕವಾಗದು. ಜನಸಾಮಾನ್ಯರಿಗೆ ಮುಟ್ಟಬೇಕಾದರೆ ಲಘುಸಂಗೀತ, ಜನಪದ ಧಾಟಿ - ಇವೆಲ್ಲ ಬೇಕಾಗುತ್ತದೆ. ವಾಸುದೇವ ಭಟ್ಟರು ಎಲ್ಲರಿಗೂ ಅಪ್ಯಾಯಮಾನವಾಗಬಲ್ಲ ಸಂಗೀತವನ್ನು ಈ ನೃತ್ಯರೂಪಕಕ್ಕೆ ಹದಗೊಳಿಸಿದ್ದು ದೊಡ್ಡ ಸಾಧನೆಯೆ. 'ಭುವನಜ್ಯೋತಿ' - ಇಡಿ ನೃತ್ಯರೂಪಕ ಅವರ ಸಂಗೀತ ಪ್ರತಿಭೆಗೆ ತುರಾಯಿಯೆ. ಅವರೊಳಗಿನ ಕಲೆಯ ಸಮಗ್ರ ದೃಷ್ಟಿ ಇಲ್ಲಿ ಅನಾವರಣಗೊಂಡಿದೆ ಎಂದರೆ ತಪ್ಪಲ್ಲ. ಸೈತಾನನಂಥ ಪಾತ್ರಕ್ಕೆ ನಮ್ಮ ಯಕ್ಷಗಾನದ ದೈತ್ಯ ವೇಷದ ಒಪ್ಪ ಹಾಕಿ ರಂಗಕ್ಕೆ ತಂದದ್ದು ಅವರ ಸೃಜನತೆಗೆ ಸಾಕ್ಷಿ. ನಲ್ವತ್ತಕ್ಕೂ ಹೆಚ್ಚು ಪಾತ್ರ, ಆ ಪಾತ್ರಧಾರಿಗಳ ಆಯ್ಕೆ, ಅವರನ್ನು ಒಟ್ಟುಗೂಡಿಸಿಕೊಂಡು ರಂಗ ತಾಲೀಮು - ಇವೆಲ್ಲ ಬಹು ಶ್ರಮ ಬೇಡುವಂಥದ್ದು. ವಾಸುದೇವ ಭಟ್ಟರು ಅದನ್ನು ಸರಿಯಾಗಿಯೇ ನಿಭಾಯಿಸಿದ್ದರು.

ನೃತ್ಯರೂಪಕ ಒಂದು ಹದಕ್ಕೆ ಬಂದಮೇಲೆ ಅದರ ಪೂರ್ವಭಾವಿ ಪ್ರದರ್ಶನವನ್ನು ಉಡುಪಿಯಲ್ಲಿ ಇಟ್ಟಿದ್ದರು. ನನಗೂ ಬರಹೇಳಿದ್ದರು. ಜ್ಯೋತಿಯವರೂ ಬಂದಿದ್ದರು. ಕಲಾವಿದರನ್ನು ಹುರಿದುಂಬಿಸುವ ಮತ್ತು ಅವರನ್ನು ಸಮರ್ಥವಾಗಿ ಬಳಸಿಕೊಳ್ಳುವ ಕೌಶಲ ಅಲ್ಲಿ ಸಾಬೀತಾಗಿತ್ತು. ಇನ್ನೂ ಆಕರ್ಷಕವಾಗಿ ರೂಪಿಸಿಕೊಳ್ಳುವುದರ ಬಗ್ಗೆ ಚರ್ಚೆಗೂ ಅವಕಾಶ ಕಲ್ಪಿಸಿದ್ದರು. ಮಾಡುವ ಕೆಲಸ ಉತ್ತಮವಾಗಿರಬೇಕು ಮತ್ತು ಎಲ್ಲ ಸಾಧ್ಯತೆಗಳನ್ನು ಬಳಸಿಕೊಳ್ಳಬೇಕು ಎಂಬ ಕಾಳಜಿ ಅವರದ್ದಾಗಿತ್ತು. ಬಂದವರನ್ನು ಆತ್ಮೀಯವಾಗಿ ನೋಡಿಕೊಳ್ಳುವ ಜಾಯಮಾನ ಅವರದ್ದು. ಕಲಾವಿದರ ಬಗ್ಗೆಯೂ ಅಷ್ಟೆ.

'ಭುವನಜ್ಯೋತಿ'ಯ ಮೊದಲ ಪ್ರದರ್ಶನ ಮಂಗಳೂರಿನ ಪುರಭವನದಲ್ಲಿ. ಒಂದೇ ದಿನ ಎರಡು ಪ್ರದರ್ಶನ. ಎರಡು ಪ್ರದರ್ಶನಗಳಿಗೂ ತುಂಬಿದ ಸಭಾಭವನ. ಈ ನೃತ್ಯರೂಪಕ ನನಗೂ ಹೌದು, ವಾಸುದೇವ ಭಟ್ಟರಿಗೂ ಹೌದು, ಪ್ರಾಯೋಜಕತೆ ವಹಿಸಿದ ಬೆಥನಿ ಸಂಸ್ಥೆಗೂ ಹೌದು - ಒಳ್ಳೆಯ ಹೆಸರನ್ನು ತಂದುಕೊಟ್ಟಿತು. ವಾಸುದೇವ ಭಟ್ಟರನ್ನು 'ನಾದವೈಭವಂ' ವಾಸುದೇವ ಭಟ್ಟರು ಎಂಬುದಕ್ಕೆ ಪರ್ಯಾಯವಾಗಿ, 'ಭುವನಜ್ಯೋತಿ' ವಾಸುದೇವ ಭಟ್ಟರು ಎಂದು ಗುರುತಿಸುವಂತಾಯಿತು. 'ಭುವನಜ್ಯೋತಿ'ಯ ಕೀರ್ತಿ ಬಾಯಿಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ - ಅನ್ನುವಂತಾಯಿತು. ಇಪ್ಪತ್ತೈದಕ್ಕೂ ಹೆಚ್ಚು ಪ್ರದರ್ಶನ ನಡೆಯಿತು. ಮತ್ತೂ ಮತ್ತೂ ಜನರು ಪ್ರದರ್ಶನಕ್ಕೆ ಕೇಳುತ್ತಿದ್ದುದರಿಂದ ಅದನ್ನು ಕಿರುಚಿತ್ರ ಮಾಡುವ ಯೋಚನೆ ಅವರಿಗೆ ಬಂದಿತ್ತೆಂದು ತೋರುತ್ತದೆ. ಒಂದು ಯೋಚನೆ ಹೊಳೆಯಿತೆಂದರೆ ಅವರು ಸುಮ್ಮನೆ ಕುಳಿತುಕೊಳ್ಳುವವರೇ ಅಲ್ಲ. ಕಿರುಚಿತ್ರಕ್ಕೆ ಇಳಿದ ಅವರು ಅದನ್ನು ಹಿರಿಚಿತ್ರ ಮಾಡುವುದಕ್ಕೆ ನಿರ್ಧಾರ ಮಾಡಿದರು. ಕೆನರಾ ಕಮ್ಯುನಿಕೇಶನ್ ಸೆಂಟರಿನ ಆವಾಗಿನ ನಿರ್ದೇಶಕರಾಗಿದ್ದ ಫಾ. ಮ್ಯಾಥ್ಯೂ ವಾಸ್ ಅವರು ನಿರ್ಮಾಪಕರಾಗಿ, ಚಿತ್ರ ನಿರ್ಮಾಣ

ಶುರುವಾಯಿತು. ಇಷ್ಟರ ವರೆಗೆ ಚೆನ್ನಾಗಿಯೇ ಇದ್ದ ನಮ್ಮೊಳಗೆ ಈ ಚಿತ್ರದಿಂದಾಗಿ ಭಿನ್ನಾಭಿಪ್ರಾಯ ತಲೆಯೆತ್ತಿತು. ಇದಕ್ಕೆ ನಾನು ಕಾರಣವೊ, ಅವರು ಕಾರಣವೊ ಈಗ ಅದು ಅಪ್ರಸ್ತುತ.

ಚಿತ್ರ ಬಿಡುಗಡೆಯಾಗಿ ಪ್ರದರ್ಶನಗೊಳ್ಳುತ್ತಿರುವಂತೆ ವಿವಾದಗಳೂ ಎದ್ದವು. ಆ ಕಡೆ ಅಣ್ಣ ತಮ್ಮರ ಹಾಗೆ ಇದ್ದ ವಾಸುದೇವ ಭಟ್ ಮತ್ತು ಫಾ. ಮ್ಯಾಥ್ಯೂ ವಾಸ್ ಅವರೊಳಗೂ ತಕರಾರು ಬಂದಿತು. ಒಟ್ಟೂ ಪರಿಣಾಮವೇನಾಯಿತೆಂದರೆ, ವಾಸುದೇವ ಭಟ್ಟರು ಫಾದರ್ ವಿರುದ್ಧ ಕೋರ್ಟಿಗೆ ಹೋದರು, ನಾನು ವಾಸುದೇವ ಭಟ್ಟರ ವಿರುದ್ಧ ಕೋರ್ಟಿಗೆ ಹೋದೆ. ಹೀಗಾಗುತ್ತದೆ ಎಂದು ಯಾರು ಎಣಿಸಿದ್ದರು? ಇದರ ಸರಿ ತಪ್ಪು ಏನೇ ಇರಲಿ, ನಾವು ಮೂವರೂ ಮಾನಸಿಕವಾಗಿ ಹಿಂಸೆ ಅನುಭವಿಸಿದ್ದಂತೂ ನಿಜ. ಆ ನೋವೇ ನಮ್ಮ ಜೀವನವಾಗಲಿಲ್ಲ ಎಂಬುವುದೂ ಅಷ್ಟೇ ಸಂತಸದ ವಿಷಯ.

'ಭುವನಜ್ಯೋತಿ' ಚಿತ್ರವಾಗುವ ಮೊದಲು, ಅಂದರೆ 1994ರಲ್ಲಿ ಅದು ಪ್ರಕಟವಾಯಿತು. ಅದರ ಬಿಡುಗಡೆ ಕಾರ್ಯಕ್ರಮ ನಮ್ಮ ಮನೆ 'ಕಾವ್ಯಶ್ರೀ'ಯಲ್ಲೇ ಏರ್ಪಟ್ಟಿತ್ತು. ವಂದನೀಯ ಜ್ಯೋತಿಯವರೇ ಪುಸ್ತಕವನ್ನು ಬಿಡುಗಡೆ ಮಾಡಿದ್ದರು. ಈ ಕಾರ್ಯಕ್ರಮದಲ್ಲಿ ವಾಸುದೇವ ಭಟ್ಟರ ಬಳಗದಿಂದ ಸಂಗೀತ ಕಾರ್ಯಕ್ರಮವನ್ನೂ ಇರಿಸಲಾಗಿತ್ತು. ಸಭೆಯಲ್ಲಿ ಪುಸ್ತಕದ ಕೆಲವು ಗೀತೆಗಳನ್ನು ಹಾಡಿ ರಂಗುತಂದಿದ್ದರು. ಇದು ಬರೇ ಪ್ರೀತಿ, ವಿಶ್ವಾಸದಿಂದ ನಡೆಸಿಕೊಟ್ಟ ಕಾರ್ಯಕ್ರಮವಾಗಿತ್ತು - ಹೀಗಿತ್ತು ನಮ್ಮ ಸ್ನೇಹ.

ಒಮ್ಮೆ ಕೆ. ಬಾಲಕೃಷ್ಣ ಆಚಾರ್ಯರು ಸಿಕ್ಕಿದರು. ಮಾತುಕತೆ ವಾಸುದೇವ ಭಟ್ಟರ ಕಡೆಗೆ ತಿರುಗಿತು. ಆಚಾರ್ಯರು ಅವರ ಸಂಬಂಧಿ. ಅದಕ್ಕಿಂತ ಹೆಚ್ಚಾಗಿ ಅವರ ಸಂಗೀತ ಕಾರ್ಯಕ್ರಮದಲ್ಲಿ ವಾದನ ಸಹಾಯಕರು. ಅವರು ಮಾತಾಡುತ್ತ ವಾಸುದೇವ ಭಟ್ಟರ ಆಕಸ್ಮಿಕ ಕಾಯಿಲೆ, ಕೌಟುಂಬಿಕ ಸಮಸ್ಯೆ, ಆರ್ಥಿಕ ಬಿಕ್ಕಟ್ಟು - ಹೀಗೆ ಅವರ ಕಷ್ಟ ಸ್ಥಿತಿಯನ್ನು ಹೇಳಿ "ಹೇಗೆ ನಿಭಾಯಿಸುತ್ತಾರೊ, ನಡುವೆ ಕೋರ್ಟು ಕಚೇರಿ ವ್ಯವಹಾರ ಬೇರೆ" ಎಂದರು. ಇದನ್ನು ಕೇಳಿದಾಗ ನನಗೆ ಕೆಟ್ಟದು ಅನ್ನಿಸಿತು. ಆ ದಿನವಿಡೀ ನನಗೆ ಅದೇ ಯೋಚನೆ ಆಯಿತು. ವಿಶ್ರಾಂತಿ ಬೇಕಾದ ಸಮಯದಲ್ಲಿ ಇನ್ನೂ ಇನ್ನೂ ದಣಿಸುವುದು ತಪ್ಪು ಅಂತ ಅನಿಸಿತು. ಕೋರ್ಟ್ ವ್ಯವಹಾರವೇ ಒಂದು ಮಾನಸಿಕ ಹಿಂಸೆ. ನನ್ನಿಂದಾಗಿ ಅವರು ಹಿಂಸೆ ಪಡುವುದು ಬೇಡ. ಭಿನ್ನಾಭಿಪ್ರಾಯ ಯಾಕೆ ಪರಮಾರ್ಥವಾಗಬೇಕು - ಹೀಗೆಲ್ಲ ವಿಚಾರಗಳು ಬಂದು ಕೊನೆಗೆ ಅವರ ವಿರುದ್ಧ ನಾನು ಹಾಕಿದ ದಾವೆಯನ್ನು ಹಿಂತೆಗೆದುಕೊಳ್ಳುವ ನಿರ್ಧಾರ ಮಾಡಿದೆ. ಬಾಲಕೃಷ್ಣ ಆಚಾರ್ಯರಲ್ಲಿ ಈ ವಿಷಯವನ್ನು ತಿಳಿಸಿದೆ. ಅವರಿಗೂ ಇದು ಸಂತೋಷ ತಂದಿತು. ಈ ಸಂಗತಿಯನ್ನು ವಾಸುದೇವ ಭಟ್ಟರಿಗೆ ತಿಳಿಸುತ್ತೇನೆ ಎಂದರು. 'ತಲೆಯ ಮೇಲೆ ಬಿದ್ದ ದೊಡ್ಡ ಭಾರ ಇಳಿಯಿತು' ಎಂದರಂತೆ. "ನಿಮ್ಮನ್ನು ಕಾಣಬಯಸಿದ್ದಾರೆ. ನೀವೇ ಈ ಮಾತನ್ನು

ಹೇಳಿದರೆ ಅವರಿಗೆ ಸಂತೋಷವಾಗುತ್ತದೆ" ಎಂದರು ಆಚಾರ್ಯರು. ಒಂದು ದಿನ ನಿಗದಿ ಪಡಿಸಿಕೊಂಡು ನಾನು ಆಚಾರ್ಯರೊಂದಿಗೆ ಉಡುಪಿಗೆ ಹೋದೆ. ಆ ನಿತ್ರಾಣ ಸ್ಥಿತಿಯಲ್ಲೂ ವಾಸುದೇವ ಭಟ್ಟರು ಸಂಗೀತ ಪಾಠ ನಡೆಸುತ್ತಿದ್ದರು. ಅಲ್ಲಿ ಕವಿ ಅಂಶುಮಾಲಿಯವರೂ ಇದ್ದರು. ಬೇಗ ಸಂಗೀತ ಪಾಠ ಮುಗಿಸಿ ಶಿಷ್ಯರನ್ನು ಕಳುಹಿಸಿಕೊಟ್ಟರು. ನಾವಿಬ್ಬರೂ ಎದುರುಬದುರು ಕೂತೆವು. ಪರಸ್ಪರರು ಒಬ್ಬರನ್ನೊಬ್ಬರು ದೂರಿ ಈಗ ಕೂತಿದ್ದೇವೆ ಎಂದರೂ ನಮ್ಮ ನಮ್ಮ ಮನಸ್ಸಿನೊಳಗೆ ಆ ಭಾವವೇ ಇರಲಿಲ್ಲ. ಇಬ್ಬರ ಮೃದು ಹೃದಯ ಒಂದು ಗಳಿಗೆ ಮರುಗಿತು. ತಾವು ಅನುಭವಿಸಿದ ಕಷ್ಟ, ಎದುರಿಸಿದ ಸಮಸ್ಯೆಗಳನ್ನು ಹೇಳಿಕೊಂಡು ಇವೆಲ್ಲ ಯಾಕೆ ಹೀಗಾಗುತ್ತದೋ ಗೊತ್ತಿಲ್ಲ ಎಂದರು, ಆರ್ದ್ರ ಮನಸ್ಸಿನಿಂದ. ಕಷ್ಟದಲ್ಲೂ ಇಷ್ಟದಲ್ಲೂ ಸಂಗೀತವೇ ಪ್ರಾಣ, ತ್ರಾಣ ಎನ್ನುವಂತಿತ್ತು ಅವರ ಮುಖಭಾವ. ನಾನು ನನ್ನ ನಿರ್ಧಾರವನ್ನು ತಿಳಿಸಿ, ಈ ವಿಷಯದಲ್ಲಿ ನಮ್ಮೊಳಗೆ ಯಾವ ವೈಷಮ್ಯವೂ ಬೇಡ, ಕೇಸನ್ನು ವಾಪಾಸು ಪಡೆಯುತ್ತೇನೆ ಎಂದೆ. ಇಬ್ಬರ ಮನಸ್ಸು ಹಗುರವಾಯಿತು. ಬರುವಾಗ ಒಂದಿಷ್ಟು ಸಿಹಿತಿಂಡಿಗಳನ್ನು ಕಟ್ಟಿ, "ಮಕ್ಕಳಿಗೆ" ಎಂದು ಹೇಳಿ ಚೀಲದೊಳಗೆ ಇಟ್ಟರು. ಇದು ವಾಸುದೇವ ಭಟ್ಟರ ಹೃದಯ.

ನಾನು ನಮ್ಮ ವಕೀಲರಿಗೆ ಹೇಳಿ ಹಾಕಿದ ದಾವೆಯನ್ನು ವಾಪಾಸು ಪಡೆದೆ. ಈಗ ನಮ್ಮ ಸ್ನೇಹ ನಿರಾವರಣಗೊಂಡಿತು. ಆದರೆ, ವಾಸುದೇವ ಭಟ್ಟರಿಗೂ ಫಾದರ್ ಮ್ಯಾಥ್ಯೂ ವಾಸ್‌ರಿಗೂ ನಡುವೆ ಇದ್ದ ವ್ಯಾಜ್ಯ ಹಾಗೇ ಇತ್ತು. ಮತ್ತೆ ಒಂದು ವರ್ಷ ಕಳೆದಿರಬಹುದು, ಬಾಲಕೃಷ್ಣ ಆಚಾರ್ಯರೆ ಭೇಟಿಯಾದಾಗೊಮ್ಮೆ, "ವಾಸುದೇವ ಭಟ್ಟರು ನಿಮ್ಮನ್ನು ಕಾಣ ಬೇಕೆಂದಿದ್ದಾರೆ" ಅಂದರು. ಆಗ ಹೋದದ್ದು ಅವರ ಮನೆಗೇ. ಎಂದಿನಂತೆ ಅವರ ಉಪಚಾರ. ತಿಂಡಿ ಕಾಫಿ ಆದ ಮೇಲೆ ಬಾಲಕೃಷ್ಣ ಆಚಾರ್ಯರು ಅವರ ಮನಸ್ಸನ್ನು ಹೇಳಿದರು. ವಾಸುದೇವ ಭಟ್ಟರು ಮತ್ತು ಫಾದರ್ ಮ್ಯಾಥ್ಯೂ ವಾಸ್ ಇವರ ನಡುವೆ ರಾಜಿ ಮಾಡಿಸಲು ನಾನು ಮಧ್ಯಸ್ಥಿಕೆ ವಹಿಸಬೇಕು ಎಂಬುದು ಇಂಗಿತವಾಗಿತ್ತು. ನಾನು ಪ್ರಯತ್ನ ಮಾಡುವೆ ಎಂದೆ.

ಫಾದರ್ ಮ್ಯಾಥ್ಯೂ ವಾಸ್‌ರವರು ಆಗ ಮಂಗಳೂರಲ್ಲಿ ಇರಲಿಲ್ಲ. ಕಾಸರಗೋಡಿನ ಬೇಳ ಚರ್ಚಿಗೆ ಅವರನ್ನು ವರ್ಗಾಯಿಸಿದ್ದರು. ನಾನು ಬೇಳಕ್ಕೆ ಹೋಗಿ ಫಾದರನ್ನು ಕಂಡು ವಾಸುದೇವ ಭಟ್ಟರ ಇಂಗಿತವನ್ನು ತಿಳಿಸಿದೆ. ಹಿಂದಿನ ಸ್ನೇಹವನ್ನು ಫಾದರ್ ವಾಸ್ ಮೆಲುಕು ಹಾಕಿ "ಯಾಕೆ ಹೀಗಾಯಿತು, ನನಗೂ ಅರ್ಥವಾಗುತ್ತಿಲ್ಲ" ಎಂದರು. "ಈಗಲೂ ನನಗೆ ವಾಸುದೇವ ಭಟ್ಟರ ಬಗ್ಗೆ ಮೊದಲಿದ್ದ ಪ್ರೀತಿಯೇ ಇದೆ" ಎಂದು ರಾಜಿಗೆ ಸಂತಸ ವ್ಯಕ್ತಪಡಿಸಿದರು. ಅವರನ್ನು ಭೇಟಿಯಾಗಲು ದಿನಾಂಕವನ್ನೂ ಗೊತ್ತುಮಾಡಿದರು. ನಾನು ವಾಸುದೇವ ಭಟ್ಟರಿಗೆ ವಿಷಯ ಹೇಳಿದೆ. ನಿಗದಿತ ದಿನಾಂಕದಂದು ವಾಸುದೇವ ಭಟ್ಟರು, ಬಾಲಕೃಷ್ಣ ಆಚಾರ್ಯರು ಮತ್ತು ನಾನು - ಮೂವರೂ ಬೇಳಕ್ಕೆ ಹೋದೆವು. ಫಾದರ್ ಮ್ಯಾಥ್ಯೂ

ವಾಸ್ ಮತ್ತು ವಾಸುದೇವ ಭಟ್ಟರ ಹೃದಯಸ್ಪರ್ಶಿ ಭೇಟಿ. ಪ್ರೀತಿಯೆಂಬ ಬೆಳಕಿನ ಮುಂದೆ ವೈಷಮ್ಯದ ಹಿಮದ ಗೋಡೆ ಎಷ್ಟು ಸಮಯ ನಿಲ್ಲಲು ಸಾಧ್ಯ? ಆದದ್ದೆಲ್ಲ ಒಳಿತೇ ಆಯ್ತು ಎಂಬಂತೆ ನಮ್ಮ ಮೂವರಲ್ಲೂ ಮೊದಲಿನ ಪ್ರೀತಿಯೇ ಅರಳಿಕೊಂಡಿತು. ಇದಕ್ಕೆ ಬಾಲಕೃಷ್ಣ ಆಚಾರ್ಯರೇ ಸಾಕ್ಷಿಯಾದರು. ಆದರೂ ಇನ್ನೂ ಒಂದು ಬಾಕಿ ಇತ್ತು. 'ಭುವನಜ್ಯೋತಿ' ಚಲನಚಿತ್ರ ಸಂಬಂಧವಾಗಿ ಭಗಿನಿ ಜ್ಯೋತಿಯವರಿಂದಲೂ ದೂರವೇ ಇದ್ದರು. ವಾಸುದೇವ ಭಟ್ಟರ ಸಾಧನೆಗೆ ಜ್ಯೋತಿಯವರೂ ಪ್ರೇರಕ ಶಕ್ತಿಯಾಗಿದ್ದುದು ನಿಜ. ಈಗವರು ಬೆಥನಿ ಸಂಸ್ಥೆಯ ಮದರ್ ಜನರಲ್ ಸ್ಥಾನದಲ್ಲಿ ಇದ್ದಾರೆ. ಜ್ಯೋತಿಯವರ ಹೆಸರು ಬಂದಾಗಲೆಲ್ಲ ಅವರ ಕಣ್ಣು ಕೃತಜ್ಞತೆಯ ಕೊಳವಾಗುತ್ತದೆ. ಜ್ಯೋತಿಯವರಿಗೂ ವಾಸುದೇವ ಭಟ್ಟರ ಪ್ರತಿಭೆ, ಸಾಧನೆಯ ಬಗ್ಗೆ ಅಷ್ಟೇ ಗೌರವ, ಮಮತೆ.

ನಾನೊಮ್ಮೆ ಬೆಥನಿಗೆ ಹೋದಾಗ ಈ ಎಲ್ಲ ಬೆಳವಣಿಗೆಯನ್ನು ಜ್ಯೋತಿಯವರಲ್ಲಿ ಹೇಳಿದೆ. ಕೇಳಿ ಅವರೂ ಸಂತೋಷ ಪಟ್ಟರು. ವಾಸುದೇವ ಭಟ್ಟರ ಭೇಟಿಯ ವಿಷಯ ಹೇಳಿದಾಗ ಪ್ರಾಂಜಲ ಮನಸ್ಸಿನಿಂದ, "ಬರಲಿ ಸಂತೋಷ" ಎಂದರು. ಅವಾಗಲೇ ಒಂದು ದಿನಾಂಕವನ್ನು ಗುರುತಿಸಿದರು. ವಾಸುದೇವ ಭಟ್ಟರಿಗೆ ನಾನು ಈ ವಿಚಾರವನ್ನು ತಿಳಿಸಿದೆ. ನಿಗದಿತ ಸಮಯದಂದು ನಾವಿಬ್ಬರೂ ಬೆಥನಿಗೆ ಹೋದೆವು. ಜ್ಯೋತಿಯವರ ಮುಂದೆ ವಾಸುದೇವ ಭಟ್ಟರು ಮಗುವಾಗಿ ಬಿಟ್ಟರು. ಆ ವಾತ್ಸಲ್ಯಮಯ ಭಾವಪ್ರಪಂಚಕ್ಕೆ ಮುಗ್ಧರಾಗದವರೇ ಇಲ್ಲ. ತಾಯಿಯ ಮುಂದೆ ಮಗ ತನ್ನೆಲ್ಲ ನೋವನ್ನು ಹೇಳಿಕೊಂಡು ಹಗುರವಾದಂತೆ ಆ ಸತ್ಯದರ್ಶನ. ಜ್ಯೋತಿಯವರೂ ಸಾಂತ್ವನದ ನುಡಿಗಳನ್ನು ಆಡಿದರು, ಕುಟುಂಬದ ಯೋಗಕ್ಷೇಮವನ್ನು ವಿಚಾರಿಸಿದರು. ಹೊರಗೆ ಬಂದಾಗ ವಾಸುದೇವ ಭಟ್ಟರು ನಿರಾಳವಾಗಿದ್ದರು.

ಸ್ನೇಹ ಪಡೆದುಕೊಳ್ಳುವುದು ಸುಖ, ಕಳೆದುಕೊಳ್ಳುವುದು ದುಃಖ. ಕಳೆದುಕೊಂಡು ಪುನಃ ಪಡೆದುಕೊಳ್ಳುವುದು ಪರಮಸುಖ. ನಾವು ಮೂವರೂ ಅಂಥ ಭಾಗ್ಯವಂತರು.

ಇನ್ನೊಬ್ಬರ ಸಾಧನೆಯನ್ನು ಮೆಚ್ಚಿಕೊಳ್ಳುವ, ಪ್ರಶಂಸಿಸುವ ಸ್ವಭಾವ ವಾಸುದೇವ ಭಟ್ಟರದ್ದು. ಅವರು ಪತ್ರಿಕಾಕರ್ತರಾಗಿಯೂ ದುಡಿದವರು. ನಾನು 'ಸಂಪ್ರಭಾ' ಪತ್ರಿಕೆ ಪ್ರಕಟಿಸುತ್ತಿರುವುದು ಗೊತ್ತಾದಾಗ, "ನೀವು ನನಗೆ ಯಾಕೆ ಕಳುಹಿಸಲಿಲ್ಲ, ನನಗೂ ಒಂದು ಪ್ರತಿ ಕಳಹಿಸಿ" ಎಂದರು. ಇದು ಅವರ ಪ್ರೀತಿಯ ಆದೇಶ. ಪತ್ರಿಕೆ ತಲುಪಿದ ಮೇಲೆ ಅದರ ಬಗ್ಗೆ ದೂರವಾಣಿಯಲ್ಲಿ ಮುಕ್ತ ಪ್ರಶಂಸೆ. ತನ್ನ ಹಿತೈಷಿಗಳಿಗೂ ಒಂದೊಂದು ಪ್ರತಿ ಕಳುಹಿಸಿ, ಅವರೆಲ್ಲ ಚಂದಾದಾರರಾಗುತ್ತಾರೆ ಎಂಬುದಾಗಿ ವಿಳಾಸ ರವಾನೆ. ಒಂದು ಪತ್ರಿಕೆಯ ಬಗ್ಗೆ ಈ ರೀತಿಯ ಮಾತಾಡುವವರು ಎಷ್ಟು ಮಂದಿ ಸಿಗುತ್ತಾರೆ? ದೊಡ್ಡ ಜನ ದೊಡ್ಡದಾಗಿಯೇ ಇರುತ್ತಾರೆ ಎನ್ನುವುದಕ್ಕೆ ಈ ಸಣ್ಣ ಸಣ್ಣ ವಿಷಯಗಳೂ ಪುರಾವೆಯಾಗುತ್ತವಲ್ಲವೆ?

ವಾಸುದೇವ ಭಟ್ಟರ ಮನಸ್ಸು ಎಂಥದ್ದು ಎಂಬುವುದಕ್ಕೆ ಇನ್ನೊಂದು ಘಟನೆ ಹೇಳಿ ಈ ಲೇಖನ ಮುಗಿಸುತ್ತೇನೆ. ಇದು ಮೊನ್ನೆ ಮೊನ್ನೆ ವಿಚಾರ. ಇನ್ನಾದಲ್ಲಿ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು. ವಾಸುದೇವ ಭಟ್ಟರಿಗೆ ಸನ್ಮಾನವಿತ್ತು. ನನ್ನ ಒಂದು ಪುಸ್ತಕದ ಬಿಡುಗಡೆಯೂ ಇತ್ತು. ಮೊದಲು ಪುಸ್ತಕ ಬಿಡುಗಡೆ. ಆಮೇಲೆ ಸನ್ಮಾನ, ಸಮಾರೋಪ ಕಾರ್ಯಕ್ರಮ. ನಾನು ಸಮಾರೋಪ ಭಾಷಣದ ವರೆಗೆ ಕೂತೆ. ಸಂಜೆಯಾಯಿತು. ವಾಹನದ ಅನನುಕೂಲ. ಹಾಗಾಗಿ ಸ್ವಲ್ಪ ಬೇಗ ಹೊರಟೆ. ನಾನು ಹೊರಗೆ ಬರುವಾಗ ನನ್ನ ಹಿಂದೆಯೇ ವಾಸುದೇವ ಭಟ್ಟರು ಬಂದರು. "ಹೇಗೆ ಹೋಗುವಿರಿ?" ಎಂದು ಕೇಳಿದರು. ಮುಖ್ಯರಸ್ತೆ ತಲುಪಿದರೆ ಅಲ್ಲಿ ಬಸ್ ಹಿಡಿಯಬಹುದಿತ್ತು. ಸುಖಾನಂದ ಶೆಟ್ಟಿಯವರ ಕೊಲೆಯಿಂದಾಗಿ ಬಸ್ ಸಂಚಾರವೂ ಸ್ಥಗಿತಗೊಂಡಿತ್ತು. ನನಗೆ ಮುಖ್ಯರಸ್ತೆಯವರೆಗೆ ಹೋಗುವುದೇ ಸಮಸ್ಯೆಯಾಯಿತು. ಕಣ್ಕಣ್ ಬಿಡುವ ಪ್ರಸಂಗ. "ನಾನು ವ್ಯವಸ್ಥೆ ಮಾಡುತ್ತೇನೆ, ನಿಲ್ಲಿ" ಎಂದರು. ಕೂಡಲೇ ರಿಕ್ಷಾ ತಂದು, "ಬನ್ನಿ" ಎಂದರು. ಐದಾರು ಕಿಲೋಮೀಟರ್ ದೂರ ಅದು. ಮುಖ್ಯರಸ್ತೆಗೆ ಬಿಟ್ಟು, ಅಲ್ಲಿ ಬಸ್ ವಿಚಾರಿಸಿ, ಇದೆ ಎಂದು ಖಾತ್ರಿ ಪಡಿಸಿಕೊಂಡು ಅವರು ಮರಳಿದರು. ಇದರಿಂದ ನನಗೆ ಮನೆ ತಲುಪಲು ಅನುಕೂಲವಾಯಿತು. ಇದು ಅವರ ಕಾಳಜಿ, ಪ್ರೀತಿ.

ಇಷ್ಟು ಹೇಳಿದ ಮೇಲೆ ವಾಸುದೇವ ಭಟ್ಟರ ಶ್ರೀಮತಿಯವರ ಬಗ್ಗೆ ಹೇಳದೆ ಬಿಟ್ಟರೆ ತಪ್ಪಾಗುತ್ತದೆ. ಆ ತಾಯಿಯ ಕೈಯಿಂದ ಕಾಫಿ ತಿಂಡಿ ಸೇವಿಸಿದವನು ನಾನು. ವಾಸುದೇವ ಭಟ್ಟರು ಸಂಗೀತಕ್ಕೆ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಳ್ಳುವುದರ ಹಿಂದೆ ಆ ಮಹಾತಾಯಿ ಮಾಡಿದ ತ್ಯಾಗ ಅನುಪಮ. ಇಡೀ ಸಂಸಾರದ ಜವಾಬ್ದಾರಿಯನ್ನು ತಾವು ನಿಭಾಯಿಸಿ ಪತಿಯ ಸಾಧನೆಗೆ ಅನುಕೂಲ ಮಾಡಿಕೊಟ್ಟವರು ಅವರು. ಅವರ ಬೆಂಬಲ ವಾಸುದೇವ ಭಟ್ಟರಿಗೆ ಮುಂಬಲ. ಗಂಡಿನ ಸಾಧನೆಯ ಹಿಂದೆ ಹೆಣ್ಣು ಇರುತ್ತಾಳೆ ಎಂಬುವುದಕ್ಕೆ ಇಲ್ಲೂ ಅವರು ಸ್ಪಷ್ಟ ಪುರಾವೆಯೆ.

ಕಲಾವಿದನ ಕಣ್ಣಲ್ಲಿ ಕಲಾವಿದ

✍ ಕುತ್ಪಾಡಿ ಆನಂದ ಗಾಣಿಗ

1960ರ ದಶಕದ ಆದಿಭಾಗದಿಂದಲೇ ನನಗೆ ವಾಸುದೇವ ಭಟ್ಟರ ಬಗ್ಗೆ ತಿಳಿದಿತ್ತು. ಆಗ ಅವರು ಉಡುಪಿ ಪರಿಸರದ ರಂಗಪ್ರೇಮಿಗಳು ಆಡುತ್ತಿದ್ದ ನಾಟಕಗಳಲ್ಲಿ ಸ್ತ್ರೀಪಾತ್ರಗಳನ್ನು ನಿರ್ವಹಿಸುತ್ತಿದ್ದರೆಂದು ನನ್ನ ನೆನಪು. ಸುಂದರ ಶರೀರ ಮತ್ತು ಶಾರೀರವನ್ನು ಹೊಂದಿದ್ದ ವಾಸುದೇವ ಭಟ್ಟರಿಗೆ ಸ್ತ್ರೀಪಾತ್ರ ತುಂಬ ಒಪ್ಪುತ್ತಿತ್ತು. ಮೇಲಾಗಿ ಸ್ತ್ರೀಪಾತ್ರಗಳನ್ನು ಪುರುಷರೇ ನಿರ್ವಹಿಸುತ್ತಿದ್ದ ಕಾಲವದು. ನಾನಾಗ ಉಡುಪಿ ಎಲ್.ಐ.ಸಿ. ನಾಟಕ ತಂಡದ ನೇತಾರನಾಗಿದ್ದೆ. ನಾನೂ ಆ ಅವಧಿಯಲ್ಲಿ ಉಡುಪಿ ಪರಿಸರದ ಹವ್ಯಾಸಿ ತಂಡಗಳ ನಾಟಕಗಳಲ್ಲಿ ಅತಿಥಿನಟನಾಗಿ ಹೋಗಿ ಪಾಲುಗೊಳ್ಳುತ್ತಿದ್ದೆ. 1965ರಲ್ಲಿ ನಾನು ಉಡುಪಿಯಲ್ಲಿ 'ರಂಗಭೂಮಿ' ನಾಟಕ ಸಂಸ್ಥೆಯನ್ನು ಹುಟ್ಟುಹಾಕಿದ ಬಳಿಕ ಸಮಾನವ್ಯಸನಿಗಳಾದ ನಮ್ಮೊಳಗೆ ನಿಕಟ ಸಂಪರ್ಕ ಬೆಳೆಯಿತು. ಆದರೆ ರಂಗಭೂಮಿ ತಂಡದ ನಾಟಕಗಳಲ್ಲಿ ಅಭಿನಯಿಸುವುದಕ್ಕೆ ಅವರನ್ನು ಆಮಂತ್ರಿಸುವ ಸಂದರ್ಭ ನನಗೆ ಒದಗಿ ಬಂದಿರಲಿಲ್ಲ. ಅದಕ್ಕೆ ಕಾರಣ, ಪ್ರಾಯಃ ಆಗ ಅವರು ಓರ್ವ ಸಾಮಾನ್ಯ ನಟನಿಗಿಂತ ಎತ್ತರದ ಸ್ಥಾನವನ್ನು ಗಳಿಸಿದ್ದರು. ಅದಾಗಲೇ ಅವರು ನಟ, ನಿರ್ದೇಶಕ, ಸಂಗೀತ ನಿರ್ದೇಶಕ, ವ್ಯವಸ್ಥಾಪಕ ಎಲ್ಲವೂ ಆಗಿದ್ದರು. 1965ರಿಂದಲೇ ನಮ್ಮ ರಂಗಭೂಮಿ ತಂಡದ ನಾಟಕಗಳು ಅಪಾರ ಜನಮನ್ನಣೆ ಗಳಿಸಿ, ತುಂಬಿದ ಪ್ರೇಕ್ಷಕರ ಮುಂದೆ ಪ್ರದರ್ಶನಗೊಳ್ಳುತ್ತಿದ್ದವು. ಅದಕ್ಕೆ ಮುಖ್ಯ ಕಾರಣ, ನಮ್ಮ ಕಲಾವಿದರ ಗಡಣ ಅಷ್ಟೊಂದು ಉತ್ತಮವಿತ್ತು.

ಅದೇ ಅವಧಿಯಲ್ಲಿ ವಾಸುದೇವ ಭಟ್ಟರು ತನ್ನ ಕೂಟದಿಂದ 2-3 ನಾಟಕಗಳನ್ನು ಆಡಿದ್ದರೆಂದು ನನ್ನ ನೆನಪು. 1967ರಲ್ಲಿ ವಾಸುದೇವ ಭಟ್ಟರು ತನ್ನ ಬಳಗವನ್ನು ಒಗ್ಗೂಡಿಸಿಕೊಂಡು, 'ವಾಸನ್ ಫೆಟೆಮೆನ್ಸ್ ಟ್ರೂಪ್' ಎಂಬ ಹೊಸ ತಂಡವೊಂದನ್ನು ಕಟ್ಟಿದರು. ತಂಡದ ಮಹತ್ವಾಕಾಂಕ್ಷೆಯ ಪ್ರಥಮ ನಾಟಕವೇ 'ಇದು ಕೂಡಾ ಜೀವನ!'. ಉಡುಪಿಯ ಪ್ರಸಿದ್ಧ ನೇಪಥ್ಯ ಕಲಾವಿದ ಪೈಂಟರ್ ಕೃಷ್ಣಪ್ಪರಿಂದ ಅಪಾರ ವೆಚ್ಚದಲ್ಲಿ ಅದ್ದೂರಿ ಸೆಟ್ಟಿಂಗ್ಸ್ ನಿರ್ಮಾಣ. ವಾಸುದೇವ ಭಟ್ಟರಿಂದ ನಾಟಕ ಮತ್ತು ಸಂಗೀತದ ನಿರ್ದೇಶನ ಹಾಗೂ ನಾಯಕ ಪಾತ್ರದ ನಿರ್ವಹಣೆ! ಬೆಂಗಳೂರಿನಿಂದ ಕರೆತರಿಸಲಾಗಿದ್ದ ಸುಂದರ ವೃತ್ತಿಕಲಾವಿದೆಯಿಂದ ನಾಯಕಿಯ ಪಾತ್ರ! ಉಡುಪಿ ವಿ.ಜೆ.ಯು. ಕ್ಲಬ್ಬಿನ ಡಾ. ಸುಂದರರಾಮ ಪೈ ಸ್ಮಾರಕ ರಂಗಮಂಟಪದಲ್ಲಿ ನಡೆದ ಈ ನಾಟಕ ಪ್ರದರ್ಶನಕ್ಕೆ ಸೇರಿದ್ದ ಅಪಾರ ಪ್ರೇಕ್ಷಕರಲ್ಲಿ

ನಾನೂ ಒಬ್ಬನಾಗಿದ್ದೆ. ರಿಹರ್ಸಲ್ ಕೊರತೆಯಿಂದ ಒಬ್ಬಿಬ್ಬ ಕಲಾವಿದರು ಬಾಯಿಪಾಠ ತಪ್ಪುತ್ತಿದ್ದರೂ, ನಾಯಕ ನಟ - ನಟಿಯರ ಶ್ರೇಷ್ಠ ಅಭಿನಯದಿಂದ ನಾಟಕವೇನೋ ಯಶಸ್ವಿಯಾಯಿತು. ಆದರೆ, 'Operation succeess, patient dead' ಎಂಬಂತಾಗಿತ್ತು ವಾಸುದೇವ ಭಟ್ಟರ ಸ್ಥಿತಿ! ಪ್ರೇಕ್ಷಕರಲ್ಲಿ ಬಹುಮಂದಿ ವಾಸುದೇವ ಭಟ್ಟರ ದಾಕ್ಷಿಣ್ಯ ಪ್ರವೃತ್ತಿಯನ್ನು ದುರುಪಯೋಗ ಪಡಿಸಿಕೊಂಡರು. ಈ ನಾಟಕ ಪ್ರಯೋಗದಿಂದಾಗಿ ವಾಸುದೇವ ಭಟ್ಟರು ಅಪಾರ ನಷ್ಟವನ್ನು ಅನುಭವಿಸಿದರೆಂದು ಪೈಂಟರ್ ಕೃಷ್ಣಪ್ಪರು ಪಶ್ಚಾತ್ತಾಪದಿಂದ ನನಗೆ ತಿಳಿಸಿದ್ದರು. ಪ್ರಾಯಃ ವಾಸುದೇವ ಭಟ್ಟರು ಅನಂತರ ಸ್ವತಃ ನಾಟಕ ಆಡಿಸುವ ಸಾಹಸಕ್ಕೆ ಮುಂದಾಗಲಿಲ್ಲ. ಆಗುವುದೆಲ್ಲಾ ಒಳ್ಳೆಯದಕ್ಕೇ... ಉಡುಪಿಯಲ್ಲಿ ಓರ್ವ ಶ್ರೇಷ್ಠ ಸಂಗೀತ ನಿರ್ದೇಶಕ - ಶಿಕ್ಷಕ ರೂಪುಗೊಂಡರು!

ಸಂಗೀತ ವಿದ್ವಾನ್ ಪದವಿ ಗಳಿಸಿದ ವಾಸುದೇವ ಭಟ್ಟರು ಕೊಳಲು, ವೀಣೆ, ಪಿಟೀಲು, ತಬಲಾ ವಾದನಗಳಲ್ಲೂ ಪರಿಣತರೆನಿಸಿ ನೂರಾರು ಮಂದಿ ಸಂಗೀತಾಭ್ಯಾಸಿಗಳಿಗೆ ಸಂಗೀತ ಶಿಕ್ಷಣ ನೀಡುವ, ಬಿಡುವಿಲ್ಲದ ಗುರುವಾದರು. ಹವ್ಯಾಸಿ ತಂಡಗಳ ನಾಟಕಗಳಿಗೆ ಸಂಗೀತ ಒದಗಿಸಿದರು. ಉಡುಪಿಯ ಖ್ಯಾತ 'ಸಮೂಹ' ತಂಡದ ಅನೇಕ ರೂಪಕಗಳಿಗೆ ವಾಸುದೇವ ಭಟ್ಟರದೇ ಸಂಗೀತ! ಉಡುಪಿಯ ಪ್ರತಿಷ್ಠಿತ 'ರಂಗಭೂಮಿ' ಸಂಸ್ಥೆಯು 1986ರಲ್ಲಿ ಪ್ರೊ. ಉದ್ಯಾವರ ಮಾಧವಾಚಾರ್ಯರ ನಿರ್ದೇಶನದಲ್ಲಿ ರಂಗಕ್ಕೆ ತಂದಿದ್ದ, 'ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ' ನಾಟಕಕ್ಕೆ ಅದ್ಭುತವಾದ ಸಂಗೀತವನ್ನು ಇವರು ಒದಗಿಸಿ, ನಿರ್ದೇಶಿಸಿದ್ದರು.

ಉಡುಪಿ ವಾಸುದೇವ ಭಟ್ಟರು ಸ್ವಲ್ಪ ಉಬ್ಬಾಳು! ತನ್ನ ಅಭಿಮಾನಿ ಮಿತ್ರರು ಸ್ವಲ್ಪ ಹುರಿದುಂಬಿಸಿದರೆ ಸಾಕು, ತಕ್ಷಣ "ಹೂಂ!" ಅನ್ನುವ ಪ್ರವೃತ್ತಿ ಅವರದು! ಹಾಗಾಗಿಯೇ ಇರಬೇಕು, 1993ರಲ್ಲಿ ಯಾರದೋ ಪ್ರೇರಣೆಯಿಂದ ಏಸುಕ್ರಿಸ್ತನ ಜೀವನಕಥೆಯನ್ನಾಧರಿಸಿ 'ಭುವನಜ್ಯೋತಿ' ಎಂಬ ಕನ್ನಡ ಚಲನಚಿತ್ರವೊಂದನ್ನು ನಿರ್ಮಿಸಿದರು. ನನ್ನ ಪರಿಚಿತ ಕಲಾವಿದರನೇಕರು ಈ ಚಿತ್ರದಲ್ಲಿ ಅಭಿನಯಿಸಿದ್ದರು. ಚಿತ್ರವು ಅದ್ಭುತವೆನಿಸದಿದ್ದರೂ, ಯಾರೂ ತೆಗಳುವಂತಿರಲಿಲ್ಲ. ಕ್ರೈಸ್ತ ವಿದ್ಯಾ ಮತ್ತು ಧಾರ್ಮಿಕ ಸಂಸ್ಥೆಗಳಿಂದ ಈ ಚಿತ್ರ ನಿರ್ಮಾಣಕ್ಕೆ ಮತ್ತು ಅನಂತರದ ಪ್ರದರ್ಶನಗಳಿಗೆ ಯಥಾ ಸಾಧ್ಯ ಪ್ರೋತ್ಸಾಹವೂ ಲಭಿಸಿತ್ತಂತೆ. ಆದರೆ ಇಲ್ಲಿ ಕೂಡಾ ಸಂಭವಿಸಿದ್ದು, ವಾಸುದೇವ ಭಟ್ಟರ 'ಧರ್ಮರಾಯ ಸ್ವಭಾವ'ದ ದುರುಪಯೋಗ! ಕೆಲವು ಕಲಾವಿದರೂ ಸೇರಿದಂತೆ ಅನೇಕರು ವಾಸುದೇವ ಭಟ್ಟರನ್ನು ಕೊಳ್ಳೆ ಹೊಡೆದರಂತೆ! ಪಾಪ, ಭಟ್ಟರಾದರೂ ಚಲನಚಿತ್ರ ರಂಗಕ್ಕೆ ಹೊಸಬರು, ಅವರು ಏನು ತಾನೇ ಮಾಡಬಲ್ಲರು? ಬಾಕಿ ಉಳಿದಿರುವ ಬಿಲ್ಲುಗಳನ್ನು ಪಾವತಿ ಮಾಡಲು ಸಾಧ್ಯವಾಗದೆ, ತನ್ನ ಅಧ್ಯಾಪಕ ವೃತ್ತಿಯಿಂದಲೇ ಸ್ವಯಂ ನಿವೃತ್ತಿ ಪಡೆದು, ತನ್ಮೂಲಕ ದೊರಕಿದ ಹಣದಿಂದ, ಸಾಲಗಾರರ ಬಾಯಿಗಳನ್ನು ಮುಚ್ಚಿಸಿದರಂತೆ!

18679

ಉಡುಪಿ ವಾಸುದೇವ ಭಟ್ಟರು ಪ್ರಚಾರಪ್ರಿಯರಲ್ಲ. ತನ್ನ ಕಾರ್ಯದ ಅಥವಾ ಕಾರ್ಯಕ್ರಮಗಳ ಬಗ್ಗೆ ಪತ್ರಿಕಾ ಪ್ರಕಟಣೆ, ಜಾಹೀರಾತು, ಕರಪತ್ರ ವಿತರಣೆ ಇತ್ಯಾದಿ ಅವರಿಗೆ ತಿಳಿಯದು. ಪತ್ರಿಕೆಗಳಲ್ಲಿ ಅವರ ಭಾವಚಿತ್ರ ಪ್ರಕಟವಾಗುವುದಂತೂ ಇಲ್ಲವೇ ಇಲ್ಲವೆನ್ನಬಹುದು. ಸಭೆ ಸಮಾರಂಭಗಳಿಗೆ ಅತಿಥಿಯಾಗಿ ಅಥವಾ ಭಾಷಣಕಾರನಾಗಿ ಹೋಗುವ ಪರಿಪಾಠ ಇವರಿಗಿಲ್ಲ. ಕೇವಲ ತನ್ನ ಆತ್ಮಸಂತೃಪ್ತಿಗಾಗಿ ಮತ್ತು ಕಲಾಭಿಜ್ಞರ ಮೆಚ್ಚುಗೆಗಾಗಿ ಇವರು ದುಡಿಯುತ್ತಿದ್ದಾರೆ.

ಈ ಅಭಿಜಾತ ಕಲಾವಿದ ರಾಜ್ಯದ ಸಾಂಸ್ಕೃತಿಕ ರಂಗಕ್ಕೆ ಸಲ್ಲಿಸಿರುವ ಅಪೂರ್ವ ಸೇವೆಯನ್ನು ಗುರುತಿಸಿ ಉಡುಪಿಯ ಪ್ರತಿಷ್ಠಿತ ಕಲಾಸಂಸ್ಥೆ 'ರಂಗಭೂಮಿ'ಯು 6-1-2002 ರಂದು 'ಸಂಗೀತ ವಿಭೂಷಣ' ಎಂಬ ಪ್ರಶಸ್ತಿಯನ್ನು ಅಂಬಲಪಾಡಿ ಕ್ಷೇತ್ರದ ಧರ್ಮದರ್ಶಿ ಶ್ರೀ ನಿ. ಬಿ. ಅಣ್ಣಾಜಿ ಬಲ್ಲಾಳರ ಹಿರಿತನದಲ್ಲಿ ನೀಡಿ ಗೌರವಿಸಿದೆ.

ಉಡುಪಿ ವಾಸುದೇವ ಭಟ್ಟರು ಇನ್ನೂ ತನ್ನ ತಂದೆಯ ಕಾಲದ ಮಣ್ಣಿನ ಗೋಡೆಯ ಹಂಚಿನ ಮನೆಯಲ್ಲೇ ವಾಸಿಸುತ್ತಿದ್ದಾರೆ. ಬದುಕುವುದಕ್ಕೆ ಮನೆ ಮುಖ್ಯವಲ್ಲ, ಸಂತೃಪ್ತ ಮನ ಮುಖ್ಯವೆಂಬುದು ಭಟ್ಟರ ನಿಲುವು. "ಅನುಕೂಲೆಯಾದ ಸತಿಯನ್ನು ಹೊಂದಿದ್ದೇನೆ. ನಾಲ್ವರು ಪುತ್ರಿಯರನ್ನು, ನಾಲ್ವರು ಸುಯೋಗ್ಯ ವರರಿಗೆ ಕೊಟ್ಟು, ನಾಲ್ಕು ಊರುಗಳನ್ನು ನನ್ನದಾಗಿಸಿಕೊಂಡಿದ್ದೇನೆ. ನಾಲ್ವರು ಮೊಮ್ಮಕ್ಕಳನ್ನು ಈಗಾಗಲೇ ಪಡೆದಿದ್ದೇನೆ. ನನ್ನ ನಾಲ್ವರು ಪುತ್ರಿಯರೂ ಕಲಾವಿದೆಯರು. ನನ್ನದು ಸಂತೃಪ್ತ ಜೀವನ" ಅನ್ನುತ್ತಾರೆ ವಾಸುದೇವ ಭಟ್ಟರು. ಅವರ ಹಿರಿಯ ಪುತ್ರಿ ವಸುದಾ ಮತ್ತಾಕೆಯ ಪತಿ, ಖ್ಯಾತ ಕಲಾವಿದ ಎಂ. ಎಸ್. ಗಿರಿಧರ್ ಅವರ ಸಂಗೀತದ ಸವಿಯನ್ನು ನಾನೂ ಸವಿದಿದ್ದೆ.

ಈಗಿನ ಯುವಪೀಳಿಗೆಗೆ ಶಾಸ್ತ್ರೀಯ ಸಂಗೀತದಲ್ಲಿ ಆಸಕ್ತಿಯಿಲ್ಲ. ಅವರು ಮೆಚ್ಚುವುದು ಮತ್ತು ಬಯಸುವುದು ಪಾಪ್ ಮ್ಯೂಸಿಕ್ ಮತ್ತು ಪಾಪ್ ಡ್ಯಾನ್ಸ್. ಇಂತಹ ಸಂಧಿಕಾಲದಲ್ಲಿ ಉಡುಪಿಯ 'ನಾದವೈಭವಂ' ವಾಸುದೇವ ಭಟ್ಟರು ಶಾಸ್ತ್ರೀಯ ಸಂಗೀತಕ್ಕಾಗಿಯೇ ತನ್ನ ಬದುಕನ್ನು ಸವೆಸಿದ್ದಾರೆ; ಈಗಲೂ ಸವೆಸುತ್ತಿದ್ದಾರೆ. ಉಡುಪಿಯು ಲೀಲಾನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನ ಊರು! ಆದರೆ ಉಡುಪಿಯವರೇ ಆಗಿ, ಉಡುಪಿಗೇ ಕೀರ್ತಿ ತಂದಿರುವ ಉಡುಪಿ ವಾಸುದೇವ ಭಟ್ಟರಿಗೆ ಉಡುಪಿಯಲ್ಲಿ ದೊರಕಿರುವ ಮನ್ನಣೆ - ಗೌರವಗಳು ಸಾಕೇ?... ಸಾಲದು ಎಂದು ನನಗನ್ನಿಸುತ್ತದೆ.

ಕಲಾವೃಂದ ಮತ್ತು ನಾದವೈಭವಂ

ಬಿ. ಪದ್ಮನಾಭ ಭಟ್

'ಕಲಾವೃಂದ'ದ ಕಣ್ಣುಗಳಿಂದ 'ನಾದವೈಭವಂ' ನೋಡಿದಾಗ ಅನೇಕ ದೃಶ್ಯಗಳು ಹಚ್ಚಹಸಿರಾಗಿ ಕಾಣಿಸಿಕೊಳ್ಳುತ್ತವೆ. ಅನೇಕ ದೃಶ್ಯಗಳು ಮತ್ತೆ ಕಾಣಿಸಿಕೊಳ್ಳದ ಹಾಗೆ ಮಾಸಿಹೋಗಿವೆ. ಕಲಾವೃಂದವೆಂದರೆ ಒಂದು ಕಾಲದಲ್ಲಿ ಅನೇಕ ವಿದ್ವಾಂಸರ ಸಾಹಿತ್ಯಿಕ ಸಾಂಸ್ಕೃತಿಕ ಕೂಟ. ಅಂದಿನ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಅಷ್ಟಮಠಾಧಿಪತಿಗಳ ಆಶ್ರಯದಲ್ಲಿ ಕಡೆಕೊಪ್ಪಲಿನ ಹಳೆಯ ಕಟ್ಟಡದಲ್ಲಿ ದಿನಾಂಕ 13-7-1944 ರಂದು ಸ್ಥಾಪಿಸಿಕೊಂಡ ಕಲಾವೃಂದ ಮುಂದೆ ಉಡುಪಿಯ ಚಂದ್ರಮೌಳೀಶ್ವರ ದೇವಸ್ಥಾನದ ಮುಂಭಾಗದ ಅಂತಸ್ತಿನಲ್ಲಿ ನೆಲೆಗೊಂಡಿತು. ಎಸ್. ಕೆ. ಪದ್ಮನಾಭಾಚಾರ್ಯ (ಸತ್ಯಕಾಮ), ಕೊಡೆತ್ತೂರು ಅನಂತಪದ್ಮನಾಭ ಉಡುಪ, ಕು. ಶಿ. ಹರಿದಾಸ ಭಟ್ಟ, ಬನ್ನಂಜೆ ರಾಮಾಚಾರ್ಯ, ಬನ್ನಂಜೆ ಗೋವಿಂದಾಚಾರ್ಯ, ಬಳ್ಳೂರು ಸುಬ್ರಾಯ ಅಡಿಗ, ಕೋ. ವಾ. ಕಾರಂತ, ಕೆ. ಶ್ರೀನಿವಾಸ ಉಡುಪ, ಮಟ್ಟಿ ವಾಸುದೇವಾಚಾರ್ಯ, ಕೆ. ಹರಿದಾಸ ಉಪಾಧ್ಯಾಯ, ಎಸ್. ಎಲ್. ನಾರಾಯಣ ಭಟ್ಟ, ಕಟೀಲು ಸದಾನಂದ ಆಸ್ರಣ್ಣ, ಉಚ್ಚಿಲ ರಾಜಗೋಪಾಲಾಚಾರ್ಯ ಮುಂತಾದವರ ಪ್ರತಿಭಾ ವಿಲಾಸದಲ್ಲಿ ಅರಳಿಕೊಂಡ ಕಲಾವೃಂದ ಪ್ರತಿ ಅಷ್ಟಮಿಯ ದಿನ ವಿಚಾರಾತ್ಮಕ ವಿಷಯಗಳ ಮೇಲೆ ಸಭೆ ಸಮಾರಂಭಗಳನ್ನು, ಭಜನೆ, ನಾಟಕಗಳನ್ನು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ 'ಜಾಣ' ಮತ್ತು 'ಕಾವ್ಯ' ಪರೀಕ್ಷೆಗಳಿಗೆ ತರಗತಿಗಳನ್ನು ನಡೆಸುತ್ತಿದ್ದುದು ಗತ ಇತಿಹಾಸ. ಕನ್ನಡದ ಯಾವುದೇ ಹೊಸ ಪತ್ರಿಕೆಯನ್ನು ಕಾಣಬೇಕಿದ್ದರೆ ಕಲಾವೃಂದಕ್ಕೇ ಹೋಗಬೇಕು ಎಂಬ ಆ ಕಾಲದಲ್ಲಿ, ಅನೇಕರು ಗ್ರಂಥ, ಪತ್ರಿಕೆಗಳನ್ನು ಓದಿ ಕಲಾವೃಂದಕ್ಕೆ ಕೊಡುಗೆಯಾಗಿ ನೀಡುತ್ತಿದ್ದರು. ಹಾಗೆ ಬೆಳೆದು ಬಂದ ವಾಚನಾಲಯ ಸುಮಾರು ಆರು ಸಾವಿರಕ್ಕೂ ಮಿಕ್ಕಿದ ಗ್ರಂಥಭಂಡಾರವಾಗಿ, ಅಲಭ್ಯ ಪ್ರಾಚೀನ ತಾಡವೋಲೆಗಳಿಂದ ಕೂಡಿ ತುಂಬಿ ತುಳುಕಿದಾಗ, ದಿನಾಂಕ 26-12-1988 ರಂದು ಮಧ್ಯರಾತ್ರಿ ಬೆಂಕಿ ದುರಂತದಲ್ಲಿ ಯಜ್ಞವಾಗಿ ಹೊಗೆ ಆಕಾಶಕ್ಕೇರಿತು. ಬೂದಿ ನೆಲಕ್ಕೆ ಬಿತ್ತು. 1989ರಲ್ಲಿ ಶ್ರೀ ಅನಂತೇಶ್ವರ ಮತ್ತು ಶ್ರೀ ಚಂದ್ರಮೌಳೀಶ್ವರ ದೇವಸ್ಥಾನಗಳ ಆಡಳಿತ ಮೊಕ್ತೇಸರರೂ, ಕಲಾವೃಂದದ ಮಾಜಿ ಅಧ್ಯಕ್ಷರೂ ಆಗಿದ್ದ ಕಾಣಿಯೂರು ಮಠದ ಶ್ರೀ ವಿದ್ಯಾನಿಧಿತೀರ್ಥ ಶ್ರೀಪಾದಂಗಳವರ ಔದಾರ್ಯದಿಂದ ಕಲಾವೃಂದ ಮತ್ತೆ ಅದೇ ಜಾಗದಲ್ಲಿ ಫೀನಿಕ್ಸ್ ಪಕ್ಷಿಯ ಹಾಗೆ ಎದ್ದುನಿಂತಿತು!

ಈ ಗತ ಇತಿಹಾಸದೊಂದಿಗೆ ಉಡುಪಿಯ 'ನಾದವೈಭವಂ' ಸದಾ ಸ್ಪಂದಿಸಿ ಹಾಸುಹೊಕ್ಕಾಗಿ ಬೆರೆತುಕೊಂಡಿರುವುದು ಪ್ರಸ್ತುತ ಇಲ್ಲಿ ಉಲ್ಲೇಖನೀಯ. ಉಡುಪಿಯ ಬೈಲಕೆರೆಯ ಹಳೆಯ ಮನೆಯಲ್ಲಿದ್ದ ಉಡುಪಿ ವಾಸುದೇವ ಭಟ್ಟರ ತೀರ್ಥರೂಪರಾಗಿದ್ದ ಯು. ಎಸ್. ಭಟ್ಟರು ಶ್ರೇಷ್ಠ ಪತ್ರಿಕೋದ್ಯಮಿಯಾಗಿದ್ದು ಕಲಾವೃಂದದ ಜೀವನಾಡಿಯಾಗಿದ್ದರು. ಕಲಾವೃಂದದಲ್ಲಿ ಏನೇ ನಡೆಯಲಿ, ಅದು ಜಗಜ್ಜಾಹೀರು ಆಗುತ್ತಿದ್ದುದು ಯು. ಎಸ್. ಭಟ್ಟರಿಂದ. ಅನಂತರ ಅದೇ ಪತ್ರಿಕೋದ್ಯಮವನ್ನು ಕೈಗೆತ್ತಿಕೊಂಡ ವಾಸುದೇವ ಭಟ್ಟರಿಂದ. ಇವುಗಳ ಎಲ್ಲ ದಾಖಲೆಗಳೂ ಕಲಾವೃಂದದಲ್ಲಿ ಇದ್ದುವು. ಇಂದು ಯಾರ ಸ್ಮರಣೆಯಲ್ಲೂ ಇರಲಿಕ್ಕಿಲ್ಲ.

ಗ್ರಂಥ ಬಿಡುಗಡೆ, ಚಿತ್ರಕಲೆ, ಸಂಗೀತ, ಭಾಷಣ, ರಾಜ್ಯಮಟ್ಟದ ಬೆರಳಚ್ಚು ಸ್ಪರ್ಧೆ, ಮುದ್ದುಕೃಷ್ಣ ಸ್ಪರ್ಧೆ, ಗಾಳಿಪಟ ಸ್ಪರ್ಧೆ ಇತ್ಯಾದಿಗಳಲ್ಲಿ, ಮರೆತುಬಿಟ್ಟ ಸ್ವಾತಂತ್ರ್ಯ ಯೋಧರನ್ನು, ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆಗೈದ ಪ್ರತಿಭಾವಂತರನ್ನು, ರ್‍ಯಾಂಕ್ ವಿಜೇತರನ್ನು ಗುರುತಿಸಿ ಅಂಥವರ ಮನೆಗಳಲ್ಲೇ ಸಮ್ಮಾನಿಸುವುದರಲ್ಲಿ ನಾದವೈಭವಂ ಪ್ರೋತ್ಸಾಹಿಸಿ ಸಹಕರಿಸಿದೆ.

ವೈಯಕ್ತಿಕವಾಗಿ ನನ್ನ ಮತ್ತು ಉಡುಪಿ ವಾಸುದೇವ ಭಟ್ಟರ ಸಂಬಂಧ ಗಳಸ್ಯಕಂಠಸ್ಯ. ನಾನು ಹುಟ್ಟಿದ್ದು ಕೂಡ ಉಡುಪಿಯ ಬೈಲಕೆರೆಯಲ್ಲೇ. ನನ್ನ ತಾಯಿ ಮತ್ತು ಭಟ್ಟರ ತಾಯಿ ಅನ್ಯೋನ್ಯವಾಗಿದ್ದುದನ್ನು ಕಂಡಿದ್ದೇನೆ. 1949ರಲ್ಲಿ ನನ್ನ ತಂದೆ ತೀರಿಹೋಗಿ ನಾವು ಬನ್ನಂಜೆಗೆ ಬಂದೆವು. ಕೌಟುಂಬಿಕವಾಗಿ ಇಂದಿಗೂ ವಾಸುದೇವ ಭಟ್ಟರು ನನಗೆ ಅಣ್ಣ ಇದ್ದ ಹಾಗೆ. ಉಡುಪಿಯ ಶ್ರೀಕೃಷ್ಣ ಮುಖ್ಯಪ್ರಾಣರ ಭಕ್ತರಾಗಿ, ಅಷ್ಟಮಠಗಳ ಒಡನಾಟದಲ್ಲಿದ್ದ ಭಟ್ಟರು ಮಾರ್ಗದರ್ಶಕರಾಗಿ ನನ್ನ ವಿವಾಹವನ್ನು ನೆರವೇರಿಸಿಕೊಟ್ಟದ್ದು ಸ್ತುತ್ಯರ್ಹ.

1968 - 69ರಲ್ಲಿ ಕಲಾವೃಂದ ತನ್ನ ಬೆಳ್ಳಿಹಬ್ಬದ ಸಂಭ್ರಮಾಚರಣೆಯಲ್ಲಿ ಅನಕೃ, ಗೋಪಾಲಕೃಷ್ ಅಡಿಗ, ಎಸ್. ಆರ್. ಎಕ್ಕುಂಡಿ, ಕೆ. ಎಸ್. ನರಸಿಂಹಸ್ವಾಮಿ, ಎಂ. ಪಿ. ಎಲ್. ಶಾಸ್ತ್ರಿ, ಗೋವಿಂದ ಜಾಲಿಹಾಳ, ಡಿ. ಎಸ್. ರಾಯ್ಕರ್, ತರಾಸು, ನಾಡಿಗೇರ, ಅನಂತಮೂರ್ತಿ ಮುಂತಾದವರನ್ನು ಕರೆಸಿ ಏರ್ಪಡಿಸಿದ ಸಮಾರಂಭದಲ್ಲಿ ವಾಸುದೇವ ಭಟ್ಟರ ಓಡಾಟ ಒಡನಾಟ ನೆನಪಾಗುತ್ತದೆ.

ವಾಸುದೇವ ಭಟ್ಟರು ರಾಜಾಂಗಣದ ಸಮೀಪ ಛತ್ರದಲ್ಲಿ ಅನೇಕ ನಾಟಕಗಳ ಅಭ್ಯಾಸ ನಡೆಸುತ್ತಿದ್ದರು. 'ಇದು ಕೂಡ ಜೀವನ' ಎಂಬ ನಾಟಕದಲ್ಲಿ ಚಂದ್ರಕಲಾ, ಎಸ್. ಪಿ. ಸರೋಜಾ, ಬಿ. ವಿ. ನಾಯಕ್, ಸೂರ್ಯಸಿದ್ಧಾಂತಿ ಬಾಳಘಟ್ಟ, ರಾಮಚಂದ್ರ ಭಟ್, ಮಂಜುನಾಥ ಮಧ್ಯಸ್ಥ, ಸೀತಾರಾಮ ಸೋಮಯಾಜಿ, ಟೈಲರ್ ಪುಟ್ಟಪ್ಪ ಮುಂತಾದವರು ಭಾಗವಹಿಸಿದ್ದನ್ನು ನೋಡಿದ್ದೇನೆ. 'ವಿಕ್ಟೋರಿಯಾ ಜುಬಿಲಿ' ಉತ್ಸವದಲ್ಲಿ ಕಲಾವಿದರ

ಮುಖಚಿತ್ರ ಹಾಕಿ ತೀಕ್ಷ್ಣ ಪ್ರಕಾಶ ಹಾಯಿಸಿ ಪರಿಚಯಿಸುತ್ತಿದ್ದುದನ್ನು ನೋಡಿದ್ದೇನೆ. ಭಟ್ಟರು ಸ್ತ್ರೀ-ಪುರುಷ ಎರಡೂ ವೇಷಗಳನ್ನು ಹಾಕುತ್ತಿದ್ದರು. ನವೀನ ಪ್ರಯೋಗಗಳನ್ನು ರಂಗದಲ್ಲಿ ವಿಸ್ಮಯಕಾರಿಯಾಗಿ ತರುತ್ತಿದ್ದರು. ನಾನೂ ಅವರೊಂದಿಗೆ ಖಳನಾಯಕ ಹಾಗೂ ಸ್ತ್ರೀಪಾತ್ರಗಳಲ್ಲಿ ಅಭಿನಯಿಸಿದ್ದೇನೆ. ಕಲಾವೃಂದದಲ್ಲಿ ವೇದಿಕೆ ರಚಿಸಿ ಸಾಹಿತ್ಯ ಸಂಗೀತ ಮೇಳೈಸಿದ 'ಗಾನೋಲ್ಲಾಸ' ಕಾರ್ಯಕ್ರಮಗಳನ್ನು ಟಿಕೇಟು ಇರಿಸಿ ನಡೆಸಿದ್ದೂ ನೆನಪಿದೆ. ಕೈಸುಟ್ಟುಕೊಂಡು ಪರಿತಪಿಸಿದ್ದನ್ನೂ ಕಂಡಿದ್ದೇನೆ.

ಶ್ರೀ ಶ್ರೀ ವಾದಿರಾಜ ಸ್ವಾಮಿಗಳ ಹಾಡುಗಳನ್ನು ಮೊತ್ತಮೊದಲಿಗೆ ಎಲ್.ಪಿ. ರೆಕಾರ್ಡಿನಲ್ಲಿ ತಂದ ಹೆಗ್ಗಳಿಕೆಯೊಂದಿಗೆ ವಾಸುದೇವ ಭಟ್ಟರು ಸೋದೆ ಮಠದ ಸ್ವಾಮಿಗಳ ಹಿರಿತನದಲ್ಲಿ ಮೈಸೂರಿನ ಸೆಂಟಿನರಿ ಸಭಾಭವನದಲ್ಲಿ ಬಿಡುಗಡೆಗೊಳಿಸಿದ ಸಮಾರಂಭದಲ್ಲಿ ನಾನೂ ಉಪಸ್ಥಿತನಿದ್ದೆ. ಕಾನ್ವೆಂಟಿನ ಶಿಕ್ಷಕರಾಗಿದ್ದ ಕೆ. ಎಲ್. ಎಸ್. ಉಪಾಧ್ಯಾಯ ಅವರ ಆತ್ಮೀಯ ಸಲಹೆಯಂತೆ ವಾದಿರಾಜರ 'ಲಕ್ಷ್ಮೀಸೋಬಾನೆ'ಯನ್ನು ಧ್ವನಿಸುರುಳಿಯಲ್ಲಿ ತಂದುದಕ್ಕೆ ಎಲ್ಲೆಂದರಲ್ಲಿ ವಾಸುದೇವ ಭಟ್ಟರನ್ನು ಅಭಿನಂದಿಸುತ್ತಿದ್ದುದನ್ನು ಕೇಳಿ ತಿಳಿದಿದ್ದೇನೆ.

1984ರಲ್ಲಿ ಪರ್ಯಾಯ ಪೀಠ ಫಲಿಮಾರು ಸ್ವಾಮಿಗಳ ಹಿರಿತನದಲ್ಲಿ ದಿನೇಶ್, ವಿ. ಎಸ್. ಆಚಾರ್, ಗುಂಡ್ಮಿ ಚಂದ್ರಶೇಖರ ಐತಾಳ ಮುಂತಾದವರು ಭಾಗವಹಿಸಿದ ಕಲಾವೃಂದದ ವಾರ್ಷಿಕೋತ್ಸವದಲ್ಲಿ ಉಡುಪಿ ವಾಸುದೇವ ಭಟ್ಟರನ್ನು ಮಾನಪತ್ರ ಮತ್ತು ಆತ್ಮೀಯವಾಗಿ ಉಡುಪಿಯ ರಥಬೀದಿಯಲ್ಲಿ ಸಮ್ಮಾನಿಸಿದ ಧನ್ಯತಾಭಾವವನ್ನು ಕಲಾವೃಂದ ಸ್ಮರಿಸುತ್ತಿದೆ. ಕಲಾವೃಂದವನ್ನು ಮತ್ತೆ ಬೆಳೆಸುವುದಕ್ಕಾಗಿ ಅವರು ದಾನವಾಗಿತ್ತ ಸುಮಾರು ಐದು ಸಾವಿರ ರೂಪಾಯಿಗಳಿಗೂ ಮಿಕ್ಕಿದ ಬೆಲೆಯುಳ್ಳ ಗ್ರಂಥಗಳಿಗಾಗಿಯೂ ಕೃತಜ್ಞತೆ ಸಲ್ಲಿಸುತ್ತಿದೆ.

ಸಂಪೂರ್ಣ ಕುಂಭೋ ನ ಕರೋತಿ ಶಬ್ದಂ

✍ ಕೆ. ಶಾರದಾ ಭಟ್

'ನಾದವೈಭವಂ' ಸಂಗೀತ ಶಾಲೆಯ ವಾಸುದೇವ ಭಟ್ಟರ ಜತೆಗಿನ ನನ್ನ ಪರಿಚಯ ತೀರ ಇತ್ತೀಚಿನದು. ಕಳೆದ ವರ್ಷ ಮಾರ್ಚ್ ತಿಂಗಳ ಒಂದು ದಿನ ನಮ್ಮ ನಡುಮನೆ ಸಾಹಿತ್ಯ ವೇದಿಕೆಯ ಮಾಸಿಕ ಗೋಷ್ಠಿಯನ್ನು ತಮ್ಮಲ್ಲಿ ನಡೆಸಬೇಕೆಂದು ಅವರು ದೂರವಾಣಿಯ ಮೂಲಕ ನನಗೆ ತಿಳಿಸಿದರು. ಗೋಷ್ಠಿಯ ದಿನ ಬೈಲಕೆರೆಯಲ್ಲಿರುವ ಅವರ ಮನೆ ಹುಡುಕುವ ತಾಪತ್ರಯ ಬೇಡವೆಂದು ವೆಂಕಟರಮಣ ದೇವಳದ ಬಳಿ ಅವರೇ ಕಳಿಸಿದ ರಿಕ್ಷಾ ಹತ್ತಿ ಅವರ ಮನೆಗೆ ಅಪರಾಹ್ನ ಮೂರುವರೆಗೆ ತಲುಪಿದೆ. ಹಸಿರು ಪರಿಸರದ ನಡುವೆ ಉದ್ದನೆಯ ಒಳಜಗುಲಿ ಹಾಗೂ ಕೆಳಜಗುಲಿ ಹೊಂದಿದ ಹಳೆ ಶೈಲಿಯ ಮನೆಯ ಬಾಗಿಲಲ್ಲಿ ಸ್ವತಃ ವಾಸುದೇವ ಭಟ್ಟರೇ ಬಂದವರನ್ನು ಸ್ವಾಗತಿಸಲು ನಿಂತಿದ್ದರು. ಅವರನ್ನು ನಾನು ನೋಡಿದ್ದು ಅದೇ ಮೊದಲು. ಸಂಗೀತಗಾರರಾಗಿರುವ ಅವರ ಕುರಿತಾಗಿ ಬೇರೆಯೇ ಪರಿಕಲ್ಪನೆ ಹೊಂದಿದ್ದ ಅವರನ್ನು ನೋಡಿಯೇ ನನಗೆ ಅಚ್ಚರಿ. ಸಾಮಾನ್ಯವಾಗಿ ಸಂಗೀತಗಾರರಿಗಿರುವಂತೆ ಕೈಬೆರಳುಗಳಲ್ಲೆಲ್ಲ ಬಂಗಾರದ ಉಂಗುರಗಳು, ಕೊರಳಲ್ಲಿ ದಪ್ಪನೆಯ ಬಂಗಾರದ ಚೈನು, ಹಣೆಯಲ್ಲಿ ವಿಭೂತಿ ಯಾ ಕುಂಕುಮ ಬಳಿದ ಸಾಂಪ್ರದಾಯಿಕ ಸಂಗೀತಗಾರರ ವೇಷಭೂಷೆಗಿಂತ ವ್ಯತಿರಿಕ್ತವಾಗಿ, ಶುಭ್ರಬಿಳುಪಿನ ವಸನಧಾರಿಯಾದ ವಾಸುದೇವ ಭಟ್ಟರು ಮೊದಲ ನೋಟಕ್ಕೇನೆ ಒಬ್ಬ ನಿವೃತ್ತ ಹೈಸ್ಕೂಲು ಮುಖ್ಯೋಪಾಧ್ಯಾಯರಂತೆ ಕಂಡರು. ಎಂದಿನಂತೆ ನಡುಮನೆ ಗೋಷ್ಠಿ ಸಂದರ್ಭ ಸಿಗುವ ಸೌಜನ್ಯಪೂರ್ಣ ಆತಿಥ್ಯದಂತೆ ಭಟ್ಟರಲ್ಲಿನ ಆತಿಥ್ಯ ಹಾಗೂ ಅವರ ವಿದ್ಯಾರ್ಥಿಗಳು ಅಂದು ಸುಶ್ರಾವ್ಯವಾಗಿ ಹಾಡಿದ ದೇವರನಾಮ ಹಾಗೂ ಜನಪದ ಗೀತೆಗಳಿಂದ ಗೋಷ್ಠಿಗೆ ಕಳೆಯೇರಿದ್ದು ಇಂದಿಗೂ ನೆನಪಲ್ಲಿ ಇದೆ.

ಎರಡನೆಯ ಬಾರಿ ನಾನು ವಾಸುದೇವ ಭಟ್ಟರನ್ನು ನೋಡಿದ್ದು ಪತ್ರಿಕೆಯಲ್ಲಿ ಅವರ ಕುರಿತು ಪರಿಚಯಾತ್ಮಕ ಲೇಖನ ಬರೆಯುವ ಸಲುವಾಗಿ. ಒಂದೊಮ್ಮೆ ಅವರು ಪತ್ರಕರ್ತರಾಗಿದ್ದುದು ನನಗೆ ತಿಳಿದುದು ಆಗಲೇ. ಪತ್ರಕರ್ತರಾಗಿದ್ದ ತಂದೆ ಯು. ಎಸ್. ಭಟ್ಟರು ಸವೆಸಿದ ಹಾದಿಯ ಜಾಡನ್ನೇ ಹಿಡಿದು, 'ಮದ್ರಾಸ್ ಮೈಲ್' ಮತ್ತು 'ಸಂಯುಕ್ತ ಕರ್ನಾಟಕ' ಮುಂತಾದ ಪತ್ರಿಕೆಗಳಲ್ಲಿ ವರದಿಗಾರನಾಗಿ ತಾನು ಕೈಯಲ್ಲಿ ಹಿಡಿದ ಲೇಖನಿಯ ಕಾವು ಯಾವತ್ತೂ ಕಡಿಮೆಯಾಗದಂತೆ ನೋಡಿಕೊಂಡು ಬರೆದ ಕಾರಣಕ್ಕಾಗಿಯೇ ದಿಟ್ಟ ಪತ್ರಕರ್ತನೆಂಬ ಹಣೆಪಟ್ಟಿ ತನಗೆ ದಕ್ಕಿದ್ದನ್ನು ಅವರ ಬಾಯಿಯಿಂದಲೇ ಕೇಳುವುದು ಚೆನ್ನ.

ಆದರೆ ಪತ್ರಕರ್ತನಾಗಿ ಪತ್ರಿಕೆಯೊಂದನ್ನೇ ಅವರು ಅಂಟಿಕೊಳ್ಳಲಿಲ್ಲ. ಐವತ್ತರ ದಶಕದ ಕೊನೆಯ ವರ್ಷಗಳಲ್ಲಿ ನಾಟಕ ತಂಡವೊಂದನ್ನು ಕಟ್ಟಿ ಕೆಲವು ಉತ್ತಮ ನಾಟಕಗಳನ್ನು ರಂಗಕ್ಕೆ ತಂದದ್ದೂ ಇದೆ. ಮುಂದೆ ಅದೇ ಕಲಾವಿದರುಗಳನ್ನು ಸೇರಿಸಿ ಕ್ರಿಸ್ತನ ಕುರಿತಾಗಿ 'ಭುವನಜ್ಯೋತಿ' ಎಂಬ ಬ್ಯಾಲೆಯನ್ನು ಚಲನಚಿತ್ರರೂಪದಲ್ಲಿ ತಂದುದು ಅವರ ಆಸಕ್ತಿಯ ವೈವಿಧ್ಯಕ್ಕೆ ಸಾಕ್ಷಿ. ಮನುಷ್ಯರ ಕೊರಳುಗಳಿಂದ ಬರುವ ನಾದಗಳ ಜತೆಗೆ ಬೇರೆ ಬೇರೆ ತರದ ವಾದ್ಯಗಳ ನಾದಗಳು ಅಲ್ಲಿ ಸದಾ ಹೊಮ್ಮಿ ಬರುವುದರಿಂದಲೇ ಅದು 'ನಾದವೈಭವಂ'.

ನೀತಿಬೋಧೆ ಹಾಗೂ ಸಾಹಿತ್ಯ ವಿಪುಲವಾಗಿರುವ ದಾಸರಗೀತೆಗಳ ಮೂಲಕ ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ ದಾಸಪರಂಪರೆ ಕುರಿತಾಗಿ ಇವರಿಗೆ ಅಪಾರ ಗೌರವ. ಮತ್ತೆ ಮಾತಿನ ಮಧ್ಯೆ ಬಿಡಾರಂ ಕೃಷ್ಣಪ್ಪನವರ ಹೆಸರು ತೆಗೆಯದೇ ಇವರ ಮಾತುಗಳು ಮುಗಿಯುವುದೇ ಇಲ್ಲ. ಹಿಂದೆ ಕನ್ನಡೇತರ ಕೃತಿಗಳ ಮೂಲಕ ಇರುತ್ತಿದ್ದ ಸಂಗೀತ ಕಲಿಕೆಗೆ ಇತಿಶ್ರೀ ಹಾಡಿ ದಾಸರ ಕೃತಿಗಳ ಮೂಲಕ ಸಂಗೀತ ಕಲಿಕೆ ಪ್ರಾರಂಭಿಸಿ ಕನ್ನಡದ ಸಂಗೀತದಲ್ಲಿ ದಾಸವರೇಣ್ಯರಿಗೆ ಸ್ಥಾನ ಕಲ್ಪಿಸಿಕೊಟ್ಟ ಹಿರಿಮೆ ಬಿಡಾರಂ ಅವರದು ಎಂದು ಬಿಡಾರಂ ಕುರಿತು ಪ್ರಶಂಸೆಯ ಮಾತುಗಳನ್ನು ಹೇಳುತ್ತಲೇ ಇರುತ್ತಾರೆ ಇವರು.

ಇವರ ಸಂಗೀತ ಶಾಲೆಯಿಂದ ಸಾಕಷ್ಟು ವಿದ್ಯಾರ್ಥಿಗಳು ಶಿಕ್ಷಣ ಪಡೆದಿದ್ದಾರೆ. ಅಂಥ ವಿದ್ಯಾರ್ಥಿಗಳಿಗೆ ಸೂಕ್ತ ವೇದಿಕೆ ಒದಗಿಸಿಕೊಟ್ಟು ಅವರ ಪ್ರತಿಭೆಯನ್ನು ಬೆಳಕಿಗೊಡ್ಡುವಲ್ಲಿ ಭಟ್ಟರ ಶ್ರಮವೂ ಇದೆ, ದೊಡ್ಡತನವೂ ಇದೆ. ಬೆಂಗಳೂರಿನಲ್ಲಿ ಉಚಿತ ತರಗತಿಗಳನ್ನು ತಮ್ಮ ಮಗಳು ಅಳಿಯನ ಮೂಲಕ ನಡೆಸುತ್ತಾ ಬಂದು ಸಂಗೀತ ಕಲೆಯನ್ನು ಜನರ ಬಳಿ ಕೊಂಡೊಯ್ಯುವ ಪ್ರಯತ್ನವೂ ಇವರಿಂದಾಗಿದೆ.

ಸರಳ ವ್ಯಕ್ತಿತ್ವದ ಇವರು ಒಂದು ತುಂಬಿದ ಕೊಡ. 'ಸಂಪೂರ್ಣ ಕುಂಭೋ ನ ಕರೋತಿ ಶಬ್ದಂ' ಎನ್ನುವ ಉಕ್ತಿ ಇವರ ಮಟ್ಟಿಗಂತೂ ನಿಜ.

ಸನಿಹದಿಂದ ಕಂಡಂತೆ

✍ ಎಚ್. ಗೋಪಾಲ ಭಟ್ (ಕು.ಗೋ.)

ಉಡುಪಿಯಲ್ಲಿ ನನ್ನನ್ನು ಒಬ್ಬ ಲೇಖಕನೆಂದು ಪ್ರಥಮವಾಗಿ ಗುರುತಿಸಿದವರು ವಾಸುದೇವ ಭಟ್ಟರು ಎಂದು ನನ್ನ ನೆನಪು. 1964ರಲ್ಲಿ ಚಿಕ್ಕಮಗಳೂರಿನಿಂದ ವರ್ಗವಾಗಿ ಉಡುಪಿಗೆ ಬಂದಾಗ, ಆಗ ತಾನೇ ನನ್ನ 'ಅಕ್ಕನ ಮದುವೆ' ಎಂಬ ಪ್ರಬಂಧ ಸಂಕಲನ ಪ್ರಕಟವಾಗಿತ್ತು. ಉಡುಪಿಯ 'ನವಯುಗ' ಪತ್ರಿಕೆಯಲ್ಲೂ ನನ್ನ ಲೇಖನಗಳು ಆಗಾಗ್ಗೆ ಪ್ರಕಟವಾಗುತ್ತಿದ್ದವು. ಆದರೆ ಸಾಹಿತ್ಯ ವಲಯದಲ್ಲಿದ್ದ ಯಾವ ವ್ಯಕ್ತಿಯ ಮುಖಪರಿಚಯವೂ ನನಗೆ ಇರಲಿಲ್ಲ. ಉಡುಪಿಯಲ್ಲಿ ಒಂದು ಹೊಸ ಸಾಪ್ತಾಹಿಕವನ್ನೋ ಮಾಸಿಕವನ್ನೋ ಹೊರತರಬೇಕೆಂದು ಉದ್ಯಮಿಯೋರ್ವರು ಬಯಸಿದಾಗ, ಪತ್ರಿಕೋದ್ಯಮಿಯಾಗಿದ್ದ ವಾಸುದೇವ ಭಟ್ಟರ ನೆರವನ್ನು ಕೋರಿರಬೇಕು. ಆ ಸಂದರ್ಭದಲ್ಲಿ ಉಡುಪಿ ಹಾಗೂ ಅದರ ಆಸುಪಾಸಿನಲ್ಲಿದ್ದ ಕೆಲವು ಉದಯೋನ್ಮುಖ ಲೇಖಕರನ್ನು ಸಮಾಲೋಚನೆಗಾಗಿ ಕರೆದವರು ಈ ವಾಸುದೇವ ಭಟ್ಟರು. ಆಗ ತಾನೇ ನನಗೆ ಅವರ ಮೊದಲ ಪರಿಚಯವಾದದ್ದು. ಆ ಪತ್ರಿಕಾ ಪ್ರಕಟಣೆಯ ಯೋಜನೆ ಕೈಗೂಡಲಿಲ್ಲ. ಪತ್ರಿಕೆಯೂ ಹೊರಬರಲಿಲ್ಲ. ಅನಂತರ ಅನೇಕ ವರ್ಷಗಳವರೆಗೆ ಭಟ್ಟರನ್ನು ಅಲ್ಲಿ ಇಲ್ಲಿ ನೋಡುತ್ತಿದ್ದೆನೇ ಹೊರತು ಪರಸ್ಪರ ಭೇಟಿ ಆದದ್ದು ಬಹಳ ಕಡಿಮೆ.

ಇತ್ತೀಚೆಗಿನ ಕೆಲವು ವರ್ಷಗಳಿಂದ - ಸುಮಾರು ಐದಾರು ವರ್ಷಗಳಿಂದ - ಭಟ್ಟರ ನಿಕಟ ಸಂಪರ್ಕಿಗಳಲ್ಲಿ ನಾನೂ ಒಬ್ಬನಾಗಿದ್ದೇನೆ. ಈ ಸಂದರ್ಭದಲ್ಲೇ ಅವರ ಚಟುವಟಿಕೆಗಳ ಬಗ್ಗೆ ಕೇಳಿ, ನೋಡಿ, ತಿಳಿದು ಅವರ ಬಗ್ಗೆ ಒಂದು ವಿಶೇಷವಾದ ಅಭಿಮಾನವನ್ನು, ಮೆಚ್ಚುಗೆಯನ್ನು, ಪ್ರೀತಿಯನ್ನು ಹೊಂದಿದವನಾಗಿದ್ದೆ. ಅದೇಕೋ ಅವರೂ ನನ್ನ ಬಗ್ಗೆ ಅಗತ್ಯಕ್ಕಿಂತ ಹೆಚ್ಚಾದ ಒಲವನ್ನು ತೋರತೊಡಗಿದ್ದಾರೆ. ಆಗಾಗ್ಗೆ ನಮ್ಮ ಮನೆಗೆ ಬರುತ್ತಾರೆ, ಬರುವಾಗ ಹಣ್ಣು ಹಂಪಲು, ತಿಂಡಿ ತಿನಿಸುಗಳನ್ನು ತರುತ್ತಾರೆ. ಯಾವ್ಯಾವುದೋ ಹೊತ್ತಿಗೆ ಫೋನಿನಲ್ಲಿ ಮಾತನಾಡುತ್ತಾರೆ, ಅವರ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾರೆ. ಅವರ ಸರ್ವಸ್ವವಾದ ಸಂಗೀತದ ಬಗ್ಗೆ ಬಹಳ ಆವೇಶಭರಿತರಾಗಿ ಮಾತನಾಡುತ್ತಾರೆ. ತಮ್ಮ ಶಿಷ್ಯರ ಬಗ್ಗೆ ಮಾತನಾಡುತ್ತಾರೆ. ಅವರ ಜೀವನದ ನಾನಾ ಮಜಲುಗಳನ್ನು, ಅವರ ನಾನಾ ಹೋರಾಟಗಳನ್ನು, ಸಾಧನೆಗಳನ್ನು, ಜಯಾಪಜಯಗಳನ್ನು ಅವರದೇ ಧಾಟಿಯಲ್ಲಿ, ಗತ್ತಿನಲ್ಲಿ, ಅಭಿಮಾನದಲ್ಲಿ ಬಿತ್ತರಿಸುತ್ತಾರೆ. ಸಂಗೀತ ಚಿಕಿತ್ಸೆಯ ಬಗ್ಗೆ ತಾವು ನಡೆಸುತ್ತಿರುವ

ಸಂಶೋಧನೆಯ ವಿವರಗಳನ್ನು ನನಗೆ ಅರ್ಥವಾಗದಿದ್ದರೂ ಎಳೆಎಳೆಯಾಗಿ ಬಿಡಿಸಿ ಹೇಳುತ್ತಾರೆ. ಊರು ಪರವೂರುಗಳಲ್ಲಿ ಅವರು ನಡೆಸಿದ ಕಛೇರಿಗಳ ಬಗ್ಗೆ, ಸಾಧನೆಗಳ ಬಗ್ಗೆ, ತಾವು ಪಡೆದ ಪ್ರಶಸ್ತಿ ಸಮ್ಮಾನಗಳ ಬಗ್ಗೆ ಬಹಳ ಅಭಿಮಾನದಿಂದ, ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ಮಧ್ಯೆ ತಮಗಾಗದವರ ಬಗ್ಗೆ, ತಮ್ಮನ್ನು ಕಷ್ಟಕ್ಕೆ ಸಿಲುಕಿಸಿದವರ ಬಗ್ಗೆ ಆಕ್ರೋಶ ವ್ಯಕ್ತಪಡಿಸಲೂ ಹಿಂಜರಿಯುತ್ತಿರಲಿಲ್ಲ. ತನ್ನ ಹುಟ್ಟೂರಿನಲ್ಲೇ ತನಗಾದ ಅನ್ಯಾಯದ ಬಗ್ಗೆಯೂ ಸ್ವಲ್ಪ ಖೇದ ವ್ಯಕ್ತಪಡಿಸುತ್ತಾರೆ. ತಾನು ಯಾವ ಕಲಾವಿದನಿಗೂ, ಸಂಗೀತಗಾರನಿಗೂ ಕಡಿಮೆ ಇಲ್ಲ ಎಂಬ 'ಗರ್ವ' ಅವರ ಮಾತಿನಲ್ಲಿ ಅಡಕವಾಗಿರುತ್ತಿತ್ತು.

ಎರಡು ದೊಡ್ಡ ಕಿಸೆಗಳಿರುವ ಬಿಳಿ ಜುಬ್ಬ, ಬಿಳಿ ಪಂಚೆ, ಕೈಯಲ್ಲೊಂದು ಕರವಸ್ತ್ರ, ಮತ್ತೊಂದು ಕೈಯಲ್ಲಿ ನಶ್ಯದ ಬಿರಡೆ, ನಶ್ಯದ ಬಿರಡೆಯ ಆಕಾರ, ಬಾಯಲ್ಲಿದ್ದ ಹಲ್ಲುಗಳ ಸಂಖ್ಯೆ ಹಾಗೂ ತಲೆಗೂದಲಿನ ಬಣ್ಣ ಬಿಟ್ಟರೆ ಭಟ್ಟರಲ್ಲಿ ಅಂದಿನಿಂದ ಇಂದಿನವರೆಗೂ ಅದೇ ರೂಪಾಲಂಕಾರ, ಅದೇ ಹಸನ್ಮುಖ, ಅದೇ ಚುರುಕು, ಅದೇ ಗಡಿಬಿಡಿ ಇಂದಿಗೂ ಕಾಣುತ್ತಿದೆ. ಅವರು ನಡೆಯುವುದು ಕಡಿಮೆ, ಓಡುವುದು ಜಾಸ್ತಿ. ನಾಳೆ ಮಾಡುವುದನ್ನು ಇವತ್ತು, ಇವತ್ತು ಮಾಡುವುದನ್ನು ಈಗಲೇ ಮಾಡಿ ಮುಗಿಸುವ ಆತುರ. ಅವರಿಗೆ ಸಿಟ್ಟು ಸಿಡುಕು ಜಾಸ್ತಿ, ಇದ್ದವರಿಗೆಲ್ಲಾ ಬೈಯುತ್ತಿರುತ್ತಾರೆ ಎಂದು ಅವರ ಹೆಂಡತಿ ಹೇಳುತ್ತಿರುತ್ತಾರಾದರೂ ಆ ಸಿಟ್ಟಿನ ದರ್ಶನ ನನಗೆ ಆಗಲಿಲ್ಲ. ಹಣಕಾಸಿನ ನಿಭಾವಣೆಯಲ್ಲಿ ಶಿಸ್ತೂ ಇಲ್ಲ. ಬಂದದ್ದನ್ನೆಲ್ಲ ಪಾತ್ರರಿಗೆ ಅಪಾತ್ರರಿಗೆ ದಾನ ಮಾಡಿದ್ದೇ ಮಾಡಿದ್ದು. ಒಂದು ರೀತಿಯ ದರ್ಬಾರಿ ಎನ್ನಲೂಬಹುದು. ಎಲ್ಲಿಗಾದರೂ ಹೋಗಬೇಕಾದರೆ ಕಾರು ರಿಕ್ಷಾಗಳಲ್ಲೇ ಹೋದಾರು. ದೂರದ ಧರ್ಮಸ್ಥಳ, ಸುಬ್ರಹ್ಮಣ್ಯ, ಕೊಲ್ಲೂರುಗಳಿಗೂ ರಿಕ್ಷಾದಲ್ಲೇ ಹೋಗಿಬಂದದ್ದಿದೆ. ಇತ್ತೀಚೆಗಂತೂ ದ್ವಿಚಕ್ರವಾಹನವನ್ನು ಬಿಸಿರಕ್ತದ ತರುಣರ ಹಾಗೆ ನಾಗಾಲೋಟದಲ್ಲಿ ಓಡಿಸುವ ಖಯಾಲಿಯು ಅವರದಾಗಿದೆ.

ಸಂಗೀತದ ಬಗ್ಗೆ ಕೇಳಲಾಗುವ ಯಾವ ಪ್ರಶ್ನೆಗಳಿಗೂ ಸಮರ್ಥವಾಗಿ ಉತ್ತರಿಸುವ ಸಾಮರ್ಥ್ಯ ವಾಸುದೇವ ಭಟ್ಟರಿಗಿದೆ. ಸಂಗೀತದಂತೆ ಸಾಹಿತ್ಯದಲ್ಲೂ ಅವರ ಆಸಕ್ತಿ ಅಪಾರ. ಸಂಗೀತದಲ್ಲೂ ಸಾಹಿತ್ಯಕ್ಕೆ ಹೆಚ್ಚಿಗೆ ಗಮನ ನೀಡುತ್ತಿರುವುದನ್ನು ಕಾಣಬಹುದು. ಅನೇಕ ಒಳ್ಳೆಯ ಸಾಹಿತ್ಯಿಕ ಪುಸ್ತಕಗಳನ್ನು ಖರೀದಿಸಿ, ಅವರ ಶಿಷ್ಯರಿಗೆ ಹಂಚಿ ಅವರಲ್ಲಿ ಸಾಹಿತ್ಯಾಸಕ್ತಿಯೂ ಬೆಳೆಯುವಂತೆ ಶ್ರಮಪಡುತ್ತಾರೆ. ಸಾಹಿತ್ಯ ಸಭೆಗಳಲ್ಲಿ ತಾನು ಭಾಗವಹಿಸುವುದಲ್ಲದೆ ತನ್ನ ಶಿಷ್ಯರನ್ನೂ ಅಲ್ಲಿಗೆ ಕರೆದೊಯ್ಯುತ್ತಾರೆ. ಸುಹಾಸಂ, ನಡುಮನೆಗಳಂಥ ಸಂಘಟನೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕಳೆದ ಸುಮಾರು ನಾಲ್ಕು ದಶಕಗಳ ಅವರ ಸಾಧನೆಯನ್ನು ತಿಳಿದಾಗ ಅವರ ಬಗ್ಗೆ ವಿಶೇಷ ಗೌರವ ಉಂಟಾಗುವುದರಲ್ಲಿ ಸಂಶಯವಿಲ್ಲ. ಸಿನಿಮಾ ಮಾಡಿದ್ದಾರೆ, ನಟಿಸಿದ್ದಾರೆ,

ಗ್ರಾಮಾಫೋನ್ ರಿಕಾರ್ಡ್, ಸಿಡಿ - ಕ್ಯಾಸೆಟ್‌ಗಳನ್ನು ಹೊರತಂದಿದ್ದಾರೆ. ಎಷ್ಟೋ ಕಡೆ ಸಂಗೀತ ಕಛೇರಿ ನಡೆಸಿದ್ದಾರೆ, ಶಾಲೆಗಳಲ್ಲಿ ಪಾಠ ಮಾಡಿದ್ದಾರೆ. ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ನೂರಾರು ಕಡೆ ಸನ್ಮಾನ ಸ್ವೀಕರಿಸಿದ್ದಾರೆ, ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ, ಶಾಲುಗಳನ್ನು ಹೊದೆಸಿಕೊಂಡಿದ್ದಾರೆ, ಹಾರಗಳನ್ನು ಹಾಕಿಸಿಕೊಂಡಿದ್ದಾರೆ, ಫೋಟೋಗಳನ್ನು ತೆಗೆಸಿಕೊಂಡಿದ್ದಾರೆ, ಸಂತೋಷದಲ್ಲಿ ಬೀಗಿದ್ದಾರೆ. ಇವರು ಸಂಗೀತದಲ್ಲಿ ನೀಡುವ ಶಿಕ್ಷಣ ಕ್ರಮವನ್ನು ಮೆಚ್ಚಿ ಅನೇಕ ಸರಕಾರಿ ಅಧಿಕಾರಿಗಳು, ವಕೀಲರು, ನ್ಯಾಯಾಧೀಶರು, ಗೃಹಿಣಿಯರು, ಮಕ್ಕಳು ಇವರಲ್ಲಿ ಶಿಷ್ಯತ್ವ ಹೊಂದಿ ಸಾಧನೆ ಮಾಡುತ್ತಿದ್ದಾರೆ. ಇವರ ಮಕ್ಕಳು ಕೂಡಾ ಸಂಗೀತದಲ್ಲಿ ನುರಿತವರಾಗಿ ಆಕಾಶವಾಣಿ, ದೂರದರ್ಶನ ಕಲಾವಿದರಾಗಿ ಅನೇಕ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಇವರ ಅಳಿಯನೋ ಈಗ ಗುರುವನ್ನೂ ಮೀರಿಸುವ ಶಿಷ್ಯರಾಗಿದ್ದಾರೆ.

ದೀನನೂ ದಾನಿಯೂ ಆಗುವುದರಲ್ಲಿ ಕೆಲವು ಅಪಾಯಗಳಿವೆಯೆಂಬ ಎಚ್ಚರ ಈಚೀಚೆಗೆ ಅವರಿಗೆ ಆಗತೊಡಗಿದೆ. ಇದೊಂದು ಶುಭಲಕ್ಷಣವೇ ಸರಿ. ತಾನು ಏನು ಮಾಡಬೇಕು, ಏನಾಗಬೇಕು ಎನ್ನುವ ಸ್ಪಷ್ಟ ಕಲ್ಪನೆ ಅವರಿಗಿರುವುದರಿಂದ ಅವರು ಕೈಗೊಂಡ ಯೋಜನೆಗಳಲ್ಲೆಲ್ಲ ಜಯ ಗಳಿಸುವರೆಂಬ ಬಗ್ಗೆ ಅನುಮಾನವಿಲ್ಲ. ವಾಸುದೇವ ಭಟ್ಟರು ತಾವು ತೊಡಗಿಕೊಂಡ ಕ್ಷೇತ್ರದಲ್ಲಿ ವೈಭವಯುತ ಸಾಧನೆಗಳನ್ನು ಮಾಡುವಂತಾಗಲಿ. ಎಲ್ಲ ಸಹೃದಯಿ ಬಂಧುಗಳ ಸಹಕಾರ, ಸದಾಶಯ ಅವರಿಗೆ ದೊರೆಯುವಂತಾಗಲಿ ಎಂದು ಹಾರೈಸುತ್ತೇನೆ.

ನಾದ ಗಾನ ತಲ್ಲೀನ

✍ ಇಂದಿರಾ ಹಾಲಂಬಿ

ಸುಮಾರು ಆರೇಳು ವರ್ಷಗಳ ಹಿಂದೆ ಉಡುಪಿಯಲ್ಲಿ ನಡೆದ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಕು.ಗೋ. ಅವರು ಓರ್ವ ಸರಳ ಸಜ್ಜನರನ್ನು ನನಗೆ ಪರಿಚಯಿಸಿ, "ಇವರು ಉಡುಪಿ ವಾಸುದೇವ ಭಟ್ಟರು... 'ನಾದವೈಭವಂ'ನ ಸಂಗೀತ ಗುರುಗಳು" ಎಂದರು. ನಾನು ಕೈಮುಗಿದೆ, ನನ್ನ ಹೆಸರು ಹೇಳಿದಾಗ, "ನಿಮ್ಮ ವಿಚಾರ ತುಂಬ ಗೊತ್ತು ನನಗೆ. ಸಾಹಿತ್ಯದಲ್ಲಿ ಬಹಳಷ್ಟು ಕೆಲಸ ಮಾಡಿದ್ದೀರಿ. ನಿಮ್ಮ ಕೆಲವಾರು ಪುಸ್ತಕ ಓದಿದ್ದೇನೆ..." ಎಂದು ಹಸನ್ಮುಖದಿಂದ ಹೇಳತೊಡಗಿದರು. ನಾನು ಆಗ ನನ್ನ ಬಳಿ ಇದ್ದ 'ನಿತ್ಯ ನಿನಾದ' ಎಂಬ ಕವನ ಸಂಗ್ರಹವನ್ನು ಅವರಿಗೆ ಕೊಟ್ಟು, "ದಯವಿಟ್ಟು ಇದನ್ನು ಓದಿರಿ. ಹಾಡಲು ಸಾಧ್ಯವೇನೋ ಎಂಬುದು ನನ್ನಾಸೆ" ಎಂದೆ. ತಕ್ಷಣವೇ ಆ ಪುಸ್ತಕದ ಬೆಲೆಯನ್ನು ನೋಡಿ, ಕೊಡಲು ಮುಂದಾದರು. ನಾನು "ಈ ಪುಸ್ತಕದ ಮಟ್ಟಿಗೆ ಬೆಲೆಯನ್ನು ತೆಗೆದುಕೊಳ್ಳುವುದಿಲ್ಲ, ಇದೀಗ ನನ್ನ ಕೊಡುಗೆ" ಎಂದು ಹೇಳಿದೆ. ಬಹಳ ಸಂತೋಷ ಪ್ರಕಟಿಸಿದರವರು. ಅವರೆಗೂ ಎಷ್ಟೋ ಬಾರಿ ಅವರ ಹೆಸರು ಕೇಳಿದ್ದೆ. ಕಾರ್ಯಬಾಹುಳ್ಯ ಮತ್ತು ಸಾಧನೆಗಳ ಕುರಿತು ಓದಿದ್ದೆ. ಆದರೆ ಪ್ರತ್ಯಕ್ಷ ಕಂಡಾಗ ನಾವು ನಿರೀಕ್ಷಿಸಿದ್ದಕ್ಕಿಂತ ಭಿನ್ನವಾಗಿ, ಅಂದರೆ ಯಾವುದೇ ಗತ್ತು, ಗಂಭೀರತೆ, ಆಡಂಬರ ಅಥವಾ ಅಹಂ ಎಂಬ ಧೋರಣೆ ಇಲ್ಲದೆ ತೀರಾ ಸರಳ ವ್ಯಕ್ತಿತ್ವದ ಮಹಾನ್ ಸಾಧಕರನ್ನು ಕಾಣುವಂತಾಯಿತು. 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಗಾದೆಮಾತು ಇಂಥವರಿಗಾಗಿಯೇ ಸೃಷ್ಟಿಯಾದದ್ದು ಎಂದೆಣಿಸಿಕೊಂಡೆ.

ಮುಂದೆ ಹತ್ತಾರು ಬಾರಿ ಸಾಹಿತ್ಯಸಭೆಗಳಲ್ಲಿ ಅವರನ್ನು ಭೇಟಿಯಾದದ್ದು, ಮಾತುಕತೆ ನಡೆಸಿದ್ದೂ ಇದೆ. ಅದೇ ರೀತಿಯ ಸಜ್ಜನಿಕೆಯ ಸ್ನೇಹಭಾವ, ಕುಶಲ ಸಮಾಚಾರ ವಿನಿಮಯ, ನನ್ನ ಸಾಹಿತ್ಯ ಕೃತಿ ಮತ್ತು ಕೃಷಿಯ ಕುರಿತು ಮೆಚ್ಚುಗೆ, ಪ್ರಶಂಸೆ... ಇವರು ಬರಿಯ ಸಂಗೀತ ಸಾಧಕರಷ್ಟೇ ಅಲ್ಲ, ಕನ್ನಡ ಸಾಹಿತ್ಯ ಪ್ರಪಂಚವನ್ನು ನಿರುಕಿಸುವ, ಪರಿಕಿಸುವ ಕುತೂಹಲಿ ಹಾಗೂ ತನ್ನ ಅವಸರದ ಕಾರ್ಯದೀಕ್ಷೆಯ ನಡುವೆಯೂ ಹೊಸದನ್ನು ಅರಿತು ಅನುಸರಿಸುವ ಕರ್ಮಯೋಗಿ ಎಂಬ ಸೂಕ್ಷ್ಮವನ್ನು ತಿಳಿಯಲು ಸಾಧ್ಯವಾಯಿತು.

ಇವರು ಪತ್ರಕರ್ತರಾಗಿ ದುಡಿದವರು, ಲೇಖನ ವ್ಯವಸಾಯದಲ್ಲಿ ತೊಡಗಿಕೊಂಡವರು, ಸಂಗೀತ ನಿರ್ದೇಶನ ನಡೆಸಿದವರು, ನಾಟ್ಯ, ನಾಟಕ ಸಂಘ ಸಂಸ್ಥೆ ಕಟ್ಟಿದವರು, ರಂಗದಲ್ಲಿ, ತೆರೆಯಲ್ಲಿ ಮೌಲಿಕ ಅಭಿನಯ ನೀಡಿದವರು, ಸ್ತ್ರೀ ಪಾತ್ರಧಾರಿಯಾಗಿಯೂ ಪ್ರಸಿದ್ಧರು. ಈ

ಎಲ್ಲ ವಿಧದ ಸರ್ವತೋಮುಖ ಆಸಕ್ತಿ, ಸಂಪೂರ್ಣ ತನ್ಮಯತೆಯ ಪ್ರತಿಭೆ ಅಸಾಧಾರಣವೇ ಹೌದು. ಇದು ಇವರ ಹಿರಿಯರಿಂದ ವಂಶಪಾರಂಪರ್ಯವಾಗಿ ಒಲಿದು ಬಂದ ಪ್ರತಿಭಾ ವಾಹಿನಿ ಎನ್ನಬಹುದೇನೋ. ಉದ್ದಾಮ ಸಂಗೀತ ಪಂಡಿತರಾಗಿದ್ದ ಅಜ್ಜ ಕೈಯೆತ್ತಿ ಹರಸಿರಬೇಕು, ಈ ಕರುಳ ಬಳ್ಳಿಯನ್ನು. ಹಾಗೆ ನೋಡಿದರೆ ಇವರ ತಂದೆಯವರೂ ಶಿಕ್ಷಕರಾಗಿದ್ದು, ಪತ್ರಕರ್ತರಾಗಿಯೂ ಜನಪ್ರೀತಿ ಗಳಿಸಿದವರು. ವಾಸುದೇವ ಭಟ್ಟರ ಮಕ್ಕಳಿಗೆ ಕೂಡ ಸಂಗೀತ, ಚಿತ್ರಕಲೆಗಳ ಪ್ರತಿಭೆ ಒಲಿದು ಬಂದಿದೆ.

ಇವರ ಸ್ವಗೃಹದಲ್ಲಿ ಕಳೆದ ವರ್ಷ ನಡೆದ ಉಡುಪಿಯ ಸಾಹಿತ್ಯ ಸಂವಾದ ಸಂಘಟನೆ 'ನಡುಮನೆ'ಯ ಒಂದು ಕಾರ್ಯಕ್ರಮದಲ್ಲಿ ನೆರೆದ ಜನದಟ್ಟಣೆ ಇವರ ಜನಪ್ರಿಯತೆಗೆ ಹೊಸ ಸಾಕ್ಷಿಯೊದಗಿಸಿತು. ನೆರೆದವರಿಗೆಲ್ಲ ಸಾಹಿತ್ಯ, ಸಂಗೀತ ಆಸ್ವಾದನೆಯೊಂದಿಗೆ ಅಚ್ಚುಕಟ್ಟಾದ ಉಪಾಹಾರ, ಉಪಚಾರ ಅಂದಿನ ವೈಶಿಷ್ಟ್ಯವಾಗಿತ್ತು.

'ನಾದವೈಭವಂ (ರಿ)' ಸಂಸ್ಥೆಯಿಂದ ಉಡುಪಿಯ ಬ್ರಹ್ಮಗಿರಿಯ ರಂಗಮಂದಿರದಲ್ಲಿ ಇದೇ ಕಳೆದ ಜೂನ್ ತಿಂಗಳಲ್ಲಿ ನಡೆದ 'ಗಾನರಸಗಂಗೆ' ಕಾರ್ಯಕ್ರಮವು ಸಂಗೀತಾಸಕ್ತರಿಗೆ ರಸದೌತಣ ನೀಡಿತು. ಈ ಕಾರ್ಯಕ್ರಮಕ್ಕಾಗಿ ಆಮಂತ್ರಣ ಪತ್ರ ನೀಡಲು ಬಾಡಿಗೆಗೆ ವಾಹನ ಮಾಡಿಕೊಂಡು ಸ್ವತಃ ನಮ್ಮಲ್ಲಿಗೆ ಬಂದ ಈ ಪುಣ್ಯಾತ್ಮರು ಟಿಕೇಟುಗಳನ್ನೆಲ್ಲ ಕೊಟ್ಟು ಅದರ ಛಾರ್ಜನ್ನು ತೆಗೆದುಕೊಳ್ಳಲು ಒಪ್ಪದೆ ನನ್ನ ಪುಸ್ತಕಗಳಿಗಾಗಿ ಒಂದಿಷ್ಟು ಹಣವನ್ನು ತಾನೇ ಕೊಟ್ಟು ಅವಸರದಿಂದಲೇ ನಿರ್ಗಮಿಸಿದ ನೆನಪು ಎಂದಿಗೂ ಹಸಿರು.

ಮೊನ್ನೆ ದಿನಾಂಕ 30-8-2006 ದಂದು ಈ ಗಾನಕಲಾನಿಪುಣರ ಜನ್ಮದಿನ ಪ್ರಯುಕ್ತ ಕನ್ನರ್ಪಾಡಿ ಮಂದಿರದ ದೇವಿಯ ಸನ್ನಿಧಿಯಲ್ಲಿ ಶಿಷ್ಯರೆಲ್ಲ ಸೇರಿ ಹಮ್ಮಿಕೊಂಡ 'ಗುರುವಂದನ' ಮತ್ತು 'ಕವಿಕಾವ್ಯಗೋಷ್ಠಿ' ಅನುಪಮವಾಗಿತ್ತು, ಆತ್ಮೀಯವಾಗಿತ್ತು. ಈ ಗೋಷ್ಠಿಗೆ ನನ್ನನ್ನೂ ಕವಿಯೆಂದು ಗುರುತಿಸಿ ಆಹ್ವಾನಿಸಿದ ವಾಸುದೇವ ಭಟ್ಟರ ಸಹೃದಯತೆ ಈಗಲೂ ಸಂತೋಷ ಕೊಡುತ್ತದೆ.

ಸಾರ್ಥಕ ಸಾಂಗತ್ಯ

✍ ಅತ್ತಾವರ ಗೋಕುಲದಾಸ್

1980ರ ದಶಕದಲ್ಲಿ ನಾನು ಕುಂದಾಪುರದಲ್ಲಿ ಸರಕಾರಿ ಉದ್ಯೋಗದಲ್ಲಿದ್ದೆ. ಯಾವ ಊರಿಗೆ ವರ್ಗಾವಣೆಯಾದರೂ ಸಂಗೀತ, ನಾಟಕ ಮತ್ತು ಭಜನೆ ನನ್ನ ನಿಕಟ ಸಂಬಂಧಿಗಳು. ಕುಂದಾಪುರದಲ್ಲಿ ಒಬ್ಬಿಬ್ಬರು ಹಿಂದೂಸ್ಥಾನಿ ಸಂಗೀತದ ಕಲಾವಿದರನ್ನು ಹೊರತುಪಡಿಸಿದರೆ, ದಿ. ಮಂಜುನಾಥ ಭಟ್ಟರನ್ನು ಬಿಟ್ಟರೆ, ಕರ್ನಾಟಕ ಸಂಗೀತ ಕಲಾವಿದರೇ ಅಪರೂಪ ಆಗಿದ್ದ ದಿನಗಳವು. ಆಗ ನಾನು 'ಶ್ರೀ ಕುಂದ ಕೃಪಾಶ್ರಿತ ಭಜನಾ ಸಂಘ'ವನ್ನು ಕಟ್ಟಿದೆ. ತಂಡದಲ್ಲಿ ಹಾಡುವವರು, ಹಾರ್ಮೋನಿಯಂ ವಾದಕರು, ತಬ್ಲಾವಾದಕರು ಇದ್ದರು. ನೀಲೋಜಿ ಬೇಕಲ್ ಈ ಭಜನಾ ಸಂಘವನ್ನು ಕಟ್ಟುವಲ್ಲಿ ನನಗೆ ಪ್ರೇರಣೆ ಕೊಟ್ಟರು.

ನೀಲೋಜಿ ಬೇಕಲ್ ಮೂಲತಃ ಭಕ್ತಿ ಸಾಹಿತ್ಯ ರಚನೆಯಲ್ಲಿ ಆಸಕ್ತಿ ಉಳ್ಳವರು. ಕುಂದಾಪುರದ ಪರಿಸರದಲ್ಲಿರುವ ಹಲವು ದೇವರ ಬಗ್ಗೆ ಸಾಹಿತ್ಯ ರಚಿಸಿದ್ದರು. ಈ ಹಾಡುಗಳಿಗೆ ರಾಗ ಸಂಯೋಜನೆಗಾಗಿ ನನ್ನಲ್ಲಿ ಕೇಳಿಕೊಂಡರು. ರಾಗ ಸಂಯೋಜನೆ ನನಗೊಪ್ಪುವಾದ ಕ್ಷೇತ್ರವಾಗಿತ್ತು. ಹಾಗೇ ಹಲವು ಭಕ್ತಿಗೀತೆಗಳಿಗೆ ರಾಗ ಸಂಯೋಜನೆಯನ್ನು ಮಾಡಿದ್ದೆ. ನಮ್ಮದೇ ಖರ್ಚಿನಲ್ಲಿ ಕೆಲವು ದೇವಸ್ಥಾನಗಳಿಗೆ ಹೋಗಿ ಈ ಭಕ್ತಿಗೀತೆಗಳನ್ನು ಹಾಡಿ, ಹಾಡಿಸಿ ಸಂತೋಷ ಪಡುತ್ತಿದ್ದೆವು.

ನೀಲೋಜಿ ರಾಯರಿಗೆ ಈ ಪದ್ಯಗಳನ್ನು ಧ್ವನಿಸುರುಳಿ ಮಾಡುವ ಹಂಬಲವಾಯಿತು. ಅವರು ನನ್ನಲ್ಲಿ ಈ ಬಗ್ಗೆ ಮಾತನಾಡಿದಾಗ, ನನಗೆ ಈ ಕ್ಷೇತ್ರದಲ್ಲಿ ಅನುಭವವಿಲ್ಲವೆಂದೂ ನನ್ನ ಪರಿಚಿತರಾದ, ಆಗ ಉಡುಪಿಯಲ್ಲಿ ಹೆಸರುವಾಸಿಯಾಗಿದ್ದ ವಾಸುದೇವ ಭಟ್ಟರು ಈ ಕೆಲಸ ಮಾಡಿಕೊಡಲು ಸಮರ್ಥರೆಂದೂ ಅಭಿಪ್ರಾಯ ತಿಳಿಸಿದೆ.

ನಾವಿಬ್ಬರೂ ಉಡುಪಿಗೆ ಬಂದು ವಾಸುದೇವ ಭಟ್ಟರನ್ನು ಸಂಪರ್ಕಿಸಿದೆವು. ಅವರು ಎಲ್ಲಾ ಪದ್ಯಗಳನ್ನು ಓದಿ, ರಾಗ ತಾಳಗಳ ಬಗ್ಗೆ ನನ್ನೊಡನೆ ಮಾಹಿತಿ ಪಡೆದರು. ಧ್ವನಿಸುರುಳಿಗೆ ಸಂಗೀತ ನಿರ್ದೇಶನ ಮಾಡಲು ಒಪ್ಪಿಗೆ ಇತ್ತರು. 1987ರಲ್ಲಿ ಕುಂದೇಶ್ವರ ದೇವಸ್ಥಾನದಲ್ಲಿ ಧ್ವನಿಸುರುಳಿಯ ಬಿಡುಗಡೆಯಾಗುವವರೆಗೆ ಎಲ್ಲಾ ಜವಾಬ್ದಾರಿಯನ್ನೂ ಅವರೇ ನಿರ್ವಹಿಸಿದರು.

ಅಂದಿನಿಂದ ಇಂದಿನವರೆಗೂ ವಾಸುದೇವ ಭಟ್ ಮತ್ತು ನನ್ನ ಸಂಗೀತ ಕ್ಷೇತ್ರದ ಕೊಡುಕೊಳ್ಳುವಿಕೆಯ ವಿನಿಮಯವು ನಡೆಯುತ್ತಾ ಬಂದಿದೆ. ವಯಸ್ಸಿನಲ್ಲಿ ನಾನು ಮತ್ತು

ಅವರು ಹತ್ತಿರದವರು. ಆದರೆ ಅವರಲ್ಲಿರುವ ವಿದ್ಯೆ ಮತ್ತು ಅನುಭವ ಅಪಾರವಾದುದು. ಅವರೊಡನೆ ಬೆರೆಯುವಷ್ಟೂ ಹೊತ್ತು ಮನಸ್ಸಿಗೆ ಆಹ್ಲಾದ ಮತ್ತು ಸಹೃದಯತೆ ಬಹಳ ಕಾಲ ಮನಸ್ಸನ್ನು ತುಂಬಿರುತ್ತದೆ. 1986ರಲ್ಲಿ ಕುಂದಾಪುರದ ಶ್ರೀ ಆದಿಶಕ್ತಿ ಕಾಳೀಕ್ಷೇತ್ರದಲ್ಲಿ ಇವರನ್ನು ಸನ್ಮಾನಿಸುವ ಭಾಗ್ಯವು ನಮಗೆ ಲಭಿಸಿತ್ತು.

1991ರಲ್ಲಿ ನನಗೆ ಉಡುಪಿಗೆ ವರ್ಗಾವಣೆ ಆದ ನಂತರ ನಮ್ಮ ಸಂಪರ್ಕವು ಮತ್ತಷ್ಟು ನಿಕಟವಾಗಿದೆ. ಅವರ ಯಾವತ್ತೂ ಕಾರ್ಯಕ್ರಮಗಳಲ್ಲಿ ನನ್ನಿಂದಾದ ಸೇವೆ ಸಲ್ಲಿಸತೊಡಗಿದ್ದೇನೆ. ನನ್ನ ಸಂಗೀತ ಸಂಸ್ಥೆ 'ಸರಿಪದ ನಿಗಮ'ದ ಕಾರ್ಯಕ್ರಮಗಳಲ್ಲಿಯೂ ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ಈ ಇಳಿವಯಸ್ಸಿನಲ್ಲಿ ವಾಸುದೇವ ಭಟ್ಟರ ಸ್ನೇಹವು ನನ್ನ ಪಾಲಿಗೆ ಬೆಲೆ ಕಟ್ಟಲಾಗದ ಸಂಪತ್ತು.

ಸಂಗೀತ ಸಂಜೀವಿನಿ

✍ ಕೆ. ವಿ. ಶೆಟ್ಟಿ

ಸಂಗೀತವೆಂದರೆ ಸಂಜೀವಿನಿಯಂತೆ...
ಸವಿಯಬಲ್ಲ ಸಹೃದಯಿಗಿಲ್ಲ ಚಿಂತೆ
ಸಾಗರದಿ ನರ್ತಿಸುವ ಅಲೆಗಳಂತೆ...
ಆ ನಾದ ಮಾಡಿತ್ತು ಮೈಮರೆಯುವಂತೆ!

ಸೃಷ್ಟಿಕರ್ತ 'ಬ್ರಹ್ಮ'ನ ಪ್ರತಿರೂಪವನ್ನು ಎಲ್ಲದರಲ್ಲೂ ನೋಡುವ ಈ ದೇಶದ ಸಂಸ್ಕೃತಿ 'ನಾದಬ್ರಹ್ಮ'ನನ್ನೂ ಪೂಜಿಸಿ ಈ ಜೀವನಕ್ಕೆ ರಸಸಿಂಚನವನ್ನೇ ಮಾಡಿದೆ. ಅಂತಹ 'ನಾದಬ್ರಹ್ಮ'ನ ಆರಾಧನೆಯಲ್ಲಿ ತಮ್ಮ ಬಾಳಿನ ಸಾರ್ಥಕತೆಯನ್ನು ಕಂಡ ನನ್ನ ಆತ್ಮೀಯ, ಬಾಲ್ಯದಿಂದಲೂ ಗೆಳೆಯರಾಗಿರುವ ವಾಸುದೇವ ಭಟ್‌ರವರು. 'ಏಕನಾಮ ಸದಾಪ್ರಿಯ' ಎಂಬಂತೆ ನಮ್ಮಿಬ್ಬರ ಹೆಸರೂ ಒಂದೇ. ಪ್ರೀತಿಯಿಂದ ಕರೆಯುವ ಹೆಸರು 'ವಾಸು'. ಸಮಾನ ಆಸಕ್ತಿಯಿದ್ದರೂ ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಿದ ಬಳಿಕ ಅವರು ತಮ್ಮದೇ ಆಸಕ್ತಿಯ ಸಂಗೀತಮಯ ಬದುಕನ್ನು ಮುಂದುವರಿಸಿದರು. ಅವರ ಸಾಧನೆಯ ಸಂಕೇತವೇ 'ನಾದವೈಭವಂ'. ಅವರಿಂದ ಸಂಗೀತ ಕಲಿತ ಹಲವಾರು ಶಿಷ್ಯರು ಇಂದು ಖ್ಯಾತನಾಮರಾಗಿದ್ದಾರೆ.

ಆದರೂ ಈ ಸರಳ ಸ್ವಭಾವದ, ನೀಲಿ ಕಣ್ಣಿನ ನಿರಾಡಂಬರ ವ್ಯಕ್ತಿಗೆ ಅವರ ವ್ಯಕ್ತಿತ್ವವೇ ಒಂದು ಅಮೂಲ್ಯ ಸಂಪತ್ತು. ಅಯಸ್ಕಾಂತದ ಆಕರ್ಷಣೆ ಸದಾ ಮಿನುಗುವ ಮುಗುಳುನಗೆ. ಅರಳು ಹುರಿದಂತೆ ಮನಮುಟ್ಟುವ ಮಾತು. ಮಾನವ ಪ್ರೀತಿ. ಅವರಿಗೆ ಅನುರೂಪರಾಗಿ ಮನವರಿತು ನಡೆವ ಪತ್ನಿ, ರತ್ನಗಳಂತಹ ನಾಲ್ಕು ಪುತ್ರಿಯರು. ಎಲ್ಲರೂ ಕಲೆಯ ಆರಾಧಕರು.

ಸುಮಾರು 50 ವರ್ಷಗಳ ಹಿಂದಿನ ಶಾಲಾದಿನಗಳಲ್ಲಿ (ಉಡುಪಿಯ ಬೋರ್ಡ್ ಹೈಸ್ಕೂಲ್) ಒಂದು ಗಣರಾಜ್ಯ ದಿನೋತ್ಸವದ ಸ್ಪರ್ಧೆ - 'ಛದ್ಮವೇಷ'ಕ್ಕೆ 5 ಗೆಳೆಯರು ಸೇರಿ ಅರಿಸಿದ 'ನಾಗನೃತ್ಯ' ಉಡುಪಿಯ ನಾಲ್ಕುಬೀದಿಯಿಂದ ಹೊರಟು ಅಜ್ಜರಕಾಡಿನ ಗಾಂಧಿ ಮೈದಾನಿನವರೆಗೆ ದಾರಿಯುದ್ದಕ್ಕೂ ಜನರನ್ನು ಆಕರ್ಷಿಸಿತ್ತು. ವಾಸುದೇವ ಭಟ್ಟರು ಮುಂದಾಳುವಾಗಿ, ಅವರ ಡೋಲಿನ ಬಡಿತ - ನಾಗಕನ್ಯೆಯಾಗಿ ನನ್ನ ಕುಣಿತ, ತಾಳಮೇಳಗಳೊಂದಿಗೆ ಆವೇಶದ (ಆ ವೇಷದ) ಅಮಲೇರಿದ ನಮ್ಮ ತಂಡ ಆ ವಿಶಾಲ ಮೈದಾನದಲ್ಲಿ ಕಿಕ್ಕಿರಿದು ಸೇರಿದ್ದ ಜನಸ್ತೋಮದಲ್ಲಿ ಮಿಂಚಿನ ಸಂಚಾರ ಮೂಡಿಸಿತ್ತು. ಬಹುಮಾನದೊಂದಿಗೆ ಬಹುಜನರ ಪ್ರಶಂಸೆ... ಇಂದಿಗೂ ಸಿಹಿನೆನಪು.

ಆ ನಂತರದ ಬಹಳ ವರ್ಷಗಳ ತನಕ ನಮ್ಮ ಜೀವನ ಪಥ ಬೇರೆ ದಿಕ್ಕುಗಳಲ್ಲಿ ಸಾಗಿತ್ತು. ಅವರು ಸಂಗೀತವನ್ನು, ಸಂಗೀತ ಅವರನ್ನು ಬಿಡಲಿಲ್ಲ. ನಾನು ವಿಜಯಾ ಬ್ಯಾಂಕ್ (2 ವರ್ಷ), ಭಾರತೀಯ ವಾಯುಸೇನೆ (15 ವರ್ಷ), ಆಮೇಲೆ ಸಿಂಡಿಕೇಟ್ ಬ್ಯಾಂಕ್ (25 ವರ್ಷ)ನಲ್ಲಿ ಸೇವೆ ಸಲ್ಲಿಸಿ ಸಂಗೀತಪ್ರಿಯನಾದೆ. ಸಿಂಡಿಕೇಟ್ ಬ್ಯಾಂಕ್‌ನ ಸೇವಾ ಅವಧಿಯಲ್ಲಿ ನಮ್ಮ ಪುನರ್ಮಿಲನ.

ಭಟ್ಟರು ಮಂಗಳೂರು - ಮೂಲ್ಕಿಯ ಬೆಥನಿ ವಿದ್ಯಾಸಂಸ್ಥೆಯಲ್ಲಿ ಸಂಗೀತ ಪಾಠದ ಶಿಕ್ಷಕರಾಗಿ ಹಲವು ವರ್ಷಗಳ ಕಾಲ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿ ದುಡಿದರು. ಕ್ರಿಸ್ತನ ಗೀತೆಗಳನ್ನು ರಚಿಸಿ, ಸಂಗೀತ ಸಂಯೋಜಿಸಿ ಪ್ರಚುರಪಡಿಸಿದ್ದು ಮಾತ್ರವಲ್ಲ, 'ಭುವನಜ್ಯೋತಿ' ಎಂಬ ನೃತ್ಯರೂಪಕ ಸಂಯೋಜಿಸಿ ಹಲವಾರು ಪ್ರದರ್ಶನಗಳನ್ನು ನೀಡಿ ಜನಮೆಚ್ಚುಗೆ ಪಡೆದರು. ಮುಂದೆ ಅದೇ ರೂಪಕ ಅದೇ ಹೆಸರಿನಲ್ಲಿ ಚಲನಚಿತ್ರವಾದಾಗ ಅದರ ನಿರ್ದೇಶಕರಾಗಿ ಅವರು ಪಟ್ಟ ಶ್ರಮ ಅಸಾಮಾನ್ಯ. ಆ ದಿನಗಳಲ್ಲಿ ಅವರೊಂದಿಗೆ ಕಳೆದ ಕೆಲವೇ ದಿನಗಳಲ್ಲಿ ಬಣ್ಣದ ಬದುಕಿನ ಬವಣೆಗಳ ಅರಿವಾಯ್ತು ನನಗೆ. ಹಲವಾರು ಅಡೆತಡೆಗಳನ್ನು, ನೋವು ನಲಿವುಗಳನ್ನು, ಏಳುಬೀಳುಗಳನ್ನು ಸ್ಥಿತಪ್ರಜ್ಞನಾಗಿ ಸ್ವೀಕರಿಸಿ ಮಂದಹಾಸ ಮಾಯವಾಗದಂತೆ 'ಭುವನಜ್ಯೋತಿ'ಯನ್ನು ಬೆಳಗಿದ ವಾಸುದೇವ ಭಟ್ಟರ ಈ ಮನೋಭಾವ - ಜಾತ್ಯಾತೀತತೆ, ಸರ್ವಧರ್ಮ ಸಮಭಾವವೆಂಬುದು 'ಹಿಂದೂ' ಧರ್ಮದಲ್ಲಿ ಹೇಗೆ ಅಂತರ್ಗತವಾಗಿದೆಯೆಂಬುದಕ್ಕೆ ಉತ್ತಮ ನಿದರ್ಶನವಾಗಿದೆ.

ಉಡುಪಿ ವಾಸುದೇವ

✍ ಡಾ. ಶ್ರೀನಿವಾಸ ರಾವ್ ಕೊರಡ್ಕಲ್

ಶೃಂಗೇರಿಯ ಬಳಿ ಇರುವ ಕೊರಡ್ಕಲ್‌ನಲ್ಲಿ ವಿಶಾಲ ತೋಟವಿದ್ದು, ಮುಂದೆ ಎಲ್ಲವನ್ನೂ ಕಳೆದುಕೊಂಡ ಕುಟುಂಬದಿಂದ ಬಂದ, ಉಡುಪಿಯ ಜಂಗಮ ಮಠದ ಚಿತ್ರಕಲಾ ಶಾಲೆಯ ಹಿಂದೆ ಮನೆ ಮಾಡಿಕೊಂಡಿದ್ದ ನನ್ನ ಅಜ್ಜ ಕೊರಡ್ಕಲ್ ಶ್ರೀನಿವಾಸರಾಯರನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಬೇಕಾದ ಅಗತ್ಯವಿಲ್ಲ. ಅವರ ತಾಯಿ ವಾಸುದೇವ ಭಟ್ಟರ ಅಜ್ಜಿಯೂ ಹೌದು.

ನನ್ನ ಅಜ್ಜ ಕೊರಡ್ಕಲ್ ಶ್ರೀನಿವಾಸರಾಯರಿಂದ ಪ್ರಭಾವಿತರಾಗಿ ಉಪಕೃತರಾದವರು ವಾಸುದೇವ ಭಟ್ಟರು. ಇವರ ಸಾಹಿತ್ಯಾಸಕ್ತಿ ಕುದುರುವುದಕ್ಕೆ ಪ್ರಾಯಃ ಅವರೇ ಕಾರಣ. ವಾಸುದೇವ ಭಟ್ಟರ ತಂದೆ ಯು. ಎಸ್. ಭಟ್ಟರು ಪತ್ರಿಕೋದ್ಯಮಿಯಾಗಿದ್ದರು. ಅವರು ಕೊರಡ್ಕಲ್ ಶ್ರೀನಿವಾಸರಾಯರ ಚಿಕ್ಕತಾಯಿಯ ಮಗನಾಗಿದ್ದರು.

ನನಗೆ ಚೆನ್ನಾಗಿ ನೆನಪಿದೆ - 1968ರಲ್ಲಿ ಇರಬೇಕು - ಉಡುಪಿಯಲ್ಲಿ 'ಚಿಟ್ಪಾಡಿ ವಾಸು' ಎಂದೇ ಹೆಸರಾದ ವಾಸುದೇವ ಭಟ್ಟರು ಆತಿಥ್ಯಕ್ಕೆ ಅಗ್ರಸ್ಥಾನದಲ್ಲಿದ್ದು ಚಿಟ್ಪಾಡಿ ಮನೆಯಲ್ಲಿ 'ವಾಸನ್ ಫೆಟೆಮೆನ್ಸ್ ಟ್ರೂಪ್' ಎಂಬ ನಾಟಕ ಸಂಸ್ಥೆಯನ್ನು ಹುಟ್ಟುಹಾಕಿ ನಡೆಸುತ್ತಿದ್ದ ಸಂದರ್ಭ. ಮುಂದೆ ಎಲ್ಲವನ್ನೂ ಕಳೆದುಕೊಂಡು ಕೈತೊಳೆದುಕೊಂಡಾಗಲೂ ಅವರ ಮನಸ್ಸು ಇನ್ನೊಂದನ್ನು ಹುಟ್ಟುಹಾಕುವುದಕ್ಕೆ ಹೊರಟಿತ್ತು! ಅದೇ ಇಂದು ಬೆಳ್ಳಿಹಬ್ಬ ಆಚರಿಸುತ್ತಿರುವ 'ನಾದವೈಭವಂ'.

ಕಟಪಾಡಿಯ ಮಹಿಳಾ ಸಂಸ್ಥೆಯ ಅಧ್ಯಕ್ಷೆ, ಉಡುಪಿ ಜಿಲ್ಲಾ ಮಹಿಳಾ ಒಕ್ಕೂಟದ ಕಾರ್ಯದರ್ಶಿ, ವೈವಾಹಿಕ ಸಮಸ್ಯೆಗಳ ಸ್ಪಂದನ ಸಾಹಿತ್ಯ ವೇದಿಕೆಯ ಸದಸ್ಯೆ ಮುಂತಾಗಿ ಸೇವೆ ಸಲ್ಲಿಸುತ್ತಿರುವ ನನ್ನ ಸಹಧರ್ಮಿಣಿ ಶ್ರೀಮತಿ ವಸಂತಿ ರಾವ್ ಕೊರಡ್ಕಲ್ ಯಾವಾಗಲೂ ವಾಸುದೇವ ಭಟ್ಟರೊಂದಿಗೆ ಸಂಗೀತ ಸಾಹಿತ್ಯದ ಬಗ್ಗೆ ಸಮಾಲೋಚಿಸುವುದಿದೆ. ಏಕೆಂದರೆ ಆಕೆಯೂ ಒಬ್ಬ ಕಲಾವಿದೆ.

ಭೋಗಿಯಾಗಿ ತ್ಯಾಗದ ಮಾರ್ಗದಲ್ಲಿ ನಡೆದ ವಾಸುದೇವ ಭಟ್ಟರು ರೋಗಿಯಾಗಿ ನನಗೆ ಚೆನ್ನಾಗಿ ಗೊತ್ತು. ಆಕಸ್ಮಿಕ ಅಪಘಾತಗಳಿಗೆ ಒಳಗಾಗಿ ಎರಡು ಬಾರಿ ತೀರ ನಿಗಾ ಸ್ಥಿತಿಯಲ್ಲಿ, ಕಠಿಣಾವಸ್ಥೆಯಲ್ಲಿದ್ದರು ಅವರು. ನಾನು ಅವರ ರೋಗನಿದಾನ ನಡೆಸಿ ಅದೇನೆಂದು ಗುರುತಿಸಿದ್ದೆ. ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಮಾರ್ಗದರ್ಶನ ಮಾಡಿದ್ದೆ. ತಲೆಗೆ ಪೆಟ್ಟು ಬಿದ್ದಾಗ ರಕ್ತ ಹೆಪ್ಪುಗಟ್ಟಿ, ಆಪರೇಶನ್ ನಡೆಸಿದ ಕಾರಣ ಅಪಾಯದಿಂದ ಪಾರಾಗಿ ಬಂದುದು ದೈವಾನುಗ್ರಹ.

ಇಂಥವರು ಇನ್ನೊಬ್ಬರಿಲ್ಲ

ಪಳಕಳ ಸೀತಾರಾಮ ಭಟ್ಟ

ಉಡುಪಿ ವಾಸುದೇವ ಭಟ್ಟರ ಬಗ್ಗೆ ಬರೆಯಬೇಕೆಂದರೆ ಎಲ್ಲಿಂದ ಪ್ರಾರಂಭಿಸುವುದು, ಎಲ್ಲಿಗೆ ತಂದು ನಿಲ್ಲಿಸುವುದು ಎಂದೇ ಗೊತ್ತಾಗುವುದಿಲ್ಲ. ಅಲ್ಲದೆ ವಯೋಮಾನಕ್ಕೆ ಮಣಿದ ನನ್ನಿಂದ ಹೆಚ್ಚೇನೂ ಬರೆಯುವುದಕ್ಕೆ ಸಾಧ್ಯವಾಗುತ್ತಲೂ ಇಲ್ಲ.

ವಾಸುದೇವ ಭಟ್ಟರು 'ನಾದವೈಭವಂ' ಸ್ಥಾಪಿಸಿ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ರಾಜ್ಯ ಹೊರರಾಜ್ಯಗಳಲ್ಲಿ ಸಂಚರಿಸಿ ಸಂಗೀತದ ನಾನಾ ಕಂಪು ಪೆಂಪುಗಳ ಸೊಂಪನ್ನು ಉಣಬಡಿಸಿದವರು ಎಂಬುದನ್ನು ಕೇಳಿ ಹೆಮ್ಮೆ ಪಟ್ಟ ಅಭಿಮಾನಿಗಳಲ್ಲಿ ನಾನೂ ಒಬ್ಬ. ಇತ್ತೀಚೆಗಿನ ದಿನಗಳಲ್ಲಿ ನಾವು ನಮ್ಮದೇ ತಾಪತ್ರಯಗಳಿಂದಾಗಿ ದೂರವೇ ಉಳಿಯುವಂತಾದರೂ ಹಿಂದೆ ನಾವು 'ಗಳಸ್ಯ ಕಂಠಸ್ಯ' ಎಂಬಂತೆ ಒಡನಾಡಿಗಳಾಗಿದ್ದ ದಿನಗಳನ್ನು ಮೆಲುಕು ಹಾಕುವುದಕ್ಕೆ ಮರೆತಿಲ್ಲ.

ಮಕ್ಕಳ ಸಾಹಿತ್ಯ ರಚಕನಾಗಿ ನಾನು ಯುಗಪುರುಷ ಕಿನ್ನಿಗೋಳಿ ಪ್ರಕಾಶನದ ಕೃಪಾಕಟಾಕ್ಷದಲ್ಲಿ ನಾಡಿಗೆಲ್ಲ ಪರಿಚಿತನೇ ಸರಿ. ವಾಸುದೇವ ಭಟ್ಟರು ಹಾಗಲ್ಲ, ತಮ್ಮನ್ನೇ ತಾವು ಪ್ರಕಾಶನಪಡಿಸಿಕೊಂಡ ಸ್ವಯಂಭೂ ಎನ್ನಬಹುದು. ಅವರು ಬೆಥನಿ ಶಿಕ್ಷಣ ಸಂಸ್ಥೆಯ ಅಧ್ಯಾಪಕರಾಗಿದ್ದಾಗ ನಮ್ಮಲ್ಲಿಗೆ ಆಗಾಗ ಬರುವುದಿತ್ತು. ಸಾಹಿತ್ಯ ಸಂಗೀತದ ಕುರಿತು ಸಮಯದ ಪರಿವೆಯೇ ಇಲ್ಲದೆ ಚರ್ಚೆ ನಡೆಸುವುದಿತ್ತು. ನನ್ನ ಹಾಗೆಯೆ ಅವರ ಕಾಳಜಿಯೂ ಮಕ್ಕಳ ಕುರಿತು ವಿಶೇಷವಾಗಿತ್ತು. ನಾನೂ ಅವರೂ ಕೂಡಿಯೆ ಮಕ್ಕಳಿಗೋಸ್ಕರ ಏನಾದರೂ ಮಾಡಬೇಕು ಎಂಬ ಕಳಕಳಿಯಲ್ಲಿ ಸಂಕಲ್ಪ ಮಾಡಿ ಮುಂದುವರಿದದ್ದಿದೆ. ಅನೇಕ ಪ್ರಯೋಗಗಳನ್ನು ಕುತೂಹಲದಿಂದ ಕೈಗೊಂಡದ್ದಿದೆ.

ನನ್ನ ಕೆಲವು ನೃತ್ಯರೂಪಕಗಳನ್ನು ಅವರು ಸಂಗೀತಕ್ಕೆ ಅಳವಡಿಸಿ ಬರವಣಿಗೆಗೆ ಪ್ರಚೋದನೆ ನೀಡಿದ್ದಾರೆ. ಇಂದಿಗೂ ಆ ಸ್ಫೂರ್ತಿ ನನ್ನಲ್ಲಿ ಹರಿಯುತ್ತ ಇದೆ. ವಾಸುದೇವ ಭಟ್ಟರು ಪಾದರಸದ ಹಾಗೆ ಚಲಿಸುವ ವ್ಯಕ್ತಿ. ಸಂಗೀತ ಸಂಜೀವಿನೀ ಶಕ್ತಿ. ಅವರೊಂದಿಗೆ ಹೆಜ್ಜೆ ಹಾಕುತ್ತ ಹೋದವರಿಗೆ ಖಂಡಿತವಾಗಿಯೂ ಸಿಗಲಿದೆ ನಾದಾನಂದದ ಮುಕ್ತಿ!

ನಾನು ಬರೆದ 'ಮಕ್ಕಳ ಮಾಣಿಕ್ಯ' ಎಂಬ ಶಿಶುಗೀತೆಗಳನ್ನು ಸಂಗೀತ ನಿರ್ದೇಶನ ನೀಡಿ ಧ್ವನಿಸುರುಳಿಯಾಗಿ ಅರಳಿಸಿ ಅವರು ಬಿಡುಗಡೆಗೊಳಿಸಿದ್ದೂ ಆ ಕಾಲದಲ್ಲಿ ಜನಪ್ರಿಯವಾಯಿತು. ಪ್ರಸಿದ್ಧ ಗಾಯಕರಾದ ಶಂಕರ ಶ್ಯಾನುಭಾಗ, ವಸುಧಾ, ಸುಮಾ ಶಾಸ್ತ್ರಿ, ರಮಾದೇವಿ ಮುಂತಾದವರು ಅದರಲ್ಲಿ ಹಾಡಿದ್ದು, ಬೆಥನಿ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ನಡೆದ ಬಿಡುಗಡೆ ಸಮಾರಂಭದಲ್ಲಿ ನಾನೂ ಭಾಗವಹಿಸಿ ಧನ್ಯನಾಗಿದ್ದೆ.

ಛಲದಂಕಮಲ್ಲನಾಗಿ ಹಿಡಿದ ಕಾರ್ಯವನ್ನು ಬಿಡದೇ ಮಾಡುವಂಥವರು ವಾಸುದೇವ ಭಟ್ಟರು. 'ನಾದವೈಭವಂ' ಲಾಂಛನದಲ್ಲಿ, ಮುದ್ರೆಯಲ್ಲಿ ಎಲ್ಲವೂ ಅನನ್ಯ, ಅನ್ಯಾದೃಶವಾಗಿರಬೇಕೆನ್ನುವುದೇ ಅವರ ನಿಲುವು.

ಜನ್ಮ ಜನ್ಮಾಂತರದ ಬಾಂಧವ್ಯ

✍ ರಮಾದೇವಿ

ಇವತ್ತು ಸುಮಾ ಎಲ್. ಎಸ್. ಶಾಸ್ತ್ರಿ ಎಂದು ನಿಮಗೆಲ್ಲ ಪರಿಚಿತಳಾಗಿರುವ ನನ್ನ ಎರಡನೆಯ ಮಗಳು ಸುಮಾ ತನ್ನ ಬಾಲ್ಯದಲ್ಲೊಮ್ಮೆ ನನ್ನಲ್ಲಿ ಕೇಳಿದ್ದ ಒಂದು ಪ್ರಶ್ನೆ, "ಅಮ್ಮಾ, ಈ ಸಂಗೀತ ಪ್ರೀತಿ ನನ್ನಲ್ಲಿ ಎಲ್ಲಿಂದ ಬಂತು?" ಎಲ್ಲಿಂದ ಬಂತದು - ಪಿತ್ರಾರ್ಜಿತ ಪುಣ್ಯವೆ? ನಾನು ಬೆಳೆಸಿಕೊಂಡ ಆಸಕ್ತಿಯೆ? ಅಥವಾ ನನ್ನ ಮೊದಲ ಮಗಳು ಪ್ರೇಮಲತಾ ಹಠ ಹಿಡಿದು ನಮ್ಮ ಮನೆಗೆ ಕರೆದು ತಂದ ವಾಸುದೇವ ಭಟ್ಟರೆಂಬ ಪುಣ್ಯಾತ್ಮರ ಮೂಲಕವೆ?

ನನ್ನ ತಂದೆ ಕೊಡಂಗಳ ನರಸಿಂಹಾಚಾರ್ ಮತ್ತು ಚಿಕ್ಕಪ್ಪ ಅಚ್ಯುತ ರಾವ್ ಗುಬ್ಬಿ ವೀರಣ್ಣ ಕಂಪೆನಿಯಲ್ಲಿದ್ದರು. ಹತ್ತೊಂಭತ್ತನೆಯ ವರ್ಷಕ್ಕೆ ತೀರಿಹೋದ ಇನ್ನೊಬ್ಬ ಚಿಕ್ಕಪ್ಪ ಅನಂತಾಚಾರ್ ಗುಬ್ಬಿ ಕಂಪೆನಿಯಲ್ಲಿ ಲೆಗ್ ಹಾರ್ಮೋನಿಯಂ ಎಂಬ ಅಪರೂಪದ ಉಪಕರಣವನ್ನು ನುಡಿಸುತ್ತಿದ್ದರು. ಅಚ್ಯುತ ಚಿಕ್ಕಪ್ಪ ದಶಾವತಾರ ಮೊದಲಾದ ನಾಟಕಗಳಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತಿದ್ದರೆಂದು ಕೇಳಿದ ನೆನಪು. ನನ್ನಮ್ಮ ನೇತ್ರಾವತಿ ಬಹಳ ಚೆನ್ನಾಗಿ ಹಾಡುತ್ತಿದ್ದರು. ಮದುವೆ ಮನೆಗಳಲ್ಲಿ ಹಾಡಲಿಕ್ಕೆಂದೇ ಅವರನ್ನು ಕರೆಯುತ್ತಿದ್ದರು. ಅವರು ಶೋಭಾನೆ ಹಾಡು, ಆರತಿ ಹಾಡು, ಹಸೆಗೆ ಕರೆವ ಹಾಡುಗಳನ್ನು ಎಷ್ಟು ಚೆನ್ನಾಗಿ ಹಾಡುತ್ತಿದ್ದರೆಂದರೆ, ಇಷ್ಟೊಂದು ವರ್ಷಗಳ ನಂತರ ಕೂಡ, ಅವರು ಇಲ್ಲೆಲ್ಲೋ ಹತ್ತಿರದಲ್ಲಿ ಕುಳಿತು ಗುನುಗುತ್ತಿರುವ ಹಾಗೆ ಕೇಳಿಸುತ್ತಿದೆ. ಬಾಲ್ಯದಲ್ಲಿ ನಾನೂ ಹಾಡುತ್ತಿದ್ದೆ. ಒಂದಿಷ್ಟು ಬಹುಮಾನಗಳನ್ನೂ ಪಡೆದಿದ್ದೆ. ನನಗೂ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯಬೇಕೆಂಬ ಹಂಬಲವಿತ್ತು. ಗುರುಗಳ ಫೀಸ್ ಕೊಡಲಾಗದ ಬಡತನ ನನ್ನನ್ನು ಕುಗ್ಗಿಸಿತ್ತು. ವಾಸುದೇವ ಭಟ್ಟರ ಗುರುಗಳು ತೆಂಕುಪೇಟೆಯಲ್ಲಿದ್ದ ಮನೆಯಲ್ಲಿ ಸಂಗೀತದ ಪಾಠ ಹೇಳುತ್ತಿದ್ದರು. ಹನ್ನೆರಡೋ ಹದಿಮೂರೋ ವರ್ಷದ ನಾನು ಕಿಟಕಿಯಲ್ಲಿ ಕದ್ದು ನೋಡುತ್ತಿದ್ದೆ, ಆಲಿಸುತ್ತಿದ್ದೆ. ಏಕಲವ್ಯನ ಅಭ್ಯಾಸದಂತಿತ್ತು ಆ ದಿನಗಳ ಸಂಭ್ರಮ.

ಮತ್ತೆ ಮದುವೆಯಾಯಿತು. ಸಂಸಾರ ಜೀವನ. ಮರೆತೇ ಬಿಟ್ಟೆ ಎಂದುಕೊಂಡಿದ್ದ ಸಂಗೀತ ಪ್ರೀತಿ ಜೀವವನ್ನು ಅಲುಗಿಸಿ ಕಾಡತೊಡಗಿದ್ದು ಮಗಳು ಪ್ರೇಮಲತಾ ನನ್ನ ಬಸಿರಿನಲ್ಲಿದ್ದಾಗ. ನರಸಿಂಹ ಸೇರೆಗಾರರಿಂದ ನಾಲ್ಕಾರು ತಿಂಗಳು ಸಂಗೀತವನ್ನು ಕಲಿತೆ. ಕಲಿಯತೊಡಗಿದೆ ಎಂದುಕೊಂಡಾಗಲೇ ರೈಲ್ವೇಸ್‌ನಲ್ಲಿ ಉದ್ಯೋಗದಲ್ಲಿದ್ದ ನಮ್ಮವರ ಜೊತೆಗೆ ಗೋಧ್ರಾಕ್ಕೆ ಹೋಗಬೇಕಾಗಿ ಬಂತು. ಕಲಿಯತೊಡಗಿದ್ದು ಅಲ್ಲಿಗೇ ನಿಂತಿತು.

ಎಷ್ಟೊ ವರ್ಷಗಳು ಹಾಗೆಯೇ ಕಳೆದುಹೋದವು. ನಾಲ್ಕು ಜನ ಮಕ್ಕಳು ಬದುಕನ್ನು

ತುಂಬಿಕೊಟ್ಟರು. ಮಗ ಸಿಎ ಮಾಡಿ ಬೆಂಗಳೂರಿನಲ್ಲಿ ನೆಲೆಸಿದ್ದಾನೆ. ಹಿರಿಯ ಮಗಳು ಪ್ರೇಮಲತಾ ಸಿಂಡಿಕೇಟ್ ಬ್ಯಾಂಕಿನಲ್ಲಿ ಉದ್ಯೋಗಿ. ಎರಡನೆಯಾಕೆ ಸುಮಾ, ಎಲ್. ಎಸ್. ಶಾಸ್ತ್ರಿಗಳ ಕೈಹಿಡಿದು, ಒಳ್ಳೆಯ ಹೆಸರು ಗಳಿಸಿ ಬೆಂಗಳೂರಿನಲ್ಲಿದ್ದಾಳೆ. ಇವರಿಬ್ಬರಿಗೆ ಸಂಗೀತ ಪಾಠ ಹೇಳಿದ ವಾಸುದೇವ ಭಟ್ಟರು ನಮ್ಮ ಈಗಿನ ಮನೆಯ ವಿಸ್ತರಣೆಯಂತಿರುವ ತಮ್ಮ ತರಗತಿಯಿಂದ ಇವತ್ತೂ ತಮ್ಮ ಶಿಷ್ಯರಿಗೆ ಕಲಿಸುತ್ತಿರುವ ಪಲುಕುಗಳು ಎಲ್ಲೋ ಇರುವ ಮಕ್ಕಳನ್ನು ನನ್ನ ಎದೆಯಂಗಳಕ್ಕೆ ತಂದುಬಿಡುವ ಆಪ್ಯಾಯಮಾನ ನೆನಪುಗಳು.

ಪ್ರೇಮಲತಾ ಚಿಕ್ಕವಳಾಗಿದ್ದಾಗಿನ ಘಟನೆ. ಸಂಗೀತ ಗುರುಗಳಾದ ವಾಸುದೇವ ಭಟ್ಟರು ತಮ್ಮ ಸಂಗೀತ ತರಗತಿ ನಡೆಸುತ್ತಿದ್ದ ಚಿತ್ತರಂಜನ ಸರ್ಕಲ್‌ನ ಹತ್ತಿರದ ಕಟ್ಟಡ ಬಿಡಬೇಕಾಗಿ ಬಂದಿತ್ತು. ಅದೇ ಹೊತ್ತಿಗೆ ನಾವು ಹೊಸ ಮನೆ ಕಟ್ಟಿಸಿಕೊಂಡಿದ್ದೆವು. ಹಳೆಯ ಹಂಚಿನ ಮನೆಯ ಒಂದು ಭಾಗ ಹಾಗೆಯೇ ಖಾಲಿ ಇದ್ದಿತ್ತು. ಪ್ರೇಮಲತಾ ವಾಸುದೇವ ಭಟ್ಟರನ್ನು ಕರೆದುಕೊಂಡು ಬಂದಳು. ಅವರು ಇಲ್ಲಿಯೇ ತರಗತಿ ನಡೆಸಲಿ ಎಂದು ಹಠ ಹಿಡಿದಳು. ಪುಟ್ಟ ಹುಡುಗಿಯ ಹಠಕ್ಕೆ ನಾವೆಲ್ಲ ಮಣಿಯಲೇ ಬೇಕಾಯಿತು. ಮೂವತ್ತು ವರ್ಷಗಳಿಂದ ವಾಸುದೇವ ಭಟ್ಟರ ಸಂಗೀತ ತರಗತಿ, 'ನಾದವೈಭವಂ' ಸಂಗೀತ ಚಿಕಿತ್ಸಾ ಸಂಶೋಧನೆಗಳು ಇಲ್ಲಿಯೇ ನಡೆಯುತ್ತಿವೆ. ನಮ್ಮ ಮನೆಯ ಅಡಿಗೆ ಕೋಣೆಯಲ್ಲಿ ಕೆಲಸದಲ್ಲಿ ನಿರತಳಾದಾಗೆಲ್ಲ ಗುರುಗಳ ಸ್ವರ ಕೇಳಿಸುತ್ತದೆ. ಅವರ ಗುರುಗಳಿಂದ ಕಲಿಯಲಾಗದ್ದನ್ನು, ಕಿಟಕಿಯಲ್ಲಿ ಇಣಿಕಿ ಕಂಡದ್ದನ್ನು, ಹೀಗೆ ಇಷ್ಟು ವರ್ಷಗಳ ನಂತರ ಕಲಿತೆ. ಅವರು ಕಲಿಸುತ್ತಿದ್ದ ಪಲುಕು ಸಹಿತ ಕೃತಿ, ಕೀರ್ತನೆ, ವರ್ಣ, ಉಗಾಭೋಗ ಎಲ್ಲವನ್ನೂ. ಹಾರ್ಮೋನಿಯಂ ಬಾರಿಸತೊಡಗಿದೆ. ಗುರುಗಳು ಇಲ್ಲದೇ ಹೋದಾಗ ಅವರ ಶಿಷ್ಯೆಯರಿಗೆ ಪಾಠ ಮಾಡತೊಡಗಿದೆ. ಎಲ್ಲವೂ ಕಲಿಯದೇ ಕಲಿತದ್ದು. ಬಯಸದೇ ಬಂದ ಭಾಗ್ಯ ಎಂದರೆ ಇದೇ ಇರಬೇಕು.

ಗುರುಗಳು ಪಾಠ ಹೇಳುವ ಕ್ರಮದಲ್ಲಿ ನಾನು ಬೇರೆಲ್ಲಾ ಗುರುಗಳಿಗಿಂತ ಬೇರೆಯದೇ ಆದ ರೀತಿಯನ್ನು ಗುರುತಿಸಿದ್ದೇನೆ. ಸಾಮಾನ್ಯವಾಗಿ ಸಂಗೀತ ಗುರುಗಳು ನಿನ್ನೆ ಒಂದಿಷ್ಟು, ಇವತ್ತು ಒಂದಿಷ್ಟು ಹೇಳಿಕೊಟ್ಟು, 'ಮುಂದೆ ನೀನೇ ಅಭ್ಯಾಸ ಮಾಡಿಕೋ' ಎನ್ನುತ್ತಾರೆ. ಆದರೆ ಇವರು ಹಾಗಲ್ಲ, ಪ್ರತಿಯೊಂದೂ ಪೂರ್ಣ ಅಭ್ಯಾಸವಾಗುವವರೆಗೆ ಬಿಡುತ್ತಿರಲಿಲ್ಲ. ಬೇರೆಲ್ಲ ಗುರುಗಳು ಹಾಡುವವರಿಗೆ ಸ್ವರ ಮತ್ತು ಸಾಹಿತ್ಯ ಬರೆದು ಕೊಡುತ್ತಾರೆ. ಆದರೆ ಇವರು ಸಾಹಿತ್ಯ ಮಾತ್ರ ಬರೆದು ಕೊಡುವುದು.

ಮೂವತ್ತು ವರ್ಷಗಳಲ್ಲಿ ಗುರುಗಳ ಸಂಗೀತ ರೂಪಕಗಳು, 'ಭುವನಜ್ಯೋತಿ' ಮೊದಲಾದವುಗಳ ಸಂಗೀತ ನಿರ್ದೇಶನ, ನೃತ್ಯ ನಿರ್ದೇಶನಗಳು ನಮ್ಮ ಮನೆಯ ಮೇಲ್ಛಾವಣಿಯಲ್ಲೇ ನಡೆದಿದ್ದವು. ಬೆಥನಿ ಶಿಕ್ಷಣ ಸಂಸ್ಥೆಯ ಪರಮೋನ್ನತ ಅಧಿಕಾರಿಗಳು, ಈ ಪರಿಸರದ ಸಂಗೀತ ತಜ್ಞರು, ವಿದ್ವಾಂಸರು ಈ ನೆವದಲ್ಲಿ ನಮ್ಮ ಮನೆಯನ್ನು ಪಾವನಗೊಳಿಸಿದರು. ಈ ಆತ್ಮಸಂತೋಷ, ಸಾರ್ಥಕ ಭಾವನೆಯ ಹಿಂದೆ ಯಾವುದೇ ವ್ಯವಹಾರ

ಇದ್ದಿರಲಿಲ್ಲ. ನಮ್ಮ ಕಿಂಚಿತ್ ಸ್ವಾರ್ಥ ಏನಾದರೂ ಇದ್ದಿತ್ತೆಂದರೆ, ಅನಾರೋಗ್ಯ ಪೀಡಿತೆಯಾಗಿರುವ ನಮ್ಮ ಮಗಳೊಬ್ಬಳಿಗೆ ಈ ಸಂಗೀತ ಪ್ರಪಂಚ ತಂದುಕೊಡುತ್ತಿದ್ದ ಚೈತನ್ಯವಷ್ಟೇ ಇದ್ದೀತು. ಅವಳ ಸಂತೋಷ, ಆರೋಗ್ಯಕ್ಕೆ ಇವರ ತರಗತಿಗಳಿಂದ ಕೇಳಿಬರುವ ವಿವಿಧ ಗಾನಬಂಧಗಳೇ ಕಾರಣವೆಂದು ನನ್ನ ಅನಿಸಿಕೆ. ಗುರುಗಳಿಂದ ಪಾಠ ಹೇಳಿಸಿಕೊಂಡ ದಿನಗಳಲ್ಲಿ ಅವಳು ವ್ಯಕ್ತಪಡಿಸುವ ಪ್ರಫುಲ್ಲತೆ, ಉಲ್ಲಾಸ ಅನನ್ಯವಾದುದು.

ನಮ್ಮ ಎರಡನೆಯ ಮಗಳು ಸುಮಾ ಸಂಗೀತ ಜಗತ್ತಿನಲ್ಲಿ ದೊಡ್ಡ ಹೆಸರಾಗಿ ಬೆಳೆದುದೇ ಗುರುಗಳಾದ ವಾಸುದೇವ ಭಟ್ಟರ ಪ್ರೀತಿ ಮತ್ತು ಪ್ರೋತ್ಸಾಹದಿಂದ. ತಮ್ಮ ಸಕಲ ವಿದ್ವತ್ತನ್ನು ಆಕೆಗೆ ಅವರು ಧಾರೆಯೆರೆದು ಕೊಟ್ಟರು. ಗುರುಗಳು ಮಾತ್ರವಲ್ಲ, ಅವರ ಮನೆಯವರೆಲ್ಲ ಆಕೆಯನ್ನು ಅವರ ಐದನೆಯ ಪುತ್ರಿಯಾಗಿ ಸ್ವೀಕರಿಸಿದರು. ತಮ್ಮ ಸಂಗೀತ ನಿರ್ದೇಶನದಲ್ಲಿ ಅವಳನ್ನು ಹಾಡಿಸಿದರು. ಹೊರಜಗತ್ತಿಗೆ ಅವಳ ಪ್ರತಿಭೆಯನ್ನು ಪರಿಚಯಿಸಿದರು. ಚಲನಚಿತ್ರಗಳಲ್ಲಿ ಹಾಡುವ ಅವಕಾಶವನ್ನೂ ಕೊಟ್ಟರು. ಆಕೆಯೂ ಅಷ್ಟೆ, ತನ್ನ ಸಂಕಲ್ಪಬಲ ಮತ್ತು ಗುರುಗಳ ಆಶೀರ್ವಾದದ ನಡುವೆ ಬೆಳೆದಳು.

ಒಂದು ಘಟನೆ ನೆನಪಾಗುತ್ತದೆ. 'ಭುವನಜ್ಯೋತಿ'ಯ ಸಮೂಹನೃತ್ಯ ನಿರ್ದೇಶನದ ಸಂದರ್ಭದಲ್ಲಿ ಗುರುಗಳ ಮಿತ್ರರೇ ಕೈಕೊಟ್ಟು, ಸಮೂಹನೃತ್ಯದಲ್ಲಿ ಪಾಲ್ಗೊಳ್ಳಬೇಕಾದ ಏಳೆಂಟು ಮಕ್ಕಳು ಬಾರದೇ ಹೋದಾಗ, ಗುರುಗಳು ಹತಾಶರಾಗಿ ಕುಳಿತಾಗ ಅವರ ನೆರವಿಗೆ ನಿಂತದ್ದು ಸುಮದ್ವಯರು - ನಮ್ಮ ಮಗಳು ಸುಮ ಮತ್ತು ಅವರ ಮಗಳು ಸುಮ. ಈ ಹುಡುಗಿಯರು ಎರಡು ದಿನಗಳ ಅವಧಿಯಲ್ಲಿ ಆರೆಂಟು ಹುಡುಗಿಯರನ್ನು ಕರೆತಂದು, ತರಬೇತಿ ಕೊಟ್ಟು, ಪ್ರೋಗ್ರಾಂಗೆ ತಯಾರಿ ಮಾಡಿಕೊಟ್ಟರು.

ನನ್ನ ಮಗಳಿಗೆ ಗುರುಗಳ ಮೇಲೆ ಅನನ್ಯ ಭಕ್ತಿ. ಒಮ್ಮೆ ಅವರಿಗೆ ಕಿಡ್ನಿಯ ತೊಂದರೆ ಬಂದಾಗ ತಾನೇ ಕಾರು ಮಾಡಿ ಅವರನ್ನು ಕ್ರಿಶ್ಚಿಯನ್ ಆಸ್ಪತ್ರೆಗೆ ಸೇರಿಸಿದ್ದಳು. ನಮ್ಮ ಗುರುಗಳು ಲೆಕ್ಕಾಚಾರ ಮತ್ತು ವ್ಯವಹಾರಗಳಲ್ಲಿ ಸ್ವಲ್ಪ ದಡ್ಡರು. ಅವರಿಗೇನಾದರೂ ಒಂದಿಷ್ಟು ಲೆಕ್ಕಾಚಾರ ಹೇಳಿಕೊಟ್ಟದ್ದಿದೆಯೆಂದರೆ ಅದು ನಮ್ಮ ಮಗಳೇ. ಮದುವೆಯೇ ಬೇಡವೆಂದು, ಹಾಡಿಗೇ ತನ್ನನ್ನು ಅರ್ಪಿಸಿಕೊಂಡಂತೆ ಬಾಳುತ್ತಿದ್ದ ನಮ್ಮ ಮಗಳ ಹಾಡು ಕೇಳಿ ಶಾಸ್ತ್ರಿಗಳು ಅವಳ ಕೈಹಿಡಿಯಬಯಸಿದಾಗ ಮುಂದೆ ನಿಂತು ಮಾರ್ಗದರ್ಶನ ಮಾಡಿದ್ದೂ ಗುರುಗಳೇ.

ಈ ಘಟನೆಗಳೆಲ್ಲ ನಡೆದು ಎಷ್ಟೋ ವರ್ಷಗಳು ಕಳೆದಿವೆ. ಇವತ್ತು ನಮ್ಮ ಮನೆಯವರ ಪಾಲಿಗೆ ಆಪ್ತವೂ ಆನಂದಕರವೂ ಆದ ಅನುಭವಗಳಿಂದ ಬದುಕು ತುಂಬಿ ತುಳುಕುತ್ತಿರುವುದಕ್ಕೆ ಗುರುಗಳೇ ಕಾರಣರೆಂದು ಒಂದೊಂದು ಸಲ ಅನ್ನಿಸುತ್ತದೆ. ಯಾವುದೋ ಜನ್ಮದಲ್ಲಿ ಅವರು ನಮ್ಮೆಲ್ಲರ ತಂದೆಯೇ ಆಗಿದ್ದಿರಬೇಕು ಎಂದೂ ಅನ್ನಿಸುತ್ತದೆ.

ಅಭಿನಂದನೆ, ವಾಸುದೇವ ಭಟ್ಟರಿಗೆ

✍ ಪ್ರೇಮಾ ಭಟ್

ಉಡುಪಿ ವಾಸುದೇವ ಭಟ್ಟರದ್ದು ಅಸದೃಶವಾದ ಪ್ರತಿಭೆ. ಸಂಗೀತವನ್ನೇ ಜೀವಜೀವದ ಉಸಿರನ್ನಾಗಿಸಿಕೊಂಡ ಭಟ್ಟರು ಸಹಸ್ರಾರು ಮಂದಿ ಶಿಷ್ಯರನ್ನು ಬೆಳೆಸಿದ್ದಾರೆ. ಸಂಗೀತವನ್ನು ಕೇವಲ ಕಲಿಕೆಯ ದೃಷ್ಟಿಯಿಂದ ಸ್ವೀಕರಿಸಿ ಅವರು ವಿದ್ವತ್ತನ್ನು ಸಂಪಾದಿಸಿಕೊಂಡವರಲ್ಲ. ಭಟ್ಟರು ಸಂಗೀತವನ್ನು ಆರಾಧಿಸುತ್ತಾ, ಗೌರವಿಸುತ್ತಾ ಅದನ್ನು ಒಂದು ತಪಸ್ಸಿನಂತೆ ಸ್ವೀಕರಿಸಿರುವದರಿಂದಲೇ ಇವತ್ತು ಭಟ್ಟರ ಹೆಸರು ಉಡುಪಿ ಮಾತ್ರವೇನು, ಕರ್ನಾಟಕದಲ್ಲೆಲ್ಲಾ ಪಸರಿಸಿದೆ.

ಬದುಕನ್ನು ಅತ್ಯಂತ ಗಾಢವಾಗಿ ಪ್ರೀತಿಸುವವರಿಂದ ಮಾತ್ರ ತಾವು ಮಾಡುವ ಕೆಲಸದಲ್ಲಿ ಪರಿಪೂರ್ಣತೆಯನ್ನು ಕಂಡುಕೊಳ್ಳಲು ಸಾಧ್ಯ. ಸಾಧ್ಯವಿದ್ದಷ್ಟು ಅನುಭವ ಸಂಪಾದಿಸಿ ಕೊಳ್ಳಬೇಕು, ತಮ್ಮ ಅನುಭವಕ್ಕೆ ನಿಲುಕಿದ್ದನ್ನು ಇತರರಿಗೆ ತಿಳಿಸಿಕೊಡಬೇಕು ಎನ್ನುವ ಉದ್ದೇಶದೊಂದಿಗೆ ಸ್ಥಾಪಿತವಾದ 'ನಾದವೈಭವಂ' ಸಂಸ್ಥೆ ತನ್ನ ಗುರಿಯನ್ನು ಸಾಧಿಸುವಲ್ಲಿ ಯಶಸ್ಸನ್ನು ಪಡೆದಿದೆ. ಅದರ ಬೆನ್ನೆಲುಬಾಗಿ ನಿಂತು ಅಹರ್ನಿಶಿ ದುಡಿಯುತ್ತಾ ಇವತ್ತು ಅನೇಕ ಸಂಗೀತ ತಜ್ಞರನ್ನು ಬೆಳೆಸಿದ ಕೀರ್ತಿಗೆ ಭಟ್ಟರು ಭಾಜನರಾಗಿದ್ದಾರೆ. ಯಾವುದೇ ಒಂದು ಸಂಸ್ಥೆ ಗುರಿಯನ್ನಿಟ್ಟುಕೊಂಡೇ ಅಸ್ತಿತ್ವಕ್ಕೆ ಬರುತ್ತದೆ. ಅದರ ಸಾಧನೆ ನಿರಂತರವಾಗುವುದು ಅದು ಗುರಿಯನ್ನು ಸಾಧಿಸಿದಾಗಲೆ. ಹಾಗೆ ಗುರಿಯನ್ನು ಸಾಧಿಸಿರುವ ಸಂಸ್ಥೆ 'ನಾದವೈಭವಂ'. ಗುರುತಿಸಿಕೊಳ್ಳುವ ಮೊದಲು ಸಂಘರ್ಷಗಳನ್ನು, ಎಡರು ತೊಡರುಗಳನ್ನು ಎದುರಿಸಬೇಕಾಗಿ ಬರುವುದು ಅಸಹಜವೇನಲ್ಲ. ಈ ಸಂಸ್ಥೆ ಈ ಮಟ್ಟಕ್ಕೆ ಬೆಳೆಯಬೇಕಾದರೆ ಅದರ ಖ್ಯಾತಿಯ ಲಾಭ ಸ್ವಾರ್ಥರಹಿತವಾದದ್ದಾಗಿರಬೇಕಾಗುತ್ತದೆ. ಅಂತಹ ಸ್ವಾರ್ಥರಹಿತ ಮನೋಭಾವದ ಭಟ್ಟರು ಸಂಸ್ಥೆಯ ಅಡಿಪಾಯಕ್ಕೆ ಅಸ್ತಿವಾರ ಹಾಕಿದಂತೆ, ಅದನ್ನು ಎತ್ತರಕ್ಕೆ ಬೆಳೆಸುವಲ್ಲಿ ಸಫಲರಾಗಿದ್ದಾರೆ.

'ಹಿತ್ತಲ ಗಿಡ ಮದ್ದಲ್ಲ' ಎನ್ನುವಂತೆ, ಇರುವ ಜಾಗದಲ್ಲಿ ಹೆಸರು ಮಾಡುವುದಕ್ಕಿಂತ ಹೊರನಾಡುಗಳಲ್ಲಿ ಜನ ಇವರನ್ನು ಹೆಚ್ಚಾಗಿ ಗುರುತಿಸುವುದನ್ನು ನೋಡಿದಾಗ ಇವರ ಪ್ರತಿಭೆಯ ಅರಿವಾಗದಿರದು. ವಚನ ಸಾಹಿತ್ಯದಲ್ಲಿ ಒಂದು ವಚನವಿದೆ. "ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು, ಹಾಡಿ ನಾಲಿಗೆ ದಣಿಯವು..." ಎನ್ನುವಂತೆ, ಸಂಗೀತಕ್ಕೆ ಮನಸೋತು ಮನದಣಿದು ಉಡುಪಿಯಲ್ಲಿ ನೆಲೆನಿಂತಿರುವ ನಾದವೈಭವಂ ವಾಸುದೇವ ಭಟ್ಟರು

ತಮ್ಮ ಅರುವತ್ತೆಂಟರ ಈ ವಯಸ್ಸಿನಲ್ಲೂ ಇನ್ನೂ ದಣಿದಿಲ್ಲ, ಶಿಷ್ಯಕೋಟಿಗಳನ್ನು ಬೆಳೆಸುವಲ್ಲಿ ಇನ್ನೂ ಉತ್ಸುಕರಾಗಿರುವುದನ್ನು ನೋಡಬಹುದು.

ಇವರ ಎಲ್ಲಾ ಕೈಂಕರ್ಯಕ್ಕೆ ಇವರ ಸಹಧರ್ಮಿಣಿಯ ಒತ್ತಾಸೆ ಸೇರಿಕೊಂಡಿರುವುದರಿಂದ ವಾಸುದೇವ ಭಟ್ಟರು ಎಂದೂ ಸೋಲರಿಯದ ಭಾವಕ್ಕೆ ಶರಣಾಗಿದ್ದಾರೆ. ಇವರ ಹೆಣ್ಣುಮಕ್ಕಳು ಇವರ ಹಾದಿಯನ್ನು ಹಿಡಿದು ಹುಲುಸಾದ ಬೆಳೆಗೆ ಹೊಸಕದಿರನ್ನು ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಮನುಷ್ಯನ ಬದುಕೇ ಪರಮ ಮೌಲ್ಯಾಧಾರಿತವಾದುದು. ನಿಸರ್ಗದಿಂದ ದೊರಕಿದ್ದನ್ನು ಸದುಪಯೋಗ ಪಡಿಸಿಕೊಂಡು ಚೆನ್ನಾಗಿ ಬಾಳಬೇಕು. ಸಾಧ್ಯವಾದಷ್ಟು ಮಟ್ಟಿಗಿನ ಪರಿಪೂರ್ಣತೆಯನ್ನು ಗಳಿಸಬೇಕೆಂಬ ಮನಸ್ಸಿದ್ದರೆ ಮಾತ್ರ ಇಂತಹದ್ದನ್ನು ಸಾಧಿಸಲು ಸಾಧ್ಯವಾಗುತ್ತದೆ. ಭಟ್ಟರ ಆಸಕ್ತಿಯ ಹಿಂದಿನ ನಿಲುವೇ ಇದಾಗಿದೆ. ಆದ್ದರಿಂದ ಅವರು ಪರಿಪೂರ್ಣವಾದ ಬಾಳನ್ನು ಬಾಳುತ್ತಿದ್ದಾರೆ. ಅವರ ಸಾಧನೆಗೆ ಸಿಕ್ಕ ಪ್ರಶಸ್ತಿಗಳು ಏನೇನೂ ಸಾಲವು ಎನಿಸುತ್ತದೆ. ನಾದವೈಭವಂ 'ನಾದಾಭಿಯಾನ'ದೊಂದಿಗೆ ಬೆಳ್ಳಿಹಬ್ಬದ ಸಂಭ್ರಮವನ್ನು ಆಚರಿಸುತ್ತಿರುವ ನಾದವೈಭವಂ ಸಂಸ್ಥೆಯ ಸ್ಥಾಪಕರೂ ನಿರ್ದೇಶಕರೂ ಆದ ಉಡುಪಿ ವಾಸುದೇವ ಭಟ್ಟರನ್ನು ಅಭಿಮಾನಿ ಬಳಗ 'ನಾದ ಸುನಾದ' ಅಭಿನಂದನ ಗ್ರಂಥ ಸಮರ್ಪಣೆ ಮಾಡಿ ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ಸರ್ಕಾರ ಅವರು ಮಾಡಿದಂಥ ಸಾಧನೆಯನ್ನು ಗುರುತಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುವಂತಾಗಲಿ, ಭಗವಂತನು ಇವರಿಗೆ ಆಯುರಾರೋಗ್ಯ ಸಂಪತ್ತನ್ನು ಕರುಣಿಸಿ ಇನ್ನಷ್ಟು ಕಾಲ ಇವರನ್ನು ಸಂಗೀತ ಸೇವೆಯಲ್ಲಿ ತೊಡಗಿಸಲಿ ಎಂದು ಹಾರೈಸುತ್ತೇನೆ.

18679

ಹಿಮ್ಮೇಳವಾದಕನ ಗುಂಜನ

✍ ಕೆ. ಬಾಲಕೃಷ್ಣ ಆಚಾರ್ಯ

ಸಂಗೀತ ಕ್ಷೇತ್ರದಲ್ಲಿನ ಅಪರೂಪದ ಸಿದ್ಧಿಯ ಸಂಕೇತವಾಗಿರುವ ವಾಸುದೇವ ಭಟ್ಟರದು ಒಂದು ಅಪರೂಪದ ವಿಶಿಷ್ಟ ವ್ಯಕ್ತಿತ್ವ. ಸದಾ ಮುಗುಳ್ನಗೆಯ ಮುಖ; ಅಜಾನುಬಾಹು; ತೃಪ್ತಿಸೂಸುವ ಮಿಂಚಿನ ಕಣ್ಣುಗಳು; ಶುಭ್ರ ಶ್ವೇತ ವಸ್ತ್ರ; ಚುರುಕು ನಡಿಗೆ; ಅರಳು ಹುರಿದಂತೆ ಪಟಪಟನೆ ಉದುರುವ ಮಾತುಗಳು, ಅರವತ್ತೇಳರ ಈ ವ್ಯಕ್ತಿ ಮಾಡಿದ ಸಾಧನೆಗಳು ಅದ್ಭುತ, ಅಪಾರ. ಇಂದಿಗೂ ಬತ್ತದ ಆಸಕ್ತಿ, ಅತೃಪ್ತ ಸಂಶೋಧನಾ ಪ್ರವೃತ್ತಿ.

ನನ್ನದು ಅವರ ಶಿಷ್ಯತ್ವ ಅಲ್ಲ. ಆದರೆ ನನ್ನಲ್ಲಿನ ಬಹುಮುಖ ಸಂಗೀತ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದವರು ಅವರು. ಅವರ ಸಂಗೀತ ಕಾರ್ಯಕ್ರಮಗಳಲ್ಲಿ ಜಲತರಂಗವೇ ಮೊದಲಾದ ವಿವಿಧ ಸಂಗೀತ ವಾದ್ಯಗಳ ಹಿಮ್ಮೇಳವಾದಕನಾಗಿ ಖುಷಿಪಟ್ಟವನು ನಾನು. ಅವರೂ ಅಷ್ಟೇ, ದೂರದೂರಿನ ತಮ್ಮ ಕಾರ್ಯಕ್ರಮಗಳಿಗೆ ನನ್ನನ್ನು ಪ್ರೀತಿಯಿಂದ ಕರೆದುಕೊಂಡು ಹೋದವರು. ನನಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟವರು. ಕಾರ್ಯಕ್ರಮ ನಿಯೋಜಿಸಿದವರಿಗೆ ಮುಂಚಿತವಾಗಿ ನನ್ನ ಬಗ್ಗೆ ಹೇಳಿ, ನನಗೆ ಸಲ್ಲತಕ್ಕ ಉಪಚಾರಕ್ಕೆ ಕಿಂಚಿತ್ತೂ ತೊಂದರೆಯಾಗದ್ದ ಹಾಗೆ ಕಂಡುಕೊಂಡವರು. ಕಾರ್ಯಕ್ರಮ ಮುಗಿದ ನಂತರ ಕೂಡ ನಾನು ಮನೆಗೆ ಹಿಂದಿರುಗುವ ವ್ಯವಸ್ಥೆ ಹೇಗಿದೆ ಎಂದು ವಿಚಾರಿಸಿಕೊಳ್ಳುತ್ತಿದ್ದ ಸಹೃದಯಿಗಳವರು. ಅಂತಹ ಹಿರಿಯ ಮನಸ್ಸಿನ ಕಲಾವಿದರನ್ನು ನಾನು ಕಂಡದ್ದು ಬಹಳ ಕಡಿಮೆ.

ವಾಸುದೇವ ಭಟ್ಟರು ಮೊದಲಿನಿಂದಲೂ ನನ್ನ ಕುಟುಂಬದ ಜೊತೆಗೆ, ನನ್ನ ತೀರ್ಥರೂಪರಾದ ಕನ್ನಡ, ಹಿಂದಿ, ಸಂಸ್ಕೃತ, ಸಂಗೀತ ವಿದ್ವಾಂಸರಾದ ಕೆ. ಎಸ್. ಪದ್ಮನಾಭ ಆಚಾರ್ಯರೊಡನೆ ನಿಕಟ ಸಂಪರ್ಕ ಹೊಂದಿದವರು. ಅನೇಕ ಬಾರಿ ಅವರ ಕುಟುಂಬದವರೆಲ್ಲರ ಜೊತೆ ಅವರ ಮನೆಯಲ್ಲಿ ಆತಿಥ್ಯದ ರಸದೌತಣ ಉಂಡವನು ನಾನು. ಅವರ ಮಡದಿ ಮಕ್ಕಳೆಲ್ಲ 'ನಮ್ಮ' ಆತ್ಮಬಂಧುಗಳೇ ಆಗಿ ಉಳಿದುಬಿಟ್ಟಿದ್ದಾರೆ.

'ನಮ್ಮ' ಎಂದೆನಲ್ಲ! ಉದ್ದೇಶಪೂರ್ವಕವಾಗಿಯೇ ಹೇಳಿದ್ದು. ನನ್ನಾಕೆ ವಾಣಿ ಕೆಲವು ಕಾಲ ಅವರಿಂದ ಸಂಗೀತ ಪಾಠ ಹೇಳಿಸಿಕೊಂಡಿದ್ದಳು. ಆ ಅವಧಿಯಲ್ಲಿ ವಾಸುದೇವ ಭಟ್ಟರ ಕುಟುಂಬದೊಂದಿಗೆ ಆಕೆ ಬೆಳೆಸಿಕೊಂಡ ಸ್ನೇಹ, ಬಂಧುತ್ವ ಈಗಲೂ ಮುಂದುವರಿದಿದೆ.

ವಾಸುದೇವ ಭಟ್ಟರು ತಮ್ಮ ಸಂಗೀತ ಸಂಶೋಧನೆಯ ಹಲವು ವಿಚಾರಗಳನ್ನು ನನ್ನೊಂದಿಗೆ ಆಗಾಗ ಹಂಚಿಕೊಂಡಿದ್ದಾರೆ. ಸಂಗೀತ ಸ್ವರ ತತ್ವದ ಆಧಾರದ ಮೇಲೆ ಅನೇಕ ಪ್ರಯೋಗಗಳನ್ನು ನಡೆಸುತ್ತಾ ಬಂದಿರುವ ಇವರು ನರದೌರ್ಬಲ್ಯ, ಆಘಾತ, ಭ್ರಮೆ, ತಳಮಳ, ಉದ್ವೇಗಗಳಿಗೆ ಒಳಗಾದ ವ್ಯಕ್ತಿಗಳಿಗೆ ನೇರವಾಗಿ ಸಾಂತ್ವನ ಸಿಗುವಂತಹ ಸಂಗೀತ ಚಿಕಿತ್ಸೆಯನ್ನೂ ಸಂಯೋಜಿಸಿದ್ದಾರೆ. ಇದಕ್ಕಾಗಿ ಪೂರ್ಣ ಪ್ರಮಾಣದ ಸಂಗೀತ ಚಿಕಿತ್ಸಾಲಯವೊಂದನ್ನು ತೆರೆಯುವ ಯೋಜನೆಯನ್ನೂ ಕನಸನ್ನೂ ನನ್ನೊಂದಿಗೆ ಹಂಚಿಕೊಂಡಿದ್ದಾರೆ.

ಅರವತ್ತೇಳರ ಈ ಇಳಿಹರೆಯದಲ್ಲಿ ಅವರಿಗೆ ಉತ್ತಮ ಆಯುರಾರೋಗ್ಯ ಸಂಪತ್ತು ದೊರೆತು ಅವರ ಕನಸು ನನಸಾಗಲಿ ಎಂಬ ಶುಭಹಾರೈಕೆ 'ನಮ್ಮದು'.

ನೆರೆಮನೆಯ ನಿತ್ಯತೃಪ್ತ

✍ ಡಾ. ಸತೀಶ ರಾವ್

ಶುಭ್ರ ಬಿಳಿಯ ಬಟ್ಟೆ, ಹಸನ್ಮುಖಿ, ಸಂಗೀತದೊಂದಿಗೆ ಅನನ್ಯವಾಗಿ ಗುರುತಿಸಲ್ಪಟ್ಟ ವ್ಯಕ್ತಿತ್ವ, ಆಕರ್ಷಕ ಮೈಕಟ್ಟು; ಸ್ವಲ್ಪ ಸಿಟ್ಟು, ಮತ್ತಿಷ್ಟು ಅವಸರ, ಗಡಿಬಿಡಿ. ಉಡುಪಿ ವಾಸುದೇವ ಭಟ್ಟರು ವಾಸ್ತವ್ಯದಲ್ಲಿ ನನಗೆ ನೆರೆಮನೆಯವರು. ಅವರ ಮನೆಯ ಕಡೆಯಿಂದ ಬೀಸುವ ಗಾಳಿಯಲ್ಲಿ ಸ್ವಲ್ಪ ನಶ್ಯದ ಘಾಟು ಇರುತ್ತದೆ. ಮತ್ತೆಲ್ಲ ಸಂಗೀತದ ಸೊಗಸು; ಆಲಾಪದ ಇಂಪು.

ವಾಸುದೇವ ಭಟ್ಟರನ್ನು ನಾನು ದೀರ್ಘಕಾಲದಿಂದ ನೋಡುತ್ತಾ ಬಂದಿದ್ದೇನೆ. ಇವತ್ತು ಬಹಳ ಎತ್ತರವನ್ನು ಏರಿರುವ ಶಿಷ್ಯಂದಿರು ಇವರಲ್ಲಿ ಅಭ್ಯಾಸ ಮಾಡತೊಡಗಿದ ದಿನಗಳನ್ನೂ ಕಂಡಿದ್ದೇನೆ. ಇವರದು ಉದಾರ ಮನಸ್ಸಿನ ಎಲ್ಲರನ್ನೂ ತೃಪ್ತಿಪಡಿಸುವ ವ್ಯಕ್ತಿತ್ವ. ತನಗೆ ಕಂಡ ಸತ್ಯ ಹೇಳುವುದರಲ್ಲಿ ಇವರಿಗೆ ಸಂಕೋಚವೂ ಇಲ್ಲ, ದೊಡ್ಡ ವ್ಯಕ್ತಿಗಳೆಂದು ವಿಶೇಷ ಮಣೆಹಾಕುವ ಅಭ್ಯಾಸವೂ ಇಲ್ಲ. ಇದರಿಂದಾಗಿ ಇವರು ಕಳೆದುಕೊಂಡದ್ದೇ ಜಾಸ್ತಿ. ಇವರಿಂದ ಕೆಲಸ ಮಾಡಿಸಿಕೊಂಡು ಲಾಭಪಡೆದ ನಂತರ ಇವರತ್ತ ತಿರುಗಿ ನೋಡದ 'ದೊಡ್ಡ ಮನುಷ್ಯರು' ಹಲವರಿದ್ದಾರೆ. ಅವರ ಬಗ್ಗೆ ನಾನು ಬೇಸರ ಪಟ್ಟದ್ದುಂಟಾದರೂ ವಾಸುದೇವ ಭಟ್ಟರು ಹೇಳಿಕೊಂಡದ್ದಿಲ್ಲ. ಅದು ಅವರ ದೊಡ್ಡತನವೂ ಇದ್ದೀತು, ದೌರ್ಬಲ್ಯವೂ ಇದ್ದೀತು.

ರೋಗಗಳಿಗೆ ಎರಡು ಅಧಿಷ್ಠಾನಗಳು. ಕಾಯ ಮತ್ತು ಮನಸ್ಸು. ಈ ಎರಡಕ್ಕೂ ಸಂಗೀತವು ಚಿಕಿತ್ಸೆಯಾಗಬಲ್ಲದು ಎಂಬುದೇ ವಾಸುದೇವ ಭಟ್ಟರ ನಂಬಿಕೆ. ಸಂಗೀತದ ಆಲಾಪನೆಗಳಿಗಿರುವ ಅದ್ಭುತ ಶಕ್ತಿಯ ಕುರಿತು ಅವರು ನನ್ನನ್ನು ನಂಬಿಸಲು ಬಹಳ ಬಾರಿ ಪ್ರಯತ್ನಪಟ್ಟಿದ್ದಾರೆ. ಅವರೇ ಹಲವಾರು ಬಾರಿ ಅನಾರೋಗ್ಯಪೀಡಿತರಾದರೂ ಅದ್ಭುತ ರೀತಿಯಲ್ಲಿ ಚೇತರಿಕೆ ಕಂಡದ್ದು ಅವರೊಳಗಿದ್ದ ಸಂಗೀತ ಪ್ರಭೆಯ ಕಾರಣದಿಂದಲೇ ಎಂದವರ ನಂಬಿಕೆ. ಅವರ ಅನಾರೋಗ್ಯದ ವಿಷಯ ತಿಳಿದಿರುವ ನನಗೆ 'ಇದು ನಿಜವಿದ್ದೀತು' ಎಂದೂ ಅನ್ನಿಸತೊಡಗಿದೆ.

ಯಾವಾಗಲೂ ಸಂತಸಚಿತ್ತರಾಗಿರುವ ವಾಸುದೇವ ಭಟ್ಟರ ಚಿರಯೌವನ ಅವರ ನೆರೆಮನೆಯಲ್ಲಿರುವ ನಮಗೊಂದು ಆದರ್ಶ ಮಾತ್ರವಲ್ಲ, ಕುತೂಹಲ ಕೂಡ. ಸದಾ ಸಂಗೀತದ ಗುಂಗಿನಲ್ಲೇ ಮುಳುಗಿರುವ ಅವರು ನಮ್ಮ ವ್ಯಾವಹಾರಿಕ ಲೋಕಕ್ಕೆ ಸಲ್ಲದವರು. ಅದೇ ಅವರನ್ನು ಎಲ್ಲ ಲೌಕಿಕ ಚಿಂತೆಗಳಿಂದ ದೂರ ಇಟ್ಟಿರಬೇಕು ಎಂದು ನಮಗನ್ನಿಸುತ್ತದೆ. ತನ್ನ ಪಾಲಿಗೆ ಲಭಿಸಿದ ಅಲ್ಪದರಲ್ಲಿಯೇ ಸಂತೃಪ್ತರಾಗಿ ಬದುಕುವುದುಯೋಗಿಗಳಿಗಷ್ಟೇ ಸಾಧ್ಯ. ಸಂಗೀತದ ಸಂತೋಷದ ನಡುವೆ ಈ ಮಹಾನುಭಾವ ನಿತ್ಯತೃಪ್ತರು.

ಅವರ ಬಟ್ಟೆ ಮಲಿನವಾಗುವುದಿಲ್ಲ

✍ ಅನಂತ ಪದ್ಮನಾಭ ಶಾಸ್ತ್ರಿ

ಹೌದು. ಅವರನ್ನು ಬಲ್ಲವರೆಲ್ಲರೂ ಈ ಮಾತನ್ನು ಒಪ್ಪುತ್ತಾರೆ. ಅವರ ನಿರ್ಮಲವಾದ ಮೈಯಲ್ಲಿ ಶುಭ್ರವಾದ ಬಟ್ಟೆಗಳು. ಮುಗ್ಧ ಮಧುರ ಮಂದಸ್ಮಿತ ಮುಖದಲ್ಲಿ ತಪ್ಪುವುದೇ ಇಲ್ಲ. ಮಾತೆಂದರೆ ಜೇನು ಸವಿದ ಹಾಗೆ. ವಿದ್ಯೆಯೊಂದಿಗೆ ಎಂತಹ ಕ್ರೂರರನ್ನೂ ಮೆದುಗೊಳಿಸುವ ನಮ್ರತೆ, ಸಹಜವಾದ ವಿನಯ. ಒಮ್ಮೆ ಪರಿಚಯ ಹೊಂದಿದವರು ಅವರನ್ನು ಮರೆಯಲಾರರು. ಅವರ ನಡೆನುಡಿಗಳಲ್ಲಿ ತೋರುವ ಆತ್ಮೀಯತೆಗೆ ಸೋಲದಿರಲಾರರು. ಲೋಕೋತ್ತರ ಕಲಾವಿದನಿಗೆ ದುಶ್ಚಟವೊಂದು ಭೂಷಣವೆಂದು ಭಾವಿಸುವವರಿಗೆ ಇವರೊಂದು ಅಪವಾದ.

ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವಾಗಲೂ, ಕೇವಲ ವೇತನಕ್ಕಾಗಿ ದುಡಿಯುವುದು ಅವರ ಪ್ರಕೃತಿಗೆ ಒಗ್ಗಿರಲಿಲ್ಲ. ಆ ಸಂಸ್ಥೆ ತನ್ನದೇ ಎಂದು ದುಡಿಯುತ್ತಿದ್ದರು. ಈ ಗುಣಗಳಿಂದಾಗಿಯೇ ಇವರು ಪರಿಚಿತರಿಗೆ ಪರಮಾಪ್ತರು.

ಇನ್ನು ಇವರ ಶ್ರೀಮತಿಯವರ ಬಗ್ಗೆ ಕೇಳುವುದೇ ಬೇಡ. ಇವರ ಎಲ್ಲಾ ಕಾರ್ಯಗಳಲ್ಲಿಯೂ ಮುಕ್ತ ಮನಸ್ಸಿನಿಂದ ಸಹಕಾರವಿತ್ತು, ಇದ್ದುದರಲ್ಲೇ ತೃಪ್ತಿಹೊಂದುವ ಸಹಧರ್ಮಿಣಿ, ಆದರ್ಶಲಕ್ಷ್ಮಿ. ವಿದ್ಯೆ, ರೂಪ, ಸ್ವಭಾವ ಹಾಗೂ ಪ್ರತಿಭೆಯಲ್ಲಿ ತಾಯ್ತಂದೆಯರನ್ನೇ ಹೋಲುವ ಮನತುಂಬಿದ ನಾಲ್ವರು ಹೆಣ್ಣುಮಕ್ಕಳು. ಅವರೆಲ್ಲರನ್ನೂ ನಾನು ತುಂಬ ಸನಿಹದಿಂದ ಕಂಡಿದ್ದೇನೆ. ಸೌಜನ್ಯದಿಂದ ತುಂಬಿ ತುಳುಕುವ ಈ ಕುಟುಂಬವನ್ನು ಪ್ರೀತಿಯಿಂದ ಹರಸಿದ್ದೇನೆ. ಮನೆಗೆ ಬರುವ ಅತಿಥಿಗಳನ್ನು, ಕಲಾವಿದರನ್ನು ಮತ್ತು ವಿದ್ಯಾರ್ಥಿಗಳನ್ನು (ಈ ವಿದ್ಯಾರ್ಥಿಗಳಲ್ಲಿ ನಿವೃತ್ತ ಜಿಲ್ಲಾಧಿಕಾರಿಗಳೂ, ಆರಕ್ಷಕಾಧಿಕಾರಿಗಳೂ, ಹೆಸರಾಂತ ಪತ್ರಕರ್ತರೂ ಸೇರಿದ್ದಾರೆ) ಪ್ರೀತಿಯಿಂದ ಆದರಿಸುವ ಈ ಕುಟುಂಬದ ಸದಸ್ಯರು ಸ್ತುತ್ಯರ್ಹರು.

'ಸರ್ವಶುಕ್ಲಾ ಸರಸ್ವತಿ' ಎಂದು ಮಹಾಕವಿ ದಂಡಿಯು ಹೇಳಿರುವಂತೆ ಅವರ ಮೈಯಲ್ಲಿ ಯಾವಾಗಲೂ ಶುಕ್ಲವರ್ಣದ ಬಟ್ಟೆಗಳೇ ಕಂಗೊಳಿಸುತ್ತಿವೆ. ನಮ್ಮ ಆತ್ಮೀಯರಾದ ಈ ಗಾನಗಂಧರ್ವರು ಆರೋಗ್ಯದಿಂದ ಸಾರ್ಥಕವಾದ ಬಾಳನ್ನು ಬಾಳುತ್ತಾ ತಮ್ಮ ಸಂಗೀತ ಸುಧೆಯಿಂದ ನಾಡಿನ ಉದ್ದಗಲಕ್ಕೂ ಯಶಃಪತಾಕೆಯನ್ನು ಆಗಸದೆತ್ತರಕ್ಕೆ ಬಿತ್ತರಿಸುತ್ತಿರಲೆಂದು ಭಗವಂತನಲ್ಲಿ ನಮ್ರತೆಯಿಂದ ಪ್ರಾರ್ಥಿಸುತ್ತೇನೆ.

ವಾಸುದೇವ ಇತಿ ಪಾವನಾಭಿದಃ ಶುಭ್ರ ವಸ್ತ್ರ ವಪುರಾಪ್ತ ವತ್ಸಲಃ
ಜೀವತಾತ್ ಶತಃ ಸಮಾಃ ಸುಖೀಹ್ಯರುಕ್ ಸಾರ್ಥಕಂ ಭವತು ಜೀವನಂ ಪ್ರಭೋ॥

ಪರ್ವ : ಒಂದು

ವಾಸುದೇವ ನಾದಾಭಿಯಾನ

ಭಾಗ : ಎರಡು

ಶ್ರುತಿ - ಅನುಶ್ರುತಿ

(ಆತ್ಮೀಯ ಶಿಷ್ಯರು ದಾಖಲಿಸಿದಂತೆ)

ಇವರು ನನ್ನ ಗುರು

✍ ಡಾ. ಕೆ. ಎಂ. ರಾಘುವ ನಂಬಿಯಾರ್

ಯಕ್ಷಗಾನದ ಹಿಮ್ಮೇಳದ ಕುರಿತಾಗಿ ನಾನು ಮಹಾಪ್ರಬಂಧ ಬರೆದು, ವಿಶ್ವವಿದ್ಯಾಲಯಗಳ ವಿದ್ವಾಂಸರು ಮೆಚ್ಚಿದರು ಎಂಬುದು ಹಿನ್ನೋಟದಲ್ಲಿ ಒಂದು ವಿಸ್ಮಯವಾಗಿ ಕಾಣಿಸುತ್ತದೆ. ಸಂಗೀತದ ವಿಷಯವಾಗಿ ನನಗಿದ್ದ ಕೌಟುಂಬಿಕ ಹಿನ್ನೆಲೆ ಮೇಲಿಂದ ಈ ಮಾತು. ತಂದೆಯವರಲ್ಲಿ ಕನ್ನಡ ನೆಲದ ಸಂಸ್ಕೃತಿಯಾದ ಭಜನೆ ಹಾಡುವಿಕೆಯಲ್ಲಿ ಆಸಕ್ತಿ ಇದ್ದುದರಿಂದ ಅವರು ನಮ್ಮಿಂದ ಬಾಲ್ಯದಲ್ಲಿ ಭಕ್ತಿಗಾಗಿ ಸಂಜೆ ದೇವರನಾಮ ಹೇಳಿಸಿದುದೊಂದೇ ನಮಗಿರುವ ಹಾಡುಗಾರಿಕೆಯ ಹಿನ್ನೆಲೆ. ಆದರೆ ಅದರಲ್ಲಿ ಭಜನೆ ಹಾಡುವಿಕೆಯ ಧಾಟಿಗಳು ಮತ್ತು ಕೆಲವು ನಡೆಗಳ ಪರಿಚಯದ ಹೊರತು ರಾಗ, ತಾಳಗಳ ಪರಿಚಯವಿರಲಿಲ್ಲ. ನನಗೆ ಹಾಡುವ ಪ್ರವೃತ್ತಿ ಇತ್ತಾದರೂ ಅದರಲ್ಲಿ ಗಾನವಾಗುವ ಸಂಸ್ಕಾರ ಇರಲಿಲ್ಲ. ಈ ಆಸಕ್ತಿಗೆ ಇಂಬು ದೊರೆತುದು ಯಕ್ಷಗಾನದಲ್ಲಿ.

ಯಕ್ಷಗಾನ ಬಡಗುತಿಟ್ಟು, ತೆಂಕುತಿಟ್ಟುಗಳ ಆಟಗಳನ್ನು ಎಳವೆಯಲ್ಲಿ ಧಾರಾಳ ನೋಡಿರುವೆನಾದರೂ, ಈ ರಂಗಕ್ಕೆ ಪ್ರವೇಶ ಮಾಡಿದುದು 'ತಾಳಮದ್ದಳೆ'ಯ ಅರ್ಥಗಾರಿಕೆಯ ಅಭ್ಯಾಸಿಯಾಗಿ. ಕಾರ್ಕಳ ಶ್ರೀ ವೆಂಕಟರಮಣ ಯಕ್ಷಗಾನ ಕಲಾಸಮಿತಿಯ ಮದ್ದಳೆಗಾರ ಪಿ. ವಿಟ್ಠಲ ಪ್ರಭು ಅವರ ಸ್ವಂತ ವಾದನ ಅಭ್ಯಾಸಕ್ಕೆ, ಭಾಗವತರು ಬರುವವರೆಗೆ, ಜಾಗಟೆಯಲ್ಲಿ ತಾಳ ಹಾಕುವ ಅನಿವಾರ್ಯತೆ ಒದಗಿದುದರಿಂದ, ನನ್ನನ್ನು ಹಾಡುಗಾರಿಕೆಗೆ ದೂಡಿತು. ಬರಿಯ ತಾಳ ಹಾಕುವುದು, ಪದಸಹಿತ ತಾಳ ಹಾಕುವುದಾಗಿ ಬದಲಿತು. ಬಹುಕಾಲ ಇದು ಬರಿಯ ಮಕ್ಕಳಾಟಿಕೆಯಲ್ಲದೆ ಬೇರೇನೂ ಆಗುವಂತಿರಲಿಲ್ಲ.

ಆದರೆ ಈ ಮಕ್ಕಳಾಟಿಕೆ ಎಂಬುದು ಆಟ ನೋಡಲು ಕುಳಿತಾಗ ಅಥವಾ ತಾಳಮದ್ದಳೆ ನಡೆಯುತ್ತಿದ್ದಾಗ, ಭಾಗವತಿಕೆ - ಹಿಮ್ಮೇಳಗಳ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಲು, ಅನುಕರಿಸಲು ಮರುದಿನ ಧಾಟಿಗಳನ್ನು ಗುಣುಗುಣಿಸಲು ದಾರಿಮಾಡಿತು. ಅನುಕರಣೆ ಮೂಲಕ ಅಗರಿ ಶ್ರೀನಿವಾಸ ಭಾಗವತರು, ಬಲಿಪ (ಕಿರಿಯ) ನಾರಾಯಣ ಭಾಗವತರು - ಇವರ ಧಾಟಿಗಳಲ್ಲಿ ನಾನು ಪದ ಹೇಳಬಲ್ಲವನಾದುದು, ವಿಟ್ಠಲ ಪ್ರಭುಗಳ ಮದ್ದಳೆ ಅಭ್ಯಾಸಕ್ಕೆ ಪ್ರಯೋಜನಕರವಾಯಿತು. ಕ್ರಮೇಣ ತಾಳಮದ್ದಳೆ, ಆಟಗಳಲ್ಲಿ ಪದ ಹೇಳಲೂ ತೊಡಗಿದೆ. ಆದರೂ ಸ್ವರಜ್ಞಾನ, ರಾಗದ ನಿಖರತೆ ಇಲ್ಲದ ವ್ಯವಹಾರವೇ ಇದಾಗಿತ್ತು. ಕೆಲವೊಮ್ಮೆ ಪದ ತೆಗೆದರೆ, ಅನಿಯಂತ್ರಿತವಾಗಿ, ಉದ್ದೇಶಪಟ್ಟ ರಾಗಕ್ಕೆ ಭಿನ್ನವಾದ ರಾಗದಲ್ಲಿ ಅದು

ಸಾಗುತ್ತಿತ್ತು. ಹಾಡುವುದು ನಾನಲ್ಲ, ಇನ್ನಾರೋ ಹಾಡುತ್ತಿರುವುದನ್ನು ವಿಧೇಯತೆಯಿಂದ ಹಿಂಬಾಲಿಸುತ್ತಿದ್ದೇನೆ ಎಂದು ಅನಿಸುತ್ತಿತ್ತು.

ಈ ಯೋಗ್ಯತೆಯಿಂದಲೆ ದೊಡ್ಡ ಮಟ್ಟದ ಆಟ, ಕೂಟಗಳಲ್ಲಿ ಪದ ಹೇಳತೊಡಗಿದ ಮೇಲೆಯೆ ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಗುರು ನೀಲಾವರ ರಾಮಕೃಷ್ಣಯ್ಯನವರಿಂದ ಹಾಡುಗಾರಿಕೆಯ ವ್ಯವಸ್ಥಿತ ಮಾರ್ಗದರ್ಶನ ದೊರೆತುದು. ಆದರೂ ಸ್ವರಜ್ಞಾನ ನನಗೆ ಕೂಡಿಬಾರದಿದ್ದುದು ಒಂದು ತೊಡಕನ್ನೆ ಸೃಷ್ಟಿಸಿತು.

ಶ್ರುತಿಗಾಗಿ ಹಾರ್ಮೋನಿಯಂ ಬಾರಿಸುತ್ತಿದ್ದರೂ, ಅದಕ್ಕೂ ನನ್ನ ಹಾಡುಗಾರಿಕೆಗೂ ಸಂಬಂಧ ಆಗೊಮ್ಮೆ ಈಗೊಮ್ಮೆ ಮಾತ್ರ ಎಂದು ನನಗೆ ಅರ್ಥವಾದುದು ರೇಡಿಯೋದಲ್ಲಿ ನಾನು ಹಾಡಿದ ಪದಗಳನ್ನು ಆಲಿಸಿದಾಗಲೇ. ಆಗಲೆ ನನ್ನ ಹರೆಯ ಮೂವತ್ತು ವರ್ಷ ಮೀರಿತ್ತು.

ಸಮ್ಮಾನದಂತೆ ಅವಮಾನವನ್ನೂ ಹೇಳಬಾರದೆಂಬ ಶಿಷ್ಟಾಚಾರ ಇರುವುದಾದರೂ, ತಾಳಮದ್ದಳೆಯಲ್ಲಾದ ಒಂದು ಅನುದ್ದಿಷ್ಟ ಅವಮಾನ ಪ್ರಸಂಗ ನನ್ನಲ್ಲಿ ಹಠ ಮೂಡಿಸಿತು. ಸ್ವರಜ್ಞಾನಕ್ಕಾಗಿ ಸಂಗೀತ ಕಲಿಯಬೇಕೆಂಬ ಹಠ. ಆದರೆ ಪಿಳ್ಳೆಗಳಾಗಿ ಕಲಿಯಬೇಕಾದ ಪಿಳ್ಳಾರಿಗೀತ ಈ ಹರೆಯವೇರಿದ ಮಳ್ಳನಿಗೆ ದಕ್ಕುವುದುಂಟೆ ಎಂಬ ಚಿಂತೆ.

ನನ್ನ ಸಹೋದ್ಯೋಗಿ ಎ. ಈಶ್ವರಯ್ಯ ಅವರು ತಮ್ಮ ಕೆಲಸದ ಬಿಡುವಿನಲ್ಲಿ ಸಂಗೀತದ ಒಂದೊಂದು ಧಾಟಿಯನ್ನು ಗುಣುಗುಣಿಸುವುದಿತ್ತು. ಅವರಂತೆ ಮಧ್ಯ ಸಪ್ತಕದಲ್ಲಿ ಮಧ್ಯಮದಿಂದ ಕೆಳಗೆ ನನ್ನ ಕೊರಳು ನುಡಿಯುತ್ತಿರಲಿಲ್ಲ. ಅದು ಯಾಕೆಂದು ನನಗೆ ಚಿಂತೆಯಿತ್ತು.

ಈ ಹಂತದಲ್ಲೆ ನನಗೆ ಉಡುಪಿ ವಾಸುದೇವ ಭಟ್ಟರ ಪರಿಚಯವಾದದ್ದು. ಪರಿಚಯ ವೃತ್ತಿಯ ಗುಂಪಿನವರೆಂದು. ಪತ್ರಕರ್ತರಾಗಿಯೂ, ಸಂಗೀತ ಶಿಕ್ಷಕರಾಗಿಯೂ ಕೆಲಸ ಮಾಡುತ್ತಿದ್ದ ವಾಸುದೇವ ಭಟ್ಟರು ಎಂಥವರಿಗೂ ಸಂಗೀತ ಜ್ಞಾನ ನೀಡಬಲ್ಲ ನಿಪುಣರೆಂಬುದು ಅರ್ಥವಾದದ್ದು ಆಗಲೆ. ಅನತಿಕಾಲದಲ್ಲಿ ಸರಳವರಸೆ, ಜಂಟಿವರಸೆ, ಅಲಂಕಾರಗಳು, ದಮ್‌ಸಾಧನೆ, ಪಿಳ್ಳಾರಿಗೀತಗಳನ್ನು ಅವರು ಹೇಳಿಕೊಟ್ಟರು. ನನಗೆ ಅಷ್ಟು ಸಾಕಿತ್ತು. ಸಂಗೀತ ಕಚೇರಿಯಲ್ಲಿ ಬರುವ ಎಲ್ಲ ವಿಷಯಗಳನ್ನೂ ಅವರು ಪರಿಚಯಿಸಿಕೊಟ್ಟರು.

1980ರ ದಶಕದಲ್ಲಾದ ಈ ಪ್ರಶಿಕ್ಷಣ ನನಗೆ ದಕ್ಷಿಣಾದಿ ಸಂಗೀತದ ಬಗೆಗೆ ಬಹಳವಾದ ಏನನ್ನೂ ಕೊಡದೆ ಇದ್ದರೂ, ಶಾಸ್ತ್ರಗ್ರಂಥಗಳ ಓದು, ತಿಳಿದುಕೊಳ್ಳುವಿಕೆಗಳನ್ನು ಸಾಧ್ಯ ಮಾಡಿಕೊಟ್ಟಿತು. ನಾನೊಬ್ಬ ಸಂಗೀತದ ಆಸ್ವಾದಕನಾದೆ. ಯಕ್ಷಗಾನ ಹಾಡುವಿಕೆಗಾಗಿ ಹಾರ್ಮೋನಿಯಂ ಪೆಟ್ಟಿಗೆ ಇರಿಸಿಕೊಂಡು ನನ್ನದೇ ಸ್ವರಸಾಧನೆ ನಡೆಸಲು ಸಾಧ್ಯವಾಯಿತು. ಎಲ್ಲಕ್ಕಿಂತ ವಿಶೇಷವೆಂದರೆ ಹಾರ್ಮೋನಿಯಂನಲ್ಲಿ 'ಕಪ್ಪು ಒಂದು' ಶ್ರುತಿ ಹಿಡಿದು 'ಮ'ದಿಂದ

ಕೆಳಗೆ ದನಿಯೇ ಇಲ್ಲದಿದ್ದ ನನಗೆ ವಾಸುದೇವ ಗುರುಕಾರುಣ್ಯದಿಂದ ಒಂದೆರಡು ವರ್ಷಗಳಲ್ಲಿ 'ಬಿಳಿ ಒಂದ'ರ 'ಮಂದ್ರ ಪಂಚಮ'ದವರೆಗೆ ಸುಲಭವಾಗಿ ಇಳಿಯುವಂತಾಯಿತು. ಪ್ರಯತ್ನಪಟ್ಟು, 'ಮಂದ್ರ ಷಡ್ಜ'ದವರೆಗೂ ತಲುಪುವುದು ಸಾಧ್ಯವಾಯಿತು.

ಒಬ್ಬನಿಗೆ ಪ್ರಾಕೃತಿಕವಾಗಿ ಒದಗಬೇಕಾದ ಶ್ರುತಿ, ಲಯ ಸ್ಪಂದನ ಗುಣ ಇರುವುದಾದರೆ, ಪ್ರಯತ್ನದಿಂದ ಸಾಕಷ್ಟು ಸಂಗೀತ ಜ್ಞಾನವನ್ನು ವಿಸ್ತರಿಸಿಕೊಳ್ಳಬಹುದು ಎಂಬುದನ್ನು ವಿದ್ವಾನ್ ವಾಸುದೇವ ಭಟ್ಟರು ನನ್ನ ಮೂಲಕ ತೋರಿಸಿಕೊಟ್ಟಿದ್ದಾರೆ.

ಇಷ್ಟನ್ನು ಹೇಳಿರುವುದು ಈ ಕಥಾನಾಯಕನ ಬಗೆಗೆ ಹೇಳುವುದಕ್ಕಾಗಿಯೇ. ಸದಾ ಶುಭ್ರ ವಸ್ತ್ರಧಾರಣೆ, ಶುಭ್ರ ನಗೆ - ಇವು ನನ್ನ ಗಾಯನದ ಗುರು ಉಡುಪಿ ವಾಸುದೇವ ಭಟ್ಟರ ಗುರುತುಗಳು. ಮೃದುವಾದ ಶಾರೀರ. ನಾದದ ಕಸರತ್ತನ್ನು ಹೇಗೆಲ್ಲ ಮಾಡಬಹುದೆಂಬುದನ್ನು ಲೀಲಾಜಾಲವಾಗಿ, ಗಟ್ಟಿಯಾಗಿ ಮಾಡಿತೋರಿಸಬಲ್ಲವರು. ಇಷ್ಟು ಯೋಗ್ಯತೆ ಇರುವ ಈ ಪುಣ್ಯಾತ್ಮನಿಗೆ ಯಾಕೆ ಪ್ರಚಾರ ಕಡಿಮೆಯೆಂದು ಅಚ್ಚರಿ ಪಟ್ಟಿದ್ದೆ. ಅವರು ಬರಿಯ ದಕ್ಷಿಣಾದಿ ಸಂಗೀತವೆಂದುಕೊಂಡಿದ್ದರೆ ಬಹುಶಃ ಇನ್ನೊಂದೇ ಆಕಾರಕ್ಕೆ ಬೆಳೆಯುತ್ತಿದ್ದರೋ ಏನೋ. ಕರ್ನಾಟಕದ ಮುಖ್ಯ ಸಂಗೀತಗಾರರಲ್ಲಿ ಒಬ್ಬರಾಗಿ ಅವರು ಮನ್ನಣೆ ಗಳಿಸಬಹುದಿತ್ತು.

ವಾಸುದೇವ ಭಟ್ಟರು ಅಂಥವರಲ್ಲ. ಬೇರೆ ತೆರನಾದ ವ್ಯಕ್ತಿ. ಗಾಯಕನೊ, ನಟನೊ ಆಗುವುದಕ್ಕಿಂತ ಹೆಚ್ಚಾಗಿ ಸಂಗೀತ ನಿರ್ದೇಶಕನಾಗಿ, ರಂಗ ನಿರ್ದೇಶಕನಾಗಿಯೆ ತಾನು ಗುರುತುಗೊಳ್ಳಬೇಕೆಂಬ ಹಠ ತೊಟ್ಟವರು. ಈ ಕ್ಷೇತ್ರಗಳಲ್ಲಿ ಅವರು ಗಳಿಸಿದ ಪ್ರಾವೀಣ್ಯ ನಿಜಕ್ಕೂ ಬೆರಗಾಗುವಂಥದ್ದು. ಅವರ ಕಾರ್ಯಕ್ಷೇತ್ರ ಉಡುಪಿಯ ಬದಲು ಬೇರೆ ಕಡೆ ಆಗಬೇಕಿತ್ತು ಎಂದೆನಿಸುತ್ತದೆ. ಸುಮಾರು ಮೂವತ್ತು ವರ್ಷಗಳ ಹಿಂದೆ, ಒಂದು ರಿಸ್ಕ್ ತೆಗೆದುಕೊಂಡು ಬೆಂಗಳೂರಿನಲ್ಲಿ ಇಳಿದುಕೊಳ್ಳುತ್ತಿದ್ದರೆ, ಭಟ್ಟರ ಹೆಸರು ಹೊನ್ನಪ್ಪ ಭಾಗವತರಂತೆ ಕರ್ನಾಟಕದ ಮನೆಮಾತು ಆಗುತ್ತಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಸಂಗೀತ ನಿರ್ದೇಶನ, ರಂಗಾಭಿನಯಗಳಿಗೆ ಸಂಬಂಧಿಸಿ ಅಷ್ಟು ಸಂಪತ್ತು ಎಂದೋ ಅವರಲ್ಲಿ ಸೇರಿತ್ತು.

ಭಟ್ಟರ ಹಿನ್ನೆಲೆ ಬಲು ದೊಡ್ಡದು. ತಂದೆ ಯು. ಸೀತಾರಾಮ ಭಟ್ಟರು ಉಡುಪಿ (ಮೇನ್) ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾಗಿ, ಪತ್ರಿಕಾ ಬಾತ್ಮೀದಾರರಾಗಿ, ಸ್ವಾತಂತ್ರ್ಯ ಆಂದೋಲನಕಾರರಾಗಿ, ಗಾಂಧೀವಾದಿಯಾಗಿ ಬಲು ದೊಡ್ಡ ಹೆಸರು.

ಇವರಿಗೆ ಇದ್ದ ಇನ್ನೊಂದು ದೊಡ್ಡ ಹಿನ್ನೆಲೆ ಎಂದರೆ ಪಿಟೀಲು ಕೆ. ಮಂಜುನಾಥಯ್ಯ. ಅವರು ಇವರ ತಾಯಿಯ ಸೋದರಮಾವ. ಮಂಜುನಾಥಯ್ಯ ಉಡುಪಿಯಲ್ಲಿ ಶಾಸ್ತ್ರೀಯ ಸಂಗೀತವನ್ನು ಹರಡಿದ ಪ್ರಮುಖರು. ಉಡುಪಿಯ ಪರ್ಯಾಯ ಮಠಕ್ಕೆ ಮೈಸೂರು ಮತ್ತಿತರ ಕಡೆಗಳಿಂದ ಬರುವ ಗಾಯಕರಿಗೆ ಪಿಟೀಲು ಸಾಥಿ ಮಂಜುನಾಥಯ್ಯನವರದೇ ಇರುತ್ತಿತ್ತು.

ಇವರ ಅಣ್ಣ ವೆಂಕಟರಮಣಯ್ಯ (ಮಲ್ಲಣ್ಣ) ಯಕ್ಷಗಾನ ಪ್ರಸಂಗಕರ್ತರಾಗಿದ್ದ ಭಾಗವತರು. ಯಕ್ಷಗಾನ ವಿಷಯ ಸಂಗ್ರಹಿಸಲು ಅವರಲ್ಲಿಗೆ ಶಿವರಾಮ ಕಾರಂತರು ಬರುತ್ತಿದ್ದರು.

ಉಡುಪಿಯಲ್ಲಿ ಕೆ. ಮಂಜುನಾಥಯ್ಯನವರೂ, ಮಂಗಳೂರಿನಲ್ಲಿ ಫಿಡ್ಲ್ ಕೃಷ್ಣರಾಯರೂ ಸಮಕಾಲೀನ ಸಂಗೀತ ಗುರುಗಳಾಗಿ ನಿರ್ವಹಿಸುತ್ತಿದ್ದರು. ಮಂಜುನಾಥಯ್ಯನವರ ನೂರಾರು ಶಿಷ್ಯರಲ್ಲಿ, ಎದ್ದು ಕಾಣುವ ಹೆಸರುಗಳೆಂದರೆ, ಪ್ರೊ. ಎಂ. ರಾಜಗೋಪಾಲಾಚಾರ್ಯ, ಸೂರಾಲು ಪರಮೇಶ್ವರ ಭಟ್ಟರು, ಸರಸ್ವತಿಬಾಯಿ ರಾಜವಾಡೆ, ಸುಂದರಾಚಾರ್ಯ ಮೊದಲಾದವರು. ತಾನು ಮಂಜುನಾಥಯ್ಯನವರ ಕೊನೆಯ ಶಿಷ್ಯ ಎಂದು ವಾಸುದೇವ ಭಟ್ಟರು ಹೇಳುತ್ತಾರೆ. ಇವರು ಗುರುಕುಲ ರೀತಿಯ ಶಿಕ್ಷಣದಲ್ಲಿ ತ್ಯಾಗರಾಜರು ಮೊದಲಾದ ವಾಗ್ಗೇಯಕಾರರ ಕೃತಿಗಳಲ್ಲದೆ, ದಾಸರ ಪದಗಳ ಸಹಿತ 200 ಕೃತಿಗಳನ್ನು ಕ್ರಮಪತ್ತಾಗಿ ಕಲಿತರು. ಸುಮಾರು ಆರು ವರ್ಷಗಳ ಅಧ್ಯಯನ ಇವರಿಗೆ ವಿದ್ವತ್ತನ್ನು ಖಾತರಿಪಡಿಸಿತು.

ಭಟ್ಟರನ್ನು 'ರಾಗಗಳ ಶಿಲ್ಪಿ' ಎಂದು ಧಾರಾಳ ಹೇಳಬಹುದು. ನೂರಾರು ರಾಗಗಳನ್ನು ನೀರು ಕುಡಿದಂತೆ ಸುಲಭವಾಗಿ ನಿರೂಪಿಸಬಲ್ಲರು. ಅವರ ಸ್ವರಸಂಗತಿಗಳ ಚಿತ್ತಾರದ ಕೌಶಲ, ಬೇಕಾದರೆ ಕಸರತ್ತು ದಂಗುಬಡಿಸುವಂಥದು. ದಾಸರ ಪದಗಳಿಗೆ ಸ್ವರ ಸಂಯೋಜಿಸಿ ಕೊಡುವುದು, ಅದಕ್ಕೆ ಆಧುನಿಕ ವಾದ್ಯಮೇಳ ಅಳವಡಿಸಿ, ನಾದದ ಒಡವೆಗಳಿಂದ ಅಲಂಕರಿಸುವುದು - ಇವುಗಳಲ್ಲೆಲ್ಲ ಅಪಾರವಾದ ಶಕ್ತಿ ಅವರಿಗಿದೆ. ಶಾಸ್ತ್ರೀಯ ರಾಗಗಳನ್ನು ಗೀತಗಳಿಗೆ ಅಳವಡಿಸುವಾಗ ಇನ್ನಷ್ಟು ರಂಜನೆ ತರಲು ಅನ್ಯಸ್ವರ ಹಚ್ಚುವ ಅವರ ಯುಕ್ತಿ ಬೆರಗಾಗುವಂಥದು. ಅವರು ಎಂದೋ ಸಿನಿಮಾ ನಿರ್ದೇಶಕರಾಗಬೇಕಿತ್ತು. ಆಗಿಯೂ ಇದ್ದಾರೆ. ಅವರ ಬದುಕಿನ ಹಳವಂಡವೂ ಅದೇ ಆಗಿತ್ತಲ್ಲ?

ಶಾಸ್ತ್ರೀಯ ಸಂಗೀತವನ್ನು ಕೇಂದ್ರವಾಗಿ ಇರಿಸಿಕೊಂಡು ದಕ್ಷಿಣ ಭಾರತದ ಎಲ್ಲ ಭಾಷೆಗಳು ಹಾಗೂ ಹಿಂದಿ ಪದ್ಯಗಳನ್ನು ಹಾಡುವ ತಂಡವೊಂದನ್ನು 'ನಾದವೈಭವಂ' ಎಂಬ ಲಾಂಛನದಲ್ಲಿ ಅವರು ಸಂಘಟಿಸಿ ಈಗ ಇಪ್ಪತ್ತೈದು ವರ್ಷಗಳಾದುವು. ದಕ್ಷಿಣ ಭಾರತದ ವಿವಿಧ ಕೇಂದ್ರಗಳಲ್ಲಿ ಈ ಸಂಸ್ಥೆಯ ಗಾನಮೇಳ ನಡೆದಿದೆ.

ಭಾವಗೀತ ಗಾಯನ ಶಾಸ್ತ್ರೀಯ ಸಂಗೀತ ಹಾಡುಗಾರಿಕೆಗಿಂತ ಕೆಳಗಿನದು ಎಂಬ ಅಭಿಪ್ರಾಯ ವಾಸುದೇವ ಭಟ್ಟರಿಗೆ ಸರಿಕಾಣದು. ಸಂಗೀತ ಎಂದರೆ ಎಲ್ಲವೂ ಸಂಗೀತವೇ. ಸ್ವರಗಳ ನಾನಾತ್ವದ ನಿರೂಪಣೆ ಸುಗಮ ಸಂಗೀತದಲ್ಲೂ ಇದೆ, ಶಾಸ್ತ್ರೀಯ ಸಂಗೀತದಲ್ಲೂ ಇದೆ ಎನ್ನುವ ಭಟ್ಟರು, ತನ್ನ ಅಜ್ಜನಂತೆ ತಾನೂ ತ್ಯಾಗರಾಜರ ಕೃತಿಯಂತೆ ಪುರಂದರ ದಾಸರ ಪದಗಳನ್ನು ಹಾಡಲು ಸಾಧ್ಯ ಎಂದು ತೋರಿಕೊಟ್ಟಿದ್ದಾರೆ. ಅವರ ಕುತೂಹಲ ಪಾಶ್ಚಾತ್ಯ ಸಂಗೀತದಲ್ಲೂ ಕೆಲಸ ಮಾಡಿದೆ.

ಧರ್ಮಪತ್ನಿ ಶ್ರೀಮತಿ ಸುನಂದಾ, ಮಕ್ಕಳು ವಸುದಾ, ಶುಭಾ, ಸುಮಾ, ಸ್ಮಿತಾ - ಹೀಗೆ ವಾಸುದೇವ ಭಟ್ಟರದು ಸಂಗೀತಮಯ ಸಂಸಾರ.

ಭಟ್ಟರ ಬದುಕಿನ ಇನ್ನೊಂದು ಮುಖವನ್ನು ವಿವರಿಸಿದರೆ ಅವರೆಲ್ಲಿ ತೊಡಕಿಗೆ ಸಿಕ್ಕಿಕೊಳ್ಳುವರೋ ಎಂಬ ಭಯವಿದೆ. ಅದು, ಅವರು ಬಳಗದ ಇತರರ ಬಗೆಗೆ ವಹಿಸುವ ಕಾಳಜಿ. ತಾನೇ ಅಸ್ವಸ್ಥನಾದರೂ, ತನಗಿಂತ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮೃದು ಅಂತಃಕರಣ, ಎಂಥ ಸಾಹಸಕ್ಕೂ ತಯಾರಾಗುವಿಕೆ ಅವರಿಗೇ ಮೀಸಲು. ಒಂದು ಸಂದರ್ಭದಲ್ಲಿ ಒಬ್ಬ ಗೆಳೆಯರ ಅಸ್ವಾಸ್ಥ್ಯದ ವೇಳೆ ಇವರು ವೈದ್ಯರನ್ನು ಕರೆದೊಯ್ದು ಚಿಕಿತ್ಸೆ ಕೊಡಿಸಿದ ರೀತಿಗೆ ದಂಗಾಗಿದ್ದೇನೆ. ಇಂಥಲ್ಲಿ ಅವರ ಪರಿಗಣನೆ ಮನುಷ್ಯತ್ವವೊಂದೇ, ಮತ್ತೇನೂ ಅಲ್ಲ. ಕೊಟ್ಟ ಮಾತನ್ನು ನಡೆಸದ ಎಳೆಯನೊಬ್ಬನನ್ನು ಸ್ವಜನವೆಂದು ಬಗೆಯದೆ ತಿರಸ್ಕರಿಸಿದ್ದನ್ನು ಕಂಡಿದ್ದೇನೆ. ಇಂಥ ಮೌಲ್ಯಗಳಿರುವಲ್ಲಿ ಮನುಷ್ಯನಿಗೆ ಅಡಿಗಡಿಗೂ ಕಷ್ಟ ತಪ್ಪಿದ್ದಲ್ಲ ಎಂಬುದೇ ಲೌಕಿಕ ಅನುಭವ. ಆದರೂ ತನಗೆ ಬದುಕಿನಲ್ಲಿ ತೃಪ್ತಿ ಇದೆಯೆಂಬ ಭಾವ ಅವರದು.

ಬಹುಶಃ ಅವರ ಈ ಬಗೆಯ ಪ್ರಸನ್ನತೆಗಾಗಿಯೇ ವಾಸುದೇವ ಭಟ್ಟರು 'ಛಾತ್ರ ಸಂಸದಿ ಲಬ್ಧಕೀರ್ತಿಃ'. ಕಲಿಯುವಲ್ಲಿನ ವೈಫಲ್ಯಕ್ಕಾಗಿ ಅವರಾರಲ್ಲೂ ಮುನಿದವರಲ್ಲ. ಯಾರೂ ಅವರಿಗೆ ಅಮುಖ್ಯರಲ್ಲ. ಇದರಿಂದಲೆ ನನ್ನಂತೆ ಹರೆಯವೇರಿದವರು ಇವತ್ತಿಗೂ ಗಾಯನ ಕಲಿಯಲು ಅವರ ಹಾರ್ಮೋನಿಯಂನ ಎದುರು ಸುತ್ತುವರಿಯುವರು. ಈಗೀಗ ಉನ್ನತ ಸರಕಾರಿ ಅಧಿಕಾರಿಗಳೂ ಇವರ ಶಿಕ್ಷಾಕಕ್ಷೆಗೆ ಸೇರುತ್ತಿದ್ದಾರೆ. ಎಂಥವರಿಂದಲೂ ಇವರು ಹಾಡು ಹಾಡಿಸುವುದನ್ನು ಕಂಡು ಖುಷಿಯಾಗಬೇಕು.

ಈಗ ಅವರದೊಂದು ಹೊಸ ಶೋಧನೆ ಬಗೆಗೆ ಏನೂ ಗುಟ್ಟಾಗಿ ಉಳಿದಿಲ್ಲ. ತಳಮಳ, ಖಿನ್ನತೆಯಂಥ ಮಾನಸಿಕ ಸಮಸ್ಯೆ, ತಲೆನೋವಿನಂಥ ದೈಹಿಕ ಸಮಸ್ಯೆಗಳಿಗೆ ಸಂಗೀತದ ಮೂಲಕ ಚಿಕಿತ್ಸೆ ಸಾಧ್ಯ ಎನ್ನುವ ಅವರ ಅಭಿಪ್ರಾಯದಲ್ಲಿ ಶೋಧನೆ, ಪ್ರಾಯೋಗಿಕ ಸ್ಥಿರೀಕರಣದ ಅವಶ್ಯಕತೆಗಳಿವೆ. ಅದೇನಿದ್ದರೂ ಅವರೆನ್ನುವ 'ನಾದ ಥೆರಪಿ' ಅವರ ಮನಸ್ಸಿನೊಳಗೆ ಕೂತಿರುವ ಕೂಸು. ಅದು ವಿಕಸಿತವಾಗಿ ಹೇಗೆ ಕಾರ್ಯಪ್ರವೃತ್ತವಾಗುತ್ತದೆ ಎಂದು ನೋಡುವ ಕುತೂಹಲವಂತೂ ಇದೆ.

ನಾದೋಪಾಸಕ

✍ ಡಾ. ಉಪ್ಪಂಗಳ ರಾಮ ಭಟ್

ಉಡುಪಿ ವಾಸುದೇವ ಭಟ್ಟರಂತಹ ಕಲಾತಪಸ್ವಿಯ ಸನಿಹದಲ್ಲೇ, ಉಡುಪಿ ನಗರದಲ್ಲೇ ಸುಮಾರು ಮೂರು ದಶಕಗಳಿಂದಲೇ ನೆಲಸಿಕೊಂಡಿದ್ದರೂ, ಪ್ರಸ್ತುತ ಲೇಖಕನು ಬಹಳಷ್ಟು ವರ್ಷ ಕಾಲ ಅವರ ಸಂಪರ್ಕ, ಸಹವಾಸದ ಭಾಗ್ಯ ಪಡೆಯದಿದ್ದುದು ಸೋಜಿಗ ಮಾತ್ರವಲ್ಲ, ನಾಚಿಕೆಯ ವಿಷಯವೆನಿಸುತ್ತದೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಮುಖ್ಯ ಕಾರಣವೆಂದರೆ, ಇತ್ತೀಚೆಗಿನ ವರ್ಷಗಳಲ್ಲಿ, ಅವರು ನೆಲೆಸಿರುವ ಊರಿನಲ್ಲಿ ಅವರ ಪ್ರಚಾರವಿರಲಿಲ್ಲ. ಇಲ್ಲಿ ಅವರ ಕಾರ್ಯಕ್ರಮಗಳೂ, 'ಹಿತ್ತಲ ಗಿಡ ಮದ್ದಲ್ಲ'ವೆಂಬಂತೆ ನಡೆಯುತ್ತಿರಲಿಲ್ಲ, ನಡೆದರೂ ಪ್ರಚಾರವಿಲ್ಲ, ಅವರು ಪ್ರಚಾರವನ್ನು ಬಯಸುತ್ತಿರಲಿಲ್ಲ. ಪ್ರಸ್ತುತ ಲೇಖಕನಲ್ಲಿ ಎಳವೆಯಲ್ಲೇ ಇದ್ದ ಸಂಗೀತ ಪ್ರೇಮ, ಅರುವತ್ತು ವರ್ಷದಲ್ಲಿ ಹೂಬಿಡುವ ಬಿದಿರಿನಂತೆ, ಕಾಲೇಜು ಪ್ರೊಫೆಸರ್ ಹುದ್ದೆಯಿಂದ ನಿವೃತ್ತನಾಗಿ ಎರಡು ವರ್ಷಗಳಲ್ಲಿ (16-2-2000) ಜಾಗೃತವಾಯಿತು. ಆರು ದಶಕಗಳ ಈ ಇಳಿವಯಸ್ಸಿನವನಿಗೆ ಇನ್ನು ಸಂಗೀತ ಕಲಿಯುವ ಹುಚ್ಚೇ ಎಂದು ನಾಚಿಕೆಯಿಂದ ಹಿಂಜರಿದಿದ್ದ ನನಗೆ, ಅವರ ಪರಿಚಿತರಿಂದ, ಖಂಡಿತವಾಗಿ ಅವರು ಯಾರನ್ನೂ ನಿರಾಶೆಗೊಳಿಸುವವರಲ್ಲವೆಂಬ ಭರವಸೆ ದೊರೆತ ಮೇಲೆ ಅವರನ್ನು ಸ್ವತಃ ಭೇಟಿಯಾದ ದಿನದಿಂದಲೇ ಕೆಲವು ಹಾಡುಗಳನ್ನು ಅಭ್ಯಾಸ ಮಾಡತೊಡಗಿದೆ. "ಸಂಗೀತವನ್ನು ಕಲಿಯತೊಡಗಿದೆ" ಎಂದು ಹೇಳುವ ಧೈರ್ಯ ನನಗಿಲ್ಲ. ಮತ್ತೆ ವಿಚಾರಿಸಿದಾಗ, ನನಗಿಂತಲೂ ಹೆಚ್ಚು ವಯಸ್ಸಿನ, ಎಪ್ಪತ್ತನಾಲ್ಕು ವರ್ಷ ಪ್ರಾಯದ ವಯಸ್ಸಿನವರೂ ಅವರ ಶಿಷ್ಯವೃತ್ತಿಗೆ ಒಳಗಾಗಿದ್ದರು. ಅವರ ಸಂಗೀತ ಕ್ಲಾಸು ನಡೆಯುವಲ್ಲಿ ಹಾರ್ಮೋನಿಯಂ, ವೀಣೆ, ತಂಬೂರಿ, ಗಿಟಾರ್, ಪಿಟೀಲು, ಮೋರ್ಚಿಂಗ್ ಮೊದಲಾದ ಹಲವು ಸಂಗೀತದ ಉಪಕರಣಗಳಿವೆ. ಈ ವಾದ್ಯಗಳೆಲ್ಲವನ್ನೂ ಅವರು ನುಡಿಸಬಲ್ಲವರು, ಕಲಿಸುವವರೂ ಆಗಿದ್ದಾರೆ. "ವಿದ್ಯೆಗೆ ಪ್ರಾಯದ ಮಿತಿಯಿಲ್ಲ, ಕಲಿಯುವಿಕೆ ಜೀವನದಲ್ಲಿ ನಿತ್ಯ, ನಿರಂತರ" ಎಂದು ನಮ್ಮನ್ನು ಹುರಿದುಂಬಿಸುತ್ತಿದ್ದರು. ನಮ್ಮ ಕಲಿಯುವಿಕೆ ನಿಧಾನವೆಂದು ನಿರಾಸೆ ಪಟ್ಟಾಗ, ಪ್ರೋತ್ಸಾಹಿಸಿ ಧೈರ್ಯ ತುಂಬುವವರು, ಎಳೆಯರನ್ನು ಬಹಳ ಪ್ರೀತಿಯಿಂದ, ತಮಾಷೆಯಿಂದ ನಡೆಸಿಕೊಳ್ಳುತ್ತಾರೆ. ಪಾನೀಯ, ಬಿಸ್ಕತ್ತುಗಳು ಅಲ್ಲಿ ಸದಾ ಸಿದ್ಧ. ಉದಾರದಾನ, ಮಕ್ಕಳಿಗೆ ಸಿಹಿ ತಂದುಕೊಟ್ಟು ಸುಮ್ಮಸುಮ್ಮನೇ ಇಂದು ನನ್ನ ಜನ್ಮದಿನ ಎಂದು ನಗೆಯಾಡುವುದು, ಹಾಡಿನಲ್ಲಿ ಹಾಡುವವನ ಹೆಸರನ್ನೇ ಸೇರಿಸಿ, ಹಾಡಿಸಿ

ತಮಾಷೆಯಿಂದ ನಗುವುದು, ಮಕ್ಕಳಿಗೆ ಕಲಿಕೆ ಒಂದು ಲೀಲಾಜಾಲ ಕ್ರಿಯೆಯಾಗುತ್ತದೆ. ಬಾಗಿಲ ಹೊರಗೆ ಕಾಯುವ ನಾಯಿಯನ್ನೂ, ಬಾಗಿಲು ತೆಗೆದು ಒಳಗೆ ಕರೆದು, ಅದಕ್ಕೆ ಬಿಸ್ಕತ್ತು ತಿನ್ನಿಸಿ ಹೊರಕ್ಕೆ ಕಳುಹಿಸುವ ಪ್ರಾಣಿದಯೆಯನ್ನೂ ಅಲ್ಲೇ ನೋಡಿ ಕಲಿಯಬೇಕು. ಫೀಸನ್ನು ಸರಿಯಾಗಿ ತಂದುಕೊಟ್ಟರೆ ಕೊಟ್ಟರು, ಇಲ್ಲವಾದರೆ ಕೇಳುವ ಕ್ರಮವಿಲ್ಲ. ಸರಳವರಸೆ, ಜಂಟಿವರಸೆ, ಗೀತೆ, ವರ್ಣ, ಕೀರ್ತನೆ ಇಷ್ಟೇ ಅಲ್ಲ, ಜಾನಪದ ಗೀತೆ, ಭಾವಗೀತೆ, ಆಯ್ದ ದಾಸರ ಹಾಡುಗಳು - ಹೀಗೆ ವೈವಿಧ್ಯಯುತವಾಗಿ ಆಸಕ್ತಿ ಹೆಚ್ಚಿಸುವಂತಹ ಪಾಠ.

ಅವರ ಪಾಠದ ಶ್ರದ್ಧೆ ಎಷ್ಟೆಂದರೆ, ರಾತ್ರಿಯಿಡೀ ಪ್ರಯಾಣ ಮಾಡಿ ನಿದ್ದೆಗೆಟ್ಟು ಬಂದರೂ ದಣಿವಾರಿಸಿಕೊಳ್ಳದೆ, ಮರುದಿನ ಏಳೂವರೆ ಗಂಟೆಯ ಹೊತ್ತಿಗೇ ಎಂದಿನಂತೆಯೇ ಪಾಠ ಮಾಡಲು ಸಿದ್ಧರಾಗುತ್ತಾರೆ. ಮೂರು ದಶಕಕ್ಕಿಂತ ಹೆಚ್ಚಿನ ಅಧ್ಯಾಪನ ಅಭ್ಯಾಸದಿಂದಲೇ ಸ್ವರ, ಹಾರ್ಮೋನಿಯಂ ಯಾವುದೂ ತಪ್ಪುವ ಸಂಭವವೇ ಇಲ್ಲ. ಅಭ್ಯಾಸ ಮಾಡಿದಂತೆ ಹಾಡು ನಾಜೂಕಾಗುವುದನ್ನು ಹಾಡಿ ತೋರಿಸುತ್ತಾರೆ.

ನನ್ನ ಮತ್ತು ಅವರ ಆಸಕ್ತಿ - ಸಂಗೀತ, ಸಾಹಿತ್ಯ ಒಂದೇ ಆದುದರಿಂದ ನಮ್ಮೊಳಗೆ ಹಾಲುನೀರಿನ ಸಂಬಂಧ, ಹಾಲು ಹಾಲಿನ ಸಂಬಂಧ ಬೆಳೆಯಿತು. ಗುರು ಶಿಷ್ಯ ಸಂಬಂಧವನ್ನು ಮೀರಿದ ಆತ್ಮೀಯತೆಯ ಬಂಧ, ಸುಖದುಃಖಗಳ ವಿನಿಮಯದ ಸಾಮರಸ್ಯ ಬೆಳೆಯಿತು. ತಮ್ಮ ಮನೆಯಲ್ಲಿ ನಡೆದ ಒಂದು ಧಾರ್ಮಿಕ ಕ್ರಿಯೆಗೆ ನಮ್ಮನ್ನು, ದಂಪತಿಗಳನ್ನು ಆಹ್ವಾನಿಸಿ ಅತಿಥಿ ಪೂಜೆ ಮಾಡಿ, ದಾನದಕ್ಷಿಣೆ, ಭೋಜನ ನೀಡಿ ಉಪಚರಿಸಿದ ಅವರ ಪ್ರಾಂಜಲ ಮನಸ್ಸು ಎಷ್ಟು ಸುಸಂಸ್ಕೃತ, ಉದಾರವೆಂದು ಬಣ್ಣಿಸಲಾರೆ. ಅವರು, ಯಾವುದೇ ತಮ್ಮ ಕಾರ್ಯಕ್ರಮದಲ್ಲಿ ಈ ಲೇಖಕನನ್ನು ಸೇರಿಸಿಕೊಳ್ಳದಿರುತ್ತಿರಲಿಲ್ಲ. ಕಾರ್ಯನಿರ್ವಾಹಕಗಿರಿಯೋ, ಉದ್ಘಾಟಕಗಿರಿಯೋ ಏನಾದರೊಂದು ಗಿರಿಗೆ ನನ್ನನ್ನು ಆರೋಹಿಸುತ್ತಿದ್ದರು. ನನ್ನ ಪಾಠದ ಅವಧಿ ತಪ್ಪಿಹೋಗದಂತೆ, ತಪ್ಪುವುದಿದ್ದರೆ ಮುನ್ಸೂಚನೆ ಕೊಡುವ ಎಚ್ಚರ. ಅವರ 'ನಾದವೈಭವಂ' ಬಳಗದ ಸಾಹಿತ್ಯ ಪ್ರತಿನಿಧಿ ಎಂದೇ ನನ್ನನ್ನು ಗುರುತಿಸಿ, ನನ್ನ ಸಾಹಿತ್ಯಕೃತಿಗಳನ್ನು ಮೆಚ್ಚಿ, ಅವರ ವಿದ್ಯಾರ್ಥಿಗಳಿಗೆ ಹಂಚುತ್ತಾರೆ. ತೆಲುಗು ಹಾಡುಗಳಿಗೆ ಬದಲು ಕನ್ನಡದವನ್ನು ಬರೆಯಲು ಪ್ರೋತ್ಸಾಹಿಸುತ್ತಾರೆ. ಅವನ್ನೇ ಮಕ್ಕಳಿಗೆ ಕಲಿಸಿ, ಅವರಿಂದ ಹಾಡಿಸಿ, ಕೇಳಿಸಿ ಬರೆದವನ ಮನಸ್ಸಿಗೆ ಸಾರ್ಥಕತೆಯ ತೃಪ್ತಿಯನ್ನುಂಟುಮಾಡುತ್ತಾರೆ. ಅವರ ಶಿಷ್ಯರ ಅಭ್ಯಾಸಕ್ಕಾಗಿ ಅಲ್ಲಲ್ಲಿ ಅವರಿಂದ ಕಛೇರಿ ಏರ್ಪಡಿಸುವಾಗಲೆಲ್ಲಾ ಪದ್ಯಗಳ ಹಿನ್ನೆಲೆಯನ್ನು ಚುಟುಕಾಗಿ, ರೋಚಕವಾಗಿ ಹೇಳುವ ನಿರೂಪಕನಾಗುವ ಅವಕಾಶವನ್ನು ಈ ಲೇಖಕನಿಗೆ ತಪ್ಪದೇ ಕೊಟ್ಟು, ತಮ್ಮ ಪ್ರೀತಿ ವಿಶ್ವಾಸಗಳನ್ನು ತಮ್ಮ ವಿದ್ಯಾರ್ಥಿಗಳಿಗೆ ತೋರಿಸಿದ್ದರಿಂದ ಆ ವಿದ್ಯಾರ್ಥಿಗಳಿಗೂ ಅವರ ಅಧ್ಯಾಪಕರಲ್ಲಿದ್ದಷ್ಟೇ ಗೌರವ, ಈ ಬಡ ನಿರೂಪಕನಿಗೂ ಸಿಗುವಂತೆ ಮಾಡುವ, ನಿರ್ಮತ್ಸರದ, ಇನ್ನೊಬ್ಬರ ಒಳಿತನ್ನು ಮೆಚ್ಚುವ

ಅವರ ಗುಣ ಅನ್ಯತ್ರ ದುರ್ಲಭ. ದೂರದೂರುಗಳಿಗೂ ಸ್ವಂತ ವೆಚ್ಚದಿಂದ ವಾಹನ ಮಾಡಿ, ದಾರಿಮಧ್ಯದಲ್ಲಿ ತಿಂಡಿತೀರ್ಥದ ಉಪಚಾರ ನೀಡಿ, ಕರಕೊಂಡು ಹೋಗಿ, ಮನೆಗೇ ತಂದುಬಿಡುವ ಸೌಜನ್ಯ. ಇನ್ನೂ ಆರಂಭದ ಹಂತದಲ್ಲೇ ಇದ್ದರೂ, ಹಾಡಿನಲ್ಲಿ ಪರಿಣತನಲ್ಲದ ಈ ಲೇಖಕನಿಗೆ ಪ್ರಾಯೋಗಿಕವಾಗಿ ಹಾಡಲು ಅವಕಾಶವಿತ್ತು ಪ್ರೋತ್ಸಾಹಿಸಿದ್ದ ಅವರ ಉದಾರತೆಯನ್ನು ಮರೆಯಲುಂಟೆ? ಏನೋ ಸಣ್ಣ ಗೌರವ ಸಲ್ಲಿಸಿದ್ದನ್ನು ಮೆಚ್ಚಿ, ಮತ್ತೆ ಮತ್ತೆ ನೆನೆಯುವ, ಯಾವ ಕಾರಣದಿಂದಲೂ ಇನ್ನೊಬ್ಬರಿಗೆ ತನ್ನಿಂದ ನೋವಾಗಬಾರದೆಂಬ, ಇತರರು ತನ್ನನ್ನು ನೋಯಿಸಿದರೂ ಅದನ್ನು ಮೌನದಿಂದ ಸಹಿಸುವ ಅಸಾಧಾರಣ ಪ್ರವೃತ್ತಿ.

ಅವರ ಈ ಸೌಜನ್ಯ, ಸಜ್ಜನಿಕೆ, ದಾಕ್ಷಿಣ್ಯ ಪ್ರವೃತ್ತಿಗಳನ್ನು ದುರುಪಯೋಗ ಪಡಿಸಿದರು, ಸ್ನೇಹದ ನಟನೆ ಮಾಡಿದ ಕುಯುಕ್ತಿಗಳು. ಲಕ್ಷಗಟ್ಟಲೆ ಹಣಕ್ಕೆ ಜಾಮೀನು ಸಲ್ಲಿಸಿ, ಕ್ಯಾಸೆಟ್ಟನ್ನು ಮಾರಲು ತೆಗೊಂಡು ಮಾರಿ ಹಣ ಕೊಡದೆ, ಕೈಕಡ ತೆಗೆದುಕೊಂಡು ವಾಪಾಸು ಕೊಡದೆ, ಹೀಗೆ ನಾನಾ ರೀತಿಯಲ್ಲಿ ಆರ್ಥಿಕವಾಗಿ ಮೋಸ ಹೋದ, ವಿಶ್ವಾಸದ್ರೋಹಕ್ಕೆ ಒಳಗಾದ ಅವರ ಅಂತರಂಗದ ನೋವು ಬೇರೆಯವರಿಗೆ ತಿಳಿಸುವಂತಹದೂ ಅಲ್ಲ, ತಿಳಿಸಿ ಪ್ರಯೋಜನವೂ ಇಲ್ಲ. ಕಲಾಕ್ಷೇತ್ರದಲ್ಲಿ ಎಷ್ಟು ಪ್ರಯತ್ನಶೀಲರಾಗಿ ಸಫಲರಾದರೋ, ಆರ್ಥಿಕ ಕ್ಷೇತ್ರದಲ್ಲಿ ಅಷ್ಟೇ ವಿಫಲರಾದರು. ಎಷ್ಟೋ ಹಣ ಕೈಗೆ ಬಂದುಹೋದರೂ ಅದೇ ಹಳೆ ಕುಂಬು ಮನೆಯ ವಾಸ ತಪ್ಪಲಿಲ್ಲ. ಎಷ್ಟು ಬೇಡವೆಂದರೂ ನಮ್ಮಂಥವರ ಹೊಸತಾಗಿ ಪ್ರಕಟವಾದ ಪುಸ್ತಕಗಳನ್ನು ಕೊಂಡು, ಶಿಷ್ಯರಿಗೆ ಆ ಪುಸ್ತಕಗಳನ್ನು ಕೊಟ್ಟು, ಪುಸ್ತಕಗಳನ್ನು ಪ್ರಶಂಸಿಸಿ ಪ್ರೋತ್ಸಾಹಿಸುವರು. ಇಂತಹ ಉತ್ತಮ ಗುಣನಡತೆಯವರಿಗೂ ಅವರ ಆತ್ಮೀಯರೇ ಮೋಸ ಮಾಡಿದರೆಂದರೆ ನಂಬಬಹುದೇ?

'ಸಂಗೀತದಿಂದ ರೋಗಚಿಕಿತ್ಸೆ' ಕುರಿತ ಸಂಶೋಧನ ಮಹಾಪ್ರಬಂಧವನ್ನು ಪ್ರಕಟಿಸುವುದು, ಶ್ರೀಕೃಷ್ಣನ ಜೀವನಗಾಥೆಗೆ ಸಂಬಂಧಿಸಿದ 'ಮನಮೋಹನ ಕೃಷ್ಣ' ನೃತ್ಯರೂಪಕವನ್ನು ತನ್ನ ಶಿಷ್ಯರಿಂದಲೇ ಸಿದ್ಧಪಡಿಸಿ ಹಲವೆಡೆ ಪ್ರದರ್ಶಿಸುವುದು, ಸಂಗೀತ ನಿರ್ದೇಶನ ಮಾಡಿ ಹಲವಾರು ಉತ್ತಮ ಕ್ಯಾಸೆಟ್ಟುಗಳನ್ನು ಹೊರತರುವುದೇ ಮೊದಲಾದ ಅವರ ಕನಸುಗಳು ಎಂದಾದರೊಮ್ಮೆ ನನಸಾಗಬಹುದೆಂಬ ವಿಶ್ವಾಸ ಅವರಿಗೆ. ಹಲವಾರು ಕಷ್ಟಕೋಟಲೆಗಳ ಮಧ್ಯದಲ್ಲೂ ಶಿಷ್ಯರಿಗೆ ನಿರ್ವಂಚನೆಯಿಂದ ವಿದ್ಯಾದಾನ ಮಾಡುವ ಇಂತಹ ಗುರುಗಳು, ಅದರಲ್ಲೇ ತಮ್ಮ ನೆಮ್ಮದಿ, ತೃಪ್ತಿಯನ್ನು ಕಾಣುವ ಗುರುಗಳು, ಅದಕ್ಕಿಂತ ಹೆಚ್ಚೇನು ಬೇಕು ಎನ್ನುವ ಗುರುಗಳು ಈ ಕಾಲದಲ್ಲಿ ಎಷ್ಟು ಮಂದಿ ಇರಬಹುದು?

[ಡಾ. ಉಪ್ಪಂಗಳ ರಾಮ ಭಟ್ಟರ ವಿಶಿಷ್ಟ ಕೃತಿ 'ನೆಲಸಂಪಗೆ'ಯ ಆಯ್ದ ಭಾಗ]

ಅನನ್ಯ ಗುರುವರ್ಯರು

✍ ಸುಮಾ ಎಲ್. ಎನ್. ಶಾಸ್ತ್ರಿ

ಉಡುಪಿಯವಳೇ ಆದ ನನಗೆ ಉಡುಪಿ ವಾಸುದೇವ ಭಟ್ಟರು ಸಂಗೀತ ಗುರುವರ್ಯರಾಗಿ ದೊರೆತದ್ದು ನನ್ನ ಪೂರ್ವಪುಣ್ಯವಿಶೇಷವೆಂದೇ ತಿಳಿದಿದ್ದೇನೆ. ಒಂದಿಷ್ಟು ಸಂಗೀತ ಕಲಿತ ನನ್ನ ತಾಯಿ ರಮಾದೇವಿ ನನ್ನನ್ನೂ, ನನ್ನ ಅಕ್ಕ ಪ್ರೇಮಲತಾಳನ್ನೂ ಅವರ ಮಡಿಲಿಗೆ ಹಾಕಿದರು. ನಮ್ಮ ತಂದೆ ಶ್ರೀನಿವಾಸ ಭಟ್ಟರೂ ಪ್ರೋತ್ಸಾಹ ನೀಡಿದರು. ಎಳವೆಯಿಂದಲೂ ನನ್ನನ್ನು ಎತ್ತಿ ಆಡಿಸಿದ ಗುರುವರ್ಯರು ನನ್ನನ್ನು ಶಿಷ್ಯೆಯಾಗಿ ಸ್ವೀಕರಿಸಿದಾಗ ನನ್ನ ಪ್ರಾಯ ಕೇವಲ ಎಂಟು ವರ್ಷ.

ಕಲಿಕೆಯ ಒಂದೇ ವರ್ಷದಲ್ಲಿ ನಾನು ಸಿಲೋನ್ ಬಾನುಲಿಯಲ್ಲಿ ಹಾಡಿದೆನೆಂದರೆ ನನಗೀಗಲೂ ಆಶ್ಚರ್ಯವಾಗುತ್ತದೆ! ಗುರುಗಳು ಒಂದರ ಮೇಲೊಂದು ಧ್ವನಿಸುರುಳಿಗಳನ್ನು ಹೊರತಂದಾಗ ನನ್ನನ್ನು ಬಳಸಿಕೊಂಡರು. ಲಕ್ಷ್ಮೀ ಶೋಬಾನೆ, ಶುಭಾಶಯ, ತುಳುನಾಡ ಪದೊಕುಲು ಮುಂತಾದ ಕ್ಯಾಸೆಟ್‌ಗಳಲ್ಲಿ ನನ್ನ ಧ್ವನಿಯನ್ನು ಶ್ರುತಿಗೂಡಿಸಿ ಅರಳಿಸಿದರು. ಕೆಲವು ಹಾಡುಗಳನ್ನು ನನ್ನಿಂದಲೇ ಬರೆಸಿ, ನನ್ನಿಂದಲೇ ಹಾಡಿಸಿದರು. ಸಂಗೀತ ನಿರ್ದೇಶನವನ್ನು ಹೇಳಿಕೊಟ್ಟರು. 1978ರಿಂದ 1990ರ ತನಕ ಅನೇಕ ಕಛೇರಿ ಕಾರ್ಯಕ್ರಮಗಳಲ್ಲಿ ನಾನು ಬಾಗವಹಿಸಿದೆ. ಶ್ರುತಿ (ತಂಬೂರ) ನಾನೇ ಮೀಟುತ್ತಿದ್ದೆ. ಯಾರಾದರೂ ಮೀಟಲು ಬಂದರೆ ಓಡಿಹೋಗಿ ನಾನೇ ಎತ್ತಿಕೊಳ್ಳುತ್ತಿದ್ದೆ!

ನನ್ನ ಗುರುಗಳು ನನ್ನನ್ನು ತಮ್ಮ ನಾಲ್ಕು ಮಂದಿ ಹೆಣ್ಣುಮಕ್ಕಳ ಜೊತೆಯಲ್ಲಿ ಐದನೆಯ ಮಗಳಾಗಿಯೇ ಬೆಳೆಸಿದರು. ನಾನು ಹೆಚ್ಚಾಗಿ ಅವರ ಮನೆಯಲ್ಲೇ ಇದ್ದುಕೊಂಡು ಸಂಗೀತ ಕಲಿಯುತ್ತಿದ್ದೆ. ಸಂಗೀತಕ್ಕಾಗಿ ನಾನು ಹಟಮಾರಿಯಾಗುತ್ತಿದ್ದೆ. ದಿಟ್ಟವಾಗಿ ವರ್ತಿಸುತ್ತಿದ್ದೆ. ಗುರುಗಳು ತಾಳ್ಮೆಯಿಂದಲೇ ಶಿಸ್ತುಬದ್ಧವಾಗಿ ಎಲ್ಲವನ್ನೂ ಹೇಳಿಕೊಡುತ್ತಿದ್ದರು.

ನಾದವೈಭವಂ ನೃತ್ಯರೂಪಕಗಳ ಅಭಿಯಾನದಲ್ಲಿ ನಾನು ಗುರುಗಳೊಂದಿಗೆ ಕರ್ನಾಟಕದ ಹೊರಗೂ ಸುತ್ತಿದೆ. ಬೆಂಗಳೂರು, ಮದ್ರಾಸು ಸ್ಟುಡಿಯೋಗಳಲ್ಲಿ ಗುರುಗಳೊಂದಿಗೆ ಸಹನಿರ್ದೇಶಕಿಯಾಗಿಯೂ ಅನುಭವ ಗಳಿಸಿಕೊಂಡೆ.

'ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ' ಎಂಬ ರಂಗಭೂಮಿ ಉಡುಪಿ ಅವರ ಒಂದು ನಾಟಕದ ಸಂಗೀತ ನಿರ್ದೇಶನವನ್ನು ಗುರುಗಳು ಮಾಡಿದ್ದ ಸಂದರ್ಭ. ಚಕ್ರವಾಕ ಹಕ್ಕಿಯ ಕೂಗಿನ ಒಂದು ಹಾಡನ್ನು ಅವರು ನನ್ನಿಂದ ಹಾಡಿಸಿದ್ದು ಅದು ಪ್ರೇಕ್ಷಕ ವೃಂದದಲ್ಲಿ ಆನಂದದ ಅಲೆಯೊಂದಿಗೆ ರೋಮಾಂಚನವನ್ನೇ ಉಂಟುಮಾಡಿತ್ತು.

'ನಾದವೈಭವಂ' ಗಾಯಕಿಯಾಗಿ 'ನೀವೇ ಪಾಲಿಂಚರ...' ಚಕ್ರವಾಕ ರಾಗದ ಕರಿಗಿರಿರಾಯರ ಕೃತಿಯನ್ನು, 'ರಾಗರತ್ನಮಾಲಿಕಚೆ...' ತ್ಯಾಗರಾಜರ ಕೃತಿಯನ್ನು, 'ಸಾನಂತಂ...' ಸಂಸ್ಕೃತ ಕೃತಿಯನ್ನು ಮತ್ತು ಸ್ವಾತಿ ತಿರುನಾಳ್ ಮಹಾರಾಜ್ ರಾಗಮಾಲಿಕೆಯನ್ನು ಪ್ರಸ್ತುತ ಪಡಿಸಿದ್ದು ನೆನಪಾಗುತ್ತಿದೆ. 'ರಂಗಯ್ಯ ಮನೆಗೆ ಬಂದರೆ...', 'ಮನೆಯೊಳಗಾಡೊ ಗೋವಿಂದ...', 'ಶ್ರೀನಿವಾಸ ನೀನೆ ಪಾಲಿಸೋ...', 'ನೀನುಪೇಕ್ಷೆಯ ಮಾಡೆ...' ಇತ್ಯಾದಿ ಹಾಡುಗಳನ್ನು ಹಾಡಬೇಕೆಂದು ಮತ್ತೆ ಮತ್ತೆ ಬಂದ ಬೇಡಿಕೆಗಳನ್ನು ಸ್ಮರಿಸಿಕೊಳ್ಳುತ್ತಿದ್ದೇನೆ. ಇವುಗಳಿಗೆಲ್ಲ ರಾಗ ಸಂಯೋಜನೆಯ ಹೊಸ ತಂತ್ರವನ್ನು ರೂಪಿಸಿದವರು ಗುರುವರ್ಯರು.

ನೂರಾರು ನೃತ್ಯರೂಪಕಗಳನ್ನು ನಾಡಿನಾದ್ಯಂತ ರಂಗಕ್ಕೇರಿಸಿದ ಗುರುಗಳು ಆಡಿಸಿದ 'ಭುವನಜ್ಯೋತಿ' ಎಂಬ ನೃತ್ಯರೂಪಕ ನಾದವೈಭವಂ ಸಂಸ್ಥೆಗೆ ಹೆಸರು ತಂದುಕೊಟ್ಟಿತು. ನಾನೂ ಅದರಲ್ಲಿ ಪಾತ್ರವಹಿಸುತ್ತಿದ್ದೆ. ಸೋಲನ್ನು ಸವಾಲು ಮಾಡಿದ ಒಂದು ಪ್ರಸಂಗ ಈಗ ನನ್ನ ಜ್ಞಾಪಕಕ್ಕೆ ಬರುತ್ತಿದೆ. ಉಡುಪಿಯಲ್ಲಿ 'ಭುವನಜ್ಯೋತಿ' ಆಡಿಸುವುದಕ್ಕೆ ಎಲ್ಲ ತಯಾರಿ ನಡೆದಿತ್ತು. ಕೊನೆಯ ಗಳಿಗೆಯಲ್ಲಿ ಕೆಲವು ಪ್ರಮುಖ ಪಾತ್ರಧಾರಿಗಳು ಕೈಕೊಟ್ಟರು. ಗುರುಗಳು ಕಂಗಾಲಾಗಿ ತಲೆಗೆ ಕೈಹೊತ್ತು ಕುಳಿತರು. ನಾನು ಏನಾದರೂ ಮಾಡಿ ಆಡಿಸಿಯೇ ಸಿದ್ಧ ಎಂದುಕೊಂಡು ಆಗಲೇ ನನ್ನ ಓರಗೆಯ ಸ್ನೇಹಿತೆಯರನ್ನು ಸಂಪರ್ಕಿಸಿ ಒಪ್ಪಿಸಿದೆ. ಎರಡೇ ದಿನಗಳಲ್ಲಿ ನೃತ್ಯ ಭಾವಗಳನ್ನು ಹೇಳಿಕೊಟ್ಟು ಅವರನ್ನು ರಂಗದಲ್ಲಿ ನಲಿಸಿ ಯಶಸ್ವಿಗೊಳಿಸಿದ ಶಹಭಾಸ್‌ಗಿರಿಯ ಗರಿಯನ್ನು ಹೊತ್ತ ನನ್ನ ಗುರುಗಳ ಧನ್ಯತೆಯ ಮುಖ ಇಂದಿಗೂ ನನ್ನ ಕಣ್ಣಮುಂದೆ!

ನನ್ನ ಪತಿ ಎಲ್. ಎನ್. ಶಾಸ್ತ್ರಿ ಸಿನಿಮಾದಲ್ಲಿ ಗಾಯಕರಾಗಿ ಪ್ರಶಸ್ತಿ ಪಡೆದವರು. ನಮ್ಮಿಬ್ಬರ ವೈವಾಹಿಕ ಜೀವನಕ್ಕೆ ನಮ್ಮ ಗುರುಗಳೇ ಕಾರಣ. ಅವರೇ ಮುಂದೆ ನಿಂತು ಮದುವೆ ನೆರವೇರಿಸಿಕೊಟ್ಟರು. ಒಂದು ತಂಬೂರವನ್ನು ನನಗೆ ಉಡುಗೊರೆಯಾಗಿ ನೀಡಿದರು!

ನೃತ್ಯರೂಪಕಗಳಲ್ಲಿ ನಟಿಯಾಗಿ, ಗಾಯಕಿಯಾಗಿ, ನಿರ್ದೇಶಕಿಯಾಗಿ ಪಾತ್ರ ವಹಿಸುತ್ತಿದ್ದ ನಾನು ಇದೀಗ ದೂರದರ್ಶನ, ಚಲನಚಿತ್ರಗಳಲ್ಲಿ ನನ್ನ ಪತಿಯೊಂದಿಗೆ ಪ್ರಮುಖ ಗಾಯಕಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಇದಕ್ಕೆಲ್ಲ ಕಾರಣಪುರುಷರು (ಗಾಡ್‌ಫಾದರ್) ಶ್ರೀ ವಾಸುದೇವ ಭಟ್ಟರು ಎನ್ನುವುದನ್ನು ನಾನು ಮರೆಯಲಾರೆ. 'ಈಕೆಯನ್ನು ನಾನು ತಯಾರು ಮಾಡಿಯೇ ಸಿದ್ಧ' ಎಂದು ನನ್ನ ತಾಯಿಗೆ ಕೊಟ್ಟ ಭಾಷೆಯನ್ನು ಅವರು ಈಡೇರಿಸಿಕೊಟ್ಟರು! 'ನನ್ನ ಪಟ್ಟಶಿಷ್ಯೆ' ಎಂದು ಅವರು ನನ್ನನ್ನು ಅಭಿಮಾನದಿಂದ ಆಡಿಕೊಂಡರು. ಅವರು ನನಗೆ ಸದಾ ಪ್ರಾತಃಸ್ಮರಣೀಯರು.

ಗುರು - ದರ್ಶನ

✍ ಎಚ್. ಚಂದ್ರಶೇಖರ ಕೆದಿಲಾಯ

ಸುಮಾರು ಮೂವತ್ತು ವರುಷಗಳ ಹಿಂದೆ ಉದ್ಯಾವರ ಮಾಧವ ಆಚಾರ್ಯರು ನಿರ್ದೇಶಿಸಿದ 'ಅರುಂಧತಿ' ಎಂಬ ಜಾನಪದ ನೃತ್ಯರೂಪಕಕ್ಕೆ ಸಂಗೀತ ನಿರ್ದೇಶನ ಮಾಡಿದವರು ವಿದ್ವಾನ್ ಉಡುಪಿ ವಾಸುದೇವ ಭಟ್ಟರು. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಇದು ಯಶಸ್ವೀ ಪ್ರದರ್ಶನ ಕಂಡಿತು. ನಾನಿದರಲ್ಲಿ ಗಾಯಕನಾಗಿ ಭಾಗವಹಿಸಿದ್ದೆ. ಅಲ್ಲಿಂದ ಶ್ರೀಮಾನ್ ವಾಸುದೇವ ಭಟ್ಟರು ನನ್ನ ಸಂಗೀತ ಗುರುಗಳಾದರು. ಸುಮಾರು ಏಳೆಂಟು ವರ್ಷ ಅವರ ಒಡನಾಟದಲ್ಲಿ ಸಂಗೀತ ಅಭ್ಯಾಸದ ಜೊತೆಗೆ ನೃತ್ಯರೂಪಕಗಳಲ್ಲಿ ಮತ್ತು ವಾಸುದೇವ ಭಟ್ಟರ 'ನಾದವೈಭವಂ' ಸಂಸ್ಥೆಯ ಸಂಗೀತ ಕಾರ್ಯಕ್ರಮಗಳಲ್ಲಿ ಗಾಯಕನಾಗಿ ಭಾಗವಹಿಸುತ್ತಿದ್ದೆ. ಮಣಿಪಾಲದ ಮಹೇಶ್ ಮತ್ತು ನಾನು ಜೊತೆಯಾಗಿಯೂ ಹಾಡುತ್ತಿದ್ದೆವು. ಸಂಗೀತ ಕಲಿಕೆಯ ಜೊತೆಗೆ ಈ ಕಾರ್ಯಕ್ರಮಗಳಲ್ಲಿ ಹಾಡುತ್ತಾ ಹಾಡುತ್ತಾ ನಾವು ಪಳಗಿದೆವು. ಗುರು ವಾಸುದೇವ ಭಟ್ಟರು ನಮ್ಮನ್ನು ಗಾಯಕರನ್ನಾಗಿ ರೂಪಿಸಿದರು. ನಮ್ಮ ಸಂಗೀತದ ಆಸಕ್ತಿಯನ್ನು, ಆ ಶಕ್ತಿಯನ್ನೂ ಬೆಳೆಸಿದರು, ಬೆಳಗಿಸಿದರು.

ನೃತ್ಯರೂಪಕದ ಹಾಡುಗಳಿಗೆ, ಕವನಗಳಿಗೆ, ಭಕ್ತಿಗೀತೆಗಳಿಗೆ ರಾಗ ಸಂಯೋಜನೆ ಮಾಡುವಲ್ಲಿ ನಮ್ಮ ಗುರುಗಳದ್ದು ವಿಶಿಷ್ಟ ಶಕ್ತಿ. ಸಾಹಿತ್ಯದ ಭಾವಕ್ಕೆ ಅನುಗುಣವಾಗಿ ರಾಗಭಾವವನ್ನು ಮಧುರವಾಗಿ ಜೋಡಿಸುತ್ತಾರೆ. ಅಗತ್ಯ ಕಂಡ ಕಡೆ ರಾಗವನ್ನು ಮಿಶ್ರ ಮಾಡಿ ವಿಶೇಷ ಮೆರುಗನ್ನು ನೀಡುತ್ತಾರೆ. ಸಂಗೀತಜ್ಞರು ಅಸಾಧುವೆಂದು ಕೈಬಿಟ್ಟ ರೂಪಕಗಳಿಗೆ ಶ್ರೀಯುತರು ಸಂಗೀತ ಸಂಯೋಜನೆ ಮಾಡಿ ಶ್ರೋತೃಗಳು ತಲೆದೂಗುವಂತೆ ಮಾಡುತ್ತಿದ್ದರು. ಒಂದೋ ಎರಡೋ ಗಂಟೆಯ ರೂಪಕಕ್ಕೆ ಅರವತ್ತೆಪ್ಪತ್ತು ರಾಗಗಳನ್ನು ಪುನರಾವರ್ತನೆ ಆಗದಂತೆ ಬಳಸುತ್ತಾರೆ. ಅರುಂಧತಿ, ಆನಂದ ಮುಕುಂದ, ಅಹಲ್ಯೆ, ಶ್ರೀಮನೋಹರ, ಚಿತ್ರಾಂಗದಾ, ವೃಂದಾವನ ಮುಂತಾದ ಹಲವಾರು ರೂಪಕಗಳು, ಗುರು ವಾಸುದೇವ ಭಟ್ಟರ ಸಂಗೀತ ನಿರ್ದೇಶನ, ಶ್ರೀಮತಿ ಪ್ರತಿಭಾ ಎಂ. ಎಲ್. ಸಾಮಗರ ನೃತ್ಯ ನಿರ್ದೇಶನ ಹಾಗೂ ಉದ್ಯಾವರ ಮಾಧವ ಆಚಾರ್ಯರ ರಂಗ ನಿರ್ದೇಶನದಲ್ಲಿ ರಸ-ಭಾವಗಳಿಂದ ತುಂಬಿ, ಕಲಾತ್ಮಕವಾಗಿ ಅಮೋಘ ಪ್ರದರ್ಶನಗೊಂಡು ಸಹೃದಯ ರಸಿಕರನ್ನು ರಂಜಿಸಿದವು. ಗಾಯಕರಾಗಿ ಭಾಗವಹಿಸಿದ ನಾವು ಒಳ್ಳೆಯ ಅನುಭವ ಗಳಿಸಿದೆವು. ರೂಪಕಗಳ ತರಬೇತಿಯ ಸಮಯದಲ್ಲಿ ನಾವು ನಮ್ಮೆಲ್ಲ ಸಾಂಸಾರಿಕ, ಔದ್ಯೋಗಿಕ, ವ್ಯಾವಹಾರಿಕ ಜಂಜಡಗಳನ್ನು ಮರೆಯುತ್ತಿದ್ದೆವು. ಸಮಯ ಸರಿದದ್ದೇ ನಮಗೆ ತಿಳಿಯುತ್ತಿರಲಿಲ್ಲ.

ವಿದ್ವಾನ್ ವಾಸುದೇವ ಭಟ್ಟರು ಸಂಗೀತ ಗುರುಗಳಲ್ಲದೆ ಸಂಗೀತ ನಿರ್ದೇಶಕರು ಹಾಗೂ ನಾಟಕ ನಿರ್ದೇಶಕರೂ, ನಟರೂ ಆಗಿದ್ದರಂತೆ. ಒಂದು ನಾಟಕ ತಂಡವನ್ನು ಕಟ್ಟಿಕೊಂಡು ಹಲವಾರು ಕಡೆ ಪ್ರದರ್ಶನ ನೀಡಿದ್ದರಂತೆ. ಅವರ ಈ ಅನುಭವ ನೃತ್ಯರೂಪಕಗಳಿಗೆ ಸಂಗೀತ ನಿರ್ದೇಶನ ನೀಡುವಲ್ಲಿ ಅವರಿಗೆ ಸಹಕಾರಿ ಆಗಿರಬಹುದು. ಅವರ ನಿರ್ದೇಶನದ 'ಭುವನಜ್ಯೋತಿ' ಎಂಬ ನೃತ್ಯರೂಪಕ ಮುಂದೆ ಸಿನಿಮಾ ಆಗಿ ಪ್ರಸಿದ್ಧವಾಯಿತು. ಶ್ರೀಯುತರು ಸಿನಿಮಾದಲ್ಲಿ ನಟರಾಗಿಯೂ ಅಭಿನಯಿಸಿದರು. ಹಲವಾರು ಧ್ವನಿಸುರುಳಿಗಳಿಗೂ ಸಂಗೀತ ನಿರ್ದೇಶನ ಮಾಡಿದರು. ತಮ್ಮ 'ನಾದವೈಭವಂ' ಲಾಂಛನದಲ್ಲಿ ಹಲವಾರು ಕ್ಯಾಸೆಟ್‌ಗಳನ್ನು ಹೊರತಂದರು. ಹಲವಾರು ಗಾಯಕರಿಗೆ ಅದರಲ್ಲಿ ಅವಕಾಶ ನೀಡಿದರು. ಹಿರಿಯ ಗಾಯಕರೊಂದಿಗೆ ನಮಗೂ ಅವಕಾಶ ಮಾಡಿಕೊಟ್ಟರು. ಪ್ರಸಿದ್ಧ ಗಾಯಕರಾದ ಪಿ. ಬಿ. ಶ್ರೀನಿವಾಸ್ ಇವರ ನಿರ್ದೇಶನದಲ್ಲಿ ಹಾಡಿದರು. ಹಿಂದೆ ಧ್ವನಿಸುರುಳಿ ಹೊರತರುವುದು ಈಗಿನಷ್ಟು ಸುಲಭ ಇರಲಿಲ್ಲ. ಧ್ವನಿ ಮುದ್ರಿಸಲು ಮದ್ರಾಸಿಗೆ ಹೋಗಬೇಕಿತ್ತು. ಅಲ್ಲಿ ಕಲಾವಿದರನ್ನು ಸಂಘಟಿಸಿ ತರಬೇತಿ ನೀಡಬೇಕಿತ್ತು. ಹೀಗೆ ನಮ್ಮ ಗುರುಗಳದ್ದು ಬಹುಶ್ರುತ ವ್ಯಕ್ತಿತ್ವ.

ಇಷ್ಟೆಲ್ಲಾ ಇದ್ದರೂ ಇವರು ಅನುಭವ ಗಳಿಸಿಕೊಂಡರೇ ವಿನಾ ಹಣ ಗಳಿಸಿಕೊಂಡಂತೆ ಕಾಣಲಿಲ್ಲ. ಅನೇಕರಿಂದ ಇವರು ವಂಚನೆಗೂ ಒಳಗಾಗಿದ್ದರಂತೆ. ಕ್ಯಾಸೆಟ್‌ಗಳನ್ನು ಹೊರತಂದು ಕೈಸುಟ್ಟುಕೊಂಡಿದ್ದರಂತೆ. ಕೆಲವರಲ್ಲಿ ನಿಷ್ಠುರ ಕಟ್ಟಿಕೊಂಡಿದ್ದರು. ಆಗೆಲ್ಲ ಈ ಕ್ಯಾಸೆಟ್ಟಿನ ವ್ಯವಹಾರ ಕಷ್ಟಕರವಾಗಿತ್ತು. ಕೆಲವೊಮ್ಮೆ ಇವರ ಉದಾರತೆಯೂ ಅತಿಯಾಗಿ ಇವರಿಗೆ ತೊಂದರೆಯಾಗಿದ್ದೂ ಇದೆ. 'ನಾದವೈಭವಂ' ತಂಡದೊಂದಿಗೆ ಕಾರ್ಯಕ್ರಮ ನೀಡುತ್ತಿದ್ದರು. ಈ ಸಂದರ್ಭದಲ್ಲಿ ಇವರನ್ನು ಕರೆಸಿದ ಸಂಘಟಕರು ಆರ್ಥಿಕ ಮುಗ್ಗಟ್ಟನ್ನು ಇವರಲ್ಲಿ ತೋಡಿಕೊಂಡರೆ, ಕೊಟ್ಟ ಸಂಭಾವನೆಯನ್ನು ಅವರಿಗೇ ಮರಳಿ ಒಪ್ಪಿಸಿ ಸಹಕಲಾವಿದರಿಗೆ ತಮ್ಮ ಕೈಯಿಂದಲೇ ಸಂಭಾವನೆ ನೀಡುತ್ತಿದ್ದರು. ದಾರಿಖರ್ಚನ್ನೂ ತಾವೇ ಭರಿಸುತ್ತಿದ್ದರು. ತಮ್ಮ ತರಗತಿಗೆ ಬಂದ ಶಿಷ್ಯರಿಗೆ ಕೆಲವೊಮ್ಮೆ ತಾವೇ ಕಾಫಿ ತಿಂಡಿ ಕೊಡಿಸುತ್ತಿದ್ದರು. ಸ್ವೀಟ್ ಕೊಡಿಸುತ್ತಿದ್ದರು. ಹಣ್ಣು ಹಂಪಲು ನೀಡುತ್ತಿದ್ದರು.

ಶಿಷ್ಯ ವಾತ್ಸಲ್ಯ, ಕಲಾಪ್ರೇಮ, ಜನಾನುರಾಗ ಹೊಂದಿದ ನಮ್ಮ ಗುರುಗಳು ತಮ್ಮ ಸಂಸಾರದ ಬಗೆಗೆ ಯಾವಾಗ ಮನಸ್ಸು ಕೊಡುತ್ತಿದ್ದರೋ ತಿಳಿಯದು. ನಾವು ಪಾಠಕ್ಕೆ ಹೋಗುವಾಗ ಸಂಜೆ ಆರೇಳು ಗಂಟೆ ಆಗುತ್ತಿತ್ತು. ಆ ಹೊತ್ತಿಗೆ ಮೂಲ್ಕಿ, ಮಂಗಳೂರುಗಳಲ್ಲಿ ತರಗತಿ ಮುಗಿಸಿ ಬಂದವರು ಮನೆಗೆ ಹೋಗದೆ ನಮಗೆ ಪಾಠ ಮಾಡುತ್ತಿದ್ದರು. ಪಾಠದ ಜೊತೆಗೆ ನಮ್ಮ ಕಷ್ಟ ಸುಖ ವಿಚಾರಿಸುತ್ತಿದ್ದರು. ಕೆಲವೊಮ್ಮೆ 'ನಾದವೈಭವಂ' ತಂಡದ ತರಬೇತಿಯೂ ಇರುತ್ತಿತ್ತು. ರಾತ್ರಿ ಬಹಳ ಹೊತ್ತಾಗುತ್ತಿತ್ತು. ಅವರು ಮೂಲ್ಕಿಯಲ್ಲಿ ಅಧ್ಯಾಪಕರಾದ್ದರಿಂದ ಬೆಳಿಗ್ಗೆ ಬೇಗನೇ ಮನೆ ಬಿಡುತ್ತಿದ್ದರು. ಹೀಗಾಗಿ ಅವರು ಮನೆಯಲ್ಲಿ

ಇರುವುದಕ್ಕಿಂತ ಹೆಚ್ಚಾಗಿ ಹೊರಗೇ ಇರುತ್ತಿದ್ದರು. ಇವರ ಸೇವೆಯನ್ನು ಪರಿಗಣಿಸುವಾಗ ಅವರ ಹೆಂಡತಿ ಮಕ್ಕಳ ತ್ಯಾಗವನ್ನು ನಾವು ಕೊಂಡಾಡಬೇಕು. ನಾವು ಶಿಷ್ಯರು ಅವರನ್ನು ಕಾಣಲು ಕೆಲವೊಮ್ಮೆ ಮನೆಗೆ ಹೋದಾಗ, 'ನಾದವೈಭವಂ' ತಂಡದ ತರಬೇತಿ ಕೆಲವೊಮ್ಮೆ ಮನೆಯಲ್ಲಿ ಇರಿಸಿಕೊಂಡಿದ್ದಾಗ, ನಮ್ಮ ಗುರುಪತ್ನಿ ಮತ್ತು ಮಕ್ಕಳು ಆತ್ಮೀಯತೆಯಿಂದ ನೋಡಿಕೊಂಡು, ಕಾಫಿ ತಿಂಡಿ ಕೊಟ್ಟು ನಮ್ಮನ್ನು ಸತ್ಕರಿಸುತ್ತಿದ್ದರು. ಈ ಆತಿಥ್ಯ ಪಡೆದ ನಾವು ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ನಮ್ಮ ಗುರುಗಳ ಸಂಗೀತ ಪಾಠವೂ ವಿಶೇಷವಾದುದು. ತಾವು ಕಲಿಸಿದ ಪಾಠ ಶಿಷ್ಯರಿಗೆ ಸರಿಯಾಗಿ ಬರುವವರೆಗೆ ಪ್ರತಿ ತರಗತಿಯಲ್ಲಿ ಹಾಡಿಸಿ ಸರಿಪಡಿಸುತ್ತಿದ್ದರು. ಸಮಯದ ಮಿತಿ ಇರುತ್ತಿರಲಿಲ್ಲ. ಬರಲಿ, ಬಾರದಿರಲಿ ಒಮ್ಮೆ ಹೇಳಿ ಮುಂದಿನ ಪಾಠಕ್ಕೆ ಹೋಗುವುದು ಅವರಿಗೆ ಸರಿಕಾಣುತ್ತಿರಲಿಲ್ಲ. ಬೇರೆ ಬೇರೆ ರಾಗಗಳಲ್ಲಿ ಸರಳೆ, ಜಂಟಿ, ದಾಟುವರಸೆಗಳ ಅಭ್ಯಾಸ ಮಾಡಿಸುತ್ತಿದ್ದರು. ಪ್ರತಿಯೊಬ್ಬರಿಂದಲೂ ಪ್ರತ್ಯೇಕವಾಗಿ ಹಾಡಿಸುತ್ತಿದ್ದರು. ಗುಂಪು ಪಾಠ ಇರುತ್ತಿರಲಿಲ್ಲ. ಒಂದೇ ಗುಂಪಿನವರಾದರೂ ವೈಯಕ್ತಿಕವಾಗಿ ಹಾಡಿಸಿ ತಿದ್ದುತ್ತಿದ್ದರು. ಇತರರು ಹಾಡುವುದನ್ನು ಆಲಿಸುವಂತೆ ಮಾಡುತ್ತಿದ್ದರು. ಇದು ಕಲಿಕೆಗೆ ಸಹಕಾರಿಯಾಗುತ್ತಿತ್ತು. ಎಲ್ಲ ಬಗೆಯ ಕಲಿಕೆಗೆ ಆಲಿಸುವಿಕೆ ಮುಖ್ಯವಾಗಿದೆ. ಆದರೆ ಈ ಆಧುನಿಕ ಪದ್ಧತಿಯಲ್ಲಿ ಇದಕ್ಕೆ ವ್ಯವಧಾನ ಇಲ್ಲವಾಗಿದೆ. ಸಂಖ್ಯಾಬಾಹುಳ್ಯವೂ ಈ ರೀತಿಯ ಕಲಿಕೆಗೆ ತೊಡಕಾಗಿದೆ. ಗುರು ವಾಸುದೇವ ಭಟ್ಟರಿಗೂ ಈ ಬಗೆಯಲ್ಲಿ ಕಲಿಸುವುದು ಈಗ ಅಸಾಧ್ಯ ಆಗಿರಬಹುದು.

ನಾನು ಸಂಗೀತ ಕಲಿಕೆ ಆರಂಭಿಸಿದ್ದು ತಡವಾಗಿ. ನನ್ನ ಶಿಕ್ಷಕ ವೃತ್ತಿಯ ಜೊತೆಗೆ ಇದನ್ನು ಹೊಂದಿಸಿಕೊಂಡು ಹೋಗಲು ನಾನು ಕಷ್ಟಪಡಬೇಕಾಯಿತು. ಹೀಗಾಗಿ ಏಳೆಂಟು ವರ್ಷಗಳ ಬಳಿಕ ಮಾನ್ಯ ವಾಸುದೇವ ಭಟ್ಟರಲ್ಲಿಗೆ ಸಂಗೀತ ಕಲಿಕೆಗೆ ಹೋಗುವುದನ್ನು ನಿಲ್ಲಿಸಬೇಕಾಯಿತು. ನನಗೆ ಅನ್ನ ಕೊಡುವ ಶಿಕ್ಷಕ ವೃತ್ತಿಯನ್ನು ಕಡೆಗಾಣಿಸಬಾರದೆಂಬ ಭಾವದಿಂದ ಬಿಡುವಿರುವಾಗ ಮಾತ್ರ ಸಂಗೀತದ ಕಡೆಗೆ ಗಮನ ಕೊಡಬೇಕಾಯಿತು. ಇದರಿಂದಾಗಿ ಗುರು ವಾಸುದೇವ ಭಟ್ಟರ ಒಡನಾಟ ತಪ್ಪಿತು.

ವಿದ್ವಾನ್ ವಾಸುದೇವ ಭಟ್ಟರು ಸಂಗೀತ ಚಿಕಿತ್ಸೆ ಬಗೆಗೆ ಆಗ ಹೇಳುತ್ತಿದ್ದರು. ಅವರಲ್ಲಿ ಸಂಗೀತದ ಬಗೆಗೆ ಹಲವಾರು ಯೋಜನೆಗಳಿವೆ, ಯೋಚನೆಗಳಿವೆ. ಇದಕ್ಕೆಲ್ಲ ಸಾರ್ವಜನಿಕರ, ಸರಕಾರದ, ಸಂಘ ಸಂಸ್ಥೆಗಳ, ಶಿಷ್ಯವೃಂದದ ಬೆಂಬಲ ಅಗತ್ಯ. ಇದರ ಜೊತೆಗೆ ಅವರಿಗೆ ಆಯುರಾರೋಗ್ಯವನ್ನು ದೇವರು ದಯಪಾಲಿಸಬೇಕು. ಇವೆಲ್ಲವನ್ನೂ ಉಡುಪಿಗೊಡೆಯ ಶ್ರೀಕೃಷ್ಣ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಕಾಯಕಯೋಗಿ

✍ ಎಂ. ಪಿ. ಓಂಕಾರೇಶ್ವರಿ

ವಿನಯವಂತಿಕೆಗೆ, ಸರಳತೆ, ಸಜ್ಜನಿಕತೆಗೆ ಮತ್ತೊಂದು ಹೆಸರು 'ನಾದವೈಭವಂ'ನ ವಾಸುದೇವ ಭಟ್ಟರು. ಇಂದು ಸಂಗೀತ ಶಿಕ್ಷಕರಾಗಿರುವ ಅವರು ಮೊದಲು ಪತ್ರಕರ್ತರಾಗಿ, ನಟರಾಗಿ, ಸಂಗೀತ ನಿರ್ದೇಶಕರಾಗಿ ಕೆಲಸ ಮಾಡಿದವರು. ಅವರ ಪ್ರತಿಭೆಗೆ ಹಲವಾರು ಮುಖಗಳಿವೆ. ಆದರೆ ಅವರನ್ನು ಪ್ರಮುಖವಾಗಿ ಗುರುತಿಸುವುದು ಸಂಗೀತಗಾರರಾಗಿ. ಹಣಕ್ಕಾಗಿ, ಕೀರ್ತಿಗಾಗಿ ಅವರು ಯಾವತ್ತೂ ಹಾತೊರೆದವರಲ್ಲ. ಅವರು ಕೈಗೊಂಡ ಕೆಲಸಗಳಲ್ಲಿ ಸಂಪತ್ತು ಅವರ ಕೈಹಿಡಿಯಲೇ ಇಲ್ಲ. ಅವರ ಆಸಕ್ತಿಯ ಕ್ಷೇತ್ರಗಳಾದ ನಾಟಕ ಸಂಘಗಳ ಸ್ಥಾಪನೆ, ನಟನೆ, ಸಿನಿಮಾ ನಿರ್ದೇಶನ (ಭುವನಜ್ಯೋತಿ), ಧ್ವನಿಸುರುಳಿ ತಯಾರಿಕೆ ಮೊದಲಾದುವುಗಳಲ್ಲಿ ಅವರು ಗಳಿಸಿದ್ದಕ್ಕಿಂತ ಕಳೆದುಕೊಂಡಿದ್ದೆ ಜಾಸ್ತಿ.

ಉಡುಪಿ ವಾಸುದೇವ ಭಟ್ಟರ ನಿಜವಾದ ಸಂಪತ್ತು ಎಂದರೆ ಅವರ ಶಿಷ್ಯವರ್ಗ. ಅವರ ಶಿಷ್ಯಂದಿರು ಇಂದು ರಾಜ್ಯದಲ್ಲಿ ಮಾತ್ರವಲ್ಲದೆ ದೇಶದಾದ್ಯಂತ ಹೆಸರು ಗಳಿಸಿದ್ದಾರೆ. ಪ್ರಸ್ತುತ ಅವರ ಹತ್ತಿರ ನೌಕರರು, ಅಧಿಕಾರಿಗಳು, ನ್ಯಾಯವಾದಿಗಳು, ಗೃಹಿಣಿಯರು, ವಿದ್ಯಾರ್ಥಿಗಳು - ಹೀಗೆ ವಿವಿಧ ಕ್ಷೇತ್ರದಲ್ಲಿರುವವರು ಸಂಗೀತಾಭ್ಯಾಸ ಮಾಡುತ್ತಿದ್ದಾರೆ. ಅವರ ಪೈಕಿ ನಾನೂ ಒಬ್ಬಳು. "ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ" ಎನ್ನುವ ಬಸವವಾಣಿಯಂತೆ ಯಾವುದೇ ವಯಸ್ಸು, ಲಿಂಗಭೇದವಿಲ್ಲದೆ, ಯಾವುದೇ ಜಾತಿ, ಅಂತಸ್ತುಗಳನ್ನು ಪರಿಗಣಿಸದೆ ಎಲ್ಲರನ್ನೂ ಏಕತಾಭಾವದಿಂದ ಕಾಣುವ ನಿಷ್ಕಲ್ಮಶ ಮನಸ್ಸಿನ ಆದರ್ಶಪ್ರಾಯ ವ್ಯಕ್ತಿ ಅವರು.

ಒಲವಿಲ್ಲದ, ಪ್ರೀತಿಯಿಲ್ಲದ ಯಾವುದೇ ಕೆಲಸದಲ್ಲಿ ಜೀವಂತಿಕೆಯು ಇರುವುದಿಲ್ಲ. ಆನಂದವೂ ಇರುವುದಿಲ್ಲ. ವಾಸುದೇವ ಭಟ್ಟರು ತಮ್ಮ ಎಲ್ಲ ಕೆಲಸಗಳನ್ನು ಬಹಳ ಶ್ರದ್ಧೆ ಮತ್ತು ಪ್ರೀತಿಯಿಂದ ನಿರ್ವಹಿಸುತ್ತಾರೆ. ಕೆಲವೊಮ್ಮೆ ಅವರು ತಮ್ಮ ಕುಟುಂಬ, ಮಕ್ಕಳು ಇವರಿಗಿಂತಲೂ ಸಂಗೀತಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡುತ್ತಾರೆ. ಈ ಇಳಿವಯಸ್ಸಿನಲ್ಲಿ ಸಂಗೀತದ ಮೂಲಕ ಮಾನಸಿಕ ಹಾಗೂ ದೈಹಿಕ ವ್ಯಾಧಿಯನ್ನು ಗುಣಪಡಿಸುವ 'ನಾದಥೆರಪಿ' ಎಂಬ ಮನೋವೈಜ್ಞಾನಿಕ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕನ್ನಡದ ಸುಪ್ರಸಿದ್ಧ ಹಿರಿಯ ಗಾಯಕರಾದ ಪಿ. ಬಿ. ಶ್ರೀನಿವಾಸ್, ಎಸ್. ಜಾನಕಿ, ರಾಜಕುಮಾರ್ ಭಾರತಿ, ಮಂಜುಳಾ ಗುರುರಾಜ್ ಮುಂತಾದವರ ಗಾಯನಗಳಿಗೆ ಸಂಗೀತ

ನಿರ್ದೇಶನವಿತ್ತಿದ್ದರೂ ಸಹ ಅವರಲ್ಲಿ ಯಾವುದೇ ಹಮ್ಮು ಇಲ್ಲ. ಸಂಗೀತಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು, ಹಗಲಿರುಳೆನ್ನದೆ ದುಡಿಯುವ ಇವರು ನಿಜವಾದ ಕಾಯಕಯೋಗಿ. ವಾಸುದೇವ ಭಟ್ಟರ ಸಾಧನೆಯಲ್ಲಿ, ಯಶಸ್ಸಿನಲ್ಲಿ ಅವರ ಧರ್ಮಪತ್ನಿಗೂ ಸಹ ಸಮಪಾಲು ಸಿಗಬೇಕು. ಅವರ ಯಶಸ್ಸಿನ ಹಿಂದೆ ಶ್ರೀಮತಿ ಸುನಂದಾರವರ ಸಂಪೂರ್ಣ ಸಹಕಾರವಿದೆ. ಅಲ್ಲದೆ, ಮಕ್ಕಳಾದ ವಸುದಾ ಮೊದಲಾದವರು ಕೂಡ ತಂದೆಯ ಎಲ್ಲಾ ಕೆಲಸಗಳಲ್ಲಿ ಪ್ರಾಮಾಣಿಕವಾಗಿ ಸಹಕರಿಸುತ್ತಿದ್ದಾರೆ. ವಾಸುದೇವ ಭಟ್ಟರು ಸಂಗೀತದ ಯಾವುದೇ ಕೆಲಸ ಕಾರ್ಯಗಳನ್ನು ಕೈಗೊಂಡರೂ ಅದಕ್ಕೆ ಬೆನ್ನೆಲುಬಾಗಿ ನಿಲ್ಲುವವರು ಅವರ ಧರ್ಮಪತ್ನಿ ಶ್ರೀಮತಿ ಸುನಂದಾ. ಆರ್ಥಿಕ ಸಂಕಷ್ಟದಲ್ಲಿ ಸಹ ಧೃತಿಗೆಡದೆ ಬೆಂಬಲಿಸಿ ಕಷ್ಟ-ಸುಖಗಳನ್ನು ಸಮನಾಗಿ ಹಂಚಿಕೊಂಡವರು. ಸಂಗೀತದ ಗೋಷ್ಠಿ, ಸಂಗೀತದ ತರಗತಿ ಮೊದಲಾದವುಗಳನ್ನು ಎಷ್ಟೋ ಬಾರಿ ಮನೆಯಲ್ಲಿ ಹಮ್ಮಿಕೊಳ್ಳುವುದು ವಾಸುದೇವ ಭಟ್ಟರಿಗೆ ವಾಡಿಕೆ. ಆದರೆ ಮನೆಗೆ ಬಂದ ಎಲ್ಲರಿಗೆ ಉತ್ತಮ ರೀತಿಯಲ್ಲಿ ಸತ್ಕರಿಸುವ ಜವಾಬ್ದಾರಿ ಮಾತ್ರ ಶ್ರೀಮತಿ ವಾಸುದೇವ ಭಟ್ಟರದು. ಆ ವಿಷಯದಲ್ಲಿ ಅವರು ಎಂದೂ ಬೇಸರ ಪಟ್ಟುಕೊಂಡವರಲ್ಲ. ಆದರೆ ಆ ಬಗ್ಗೆ ಕಿಂಚಿತ್ತೂ ಯೋಚಿಸದಂತಹ ದೊಡ್ಡ ಗುಣ ವಾಸುದೇವ ಭಟ್ಟರದು.

ಒಟ್ಟಾರೆ ಸಂಗೀತಕ್ಕಾಗಿ ತನ್ನದೆನ್ನುವುದೆಲ್ಲವನ್ನು ಧಾರೆಯೆರೆದಿರುವ ಶ್ರೀಯುತ ವಾಸುದೇವ ಭಟ್ಟರು ಭವಿಷ್ಯದ ಬಗ್ಗೆ ಚಿಂತಿಸಿದವರಲ್ಲ. ಅರುವತ್ತೆಂಟರ ಇಳಿವಯಸ್ಸಿನಲ್ಲಿ ಸಹ ಉತ್ಸಾಹದ ಚಿಲುಮೆಯಂತೆ ಚಟುವಟಿಕೆಯಿಂದ ಇರುವ ಅವರ ಅಂತಃಸತ್ವ ಸಂಗೀತವೇ ಇರಬೇಕು. ಅವರ ಶಿಷ್ಯೆಯಾಗಿ ಅವರ ಹತ್ತಿರ ಸಂಗೀತಾಭ್ಯಾಸ ಮಾಡುವ ಅವಕಾಶ ಸಿಕ್ಕಿದ್ದು ಸುಯೋಗವೆಂದೇ ಭಾವಿಸುತ್ತೇನೆ. ಇನ್ನು ಮುಂದೆ ಸಹ ಅವರ ಸಂಗೀತದ ಕೆಲಸಗಳು ಉತ್ತಮವಾಗಿ ಸಾಗಲಿ, ಅವರಿಗೆ ಆರೋಗ್ಯ ಲಭಿಸಲಿ ಎಂದು ಪ್ರಾರ್ಥಿಸುತ್ತೇನೆ.

ಹಂಬಲಕ್ಕೆ ಇಂಬು ಕೊಟ್ಟ ಗುರುಗಳು

✍ ಸುನಂದಾ ಪಾಂಗಾಳ

ಬಾಲ್ಯದಿಂದಲೂ ಸಂಗೀತದಲ್ಲಿ ನನಗೆ ಅಪಾರ ಆಸಕ್ತಿಯಿತ್ತು. ಹರಿಕಥೆ, ಸಂಗೀತ ಆರ್ಕೆಸ್ಟ್ರಾಗಳಿರಲಿ, ಹಾಡುವ ಭಿಕ್ಷುಕರು ಕೂಡಾ ನನಗೆ ಸಂತೋಷ ಕೊಡುವ ಸಂಗತಿಯಾಗಿದ್ದರು. ಆದರೆ ಮನೆಯಲ್ಲಿ ಸಂಗೀತಕ್ಕೆ ಬೇಕಾದ ಅವಕಾಶವಾಗಲೀ, ಪ್ರೋತ್ಸಾಹವಾಗಲೀ ಸಿಗುವಂತಿರಲಿಲ್ಲ. ಹತ್ತು ಮಕ್ಕಳಿರುವ ತುಂಬು ಕುಟುಂಬದಲ್ಲಿ ನಾನು ಮೂರನೆಯವಳು. ಶಾಲಾಭ್ಯಾಸ ಬಿಟ್ಟರೆ ಯಾವ ಹವ್ಯಾಸಕ್ಕೂ ಆಸ್ಪದವೇ ಇರಲಿಲ್ಲ. ಬಾಲ್ಯದ ಕನಸು ಮತ್ತೆಷ್ಟೋ ವರ್ಷಗಳ ಕಾಲ ಕನವರಿಕೆಯಾಗಿಯೇ ಉಳಿದಿತ್ತು. ಶ್ರೀನಿವಾಸ ರಾವ್ ಎಂಬ ಗುರುಗಳು ಒಂದಿಷ್ಟು ಕಾಲ ವೀಣಾಭ್ಯಾಸ ಮಾಡಿಸಿದ್ದು ಬಿಟ್ಟರೆ ಸಂಗೀತ ನನ್ನಿಂದ ದೂರವೇ ಉಳಿದಿತ್ತು.

ಮತ್ತೆ ಮದುವೆಯಾಗಿ ಉಡುಪಿಗೆ ಬಂದಾಗ ಮನದ ಮೂಲೆಯಲ್ಲೆಲ್ಲೋ ಅಡಗಿದ್ದ ಉತ್ಸಾಹ ಗರಿಗೆದರಿ ಉಡುಪಿಯ ಅಕಾಡೆಮಿ ಸೇರಿದೆ. ಒಂದು ಪರೀಕ್ಷೆಯನ್ನೂ ಮುಗಿಸಿದೆ. ಆ ದಿವಸಗಳಲ್ಲಿ ನಾರಾಯಣ ಭಟ್ ಎಂಬ ನಾಟ್ಯಾಚಾರ್ಯರು, "ನೀವು ನುಡಿಸುವುದನ್ನು ನೋಡಿದರೆ ನಗು ಬರುತ್ತೆ. ತಾಳ ಬೇತಾಳ, ಶ್ರುತಿ ಅಪಶ್ರುತಿ" ಎಂದು ಬೈದರು. ಮತ್ತೆ ಹೇಳಿದರು, "ಕಲಿಯುವುದಿದ್ದರೆ ವಾಸುದೇವ ಭಟ್ಟರ ಹತ್ತಿರ ಕಲಿಯಿರಿ. ಅವರು ಸಂಗೀತ ಮಾತ್ರವಲ್ಲ, ವೀಣೆ, ವಯೊಲಿನ್, ಹಾರ್ಮೋನಿಯಂ, ಕ್ಯಾಸಿಯೊ, ಜನಪದ ಗೀತೆ, ಭಾವಗೀತೆ ಎಲ್ಲವನ್ನೂ ಶಾಸ್ತ್ರಬದ್ಧವಾಗಿ ಕಲಿಸಬಲ್ಲವರು". ಅವರೇ ನನ್ನನ್ನು ವಾಸುದೇವ ಭಟ್ಟರಲ್ಲಿಗೆ ಕರೆದುಕೊಂಡು ಹೋದರು.

ಆ ದಿನಗಳಲ್ಲಿ ವಾಸುದೇವ ಭಟ್ಟರು ಪಾಠ ಹೇಳುವ ಉತ್ಸಾಹವನ್ನೇ ಕಳೆದುಕೊಂಡಿದ್ದರು. 'ಭುವನಜ್ಯೋತಿ' ಅವರ ಕೈಯನ್ನು ಸುಟ್ಟದ್ದು ಮಾತ್ರವಲ್ಲ, ಮನಸ್ಸನ್ನೂ ಘಾಸಿಗೊಳಿಸಿತ್ತು. ಹಣ ಕಳೆದುಕೊಂಡು ದುಃಖಿತರಾಗಿದ್ದರು. ಮೂರು ತಿಂಗಳು ತಿರುಗಿದ ನಂತರ ನನಗೆ ಗುರುಗಳಾಗಲೂ ಒಪ್ಪಿಕೊಂಡರು. ವೀಣೆಗಿಂತ ಮೊದಲು ಸಂಗೀತವೆಂದರು. ಸಾಹಿತ್ಯ ಬಿಟ್ಟು ಸಂಗೀತವಿಲ್ಲ ಎಂದರು. ಪ್ರತಿಯೊಂದು ಕ್ಷೇತ್ರದಲ್ಲಿ ಚಿಕ್ಕ ಮಕ್ಕಳಿಗೆ ಪಾಠ ಹೇಳಿದ ಹಾಗೆ ಪಾಠ ಹೇಳಿದರು.

ಅವರಲ್ಲಿ ನಾನು ಶಾಸ್ತ್ರೀಯವಾಗಿ ಹಾಡುವುದನ್ನು ಕಲಿತೆ. ತಮ್ಮ ಕಾರ್ಯಕ್ರಮಗಳಲ್ಲಿ ನನಗೆ ಜವಾಬ್ದಾರಿ ಕೊಟ್ಟು, ನನ್ನ ಪ್ರತಿಭೆಯನ್ನು ಗುರುತಿಸಿದರು. ನನಗೆ ವೇದಿಕೆಯನ್ನೂ ಕೊಟ್ಟರು. ಈ ನಡುವೆ ವೀಣಾವಾದನವನ್ನೂ ಕ್ರಮವಾಗಿ ಕಲಿತುಕೊಂಡೆ. ಗುರುಗಳು ನನ್ನ ಕಲೆಯ ಬಗ್ಗೆ ಹೆಮ್ಮೆ ಪಟ್ಟು ತಮ್ಮ ಖರ್ಚಿನಿಂದಲೇ ಶಾರದಾಂಬಾ ದೇವಸ್ಥಾನದಲ್ಲಿ 'ವೀಣಾ ಸೇವಾರ್ಚನೆ' ಎಂದು ನನ್ನ ಮೊದಲ ಕಾರ್ಯಕ್ರಮ ಮಾಡಿಸಿದರು. ಹಲವು ಕಡೆಗಳಲ್ಲಿ ವೀಣೆಯ ಕಾರ್ಯಕ್ರಮಗಳನ್ನು ಕೊಡಿಸಿದರು. ನಿರಂತರವಾಗಿ ಎರಡು ಘಂಟೆಗಳ ಕಾಲ ವೀಣಾವಾದನ ಮಾಡಬಲ್ಲ ಧೈರ್ಯವನ್ನೂ ಕಲೆಯನ್ನೂ ನನ್ನಲ್ಲಿ ತುಂಬಿದರು.

ಗುರುಗಳಿಂದ ನನಗೆ ಸಿಕ್ಕಿದ ಅತಿದೊಡ್ಡ ಲಾಭವೆಂದರೆ ಸಾಹಿತ್ಯ ಸಾಂಗತ್ಯ. ಅವರು ತಮ್ಮ ಶಿಷ್ಯರುಗಳಿಗೆ ಸಾಹಿತ್ಯದ ಗೀಳು ಹಿಡಿಸುತ್ತಾರೆ. ಸಾಹಿತ್ಯ ಕೂಟಗಳಿಗೆ ಕರೆದೊಯ್ಯುತ್ತಾರೆ. ಅಭಿಮಾನದಿಂದ ಪುಸ್ತಕಗಳನ್ನು ಕೊಂಡು ನಮಗೆಲ್ಲ ಓದಲಿಕ್ಕೆ ಕೊಡುತ್ತಾರೆ. ಅಂತಹ ಕೂಟಗಳಲ್ಲಿ ನಮ್ಮಿಂದ ಹಾಡಿಸಿ, ಉಡುಪಿಯ ಸಾಹಿತ್ಯಿಕ ವಲಯದಲ್ಲಿ ಗುರುತಿಸಲ್ಪಡುವಂತೆ ಮಾಡಿದ್ದಾರೆ.

ನಮ್ಮ ಗುರುಗಳ ಒಂದೆರಡು ದೌರ್ಬಲ್ಯಗಳ ಬಗ್ಗೆ ನನಗೆ ತುಂಬಾ ಗೊತ್ತು. ಅವರಿಗೆ ನಾಯಿ ಮತ್ತು ದನಗಳೆಂದರೆ ತುಂಬಾ ಪ್ರೀತಿ. ಮನೆಯಲ್ಲಿ ತಂದಿಟ್ಟ ತರಕಾರಿಯನ್ನೆಲ್ಲ ದನಕ್ಕೆ ತಿನ್ನಿಸಿ ಸಂತೋಷಪಡುವ ವಿಚಾರ ಎಲ್ಲರಿಗೂ ಗೊತ್ತಿದ್ದದ್ದೇ. ಮೊನ್ನೆ ಒಂದು ದಿನ ರಮಕ್ಕ (ನಾದವೈಭವಂ ಸಂಗೀತ ಶಾಲೆ ನಡೆಯುತ್ತಿರುವ ಕಟ್ಟಡದ ಯಜಮಾನರು) ಮನೆಗೆಂದು ತಂದಿಟ್ಟುಕೊಂಡಿದ್ದ ತರಕಾರಿಯನ್ನೆಲ್ಲ ಎತ್ತಿಕೊಂಡು ಹೋಗಿ ಯಾವುದೋ ದನಕ್ಕೆ ತಿನ್ನಿಸಿಬಿಟ್ಟರು. ಒಮ್ಮೊಮ್ಮೆ ನಮ್ಮ ಸಂಗೀತ ಕ್ಲಾಸಿಗೆ ನಾಯಿಗಳೂ ಬರುತ್ತವೆ. ತಲೆ ಮುಂದೆ ಹಾಕಿ ಮಲಗಿಬಿಡುತ್ತವೆ. ಆಗ ನಮ್ಮ ಗುರುಗಳು, "ನೋಡಿ, ಎಷ್ಟು ಸಂತೋಷದಿಂದ ಸಂಗೀತ ಕೇಳುತ್ತಿವೆ" ಎಂದು ಮುಗ್ಧ ಮಗುವಿನ ಹಾಗೆ ನಗುತ್ತಾರೆ.

ನಮ್ಮ ಗುರುಗಳ ಮುಗ್ಧತೆ ಬಹಳ ಅಪಾಯಕಾರಿ ಕೂಡ. ಅವರ ಹಿಂದೆ ಮುಂದೆ ಇರುವ ಎಷ್ಟೊಂದು ಗೋಮುಖವ್ಯಾಘ್ರಗಳು ಅವರ ಮುಗ್ಧತೆಯ ಲಾಭ ಪಡೆದಿದ್ದಾರೆ ಎನ್ನುವುದೂ ನನಗೆ ಗೊತ್ತು. ಗುರುಗಳು ಎಲ್ಲರನ್ನೂ ನಂಬಿ ಬದುಕಿನಲ್ಲಿ ಬಹಳ ಪೆಟ್ಟು ತಿಂದಿದ್ದಾರೆ. ಕ್ಷಣಕ್ಷಣಕ್ಕೂ ಮೋಸಹೋಗುತ್ತಾರೆ. ಆದರೂ ಎಲ್ಲರನ್ನೂ ನಂಬುತ್ತಾರೆ. ಅವರು ಎಷ್ಟು ನಗುತ್ತಾರೋ, ಅವರ ಅಂತರಂಗದಲ್ಲಿ ಅಷ್ಟೇ ನೋವಿದೆ ಎನ್ನುವುದನ್ನು ಅವರ ಖಾಸಗೀ ವಲಯದಲ್ಲಿರುವ ಶಿಷ್ಯರೆಲ್ಲಾ ಬಲ್ಲರು.

ಗುರುಗಳು ತುಂಬಾ ನಸ್ಯ ಸೇದುತ್ತಾರೆ. ಎಲ್ಲ ನೋವನ್ನು ಮರೆಯಲಿಕ್ಕೆ ಮತ್ತು ಸಂಗೀತದ ಹೊಸ ಪ್ರಬುದ್ಧತೆಯನ್ನು ಅರಸಲು, ಹಾಗೆಯೇ ಸಂಗೀತ ಚಿಕಿತ್ಸೆಯ ಹೊಸ ಸಂಶೋಧನೆಗಳಿಗೆ ಈ ಜ್ಞಾನಚೂರ್ಣ inspiration ಕೊಡುತ್ತದೆ ಎಂದೇ ಅವರು ಹೇಳುತ್ತಿರುತ್ತಾರೆ.

ಬಿಳಿಯ ಬಟ್ಟೆ, ಬಿಳಿಯ ತಲೆಗೂದಲು, ಬಿಳಿಯ ನಗುವಿನ ಮುಗ್ಧ ಮಗುವಿನ ಹಾಗಿರುವ ಗುರುಗಳಿಗೆ ಸಿಟ್ಟು ಕೂಡಾ ಬರುತ್ತದೆ. ನಮಗೆ ಹೇಳಿಕೊಟ್ಟ ಸಂಗೀತ ಪಾಠವನ್ನು ನಾವು ಸರಿಯಾಗಿ ಒಪ್ಪಿಸದೇ ಹೋದಾಗ ಅವರಿಗೆ ತುಂಬಾ ಕೋಪ ಬರುತ್ತದೆ. ಆಗ ಅವರಿಗೆ ಪ್ರಿಯವಾದ ಪರಿಮಳದ ಅಗರಬತ್ತಿ ಅಥವಾ ಪರಿಮಳದ್ರವ್ಯ ಹಚ್ಚಿದ ಕೂಡಲೆ ಅವರ ಕೋಪ ಮಾಯವಾಗುತ್ತದೆ.

ನಾನು ಇವತ್ತೂ ಗುರುಗಳಲ್ಲಿ ಸಂಗೀತಾಭ್ಯಾಸ ಮಾಡುತ್ತಲೇ ಇದ್ದೇನೆ. ತಾಂತ್ರಿಕ ವಿದ್ಯಾರ್ಥಿಗಳಾಗಿರುವ ನನ್ನ ಮಕ್ಕಳೂ ಅವರಲ್ಲಿ ಪಾಠ ಹೇಳಿಸಿಕೊಳ್ಳುತ್ತಾರೆ. ಮದುವೆಯಾಗಿ ಹೋದ ನನ್ನ ಮಗಳೂ ಅವರಲ್ಲಿ ಕಲಿಯುತ್ತಿದ್ದಳು. ಗುರುಗಳ ಪ್ರತಿಭೆಯ ವ್ಯಾಪ್ತಿ ಅಪಾರವಾದದ್ದು. ಮಾನಸಸರೋವರದಂತಹ ಅವರೆದುರು ನಾವೆಲ್ಲ ಬೊಗಸೆ ಚಾಚಿ ನಿಂತ ಪುಟ್ಟ ಮಕ್ಕಳ ಹಾಗೆ. ನಮ್ಮ ಪಾಲಿಗೆ ಲಭ್ಯವಾಗುವ ಸಂತೋಷ ನಮ್ಮ ಬೊಗಸೆಯ ಗಾತ್ರಕ್ಕೆ ಸೀಮಿತವಾದುದು. ಆ ಬೊಗಸೆಯ ಗಾತ್ರದಿಂದಲೇ ಗುರುಗಳನ್ನು ಅಳೆಯುವ ಹಾಗಿಲ್ಲವಲ್ಲ!

ನಮ್ಮ ಗುರುಗಳ ಸಹೃದಯತೆ

✍ ಬಿ. ಮಾಯಾ ಮಂಜುನಾಥ ಕಾಮತ್

ಚಿಕ್ಕಂದಿನಿಂದಲೂ ನನಗೆ ಸಂಗೀತ ಕಲಿಯುವ ಆಸೆ. ಮನೆಯಲ್ಲಿ ಹಾಗೂ ಪರಿಸರದಲ್ಲಿ ಭಜನೆ, ಶೋಭಾನೆಗಳಲ್ಲಿ ಭಾಗವಹಿಸುತ್ತಿದ್ದೆ. ಧ್ವನಿಸುರುಳಿ, ಧ್ವನಿತಟ್ಟೆಗಳಲ್ಲಿ, ಆಕಾಶವಾಣಿ, ದೂರದರ್ಶನಗಳಲ್ಲಿ ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತದ ಪಲುಕುಗಳನ್ನು ಕೇಳಿ ಪುಳಕಿತಳಾಗುತ್ತಿದ್ದೆ.

ನಾನು ಮದುವೆಯಾಗಿ ಮಣಿಪಾಲಕ್ಕೆ ಬಂದ ಮೇಲೆ, ಆರ್ಥಿಕವಾಗಿ ಅನಿರೀಕ್ಷಿತ ಕುಸಿತಕ್ಕೆ ಒಳಗಾದ ಮೇಲೆ, ಸಂಗೀತ ಆಲಿಸುವುದೊಂದೇ ನನ್ನ ಸಮಾಧಾನದ ವಿಷಯವಾಗಿತ್ತು. ನನ್ನ ಗಂಡ ಮಂಜುನಾಥ ಕಾಮತ್ ಹಾಗೂ ಮಗ ಅನಂತ ನಾನು ಗುಣುಗುಣಿಸುವುದನ್ನು ಆಸಕ್ತಿಯಿಂದ ಆಲಿಸುತ್ತಿದ್ದುದನ್ನು ನೋಡಿ ಧೈರ್ಯ ಬಂದು ಧ್ವನಿಯಲ್ಲಿ ಹಾಡಲಾರಂಭಿಸಿದೆ!

ನನ್ನ ಗೆಳತಿಯರ ಒಡನಾಟದಿಂದಾಗಿ ನಾದವೈಭವಂ ಉಡುಪಿ ವಾಸುದೇವ ಭಟ್ಟರ ಸಂಸ್ಥೆಗೆ ಕಾಲಿರಿಸಿದೆ. ಗುರುಗಳು ಹಾರ್ಮೋನಿಯಂ ನುಡಿಸಿ ಶಿಷ್ಯರಿಂದ ಹಾಡಿಸುತ್ತಿದ್ದರು. ಸಂಗೀತ ದೇವತೆಯೇ ಅಲ್ಲಿ ನಲಿಯುತ್ತಿದ್ದಂತೆ ಕಂಡಿತು. ನಾನು ಪಕ್ಕದಲ್ಲಿದ್ದವರಲ್ಲಿ ಕೇಳಿದೆ, "ಫೀಸ್ ಎಷ್ಟು?" "ತುಂಬ ಜಾಸ್ತಿ" ಅವರು ಹೇಳಿದರು. ನನ್ನ ಉತ್ಸಾಹ ಝರ್ರನೆ ಇಳಿದುಹೋಯಿತು!

ಬಾಡಿದ ಮುಖದಲ್ಲಿದ್ದ ನನ್ನನ್ನು ಗುರುಗಳು ಕರೆದು ಮುಂದೆ ಕುಳ್ಳಿರಿಸಿದರು. ಶ್ರುತಿಯೊಂದಿಗೆ ಓಂಕಾರ ಸರಿಗಮ ಹೊರಡಿಸಿದರು. ಸಣ್ಣ ಹಾಡೊಂದನ್ನು ಹಾಡಿಸಿದರು. "ಇವತ್ತಿಗೆ ಇಷ್ಟು ಸಾಕು. ದ್ವಿತೀಯ ವಿಘ್ನ ಆಗಬಾರದು. ನಾಳೆ ಇಷ್ಟು ಹೊತ್ತಿಗೆ ಬನ್ನಿ" ಎಂದರು. "ಒಳ್ಳೆಯ ಸ್ವರ ಇದೆ, ಕಲಿಯುತ್ತ ಹೋದರೆ ಒಳ್ಳೆಯ ಗಾಯಕಿ ಆಗಬಹುದು" ಎಂದೂ ಸೇರಿಸಿದರು! ನನಗೆ ಕಣ್ಣೀರು ಬಂತು. ಒರಸಿಕೊಂಡೆ. "ಏಕೆ, ಏನಾಯಿತು?" ಎಂದು ಕೇಳಿದರು. "ತುಂಬ ಹಣ ಕಳಕೊಂಡಿದ್ದೇನೆ. ಅಷ್ಟು ಫೀಸು ಕೊಡುವುದಕ್ಕೆ ಆಗುತ್ತ ಇಲ್ಲ" ಎಂದು ಭಾವೋದ್ವೇಗದಿಂದ ಹೇಳಿಬಿಟ್ಟೆ. "ನಿಮ್ಮಲ್ಲಿ ಫೀಸು ಯಾರು ಕೇಳಿದರು? ಶ್ರದ್ಧೆಯಿಂದ ಕಲಿಯುವುದೇ ನನ್ನ ಫೀಸು" ಎಂದುಬಿಟ್ಟರು! ಇಂಥ ಗುರುಗಳೂ ಇದ್ದಾರೆಯೆ!

ಗುರುಗಳು ನನ್ನ ಪಾಲಿಗೆ ಇನ್ನೂ ಒಂದು ಕಾರಣಕ್ಕೆ ಪ್ರಾತಃಸ್ಮರಣೀಯರು. ನನ್ನ ಸಮುದಾಯ ನನಗೆ ನೀಡದ ಪ್ರೋತ್ಸಾಹವನ್ನೂ ಗುರುಗಳು ತಕ್ಕ ಕಾಲದಲ್ಲಿ ನನಗೆ ನೀಡಿದ್ದರು. ಕರ್ನಾಟಕ ಸಂಗೀತವನ್ನು ಸಾಮಾನ್ಯವಾಗಿ ಮೆಚ್ಚಿಕೊಳ್ಳದ ನನ್ನ ಸಮುದಾಯದಿಂದ ಲಭ್ಯವಾಗದ ಅವಕಾಶವನ್ನು ಗುರುಗಳು ನನಗೆ ನೀಡಿದ್ದರು. ಇವತ್ತು ನಾಲ್ಕು ಜನ ನನ್ನನ್ನು ಗುರುತಿಸುವಂತೆ ಮಾಡಿ, ತನ್ಮೂಲಕವಾಗಿ ನನ್ನ ಸಮುದಾಯದ ಕಣ್ಣಿಂದಲೂ ನನ್ನನ್ನು ಗಮನಾರ್ಹಳನ್ನಾಗಿಸಿದವರು ಗುರುಗಳು.

ಅಪರೂಪದ ಗುರುಗಳು

✍ ಸವಿತಾ ಕಿಣಿ

ನಾನು ಸುಮಾರು ಎರಡು ವರ್ಷದ ಹಿಂದೆ ಉಡುಪಿ ವಾಸುದೇವ ಭಟ್ಟರಲ್ಲಿ ಸಂಗೀತದ ಅಭ್ಯಾಸಕ್ಕಾಗಿ ಶಿಷ್ಯತ್ವ ಕೋರಿದಾಗ ಅವರಲ್ಲಿ ಇಂತಹ ಪ್ರತಿಭೆ ಇದೆ ಎಂಬ ಕಲ್ಪನೆಯೂ ನನಗೆ ಇರಲಿಲ್ಲ. ನನಗೆ ನನ್ನ ಬಾಲ್ಯಕಾಲದ ಆಶಯವಾದ ಸಂಗೀತ ಕಲಿಕೆಗೆ ಈ ರೀತಿಯ ಮೇರುವ್ಯಕ್ತಿತ್ವದ ಗುರುಗಳು ಸಿಗುತ್ತಾರೆ ಎಂಬ ಬಗ್ಗೆ ಯಾವ ನಿರೀಕ್ಷೆಯೂ ಇರಲಿಲ್ಲ. ಈ ಎರಡು ವರ್ಷಗಳಲ್ಲಿ ಅವರ ಶಿಷ್ಯೆಯಾಗಿ ಕಲಿತದ್ದು ಅವರು ಕಲಿಸಿದ್ದರಲ್ಲಿ ಅತ್ಯಲ್ಪ. ಅವರಲ್ಲಿ ಇರುವ ಸಾಗರ ಸದೃಶ ವಿದ್ವತ್ತು ನನ್ನನ್ನು ಮಂತ್ರಮುಗ್ಧಳನ್ನಾಗಿಸಿದೆ.

ಸಂಗೀತ ಗುರುಗಳಾಗಿ ಅವರು ಶುಲ್ಕ ಪಡೆಯುತ್ತಾರೆ ಎಂದರೆ ಅದು ತಪ್ಪು. ಏಕೆಂದರೆ ನಾವು ಶುಲ್ಕ ಎಂದು ಏನನ್ನಾದರೂ ನೀಡಿದರೆ ಅದರ ದುಪ್ಪಟ್ಟು ಅವರು ನಮಗಾಗಿ ವೆಚ್ಚ ಮಾಡುತ್ತಾರೆ. ಸಂಗೀತಕ್ಕೆ ಸಂಬಂಧಿಸಿದ ಕಾರ್ಯಕ್ರಮ ಎಲ್ಲಿಯೇ ಇರಲಿ, ಕಾರ್ಯಕ್ರಮ ಏರ್ಪಡಿಸಿದ್ದು ಯಾರೇ ಆಗಲಿ, ಅದಕ್ಕೆ ಸಂಭಾವನೆ ನೀಡಲಿ, ನೀಡದೆ ಇರಲಿ, ವಾಸುದೇವ ಭಟ್ಟರಿಗೆ ತಮ್ಮ ಶಿಷ್ಯವೃಂದದ ಪ್ರತಿಭೆ ಜನರಿಗೆ ಗೊತ್ತಾಗಬೇಕು ಎಂಬ 'ಒಂದಂಶ ಕಾರ್ಯಕ್ರಮ' ಮಾತ್ರ ಗುರಿ. ಅಂತಹ ಕಾರ್ಯಕ್ರಮ ಎಷ್ಟೇ ದೂರ ಇರಲಿ, ಅಲ್ಲಿಗೆ ವಾಹನ ವ್ಯವಸ್ಥೆ ಮಾಡಿಕೊಂಡು ತಮ್ಮ ತಂಡದವರನ್ನು ಒಗ್ಗೂಡಿಸಿ ಕರೆದುಕೊಂಡು ಹೊರಟೇಬಿಡುತ್ತಾರೆ.

ಸಾಮಾನ್ಯವಾಗಿ ಪ್ರಾಯೋಜಕರು ತಮ್ಮ ಕಾರ್ಯಕ್ರಮ ಮುಗಿದ ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ತಮ್ಮ ಮನೆಗೆ ಮರಳುವ ವ್ಯವಸ್ಥೆಯ ಬಗ್ಗೆ ಕಾಳಜಿ ವಹಿಸುವುದು ಕಡಿಮೆ. ಆದರೆ ಗುರುಗಳು ಇದಕ್ಕೆ ಅಪವಾದ. ವಾಹನ ವ್ಯವಸ್ಥೆ ಇಲ್ಲದವರಿಗೆ ವ್ಯವಸ್ಥೆ ಮಾಡಿಕೊಡುವುದು ಮಾತ್ರವಲ್ಲ, ಅವರು ಮನೆಗೆ ತಲುಪಿದ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ತಾನು ಮನೆ ಸೇರುವಷ್ಟರ ಮಟ್ಟಿನ ಕಾಳಜಿ ಹೊಂದಿದವರು.

ನಾನು ಕಣ್ಣಾರೆ ಕಂಡ ಒಂದು ಘಟನೆಯನ್ನು ಹೇಳಲೇಬೇಕು. ಎಂದಿನಂತೆ ನಾನು ಸಂಗೀತ ಕಲಿಯಲು ಬಂದಿದ್ದೆ. ಗುರುಗಳು ಹಾರ್ಮೋನಿಯಂ ನುಡಿಸುತ್ತಿದ್ದರು. ಅಷ್ಟರಲ್ಲಿ ಬೀದಿಯಲ್ಲಿ ಇನ್ನೊಂದು ಹಾರ್ಮೋನಿಯಂ ಸ್ವರ ಕೇಳಿಸಿತು. ಸ್ವಲ್ಪ ಹೊತ್ತಿನಲ್ಲೆ, ಮುಚ್ಚಿದ ಬಾಗಿಲ ಬಳಿ ಯಾರೋ ಹಾಡುತ್ತ ನಿಂತದ್ದು ತಿಳಿಯಿತು. ಗುರುಗಳು ಎದ್ದು ಬಾಗಿಲು ತೆಗೆದು ನಿಂತುಕೊಂಡರು. ಅಪರಿಚಿತರು ಹಾಡುತ್ತ ಮೇಲೆ ಬಂದರು. ಗುರುಗಳು ಹಾರ್ಮೋನಿಯಂ ಬಾರಿಸಿ ಹಾಡುತ್ತಿದ್ದವನ ಕುತ್ತಿಗೆಗೆ ಶಾಲು ಹೊದಿಸಿ ಕಾಣಿಕೆ ಕೊಟ್ಟು ನಮಸ್ಕರಿಸಿ ಬೀಳ್ಕೊಟ್ಟರು! ನಾವೆಲ್ಲ ಮೌನವಿಸ್ಮಿತರಾಗಿ ನೋಡುತ್ತಿದ್ದೆವು!

ನಾದಬ್ರಹ್ಮನ ಸಾನ್ನಿಧ್ಯ

✍ ಕಮಲಾ ಪ್ರಭು

ಹಿಂದೂಸ್ತಾನಿ ಸಂಗೀತವನ್ನು ಕೊಂಚವೇ ಕಲಿತಿರುವ ನನಗೆ ಸಂಗೀತದ ಗೀಳು ತುಂಬಾ ಇದೆ. ನನ್ನ ಸಂಗೀತದ ಗೀಳಿಗೆ, ಡಾಕ್ಟರಾಗಿರುವ ನಮ್ಮವರದೂ ಪ್ರೋತ್ಸಾಹವಿದೆ. ನನಗಾಗಿ ತಮ್ಮ ಕಂಪ್ಯೂಟರ್‌ನಲ್ಲಿ ಹಾಡುಗಳನ್ನು ಶೇಖರಿಸತೊಡಗಿದ ಅವರಿಗೂ ಸ್ವಲ್ಪ ಮಟ್ಟಿಗೆ ಸಂಗೀತದ ಗೀಳು ಹತ್ತಿಕೊಂಡಿದೆ. ಭಕ್ತಿಗೀತೆ, ಭಾವಗೀತೆಗಳನ್ನು ಕಲಿಸಬಲ್ಲ ಗುರುಗಳನ್ನು ಅರಸುತ್ತಿದ್ದ ನನಗೆ ಉಡುಪಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಶ್ರೀಮತಿ ಓಂಕಾರೇಶ್ವರಿಯವರಿಂದ ಉಡುಪಿ ವಾಸುದೇವ ಭಟ್ಟರ ವಿಷಯ ತಿಳಿಯಿತು. ಹೀಗೇ ಒಂದು ದಿನ ಅವರ ಮನೆಗೆ ಫೋನಾಯಿಸಿ, ಅವರ ಸಹಧರ್ಮಿಣಿಯಿಂದ ದಾರಿಯ ಮಾರ್ಗದರ್ಶನ ಪಡೆದು ಅವರ ಮನೆಗೆ ಬಂದುಬಿಟ್ಟೆ. ಅದು ಮೊದಲ ದರ್ಶನ.

ಇನ್ನೊಬ್ಬರಿಗೆ ಪಾಠವನ್ನು ಹೇಳಿಕೊಡುತ್ತಿದ್ದ ಗುರುಗಳು, "ಏನು" ಎಂದು ಕೇಳಿದರು. ಕುಳಿತುಕೊಂಡು ನನ್ನ ಅಭಿಲಾಷೆಯನ್ನು ತಿಳಿಸಿದೆ. "ಆಗಬಹುದು. ಒಂದು ಒಳ್ಳೆಯ ದಿನ ನೋಡಿ ಬನ್ನಿ" ಅಂದರು. "ನೀವು ಗುರುಗಳು. ನೀವೇ ಹೇಳಿಬಿಡಿ ಸಾರ್. ಅದೇ ನನಗೆ ಒಳ್ಳೆಯ ದಿನ" ಅಂದೆ. "ಈದಿನ ಆರು ಘಂಟೆಯ ತನಕ ರಾಹುಕಾಲವಿದೆ. ಅಲ್ಲಿಯತನಕ ಕುಳಿತುಕೊಳ್ಳಿ" ಎಂದರು.

ಆಮೇಲೆ ಆರು ಘಂಟೆಗೆ ಪಾಠ ಮೊದಲು ಮಾಡಿದರು. 'ಓಂ'ಕಾರದಿಂದ ಶುರುವಾದ ಪಾಠ. ಗುರುವಂದನೆಯಿಂದ ಮೊದಲಾಗಿ, ಗುರುವಂದನೆಯಲ್ಲಿ ಕೊನೆಗೊಂಡಿತು. "ವಿದ್ಯೆಗೆ ದ್ವಿತೀಯ ವಿಘ್ನ ಬರಬಾರದು. ನಾಳೆ ಬರಲೇಬೇಕು" ಎಂದು ಆದೇಶವಿತ್ತರು. ಮರುದಿನ ಅವರ ಮುಂದೆ ಕುಳಿತಾಗ, ಒಂದು ಪುಸ್ತಕದಲ್ಲಿ ಅವರೇ ಬರೆದು ತಂದಿದ್ದ ರಾಗಗಳನ್ನು ಹಾಡಿಸಿದರು. ನನ್ನ ಕಲಿಕೆಯ ಉತ್ಸಾಹವನ್ನು ಮೆಚ್ಚಿಕೊಂಡು, "ಆರು ತಿಂಗಳಲ್ಲಿ ನಿಮ್ಮನ್ನು ಹಾಡುವಷ್ಟು ತರಬೇತಿಗೊಳಿಸಬಹುದೆನಿಸುತ್ತದೆ" ಎಂದೂ ಶ್ಲಾಘಿಸಿದರು.

"ನಾದಬ್ರಹ್ಮ, ಸ್ವರಬ್ರಹ್ಮ ಸೇರಿದರೆ ಮಾತ್ರ ಸಂಗೀತವಾಗುತ್ತದೆ. ಸಂಗೀತವನ್ನು ಎಂದೂ ಅಂತರಾತ್ಮದಲ್ಲಿ ಅನುಭವಿಸಿ ಹಾಡಬೇಕು" ಎಂದು ನಮ್ಮ ಗುರುಗಳು ಹೇಳುತ್ತಿರುತ್ತಾರೆ. ನಮ್ಮ ಪಾಲಿಗೆ ಅವರು ನಡೆದಾಡುವ ನಾದಬ್ರಹ್ಮ! ಅವರಿಗೆ ಶಿಷ್ಯರಲ್ಲಿ ಅನನ್ಯವಾದ ಪ್ರೀತಿ, ಗೌರವ. ಅವರು ನಮ್ಮವರೇ ಎಂಬ ಪ್ರೀತಿ, ಆದರ. ಎಷ್ಟೇ ಶಿಷ್ಯರಿರಲಿ, ಒಬ್ಬೊಬ್ಬರಿಗೇ ಪಾಠ ಹೇಳುವ ವಿಶಿಷ್ಟ ರೀತಿ. ಎಲ್ಲರಲ್ಲೂ ಏನಾದರೂ ಕಂಡು ಮೆಚ್ಚಿಕೊಳ್ಳುವ ವಿಶೇಷ ಗುಣ. ಗುರುಗಳ ವ್ಯಕ್ತಿತ್ವಕ್ಕೆ ಪೂರಕವಾಗಿ ಹೊಂದಿಕೊಂಡು ಹೋಗುವ, ಅತಿತಾಳ್ಮೆಯ

ಅವರ ಸಹಧರ್ಮಿಣಿ ಸುನಂದಮ್ಮನವರನ್ನು ನಾನೆಂದಿಗೂ ಮರೆಯಲಾರೆ. ಸಂಗೀತದೊಂದಿಗೆ ಜೀವನದ ಪಾಠಗಳನ್ನೂ ಕಲಿಸುವ ಈ ಜೋಡಿ ಅಪರೂಪದ್ದು.

ಗುರುಗಳ ಬಗ್ಗೆ ಹೇಳ ಹೊರಟಾಗೆಲ್ಲ ನನಗೊಂದು ಘಟನೆ ನೆನಪಾಗುತ್ತದೆ. ಈ ವರ್ಷದ (2007) ಜನವರಿ 26ರ ಆಚರಣೆಗಾಗಿ ನಾವು ಶಿಷ್ಯರೆಲ್ಲ ತಯಾರಿ ನಡೆಸುತ್ತಿದ್ದೆವು. ಗುರುಗಳ ಅಳಿಯ ಎಂ. ಎಸ್. ಗಿರಿಧರ್ ತರಬೇತಿ ನೀಡುತ್ತಿದ್ದರು. ಗುರುಗಳಿಗೆ ಅವರ ಸ್ನೇಹಿತರೊಬ್ಬರಿಂದ ಫೋನ್ ಬಂತು. ಮಾತನಾಡಿದವರು ಬಹಳ ದೊಡ್ಡ ಕಲಾವಿದರು. ಅವರಿಗೊಂದು ಸಾರ್ವಜನಿಕ ಸನ್ಮಾನವಾಯಿತಂತೆ. ಒಂದು ಲಕ್ಷ ರೂಪಾಯಿ ಬೆಲೆಬಾಳುವ ಬೆಳ್ಳಿಯ ಗದೆಯೊಂದನ್ನಿತ್ತು ಅವರನ್ನು ಪುರಸ್ಕರಿಸಿದರಂತೆ. ಈ ವಿಷಯವನ್ನೆಲ್ಲ ನಮಗೆ ತಿಳಿಸಿದ ಗುರುಗಳು ಕೊನೆಯಲ್ಲಿ ಮಾರ್ಮಿಕವಾಗಿ ಹೇಳಿದರು, "ಈ ಕಲಾವಿದರಿಗೆ ಮೊನ್ನೆಯಷ್ಟೇ ಒಂದು ಆಪರೇಷನ್ ಆಯಿತು. ಎಪ್ಪತ್ತೈದು ಸಾವಿರ ರೂಪಾಯಿ ಖರ್ಚಾಯಿತು. ಮೈತುಂಬಾ ಸಾಲವಾಯಿತಂತೆ. ಈ ಗದೆಯನ್ನು ಎಂಬತ್ತೈದು ಸಾವಿರಕ್ಕೆ ಮಾರಿ ಸಾಲ ಮುಗಿಸಿ ಬಿಟ್ಟರಂತೆ". ಇಷ್ಟು ಹೇಳುವಾಗ ಗುರುಗಳ ಮುಖವೂ ಕಣ್ಣೂ ದುಃಖದಿಂದ ಕೆಂಪೇರಿಬಿಟ್ಟಿತ್ತು.

ಒಂದು ಘಟನೆ, ಒಂದು ಪಾಠ

✍ ಶಾರದಾ ದೈವಜ್ಞ

ನನ್ನ ಗುರುಗಳಲ್ಲಿಗೆ ಒಂದು ದಿನ ಹೋದಾಗ ಒಂದು ಸಂಭ್ರಮದ ಸಂಗತಿ ನಡೆಯಿತು. ಯಾರೋ ಒಬ್ಬರು ಧಾರವಾಡದ ಕಡೆಯವರು ಬಂದಿದ್ದರು. ಅವರು ಅಧ್ಯಾತ್ಮ ವಿಚಾರದಲ್ಲಿ ತುಂಬಾ ಅನುಭವಸ್ಥರು ಹಾಗೂ ಸಂಗೀತ ವಿದ್ವಾಂಸರಾಗಿದ್ದರಂತೆ. ನಮ್ಮ ಗುರುಗಳಲ್ಲಿ ಅವರು ತಮ್ಮ ಪರಿಚಯ ಮಾಡಿಕೊಂಡು, "ನಿಮ್ಮಲ್ಲಿ ಒಂದು ಉಪನ್ಯಾಸವನ್ನು ಮಾಡಿಸಿಕೊಳ್ಳಿ, ನಿಮ್ಮ ಶಿಷ್ಯಂದಿರನ್ನೆಲ್ಲಾ ಕರೆಸಿಕೊಳ್ಳಿ" ಎಂದರು. ಇಷ್ಟು ಹೇಳಿದ ಮೇಲೆ ನಮ್ಮ ಗುರುಗಳ ಬಗ್ಗೆ ಹೇಳಬೇಕೆ? ಕೂಡಲೆ ಎಲ್ಲಾ ಶಿಷ್ಯವರ್ಗಕ್ಕೆ ಫೋನ್ ಮಾಡಿದ್ದಾಯಿತು. ಕವಿಗಳು, ಸಾಹಿತಿಗಳನ್ನೆಲ್ಲಾ ಅರ್ಧಗಂಟೆಯೊಳಗೆ ಬರಮಾಡಿಕೊಂಡು ಒಂದು ಗಂಟೆ ಅವರ ಉಪನ್ಯಾಸವನ್ನು ಮಾಡಿಸಿಯೇಬಿಟ್ಟರು. ಇಷ್ಟು ಮಾತ್ರವಲ್ಲ, ಅವರಿಗೆ ಶಾಲು ಹೊದಿಸಿ, ಫಲಪುಷ್ಪ ಕಾಣಿಕೆಯೊಂದಿಗೆ ಬಹಳ ವಿಜೃಂಭಣೆಯಿಂದ ಸನ್ಮಾನವನ್ನು ಮಾಡಿದ್ದ ಘಟನೆಯನ್ನು ನೆನಪಿಸಿಕೊಂಡರೆ ಇವತ್ತೂ ಆಶ್ಚರ್ಯವಾಗುತ್ತದೆ.

ನಮ್ಮ ಗುರುಗಳು ಎಲ್ಲ ಕಲಾವಿದರನ್ನೂ ಹೀಗೇ ಗೌರವಿಸುತ್ತಾರೆ ಹಾಗೂ ಪ್ರೀತಿಯ ನುಡಿಗಳಿಂದ ಸಂತೋಷ ಪಡಿಸುತ್ತಾರೆ. ಮಾತ್ರವಲ್ಲ, ಅವರ ದುಃಖ ಕಂಡು ಮರುಗುತ್ತಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಅವರು ಸಮಾನ ಪ್ರೀತಿಯಿಂದ ಆದರಿಸುತ್ತ ಪಾಠ ಮಾಡುವ ರೀತಿ ನೋಡಿದರೆ, ಬೇರೆ ಎಲ್ಲೂ ಇಂತಹ ಗುರುಗಳು ಸಿಗುವುದು ದುರ್ಲಭ ಎನಿಸುತ್ತದೆ. ಸ್ವಲ್ಪ ದಡ್ಡ ಮಕ್ಕಳು ಕಲಿಯಲು ಬಂದರೆ ಧೈರ್ಯ ತುಂಬಿ, "ನೀನು ತುಂಬಾ ಚೆನ್ನಾಗಿ ಹಾಡುತ್ತಿ, ಸ್ವಲ್ಪ ಪ್ರಯತ್ನ ಪಟ್ಟರೆ ನನಗಿಂತ ಹುಶಾರಾಗಬಹುದು. ಯಾಕೆಂದರೆ ಪಾಠ ಕಲಿಯುವಾಗ ನನ್ನ ಗುರುಗಳ ಶಿಷ್ಯರಲ್ಲಿ ಅತೀ ದಡ್ಡ ಶಿಷ್ಯ ಎಂದರೆ ನಾನೇ!" ಎಂದು ತಮಾಷೆಯಾಗಿ ಹೇಳುತ್ತಿದ್ದರು. ಅವರಲ್ಲಿ ಕಲಿತ ಅನೇಕ ಮಂದಿ ಸಂಗೀತ, ಸಿನಿಮಾ ಕ್ಷೇತ್ರಗಳಲ್ಲಿ ದೊಡ್ಡ ದೊಡ್ಡ ಹೆಸರು ಪಡೆದಿದ್ದಾರೆ. ವೈದ್ಯಕೀಯ, ಸರಕಾರಿ ಕ್ಷೇತ್ರಗಳಲ್ಲೂ ಇದ್ದಾರೆ. ನಮ್ಮ ಗುರುಗಳು ಎಲ್ಲರಲ್ಲೂ ಸಮಾನ ನಂಬಿಕೆ, ಸಮಾನ ಪ್ರೀತಿ ಇಟ್ಟು ಶ್ರಮಿಸಿ ಕಲಿಸುತ್ತಾರೆ. ತಾವು ಎಷ್ಟು ಕಷ್ಟದಲ್ಲಿದ್ದರೂ ತೋರಿಸಿಕೊಳ್ಳದೆ, ಮುಗ್ಧ ನಗೆಮೊಗದಿಂದಲೆ ಸಮಯ ಸಾಗಿಸುವ ನಮ್ಮ ಗುರುಗಳನ್ನು ಕಂಡರೆ ಹೆಮ್ಮೆಯೂ, ಬೇಸರವೂ ಒಟ್ಟಿಗೇ ಆಗುತ್ತದೆ.

ಗುರುಗಳು ಕಲಿಸಿದ ಫಿಲಾಸಫಿ

✍ ಎಂ. ವಸಂತ ಕುಮಾರ್

ನಾನು ಆ ದಿನ ಪಾಠಕ್ಕೆಂದು ಗುರುಗಳಲ್ಲಿಗೆ ಹೋಗಿದ್ದೆ. ಅಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ಇಬ್ಬರು ಹಾರ್ಮೋನಿಯಂ ಮತ್ತು ತಬ್ಲಾದ ಜೊತೆಗೆ ಅಲ್ಲಿಗೆ ಬಂದರು. ಗುರುಗಳನ್ನು ನೋಡಿ ದೂರದಿಂದಲೇ ನಮಸ್ಕರಿಸಿದರು. ಗುರುಗಳು ಏನು ಎಂಬಂತೆ ಅವರನ್ನು ನೋಡಿದರು. ಇವರು ಮನೆ ಮನೆಗೆ ಹೋಗಿ ಹಾಡುತ್ತಾ ಭಿಕ್ಷೆ ಬೇಡುವವರಾಗಿದ್ದರು. ಅವರು ನಿಮ್ಮ ಸನ್ನಿಧಿಯಲ್ಲಿ ಹಾಡುವ ಅವಕಾಶ ಕೊಡಬೇಕೆಂದು ಕೇಳಿಕೊಂಡರು.

ಸರಿ, ಹಾಡಿ ಎಂದರು ಗುರುಗಳು. ಬಂದವರು ಎರಡು ಹಾಡುಗಳನ್ನು ಹಾಡಿ ನಿಲ್ಲಿಸಿದರು. ಗುರುಗಳು ಸ್ವಲ್ಪ ಹೊತ್ತು ನಿಲ್ಲಿ ಎಂದು ಹೇಳಿ ತಮ್ಮ ಪಾಠವನ್ನು ಮುಂದುವರಿಸಿದರು. ಪಾಠ ಮುಗಿದ ನಂತರ ಹಾಡಿದವರನ್ನು ನೋಡಿ, ತನಗೆ ಗೌರವಾರ್ಥವಾಗಿ ಬಂದಿರುವ ಎರಡು ಉತ್ತಮ ಶಾಲನ್ನು ಅವರಿಬ್ಬರಿಗೆ ಹೊದಿಸಿ (ಇಂಥ ಶಾಲನ್ನು ಅವರು ಎಂದೂ ನೋಡಿರಲಿಕ್ಕಿಲ್ಲ!), ಗಂಧದ ಮಾಲೆಯನ್ನು ಹಾಕಿ ಐವತ್ತೈವತ್ತು ರೂಪಾಯಿಯನ್ನು ಕೊಟ್ಟು, ಆದರದಿಂದ, ಸಂತೋಷದಿಂದ ಕಳುಹಿಸಿಕೊಟ್ಟರು. ಆದರೆ ಪಡೆದುಕೊಂಡವರು ಸಿಕ್ಕಿದ್ದನ್ನು ದೋಚಿಕೊಂಡವರಂತೆ, ಕ್ಷಣಕಾಲ ಇಲ್ಲಿ ನಿಂತರೆ ವಾಪಾಸ್ ಪಡೆದುಕೊಳ್ಳುವರೋ ಏನೋ ಎಂಬಂತೆ ಕೃತಜ್ಞತೆಗೆ ಒಂದು ನಮಸ್ಕಾರವನ್ನೂ ಕೂಡಾ ಮಾಡದೆ ನಡೆದೇ ಬಿಟ್ಟರು. ಆದರೆ ಗುರುಗಳು ಅವರನ್ನು ಕಳುಹಿಸಿ ತನ್ನ ಸ್ಥಾನದಲ್ಲಿ ಬಂದು ಕುಳಿತು ಹತ್ತು ನಿಮಿಷ ತುಂಬಾ ಆನಂದದ ಅಲೆಯಲ್ಲಿ ಮುಳುಗಿದಂತಿದ್ದರು. ಆದರೆ ನನಗೋ ಮೈಯೆಲ್ಲಾ ಉರಿ ಬಂದಂತಾಗಿತ್ತು. ಇದು ಗುರುಗಳಿಗೆ ಸನ್ಮಾನವಾಗಿ ಬಂದ ಶಾಲು, ಹಾರ. ಅದನ್ನೇ ಕೊಡಬೇಕಿತ್ತೇ? ನಾನೇ ಬೇರೆ ಶಾಲು ಬೇಕಿದ್ದರೆ ತಂದುಕೊಡುತ್ತಿದ್ದೆ - ಎಂಬಷ್ಟು ಸಿಟ್ಟು ಬಂದಿತ್ತು. ಹತ್ತು ನಿಮಿಷದ ನಂತರ ಗುರುಗಳು ಸೌಮ್ಯರಾಗಿ ನನ್ನನ್ನು ನೋಡಿದರು. ಬಹುಶಃ ನನ್ನ ಮನಸ್ಸನ್ನು ಅರ್ಥ ಮಾಡಿಕೊಂಡವರಂತೆ ನೋಡಿ, "ಏನು? ವಸಂತ ಕುಮಾರರು ಗಂಭೀರವಾದಂತಿದೆ?" ಎಂದು ಪಾಠಕ್ಕೆ ಬಂದ ಬೇರೆ ವಿದ್ಯಾರ್ಥಿಗಳ ಹತ್ತಿರ ತಮಾಷೆಯಾಗಿ ಕೇಳಿದರು. ಎಲ್ಲರೂ ಜೋರಾಗಿ ನಕ್ಕುಬಿಟ್ಟರು. ನನಗೂ ಅವಮಾನವಾದಂತಾಗಿ, ಸಿಟ್ಟಿನ ಭರದಲ್ಲಿ ಸ್ವಲ್ಪ ಗಟ್ಟಿಯಾಗಿಯೇ, "ಏನು ಗುರುಗಳೇ? ನಿಮಗೆ ಗೌರವವಾಗಿ ಬಂದ ಶಾಲನ್ನು ಇನ್ನೊಬ್ಬರಿಗೆ ದಾನ ಮಾಡುವುದೇ? ಅದಕ್ಕೂ ಪಾತ್ರಾಪಾತ್ರವಿಲ್ಲವೇ?" ಎಂದೆ.

ಗುರುಗಳು ಸಮಾಧಾನವಾಗಿ ಮುಗ್ಧ ಮಗುವಿನಂತೆ ನಗುತ್ತಾ, "ಗೌರವ ಎಂದರೆ ಬರೇ ಶಾಲು ಹೊದೆಸಿ ಹಾರ ಹಾಕುವುದು ಮಾತ್ರ ಎಂದು ಎಣಿಸಿಕೊಳ್ಳಬೇಡಿ. ಒಂದು

ದುಂಬಿಯು ತನ್ನ ಪುಟ್ಟ ಹೊಟ್ಟೆ ತುಂಬಿಸಿಕೊಳ್ಳಲು ಸಾವಿರಾರು ಹೂಗಳ ಮೇಲೆ ತನ್ನ ಝೇಂಕಾರವನ್ನು ಮಾಡುತ್ತಾ ಅದರಲ್ಲಿರುವ ಜೇನನ್ನು ಹೀರುತ್ತದೆ. ದುಂಬಿ ಧರ್ಮಕ್ಕೆ ಜೇನನ್ನು ಹೀರದೇ ಹೂವಿನ ಕುಲವನ್ನೇ ಉದ್ಧಾರ ಮಾಡುವಂಥ ಪರಾಗ ಸ್ಪರ್ಶದ ಕಾರ್ಯವನ್ನು ತಿಳಿದೋ ತಿಳಿಯದೆಯೋ ಮಾಡಿದಂತೆ, ಒಬ್ಬ ಹಾಡುಗಾರ ಭಿಕ್ಷುಕ ತನಗೆ ತಿಳಿಯದೆಯೇ ತನ್ನ ಹೊಟ್ಟೆಪಾಡಿಗಾಗಿ ಸಾವಿರಾರು ಮನೆಗಳಿಗೆ ಅಲೆಯುತ್ತಾ, ತನಗೆ ತಿಳಿದಷ್ಟು ಹಾಡನ್ನು ಹಾಡುತ್ತಾ, ಸಂಗೀತವೆಂಬ ಅಮೃತವನ್ನು ಹಂಚುವ ಪ್ರಯತ್ನವನ್ನು ಮಾಡುತ್ತಾನೆ. ಇದು ಸಾಮಾನ್ಯ ಕೆಲಸವಲ್ಲ. ಒಂದು ಮನೆಯುವರು ಭಿಕ್ಷೆ ಹಾಕಿದರೆ ಇನ್ನೊಂದು ಮನೆಯವರು ಹೀನಾಯವಾಗಿ ನಿಂದಿಸಿ ಕಳುಹಿಸುತ್ತಾರೆ. ಆದರೂ ತನ್ನ ಛಲ ಬಿಡದೆ ಅದೇ ಹಾಡನ್ನು ಪಕ್ಕದ ಮನೆಯಲ್ಲಿ ಹಾಡುತ್ತಾನೆ. ಅಲ್ಲಿ ಹಾಡುವಾಗ ನಿಂದಿಸಿದವನೂ ಕೇಳುತ್ತಾನೆ. ಈ ರೀತಿಯ ಸಂಗೀತ ಸೇವೆಯಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸುವ ಕೆಲಸವನ್ನು ಮಾಡಲು ನಾನು ಪ್ರಯತ್ನಿಸಿದ್ದೇನೆ" ಎಂದರು. ನಾವೆಲ್ಲರೂ ಅವರು ಹೇಳುವುದನ್ನೇ ಕೇಳುತ್ತಾ ಮೈಮರೆತಿದ್ದೆವು. ಇಂತಹ ಮಹಾನ್ ಮಾರ್ಗದರ್ಶಕರು ನಮ್ಮೆಲ್ಲರ ನೆಚ್ಚಿನ ಗುರುಗಳು.

ನಮ್ಮ ಗುರುಗಳ ಇನ್ನೊಂದು ವೈಶಿಷ್ಟ್ಯವೆಂದರೆ ಅವರು ಯಾರನ್ನೂ ಪ್ರಶಂಸಿಸುವುದಿಲ್ಲ. ಮುಖಸ್ತುತಿ ಅವರಿಗೆ ಅಭ್ಯಾಸವಿಲ್ಲದ ಕಲೆ. ನಾನು ಗುರುಗಳ ಹಿಮ್ಮೇಳದಲ್ಲಿ ಎಷ್ಟೋ ಕಾರ್ಯಕ್ರಮಗಳಲ್ಲಿ ಕೆಲಸ ಮಾಡಿದ್ದೇನೆ. ಅವರು ಯಾವ ಅಪ್ರಯೋಜಕರನ್ನೂ ಪ್ರಶಂಸಿಸಿದ್ದನ್ನು ನಾನು ಕಂಡಿಲ್ಲ. ಎಲ್ಲರೂ ತಮ್ಮ ಹಾಗೆಯೇ ಎಂದು ಅವರು ತಿಳಿಯುತ್ತಾರೆ. ಆದರೆ ಲೋಕದ ಜನ ಎಷ್ಟು ಚಾಣಾಕ್ಷರಾಗಿದ್ದಾರೆ ಎಂದು ಅವರಿಗೆ ತಿಳಿದಿಲ್ಲ! ನಾನು ಅವರಿಗೆ ತಿಳಿಯ ಹೇಳ ಪ್ರಯತ್ನಿಸಿದಾಗೆಲ್ಲ ಅವರು "ಲೋಕದ ಡೊಂಕ ನೀವೇಕೆ ತಿದ್ದುವಿರಿ" ಎಂದು ಹಾಡುತ್ತಾರೆ.

ಹಳೆಯ ಮನೆಯ ಪುನರ್ನಿರ್ಮಾಣ

✍ ನಯನಾ ಶೆಣೈ

ಬ್ಯಾಂಕ್ ಅಧಿಕಾರಿಯಾಗಿದ್ದ ನಾನು ಸ್ವಯಂ ನಿವೃತ್ತಿ ತೆಗೆದುಕೊಂಡ ನಂತರ ಕಳೆದ ಐದು ವರ್ಷಗಳಿಂದ ಗುರುಗಳಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದೇನೆ. ಪ್ರಾಯದವರಿಗೆ ಕಲಿಸುವುದು ಕಷ್ಟವಂತೆ. ಆದರೆ ಯಾರಿಗೂ ಬೇಡವೆನ್ನಲಾಗದ ಗುರುಗಳ ದೌರ್ಬಲ್ಯ ನನ್ನ ಬಂಡವಾಳವಾಗಿದೆ.

ನನ್ನ ಸಂಗೀತಾಸಕ್ತಿ ಸುದೀರ್ಘ ಕಾಲದ್ದು. ಸುಮಾರು ನಲವತ್ತು ವರ್ಷಗಳ ಹಿಂದೆ ಅಲಂಕಾರ್ ಟಾಕೀಸ್ ಪಕ್ಕದಲ್ಲಿ ನಮ್ಮ ಮನೆಯಿದ್ದಿತ್ತು. ಹಾಗೆ ಕೇಳುತ್ತಿದ್ದೆ, ಸಿನಿಮಾ ಹಾಡುಗಳನ್ನು; ಮತ್ತೆ ಗ್ರಾಮಾಫೋನ್ ಕೇಳುತ್ತಾ ಬೆಳೆಸಿಕೊಂಡೆ ಸಂಗೀತಾಸಕ್ತಿಯನ್ನು. ನಾನು ಸಾಗರದಲ್ಲಿದ್ದ ದಿನಗಳಲ್ಲಿ ಬ್ಯಾಂಕ್ ಉದ್ಯೋಗ ನನ್ನ ದೇಹ ಮತ್ತು ಮನಸ್ಸುಗಳನ್ನು ಸುಸ್ತಾಗಿಸಿದಾಗ, ಮನಃಸಂತೋಷಕ್ಕಾಗಿ ಸಂಗೀತಾಭ್ಯಾಸ ಆರಂಭಿಸಿದ್ದೆ. ಗವಾಯಿಗಳೊಬ್ಬರ ಶ್ರೀಮತಿ ಪಾರ್ವತಮ್ಮ ನನ್ನ ನೆರವಿಗೆ ಬಂದರು. ಒಂದು ಹಾರ್ಮೋನಿಯಂ ಕೂಡ ಖರೀದಿಸಿದ್ದೆ. ಮತ್ತೆ ಎಲ್ಲ ಕೈಬಿಟ್ಟಿದ್ದೆ.

ಆ ಪಾರ್ವತಮ್ಮ ಒಂದು ಮಾತು ಹೇಳಿದರು, "ಸರಿಗಮ ಎಂದರೆ ಸಕಲರೋಗ ನಿವಾರಕ" ಎಂದು. ಉಡುಪಿಗೆ ಬಂದ ನಂತರ, ಗುರುಗಳ ಸಂಗೀತ ಚಿಕಿತ್ಸೆಯ ಮಾತು ನನ್ನನ್ನು ಅವರ ಸಾನ್ನಿಧ್ಯಕ್ಕೆ ಕರೆತಂದಿತು. ಎಷ್ಟೆಲ್ಲ ಮದ್ದುಗಳಿಗೆ ಜಗ್ಗಿರದ ನನ್ನ ವಾತಸಂಬಂಧಿ ಮಂಡಿ ನೋವು ಇವತ್ತು ಆಲಾಪನೆಗೆ ತಲೆಬಾಗಿದೆ. ಸಂಗೀತವೇ ನನ್ನ ರೋಗಕ್ಕೆ ಮದ್ದೆಂದು ಈಗ ನನಗೆ ಖಚಿತವಾಗಿಬಿಟ್ಟಿದೆ.

ಆದರೆ ಗುರುಗಳಿಗೆ ಸಾಧ್ಯವಾಗಿರುವ ಸಂಗೀತ ನಿಷ್ಠೆ ಮಾತ್ರ ನನ್ನಿಂದ ಸಾಧ್ಯವಾಗುತ್ತಿಲ್ಲ. ಈ ವಯಸ್ಸಿನಲ್ಲಿ ಕೂಡ ಬೆಳಗಿನಿಂದ ಸಂಜೆಯ ತನಕ ಅವರು ಕುಳಿತೇ ಇರುತ್ತಾರೆ, ಕಲಿಸುತ್ತಲೇ ಇರುತ್ತಾರೆ. ನಾನು ಸರಿಯಾಗಿ ಕ್ಲಾಸಿಗೆ ಬಾರದಿದ್ದರೂ ಅವರು ಆಕ್ಷೇಪಿಸುವುದಿಲ್ಲ. ನನ್ನ ದೇಹ ಹೇಳುತ್ತಿದೆ, 'ವಯಸ್ಸಾಗಿದೆ' ಎಂದು. 'ನನಗೆ ಪ್ರಾಯವಾಗಿದೆ' ಎಂದನ್ನಿಸಿದಾಗೆಲ್ಲ, ಎಂದು ಹೇಳಿದಾಗೆಲ್ಲ, 'ಹಾಗೇನಿಲ್ಲ' ಎನ್ನುತ್ತಾರೆ ಗುರುಗಳು.

ಅವರ ಸಂಗೀತ ನನ್ನ ದೇಹ ಮತ್ತು ಮನಸ್ಸೆಂಬ ಹಳೆಯ ಮನೆಯನ್ನು ಮತ್ತೆ ಕಟ್ಟಿ ನಿಲ್ಲಿಸುತ್ತಿದೆ.

ಐವತ್ತೊಂದನ್ನು ಹದಿನೈದಾಗಿಸುವ ಗುರುಗಳು

✍ ಎ. ಕೃಷ್ಣಮೂರ್ತಿ

ಯಾರು ಯಾವ ವಯಸ್ಸಿಗೆ ಏನನ್ನು, ಎಷ್ಟು ಕಲಿಯಬೇಕು ಎಂಬ ಬಗ್ಗೆಲ್ಲ ಇರುವ ನಿಯಮಗಳು ಪ್ರಾಯಶಃ ಸಂಗೀತಕ್ಕೆ ಅನ್ವಯಿಸುವುದಿಲ್ಲ. ಸಂಸ್ಕೃತದಲ್ಲಿ ಎಂ.ಎ, ಎಲ್.ಎಲ್.ಬಿ, ಒಂದೈದು ವರ್ಷ ಜ್ಯೋತಿಷ ಅಭ್ಯಾಸ ಮಾಡಿ, ಸೈಕಾಲಜಿ ಎಂ.ಎ. ಅರ್ಧಕ್ಕೆ ಬಿಟ್ಟು ಬಿಎಸ್‌ಎನ್‌ಎಲ್‌ನಲ್ಲಿ ಉದ್ಯೋಗದಲ್ಲಿರುವ ನಾನು ಈಗೊಂದಿಷ್ಟು ಸಮಯದಿಂದ ಗುರುಗಳಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದೇನೆ. ನನ್ನೊಂದಿಗೆ ನನ್ನ ಮಗ ಮತ್ತು ಮಗಳು ಬರುತ್ತಾ ಇದ್ದಾರೆ. ಮೂವರೂ ಒಟ್ಟಿಗೇ ಕಲಿಯುತ್ತಿದ್ದೇವೆ. ದುಡಿಮೆಯ ನಂತರದ ಸಂಗೀತ ಐವತ್ತೊಂದರ ವಯಸ್ಸನ್ನು ಹದಿನೈದಾಗಿಸುತ್ತಿದೆ.

ಗುರುಗಳನ್ನು ನಾನು 1980ಕ್ಕೂ ಹಿಂದಿನಿಂದ ನೋಡುತ್ತಿದ್ದೇನೆ. ಅವರು ಪತ್ರಿಕಾ ವರದಿಗಾರರಾಗಿದ್ದ ದಿವಸಗಳಲ್ಲಿ ನಟ್ಟಿರುಳಲ್ಲಿ ಉಡುಪಿಯ ಮಾರುತಿ ವೀಥಿಕಾದಲ್ಲಿರುವ ನಮ್ಮ ತಂತಿ ಕಚೇರಿಗೆ ಸುದ್ದಿರವಾನೆಗಾಗಿ ಬರುತ್ತಿದ್ದರು. ಅವರ ಅಣ್ಣನ ಮಗಳು ಗೀತಾ ನನ್ನ ಶ್ರೀಮತಿಯ ಸಹಪಾಠಿ. ಆದರೆ ಇದೆಲ್ಲಕ್ಕಿಂತ ಹೆಚ್ಚಾಗಿ, ಬಹುಸಮಯದಿಂದ ಯಾವುದೇ ಮದ್ದಿಗೆ ಜಗ್ಗದೇ ನನ್ನನ್ನು ಕಾಡುತ್ತಿದ್ದ ಆಸ್ತಮಾ ನನ್ನನ್ನು ಗುರುಗಳಲ್ಲಿಗೆ ಕರೆತಂದಿತು.

ಆಸ್ತಮಾ ನನ್ನ ಜೀವ ಹಿಂಡುತ್ತಿದ್ದ ದಿನಗಳಲ್ಲಿ ಒಬ್ಬರು ಡಾಕ್ಟರ್ ಸಂಗೀತ ಚಿಕಿತ್ಸೆಯ ಬಗ್ಗೆ ಹೇಳಿದರು. ಸಂಗೀತ ಕಲಿಯಿರಿ ಎಂದರು. ನಾಭಿಯಿಂದ ಹೊರಡುವ ಸ್ವರ ಆಸ್ತಮಾವನ್ನು ಹತೋಟಿಗೆ ತರುತ್ತದೆ ಎಂದರು. ಈಗ ಯಾವ ಮದ್ದೂ ಮಾಡದ ಕೆಲಸವನ್ನು ಓಂಕಾರ ಆಲಾಪ ಮಾಡುತ್ತಿದೆ.

ನಾನು ಸಂಗೀತ ಕಲಿಯುವುದಕ್ಕೆ ಇನ್ನೊಂದು ಕಾರಣವೂ ಇದೆ. ದೇವರು ಮೆಚ್ಚುವ ಹಾಗೆ ಸಂಸ್ಕೃತ ಶ್ಲೋಕಗಳನ್ನು ಹೇಳಬೇಕು ಎಂಬ ಉದ್ದೇಶದಿಂದ ರಾಗಗಳನ್ನು ಕಲಿಯುತ್ತಿದ್ದೇನೆ. ಹಿಂದೊಮ್ಮೆ ಆಲಾಪದಲ್ಲಿ ತಪ್ಪಿದಾಗ, ನನ್ನ ರೂಂಮೇಟ್ ಆಗಿದ್ದ ಜಯರಾಮ ಕಾರಂತರು ಬೈದುಬಿಟ್ಟಿದ್ದರು.

ಗುರುಗಳಲ್ಲಿ ಬರುತ್ತಿರುವುದಕ್ಕೆ ಎಷ್ಟೆಲ್ಲ ಕಾರಣಗಳಿವೆ, ನೋಡಿ!

ನಮ್ಮ ಗುರುಗಳ ವೈಶಿಷ್ಟ್ಯ

✍ ವಾಣಿಶ್ರೀ

ನನ್ನ ತಂದೆ ರಾಘವೇಂದ್ರಾಚಾರ್ಯರು ಎಂಜಿಎಂನಲ್ಲಿ ಫಿಸಿಕ್ಸ್ ಲೆಕ್ಚರರ್. ಅವರ ಅಣ್ಣ ವಾಸುದೇವ ಭಟ್ಟರ ಸಹಪಾಠಿ ಆಗಿದ್ದರು. ಆದರೂ ನಾನು ಗುರುಗಳಲ್ಲಿ ಕಲಿಕೆಯನ್ನು ಆರಂಭಿಸಿದ್ದು ಇತ್ತೀಚೆಗೆ. ಅದಕ್ಕೂ ಮೊದಲೇ ನಾನು ಸಂಗೀತದಲ್ಲಿ ಜೂನಿಯರ್ ಮಾಡಿದ್ದೆ. ಕಳೆದ ಮಾರ್ಚ್‌ನಲ್ಲಿ ನಮ್ಮ ಹೊಸ ಕೋರ್ಟ್ ಕಟ್ಟಡದ ಪ್ರಾರಂಭೋತ್ಸವಕ್ಕೆ ಪ್ರಾರ್ಥನೆಯ ಜವಾಬ್ದಾರಿ ನನ್ನ ಮೇಲೆ ಬಂದಾಗ, ನನ್ನ ಸಹೋದ್ಯೋಗಿ ವಿಜಯಕುಮಾರ್ ಗುರುಗಳ ಬಗ್ಗೆ ಹೇಳಿದರು. ಹಾಗೆ ಒಂದು ಸೀಮಿತ ಉದ್ದೇಶಕ್ಕಾಗಿ ಗುರುಗಳಲ್ಲಿಗೆ ಬಂದ ನನ್ನನ್ನು ಹಿಡಿದು ನಿಲ್ಲಿಸಿದ್ದು ನಮ್ಮ ಗುರುಗಳಲ್ಲಿನ ವೈಶಿಷ್ಟ್ಯ.

ಬೇರೆ ಸಂಗೀತ ಗುರುಗಳು groupನಲ್ಲಿ ಕಲಿಸಿದರೆ ಇವರು ವೈಯಕ್ತಿಕ ಗಮನವಿತ್ತು ಒಬ್ಬೊಬ್ಬರಿಗೇ ಕಲಿಸುತ್ತಾರೆ. ಸಾಧನೆಗೆ ಮಹತ್ವ ಕೊಡುತ್ತಾರೆ. ಬೇರೆ ಬೇರೆ ರಾಗಗಳ ವ್ಯತ್ಯಾಸವನ್ನು ಮನದಟ್ಟು ಮಾಡಿಕೊಡುತ್ತಾರೆ. ಚಿಕ್ಕವರಿಗೂ ಪ್ರಾಮುಖ್ಯತೆ ಕೊಡುತ್ತಾರೆ. 'ನಾದವೈಭವಂ'ನ ಕಾರ್ಯಕ್ರಮಗಳಲ್ಲಿ involve ಮಾಡುತ್ತಾರೆ. ನಮಗೇ ಅರಿವಿರದ ನಮ್ಮ ಸಾಮರ್ಥ್ಯವನ್ನು ಗುರುತಿಸಿ, ಆ ಮೂಲಕ ನಮಗೊಂದು ಧೈರ್ಯ ಕೊಡುತ್ತಾರೆ. ಅನತಿ ಕಾಲದಲ್ಲಿಯೇ ತಮ್ಮ ಆರು ಕಾರ್ಯಕ್ರಮಗಳಲ್ಲಿ ನನಗೆ ಅವಕಾಶ ಕೊಟ್ಟು ಸಾರ್ವಜನಿಕವಾಗಿ ನಾನು ಗುರುತಿಸಲ್ಪಡುವಂತೆ ಮಾಡಿದ್ದಾರೆ.

ಗುರುಗಳ ಸಂಗೀತ ಚಿಕಿತ್ಸೆಯ ಮಹತ್ವದ ಬಗ್ಗೆ ಕೂಡ ನನಗೆ ಈಚಿನ ದಿನಗಳಲ್ಲಿ ಆಸಕ್ತಿ ಬೆಳೆದಿದೆ. ಹಿಂದೆ ನನಗೆ ಕೆಲಸದ ಒತ್ತಡ ಅನುಭವಕ್ಕೆ ಬರುತ್ತಿತ್ತು. ಆದರೆ ಇತ್ತೀಚೆಗೆ ಸಂಗೀತ ನನ್ನ ಮಾನಸಿಕ ಒತ್ತಡಕ್ಕೆ ಅದ್ಭುತ ಚಿಕಿತ್ಸೆಯ ಕೆಲಸ ಮಾಡುತ್ತಿದೆ.

ನನ್ನ ಸಂಗೀತಾಭ್ಯಾಸದ ಉಪಕಥೆಗಳು

✍ ಟಿ. ವಿಜಯಕುಮಾರ್ ಶೆಟ್ಟಿ

ನಾನು ಚಿಕ್ಕವನಾಗಿದ್ದಾಗಲೇ ನನ್ನ ಅಕ್ಕ ಮತ್ತು ಅವಳ ಸ್ನೇಹಿತೆಯರು ನಮ್ಮ ಮನೆಯಲ್ಲಿ ಆ ದಿನಗಳಲ್ಲಿ ಖ್ಯಾತ ಗುರುಗಳಾಗಿದ್ದ ನರಸಿಂಹ ಸೇರೆಗಾರರಲ್ಲಿ ಸಂಗೀತ ಕಲಿಯುತ್ತಿದ್ದರು. ಹಾಗೆ ಆಸಕ್ತಿ ಬೆಳೆದು ನಾನೂ ಒಂದಿಷ್ಟು ದಿನ ಸಂಗೀತ ಕಲಿತು, ಬಿಟ್ಟೆ. ಮತ್ತೆ 'ನಾದವೈಭವಂ' ಸ್ಥಾಪನೆ ಆದ ನಂತರ ಗುರುಗಳು ನನ್ನನ್ನು ಕರೆಸಿ, 'ಹಣವೆ ನಿನ್ನಯ ಗುಣ' ಮತ್ತು ವಾದಿರಾಜರ 'ಲೇಲೇಲೆಲೆ' (groupನಲ್ಲಿ) ಸುಮಾ ಮೊದಲಾದ ಕಲಾವಿದರ ಜೊತೆಗೆ ಹಾಡಿಸಿದರು. ಕಲಿತು ಹಾಡಬೇಕೆಂಬ ಆಸೆಯಿದ್ದರೂ ಆ ದಿನಗಳಲ್ಲಿ ಸಮಸ್ಯೆಗಳಿಂದಾಗಿ ನನ್ನಿಂದ ಕಲಿಯಲಾಗಲಿಲ್ಲ. ನಾನು ಲಾ ಕಾಲೇಜಿನಲ್ಲಿ ಕಲಿಯುತ್ತಿದ್ದ ದಿವಸಗಳಲ್ಲಿ ಕೂಡ ನನ್ನ ಮಿತ್ರರಾಗಿದ್ದ ಶಶಿಕುಮಾರ್ ಎಂಬ ಕಲಾವಿದರು ನನ್ನ ಸ್ವರ ಗುರುತಿಸಿ, ಗುರುಗಳಲ್ಲಿ ಸಂಗೀತ ಕಲಿಯಲು ಹೇಳಿದ್ದರು. ಆದರೆ ಕಾಲ ಕೂಡಿಬಂದದ್ದು ಇಪ್ಪತ್ತು ವರ್ಷಗಳ ನಂತರ.

ಕಾಲೇಜಿನಲ್ಲಿದ್ದಾಗ ಆರ್ಕೆಸ್ಟ್ರಾದಲ್ಲಿ ಹಾಡಬೇಕು ಅನ್ನಿಸುತ್ತಿತ್ತು. ಆದರೆ ವಾಸುದೇವ ಭಟ್ಟರಲ್ಲಿ ಕಲಿಕೆ ಆರಂಭಿಸಿದ ನಂತರ ಆ ರೀತಿಯ ಆಸಕ್ತಿ ಕಡಿಮೆಯಾಗುತ್ತಿದೆ. ಯಾರಾದರೂ ಕರೆದರೂ ಹೋಗಬೇಕು ಅನಿಸುತ್ತಿಲ್ಲ.

ಗುರುಗಳು ಸಂಗೀತಾಭ್ಯಾಸ ಮಾಡಿಸುವ ರೀತಿಯೇ ಅದ್ಭುತವಾದುದು. ಚಿಕ್ಕವರಿಗೆ ಹೇಗೆ ಕಲಿಸಬೇಕು, ದೊಡ್ಡವರಿಗೆ/ವಯಸ್ಕರಿಗೆ ಹೇಗೆ ತಿಳಿಸಬೇಕು - ಇದೆಲ್ಲ ಅವರಿಗೆ ಕರತಲಾಮಲಕವಾಗಿದೆ.

ನಾನು ಸ್ಥಾಪಕ ಅಧ್ಯಕ್ಷನಾಗಿದ್ದ ಇಂದ್ರಾಳಿಯ ಲಯನ್ಸ್ ಕ್ಲಬ್ 2005ರಲ್ಲಿ ಸಮಾರಂಭವೊಂದರಲ್ಲಿ ಗುರುಗಳನ್ನು ಸನ್ಮಾನಿಸಿದಾಗ, ಅವರು ನನ್ನ ಇರವನ್ನು ಗುರುತಿಸಿದರು.

ರಕ್ತದೊತ್ತಡಕ್ಕೆ ಸಂಗೀತ ಚಿಕಿತ್ಸೆ ಕೆಲಸ ಮಾಡುತ್ತದೆಂಬ ಅದ್ಭುತ ಸತ್ಯವನ್ನು ನಾನು ಕಂಡುಕೊಂಡದ್ದೂ ಗುರುಗಳ ದಯೆಯಿಂದ.

ನನ್ನ ಸಂಗೀತಾಭ್ಯಾಸಕ್ಕೆ ಸಂಬಂಧಿಸಿದ ಒಂದು ಚಿಕ್ಕ ಕಥೆಯಿದೆ. ಒಂದಿಷ್ಟು ದಿನ ಇಂದ್ರಾಳಿ ದೇವಸ್ಥಾನದ ಕೆರೆಯಲ್ಲಿ ಕುತ್ತಿಗೆಯವರೆಗಿನ ನೀರಿನಲ್ಲಿ ನಿಂತು ಓಂಕಾರ ಅಭ್ಯಾಸ ಮಾಡುತ್ತಿದ್ದೆ. ಒಂದು ದಿನ ನಾನು ಹಾಗೆ ಅಭ್ಯಾಸ ಮಾಡುತ್ತಿದ್ದಾಗ, ದೇವಸ್ಥಾನದ ಮೊಕ್ತೇಸರ ಗೋಪಾಲಕೃಷ್ಣ ಭಟ್ಟರು ನಿಂತು ನೋಡುತ್ತಿದ್ದರು. ನಾಲ್ಕಾರು ಒಳ್ಳೆಹಾವುಗಳು ಎಲ್ಲಿಂದಲೋ ಬಂದು ನನ್ನ ಸುತ್ತ ಈಜತೊಡಗಿದವು. "ನಿಜಕ್ಕೂ ಒಳ್ಳೆ ರಾಗ" ಎಂದು ಅವರು ಶಿಫಾರಸು ಮಾಡಿದ್ದರು.

ಕನಸು ನನಸಾದುದು ಹೀಗೆ...

✍ ಗಿರೀಶ್ ಬಿ.

ನಮ್ಮ ಗುರುಗಳ ಹಲವಷ್ಟು ಶಿಷ್ಯರು ವಯಸ್ಕರು. ಜೀವನದಲ್ಲಿ, ಉದ್ಯೋಗದಲ್ಲಿ ಬಹಳಷ್ಟು ಸಾಧಿಸಿದ ಹಿರಿಯ ಅಧಿಕಾರಿಗಳು. ಅವರಲ್ಲಿ ಲಾಯರುಗಳು, ಸರಕಾರಿ ಅಧಿಕಾರಿಗಳು, ಜಡ್ಜರು, ಕಾಲೇಜು ಅಧ್ಯಾಪಕರು, ಬ್ಯಾಂಕ್ ಅಧಿಕಾರಿಗಳು ಸಂಗೀತಾಭ್ಯಾಸಕ್ಕೆ ಬರುತ್ತಾರೆ. ಅಪರೂಪದ ತಾಳ್ಮೆಯಿಂದ ಗುರುಗಳು ತಮ್ಮ ಶಿಷ್ಯರೆಲ್ಲರ ಅಭಿವೃದ್ಧಿಗಾಗಿ ಸಂಗೀತವನ್ನು ಕಲಿಸಿಕೊಡುವ ರೀತಿಯ ಬಗ್ಗೆ, ಉಡುಪಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಎಂ. ಪಿ. ಓಂಕಾರೇಶ್ವರಿಯವರು ನನಗೆ ಒಂದೆರಡು ಸಲ ಹೇಳಿದರು. ಮಾತ್ರವಲ್ಲ, ಗುರುಗಳನ್ನು ಪರಿಚಯಿಸಿಕೊಟ್ಟರು. ಉಡುಪಿಯ ಹಿಂದುಳಿದ ವರ್ಗದ ಕ್ಷೇಮಾಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡುತ್ತಿರುವ ನಾನು ಗುರುಗಳ ಸಂಪರ್ಕಕ್ಕೆ ಬಂದದ್ದು ಹೀಗೆ.

ಮೂಲತಃ ನಾನು ಗುಂಡ್ಲುಪೇಟೆ ತಾಲೂಕಿನ ಬಂಡೀಪುರದವನು. ನನ್ನ ತಂದೆ ಗ್ರಾಮೀಣ ಪ್ರದೇಶದಲ್ಲಿ ನಾಟಕದ ಮಾಸ್ಟರಾಗಿದ್ದರು. ನಾಟಕಾಭ್ಯಾಸದ ಜೊತೆಗೆ ಸಂಗೀತಾಭ್ಯಾಸ. ಆಗ ಸಂಗೀತದ ಬಗ್ಗೆ ಆಸಕ್ತಿ ಬೆಳೆಯಿತಾದರೂ ಸಮಯಾವಕಾಶದ ಕೊರತೆಯಿಂದಾಗಿ ಶಾಸ್ತ್ರೀಯವಾಗಿ ಕಲಿಯಲಾಗಲಿಲ್ಲ. ಉಡುಪಿಗೆ ಬರುವ ತನಕ ನಾನು ಬರೇ 'ಬಾತ್‌ರೂಂ ಸಿಂಗರ್' ಆಗಿ ಉಳಿದುಬಿಟ್ಟೆ.

ಗುರುಗಳ ಪರಿಚಯ ನನ್ನ ಆಸಕ್ತಿಯ ಮಹತ್ವದ ತಿರುವಾಯಿತು. ಈ ನಡುವಯಸ್ಸಿನಲ್ಲಿ ಸಂಗೀತಾಭ್ಯಾಸ ಆರಂಭವಾಗಿದೆ. ಮೆಲ್ಲನೆ ವೈಮನಗಳಲ್ಲಿ confidence ಚಿಗುರೊಡೆಯುತ್ತಿದೆ.

ಸಂಗೀತದ ಅದ್ಭುತ ಸಾಮರ್ಥ್ಯ ಅದು!

ನನ್ನ ಭಾಗ್ಯ

✍ ಸೌಮ್ಯಾ ಕೃಷ್ಣರಾಜ್

ನಾದವೈಭವಂ ಉಡುಪಿ ವಾಸುದೇವ ಭಟ್ಟರನ್ನು ಸಂಗೀತ ಗುರುಗಳಾಗಿ ಹೊಂದುವುದಕ್ಕೆ ಪೂರ್ವಜನ್ಮ ಪುಣ್ಯ ಬೇಕು ಎಂಬ ನನ್ನ ಅನಿಸಿಕೆ ಅತಿಶಯೋಕ್ತಿ ಅಲ್ಲ ಎಂದೇ ನನ್ನ ನಂಬಿಕೆ. ಸಂಗೀತವನ್ನು ಅವರಂತೆ ಹೇಳಿಕೊಡುತ್ತಿರುವ ಗುರುಗಳನ್ನು ನಾನು ಕಂಡಿಲ್ಲ. ಯಾರನ್ನೇ ಆಗಲಿ, ಎರಡು ಮೂರು ತಿಂಗಳಲ್ಲೇ ನಿರ್ಭಯವಾಗಿ ಹಾಡುವಂತೆ ಮಾಡುವುದು ಅವರ ಕಲೆಗಾರಿಕೆ. ಪದವಿಗಾಗಿ ಸಂಗೀತ ಕಲಿಯುವುದು ಬೇರೆ, ಪ್ರತಿಭಾವಿಕಾಸಕ್ಕಾಗಿ ಕಲಿಯುವುದು ಬೇರೆ ಎನ್ನುವುದು ಅವರ ಪ್ರತಿಪಾದನೆ. ಅದಕ್ಕೆ ಉದಾಹರಣೆಗಳಾಗಿದ್ದಾರೆ ಅವರ ಶಿಷ್ಯರು.

ಗುರುಗಳಲ್ಲಿ ಸಂಗೀತವನ್ನೂ ವೀಣಾವಾದನವನ್ನೂ ಕಲಿಯುತ್ತಿದ್ದ ನನ್ನ ತಾಯಿಯವರು ನನ್ನನ್ನೂ ಅವರೊಂದಿಗೆ ಕರೆದುಕೊಂಡು ಹೋದ ಕಾರಣ ನಾನೂ ಒಂದಷ್ಟು ಸಂಗೀತ ಕಲಿಯುವಂತಾಯಿತು. ನನ್ನ ವಿವಾಹವಾಗುವವರೆಗೂ ನಾನು ಉಡುಪಿಗೆ ಹೋಗಿ ಕಲಿಯುತ್ತಿದ್ದೆ. ಆ ದಿನಗಳಲ್ಲಿ ಸಂಜೆ ಪಾಠ ಒಂದಿಷ್ಟು ತಡವಾಯಿತೆಂದರೆ ಒಡನೆಯೇ ರಿಕ್ಷಾ ತರಿಸಿ ತಮ್ಮ ಖರ್ಚಿನಲ್ಲೇ ನನ್ನನ್ನು ಮನೆಮುಟ್ಟಿಸುವಷ್ಟು ಹೃದಯವಂತರು ನನ್ನ ಗುರುಗಳು.

ಎಲ್ಲೇ ಸಾಹಿತ್ಯ ಕಾರ್ಯಕ್ರಮಗಳು ನಡೆಯಲಿ, ನನ್ನನ್ನೂ ಅವರು ಕರೆದೊಯ್ಯುತ್ತಿದ್ದರು. ಸಂಗೀತಜ್ಞೆ ಆಗಬೇಕಾದರೆ ಸಾಹಿತ್ಯಜ್ಞೆಯೂ ಆಗಿರಬೇಕು ಎನ್ನುವುದು ಅವರ ಕಿವಿಮಾತು. ಗುರುಗಳಿಗೆ ಕಾಂತಾವರ ಕನ್ನಡ ಸಂಘದಿಂದ ರಾಜ್ಯಮಟ್ಟದ ಸನ್ಮಾನವಾದುದನ್ನು ನಾನು ಕಂಡು ಪುಲಕಿತಗೊಂಡಿದ್ದೆ. ಅನೇಕ ದೇವಸ್ಥಾನಗಳಲ್ಲಿ 'ನಾದಾಭಿಯಾನ'ದ ಮೂಲಕ ಹಾಡಿಸಿದ್ದು ನನ್ನ ಸೌಭಾಗ್ಯ.

ಗುರುವಂದನೆ

✍ ಉಡುಪಿ ಶರತ್

ನನಗೆ ಆಗ ಕೇವಲ ಏಳು ವರ್ಷ. ಆಗಲೇ ನನ್ನ ತಾಯಿಯು ಮುಸ್ಸಂಜೆಯ ಸಮಯದಲ್ಲಿ ಭಜನೆ ಹಾಡುತ್ತಿರುವಾಗ ನಾನೂ ಆಸಕ್ತಿಯಿಂದ ಧ್ವನಿಗೂಡಿಸುತ್ತಿದ್ದೆ. ಇದನ್ನು ಗಮನಿಸಿದ ನನ್ನ ತಂದೆ ತಾಯಿಯರು "ನೀನು ಯಾಕೆ ಸಂಗೀತ ಕಲಿಯಬಾರದು?" ಎಂದರು. ನನ್ನ ತಂದೆಗೆ ಮೊದಲಿನಿಂದಲೂ ಪರಿಚಿತರು, ಉಡುಪಿ ವಾಸುದೇವ ಭಟ್ಟರು. ನಾನು ಮೊದಲ ಬಾರಿ ಅವರ ಸಂಸ್ಥೆಗೆ ಸಂಗೀತ ಕಲಿಯಲು ಹೋದಾಗ ನನ್ನನ್ನು ನೋಡಿ ಗುರುಗಳು, "ನಿನ್ನ ಹೆಸರೇನು?" ಎಂದು ಕೇಳಿದಾಗ, ನಾನು ಬಹಳ ಭಯದಿಂದ ನಡುಗುತ್ತಾ ಮೆಲ್ಲನೆಯ ಸ್ವರದಲ್ಲಿ ಹೇಳಿದೆ. ನನ್ನ ಸ್ವರವನ್ನು ಗಮನಿಸಿದ ಗುರುಗಳು ತಮ್ಮ ಹಾರ್ಮೋನಿಯಂ ಪೆಟ್ಟಿಗೆಯಿಂದ ಯಾವುದೋ ಒಂದು ಶ್ರುತಿಯನ್ನು ಆಯ್ದುಕೊಂಡು, "ಹಾಡು ಮಗು" ಎಂದು ಹೇಳಿದಾಗ ನನಗೆ ಎಲ್ಲಿಲ್ಲದ ತಲ್ಲಣ. ಆದರೂ ಧೈರ್ಯ ಮಾಡಿಕೊಂಡು ಒಂದು ಸಾಲು ಹಾಡಿಯೇಬಿಟ್ಟೆ. ಆಶ್ಚರ್ಯವೆಂದರೆ, ಅವರು ಬಾರಿಸುತ್ತಿದ್ದ ಶ್ರುತಿಗೆ ನನ್ನ ಸ್ವರವು ಹೊಂದಿಕೊಂಡಿತ್ತು.

ಕೇವಲ ಒಂದು ವರ್ಷದಲ್ಲಿ ನಾನು ನನ್ನ ಗುರುಗಳಲ್ಲಿ ಮತ್ತೊಂದು ವೈಶಿಷ್ಟ್ಯ ಕಂಡೆ. ಬಹುತೇಕ ಶಾಸ್ತ್ರೀಯ ಸಂಗೀತಗಾರರು ಪಾಠ ಮಾಡುವಾಗ ಕೇವಲ ಸರಳವರಸೆ, ಅಲಂಕಾರ ಇತ್ಯಾದಿಗಳನ್ನು ಮಾಡಲು ಒಂದು ವರ್ಷ ಕಾಲಾವಕಾಶ ತೆಗೆದುಕೊಂಡರೆ, ನಮ್ಮ ಗುರುಗಳು ಇವೆಲ್ಲವನ್ನೂ ಕೇವಲ ಮೂರು ತಿಂಗಳೊಳಗೆ ಮುಗಿಸಿ, ಒಂದು ವರ್ಷದಲ್ಲಿ ಸುಮಾರು ಮೂರು ವರ್ಣಗಳನ್ನು ಹಾಡಿಸುತ್ತಾರೆ.

ಇವರು ಹೇಳಿದ ಇನ್ನೊಂದು ಮಾತು ನೆನಪಿಗೆ ಬರುತ್ತಿದೆ. "ಸಂಗೀತಕ್ಕೆ ಎಲ್ಲಿ ಮರ್ಯಾದೆ ಇದೆಯೋ ಮತ್ತು ಎಲ್ಲಿ ಮರ್ಯಾದೆ ದೊರಕುತ್ತದೆಯೋ ಅಲ್ಲಿ ಮಾತ್ರ ನಾವು ಹಾಡಬೇಕು" ಎನ್ನುವುದು. ಈ ಮಾತು ನನ್ನಲ್ಲಿ ಈಗಲೂ ಪ್ರಭಾವ ಬೀರುತ್ತಿದೆ.

ಗುರುಗಳು ಬಹಳ ಸಮಯಪ್ರಜ್ಞೆ ಉಳ್ಳವರು. ಸಮಯಕ್ಕೆ ಬಹಳ ಬೆಲೆಯನ್ನು ಕೊಡುತ್ತಿದ್ದರು. ಒಂದು ದಿನ ನನಗೆ ಬೆಳಿಗ್ಗೆ ಒಂಭತ್ತು ಗಂಟೆಗೆ ತರಗತಿಗೆ ಬರಲು ಹೇಳಿದ್ದರು. ನಾನು ಯಾವುದೋ ಕಾರಣದಿಂದ ಒಂದು ಗಂಟೆಗೆ ತರಗತಿಗೆ ಹೋದೆ. ನನ್ನನ್ನು ನೋಡಿದ ಗುರುಗಳು, "ಇಂದು ನಿನಗೆ ಪಾಠ ಇಲ್ಲ. ನಾಳೆ ಬಾ" ಎಂದರು.

ಅವರು ಎಂದಿಗೂ ತಮ್ಮ ಶಿಷ್ಯರು ಕೊಡುವ ಸಂಭಾವನೆಗೆ ಎದುರು ನೋಡಿದವರೇ ಅಲ್ಲ. ಅವರು ಯಾವತ್ತೂ ಹೇಳುತ್ತಿದ್ದ ಮಾತು, "ನಾನು ಯಾವತ್ತೂ ಸಂಭಾವನೆಗಾಗಿ ಪಾಠ ಮಾಡುವುದು ಅಲ್ಲ. ನನ್ನಲ್ಲಿ ಕಲಿತಂತಹ ಶಿಷ್ಯರು ಉತ್ತಮ ಸಂಗೀತಗಾರರಾಗ ಬೇಕೆಂಬುದು ನನ್ನ ಆಸೆ" ಎಂದು.

ಇಂತಹ ಅಭೂತಪೂರ್ವ ವ್ಯಕ್ತಿಯನ್ನು ನನ್ನ ಗುರುಗಳಾಗಿ ಪಡೆದದ್ದು ನನ್ನ ಭಾಗ್ಯವೇ ಇರಬಹುದು. "ಓ ಗುರುಗಳೇ, ನಿಮಗಿದೋ ನನ್ನ ವಂದನೆ".

ಸಾಂಸ್ಕೃತಿಕ ಮಹತ್ವ

✍ ಬಿ. ಅನಸೂಯಾ ರಾವ್

ನಮ್ಮ ಗುರುಗಳಾದ ವಾಸುದೇವ ಭಟ್ಟರು ಸಂಗೀತ ಪಾಠವನ್ನು ಪ್ರಾರಂಭಿಸುವಾಗ ನಮ್ಮ ಮನೆಯ ವಾತಾವರಣವನ್ನು ಸೃಷ್ಟಿಸುತ್ತಾರೆ. 'ಮಾತೃದೇವೋಭವ, ಪಿತೃದೇವೋಭವ, ಗುರುದೇವೋಭವ' ಎನ್ನುವ ಶ್ಲೋಕದೊಂದಿಗೇ ಅವರ ಪಾಠ ಆರಂಭವಾಗುತ್ತದೆ. ನಮ್ಮ ತಂದೆ ತಾಯಿಯರ ಎದುರೇ ಕುಳಿತು ಸಂಗೀತಾಭ್ಯಾಸ ಮಾಡುತ್ತಿದ್ದೇನೆ ಎಂಬ ಭಾವನೆ ಬಂದಾಗ ನಮ್ಮ ಮನಸ್ಸಿನ ಆತಂಕವೆಲ್ಲ ಕರಗಿಹೋಗುತ್ತದೆ. ನಮಗೆ ಎಷ್ಟೇ ವಯಸ್ಸಾಗಿದ್ದರೂ, ನಮ್ಮನ್ನು ಚಿಕ್ಕ ಮಕ್ಕಳೆಂದೇ ಪರಿಗಣಿಸಿ ಅವರು ತಿಳಿಯಹೇಳುವ ರೀತಿ ನಮಗೆ ಬಾಲ್ಯವನ್ನು ಹಿಂದೆ ತಂದುಕೊಡುತ್ತದೆ ಮತ್ತು ಪ್ರತಿಯೊಂದು ಸಂಗತಿಯನ್ನು ವಿವರವಾಗಿ ಕಲಿಯುವ ಅವಕಾಶವನ್ನು ನೀಡುತ್ತದೆ.

ನಮ್ಮ ಗುರುಗಳಿಗೆ ಭಾರತೀಯ ಸಂಸ್ಕೃತಿಯ ಮೇಲೆ ತುಂಬಾ ಪ್ರೀತಿ. ಶಿಷ್ಯರೆಲ್ಲರ ಮನಸ್ಸಿನಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಗೌರವ ಬೆಳೆಯುವ ಹಾಗೆ ಅವರು ನೋಡಿಕೊಳ್ಳುತ್ತಾರೆ. ಸಂಗೀತ ಪಾಠಕ್ಕೂ ಮಿಗಿಲಾದ ಈ ವಿಚಾರಗಳು ನಮ್ಮ ವ್ಯಕ್ತಿತ್ವವನ್ನು ತಿದ್ದುತ್ತವೆ. ಎಷ್ಟೋ ವರ್ಷಗಳಿಂದ ಈ ಗುರುಗಳಲ್ಲಿ ನಾನು ಕಲಿಯುತ್ತಿದ್ದೇನೆ ಎಂಬ ಭ್ರಮೆಯನ್ನು ಮೂಡಿಸುತ್ತದೆ. ಅವರ ಸೌಜನ್ಯ ನಮ್ಮ ಮೇಲೆ ಎಷ್ಟು ಪ್ರಭಾವ ಬೀರಿದೆಯೆಂದರೆ, ಯಾವುದೋ ಜನ್ಮಜನ್ಮಾಂತರದ ಗುರುಶಿಷ್ಯರ ಸಂಬಂಧ ನಮ್ಮದು ಎಂದು ಒಂದೊಂದು ಸಲ ನನಗನ್ನಿಸುತ್ತದೆ. ಇತರ ಶಿಷ್ಯರೂ ಹೀಗೆಯೇ ತಿಳಿಯುತ್ತಾರೆ.

ನನ್ನದು ಕಲಾವಿದರ ಮನೆತನ. ನನ್ನ ತಂದೆ ಶ್ರೀ ಬಾಲಗಂಗಾಧರ ರಾವ್ ಯಕ್ಷಗಾನ ಕಲಾವಿದರು. ಬಾಲ್ಯದಲ್ಲಿ ನೃತ್ಯದ ಹೆಜ್ಜೆ ಹಾಕುತ್ತಾ ಬೆಳೆದ ನನಗೆ ಈ ನಡುವಯಸ್ಸಿನಲ್ಲಿ ಸಂಗೀತ ಕಲಿಯುವ ಅವಕಾಶ ಸಿಕ್ಕಿದೆ. ಎರಡು ವರ್ಷಗಳಿಂದ ಗುರುಗಳಲ್ಲಿ ಸಂಗೀತಾಭ್ಯಾಸ ಮಾಡುತ್ತಿರುವ ನನಗೆ, ಬಾಲ್ಯದಲ್ಲಿ ಸಂಗೀತಾಭ್ಯಾಸದ ಅವಕಾಶ ಸಿಗಲಿಲ್ಲವಲ್ಲಾ ಎಂದು ಈಗ ದುಃಖವಾಗುತ್ತಿದೆ.

ನಮ್ಮ ಗುರುಗಳು ಬರೇ ಸಂಗೀತದ ಗುರುಗಳಾಗಿದ್ದರೆ ಇಷ್ಟೆಲ್ಲ ಹೇಳುವ ಅಗತ್ಯವಿರಲಿಲ್ಲ. ಅವರು ಪಾಠದ ನಡುವೆ ಉತ್ತಮ ಮಾನವೀಯ ಮೌಲ್ಯಗಳ ಬಗ್ಗೆ ಹೇಳುತ್ತಾರೆ. ನೀತಿ ತತ್ವಗಳನ್ನು ತಿಳಿಹೇಳುತ್ತಾರೆ. ಆಧ್ಯಾತ್ಮಿಕ ವಿಚಾರಗಳನ್ನು ನಮ್ಮ ಬಗೆಯಲ್ಲಿ ಬಿತ್ತುತ್ತಾರೆ.

ಸಂಗೀತವು ನಮ್ಮ ಮಾನಸಿಕ ಮತ್ತು ದೈಹಿಕ ವಿಕಾಸಕ್ಕೆ ಸಂಜೀವಿನಿ ಎನ್ನುವುದು ನಮ್ಮ

ಗುರುಗಳ ಅಭಿಪ್ರಾಯ. ಈ ಕುರಿತು ಅವರು ಹಲವು ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಹಲವು ವಿಚಾರಗಳನ್ನು ನಮ್ಮೊಂದಿಗೆ ಚರ್ಚಿಸುತ್ತಾರೆ. ನಾನೂ ಹಲವಾರು ರೀತಿಯಿಂದ ಮಾನಸಿಕ ಕಿರಿಕಿರಿಗೆ ಒಳಗಾದಾಗ ಗುರುಗಳ ಮಾರ್ಗದರ್ಶನದಂತೆ ಹಾಡಿನಲ್ಲಿ ತಲ್ಲೀನಳಾಗಿ ಶಾಂತಿಯನ್ನು ಅರಸುತ್ತೇನೆ. ಹಾಡು ಮುಗಿದಾಗ ಎಲ್ಲ ಕಿರಿಕಿರಿ ಪರಿಹಾರವಾಗಿ ಬದುಕು ಹೂವಿನಷ್ಟು ಹಗುರವಾಗಿ ಭಾಸವಾಗುತ್ತದೆ.

ಗುರುಗಳಿಗೆ ಸಂಗೀತ ಪರಂಪರೆಯನ್ನು ಉಳಿಸಬೇಕು ಎನ್ನುವುದೊಂದೇ ಅಪೇಕ್ಷೆ. ಅವರು ಎಲ್ಲಾ ಶಿಷ್ಯರನ್ನೂ ಸಮಾನದೃಷ್ಟಿಯಿಂದ ನೋಡುತ್ತಾರೆ. ಅದೇ ದೃಷ್ಟಿಯಿಂದ ಮಾರ್ಗದರ್ಶನ ನೀಡುತ್ತಾರೆ. ಆರು ವರ್ಷದಿಂದ ಅರವತ್ತು ವರ್ಷ ವಯಸ್ಸಿನ ವಿದ್ಯಾರ್ಥಿಗಳು ಅವರಲ್ಲಿ ಸಂಗೀತ ಆಕಾಂಕ್ಷಿಗಳಾಗಿ ಕಲಿಯುತ್ತಿದ್ದಾರೆ. 'ನೀವು ಹಾಡಬಲ್ಲಿರಿ' ಎಂಬ ಭರವಸೆಯನ್ನು ತುಂಬುತ್ತಾ ಅವರು ನಮಗೆಲ್ಲರಿಗೂ ಏಕರೀತಿಯ ಮಾರ್ಗದರ್ಶನ ನೀಡುತ್ತಾರೆ. ನಮ್ಮೆಲ್ಲರಲ್ಲಿ ಅಡಗಿರುವ ನಾದಶಕ್ತಿಯನ್ನು ಹೊರತರುವ ದಿವ್ಯಚೇತನವಾಗಿ ಕೆಲಸ ಮಾಡುತ್ತಾರೆ.

ಗುರುಗಳ ಕೃಪೆಯಿಂದ ಸಂಗೀತಾಮೃತ ಧಾರೆಯ ಸಿಂಚನ ನನ್ನಂತಹ ನೂರಾರು ಶಿಷ್ಯರಿಗೆ ಧೀಶಕ್ತಿಯನ್ನು ನೀಡಿ ಪ್ರಚೋದಿಸುತ್ತಿದೆ. ಬದುಕನ್ನು ಸಮೃದ್ಧವಾಗಿಸುತ್ತಿದೆ.

ಗುರುಗಳೇ, ನಾವು ನಿಮಗೆ ಚಿರಋಣಿಗಳು.

ನನ್ನ ದಾರಿಗೆ ದೀಪ ಅವರು

✍ ಅಶ್ರಫ್

ಹಸನ್ ಬ್ಯಾರಿ, ನೆಬಿ ಸಾಬಿ ನನ್ನ ತಂದೆ ತಾಯಿಯರು. ಸಾಲಿಂ ಬ್ಯಾರಿ, ಖತೀಜಾಬಿ ನನ್ನ ಅಜ್ಜ ಅಜ್ಜಿ. ನನ್ನ ಕುಟುಂಬದಲ್ಲಿ ಯಾರಲ್ಲೂ ಇದ್ದಿರದ ಸಂಗೀತ ಪ್ರೀತಿ ತಟ್ಟನೆ ನನ್ನ ಮನಸ್ಸಿನೊಳಗೆ, ನನ್ನ ಬಾಲ್ಯದಲ್ಲಿಯೇ ಹುಟ್ಟಿಕೊಂಡಿತು. ಈಗಿಲ್ಲದ ಗೆಳೆಯ ಸರ್ಫರಾಜ್, "ನೀನೇಕೆ ಶಾಸ್ತ್ರೀಯ ಸಂಗೀತ ಕಲಿಯಬಾರದು?" ಎಂದು ಒತ್ತಾಯಿಸುತ್ತಿದ್ದ. ಆದರೆ ಕೌಟುಂಬಿಕ ಅಡಚಣೆಗಳಿಂದ ಕಲಿಯಲಾಗಲಿಲ್ಲ.

ಪೋಲೀಸ್ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದ ನಂತರ, ಕೃಷ್ಣಮಠದಲ್ಲಿ ಡ್ಯೂಟಿಯ ಮೇಲಿದ್ದಾಗ, ಅಪರಿಚಿತ ಕೊಳಲುವಾದಕನೊಬ್ಬ ನನ್ನೊಳಗೆ ನಿದ್ರಿಸುತ್ತಿದ್ದ ಕಲಾವಿದನನ್ನು ಎಚ್ಚರಗೊಳಿಸಿದ. ನೇರವಾಗಿ ಓಬು ಶೇರೆಗಾರರಲ್ಲಿ ಹೋಗಿ, "ನನಗೆ ಕೊಳಲು ಕಲಿಸಿ" ಎಂದು ಬೇಡಿಕೊಂಡೆ. ಅವರು ಬಿಸ್ಮಿಲ್ಲಾ ಖಾನರಂತಹ ಮಹಾನುಭಾವರ ಹೆಸರು ಉದಾಹರಿಸಿ ನನ್ನನ್ನು ಪ್ರೋತ್ಸಾಹಿಸಿದರು. ಗುರುದಕ್ಷಿಣೆ ಪಡೆಯದೇ ಒಂದು ವರ್ಷ ಕೊಳಲು ಕಲಿಸಿದರು.

ಮುಂದೆ ನನ್ನ ಸ್ನೇಹಿತ ಅಚ್ಯುತ ನನ್ನನ್ನು ಗುರುಗಳಾದ ವಾಸುದೇವ ಭಟ್ಟರಲ್ಲಿಗೆ ಕರೆದುಕೊಂಡು ಹೋದರು. "ನನಗೆ ಸಂಗೀತ ಹೇಳಿಕೊಡುತ್ತೀರಾ?" ಎಂದು ಕೇಳಿಕೊಂಡೆ. "ಕಲಿಸುವುದು ಮಾತ್ರವಲ್ಲ, ಅತ್ಯಂತ ಕಡಿಮೆ ಸಮಯದಲ್ಲಿ ನಿಮ್ಮನ್ನು ಸ್ಟೇಜಿನಲ್ಲಿ ಹಾಡಿಸುತ್ತೇನೆ. ಸಾಧನೆಯ ಹಾದಿಯಲ್ಲಿ ಜಾತಿ ಅಡ್ಡಬರುವುದಿಲ್ಲ" ಎಂದೆಲ್ಲ ಅವರು ನನ್ನಲ್ಲಿ ಆತ್ಮವಿಶ್ವಾಸ ತುಂಬಿಸಿದರು.

ಗುರುಗಳು ನೇರವಾಗಿ ಸುಗಮ ಸಂಗೀತ ಮತ್ತು ಜಾನಪದ ಹಾಡುಗಾರಿಕೆಯನ್ನು ಕಲಿಸತೊಡಗಿದರು. ನನಗೊಬ್ಬನಿಗೇ ಪಾಠ. ಜಾತಿಭೇದ ಅವರ ಕನಸು ಮನಸಿನಲ್ಲೂ ಬರುವುದಿಲ್ಲ. ಎಲ್ಲ ಶಿಷ್ಯರಿಗೆ ಸಲ್ಲುವ ಪ್ರೀತಿಯ ಪಾಠವನ್ನು ಅವರು ನನಗೂ ನೀಡಿದರು.

ಉಡುಪಿಯ ವರಿಷ್ಠ ಪೋಲೀಸ್ ಅಧಿಕಾರಿ (S.P.) ಡಾ. ಸುಬ್ರಹ್ಮಣ್ಯೇಶ್ವರ ರಾವ್ ನನ್ನನ್ನು ಗುರುತಿಸಿ, ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಮತ್ತು ಪೋಲೀಸ್ ಇಲಾಖೆಯ ಸಮಾರಂಭಗಳಲ್ಲಿ ಹಾಡುವಂತೆ ಪ್ರೋತ್ಸಾಹಿಸುತ್ತಿದ್ದಾರೆ. ಹತ್ತರೊಡನೆ ಹನ್ನೊಂದನೆಯವನಾಗಬೇಕಾಗಿದ್ದ ನನ್ನನ್ನು ಹಿರಿಯ ಅಧಿಕಾರಿಗಳು ಗುರುತಿಸುವಂತೆ ಮಾಡಿದ್ದೇ ಗುರುಗಳಿಂದ ಕಲಿತ ಸಂಗೀತ. ಇತ್ತೀಚೆಗೆ ನಮ್ಮ ಜಾತಿಯ ಹುಡುಗನೊಬ್ಬ ಸಂಗೀತ ಪಾಠಕ್ಕೆ ನನ್ನಲ್ಲಿಗೆ ಬರತೊಡಗಿದ್ದಾನೆ.

ಗುರುಗಳು ನನ್ನ ಬದುಕಿನ ಹಾದಿಗೊಂದು ದಾರಿದೀಪ.

ಸಾನುಕ್ರೋಶಪರತೆ

✍ ಅಂಶುಮಾಲಿ

ಬನ್ನಿ ಊಟಕ್ಕೆ ಬಂದಾಗ ಶ್ರೀಕೃಷ್ಣ ಕ್ಷೇತ್ರದ
ಉಡುಪಿಗೆ - ಸೋದೆ ಮಠದಾಚೆಗಿನ ವಾದಿರಾಜ
ರಸ್ತೆಯ ಬೂತದ ಓಣಿಯಲ್ಲಿ. ವಾಹನವಿರಲಿ
ಅಲ್ಲೆ. ಹೆಜ್ಜೆ ಹಾಕಿರಿ ಒಂದಷ್ಟು ದೂರ. ಒತ್ತಿರಿ ಕರೆಗಂಟೆ.
ತೆರೆದುಕೊಳ್ಳುವುದು ನಿಧಾನ 'ನಾದವೈಭವಂ' ಕದ!
ಹೊರಟು ನಿಂತಾಗ ಹೊರಟುಬಿಡುತ್ತಾರೆ ನಿಮ್ಮೊಂದಿಗೇ
ಇನ್ನೊಂದು ವಾಹನ ತರಿಸಿ! ಬೀಳ್ಕೊಡುವರು ಎಲ್ಲೆಂದರಲ್ಲಿ.
ಬೀದಿಗಿಳಿದರೆ ಸಾಕು, ಮೂತಿ ಹಾಕುವುವು ನಾಯಿ ಬೆಕ್ಕು
ಪ್ರೀತಿ ತಿನಿಸಿಗಾಗಿ. ಮೆಲುಕಾಡುವ ದನ ತಡವುದಕಾಗಿ.
ಪ್ರಕೃತಿ ಸುಕೃತಿಯ ಸಾದೃಶ್ಯ. ಜ್ಞಾನಚೂರ್ಣ ನಶ್ಯ ಅವಶ್ಯ!
ಕೈಮುಗಿಯುವುದಲ್ಲದೆ ಕಾಲು ಹಿಡಿಯುವುದೆಂದಿಲ್ಲ
ದರ್ಶನವಾದರೂ ಸ್ವಾಮಿಗಳ! ನೇರ ನಡೆನುಡಿ. ಇಲ್ಲ ಮಡಿ.
ಮಾತಿನ ಛಡಿಯೇಟು ಅನ್ಯಾಯವೆನ್ನಿಸಿದರೆ! ವಿಶ್ವಾಮಿತ್ರ
ಪಾತ್ರ ಪರಿಶುದ್ಧತೆಯ ಬದ್ಧತೆ ಮಾತ್ರ! ತನ್ನಂತೆ ಪರರ
ಹುಡುಕುವ ತವಕದಲಿ ಮಿಂಚುಗಣ್ಣುಗಳು. ಕಂಪು ಸುರಿಸಿ
ಬಾಯಿ ಹಾಡುವುದು ಕೈ ಮೀಟುವುದು ನಾದದೆತ್ತರ ಬಿತ್ತರ
ಇಂಪು ಪೆಂಪಿನ ಸೊಂಪನರಳಿಸಿ. ಅಂತರಂಗ ಬಹಿರಂಗ
ಅನಾವರಣ ಸ್ವರ ವರ್ಣ ರಾಗ ತಾಳ ಲಯ ಶ್ರುತಿಗಳಲಿ.
ನಾದಬ್ರಹ್ಮದದ್ವೈತ ಸ್ವಾದದಲಿ. ಅಚ್ಚ ಬಿಳಿ ಉಡುಪಿನಲಿ
ದಿಟ್ಟ ಉಡುಪಿ ವಾಸುದೇವ ಭಟ್ಟರೆ ನಾದವೈಭವಂ
ಮೂರ್ತ ಅಮೂರ್ತದಲಿ. ಚಂದ್ರಕಲೆ ಲೀಲೆ ತಲೆಯ ಮೇಲೆ!
ನಾದವೈಭವಂ ನಡೆದು ಬಂದ ಹೆಜ್ಜೆಗೆಜ್ಜೆಯಲಿ ವೇದ
ಬಿತ್ತಿದೆ ಬೀಜ. ಮೊಳೆತಿದೆ ಸಹಜ. ಬೆಳ್ಳಿನಗೆಯಾಗಿ
ಮೂಡಿದೆ ಬಾನಂಗಳದಲ್ಲಿ ನಾದಾಭಿಯಾನ ಇನ.
ಘನ ಅಸ್ತಿವಾರದ ಮೇಲೆ ನೋಂದಾಯಿತ ಲಘು ಗುರು.
ನಾದವೈಭವಂ ತವರು. ಬಳಗವಿದೆ ಸಾವಿರಾರು!
ನಾದಕ್ಕೆ ಸಂವಾದಿಯಿಲ್ಲ. ನಾದಪ್ರವಾದಿಗಳಾಗಿ ಸಾಗ
ಬಹುದು ರಾಗಮಾರ್ಗದಲಿ ಬಯಸುವವರೆಲ್ಲ. ಎಲ್ಲೆ
ಇಲ್ಲದಾಕಾಶದವಕಾಶ ಎಲ್ಲೆ! ಅನುಭವ ನಾದಮೋದಾನುಭಾವ!
ಶತಮಾನ ಬಾಳಲಿ ನಾದವೈಭವಂ ವಾಸುದೇವ ಭಟ್ಟರು ಸಕುಟುಂಬ
ಆಯುರಾರೋಗ್ಯ ಭಾಗ್ಯ ಸುಖ ಸಂಪದ ನೆಮ್ಮದಿಯಲಿ - ನಾದಬಿಂಬ.

ಗುರು ವಾಸುದೇವ

✍ ಯೋಗೀಶ ಕರಗುದರಿ

ಗುರು ವಾಸುದೇವರು ನಾದಮೂರ್ತಿ
ಸಂಗೀತ ಲೋಕದಲಿ ಬೆಳಗಲಿವರ ಕೀರ್ತಿ
ಸರ್ವರ ಹೃದಯದಿ ಸಂಗೀತ ಜ್ಯೋತಿ
ಬೆಳಗುವುದು ಅವರ ಆಸಕ್ತಿ
ಉಡುಪಿಯ ಶ್ರೀಕೃಷ್ಣ ನೀಡಲವರಿಗೆ ಸರ್ವಶಕ್ತಿ ॥

ವಿದ್ಯೆಯ ಗರ್ವ ವಾಸುದೇವರಿಗಿಲ್ಲ
ಕೀರ್ತಿ ಪ್ರತಿಷ್ಠೆಯಲಿ ಆಸಕ್ತಿಯಿಲ್ಲ
ಧನಕನಕಗಳ ಮೋಹ ಅವರಲಿಲ್ಲ
ನಿಸ್ವಾರ್ಥ ಸಂಗೀತ ಆರಾಧನೆಗೆ
ಮೀಸಲು ಅವರ ಬದುಕೆಲ್ಲ ॥

ಉತ್ತಮ ಶಿಷ್ಯರೆ ಇವರ ಆಸ್ತಿ
ಅವರ ಆದರ್ಶವೆ ಇವರ ಕೀರ್ತಿ
ಗುರು ವಾಸುದೇವರಿಗೆ ಒಲಿದು
ಹರಸಿಹಳು ಸರಸ್ವತಿ
ಸಂಗೀತ ಶಾರದೆ ನೀಡಲಿವರಿಗೆ ಸದ್ಗತಿ ॥

ಪರ್ವ : ಒಂದು

ವಾಸುದೇವ ನಾದಾಭಿಯಾನ

ಭಾಗ : ಮೂರು

ಬಾಂಧವ್ಯದ ಬೆರಗುಗಳು

ದಾಂಪತ್ಯಗೀತೆ

✍ ಸುನಂದಾ ವಾಸುದೇವ ಭಟ್

ಏಪ್ರಿಲ್ 28, 1971ರಂದು ಪ್ರಾರಂಭವಾದ ನನ್ನ ವೈವಾಹಿಕ ಬದುಕಿನ ಇಂದಿನವರೆಗಿನ ದಿನಗಳನ್ನು ಮೆಲುಕು ಹಾಕಲು ಹೀಗೊಂದು ಅವಕಾಶ ಪ್ರಾಪ್ತವಾಗಿದೆ. ಆ ದಿನಗಳಲ್ಲಿ ನಾವು ಮದರಾಸಿನಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ಉಡುಪಿಯ ಬಳಿಯ ಉದ್ಯಾವರದಲ್ಲಿ ವಾಸ್ತವ್ಯ ಹೂಡಿದ್ದೆವು. ಸಂಗೀತ, ನೃತ್ಯಕ್ಕೆ ತವರೂರು ಎನಿಸಿಕೊಂಡ ಮದರಾಸಿನಲ್ಲಿ ಸಂಗೀತದ ಪ್ರಾರಂಭಿಕ ಪಾಠಗಳನ್ನು ಕಲಿತಿದ್ದರೂ, ಮುಂದುವರಿಸಿಕೊಂಡು ಹೋಗುವ ಅವಕಾಶವಾಗಲಿಲ್ಲ.

ಸಂಗೀತ ವಿದ್ವಾನ್ ಎನಿಸಿಕೊಂಡ ಇವರ ಜೀವನಕ್ಕೆ ನಾನು ಬಂದಾಗ ನಾಟಕ ಕಂಪೆನಿ ನಡೆಸಿ, ಆರ್ಥಿಕವಾಗಿ ಕೈಸುಟ್ಟುಕೊಂಡು, ನಂತರ ಹೋಟೆಲ್ ಉದ್ಯಮದಲ್ಲಿ ತೊಡಗಿದ್ದ ಇವರು ಮೆಡಲಿನ್ ಹೈಸ್ಕೂಲಿನಲ್ಲಿ ಸಂಗೀತಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ಸಂಗೀತದಲ್ಲಿನ ಇವರ ಆಳವಾದ ಜ್ಞಾನವನ್ನು ಗಮನಿಸಿದ್ದ ನಾನು, ಸಂಗೀತ ಕ್ಷೇತ್ರವೇ ನಿಮ್ಮ ಕಾರ್ಯಕ್ಷೇತ್ರವಾಗಿರಲಿ ಎಂದು ಸೂಚಿಸಿದ್ದೆ. ಅನೇಕ ಕಾಲೇಜುಗಳಲ್ಲಿ ಅತಿಥಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಾ, ಅನೇಕ ನೃತ್ಯರೂಪಕಗಳಿಗೆ ಸಂಗೀತವನ್ನೊದಗಿಸಿ ಇವರು ಪ್ರಸಿದ್ಧಿಗೆ ಬಂದರು. ಮುಂದಿನ ಹೆಜ್ಜೆಯಂತೆ ಧ್ವನಿಸುರುಳಿಗೆ ಸಂಗೀತ ಒದಗಿಸುವ ಅವಕಾಶ ಬಂದಾಗ, ನನಗೆ ಆದ ಸಂತೋಷಕ್ಕೆ ಇತಿಮಿತಿಗಳಿಲ್ಲ. 'ವಾದಿರಾಜ ಕೀರ್ತನೆಗಳು' ಇವರ ನಿರ್ದೇಶನದಲ್ಲಿ ಬಂದ ಮೊದಲ L. P. Record. ಆಗಿನ ಕಾಲದಲ್ಲಿ ಬೆಂಗಳೂರಿನಲ್ಲಿ Recording Studio ಇದ್ದಿರಲಿಲ್ಲ. ಅದಕ್ಕಾಗಿ ಮದರಾಸಿಗೆ ತೆರಳಬೇಕಿತ್ತು. ಮದರಾಸಿನಲ್ಲಿಯೇ ಓದಿ ಬೆಳೆದಿದ್ದ ನಾನು, ಇವರ ಜೊತೆ ಹೆಜ್ಜೆ ಹಾಕಿದೆ. ಅಲ್ಲಿ, ಕಲಾವಿದರು ಹಾಗೂ ತಂತ್ರಜ್ಞರ ಜೊತೆ ಇವರು ನಡೆಸಬೇಕಿದ್ದ ಸಂಭಾಷಣೆಯನ್ನು ತಮಿಳು ಬಲ್ಲ ನಾನು ತರ್ಜುಮೆ ಮಾಡಿ, ಯಜಮಾನರ ಇಂಗಿತವನ್ನು ಅವರುಗಳಿಗೆ ತಿಳಿಯಪಡಿಸುತ್ತಿದ್ದೆ. ಈ ರೀತಿಯಾಗಿ ಇವರ ಕೆಲಸವು ಸರಾಗವಾಗಿ ನಡೆಯುವಂತೆ ನನ್ನಿಂದಾದ 'ಅಳಿಲು ಸೇವೆ' ಮಾಡಿದ ತೃಪ್ತಿ ನನಗೆ.

ಯಜಮಾನರ ಸಂಗೀತ ಕಛೇರಿಗಳಿಗೆ ತಂಬೂರದ ಸಾಥಿಯಾಗಿ ಪ್ರಾರಂಭಿಕ ದಿನಗಳಲ್ಲಿ ಭಾಗವಹಿಸುತ್ತಿದ್ದೆ. ನಂತರ 'ಭುವನಜ್ಯೋತಿ' ನೃತ್ಯರೂಪಕ ನಡೆಯುತ್ತಿದ್ದ ಸಂದರ್ಭದಲ್ಲಿ ಕಲಾವಿದೆಯರಿಗೆ make-upನಲ್ಲಿ ಸಹಕರಿಸುತ್ತಿದ್ದೆ. ಈ ಕ್ಷೇತ್ರದಲ್ಲಿನ ಇವರ ಅಭಿವೃದ್ಧಿಗಾಗಿ ಭಗವಂತನನ್ನು ಪ್ರಾರ್ಥಿಸುವುದನ್ನು ಬಿಟ್ಟರೆ, ಬೇರೇನೂ ಕೊಡುಗೆ ನನ್ನಿಂದ ಸಾಧ್ಯವಿಲ್ಲವೆಂದೆನಿಸಿ, ದೊಡ್ಡ ಕುಟುಂಬದ ಜವಾಬ್ದಾರಿಯನ್ನು, ಇವರ ಸಂಗೀತ ಸೇವೆಗೆ

ಅಡಚಣೆಯಾಗದ ಹಾಗೆ ನಡೆಸಲು ನಿರ್ಧರಿಸಿದೆ. ಮೂವರು ಜನ ಅತ್ತೆಯಂದಿರು, ಇಳಿವಯಸ್ಸಿನ ಯಜಮಾನರ ಚಿಕ್ಕಪ್ಪ ಮತ್ತು ಇವರ ಅಣ್ಣನ ಇಬ್ಬರು ಹೆಣ್ಣುಮಕ್ಕಳ ಜೊತೆಗೆ ನನ್ನ ನಾಲ್ಕು ಮಕ್ಕಳ ಜವಾಬ್ದಾರಿಯನ್ನು ಹೊತ್ತು ಸಾಗಿದೆ.

ನಾ ಮೆಚ್ಚಿದ ಇವರ ಉತ್ತಮ ಗುಣಗಳನ್ನು ಬರೆಯುತ್ತಾ ಹೋಗಬಹುದು. ಫಲಾಪೇಕ್ಷೆಯಿಲ್ಲದೆ, ತನ್ನ ಕೆಲಸವನ್ನೂ ಹಿಂದಿಟ್ಟು, ಪರರ ಸಹಾಯಕ್ಕೆ ಸನ್ನದ್ಧರಾಗುವ ಇವರ ಗುಣ ಅಂದಿನಿಂದ ಇಂದಿನವರೆಗೂ ಹಾಗೆಯೇ ಉಳಿದಿದೆ. ಅತೀ ಸರಳವಾದ ಜೀವನಶೈಲಿ ಅವರದು. ಮುಂಚಿನಿಂದಲೂ ಅಪಾರ ಸ್ನೇಹಿತರನ್ನು ಹೊಂದಿರುವ ಇವರಿಗೆ ತನ್ನೆಲ್ಲಾ ಗೆಳೆಯರನ್ನು ಮನೆಗೆ ಕರೆಸಿ, ಅವರಿಗೆ ಆತಿಥ್ಯ ನೀಡುವುದು ಬಲು ಇಷ್ಟ. ತನ್ನ ಬಗ್ಗೆ, ಅಥವಾ ಭವಿಷ್ಯದ ಬಗ್ಗೆ ಕಿಂಚಿತ್ತೂ ಆಲೋಚಿಸದೇ, 'ಇಂದಿನ ದಿನ'ವನ್ನು ಬದುಕುವ ವ್ಯಕ್ತಿ ಎಂದು ಹೇಳಬಹುದು. 'ಕೊಡುವ ಗುಣ' ಇರುವ ಇವರದು ಅತಿ ದೊಡ್ಡ ಮನಸ್ಸು.

ಪ್ರತಿಯೊಬ್ಬ ಶಿಷ್ಯನಿಗೂ ಪ್ರತ್ಯೇಕವಾಗಿ ಪಾಠ ಮಾಡುವ ಇವರು, ಸ್ವತಃ ತಾವೇ ಶಿಷ್ಯರಿಗೆ ಪಾಠಗಳನ್ನು ಬರೆದುಕೊಡುವ ಪರಿಪಾಠವಿಟ್ಟುಕೊಂಡಂತವರು. ಅದಕ್ಕಾಗಿ, ರಾತ್ರಿ 12 ರಿಂದ 2 ಗಂಟೆ ತನಕ ಬರೆಯುತ್ತಾ ಕುಳಿತುಕೊಳ್ಳುವ ಇವರನ್ನು ಕಂಡಾಗ, ಇವರ ಸಹನೆ ಹಾಗೂ ಶ್ರದ್ಧೆಗೆ ಬೆರಗಾಗಿದ್ದೇನೆ.

ಸುಮಾರು ನಾಲ್ಕು ವರುಷಗಳ ಹಿಂದೆ ನನ್ನ ಕಿರಿಯ ಸಹೋದರನಿಗೆ ಆರೋಗ್ಯ ತೀರಾ ಹದಗೆಟ್ಟಿತ್ತು. ನನ್ನ ತವರುಮನೆಯಾದ ಉದ್ಯಾವರದಲ್ಲಿ ಆತ ಮಲಗಿದ್ದಲ್ಲೇ ಇದ್ದ. ಪ್ರತಿದಿನವೂ ಆಟೋರಿಕ್ಷಾದಲ್ಲಿ ನನ್ನನ್ನು ಕರೆದುಕೊಂಡು ಹೋಗಿ, ಸ್ವತಃ ಇವರೇ ಆತನನ್ನು ಶುಚಿಗೊಳಿಸಿ, ಬಟ್ಟೆ ಬದಲಿಸಿ, ಆತನ ಎಲ್ಲಾ ಸೇವೆಯನ್ನು ಮಾಡಿದ್ದರು. ನನ್ನ ಸಹೋದರನ ಕೊನೆಯ ದಿನದವರೆಗೂ ಕಿಂಚಿತ್ತೂ ಮುಖ ಸಿಂಡರಿಸಿಕೊಳ್ಳದೆ, ಬೇಸರಿಸಿಕೊಳ್ಳದೆ, ಸೇವೆ ಮಾಡಿದ್ದನ್ನು ಎಂದಿಗೂ ಮರೆಯಲಾರೆ.

ನಮ್ಮ ಹಿರಿಯ ಮಗಳಿಗೆ ಮದುವೆಯಾಗಿ ಒಂದು ವರುಷಕ್ಕೆ ನಡೆದ ಘಟನೆ ನೆನಪಿಗೆ ಬರುತ್ತದೆ. ಶ್ರೀ ಉಡುಪಿ ಕ್ಷೇತ್ರಕ್ಕೆಂದು ಪ್ರವಾಸಕ್ಕೆ ಬಂದಿದ್ದ ಯಾವುದೋ ದಂಪತಿಗಳ ನಡುವೆ ಮಾತು ಬೆಳೆದು ಜಗಳವಾಗಿತ್ತು. ಆಕೆಯೋ ಮುನಿಸಿಕೊಂಡು, ಉಡುಪಿ ಕೃಷ್ಣ ಮಠದಲ್ಲಿ ಒಬ್ಬಳೇ (ಆಕೆಯ ಗಂಡ ಬಸ್ಸಲ್ಲೇ ಉಳಿದಿದ್ದ) ಬಹಳ ಹೊತ್ತು ಕುಳಿತಿರಲು, ಅಲ್ಲಿಂದ ಮುಂದೆ ಎಲ್ಲಿಗೆ ಹೋಗಬೇಕು ಏನು ಮಾಡಬೇಕೆಂದು ತಿಳಿಯದೆ ಗಾಬರಿಗೊಂಡಿರಲು, ಕೃಷ್ಣ ಮಠದ ಮುಖ್ಯ ಬಾಣಸಿಗರಾದ, ನಮ್ಮ ಮನೆಯ ಸದಸ್ಯನಂತಿರುವ ರಾಮಣ್ಣನವರು ಆಕೆಯನ್ನು ನಮ್ಮ ಮನೆಗೆ ಕರೆತಂದರು. ಆಕೆಯನ್ನು ಅತಿಗೌರವದಿಂದ ಸಮಾಧಾನಪೂರ್ವಕವಾಗಿ ಮಾತನಾಡಿಸಿ, ನಡೆದ ಕಹಿವಿಚಾರವನ್ನು ಆಕೆಯಿಂದ ತಿಳಿದು, ಅದನ್ನು ಮರೆತು ಗಂಡನ ಮನೆ ಸೇರುವಂತೆ ಬುದ್ಧಿಮಾತು ಹೇಳಿದರು. ಮಾತಿನ ನಡುವೆ ಗಂಡನ ಮನೆ ಸೇರಲು ಆಕೆ 'ಒಲ್ಲೆ' ಎಂದಾಗ, ಒಳಗೆ ಬಂದ ಇವರು ನನ್ನ ಬಳಿ ಹೇಳಿದ

ಮಾತು ಇಂದಿಗೂ ಮರೆಯುವಂತಿಲ್ಲ. "ನಮಗೆ ನಾಲ್ಕು ಹೆಣ್ಣು ಮಕ್ಕಳು. ಒಬ್ಬಳನ್ನು ಮದುವೆ ಮಾಡಿ ಕಳುಹಿಸಿದ್ದೇವೆ. ಆಕೆಯ ಜಾಗಕ್ಕೆ ಇನ್ನೊಬ್ಬಳು ಬಂದಂತಾಗಿದೆ. ಆಕೆ ಬಯಸಿದಲ್ಲಿ ಜೀವನ ಪರ್ಯಂತ ನಾವು ಅವಳನ್ನು ಮನೆಯಲ್ಲಿರಿಸಿಕೊಂಡು, ನಮ್ಮ ಮಗಳಂತೆ ನೋಡಿಕೊಳ್ಳೋಣ" ಎಂದಿದ್ದರು. ಕೊನೆಗೆ ಆಕೆಯನ್ನು ಓಲೈಸುತ್ತಿದ್ದಂತೆ, ತನ್ನ ಗಂಡನ ಮನೆಸೇರಲು ಸಮ್ಮತಿಸಿದಳು. ಮತ್ತು ಮೈಸೂರಿನವಳಾದ ಆಕೆಯನ್ನು ಬಸ್ಸಿನಲ್ಲಿ ಹತ್ತಿಸಿ, ಖರ್ಚಿಗೆ ದುಡ್ಡನ್ನು ಕೊಟ್ಟು, ಅವಳ ಮಾವನನ್ನು ಉದ್ದೇಶಿಸಿ ಪತ್ರ ಬರೆದು, ಅದನ್ನು ಅವಳ ಕೈಗಿತ್ತರು. ಹೀಗೆ ಸುರಕ್ಷಿತವಾಗಿ ಅವಳು ಮನೆ ಸೇರುವಂತೆ ಮಾಡಿದ್ದರು. ಬಳಿಕ ಎರಡು ದಿನದಲ್ಲಿ ಆಕೆಯ ಮಾವನಿಂದ 'ಧನ್ಯವಾದ' ಪದಗಳಿಂದ ತುಂಬಿಹೋಗಿದ್ದ ಪತ್ರ ಬಂದು ನಮ್ಮ ಮನೆಸೇರಿತ್ತು.

ಎಲ್ಲರನ್ನೂ ನಂಬಿ ಮೋಸಹೋಗುವುದು ಇವರ ಹವ್ಯಾಸದಂತೆ ಆಗಿದೆ. ನಾ ಕಂಡಂತೆ, ಜೀವನವಿಡೀ ಇವರು ಅನುಭವಗಳಿಂದ ಪಾಠ ಕಲಿಯಲೇ ಇಲ್ಲ. ಎಲ್ಲೂ ವಹಿಸಬೇಕಾದ ಎಚ್ಚರ ವಹಿಸಲಿಲ್ಲ. ಈಗಂತೂ, ಮೋಸಹೋಗುವುದೇ ಇವರಿಗೆ ಒಂದು ಅಭ್ಯಾಸವಾಗಿದೆ.

'ಅಪಾತ್ರರಿಗೆ ದಾನ ಮಾಡಬಾರದು' ಎಂದು ನಮ್ಮ ಹಿರಿಯರು ಹೇಳುತ್ತಿದ್ದುದುಂಟು. ಯಾರಿಗೆ ಸಹಾಯ ಮಾಡಬೇಕು ಮತ್ತು ಎಂಥವರಿಂದ ಸಹಾಯ ಪಡೆದುಕೊಳ್ಳಬೇಕೆನ್ನುವುದು ಎರಡು ಬೇರೆ ಬೇರೆ ಆದರೆ ಅತಿ ಮುಖ್ಯ ವಿಚಾರಗಳು. ಈ ಎರಡರಲ್ಲೂ ನಾ ಕಂಡಂತೆ ಇವರು ಮತ್ತೆ ಮತ್ತೆ ಎಡವಿದ್ದಾರೆ. ಎಷ್ಟೋ ಸಮಯ, ಇವರ ಗುಣ ನಡತೆಗಳಿಗೆ ವಿರುದ್ಧವಾಗಿರು ವಂತವರಿಂದ ಸಮಯಕ್ಕೆ ಮಣಿದು ಸಹಾಯವನ್ನು ಪಡೆದು, ಕೊನೆಗೆ ಅಂಥವರ ಮುಲಾಜಿಗೆ ಬಿದ್ದು ಇವರಿಗೊಲ್ಲದ ವಿಚಾರದಲ್ಲೂ ತಲೆಯಾಡಿಸಬೇಕಾಗಿ ಬಂದ ಘಟನೆಗಳನ್ನು ಕಂಡಿದ್ದೇನೆ. ಎಷ್ಟೊಂದು ಸಲ ಇವರಿಗೆ ಈ ವಿಷಯದಲ್ಲಿ ತಿಳಿಯಹೇಳಲು ಪ್ರಯತ್ನಿಸಿ ಸೋತಿದ್ದೇನೆ.

'ಸಾವಿನ ಕಾಲ ತಪ್ಪಿದರೂ ನೋವಿನ ಕಾಲ ತಪ್ಪಲ್ಲ' ಎಂಬ ಮಾತಿಗೆ ನಿದರ್ಶನವಾಗಿ ಜೀವನದುದ್ದಕ್ಕೂ ಯಾರಿಗಾಗಿ ದುಡಿದರೋ, ಯಾರ ಏಳಿಗೆಗಾಗಿ ಶ್ರಮಿಸಿದರೋ, ಅಂತಹ ಬಂಧುಗಳಿಂದ, ಸ್ನೇಹಿತರಿಂದ ಹಾಗೂ ಶಿಷ್ಯರಿಂದ ಅತಿಯಾದ ಕ್ಲೇಶಕ್ಕೊಳಗಾಗಿ ನೊಂದು ಬೆಂದವರು ನನ್ನ ಯಜಮಾನರು. ಜೀವವನ್ನುಳಿಸಿದ ಸ್ನೇಹಿತರೆಂದು ಇವರು ನಂಬಿದ್ದ ಕೆಲ ಪರಿಚಿತರೇ ಬದುಕಿನ ಅರ್ಥವನ್ನೇ, ವಿವರಣೆಯನ್ನೇ ಬದಲಿಸಿ, ನಮಗೆಲ್ಲ ಜೀವನಾನುಭವಕ್ಕೆ ಕೊರತೆ ಇಲ್ಲದಷ್ಟು ಪಾಠ ಕಲಿಸಿದ್ದಾರೆ. 'ಸ್ನೇಹ' ಎಂಬ ಎರಡಕ್ಷರದಿಂದ ಉಂಟಾಗುವ 'ಬಂಧ'ದಿಂದಾಗುವ ಪರಿಣಾಮದ ತೀವ್ರತೆ ಹೀಗೂ ಇರುತ್ತದೆಯೇ ಎಂದು ವಿಸ್ಮಯ ಪಡುವಂತಹ ಘಟನೆಗಳೂ ನಮ್ಮ ಬದುಕಿನಲ್ಲಿ ನಡೆದಿವೆ.

ಮಕ್ಕಳಲ್ಲಿ ಅತಿಯಾದ ಪ್ರೀತಿ, ಮಮತೆ, ಕಾಳಜಿ ಹೊಂದಿರುವ ಇವರು, ಪ್ರೀತಿಯ ತಂದೆಯಾಗಿ ಮಕ್ಕಳ ಆಸಕ್ತಿಯನ್ನು ಪೋಷಿಸಿದವರು. ತಮ್ಮ ಸ್ವಂತ ನಿರ್ಧಾರವನ್ನು ತಾವೇ

ತೆಗೆದುಕೊಳ್ಳಲು ಅವಕಾಶವನ್ನು ಹಾಗೂ ಬೇಕಾದ ಸಂಸ್ಕಾರವನ್ನು ಇತ್ತವರು. ದೊಡ್ಡ ಮಗಳ ಆಸಕ್ತಿಗನುಗುಣವಾಗಿ ಸಂಗೀತದಲ್ಲಿ ತರಬೇತಿ ನೀಡಿದರೆ, ಎರಡನೆಯವಳಿಗೆ ಕಲೆಗೆ (painting) ಪ್ರೋತ್ಸಾಹ, ಮೂರನೆಯವಳನ್ನು ನೃತ್ಯಪಟುವಾಗಿ ಹಾಗೂ ನಾಲ್ಕನೆಯವಳ ಸಾಹಿತ್ಯದ ಅಭಿರುಚಿಯನ್ನು ಗುರುತಿಸಿದ್ದಾರೆ, ಬೆಳೆಸಿದ್ದಾರೆ.

ಯಜಮಾನರ ಮಹತ್ವಾಕಾಂಕ್ಷೆಯ 'ಸಂಗಿತ ಥೆರಪಿ'ಯ ಕೆಲಸವು ಸದ್ಯದಲ್ಲೇ ಕೈಗೂಡುವುದೆಂಬ ಆಶಾಭಾವನೆ, ನಂಬಿಕೆ ನನಗೆ. ಸುಲಭದಲ್ಲಿ ಒಲಿಯದ 'ಕಲಾಸರಸ್ವತಿ' ಇವರಿಗೆ ಒಲಿದಿರುತ್ತಾಳೆ. ಇವರೂ ಕೂಡ ಶ್ರದ್ಧೆ, ಭಕ್ತಿ, ಉತ್ಸಾಹದಿಂದ ಇಂದಿನವರೆಗೂ ಕಲಾಸೇವೆ ನಡೆಸುತ್ತಲೇ ಬಂದಿರುತ್ತಾರೆ. ಸಮಾಜದ ಸ್ವಾಸ್ಥ್ಯಕ್ಕೂ ಅತಿಮುಖ್ಯವೆನಿಸಿರುವ ಥೆರಪಿ ಕಾರ್ಯಕ್ಕೆ ಜನ-ಧನ ಬಲ ದೊರೆತು ಇವರಿಂದ ನಿರಂತರವಾಗಿ ಕಲಾಸೇವೆ ನಡೆಯಲಿ, ಗುರು ಮಂಜುನಾಥಯ್ಯ, ತಂದೆ ಸೀತಾರಾಮ ಭಟ್, ತಾಯಿ ಕಮಲಮ್ಮನವರ ಹೆಸರನ್ನು ತನ್ನ ಉನ್ನತ ಕಲಾಸೇವೆಯಿಂದ ಅಮರವಾಗಿಸಲಿ ಎಂಬ ಹಾರೈಕೆ ನನ್ನದು. ಅವಿರತವಾಗಿ ಸಾಧನೆಯ ಮೆಟ್ಟಿಲನ್ನು ಹತ್ತುತ್ತಾ ಸಾಗುವ ಯಜಮಾನರು, ಅವರಿಗೆ ಬೆಂಬಲವಾಗಿರುವ ಹಿರಿಯ ಮಗಳು ಹಾಗೂ ಮಗನಂತಿರುವ ಅಳಿಯ ಗಿರಿಧರ್ ನನ್ನ ದಾಂಪತ್ಯಗೀತೆಯ ಸಾರ್ಥಕ ಪಲ್ಲವಿಗಳು.

ತಾನಾಯ್ತು, ತನ್ನ ಮನೆಯಾಯ್ತು ಎಂದಿರದೆ, ಸಮಾಜಕ್ಕೆ ತನ್ನ ಕೊಡುಗೆ ನೀಡುವಲ್ಲಿ ಕಾರ್ಯೋನ್ಮುಖರಾಗಿರುವ ಇವರ ಕೈಹಿಡಿದು, ಜೀವನದ ಸಂಧ್ಯಾಕಾಲಕ್ಕೆ ತಲುಪಿರುವ ನನಗೆ, ನಾವು ಸಾಗಿಬಂದ ದಿನಗಳು, ಎದುರಿಸಿದ ಪರೀಕ್ಷೆಗಳು ನಮ್ಮ ಮಕ್ಕಳಿಗೆ ಜೀವನದಲ್ಲಿ ಉತ್ತಮವಾದ ಅನುಭವವನ್ನು ನೀಡಿವೆ ಎಂಬ ನಂಬಿಕೆ. ತನ್ನ ಉಸಿರಾದ ಸಂಗೀತದಿಂದ ಲೋಕಕಲ್ಯಾಣಕ್ಕಾಗಿ ಕೈಗೊಂಡಿರುವ ಥೆರಪಿಯ ಕೆಲಸವು ಶೀಘ್ರವಾಗಿ ಕೈಗೂಡಲಿ, ಅದಕ್ಕೆ ಇವರಿಗೆ ಜನ-ಧನ ಬಲದೊಂದಿಗೆ ಆರೋಗ್ಯವನ್ನು ಕರುಣಿಸಲಿ ಎಂಬುದೇ ಭಗವಂತನಲ್ಲಿ ನನ್ನ ನಿರಂತರ ಪ್ರಾರ್ಥನೆ.

ವಾತ್ಸಲ್ಯದ ಅಪರೂಪದ ಮುಖಗಳು

✍ ವಸುದಾ ಗಿರಿಧರ್

ವಾಸುದೇವ ಭಟ್ಟರ ಮಗಳಾಗಿ, ಸಂಗೀತದಲ್ಲಿ ಅತೀವ ಆಸಕ್ತಿ ಬೆಳೆಸಿಕೊಂಡಿರುವ ನನಗೆ, ಅಪ್ಪನಿಂದ ಸಂಗೀತ ಕಲಿಯುವ ವಿಪುಲ ಅವಕಾಶ ದೊರೆಯುವುದೆಂದೇ ನಂಬಿ ಬೆಳೆದಿದ್ದ ನನಗೆ, ಅಪ್ಪನ ಬಗೆಗೆ ಒಂದು ದಿನ 'ಮನಬಿಚ್ಚಿ' ಬರೆಯುವ ಅವಕಾಶ ಒದಗಬಹುದು ಎಂದು ಊಹಿಸಿರಲಿಲ್ಲ.

ನಮ್ಮ ತಂದೆ ತಾಯಿಯವರ ಮಮತೆಯ ಮಡಿಲಲ್ಲಿ, ತುಂಬು ಕುಟುಂಬದಲ್ಲಿ ಬೆಳೆದ ನಮಗೆ ಗುರುಹಿರಿಯರಿಗೆ ಗೌರವ, ದೇವರ ಪೂಜೆ ಪುನಸ್ಕಾರಗಳು, ಸೇವಾ ಮನೋಭಾವನೆ ಇವೆಲ್ಲವೂ ಮೈಗೂಡಿತ್ತು. ಸಂಸಾರ ನಿರ್ವಹಣೆಯನ್ನು ಅತಿ ಸಮರ್ಥವಾಗಿ ಅಮ್ಮನೇ ನಿರ್ವಹಿಸುತ್ತಿದ್ದು, ಅಪ್ಪ ಬೆಳಿಗ್ಗೆ ಮನೆಯಿಂದ ಹೊರಟರೆಂದರೆ ರಾತ್ರಿಯಷ್ಟೇ ಮನೆಗೆ ಹಿಂದಿರುಗುತ್ತಿದ್ದರು. ಮಕ್ಕಳಾದ ನಾವು ಏಳುವ ಮೊದಲೇ ಮನೆಬಿಟ್ಟು, ರಾತ್ರಿ ನಾವೆಲ್ಲರೂ ಸುಖನಿದ್ರೆಗೆ ಜಾರಿದ ನಂತರವೇ ಅಪ್ಪನ ಆಗಮನವಾಗುತ್ತಿದ್ದು, ಅವರನ್ನು ಬಹುದಿನದವರೆಗೆ ಕಾಣುವ ಅವಕಾಶವೇ ನಮಗೆ ಸಿಗುತ್ತಿರಲಿಲ್ಲ. ಅವರನ್ನು ಭೇಟಿಯಾಗುತ್ತಿದ್ದ ಆ ಕೆಲ ಶನಿವಾರ - ಆದಿತ್ಯವಾರಗಳು ಸಂಭ್ರಮಕ್ಕೆ ಕಾರಣವಾಗುತ್ತಿದ್ದವು.

ಪ್ರಾಣಿಗಳ ಮೇಲೆ ಅಪ್ಪನಿಗೆ ಎಲ್ಲಿಲ್ಲದ ಪ್ರೀತಿ. ಮನೆಯಲ್ಲಿದ್ದ ಬೆಕ್ಕುಗಳು, ಪಕ್ಕದ ಮನೆಯ ನಾಯಿಗಳು, ಹಿತ್ತಲ ತೋಟದಲ್ಲಿ ಬಂದುಹೋಗುವ ಆಕಳು - ಇವು ಅವರ ಒಡನಾಡಿಗಳು. ಇದನ್ನೇ ಅನುಸರಿಸಿದ ನಮಗೆ ಪ್ರಾಣಿಗಳ ಮೇಲೆ ಅದೆಷ್ಟು ಪ್ರೀತಿಯೆಂದರೆ, ಒಬ್ಬ ವ್ಯಕ್ತಿಯನ್ನು ಮಾತನಾಡಿಸುವಂತೆ ಈ ಎಲ್ಲಾ ಪ್ರಾಣಿಗಳನ್ನು ಮಾತನಾಡಿಸುವ ಅಭ್ಯಾಸವೂ ಬೆಳೆಯಿತು. ಅಕಸ್ಮಾತ್ ನಮ್ಮ ಕೈಕಾಲುಗಳು ಅವಕ್ಕೆ ತಾಗಿ ಅವುಗಳಿಗೆ ನೋವಾದರೆ ಅಥವಾ ಹಾಕಿದ ತಿಂಡಿ ತಟ್ಟೆಯಿಂದ ನೆಲಕ್ಕೆ ಚಿಮ್ಮಿದರೆ 'sorry' ಎಂದು ಅವುಗಳ ಬಳಿ ಕ್ಷಮೆ ಕೇಳುವಷ್ಟು ಪ್ರೀತಿ ನಮ್ಮದಾಯಿತು. ಬೆಂಗಳೂರಿನಲ್ಲಿ ಇಂದಿಗೂ ಬೀದಿ ಬೀದಿಗಳಲ್ಲಿ ನಮ್ಮ ಕಣ್ಣಿಗೆ ಬಿದ್ದ ಬೆಕ್ಕು, ನಾಯಿಗಳನ್ನು ಮಾತನಾಡಿಸದೇ ನಮ್ಮ ಪಯಣ ಮುಂದುವರಿಯುವುದಿಲ್ಲ. ಬಹುಶಃ ನಂಬಿದ ವ್ಯಕ್ತಿಗಳಿಂದ ಮೋಸಹೋಗುತ್ತಿದ್ದ ತಂದೆಯವರ ಅನುಭವ ಮಕ್ಕಳಾದ ನಮಗೆ 'ಮನುಷ್ಯರಿಗಿಂತ ಪ್ರಾಣಿಗಳೇ ಎಷ್ಟೋ ಮೇಲು' ಎಂಬ ಅಭಿಪ್ರಾಯವನ್ನು ಸಣ್ಣ ವಯಸ್ಸಿನಲ್ಲಿಯೇ ಹುಟ್ಟಿಸಿದ್ದು ಇದಕ್ಕೆ ಕಾರಣವಿರಬಹುದೇನೋ.

ಬಾಲ್ಯದ ಒಂದು ಘಟನೆ: ತಮ್ಮ ಪ್ರೀತಿಯ ಮಗಳಿಗೆಂದು ಅಪ್ಪ ನನಗಿಷ್ಟವಾದ

ಮಾವಿನ ಹಣ್ಣನ್ನು ತುಂಡರಿಸಿ ನನ್ನನ್ನು ಕರೆದು, "ನಿನಗೊಂದು ಕಥೆ ಹೇಳುತ್ತೇನೆ, ನೀನು ಕೇಳುತ್ತಾ ಹಣ್ಣನ್ನು ತಿನ್ನು" ಎಂದು ಕರೆದರು. ಇಷ್ಟವಾದ ಹಣ್ಣು, ಅದರ ಜೊತೆ ಕಥೆಯೂ ಕೂಡಾ ಕೇಳಲು ಅವಕಾಶ ಎಂದು ಅವರ ಆಹ್ವಾನವನ್ನು ಒಪ್ಪಿದೆ. ಅವರು ಕಥೆಯನ್ನು ಹೇಳುತ್ತಾ ನನಗಾಗಿ ಇರಿಸಿದ್ದ ಹಣ್ಣನ್ನೂ ತಿನ್ನುತ್ತಾ ಸಾಗಿದ್ದರು. ನಾನು ಕಥೆಯಲ್ಲೇ ಮುಳುಗಿದ್ದೆ. ಕೈಯಲ್ಲಿ ಮೊದಲು ತೆಗೆದುಕೊಂಡಿದ್ದ ಆ ಒಂದು ತುಂಡು ಮಾವಿನ ಹಣ್ಣನ್ನು ಮಾತ್ರವೇ ಸವಿಯುತ್ತಿದ್ದೆ. ಕಥೆ ಮುಗಿದು ತಟ್ಟೆಯ ಬಳಿ ನನ್ನ ದೃಷ್ಟಿ ಹೋಯಿತು. ನಾನು ನೋಡಿದ್ದು, ಖಾಲಿಯಾಗಿದ್ದ ತಟ್ಟೆಯನ್ನು. ಐದು ವರುಷದ ನನಗೆ ಅಪ್ಪ ಕಥೆ ಹೇಳುತ್ತಾ ಹಣ್ಣನ್ನು ತಿಂದ ವಿಚಾರ ಆಗಷ್ಟೇ ಹೊಳೆಯಿತು. ಜೋರಾಗಿ ಅತ್ತು ಕರೆದು ರಂಪ ಮಾಡಿದೆ. ಅಪ್ಪ ಸಮಾಧಾನ ಮಾಡುತ್ತಾ, "ನಿನ್ನ ಗಮನ ಕಥೆಯ ಮೇಲೆ ಎಷ್ಟಿರುತ್ತದೆ ಎಂದು ತಿಳಿಯಲು ಹಾಗೆ ಮಾಡಿದೆ" ಎಂದು ಹೇಳಿ, ಮತ್ತೊಂದು ಮಾವಿನ ಹಣ್ಣನ್ನು ಕೊಟ್ಟರು.

ಅಪ್ಪನ ಅತೀ ಮುದ್ದಿನ ಮಗಳಾದ ನನ್ನ ಮುಂಜಾನೆಗಳು ನಾನು ಅಪ್ಪನನ್ನು 'ಅಪ್ಪಾ' ಎಂದು ರಾಗವಾಗಿ ಹಾಗೂ ಅವರು ನನ್ನನ್ನು 'ವಸುದಾ, ವಸುದಾ' ಎಂದು ರಾಗವಾಗಿ ಸಂಬೋಧಿಸುವುದರೊಂದಿಗೇ ಪ್ರಾರಂಭ. ಲೆಕ್ಕವಿಲ್ಲದಷ್ಟು ಬಾರಿ ಅಪ್ಪನ ಕರೆಯ ಪರಿಳಿತ, ರಾಗಗಳನ್ನು ನಾನು ಅನುಕರಿಸುತ್ತಿದ್ದ 'ಜುಗಲ್‌ಬಂದಿ' ಅಮ್ಮ "ಸಾಕು, ನಿಲ್ಲಿಸಿ ನಿಮ್ಮಿಬ್ಬರ ರಾಗಾಲಾಪನೆ" ಎಂದಾಗಲೇ ಅಂತ್ಯಕಾಣುತ್ತಿತ್ತು.

ಆಗಲೇ ಅನೇಕಾನೇಕ ಸಮರ್ಥ ಶಿಷ್ಯರನ್ನು ಪೋಷಿಸಿ ಬೆಳೆಸಿದ್ದ ಅಪ್ಪನ ಎದುರು ನನಗೆ ಹಾಡಲು ಮುಜುಗರ. ಅವರಿಗೂ ಅವರ ಈ ಮಗಳು ಹಾಡುತ್ತಾಳೆ ಎಂಬ ಸುಳಿವೇ ಇರಲಿಲ್ಲ. ನನ್ನ ನರ್ತನ, ಹಾಡುಗಾರಿಕೆ ಎಲ್ಲವೂ ಅಪ್ಪನ ಅನುಪಸ್ಥಿತಿಯಲ್ಲಿ, ಬಂದ ನೆಂಟರ ಮುಂದೆ ಪ್ರದರ್ಶಿತವಾಗುತ್ತಿತ್ತು. ದೂರದ ಮದ್ರಾಸ್‌ನಿಂದ ಬಂದ ಶಿಷ್ಯರೊಬ್ಬರು ಮನೆಯಲ್ಲೇ ಇದ್ದು ಸಂಗೀತ ಅಭ್ಯಸಿಸುತ್ತಿದ್ದರು. ನನ್ನ ಹಾಡುಗಾರಿಕೆಯ ಬಗ್ಗೆ ತಿಳಿದಿದ್ದ ಅವರು ಬಂದ ನೆಂಟರೆದುರು ಹಾಡುವಂತೆ ಒತ್ತಾಯಿಸಿದ್ದರು. ತ್ಯಾಗರಾಜ ಕೀರ್ತನೆ 'ಬಾಲಕನಕಮಯ' (ಎಸ್. ಜಾನಕಿ ಹಾಡಿದ್ದು, ಕೇಳಿ ಕಲಿತಿದ್ದೆ) ಹಾಡುತ್ತಿದ್ದಾಗ ಅಪ್ಪನ ಆಗಮನ. ನಿಲ್ಲಿಸದೇ ಹಾಡುವ ಅನಿವಾರ್ಯತೆಯಿಂದ ಹಾಡಿ ಮುಗಿಸಿದ್ದಾಯ್ತು. ಅಚ್ಚರಿ ಎಂದರೆ, ಅಪ್ಪನಿಂದ ನನ್ನ ಹಾಡುಗಾರಿಕೆಗೆ ಮೆಚ್ಚುಗೆಯ ನುಡಿ. ಮನಸ್ಸಲ್ಲೇ ಹಿರಿಹಿರಿ ಹಿಗ್ಗಿದೆ. ಅಲ್ಲಿಂದ, ಅಂದರೆ ಏಳನೇ ತರಗತಿಯಿಂದ ವಿಧ್ಯುಕ್ತವಾಗಿ ಸಂಗೀತಾಭ್ಯಾಸ ಪ್ರಾರಂಭವಾಯ್ತು. ಮಿಕ್ಸಿ, ಫ್ಯಾನ್ ಹಾಕಿದಾಗ ಅವರ ಶಬ್ದದೊಂದಿಗೆ ಶ್ರುತಿ ಕೂಡಿಸಿ ಹಾಡುವುದು ನನಗೆ ಆಗ ಬಲು ಇಷ್ಟವಾಗಿತ್ತು. ಮೂಲ್ಕಿಯಲ್ಲಿ ಪ್ರಾಧ್ಯಾಪಕರಾಗಿದ್ದ ಅಪ್ಪ ಸಂಜೆ ನಂತರ ಸಂಗೀತ ತರಗತಿಯನ್ನು ನಡೆಸಿ ರಾತ್ರಿಯೇ ಹಿಂದಿರುಗುತ್ತಿದ್ದರು. ಬಳಲಿ ಬರುತ್ತಿದ್ದ ಅವರನ್ನು ಕಂಡು, 'ನನಗೂ ಸಂಗೀತ ಕಲಿಸಿಕೊಡಿ' ಎಂದು ಕೇಳಲೂ ಮನಸ್ಸು ಬರುತ್ತಿರಲಿಲ್ಲ. ಅಪ್ಪ ವಿಶ್ರಾಂತಿ ಪಡೆದುಕೊಳ್ಳಲಿ ಎಂದು ಸುಮ್ಮನಿರುತ್ತಿದ್ದೆ. ಹೀಗೇ ದಿನಗಳು - ವರುಷಗಳು ಉರುಳಿದ್ದವು. ಕೆಲ ಸಮಯ ಶಿಷ್ಯರಿಗೆ ಮನೆಯಲ್ಲೇ ಪಾಠ ಮಾಡುತ್ತಿದ್ದಾಗ ಅವರಿಗೆ ಹೇಳಿಕೊಡುವುದನ್ನೇ ಕೇಳಿ, ಅನೇಕ

ವರ್ಣ, ಕೀರ್ತನೆಗಳು ಕಂಠಪಾಠವಾದವು. ಅಪ್ಪನಿಂದ ಪಾಠ ಮಾಡಿಸಿಕೊಳ್ಳುವ ಅವಕಾಶ ಬಂದಾಗ ಅವರು ನನ್ನ ಕಲಿಕೆಯಲ್ಲಿನ ಸಣ್ಣಪುಟ್ಟ ತಪ್ಪುಗಳನ್ನು ತಿದ್ದುತ್ತಿದ್ದರು.

ನಾನಾಗ ಐದನೇ ತರಗತಿಯಲ್ಲಿ ಓದುತ್ತಿದ್ದೆ. ಅಪ್ಪ ನಿರ್ದೇಶಿಸಿದ ವಾದಿರಾಜ ಭಕ್ತಿಗೀತೆಗಳ ಧ್ವನಿಸುರುಳಿ ಹಾಗೂ L.P. Record ಬಿಡುಗಡೆ ಸಮಾರಂಭ ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಪ್ರಾರ್ಥನೆಗಾಗಿ ನನ್ನ ಹೆಸರು ಸೂಚಿಸಲ್ಪಟ್ಟಿತ್ತು. ಮೈಸೂರಿಗೆ ತಲುಪಿದ್ದಾಯ್ತು. ಸಂಜೆಯೂ ಸಮೀಪಿಸಿತ್ತು. 3.30 ಕಳೆದರೂ, ಹಾಡ್ಯಾವುದೆಂದು ಅಪ್ಪ ಇನ್ನೂ ತಿಳಿಸಿರಲಿಲ್ಲ. ಬೆಂಬಿಡದೆ ಅಪ್ಪನನ್ನು ಕೇಳಿದಾಗ, 'ಗಣೇಶ ಪಂಚರತ್ನ' ಗೀತೆಯನ್ನು ಅಲ್ಲೇ ರಾಗ ಸಂಯೋಜಿಸಿ ಆಗಷ್ಟೇ ಹೇಳಿಕೊಟ್ಟರು. "ಸಂಸ್ಕೃತ ಶ್ಲೋಕಗಳಿವು. ಸ್ಪಷ್ಟ ಉಚ್ಚಾರವಿರಬೇಕು" ಎಂದು ಹೇಳಿ "ಅಭ್ಯಸಿಸು" ಎಂದರು. ಸಂಜೆ 5.30ರ ಕಾರ್ಯಕ್ರಮದಲ್ಲಿ ಪ್ರಾರ್ಥನೆಗಾಗಿ ಹಾಡಿ ಎಲ್ಲರಿಂದ ಹೊಗಳಿಸಿಕೊಂಡೆ. ಅಪ್ಪನಿಂದಲೂ ಶ್ಲಾಘನೆ. ಈ ರೀತಿ ಕೊನೆ ಘಳಿಗೆಯಲ್ಲೇ ಹಾಡು ಹೇಳಿಕೊಟ್ಟ ಘಟನೆ ಇದೇ ಕೊನೆಯಾಗಿರದೆ, ಹೀಗೇ ಪುನರಾವರ್ತನೆಯಾದದ್ದುಂಟು. ಈ ಕ್ರಮದ ಅಭ್ಯಾಸ ಸಂಗೀತದಲ್ಲಿ ಚುರುಕಾಗಿ ಗ್ರಹಿಸುವ ಶಕ್ತಿ ರೂಪಿಸುವುದರಲ್ಲಿ ಬಹಳ ಸಹಕಾರಿಯಾಯ್ತು. ಸಂಗೀತಾಭ್ಯಾಸದ ಕೊನೆಯಲ್ಲಿ 'ಶ್ರೀ ರಾಮಚಂದ್ರ ಶ್ರಿತ ಪಾರಿಜಾತಃ' ಎಂಬ ಶ್ಲೋಕವನ್ನು ಅದೆಷ್ಟೋ ಹೆಸರು ಗೊತ್ತಿರದ ರಾಗಗಳ ಆರೋಹಣ ಅವರೋಹಣ ನುಡಿಸಿ, ಗ್ರಹಿಸಿಕೊಂಡು ಹಾಡು ಎಂದು ಹೇಳುತ್ತಿದ್ದರು. ಶ್ಲೋಕ ಬಾಯಿಪಾಠವಾಗಿದ್ದ ನಾನು ಆ ರಾಗದಲ್ಲಿ ಸ್ವರಗಳನ್ನು ಗ್ರಹಿಸಿ ಹಾಡಬೇಕಾಗುತ್ತಿತ್ತು. ಈ ರೀತಿಯ ಅಭ್ಯಾಸದಿಂದ ನನ್ನ ಮನೋಧರ್ಮ ವಿಸ್ತಾರಗೊಳ್ಳಲು ತುಂಬಾ ಸಹಕಾರಿಯಾಯ್ತು. ಇಂದು ಅನೇಕರ ನಿರ್ದೇಶನದಲ್ಲಿ ಹಾಡುವ ನನಗೆ ನನ್ನ ಅಪ್ಪನ ಪಾಠದ ಬೆಲೆ ಅರಿವಾಗುತ್ತಿದೆ. ಅವರ ಶಿಷ್ಯರುಗಳನ್ನು ಹೋಲಿಸಿದರೆ, ಮಗಳಾಗಿ ನನಗೆ ಅವರಿಂದ ಸಂಗೀತ ಪಾಠ ಅತೀ ಕಡಿಮೆ ಆಗಿದ್ದುದನ್ನು ಗಮನಿಸಿ ಅದೆಷ್ಟೋ ಸಲ ನಾನು ವಾಸುದೇವ ಭಟ್ಟರ ಮಗಳಾಗಿ ಹುಟ್ಟುವುದಕ್ಕಿಂತ ಅವರ ಶಿಷ್ಯಳಾಗಿದ್ದರೆ ತುಂಬ ಪಾಠ ಕಲಿಯಬಹುದಾಗಿತ್ತು ಎಂದು ಅನ್ನಿಸುತ್ತಿದ್ದುದೂ ನಿಜ. ಹಾಗೆ ಅಮ್ಮನಲ್ಲಿ ಆಗಾಗ್ಗೆ ಹೇಳಿದ್ದು ಇಂದಿಗೂ ನನ್ನ ನೆನಪಿನಲ್ಲಿದೆ.

ನನ್ನ ಅಮ್ಮ ಬಾಲ್ಯದಲ್ಲಿ ವೀಣಾವಾದನ ಕಲಿತಿದ್ದು ಸಹಜ ಸಂಗೀತಾಸಕ್ತಿ ಬೆಳೆಸಿಕೊಂಡಿದ್ದರು. ಉಡುಪಿ, ಮಣಿಪಾಲಗಳಲ್ಲಿ ನಡೆಯುತ್ತಿದ್ದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳಿಗೆಲ್ಲಾ ಮಕ್ಕಳಾದ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದರು. ರೇಡಿಯೋಗಳಲ್ಲಿ ಬರುತ್ತಿದ್ದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳಿಂದಾಗಿ ಅಮ್ಮನೊಂದಿಗೆ ರಾಗ, ತಾಳ, ಸ್ವರಗಳ ಪರಿಚಯದ ಬಗ್ಗೆ ಚರ್ಚಿಸುತ್ತಿದ್ದೆ. ನಾನು ರಾಗ ಪರಿಚಯ ಪಡೆವಲ್ಲಿ ಅಮ್ಮನ ಪಾತ್ರ ಹಿರಿದು ಎಂಬುದಂತೂ ಸತ್ಯ.

ಬರಿಯ ಸಂಗೀತವಲ್ಲದೆ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗಾಗಿ ಅನೇಕಾನೇಕ ಹೊಸ ಹೊಸ ವಿಚಾರವುಳ್ಳ ವ್ಯಕ್ತಿಗಳನ್ನು ಮನೆಗೆ ಬರಮಾಡಿಕೊಂಡು ಅವರ ಮಾತು ಮಕ್ಕಳ ಮೇಲೆ

ಯಾವ ರೀತಿ ಪರಿಣಾಮ ಬೀರುತ್ತಿದೆ ಎಂಬುದನ್ನು ನಮ್ಮ ತಂದೆಯವರು ಗಮನಿಸುತ್ತಿದ್ದರು. ಮಕ್ಕಳ ಸಂಸ್ಕಾರವನ್ನು ಪರೀಕ್ಷಿಸಲೆಂದು ಒಮ್ಮೆ ನಾಸ್ತಿಕ ಮಹಾಶಯರೊಬ್ಬರನ್ನು ಮನೆಗೆ ಬರಮಾಡಿಕೊಂಡು ಆ ವ್ಯಕ್ತಿಯ ವಿಚಾರವಾದ ('ದೇವರಿಲ್ಲ, ದಿನಾ ಪೂಜಿಸುವುದು ವ್ಯರ್ಥ ಕಾಲಾಪಹರಣ, ವಿಜ್ಞಾನವನ್ನು ನಂಬತಕ್ಕದ್ದು')ವನ್ನು ನಮ್ಮ ಮುಂದೆ ಒಡ್ಡಿದ್ದರು. ಈ ವ್ಯತಿರಿಕ್ತ ವಿಚಾರದಿಂದಾಗಿ ನನ್ನ ಮನಸ್ಸು ಗೊಂದಲವಾಯ್ತು. ದೇವರ ಕೋಣೆಯಲ್ಲೇ ಮಲಗುತ್ತಿದ್ದ ನನಗೆ ಆ ರಾತ್ರಿ ನಿದ್ದೆ ಬಾರದಾಯ್ತು. ಯಾವುದೋ ವಿಚಿತ್ರ ಭಾವನೆಯಿಂದ ಒದ್ದಾಡಿ, ತೊಳಲಾಡಿ ಕೊನೆಗೆ ರಾಮಕೃಷ್ಣ ಪರಮಹಂಸರ ಪುಸ್ತಕವನ್ನು ಓದಿ, ತಿರುಗಿ ಮೊದಲಿನಂತೆ ನೆಮ್ಮದಿಗೊಂಡು ದೇವರಿರುವನೆನ್ನುವ ನಿರ್ಧಾರದಿಂದ ನೆಮ್ಮದಿ ಕಂಡೆ. ಮರುದಿನ ಮುಂಜಾನ ಎದ್ದೊಡನೆ ಅಮ್ಮನನ್ನು ಕರೆದು, "ಅಮ್ಮಾ, ನಿನ್ನೆ ಬಂದವರ ವಿಚಾರವೆಲ್ಲಾ ಸುಳ್ಳು. ದೇವರಿದ್ದಾನೆನ್ನುವುದೇ ನನ್ನ ದೃಢವಾದ ನಂಬಿಕೆ" ಎಂದು ನನ್ನ ವಿಚಾರವನ್ನು, ನಡೆದ ಅನುಭವವನ್ನು ಹಂಚಿಕೊಂಡಾಗ ಅಪ್ಪ ನನ್ನ ಮಾತನ್ನು ಕೇಳಿ ಬಹು ಸಂತೋಷಗೊಂಡಿದ್ದರು.

ನನ್ನ ಆಧ್ಯಾತ್ಮಿಕ ಒಲವಿಗೆ ಕಾರಣರು ನನ್ನ ತಂದೆಯೇ ಎಂಬುದಂತೂ ಸತ್ಯ. ಎಂಟನೇ ತರಗತಿಯಲ್ಲಿದ್ದಾಗ, "ರಜಾದಿನಗಳಲ್ಲಿ ಓದಿಕೊಳ್ಳು" ಎಂದು ಕೆಲವು ಪುಸ್ತಕಗಳನ್ನು ಅಪ್ಪ ತಂದಿತ್ತರು ('ರಾಮಕೃಷ್ಣ ಪರಮಹಂಸ ಚರಿತೆ', 'ಭಗವದ್ಗೀತೆ' ಇತ್ಯಾದಿ). ಆ ಪುಸ್ತಕಗಳು ನನ್ನಲ್ಲಿ ಗಾಢವಾದ ಪ್ರಭಾವ ಬೀರಿದ್ದವು. ಜೊತೆಗೆ ಅಮ್ಮನ ಸೋಮವಾರ ವ್ರತ. ನನ್ನ ತಂದೆಯವರ ಪ್ರತಿಯೊಂದು ಧ್ವನಿಸುರುಳಿ ಬಿಡುಗಡೆಗೊಳ್ಳುವಾಗ, ಅದರ ಯಶಸ್ಸಿಗಾಗಿ ಅಮ್ಮ ಅನಂತೇಶ್ವರ ದೇವಸ್ಥಾನಕ್ಕೆ ತೆರಳಿ ನೂರೆಂಟು ಪ್ರದಕ್ಷಿಣೆ ನಮಸ್ಕಾರ ಮಾಡುವ ಪರಿಪಾಠ ಇಟ್ಟುಕೊಂಡಿದ್ದರು. ಈ ಸಂಸ್ಕಾರದ ನೆಲಗಟ್ಟಿನಲ್ಲಿ ಬೆಳೆದಿದ್ದ ನನಗೆ ಆಧ್ಯಾತ್ಮಿಕ ಒಲವು ಸಹಜವಾಗಿತ್ತು.

ಬಹುಶಃ ಈ ಸಂದೇಹಗಳೇ ನನ್ನ ಹಾಗೂ ಎಂ. ಎಸ್. ಗಿರಿಧರ್ ಪರಿಚಯ ಆತ್ಮೀಯತೆಯತ್ತ ಸಾಗಲು ಕಾರಣವಾಯ್ತು. ನನಗೆ ಬರಿಯ ವ್ಯವಹಾರ - ವೈಚಾರಿಕತೆ ಬಗೆಗೆ ಒಲವು ತೋರುವ ವ್ಯಕ್ತಿಗಿಂತ ನಾಮಸ್ಮರಣೆ, ಭಜನೆಯಂತಹ ಆಧ್ಯಾತ್ಮಿಕ ವಿಚಾರ ಲಹರಿ ಹೊಂದಿರುವ, ಜೊತೆಗೆ ಉತ್ತಮ ಹಾಸ್ಯಪ್ರಜ್ಞೆ ಇರುವ ಗಿರಿಯವರಲ್ಲಿ ಆಸಕ್ತಿ ಹುಟ್ಟಿಕೊಂಡಿತು. ಒಂದು ಪೆನ್ ಅನ್ನೂ ಅಪ್ಪನಿಂದ ನೇರವಾಗಿ ಕೇಳಿ ಪಡೆಯದಿದ್ದ ನಾನು ಗಿರಿಧರ್‌ರಲ್ಲಿ ನನ್ನ ಮದುವೆಯ ನಿರ್ಧಾರವನ್ನು ತಿಳಿಸಿದಾಗ ಅಪ್ಪನಿಗಾದ ಆಶ್ಚರ್ಯ, ಬೆರಗು ಎಂದೆಂದಿಗೂ ಮರೆಯುವಂತಿಲ್ಲ. ಅಪ್ಪ ಆಯ್ಕೆಯ ಕಾರಣ ಕೇಳಿದಾಗ 'ಆಧ್ಯಾತ್ಮಿಕ ಒಲವು' ಎಂದು ಉತ್ತರಿಸಿದ್ದೆ. ಅವರು ಮರುಮಾತಿಲ್ಲದೆ ಒಪ್ಪಿಗೆ ನೀಡಿದ್ದರು.

ನಾನು ಹನ್ನೆರಡು ವರ್ಷಗಳ ಗಡಿಯಲ್ಲಿದ್ದಾಗ ಅಪ್ಪ ಕೇಳಿದ್ದ ಪ್ರಶ್ನೆ, "ನಿನ್ನ ಅಪ್ಪ ಹುಚ್ಚನಂತೆ ವಿವಸ್ತ್ರನಾಗಿ ರಸ್ತೆಯಲ್ಲಿ ಓಡಾಡುತ್ತಿದ್ದರೆ, ನೀನು ಇವರೇ ನನ್ನ ತಂದೆ ಎಂದು ಹೇಳಲು ಹಿಂಜರಿಯುವೆಯೋ ಅಥವಾ ಒಪ್ಪಿಕೊಳ್ಳುವೆಯೋ?" ನಾನು ಉತ್ತರಿಸಿದ್ದೆ,

"ನೀವಾವ ಉಚ್ಚ ಸ್ಥಿತಿಯಲ್ಲೇ ಇರಲಿ, ನೀಚ ಸ್ಥಿತಿಯಲ್ಲೇ ಇರಲಿ, ನೀವು ನನ್ನ ತಂದೆ ಎಂಬ ಸತ್ಯವನ್ನು ಹೇಗೆ ಅಲ್ಲಗಳೆಯಲಾದೀತು?" ಎಂದು. ನನ್ನವರು ಎನ್ನುವುದು ಅವರಿರುವ ಸ್ಥಿತಿ, ಪದವಿ ಅಥವಾ ಹೊಂದಿರುವ ವಸ್ತುಗಳಿಂದ ಅಳೆಯಲಾಗದೆಂಬ ಸತ್ಯವು ಇಂತಹ ತಂದೆ ತಾಯಿಯ ಗರಡಿಯಲ್ಲಿ ಬೆಳೆದ ನನಗೆ ಸ್ಪಷ್ಟವಾಗಿ ತಿಳಿದೇ ಇತ್ತು. ನನ್ನುತ್ತರದಿಂದ ಅಪ್ಪನ ಮುಖದಲ್ಲಿ ಹೊಳೆದ ಸಂತೋಷ ಇವತ್ತಿಗೂ ನೆನಪಾಗುತ್ತದೆ.

ಅಪ್ಪನ ಗುಣಗಳಲ್ಲಿ ನಾನಿಷ್ಟ ಪಡದ ಗುಣ ಎಂದರೆ ಅತಿಯಾದ ಕೋಪ ಹಾಗೂ ಅತೀವ ದಾಕ್ಷಿಣ್ಯ. ಅವರ ಕೋಪದ ತೀವ್ರತೆ ಎಷ್ಟೆಂದರೆ, ಮಕ್ಕಳಾದ ನಾವು ಅವರೆದುರು ಕಾಣಿಸದಂತೆ ಒಳಗೊಳಗೇ ಸೇರಿಕೊಳ್ಳುತ್ತಿದ್ದೆವು.

ಒಮ್ಮೆ, ಅವರ ಅತಿಯಾದ ಕೋಪ ಕಂಡು ಅಟ್ಟದ ಮೇಲೆ ಏರಿ ಕುಳಿತಿದ್ದೆವು. ಅಪ್ಪ ಕೋಪದಿಂದಲೇ ಮನೆಯಿಂದ ಪೇಟೆಯ ಕಡೆ ಹೊರಟಿದ್ದರು. ತಂಗಿಯೊಂದಿಗೆ ಅಟ್ಟ ಸೇರಿದ್ದ ನಾನು ಅವರ ಸಂಗೀತ ನಿರ್ದೇಶನದ 'ಚಿತ್ರಾಂಗದೆ' ಎಂಬ ನೃತ್ಯರೂಪಕಕ್ಕೆ ಅವರೇ ಸಂಯೋಜಿಸಿದ್ದ ಹಾಡಿನ ಸಾಹಿತ್ಯ ಬದಲಿಸಿ, "ಹೋಗುವೆಯೋ ನೀ ಹೋಗು, ಬಂದೇ ಬರುವಿ ಮರಳಿ, ನೀ ಬಂದೇ ಬರುವಿ ಮರಳಿ" ಎಂದು ಹಾಡಿದ್ದ ನೆನಪು ಈಗಲೂ ನಗೆ ಬರಿಸುತ್ತದೆ.

ವ್ಯವಹಾರದಲ್ಲಿ ಅಪ್ಪನ ಜಾಣ್ಮೆ ಹೆಚ್ಚು ಕಡಿಮೆ ಶೂನ್ಯವೆಂದೇ ಹೇಳಬೇಕು. ಅಪ್ಪನನ್ನು ಗಮನಿಸಿದರೆ, ಅಮ್ಮನೇ ಸ್ವಲ್ಪ ಜಾಣೆ. ಅಮ್ಮನ ಮಾತಿನಲ್ಲಿ ಹೇಳುವುದಾದರೆ, "ತನ್ನಲ್ಲಿರುವುದನ್ನು ಬೇರೆಯವರಿಗೆ ನೀಡಿದಾಗ ನಿನ್ನಪ್ಪನಿಗಾಗುವ ಸಂತೋಷ ನಾನು ಬೇರಾವುದರಲ್ಲೂ ಕಂಡಿಲ್ಲ". ಅಮ್ಮನಾದರೋ ತಾಳ್ಮೆ ಹಾಗೂ ಸಹನೆಯ ಮೂರ್ತಿ. ತನ್ನ ವೈಯಕ್ತಿಕ ಆಸೆ ಆಲೋಚನೆಗಳಿಗೆ ಅವಕಾಶವೇ ಕೊಡದಷ್ಟು ಸಹಜ ಜೀವನಶೈಲಿ ತನ್ನದಾಗಿಸಿಕೊಂಡಿದ್ದ ಅಮ್ಮನ ಅನುಕರಣೆ ನಮ್ಮಿಂದಂತೂ ಖಂಡಿತಾ ಸಾಧ್ಯವಿಲ್ಲ. ನಮ್ಮ ಒಳ್ಳೆಯತನ ನಮ್ಮನ್ನು ಕಾಪಾಡುತ್ತದೆ ಎಂಬ ನಂಬಿಕೆ ನಮ್ಮ ಅಮ್ಮನದಾಗಿತ್ತು.

ಅಪ್ಪ ಯಾವ ರೀತಿ ನಮ್ಮನ್ನು ಬೆಳೆಸಿದ್ದರೆಂದರೆ, ನಮಗೆ ಬಸ್ಸಿನಲ್ಲಿ ಪ್ರಯಾಣಿಸುವುದರ ಅನುಭವವೇ ಇಲ್ಲವಾಗಿತ್ತು. ಹತ್ತಿರದ ಮಲ್ಪೆಗೆ ಇರಲಿ, ದೂರದ ಮೈಸೂರಿಗೇ ಇರಲಿ, ಬಾಡಿಗೆ ಕಾರು ಮಾಡಿ ಕರೆದೊಯ್ಯುತ್ತಿದ್ದರು. ಯಾವೊಂದು ವಸ್ತುವಿನ ಬೆಲೆ ಎಷ್ಟೆಂಬುದರ ಊಹೆಯನ್ನು ಮಾಡಲಾರದ ರೀತಿಯಲ್ಲಿ ಬೆಳೆಸಿದ್ದರು. ಮದುವೆಯ ನಂತರ ಈ ಸಂಬಂಧೀ ವಿಚಾರಗಳು ತಿಳಿಯದೆ ತೊಡಕಾಗುತ್ತಿತ್ತು. ಈ ವಿಚಾರಗಳಲ್ಲಿ ನಮ್ಮನ್ನು ನಾವು ಹೊಂದಿಸಿಕೊಂಡು ಬದುಕು ಸಾಗಿಸುವುದು ಎಷ್ಟೋ ಸಲ ಕಷ್ಟವೆನಿಸುತ್ತಿತ್ತು. ಇದನ್ನು ಪುಷ್ಟೀಕರಿಸುವ ಘಟನೆ ನೆನಪಿಗೆ ಬರುತ್ತಿದೆ. ನನ್ನ ಮದುವೆಯಾದ ಹೊಸತರಲ್ಲಿ ಅಪ್ಪ 'ಭುವನಜ್ಯೋತಿ' ಚಲನಚಿತ್ರದ ಕೆಲಸದ ನಿಮಿತ್ತ ಬೆಂಗಳೂರಿನ ಎನ್. ಎಮ್. ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಕಾರ್ಯನಿಮಿತ್ತ ಬೆಂಗಳೂರಿಗೆ ತೆರಳಿದ್ದ ನಾವು

ಅವರನ್ನು ಕಂಡು ಅದೇ ರಾತ್ರಿ ಮಂಗಳೂರಿಗೆ ಹೊರಡಬೇಕಾಗಿತ್ತು. ಹೋಟೆಲಿಂದ ಬಸ್ ಸ್ಟ್ಯಾಂಡ್‌ಗೆ ಬರೀ 3 ಕಿ.ಮೀ. ಅಂತರ. ಬಸ್ಸಲ್ಲಿ ಹೋಗೋಣ ಎಂದ ಯಜಮಾನರಿಗೆ ನನ್ನ ಒಪ್ಪಿಗೆ ಸೂಚಿಸಿದೆ. ಗಾಬರಿಗೊಂಡ ಅಪ್ಪ, "ಬೇಡ ಗಿರಿಯವರೇ, ನೀವು ಆಟೋದಲ್ಲೇ ಹೋಗಿ" ಎಂದರು. ಇವರೂ ಪಟ್ಟುಬಿಡದೆ, "ಬರಿಯ 3 ಕಿ.ಮೀ. ಗೆ ಆಟೋ ಅನವಶ್ಯಕ. ಏಕೆ ಹಣ ತೆರುವುದು?" ಎಂದರು. ಅದಕ್ಕೆ ಅಪ್ಪ, "ಆಟೋಗೆ ಹಣ ನಾನು ಕೊಡುತ್ತೇನೆ. ನೀವು ನನ್ನ ಮಗಳನ್ನು ಬಸ್‌ನಲ್ಲಿ ಕರೆದುಕೊಂಡು ಹೋಗಬೇಡಿ" ಎಂದಿದ್ದರು. ತಾನು ಮುದ್ದಾಗಿ ಸಾಕಿದ ಮಗಳಿಗೆ ಎಲ್ಲಿ ಬಸ್ ಪ್ರಯಾಣ ಅನಾನುಕೂಲವಾಗುವುದೋ ಎಂಬ ಅಪ್ಪನ ಗಾಬರಿ, ಗೊಂದಲ ನನಗೆ ಮಾತ್ರ ಅರ್ಥವಾಗುವ ವಿಷಯವಾಗಿತ್ತು.

ನಾವು ಮೂಡಬಿದಿರೆಯಿಂದ ಬೆಂಗಳೂರಿಗೆ ವಾಸ್ತವ್ಯ ಬದಲಿಸಿದ ಸಂದರ್ಭದಲ್ಲಿ ಅಪ್ಪನಂತೂ ನೆಮ್ಮದಿಯನ್ನೇ ಕಳೆದುಕೊಂಡಿದ್ದರೆನ್ನಬೇಕು. ನನ್ನ ಮೇಲಿನ ಅವರ ಅತಿಯಾದ ಕಾಳಜಿ, ಮನೆಯಲ್ಲಿನ ಉಳಿದ ಸದಸ್ಯರ ಮೇಲೆ ಸಿಟ್ಟಾಗಿ ಪ್ರದರ್ಶಿತವಾಗುತ್ತಿತ್ತು ಎಂದು ನನ್ನ ಸಹೋದರಿ ಹೇಳುತ್ತಿದ್ದ ನೆನಪು.

ನನ್ನ ಮಗ ಆತ್ಮಸ್ವರೂಪ ಆರು ತಿಂಗಳ ಹಸುಳೆಯಾಗಿದ್ದಾಗಿನ ಒಂದು ಘಟನೆ ನೆನಪಾಗುತ್ತಿದೆ: ಮಗು ತೊಟ್ಟಿಲಲ್ಲಿ ಹಾಯಾಗಿ ಮಲಗಿ ನಿದ್ರಿಸುತ್ತಿದ್ದ. ಅಪ್ಪ ಬಂದವರೇ ಹಾರ್ಮೋನಿಯಂ ತೆಗೆದುಕೊಂಡು, "ಈಗ ನಿನ್ನ ಮಗನನ್ನು ನಗಿಸುತ್ತೇನೆ" ಎಂದು ಮೋಹನ ರಾಗಾಲಾಪನೆ ಮಾಡಿದರು. ಪನಾಶ್ಚರ್ಯ! ಆತ್ಮ ಮಲಗಿದ್ದಲ್ಲೇ ನಗತೊಡಗಿದ್ದ. ಮತ್ತೆ ಅಪ್ಪ ತನ್ನ ಮೊಮ್ಮಗನನ್ನು ಅಳಿಸುವ ಪ್ರಯತ್ನದಲ್ಲಿ ಶಿವರಂಜನಿ ರಾಗಾಲಾಪಿಸುತ್ತಿದ್ದಂತೆ ಮಗು ಬಿಕ್ಕಿ ಬಿಕ್ಕಿ ಅಳತೊಡಗಿತು! ಪ್ರತ್ಯಕ್ಷ ಸಾಕ್ಷಿ ನಾನಾಗಿದ್ದೆ. ಅಪ್ಪ ಹೇಳುವ 'ಸಂಗೀತ ಥೆರಪಿ' ಎಷ್ಟೊಂದು ಪರಿಣಾಮಕಾರಿ! ಈ ಅಪರೂಪದ ಜ್ಞಾನ ನನ್ನ ತಂದೆಗಿರುವುದು ನನಗೆ ಹೆಮ್ಮೆ ತರುವ ವಿಷಯವಲ್ಲವೇ?

ಆಹ್ಲಾದಮಯ - ತಂದೆಯೊಡನೆ ಕಳೆದ ಸಮಯ

✍ ಸುಮಾ ಅನಿಲ್‌ಕುಮಾರ್

ಜೀವನದಲ್ಲಿ ಯಾವೊಬ್ಬ ಮಗಳಿಗೆ ಸಿಗಲಾರದಂತಹ ಅಪೂರ್ವ ಅವಕಾಶ ನನಗಿವತ್ತು ಸಿಕ್ಕಿದೆ. ನನ್ನ ತಂದೆಯವರ ಜೊತೆ ನಾನು ಕಳೆದ ಸಮಯ, ಅವರ ಸಾಧನಾ ಜೀವನವನ್ನು ನನ್ನ ದೃಷ್ಟಿಕೋನದಲ್ಲಿ ತೆರೆದಿಡುವ ಸದವಕಾಶ ನನ್ನೆದುರಿದೆ. ಮೊದಲಿಗೆ ಚೈತನ್ಯದ ಸ್ವರೂಪದಂತಿರುವ ನನ್ನ ತಂದೆಯವರಿಗೆ ಕೃತಜ್ಞತೆಗಳು. ಕೃತಜ್ಞತೆ ಯಾವ ಯಾವ ವಿಚಾರಕ್ಕಾಗಿ ಎನ್ನುವುದೇ ತಿಳಿಯದಾಗಿದೆ. ಕಲಾ ಸಾಮ್ರಾಜ್ಯದಲ್ಲಿ ತನ್ನದೇ ಛಾಪು ಮೂಡಿಸಿರುವ ಅವರು ಮಕ್ಕಳಾದ ನಮಗೆಲ್ಲರಿಗೂ 'ಕಲಾ ಸಂಸ್ಕಾರ'ದ ಭದ್ರ ಬುನಾದಿ ಹಾಕಿಕೊಟ್ಟಿರುವುದಕ್ಕೋ ಅಥವಾ ನಮ್ಮ ಅವಶ್ಯಕತೆಗಳೇನೆಂದು ನಾವು ಅರಿಯುವುದರ ಮೊದಲೇ ಅವುಗಳನ್ನು ಪೂರ್ತಿಗೈಯುತ್ತಾ ಬಂದು, ಪ್ರೀತಿಯ ಸೆಲೆಯಾಗಿ ಜೀವನದುದ್ದಕ್ಕೂ ನಾವು ಎಡವದಂತೆ ನೋಡಿಕೊಂಡ ಮಮತಾಮಯಿಯಾದ 'ತಂದೆ'ಯಾಗಿರುವುದಕ್ಕೋ ತಿಳಿಯದಾಗಿದೆ.

ಮಕ್ಕಳು ಬದುಕಿನ ಯಾವ ಕ್ಷೇತ್ರವನ್ನು ಆರಿಸಿಕೊಳ್ಳಬೇಕು ಎಂದು ತಾವೇ ನಿರ್ಧರಿಸುವ ಈ ಕಾಲದ ತಂದೆಯರಿಗಿಂತ ವಿಭಿನ್ನವಾಗಿ ನಿಂತ ಅಪ್ಪ, ನಮ್ಮ ಸ್ವತಂತ್ರ ಆಲೋಚನೆ ಮತ್ತು ಆಸಕ್ತಿಗೆ ತೋರುತ್ತಿದ್ದ ಕಾಳಜಿ, ಮಾರ್ಗದರ್ಶನ, ಪ್ರೋತ್ಸಾಹ; ನಾವು ನಾಲ್ಕು ಹೆಣ್ಣುಮಕ್ಕಳನ್ನು ಯಾವುದೇ ಗಂಡು ಮಗುವಿಗೆ ಕಡಿಮೆಯಿಲ್ಲದಂತೆ ಬೆಳೆಸಿರುವ ರೀತಿ; ನಾವೂ ಅಷ್ಟೇ, ನಮ್ಮ ತಂದೆ ತಾಯಿಯವರಿಗೆ ಎಂದೂ ಗಂಡು ಸಂತಾನ ಇಲ್ಲದಿರುವ ಬಗ್ಗೆ ಕೊರತೆಯ ಭಾವ ಒಂದು ಕ್ಷಣಕ್ಕೂ ಮಾತಲ್ಲೂ, ಮನಸ್ಸಲ್ಲೂ ಮೂಡದಂತೆ ಬದುಕಿದ್ದೇವೆ.

ಬಾಲ್ಯದ ನೆನಪುಗಳನ್ನು ಮೆಲುಕು ಹಾಕುತ್ತಿದ್ದರೆ, ಮೊದಲಿಗೆ ನೆನಪಿಗೆ ಬರುವುದು - ಅವರಿಂದಲೇ 'ಅಭ್ಯಂಜನ' ಮಾಡಿಸಿಕೊಳ್ಳುತ್ತಿದ್ದ ನನ್ನ ಹಠಮಾರಿತನ. ಮೈಯಲ್ಲಿ ಏನಾದರೂ ಗಾಯಗಳಾಗಿದ್ದರೆ, ಅಮ್ಮ ಸ್ನಾನ ಮಾಡಿಸಿದರೆ ನೋವಾಗುತ್ತದೆ ಎಂಬ ಕಾರಣ ಒಡ್ಡಿ ಅಪ್ಪನಿಂದಲೇ ಆ 'ಸೇವೆ' ಮಾಡಿಸಿಕೊಳ್ಳುತ್ತಿದ್ದೆ. ಒಂದೊಮ್ಮೆ ಓದಿನಲ್ಲಿ ಕಡಿಮೆ ಅಂಕಗಳನ್ನು ಗಳಿಸಿದರೆ, "ಮಕ್ಕಳಿಗೆ ತಿನ್ನಲು ತುಂಬಾ ಕೊಟ್ಟರೆ ತುಂಬಾ ಅಂಕಗಳನ್ನು ಪಡೆಯುತ್ತಾರೆ" ಎಂದು ಅವರು ಅಮ್ಮನ ಬಳಿ ಹೇಳುತ್ತಿದ್ದ ರೀತಿಗೇ ನಾಚಿ, ಮುಂದಿನ ಸಲ ಓದಿನಲ್ಲಿ ಗಮನವಿಟ್ಟು, ಉತ್ತಮ ಅಂಕಗಳನ್ನು ಪಡೆಯುವಲ್ಲಿ ಪ್ರಯತ್ನಿಸಿ ಗೆಲುವನ್ನೂ ಸಾಧಿಸುತ್ತಿದ್ದೆವು. ಓದಿನ ವಿಷಯದಲ್ಲಿ ಅವರು ನಮಗೆ ಗದರಿಸಿದ ನೆನಪುಗಳೇ ಇಲ್ಲ.

ತನ್ನ ಮಕ್ಕಳು ಬೇರೆ ಯಾರನ್ನೋ ಕಂಡು, ಅವರ ಬಳಿ ಇರುವ ವಸ್ತುಗಳನ್ನು ಕಂಡು

ಆಸೆಪಡುವ ಪ್ರಮೇಯವೇ ಬಾರದಿರಲೆಂದು ನಮ್ಮ ಅಪ್ಪ ಬಹಳ ಮುತುವರ್ಜಿ ವಹಿಸುತ್ತಿದ್ದರು. ಆಟಿಕೆಗಳಾಗಲಿ, ತಿಂಡಿ ತಿನಿಸುಗಳಾಗಲಿ ನಾವುಗಳು ಸಾಕೆನ್ನುವಷ್ಟು ತಂದು ಕೊಡುತ್ತಿದ್ದುದರಿಂದ, ಇಂದಿಗೂ ನಮಗೆ ಯಾವುದೇ ವಸ್ತು ವಿಷಯಗಳ ಮೇಲೆ ಅತಿಯಾದ ಬಯಕೆ ಇಲ್ಲವಾಗಿದೆ. ಹಾಗೆಯೇ 'ಇನ್ನೊಬ್ಬರಿಗೆ ಕೊಟ್ಟು ತಿನ್ನಬೇಕು' ಎಂಬ ಪಾಠ ಕಲಿಸಿದವರು ನನ್ನ ತಂದೆ. ಒಬ್ಬರಿಗೆ ಕೊಡುವುದರಲ್ಲಿರುವ ಸುಖ ನಾವೇ ಸ್ವತಃ ಅನುಭವಿಸುವುದರಲ್ಲಿ ಇಲ್ಲ ಎಂದು ಹೇಳುತ್ತಿದ್ದರು.

ನಾನು ಅವಳಿ ಮಕ್ಕಳಲ್ಲಿ ಒಬ್ಬಳು. ರಜಾ ಸಮಯವನ್ನು ಅಕ್ಕನ ಜೊತೆ ಗಲಾಟೆ ಮಾಡುತ್ತಲೇ ಕಳೆಯುತ್ತಿದ್ದೆ. ಒಂದು ದಿನ ಅತಿಯಾದ ನಮ್ಮ ಕಿರಿಕಿರಿಯಿಂದ, ಅಪ್ಪ ಬಾವಿಯಿಂದ ಒಂದು ಕೊಡ ನೀರು ಸೇದಿ ನನ್ನ ತಲೆ ಮೇಲೆ ಸುರಿದುಬಿಟ್ಟಿದ್ದರು. ಆದರೆ ಆ ಸಂಜೆ ಮನೆಗೆ ಹಿಂತಿರುಗುವಾಗ, ಕೈತುಂಬಾ ನನಗಿಷ್ಟವಾದ ಚಾಕಲೇಟ್, ತಿಂಡಿ ತಿನಿಸುಗಳನ್ನು ತಂದು ಕೊಟ್ಟರು. ಎಷ್ಟೋ ಸಲ ಶಿಕ್ಷೆ ಅನುಭವಿಸಿದ ನನಗಿಂತ, ಶಿಕ್ಷೆಯನ್ನು ಕೊಟ್ಟ ಅಪ್ಪನ ಮನಸ್ಸೇ ತುಂಬಾ ಬೇಸರಗೊಳ್ಳುತ್ತಿತ್ತು.

ಬಾಲ್ಯದಿಂದಲೂ ನೃತ್ಯದಲ್ಲಿ ಅತಿಯಾದ ಆಸಕ್ತಿ ನನಗೆ. ಇದನ್ನು ಗುರುತಿಸಿ, ಉತ್ತಮ ಗುರುಗಳಲ್ಲಿ ನೃತ್ಯವನ್ನು ಅಭ್ಯಸಿಸುವ ಅವಕಾಶವನ್ನು ತಂದಿತ್ತರು ನನ್ನ ಅಪ್ಪ. ಮುಂದಿನ ದಿನಗಳಲ್ಲಿ ಅಪ್ಪನ ನಿರ್ದೇಶನದಲ್ಲಿ ಮೂಡಿ ಬಂದ ನೃತ್ಯರೂಪಕ 'ಭುವನಜ್ಯೋತಿ'ಯಲ್ಲಿ ಯೇಸುವಿನ ತಾಯಿ ಮರಿಯಳ ಪಾತ್ರವನ್ನು ನಿರ್ವಹಿಸಿದೆ. ಈ ಪಾತ್ರ, ನಾನು ಮಾಡಿದ ಬೇರೆ ಯಾವುದೇ ಪಾತ್ರಗಳಿಗಿಂತ ನನಗೆ ಅತಿ ಹೆಚ್ಚು ಸಂತೋಷವನ್ನು ಕೊಟ್ಟಿದೆ.

ನಾಟ್ಯಪಟುವಾಗಿ ನಾನು ಅವರಲ್ಲಿ ಗಮನಿಸಿದ ಗುಣವೆಂದರೆ ಅವರ ವೃತ್ತಿಪರತೆ ಮತ್ತು ಕೆಲಸದಲ್ಲಿನ ತಾದಾತ್ಮ್ಯ. ಒಮ್ಮೆ ಮೂಲ್ಕಿಯಲ್ಲಿ ನೃತ್ಯರೂಪಕವೊಂದರ ಪ್ರದರ್ಶನ ಮೊದಲೇ ನಿಶ್ಚಯಗೊಂಡಿತ್ತು. ಅದಕ್ಕೆ ಎರಡು ದಿವಸ ಹಿಂದೆಯಷ್ಟೇ ಅವರ ಮಾತೃಶ್ರೀಯವರ ದೇಹಾಂತ್ಯಗೊಂಡಿತ್ತು. ಅಪ್ಪನ ಬೆಳವಣಿಗೆಯಲ್ಲಿ ಸಂಪೂರ್ಣ ಸಹಕಾರವಿತ್ತ ಜೀವ ಅಗಲಿದ ದುಃಖದಲ್ಲಿಯೂ ನಡೆಯಬೇಕಿದ್ದ ಅಂದಿನ ಕಾರ್ಯಕ್ರಮವನ್ನು ಬಹು ಚೆನ್ನಾಗಿ ನಡೆಸಿಕೊಟ್ಟರು.

ವಾಸುದೇವ ಭಟ್ಟರ ತಂಡದಲ್ಲಿ ಕೆಲಸ ಮಾಡಿದರೆ ಹೊಟ್ಟೆ ತುಂಬಾ ಊಟ ಹಾಗೂ ಕೈತುಂಬಾ ದುಡ್ಡು ಸಿಗುವುದು ಖಚಿತ ಎಂದು ಕಲಾವಿದರುಗಳು ಅನೇಕಾನೇಕ ಬಾರಿ ಆಡಿಕೊಳ್ಳುತ್ತಿದ್ದುದನ್ನು ಕೇಳಿದ್ದೆ. ತನ್ನ ತಂಡದ ಕಲಾವಿದರನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದ ತಂದೆಯವರ ಬಗ್ಗೆ ತುಂಬಾ ಹೆಮ್ಮೆ ನನಗೆ.

'ಭುವನಜ್ಯೋತಿ' ನೃತ್ಯರೂಪಕದ ಪ್ರದರ್ಶನದ ಸಂದರ್ಭದಲ್ಲಿ ನಾನು ಬರಿಯ ನಟಿಯಾಗಿ ಉಳಿಯದೇ ರಂಗನಿರ್ವಾಹಕಿಯಾಗಿ ಕಾರ್ಯನಿರ್ವಹಿಸಿದ್ದೆ. ಎಲ್ಲಾ ಕಲಾವಿದರು ಗಳೂ ನನ್ನ ಮಾತಿಗೆ ಬೆಲೆ ಕೊಡುತ್ತಿದ್ದರು. ಅರುವತ್ತು ಜನರ ಆ ತಂಡವನ್ನು ನಿರ್ವಹಿಸುವ ಹೊಣೆಯಲ್ಲಿ ನಾನು ತಂದೆಗೆ ಇತ್ತ ಸಹಕಾರ ಇವತ್ತೂ ಸಾರ್ಥಕ ಭಾವನೆ ತರುತ್ತಿದೆ.

'ಭುವನಜ್ಯೋತಿ' ನೃತ್ಯರೂಪಕಕ್ಕೆ ಸಂಪೂರ್ಣ ಸಹಕಾರ ನೀಡುವ ಭರವಸೆಯಿತ್ತ ಕೆಲವು ಗಣ್ಯರೆನಿಸಿಕೊಂಡ ಕಲಾವಿದರು ಒಮ್ಮೆ ಕೈಕೊಟ್ಟಾಗ, ನಾನು ಮತ್ತು ಗೆಳತಿ ಸುಮಾ (ಸುಮಾ ಶಾಸ್ತ್ರಿ) ತಂದೆಯವರ ನೆರವಿಗೆ ನಿಂತಿದ್ದೆವು. ನಂತರದ ದಿನಗಳಲ್ಲಿ ತಂದೆಯವರ ಯಶಸ್ಸನ್ನು ಕಂಡು ಈ ವಿಘ್ನಸಂತೋಷಿಗಳೇ ತಮ್ಮ ಸಂಘ-ಸಂಸ್ಥೆಗಳಿಂದ ಅಪ್ಪನಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿದ್ದನ್ನು ಕಂಡಾಗ, ನನಗೆ ವಿಸ್ಮಯವೂ ಆಯಿತು. 'ಯಾವುದು ಓರ್ವ ಕಲಾವಿದನಿಗೆ ಮಾಡುವ ನಿಜವಾದ ಸನ್ಮಾನ? ಬರಿ ಶಾಲು, ಹಾರ, ತುರಾಯಿಗಳೇ? ಅಥವಾ ಆತನಿಗೆ ಅವಶ್ಯಕತೆಯಿರುವಾಗ ನೀಡಬಹುದಾದ ಸಹಕಾರವೇ?' ಎಂಬ ಪ್ರಶ್ನೆ ಇವತ್ತಿಗೂ ನನ್ನನ್ನು ಕಾಡುತ್ತಿದೆ.

ಅಪ್ಪನಂತಹ ಹಿರಿಯ ಕಲಾವಿದರಿಗೆ ಮಗಳಾಗಿ ಹುಟ್ಟಿದ್ದು ನನಗೆ ಲಾಭವನ್ನೂ ಕೊಟ್ಟಿದೆ, ನಷ್ಟವನ್ನೂ ತಂದಿದೆ. ಅನೇಕ ಹಿರಿ-ಕಿರಿಯ ಕಲಾವಿದರುಗಳು ಮನೆಗೆ ಬಂದು ಹೋಗುತ್ತಿದ್ದರು. ಅವರ ಒಡನಾಟ ಬಾಲ್ಯದಲ್ಲಿ ಲಭಿಸಿದ್ದು ಬದುಕಿನ ಭಾಗ್ಯವೆಂದೇ ತಿಳಿಯುತ್ತೇನೆ. ವಾಸುದೇವ ಭಟ್ಟರ ಮಕ್ಕಳು ಎಂದು ಉಡುಪಿ ಹಾಗೂ ಸುತ್ತಮುತ್ತಲೂ ನಾವು ಗುರುತಿಸಲ್ಪಡುತ್ತಿದ್ದೆವು. ಹಾಗಾಗಿ, ಹುಡುಗಾಟಗಳನ್ನು ಮುಚ್ಚಿಟ್ಟು ಸದಾ ಗಂಭೀರವಾಗಿಯೇ ಇರಬೇಕಾಗುತ್ತಿದ್ದುದು ಅನಿವಾರ್ಯವಾಗಿತ್ತು. ತಂದೆಯವರ ಬಳಿ ನಮಗಾಗಿ ಹೆಚ್ಚಿನ ಸಮಯ ಇರುತ್ತಿರಲಿಲ್ಲ. ನಮ್ಮ ಮನಸ್ಸಿನ ಎಲ್ಲಾ ಸಂದೇಹಗಳಿಗೆ ಅಮ್ಮನೇ ಸಮರ್ಥವಾದ ಉತ್ತರವಾಗಿರುತ್ತಿದ್ದರು.

ಚಿಕ್ಕಂದಿನಿಂದಲೂ ತಂದೆಯಲ್ಲಿ ಅತಿಯಾದ ಪ್ರೀತಿ ನನಗೆ. ಮದುವೆ ನಂತರವೂ ಅವರ ನೆನಪು ಅತಿಯಾಗಿ ಕಾಡಿದಾಗ, ಒಂದು ಫೋನ್ ಮಾಡಿದರೆ ಮರುದಿನವೇ ಮೈಸೂರಿನಲ್ಲಿರುವ ನನ್ನ ಗಂಡನ ಮನೆಗೆ ಬರುತ್ತಿದ್ದರು. ಅದೆಷ್ಟೋ ಕೆಲಸಗಳನ್ನು ಬದಿಗೊತ್ತಿ ಬರುತ್ತಿದ್ದರೋ ಎಂಬ ಕಲ್ಪನೆಯೂ ನನಗೆ ಇರುತ್ತಿರಲಿಲ್ಲ. ಆ ಕ್ಷಣಕ್ಕೆ ಅಪ್ಪನನ್ನು ಕಾಣಬೇಕು ಅಂದರೆ ಕಾಣಬೇಕು ಅಷ್ಟೆ. ಅದುವೇ ಮುಖ್ಯವಾಗಿ ಬಿಡುತ್ತಿತ್ತು ನನಗೆ.

ಸಂಗೀತ ಕ್ಷೇತ್ರದಲ್ಲಿ ದಿಗ್ಗಜರೆನಿಸಿಕೊಂಡ ತಂದೆಯವರಿಂದ ಹೆಚ್ಚಿನ ಸಂಗೀತಾಭ್ಯಾಸ ಮಾಡುವ ಅವಕಾಶ ಒದಗಲಿಲ್ಲ ಎಂಬ ಕೊರಗು ಇದ್ದರೂ ನಾಟ್ಯದಲ್ಲಿನ ನನ್ನ ಕೆಲಸವನ್ನು ಅಪ್ಪ ಬಹುವಾಗಿ ಮೆಚ್ಚಿರುವುದು ನನಗೆ ತೃಪ್ತಿ ತಂದಿದೆ. ನನ್ನ ಮಗಳಾದ ಅಪರ್ಣಾಳಿಗೂ ಸಂಗೀತ, ನಾಟ್ಯದಲ್ಲಿ ಅತಿಯಾದ ಆಸಕ್ತಿ ಇದೆ. ಈ ಕಲಾಪರಂಪರೆ ಹೀಗೇ ಮುಂದುವರಿಯಲಿ ಎಂಬುವುದೇ ನನ್ನ ಆಶಯ.

ತಂದೆ ತಾಯಿ ತಂದ ಭಾಗ್ಯ

✍ ಸ್ಮಿತಾ ರಾಘವೇಂದ್ರ

ವಸುಧಾತಲ ಸಂಭೂತಃ ಶುಭದ ಸುಮ ಪೂಜಿತಾ ।
ಸ್ಮಿತಾನನೋ ದಯಾಪೂರ್ಣೋ ಏಸುಕ್ರಿಸ್ತೋ ಜಯೇತ್ ಸದಾ ॥

ನನ್ನ ತಂದೆಯವರು ತಮ್ಮ ನಾಲ್ಕು ಮಕ್ಕಳ ಹೆಸರನ್ನು ಬಳಸಿ, ಏಸುಕ್ರಿಸ್ತನ ಮೇಲೆ ಬರೆದಿರುವ ಶ್ಲೋಕ ಇದಾಗಿದೆ. ತಂದೆಯವರು ಬರಹಗಾರರೂ ಆಗಿದ್ದರೆನ್ನುವುದನ್ನು ಈಗ ಕೆಲವರಷ್ಟೇ ಬಲ್ಲರು. ಪತ್ರಿಕೋದ್ಯಮ ಮತ್ತು ಸಾಹಿತ್ಯಗಳು ಸಂಗೀತದ ನಂತರ ಅವರ ಅತಿ ದೊಡ್ಡ ಆಸಕ್ತಿಗಳಾಗಿದ್ದವು. ಹಲವು ಪತ್ರಿಕೆಗಳಿಗೆ ನನ್ನ ತಂದೆಯವರು 'ಸ್ವಾತಿಭೂಷಣ' ಎಂಬ ಹೆಸರಿನಲ್ಲಿ ಕಥೆ, ಲೇಖನಗಳನ್ನು ಬರೆಯುತ್ತಿದ್ದ ದಿವಸಗಳಿದ್ದವು.

ಅಪ್ಪ ಪತ್ರಕರ್ತರಾಗಿ ಕೆಲಸ ನಿರ್ವಹಿಸಲು ಮುಖ್ಯ ಕಾರಣ ನಮ್ಮ ಅಜ್ಜನೇ. ಅವರ ಪ್ರೋತ್ಸಾಹ ಇಲ್ಲವಾಗಿದ್ದರೆ ಅಪ್ಪನವರ ಬರವಣಿಗೆಯ ಶಕ್ತಿ ಬೆಳಕಿಗೆ ಬರುತ್ತಿರಲಿಲ್ಲವೋ ಏನೋ. ತಂದೆಯ ನಂತರ ಮಗ ಎನ್ನುವ ದೃಷ್ಟಿಯಲ್ಲಿ ಪತ್ರಕರ್ತರಾಗಿ ತೊಡಗಿ, ನಂತರದ ದಿನಗಳಲ್ಲಿ ಅವರ ಬರವಣಿಗೆ ಉತ್ತಮಗೊಂಡು 'ಪ್ರಖರ' ಅನ್ನಿಸಿಕೊಂಡಿತ್ತು. ಅವರು ಬರೆಯುವ ಶೈಲಿ ಮತ್ತು ಕೊಡುತ್ತಿದ್ದ ಶೀರ್ಷಿಕೆಗಳು ನನಗೆ ತುಂಬಾ ಇಷ್ಟವಾಗಿದ್ದವು.

ನನ್ನ ಅಜ್ಜಿ ಕಮಲಮ್ಮನವರು ಅಪ್ಪನ ನೃತ್ಯ ನಾಟಕಗಳಿಗೆ ಸಂಪೂರ್ಣ ಸಹಕಾರ ಕೊಡುತ್ತಿದ್ದರಂತೆ. ತನ್ನ ಸೀರೆ ಒಡವೆಗಳನ್ನು ನೀಡಿ, ನಾಟಕದಲ್ಲಿ ಸ್ತ್ರೀ ವೇಷಧಾರಿಯಾದ ಇವರ ಕಲಾಸಕ್ತಿಯನ್ನು ಪೋಷಿಸುತ್ತಿದ್ದರಂತೆ. ಈ ಕಾರಣದಿಂದ ತಮ್ಮ ಗಂಡ (ನನ್ನ ಅಜ್ಜ)ನಿಂದ ಬೈಗುಳ ಸಿಗುತ್ತಿತ್ತೆಂದು ಅಜ್ಜಿಯವರಿಂದಲೇ ಕೇಳಿದ ನೆನಪು.

ಅಪ್ಪನ ಅಜ್ಜಿಯವರು ಅತೀ ಗಡುಸು ಹಾಗೂ ಜೋರಿನ ಹೆಂಗಸೆಂದು ಸುತ್ತು ವಠಾರದಲ್ಲಿ ಪ್ರಸಿದ್ಧರು. ಅಂತಹ ಅಜ್ಜಿಯವರನ್ನು ಗದರಿಸುವ ಧೈರ್ಯ ಸಾಹಸ ಕುಟುಂಬದಲ್ಲಿ ನನ್ನ ಅಪ್ಪನಿಗೆ ಬಿಟ್ಟರೆ ಬೇರಾರಿಗೂ ಇರುತ್ತಿರಲಿಲ್ಲ. ಅನೇಕ ಸಲ ತನ್ನ ತಾಯಿಯನ್ನು ತಪ್ಪಾಗಿ ನಡೆಸಿಕೊಂಡುದಕ್ಕೆ ಮೊಮ್ಮಗನಿಂದ ಗದರಿಸಲ್ಪಟ್ಟಿದ್ದರಂತೆ, ಇವರ ಅಜ್ಜಿ.

ನನ್ನ ಅಜ್ಜನ ಕಾಲಾನಂತರ, ಅಂದಿನ ಪದ್ಧತಿಯಂತೆ ಅಜ್ಜಿಯ ಕೂದಲು ಬೋಳಿಸಲು, ನನ್ನ ತಂದೆಯವರ ಅಜ್ಜಿ ಮುಂದಾದಾಗ ಅವರನ್ನು ಗದರಿಸಿ, 'ಕೂದಲು ತೆಗೆಸಿದರೆ ಜಾಗ್ರತೆ' ಎಂದು ಕಟ್ಟಾಜ್ಞೆ ನೀಡಿ ತನ್ನ ತಾಯಿಗೆ ಬೆಂಬಲ ಕೊಟ್ಟಿದ್ದರಂತೆ ನನ್ನ ತಂದೆ. ಈ ಘಟನೆಯನ್ನು ನನ್ನ ಅಜ್ಜಿಯಿಂದಲೇ ಕೇಳಿದ ನೆನಪು.

ಗುರು ಮಂಜುನಾಥಯ್ಯನವರಲ್ಲಿ ನನ್ನ ತಂದೆಯವರು ಸಂಗೀತವನ್ನು ಕಲಿತದ್ದು 'ಗುರುಕುಲ' ಪದ್ಧತಿಯಲ್ಲಿ. ಬ್ರಹ್ಮಚಾರಿಯಾಗಿದ್ದ ಗುರುಗಳಿಗೆ ಅಡುಗೆ ಮಾಡಿ ಕೊಡುತ್ತಿದ್ದರಂತೆ ಅಪ್ಪ. ಸಂಗೀತ ಅಂದರೆ ಶ್ರುತಿ ಹಾಗೂ ತಾಳ ಲಯಬದ್ಧವಾಗಿ ಹೇಗೆ ಇರಬೇಕೋ ಹಾಗೆಯೇ, ಅಡುಗೆಯಲ್ಲೂ ಶ್ರದ್ಧೆ ಇರಬೇಕು, ಕತ್ತರಿಸುತ್ತಿದ್ದ ಸಾಂಬಾರಿನ ಹೋಳುಗಳೆಲ್ಲ ಒಂದೇ ಸಮನಾಗಿ, ಒಂದೇ ಆಕಾರದಲ್ಲಿರಬೇಕೆಂದು ಅವರ ಗುರುಗಳು ಹೇಳುತ್ತಿದ್ದರಂತೆ.

ಬಾಲ್ಯದಿಂದಲೇ ನಾನು ಗಮನಿಸಿದ, ನನಗಿಷ್ಟವಾದ ಅಪ್ಪನ ಸ್ವಭಾವವೆಂದರೆ ದಿನದ 24 ಗಂಟೆಗಳೂ ಸಾಲದೆನ್ನುವಷ್ಟು ವಿವಿಧ ಕ್ಷೇತ್ರಗಳಲ್ಲಿ ತನ್ನನ್ನು ತಾನು ತೊಡಗಿಸಿ ಕೊಂಡಿರುವುದು. ವಯಸ್ಸು ಅವರಿಗೆ ಎಂದಿಗೂ ತೊಡಕಾಗದಿರುವುದನ್ನು ಗಮನಿಸಿದರೆ, ಅವರ ಉತ್ಸಾಹ, ಸಾಧಿಸಬೇಕೆನ್ನುವ ಛಲ ಮತ್ತು ಯಾರೊಬ್ಬರನ್ನೂ ಕಾಯದೇ ತಾನೇತಾನಾಗಿ ನುಗ್ಗಿ ಸಾಧಿಸುವಲ್ಲಿನ ಅವರ ಪ್ರಯತ್ನ ನಮ್ಮ ತಲೆಮಾರಿಗೆ ಮಾದರಿಯೇ ಸರಿ.

ಜೀವನದಲ್ಲಿ ಅತೀ ಚಿಕ್ಕ ವಯಸ್ಸಿನಲ್ಲಿಯೇ ಸಂಗೀತ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ನಾಟಕ ಕಂಪೆನಿಯನ್ನು ನಡೆಸಿ, ಅದರಲ್ಲಿ ಆರ್ಥಿಕವಾಗಿ ಕೈಸುಟ್ಟುಕೊಂಡು, ಹೋಟೆಲ್ ಉದ್ಯಮ ನಡೆಸಿ, ಮುಂದೆ ಮೆಡಲಿನ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ, ಅನೇಕ ಕಾಲೇಜುಗಳಲ್ಲಿ ಅತಿಥಿ ಅಧ್ಯಾಪಕರಾಗಿ ಇವರ ದುಡಿಮೆ, ಶ್ರೀಮದನಂತೇಶ್ವರ ದೇವಸ್ಥಾನ (ಉಡುಪಿ)ಯಲ್ಲಿ ನಡೆಯುವ ಶಿವರಾತ್ರಿ ಕಾರ್ಯಕ್ರಮಗಳ ಯೋಜನೆ, ಅದಕ್ಕಾಗಿ ಬೆಳಕಿಗೆ ಬಾರದ, ಅತ್ಯುನ್ನತ ಪ್ರತಿಭೆಗಳನ್ನು ಹುಡುಕಿ, ಅವಕಾಶ ಕಲ್ಪಿಸಿ ಕೊಡುವಲ್ಲಿ ಅವರು ತೋರುತ್ತಿದ್ದ ಕಾಳಜಿ - ಇವೆಲ್ಲ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ. ಆ ದಿವಸಗಳಲ್ಲಿ ಮಕ್ಕಳಾದ ನಾವು ಇವರನ್ನು ಕಾಣದೇ ಇರುತ್ತಿದ್ದುದುಂಟು.

ನನಗೆ ಇಷ್ಟವಾಗದಿರುವ ಅವರ ಸ್ವಭಾವ ಎಂದರೆ 'ಸಮಯಪ್ರಜ್ಞೆ' ಕಡಿಮೆ ಇರುವುದು, ಅಥವಾ ಇಲ್ಲದಿರುವುದು. ಕ್ರಿಯಾಶೀಲ ವ್ಯಕ್ತಿಗಳು ಹೀಗಿರುವುದಿಲ್ಲವೆಂದು ನಾನು ಅವರಲ್ಲಿ ಹೇಳುವುದಿದೆ. ಅವರ ಭೇಟಿಗಾಗಿ ಬಂದು, ಗಂಟೆಗಟ್ಟಲೆ ಕಾದು, ಅವರನ್ನು ಕಾಣಲಾಗದೇ ಹೋದವರು ಅನೇಕರು. ಇದು ಉದ್ದೇಶಪೂರ್ವಕವಾಗಿ ನಡೆದುದಲ್ಲವಾದರೂ, ಹಾಗೆ ಆಗದ ಹಾಗೆ ಮಾಡುವುದು ನಿಮ್ಮಿಂದ ಸಾಧ್ಯವಿತ್ತೆಂದು ನಾನೆಷ್ಟೋ ಬಾರಿ ಅವರಲ್ಲಿ ಹೇಳುತ್ತಿದ್ದುದೂ ಇದೆ.

'ಅತಿ ದಾಕ್ಷಿಣ್ಯ' ಇದು ನಮ್ಮ ತಂದೆಯವರ ಇನ್ನೊಂದು ದುರ್ಗುಣ. ಇದರಿಂದಾಗಿ ಅವರೂ, ಮನೆಯವರಾದ ನಾವೂ ಅನೇಕ ಸಮಸ್ಯೆಗಳನ್ನು ಎದುರಿಸಿದ್ದೇವೆ. ತನಗೆ ತೊಂದರೆ ಅನ್ನಿಸಿದರೂ, ಬೇರೊಬ್ಬರಿಗೆ ಬೇಸರವಾಗಬಾರದೆಂದು ತೋರುವ ದಾಕ್ಷಿಣ್ಯತನ ಕೆಲವೊಮ್ಮೆ ನಮ್ಮ ಮೂಗಿನವರೆಗೆ ಬರುತ್ತಿತ್ತು ಅಂದರೆ ಅತಿಶಯೋಕ್ತಿ ಅಲ್ಲ. ಇನ್ನೊಬ್ಬರ ಕೆಲಸ ಮಾಡುತ್ತಾ ಇಲ್ಲವೇ ಮಾಡಿಸುತ್ತಾ, ತಮ್ಮ ಕೆಲಸಕ್ಕೆ ಅವರೆಷ್ಟೋ ಸಲ ತೊಂದರೆ

ತುದುಕೊಂಡಿದ್ದಾರೆ. ಹೀಗೆ ಘಟಿಸಿದ ಘಟನೆಗಳಿಂದ ಆದ ತೊಂದರೆಗಳಿಂದ ನಮ್ಮ ತಂದೆಯವರು ಪಾಠ ಕಲಿತದ್ದಂತೂ ಇಲ್ಲ. ಆತ್ಮೀಯರೆನ್ನಿಸಿಕೊಂಡವರೆ ಮೋಸ ಮಾಡಿದಾಗಲೂ ಬುದ್ಧಿ ಕಲಿಯದೇ ಅದೇ ಮಿತ್ರರಿಗೆ ಮತ್ತೊಂದು ಅವಕಾಶ ಕೊಡುವಷ್ಟು 'ಕೆಟ್ಟ ಒಳ್ಳೆಯತನ' ನನ್ನ ತಂದೆಯವರಲ್ಲಿದೆ.

ಇಷ್ಟೆಲ್ಲ ಯಾಕೆ ಹೇಳಬೇಕಾಯಿತೆಂದರೆ, ನಮ್ಮ ತಂದೆಯವರಲ್ಲಿನ ಗುಣದೋಷಗಳನ್ನು ಮಕ್ಕಳಲ್ಲಿ, ಅತಿಯಾಗಿ ವಿಮರ್ಶಿಸುವವಳು ನಾನೇ. ಅವರ ಕೊನೆಯ ಮಗಳಾಗಿ ಅವರ ಜೊತೆಗೆ ನಾನು ಕಳೆದಷ್ಟು ಸಮಯ ಬೇರಾವ ಮಕ್ಕಳಿಗೂ ಸಿಕ್ಕಿರಲಿಲ್ಲ ಎನ್ನುವುದೂ ಇದಕ್ಕೆ ಕಾರಣ ಇದ್ದೀತು.

ಅವರ ಸ್ವಭಾವದ ಬಗ್ಗೆ ಇಷ್ಟೆಲ್ಲ ಬರೆಯುವಾಗ ಅವರ ಮುಂಗೋಪದ ಬಗ್ಗೆ ನಾನು ಹೇಳದೇ ಇರುವಂತಿಲ್ಲ. ಏಕೆಂದರೆ, ಇದು ಅವರಿಂದ ನನಗೂ ಬಂದಿರುವ ಬಳುವಳಿ. ಈ ಮುಂಗೋಪಿತನ ಅವರನ್ನು ಸಮಾಜದಲ್ಲಿ ಅನೇಕರ ಜೊತೆ ನಿಷ್ಠುರಕ್ಕೊಳಪಡಿಸಿದೆ. ಎಷ್ಟೊಂದು ಸ್ನೇಹ ಸಂಬಂಧಗಳನ್ನೂ ಮುರಿದುಬಿಟ್ಟಿದೆ.

'ಮನುಷ್ಯ ಮನುಷ್ಯನಾಗಿ ಹುಟ್ಟಿ, ಮನುಷ್ಯನಾಗಿ ಸಾಯುವುದು ಅತೀ ಮುಖ್ಯ ಮತ್ತದು ಅತೀ ಕಷ್ಟ' ಎಂದು ಅವರು ಅನೇಕ ಬಾರಿ ನನ್ನಲ್ಲಿ ಹೇಳುತ್ತಿದ್ದುದೂ ಉಂಟು. ಅವರ ಎಷ್ಟೋ ಸ್ವಗತಗಳು ನನಗೆ ಬಹಳ ತಡವಾಗಿ ಅರ್ಥವಾಗುತ್ತಿದ್ದವು.

ಅಪ್ಪನದು ಅತಿ ಸರಳ ಜೀವನ. ತಂಪು ಗಾಳಿ, ಕುಡಿಯಲು ಸಾಕಷ್ಟು ನೀರು, ಅಗರಬತ್ತಿ ಹಾಗೂ ನಶ್ಯ - ಇವಿಷ್ಟು ಅವರ ಸಂಗೀತ ಸಂಯೋಜನೆಗೆ ಅತಿ ಅವಶ್ಯ.

'ನಶ್ಯ' ಎಂದಾಗ ಅವರ ಈ ಚಟವನ್ನು ಬಿಡಿಸಲು ನಾನು ಮಾಡಿದ ನಿರರ್ಥಕ ಪ್ರಯತ್ನಗಳೆಲ್ಲ ನೆನಪಿಗೆ ಬರುತ್ತವೆ. ಸುಮಾರು ನಾಲ್ಕು ಅಥವಾ ಐದು ವರುಷದವಳಾಗಿದ್ದಾಗೊಮ್ಮೆ ಅಪ್ಪನ ನಶ್ಯದ ಅಭ್ಯಾಸ ಬಿಡಿಸಬೇಕೆಂದು ಮರಳನ್ನು ಜರಡಿ ಹಿಡಿದು ತಳದಲ್ಲಿ ಉಳಿದ ಮಣ್ಣಿನ ಹುಡಿಯನ್ನು ನಶ್ಯದ ಡಬ್ಬಿಕ್ಕೆ ತುಂಬಿಸಿಟ್ಟೆ. ನಶ್ಯ ಸೇದಿ ಅದರಲ್ಲೂ 'ಪರಿಣತ' ಅನ್ನಿಸಿಕೊಂಡ ಅವರಿಗೆ ಮಣ್ಣಿಗೂ ನಶ್ಯಕ್ಕೂ ಇರುವ ವ್ಯತ್ಯಾಸ ತಿಳಿಯಲು ಒಂದು ನಿಮಿಷವಷ್ಟೇ ಬೇಕಾಯಿತು. ಈ ಕೆಲಸವನ್ನು ನಾನೇ ಮಾಡಿರುವುದೆಂಬ ಸತ್ಯವನ್ನು ಕೂಡಲೇ ಕಂಡುಹಿಡಿದು, ಮಳೆ ಬರುತ್ತಿರುವುದನ್ನೂ ಲೆಕ್ಕಿಸದೆ, ಸಣ್ಣ ಹುಡುಗಿಯಾಗಿದ್ದ ನನ್ನನ್ನು ನಶ್ಯ ತರುವಂತೆ ಹೇಳಿದ್ದರು.

ತಂದೆ ತಾಯಿಯರಿಂದ ನನಗೆ ಸಿಕ್ಕ ಸಂಸ್ಕಾರಕ್ಕೆ ನಾನು ಚಿರಋಣಿಯಾಗಿದ್ದೇನೆ. ಇವರೀರ್ವರ ನೆರಳಿನಲ್ಲಿ ನನ್ನ ವ್ಯಕ್ತಿತ್ವ ವಿಕಸನಗೊಂಡಿದೆ. ವಿಚಾರಗಳನ್ನು ಅರಿತುಕೊಂಡು ಸರಿಯಾದ ನಿರ್ಧಾರ ತೆಗೆದುಕೊಳ್ಳುವವರೆಗಿನ ಎಲ್ಲಾ ಹಂತಗಳಲ್ಲೂ ಅವರು ನನ್ನ ಕೈಹಿಡಿದು ನಡೆಸಿದ್ದಾರೆ. ಕಾಲೇಜಿನಲ್ಲಿ ನಾನು ಆರಿಸಿಕೊಳ್ಳಬೇಕಾದ ವಿಷಯಗಳಿಂದ ಹಿಡಿದು

ಬಾಳಸಂಗಾತಿಯನ್ನು ಆಯ್ಕೆ ಮಾಡುವವರೆಗಿನ ಎಲ್ಲಾ ಘಟ್ಟದಲ್ಲೂ ಸ್ವತಂತ್ರಳಾಗಿ ನಿರ್ಧಾರ ತೆಗೆದುಕೊಳ್ಳುವ ಅವಕಾಶ ನನ್ನ ತಂದೆ ತಾಯಿಯರಿಂದ ನನಗೆ ಲಭಿಸಿದೆ.

ಹೋಟೆಲ್ ಉದ್ಯಮದಲ್ಲಿ ಒಂದಷ್ಟು ಸಮಯ ತನ್ನನ್ನು ತಾನು ತೊಡಗಿಸಿಕೊಂಡಿದ್ದ ಅಪ್ಪನಿಗೆ, ಬಾಳಸಂಗಾತಿಯಾಗಿ ಬಂದ ಅಮ್ಮ ಸಂಗೀತದಲ್ಲೇ ಸಾಧನೆ ಮಾಡಬೇಕೆಂದು ಸ್ಫೂರ್ತಿ ಕೊಟ್ಟವರು ಹಾಗೂ ಸಂಪೂರ್ಣ ಸಹಕಾರ ನೀಡಿದವರು. ಸರಿಯಾದ ಅರ್ಥದಲ್ಲಿ ನನ್ನ ಅಪ್ಪನಿಗೆ 'ಬೆನ್ನೆಲುಬಾಗಿ' ನಿಂತು ಸಂಸಾರದ ಯಾವ ಕರ್ತವ್ಯಗಳೂ ಅಪ್ಪನ ಸಾಧನೆಗೆ ತೊಡಕಾಗದಂತೆ ನೋಡಿಕೊಂಡವರು.

ಅಪ್ಪನ ಸಾಧನೆಯ ಬಗ್ಗೆ ಎಷ್ಟೆಲ್ಲ ಮಂದಿ ಮಾತನಾಡುತ್ತಾರೆ, ಎಷ್ಟೆಲ್ಲ ಕಡೆ ಅವರನ್ನು ಗೌರವಿಸಿದ್ದಾರೆ. ಆದರೆ ಅವರೇರಿದ ಎತ್ತರಕ್ಕೆ ಅಮ್ಮ ಮಾಡಿದ ತ್ಯಾಗವನ್ನು ಗುರುತಿಸಿದವರು ಕಡಿಮೆ. ಮಕ್ಕಳಾದ ನಮಗಷ್ಟೇ ಗೊತ್ತು, ಅಮ್ಮ ನಿಭಾಯಿಸಿದ ಜವಾಬ್ದಾರಿಯ ತೂಕ. ನಮ್ಮ ಸಂಸ್ಕೃತಿಯ ಬಹಳ ಒಳ್ಳೆಯ ಪ್ರತಿನಿಧಿಯ ಹಾಗೆ ಬದುಕುತ್ತಿರುವ ಅಮ್ಮ ನಮ್ಮ ಅಪ್ಪನ ಬೇಜವಾಬ್ದಾರಿಯ ಬಗ್ಗೆ ಸೊಲ್ಲೆತ್ತಿದ್ದನ್ನು ನಾವು ಕಂಡಿಲ್ಲ, ಕೇಳಿಲ್ಲ. ಹಾಗಾಗಿ ಅಮ್ಮನ ಬಗ್ಗೆ ಹೇಳದೇ ಅಪ್ಪನ ಸಾಧನೆಯನ್ನು ನೆನಪಿಸಿಕೊಳ್ಳುವುದು ನನ್ನಿಂದ ಸಾಧ್ಯವೇ ಆಗಲಾರದು!

ಎಲ್ಲರಂಥಲ್ಲ ನಮ್ಮ ತಂದೆ

✍ ಶುಭಾ ಸುಬ್ರಹ್ಮಣ್ಯ ಬಾಸ್ರಿ

ಎಂಬತ್ತರ ದಶಕದ ದಿನಗಳು ನೆನಪಾಗುತ್ತಿವೆ. ಧ್ವನಿಸುರುಳಿಗಳ ನಿರ್ಮಾಣದ ಆರಂಭಿಕ ಘಟ್ಟವದು. ನನ್ನ ತಂದೆಯವರು ಕನ್ನಡ ಧ್ವನಿಸುರುಳಿಗಳ ನಿರ್ಮಾಣದಲ್ಲಿ ದಾಪುಗಾಲು ಹಾಕಿದ್ದರು. ಮಾರುಕಟ್ಟೆಯಲ್ಲಿ ಬಿಸಿದೋಸೆಯಂತೆ ಖರ್ಚಾಗುತ್ತಿದ್ದ ಹಲವು ಕ್ಯಾಸೆಟ್‌ಗಳನ್ನು ಅವರು ಸಂಗೀತ ನಿರ್ದೇಶಿಸಿ, ಹಾಡಿ, ಹಾಡಿಸಿ ಹೊರತಂದಿದ್ದರು. ಈ ಕ್ಯಾಸೆಟ್ ರೆಕಾರ್ಡಿಂಗ್ ಮದ್ರಾಸಿನಲ್ಲಿ ನಡೆಯುತ್ತಿತ್ತು. ಎಷ್ಟೋ ದಿವಸಗಳ ಪರಿಶ್ರಮದ ನಂತರ ಯಾವುದೋ ನಟ್ಟಿರುಳಿನಲ್ಲಿ ಅವರು ಮನೆಗೆ ಬರುತ್ತಿದ್ದರು. ಮಲಗಿದ್ದ ನಮ್ಮನ್ನೆಲ್ಲ ಎಬ್ಬಿಸಿ, "ಕ್ಯಾಸೆಟ್ ಕೇಳಿ, ಮಕ್ಕಳೇ. ಹೇಗೆ ಬಂದಿದೆ ನೋಡಿ" ಎಂದು ಹಾಕಿ ತೋರಿಸುತ್ತಿದ್ದರು. ನಾನಾಗ ತುಂಬ ಚಿಕ್ಕವಳಿದ್ದೆ. ಆದರೂ ನಿದ್ರೆಕಣ್ಣಿನಲ್ಲಿ ಕೇಳಿದ್ದ, ಎಸ್. ಜಾನಕಿ ಹಾಡಿದ 'ತಾಳುವಿಕೆಗಿಂತ ಅನ್ಯತಪ...', ಪಿ. ಬಿ. ಶ್ರೀನಿವಾಸ್ ಹಾಡಿದ 'ಹಣವೇ ನಿನ್ನಯ ಗುಣ' ಎಂಬ ಹಾಡುಗಳು ನಮ್ಮ ತಂದೆಯವರ ರಾಗ ಸಂಯೋಜನೆ ಸಹಿತ ಈಗಲೂ ನೆನಪಾಗುತ್ತವೆ. 'ತಾಳುವಿಕೆಗಿಂತ...' ಹಾಡನ್ನು ಅಷ್ಟೇ ಚೆನ್ನಾಗಿ ನನ್ನಕ್ಕ ಹಾಡುತ್ತಿದ್ದಳು.

ನಮ್ಮ ತಂದೆಯವರ ಬದುಕು ಆ ಹೊತ್ತಿಗೆ ಸಮಾಜಕ್ಕಾಗಿ ಅರ್ಪಿತವಾಗಿತ್ತು. ಸಂಗೀತಕ್ಕಾಗಿ ನಿರಂತರ ದುಡಿಮೆ ಅವರದಾಗಿತ್ತು. ಇದರಿಂದಾಗಿ ಅವರ ಮಕ್ಕಳಾದ ನಮಗೆ ಬಹುದೊಡ್ಡ ನಷ್ಟವಾಗಿತ್ತು. ನಮ್ಮೊಂದಿಗೆ ಸಮಯ ಕಳೆಯಲಿಕ್ಕೆ, ಮಕ್ಕಳಾದ ನಮಗೆ ಸಂಗೀತ ಕಲಿಸಲಿಕ್ಕೆ ಅವರಿಗೆ ಸಮಯ ಸಿಗುತ್ತಿರಲಿಲ್ಲ. ಹೀಗಾಗಿ ಅವರು ಬೇರೆಯವರಿಗೆ ಕಲಿಸುವಾಗ ಕೇಳಿ ಕಲಿತದ್ದೇ ನಮ್ಮ ಬಂಡವಾಳವಾಗಿರುತ್ತಿತ್ತು.

ಒಮ್ಮೊಮ್ಮೆ "ಇವತ್ತು ಕ್ಲಾಸ್ ಮಾಡುತ್ತೇನೆ" ಅಂತ ಬೆಳಿಗ್ಗೆ ಹೇಳಿ ಹೋದವರನ್ನು ನಾವು ಕಾಯುತ್ತಾ ಇರುತ್ತಿದ್ದೆವು. ಬರುವಾಗ ಅವರು ತುಂಬಾ ಸುಸ್ತಾಗಿರುತ್ತಿದ್ದರು. "ಇವತ್ತು ಬೇಡ ಅಪ್ಪಾ, ನಾಳೆ ಕ್ಲಾಸ್ ಮಾಡಿ" ಅಂತ ಹೇಳಿ ನಾವು ಮಲಗುತ್ತಿದ್ದೆವು. ಅಪ್ಪ ಕ್ಲಾಸ್ ಮಾಡಿದರೆ ಮಾತ್ರ ಗಂಟೆಗಟ್ಟಲೆ ಮಾಡುತ್ತಿದ್ದರು. ನನ್ನ ಅಕ್ಕ ಪಟ್ಟು ಬಿಡದೆ ಚೆನ್ನಾಗಿ ಕಲಿತುಬಿಟ್ಟಳು. ನಾವೆಲ್ಲ ಅಪ್ಪನ ಜೊತೆಗೆ ಪ್ರೋಗ್ರಾಂಗೆ ಹೋಗಿ ತುಂಬಾ ಹಾಡು ಹೇಳಿದ್ದೇವೆ. ಅವರು ನಿರ್ದೇಶಿಸಿದ ರೂಪಕಗಳಲ್ಲಿ ಡ್ಯಾನ್ಸ್ ಮಾಡಿದ್ದೇವೆ. ಆದರೆ ಅಪ್ಪನಿಂದ ವಿವರವಾಗಿ ಎಲ್ಲರ ಹಾಗೆ ಸಂಗೀತ ಕಲಿಯುವ ಭಾಗ್ಯ ನಮಗೆ ಸಿಗಲಿಲ್ಲ. ನಮ್ಮ ಅಪ್ಪ ಒಬ್ಬೊಬ್ಬರೇ ಶಿಷ್ಯರಿಗೆ ಹೇಳಿಕೊಡುವ ಕ್ರಮ ಅವರದೇ ಸ್ಪೆಷಾಲಿಟಿ. ಅವರು ಸಂಗೀತ ಕಚೇರಿಯನ್ನೂ ತುಂಬಾ ಚೆನ್ನಾಗಿ ಮಾಡುತ್ತಿದ್ದರು.

ನಮ್ಮ ಅಪ್ಪನ ಸಂಗೀತ ಸೇವೆಗೆ ನಮ್ಮಮ್ಮನೇ ಬೆನ್ನೆಲುಬು. ಅವರು ಅಪ್ಪನ ಎಲ್ಲಾ ವ್ಯವಹಾರಗಲನ್ನು ಪ್ರೋತ್ಸಾಹಿಸುತ್ತಿದ್ದರು. ಅಪ್ಪ ಸಂಗೀತ ಕ್ಷೇತ್ರದ ಬಹುದೊಡ್ಡ ಹೆಸರಾಗಬೇಕೆನ್ನುವುದು ಅಮ್ಮನ ಅಭಿಲಾಷೆಯಾಗಿತ್ತು. ಆ ದಿವಸಗಳಲ್ಲಿ ಅಪ್ಪ ಮನೆಯಲ್ಲಿರುವುದು ತುಂಬಾ ಕಮ್ಮಿ. ನಮ್ಮ ವಿದ್ಯಾಭ್ಯಾಸ, ಸನ್ನಡತೆಯನ್ನು ಕಲಿಸುವುದು,

ಬಂದುಹೋಗುವವರನ್ನು ನೋಡಿಕೊಂಡು ನಮಗೆ ದಾರಿದೀಪವಾದವರು ನಮ್ಮಮ್ಮ. ಏನೇ ಕಷ್ಟ ಬಂದರೂ ಅದನ್ನು ಸ್ವೀಕರಿಸಿ ಮಕ್ಕಳಾದ ನಮಗೆ ಯಾವ ತೊಂದರೆ ಆಗದ ಹಾಗೆ ನೋಡಿಕೊಂಡವರು ನಮ್ಮ ಅಮ್ಮ.

ನಾವು ಚಿಕ್ಕವರಿರುವಾಗ ಮನೆಗೆ ದೊಡ್ಡ ದೊಡ ವಿದ್ವಾಂಸರು ಬರುತ್ತಿದ್ದರು. ಅಪ್ಪನ ಸಂಗೀತ ಕೇಳಿ, ಅವರಿಗೆ ಆಶೀರ್ವಾದ ಮಾಡುತ್ತಿದ್ದರು. ನಾನು ಐದು ಅಥವಾ ಆರನೇ ತರಗತಿಯಲ್ಲಿರುವಾಗ ಮದ್ರಾಸಿನ ದೊಡ್ಡ ವಿದ್ವಾಂಸರೂ, ಹಾಡುಗಾರರೂ ಆದ ಲವ, ಕುಶ ಎನ್ನುವವರು ನಮ್ಮ ತಂದೆಯವರನ್ನು ಹುಡುಕಿಕೊಂಡು ಬಂದಿದ್ದರು. ಆಗ ನಮ್ಮಪ್ಪ ಅಕ್ಕನ ಹತ್ತಿರ 'ತಾಳುವಿಕೆಗಿಂತ' ಮತ್ತು ತಂಗಿಯರಾದ ನಮ್ಮಿಂದ 'ದೇವ ದೇವ' ಎನ್ನುವ ಭಕ್ತಿಗೀತೆ ಹಾಡಿಸಿದ್ದರು. ಬಂದವರಿಗೆ ತುಂಬಾ ಖುಷಿಯಾಗಿ ನಮ್ಮನ್ನು ಹರಸಿದ್ದರು.

ನಾವು ಚಿಕ್ಕವರಿದ್ದಾಗ ನನ್ನ ತಂದೆಯವರು 'ಗುರುಕುಲ' ಪದ್ಧತಿಯಲ್ಲಿ ಹಲವಾರು ಶಿಷ್ಯರಿಗೆ ಸಂಗೀತ ಕಲಿಸುತ್ತಿದ್ದರು. ಚಂದ್ರಶೇಖರ ಕೆದ್ಲಾಯ, ಮಹೇಶ್, ದಯಾವತಿ, ಕಮಲ, ಗಣೇಶ್, ಚಂದ್ರಕಲಾ, ವೀಣಾ, ವಿನಯಪ್ರಸಾದ್, ಶಂಕರ ಶ್ಯಾನುಭಾಗ್, ಎಂ. ಎಸ್. ಗಿರಿಧರ್, ಸುಮಾ ಶಾಸ್ತ್ರಿ... ಮೊದಲಾದವರೆಲ್ಲ ನಂತರ ಸಂಗೀತ ಕ್ಷೇತ್ರದಲ್ಲಿ ಬಹಳ ದೊಡ್ಡ ಹೆಸರಾಗಿ ಬೆಳೆದರು.

ನಮ್ಮ ತಂದೆಯವರ ಸಂಗೀತ ಶ್ರೀಮಂತಿಕೆ ನನಗೆ ಇವತ್ತು ಕೂಡಾ ತುಂಬಾ ಸಂತೋಷವನ್ನು ಕೊಡುವ ವಿಚಾರ. ಉದ್ಯಾವರ ಮಾಧವ ಆಚಾರ್ಯರ ಹಲವಾರು ರೂಪಕಗಳಿಗೆ ಸಂಗೀತ ಸಂಯೋಜನೆ ಮಾಡಿ 'ಸೈ' ಎಂದೆನಿಸಿದ್ದರು. 'ಅಹಲ್ಯೆ' ಎಂಬ ರೂಪಕಕ್ಕೆ ನೂರು ರಾಗಗಳನ್ನು ಹಾಕಿ ಪುತಿನರಿಂದ ಪ್ರಶಂಸೆಯನ್ನು ಪಡೆದ ವಿಚಾರವನ್ನು ನಾನು ಆಗಾಗ ನನ್ನ ಮಕ್ಕಳಿಗೆ ಹೇಳುವುದುಂಟು. ನಮ್ಮ ತಂದೆಯಷ್ಟು ಚೆನ್ನಾಗಿ, ಅರ್ಥಪೂರ್ಣವಾಗಿ ವಿವಿಧ ಪದ್ಯಗಳಿಗೆ ಸ್ವರ, ರಾಗ ಸಂಯೋಜನೆ ಮಾಡಲು ಪ್ರಾಯಶಃ ಯಾರಿಂದಲೂ ಅಸಾಧ್ಯ ಎನ್ನುವುದು ನನ್ನ ನಂಬಿಕೆ. ಅವರೇ ರಾಗ ಸಂಯೋಜಿಸಿ ಹಾಡಿದ, ಹಾಡಿಸಿದ 'ನೀನುಪೇಕ್ಷೆಯ ಮಾಡೆ...', 'ಇನ್ನೂ ದಯ ಬಾರದೆ...', 'ಏನ ಬರೆದೆಯೋ ಬ್ರಹ್ಮ...', 'ಇಂದು ಎನಗೆ ಗೋವಿಂದ...', 'ಏನು ದನ್ಯಳೊ...', 'ಎಂದಾದರೊಂದು ದಿನ ಹೋಗಲೇಬೇಕು...', 'ಜೋ ಜೋ... ಲಾಲಿ...' ಈ ಎಲ್ಲಾ ಪದ್ಯಗಳು ಇಪ್ಪೊಂದು ವರ್ಷಗಳ ನಂತರ ಕೂಡಾ ನನ್ನ ಮನದಾಳದಲ್ಲಿ ರಿಂಗಣಗೊಳ್ಳುತ್ತಲೇ ಇವೆ. ಅಂತಹ ಅದ್ಭುತ ಸಂಯೋಜನೆಯ ಪದ್ಯಗಳನ್ನು ನೆನಪಿಸಿಕೊಂಡಾಗ ನನ್ನ ಮೈ ನವಿರೇಳುತ್ತದೆ.

ಆರ್ಷೇಯ ಸಂಪ್ರದಾಯದಂತೆ ಮಕ್ಕಳಿಗೆ ತಂದೆಯಾಗಿ ಬಾಲ್ಯದಲ್ಲಿ ನೀಡಬೇಕಾದ ಎಲ್ಲಾ ವಾತ್ಸಲ್ಯ, ಮಮತೆಯನ್ನು ಧಾರೆ ಎರೆದು, ಸನ್ನಡತೆಯನ್ನು ತೋರಿಸಿ, ಪ್ರಾಪ್ತ ವಯಸ್ಸಿಗೆ ಬಂದಾಗ, ನನ್ನ ಇತರೆಲ್ಲ ಸಹೋದರಿಯರಂತೆ ನನಗೂ ಯೋಗ್ಯ ವರನೊಂದಿಗೆ ವಿವಾಹ ಏರ್ಪಡಿಸುವ ಮೂಲಕ ಜವಾಬ್ದಾರಿಯುತವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿ, ನನ್ನ ಸಾಂಸಾರಿಕ ಜೀವನದಲ್ಲಿ ನಾನು ಅತ್ಯಂತ ಸಂತೃಪ್ತಿಯಿಂದ ಇರುವಂತೆ ನೋಡಿಕೊಂಡ ಪೂಜ್ಯ ತಂದೆಯವರನ್ನು ನಾನೆಷ್ಟು ಅಭಿನಂದಿಸಿದರೂ ಅದು ಅತ್ಯಲ್ಪ.

'ಮಾವ' ಅಲ್ಲ 'ಮಾಸ್ಟ್ರು'

✍ ಎಂ. ಎಸ್. ಗಿರಿಧರ್

ವೇದಮೂರ್ತಿ ವೆಂಕಟರಮಣ ಐತಾಳರ ಕೊನೆಯ ಪುತ್ರನಾಗಿ, ಹಿರಿಯಣ್ಣ ವೇದವಿತ್ ಲಕ್ಷ್ಮೀನಾರಾಯಣ ಐತಾಳರ ಮಾರ್ಗದರ್ಶನದಲ್ಲಿ ವೇದಾಭ್ಯಾಸ ಆದಮೇಲೆ, ನನ್ನೆಲ್ಲ ಸಂವೇದನೆಗಳಿಗೆ ವೇದ ಮೂಲವಾಯಿತು. ಜೀವನದ ಎರಡನೇ ಆಶ್ರಮ ನನಗೆ ದೊರಕಿದ್ದು 'ನಾದಾ'ಶ್ರಿತ 'ನಾದವೈಭವಂ' ಉಡುಪಿ ವಾಸುದೇವ ಭಟ್ಟರಿಂದ. ರಾಗಮೂಲವನ್ನು ಅರಸಿಕೊಂಡು, ಸಂಗೀತದ ಮೂಲಸ್ವರೂಪದ ಸಾಂಪ್ರದಾಯಿಕ ಶಿಕ್ಷಣಾರ್ಥಿಯಾಗಿ ಅವರಲ್ಲಿ ಬಂದ ನನಗೆ ಭಾಗ್ಯನಿಧಿಯಾಗಿ ಅವರ ಜ್ಯೇಷ್ಠ ಪುತ್ರಿ ವಸುದಾ ಪ್ರಾಪ್ತಳಾದಳು. ವೇದ ನಾದಗಳು ಸೇರಿದಂತೆ ನಾದಾಭಿಯಾನ ನನ್ನ ಜೀವನದಲ್ಲೂ ವೇಗ ಹೆಚ್ಚಿಸಿಕೊಂಡಿತು.

ಮೊದಲು ಮಾಸ್ಟ್ರಾಗಿ ಮತ್ತೆ ಮಾವನಾದ ವಾಸುದೇವ ಭಟ್ಟರನ್ನು ಎಂದೂ 'ಮಾವ' ಎನ್ನದೇ 'ಮಾಸ್ಟ್ರೇ' ಎಂದು ನಾನು ಕರೆಯುತ್ತಿರುವುದು ಅವರಲ್ಲಿರುವ 'ಗುರುತ್ವ'ದ ಶಕ್ತಿಗಾಗಿ. ಈ ಗುರುತ್ವದಲ್ಲಿ ನಾನು ಕಂಡದ್ದು ಸಂಗೀತಕ್ಕಿಂತಲೂ ಹೆಚ್ಚಾಗಿ ಅವರ ಸರಳತೆ. ದಿನದ ಇಪ್ಪತ್ತನಾಲ್ಕು ಘಂಟೆ ಅಂಬುಲೆನ್ಸ್‌ನಂತೆ 'ಎಂದೆಂದೂ ಯಾರಿಗೂ ಸಹಾಯ ಮಾಡಬಲ್ಲೆ' ಎಂಬ ಅವರ ಧೋರಣೆ ಕುತೂಹಲ ಹುಟ್ಟಿಸುವಂತಹದು. ತಮ್ಮ ಶಕ್ತಿ ಮೀರಿ ಪರರಿಗೆ ಸಹಾಯ ಮಾಡಲು ಹೋಗಿ ಅವರು ಕೈಸುಟ್ಟುಕೊಂಡದ್ದು ಹಲವು ಸಲ. ಸಮತೂಕದ ತಾಳ್ಮೆ, ಸಿಟ್ಟು ಅವರು ಸೇವಿಸುವ ನಶ್ಯದಂತೆ ಅವರ ನಿತ್ಯ ಸಂಗಾತಿ. ಕೆಲವೊಮ್ಮೆ ಬೇಡದಲ್ಲಿ ತಾಳ್ಮೆ; ಮತ್ತೆ ಕೆಲವೊಮ್ಮೆ ಬೇಡದಲ್ಲಿ ಸಿಟ್ಟು.

'ನಾದಾಭಿಯಾನ'ದ ಮಟ್ಟಿಗೆ ಮಾವ ನನ್ನನ್ನು ಉತ್ತರಾಧಿಕಾರಿಯೆಂದೇ ಸ್ವೀಕರಿಸಿದ್ದಾರೆ. ತಮ್ಮ ನಂತರ ಒಂದು ಭವ್ಯ ಪರಂಪರೆಯನ್ನು ಮುಂದುವರಿಸುವ ಶಕ್ತಿಯನ್ನು ನನ್ನಲ್ಲಿ ಗುರುತಿಸಿರುವುದಾಗಿ ಅವರು ಬಲ್ಲವರಲ್ಲಿ ಹೇಳುತ್ತಿರುತ್ತಾರೆ. ಈ ಜವಾಬ್ದಾರಿ ಮತ್ತು ಪ್ರೋತ್ಸಾಹದ ಮಾತುಗಳು ನನ್ನಲ್ಲಿ ನವೋತ್ಸಾಹವನ್ನು ತುಂಬಿವೆ. ಅವರು ಕರೆದಾಗ, ಕರೆದಲ್ಲಿಗೆ ಹೋಗಿ, ಅವರೊಂದಿಗೆ ಸವಾಲುಗಳನ್ನು ಎದುರಿಸುವ, ಹೊಣೆಯ ನೊಗಕ್ಕೆ ಹೆಗಲು ಕೊಡುವ ಹಲವು ಸಂದರ್ಭಗಳು ನನ್ನ ಚೈತನ್ಯವನ್ನು ಹೆಚ್ಚಿಸಿವೆ. ಸತ್ಸಂಗಗಳಲ್ಲಿ ನಾವು ಪರಸ್ಪರ ಪೂರಕರಾಗಿ ಕೆಲಸ ಮಾಡಿದ್ದೇವೆ. ಅವರು 'ಮಾವ' ಅಲ್ಲ 'ಮಾಸ್ಟ್ರು' ಎನ್ನಿಸುವುದು ಅದಕ್ಕೇ.

ಮಾಸ್ಟ್ರು ತಮ್ಮ ನಾಲ್ಕು ಜನ ಹೆಣ್ಣುಮಕ್ಕಳನ್ನು ಬೆಳೆಸಿದ ರೀತಿ ಲೋಕಕ್ಕೇ ಆದರ್ಶವಾದದ್ದು. ಹೆಣ್ಣುಮಕ್ಕಳನ್ನು ಅಷ್ಟು ಪ್ರೀತಿಯಿಂದ, ಗೌರವದಿಂದ ಬೆಳೆಸಿದ ರೀತಿ ಅಪರೂಪದ್ದು. ಅವರನ್ನು ಹತ್ತು ಹಲವು ಕಲೆಗಳಿಂದ ಸಮೃದ್ಧರನ್ನಾಗಿಸಿದ್ದು

ಅನುಕರಣೀಯವಾದುದು. ಆ ಹೆಣ್ಣುಮಕ್ಕಳ ಚಿಕ್ಕಂದಿನಲ್ಲಿ ಸವಾಲುಗಳನ್ನು ಎದುರಿಸುವ ಕಲೆ, ಜವಾಬ್ದಾರಿ ಹೊರುವ ರೀತಿಗಳನ್ನು ಅನುಭವದ ಮೂಲಕ ಕಲಿಸಿ, ಪ್ರೌಢವಾದ ಬದುಕಿಗೆ ಸಿದ್ಧರನ್ನಾಗಿಸಿದ್ದು ಪ್ರತಿಯೊಬ್ಬ ತಂದೆಗೆ ಸವಾಲೆನ್ನಿಸುವ ಸಂಗತಿ. ಹೆಣ್ಣುಮಕ್ಕಳು ಮದುವೆಯಾಗಿ ಹೋದನಂತರವೂ ಅವರನ್ನು ಹಸುಗೂಸುಗಳೆಂದೇ ಭಾವಿಸಿ, ಪ್ರೀತಿಸುವ ಈ ತಂದೆ ಲೋಕಕ್ಕೊಂದು ಅದ್ಭುತ. ಮಗಳಿಂದ ಫೋನ್ ಬಂದರೆ, ಮುಂದಿನ ಬಸ್ ಹತ್ತಿ ಅವರ ಮನೆಗೆ ಧಾವಿಸುವ ಅವ್ಯಾಜ ಪ್ರೀತಿಯ ಈ ತಂದೆಯ ಮುಗ್ಧತನ ನನಗೊಂದು ಸೋಜಿಗ.

ಈ ತಂದೆಯ ಹೃದಯದೊಳಗಿನ ಸಂಗೀತ ಪ್ರೀತಿ ಕೂಡ ಅನುಪಮವಾದುದು. ಮಗಳಿಗೆ ಶ್ರೀಮಂತ ಪುರೋಹಿತರ ಮನೆಯ ನೆಂಟಸ್ತಿಕೆ ಬಂದಾಗ, ಆ ನೆಂಟಸ್ತಿಕೆಯನ್ನು ತಂದದ್ದು ತನ್ನ ಆಪ್ತ ಗೆಳೆಯನೇ ಆಗಿದ್ದರೂ, ‘ಇದಾಗದು, ನನ್ನ ಮಗಳು ಕಲಾವಿದನ ಕೈಯನ್ನೇ ಹಿಡಿಯಬೇಕು’ ಎಂದು ಹಠಹಿಡಿದ ತಂದೆಯರು ಎಷ್ಟು ಮಂದಿ ಲೋಕದಲ್ಲಿ ಕಾಣಸಿಗುತ್ತಾರೆ ಹೇಳಿ?

ಮಾಸ್ಟ್ರ ಸಂಗೀತ ಸಾಧನೆ ಎಲ್ಲವನ್ನೂ ಮೀರಿ ನಿಲ್ಲಬಹುದಾದ್ದು. ಸಂಗೀತವೇ ಪರಮೌಷಧ ಎಂಬುದು ಅವರ ನಂಬಿಕೆ. ಅವರ ಸಂಶೋಧನೆಯ ಫಲಶ್ರುತಿ. ಅವರ ಸಂಶೋಧನೆಯ ಮಹತ್ವದ ಘಟ್ಟಗಳಲ್ಲಿ ವೀಕ್ಷಕನಾಗಿ, ಪಾಲುದಾರನಾಗಿ, ಶಿಷ್ಯನಾಗಿ ಜೊತೆಗಿರುವುದು ನನ್ನ ಪಾಲಿನ ಮಹತ್ವಪೂರ್ಣ ಭಾಗ್ಯ ಎಂದೇ ನಾನು ತಿಳಿದಿದ್ದೇನೆ.

ಬಹುಮುಖಿ ಪ್ರತಿಭೆಯ ಬಂಧು

✍ ಬಿ. ವೆಂಕಟಕೃಷ್ಣ ರಾವ್

ಶ್ರೀ ವಾಸುದೇವ ಭಟ್ಟರಿಗೂ ನನಗೂ ಎರಡು ರೀತಿಯ ಸಂಬಂಧ. ಅವರು ನನ್ನ ತಾಯಿಯ ಅಕ್ಕ, ಕಮಲಮ್ಮನ ಮಗನಾದುದರಿಂದ ನನಗೆ ಸಹೋದರ ಸಮಾನ. ನಾನು ಅವರನ್ನು ಬಾಲ್ಯದಿಂದಲೂ ನೋಡಿದವನು. ನಾನು ಅಧ್ಯಾಪನ ವೃತ್ತಿಯಲ್ಲಿದ್ದುದರಿಂದ ಅವರು ವೃತ್ತಿಬಾಂಧವರೂ ಹೌದು. ಹೀಗಾಗಿ ಜೀವನದುದ್ದಕ್ಕೂ ತನ್ನ ಸಾಧನೆ, ನೋವು, ನಲಿವುಗಳ ಅನುಭವವನ್ನು ನನ್ನಲ್ಲಿ ಹಂಚಿಕೊಳ್ಳುತ್ತಿರುತ್ತಾರೆ. ಒಬ್ಬ ಸಂಗೀತ ಶಿಕ್ಷಕ ತನ್ನ ಸ್ವಯಂ ಪ್ರತಿಭೆ ಮತ್ತು ಪರಿಶ್ರಮದಿಂದ ಜನ ಮೆಚ್ಚುವ ರೀತಿಯಲ್ಲಿ ಎತ್ತರಕ್ಕೆ ಏರಿದ್ದು ನಮಗೆಲ್ಲ ಹೆಮ್ಮೆಯ ವಿಷಯವೂ ಆಗಿರುವುದರಿಂದ, ಅವರು ಹಂಚಿಕೊಳ್ಳುವ ಅನುಭವಗಳಲ್ಲಿ ನನಗೆ ಯಾವತ್ತೂ ಆಸಕ್ತಿ.

ವಾಸುದೇವ ಭಟ್ಟರು ಮೈಸೂರಿನ ಪ್ರಸಿದ್ಧ ಸಂಗೀತ ವಿದ್ವಾಂಸ ಬಿಡಾರಂ ಕೃಷ್ಣಪ್ಪನವರ ಶಿಷ್ಯರಾದ ಶ್ರೀ ಮಂಜುನಾಥಯ್ಯನವರಲ್ಲಿ ಬಾಲ್ಯದಿಂದಲೂ ಸಂಗೀತಾಭ್ಯಾಸ ಮಾಡಿದವರಷ್ಟೆ? ಮಂಜುನಾಥಯ್ಯನವರು ಭಟ್ಟರ ತಾಯಿಯ ಸೋದರಮಾವ. ಅವರು ನನ್ನ ಅಜ್ಜಿ ಶತಾಯುಷಿ ಶೇಷಮ್ಮನವರ ಅಗ್ರಜರೂ ಹೌದು. ಹೀಗಾಗಿ ವಾಸುದೇವ ಭಟ್ಟರ ಸಂಗೀತ ಶಿಕ್ಷಣವನ್ನೂ, ಅಧ್ಯಾಪನವನ್ನೂ ಬಾಲ್ಯದಿಂದ ಕಾಣುತ್ತಾ ಬಂದಿದ್ದೇನೆ. ಮಂಜುನಾಥಯ್ಯನವರು ಉಡುಪಿಯ ತೆಂಕುಪೇಟೆಯಲ್ಲಿ ಮನೆಮಾಡಿಕೊಂಡು ಕಾಡಿನ ಮಲ್ಲಿಗೆಯಂತೆ ಯೋಗಿಜೀವನ ನಡೆಸುತ್ತಾ ಆಸಕ್ತ ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣ ನೀಡುತ್ತಾ ಬಂದುದನ್ನೂ ನಾನು ಹತ್ತಿರದಿಂದ ಕಂಡಿದ್ದೇನೆ. ಆಗೆಲ್ಲ ಗುರುಕುಲ ಪದ್ಧತಿಯ ಶಿಕ್ಷಣ. ಗುರುವಿನ ಗುಲಾಮನಾಗುವ ತನಕ ಮುಕ್ತಿ ದೊರೆಯದೆಂಬ ನಂಬಿಕೆ. ವಾಸುದೇವ ಭಟ್ಟರು ಸಂಗೀತಾಭ್ಯಾಸದ ಜೊತೆಯಲ್ಲಿ ಗುರುಗಳ ಸೇವೆಯನ್ನು ಮಾಡುತ್ತಾ ಬಂದುದನ್ನು ನಾನು ಕಂಡು, ಕೇಳಿ ಬಲ್ಲೆ.

ನಾನು ಶಿಕ್ಷಕ ತರಬೇತಿಗೆ ದೂರದ ನಿಡಿಯೂರಿನಿಂದ ಉಡುಪಿಗೆ ದಿನನಿತ್ಯವೂ ಬರುತ್ತಿದ್ದರಿಂದ ಕೆಲವು ದಿನ ಸಂಜೆ ಮಂಜುನಾಥಯ್ಯನವರ ಮನೆಗೆ ಹೋಗಿ ಸ್ವಲ್ಪ ಹೊತ್ತು ಕುಳಿತು ವಿದ್ಯಾರ್ಥಿಗಳು ಹಾಡುವ ಸಂಗೀತ ಕೇಳಿ ಸಂತಸದಿಂದ ಮನೆಗೆ ಹಿಂದಿರುಗುತ್ತಿದ್ದೆ. ನನಗೂ ಸಂಗೀತದಲ್ಲಿ ಬಹಳ ಆಸಕ್ತಿ ಇದ್ದಿತ್ತು. ಕಲಿಸುವ ಗುರುಗಳು ನಮ್ಮವರಾಗಿದ್ದರೂ, ನನ್ನ ಮನೆಯ ಪರಿಸ್ಥಿತಿಯಿಂದಾಗಿ ಅಲ್ಲಿ ನಿಂತು ಸಂಗೀತ ಕಲಿಯುವ ಅದೃಷ್ಟ ನನಗಿರಲಿಲ್ಲ. ಶ್ರೀ ಮಂಜುನಾಥಯ್ಯನವರಲ್ಲಿ ವಿದ್ಯೆ ಕಲಿತ ಶ್ರೀಯುತರಾದ ಪರಮೇಶ್ವರ ಭಟ್, ರಾಜಗೋಪಾಲಾಚಾರ್ಯ ಹಾಗೂ ಯು. ಎಲ್. ಆಚಾರ್ಯರ ತಂಗಿ ಶ್ರೀಮತಿ ಯಶೋದ

- ಇವರೆಲ್ಲ ವಾಸುದೇವ ಭಟ್ಟರ ಸಹಪಾಠಿಗಳು ಮತ್ತು ನನ್ನ ಚಿರಪರಿಚಿತರು. ಅವರೆಲ್ಲರಿಗೆ ಪ್ರಾಪ್ತವಾದ ಸೌಭಾಗ್ಯವನ್ನು ಕಂಡು ನಾನು ಸಂತೋಷ ಪಟ್ಟಿದ್ದೇನೆ.

ವಾಸುದೇವ ಭಟ್ಟರ ತಂದೆ ಸೀತಾರಾಮ ಭಟ್ಟರು ಪ್ರಸಿದ್ಧ ದಿನಪತ್ರಿಕೆಗಳ ಪತ್ರಕರ್ತರಾಗಿದ್ದರು. ಅವರ ಕಾಲಾನಂತರ ಕೆಲವು ಸಮಯದವರೆಗೆ ವಾಸುದೇವ ಭಟ್ಟರು ಅದನ್ನೂ ಮುಂದುವರಿಸಿದರು. ತನ್ಮಧ್ಯೆ ಸಂಗೀತಾಸಕ್ತ ವಿದ್ಯಾರ್ಥಿಗಳಿಗೆ ಪಾಠಹೇಳುವ ಕಾರ್ಯವನ್ನೂ ಇಟ್ಟುಕೊಂಡರು. ಸಂಗೀತ ಹಾಗೂ ಸಾಹಿತ್ಯ ಒಂದೇ ನಾಣ್ಯದ ಎರಡು ಮುಖಗಳು ಎಂಬುದು ಅವರ ಅಭಿಪ್ರಾಯ. ಆದುದರಿಂದ ಸಂಗೀತಾಭ್ಯಾಸದಲ್ಲಿ ಸಾಹಿತ್ಯದ ಮೂಲಾರ್ಥಕ್ಕೆ ಚ್ಯುತಿ ಬಾರದಂತೆ ಎಚ್ಚರ ವಹಿಸುತ್ತಿದ್ದರು.

ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಗಮನದಲ್ಲಿ ಇರಿಸಿಕೊಂಡು ಪಾಠಹೇಳುವ ಇವರ ಕ್ರಮ ಹೆಚ್ಚು ಸಮಯವನ್ನು ಅಪೇಕ್ಷಿಸುತ್ತದೆ. ಹಾಗಾಗಿ ಸಂಬಂಧಿಕರಲ್ಲಿ ನಡೆಯುವ ವಿಶೇಷ ಸಮಾರಂಭಗಳಿಗೂ ಹಾಜರಾಗಲು ಇವರಿಗೆ ಬಿಡುವು ಸಿಗುವುದಿಲ್ಲ. ಆದರೂ ಇವರು ರಾತ್ರಿ ಸಮಯ ರಿಕ್ಷಾ ಮಾಡಿಕೊಂಡಾದರೂ ಗಡಿಬಿಡಿಯಲ್ಲಿ ಬಂದು ಮನೆಯವರಿಗೆ ಸಂತೋಷ ಕೊಡುತ್ತಿದ್ದರು. ಆದುದರಿಂದಲೇ ನಾವು ಇವರನ್ನು 'ಗಡಿಬಿಡಿ ಭಟ್ಟರು' ಎಂದು ಕರೆಯುತ್ತೇವೆಂದು ಅವರಿಗೆ ಇವತ್ತಿನ ತನಕ ತಿಳಿದಿಲ್ಲ.

ನಾದವೇ ಉಸಿರಾಗಿಹ ವಾಸು ಚಿಕ್ಕಪ್ಪ

✍ ಬಿ. ವಿಠಲ ರಾವ್

1970ರ ದಶಕದಿಂದ ವಾಸುದೇವ ಭಟ್ ಹಾಗೂ ನನ್ನ ನಂಟು ಬೆಳೆದಿದೆ. ಇದಕ್ಕೆ ಕಾರಣ ಹಲವು. ರಕ್ತಸಂಬಂಧ, ನೆರೆಹೊರೆ, ಗುರುಶಿಷ್ಯ ಸಂಬಂಧ - ಹೀಗೆ. ನನ್ನ ತಂದೆಯವರ ಸೋದರಮಾವನ ಮಗ ವಾಸುದೇವ ಭಟ್ಟರು. ಅಕ್ಕಪಕ್ಕದಲ್ಲಿಯೇ ನಮ್ಮಿಬ್ಬರ ಮನೆ. ಹಾಗಾಗಿ ಪುಟ್ಟ ಮಗುವಾಗಿದ್ದ ದಿನಗಳಿಂದಲೇ ನಲ್ಮೆಯ ವಾಸುಚಿಕ್ಕಪ್ಪನನ್ನು ಕಂಡಿದ್ದೇನೆ, ಕಾಣುತ್ತಲೇ ಇದ್ದೇನೆ. ಮಾತನಾಡಿದ್ದೇನೆ, ಮಾತನಾಡುತ್ತಲೇ ಇದ್ದೇನೆ. ಚರ್ಚೆ ಮಾಡಿದ್ದೇನೆ, ಚರ್ಚೆ ಮಾಡುತ್ತಲೇ ಇದ್ದೇನೆ. ಅವರ ಸಾಹಸದ ಬದುಕನ್ನು ನಲವತ್ತು ವರ್ಷಗಳಿಂದ ಅತಿ ಹತ್ತಿರದಿಂದ ಕಂಡು ವಿಸ್ಮಿತನಾಗಿದ್ದೇನೆ.

ಸಣ್ಣವನಿದ್ದಾಗ ಅಜ್ಜಿಯೊಂದಿಗೆ ವಾಸು ಚಿಕ್ಕಪ್ಪನ ಮನೆಗೆ ಪ್ರತಿದಿನವೂ ನನ್ನ ಸವಾರಿ ಹೋಗುತ್ತಿತ್ತು. ತುಂಬು ಚಟುವಟಿಕೆಯಿಂದ ಸದಾ ಕ್ರಿಯಾಶೀಲರಾಗಿರುತ್ತಿದ್ದ ಚಿಕ್ಕಪ್ಪನ ದರ್ಶನವಾಗುತ್ತಿದ್ದುದು ರಜಾದಿನಗಳಲ್ಲಿ ಮಾತ್ರ. ಪ್ರತಿದಿನ ಕಾರ್ಯಕ್ರಮ, ರೆಕಾರ್ಡಿಂಗ್, ವರದಿ ಇತ್ಯಾದಿ. ಹಾಗಾಗಿ ಮನೆಯಲ್ಲಿ ಇರುತ್ತಿದ್ದುದೇ ಅಪರೂಪ. ಹಾರ್ಮೋನಿಯಂ ಎದುರು ಕುಳಿತರೆ ಶ್ರುತಿಯೊಂದಿಗೆ ಸಪ್ತಸ್ವರಗಳ ಏರಿಳಿತ, ಆರೋಹಣ, ಅವರೋಹಣ, ಮಧುರ ಆಲಾಪನೆ. ಶುದ್ಧ ಸಾಹಿತ್ಯಬದ್ಧ ಗಾಯನ. ಅಂದಿನ ದಿನಗಳ ನೆನಪು ಇಂದಿಗೂ ಮಾಸದು. ಈಗಲೂ ಉಡುಪಿಯ ಮನೆಗೆ ಹೋದಾಗ ಅದೇ ಶ್ರುತಿ, ಅದೇ ಸಾಹಿತ್ಯ, ಗಾಯನ. ಕಲಾವಿದರಿಗೆ ಅಗತ್ಯವಾದ ಸತತ ಅಭ್ಯಾಸ, ಪರಿಶ್ರಮ. ಹಾಗಿದ್ದಾಗ ಮಾತ್ರ ಯಶಸ್ಸಿ ಎಂಬ ಸೂತ್ರವನ್ನು ಅಕ್ಷರಶಃ ಪಾಲಿಸಿದ, ಪಾಲಿಸುತ್ತಿರುವ ಅಪ್ಪಟ ಕಲಾವಿದ ನಮ್ಮ ವಾಸು ಚಿಕ್ಕಪ್ಪ.

ಮೆಡಲಿನ್ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿದ್ದಾಗಲೂ ಸಂಜೆಯ ವೇಳೆಗೆ ಉಡುಪಿಯ ಸುತ್ತಮುತ್ತ ಅಲ್ಲಲ್ಲಿ ಚಿಕ್ಕಪ್ಪನ ಸಂಗೀತ ಕ್ಲಾಸುಗಳು ನಡೆಯುತ್ತಿದ್ದವು. ಮೊದಲಿಗೆ ತೆಂಕಪೇಟೆಯ ಕವಲೊಡೆದ ಓಣಿಯೊಂದರಲ್ಲಿ ಇವರ ಸಂಗೀತ ಶಾಲೆಯಿದ್ದಿತ್ತು. ಅನಂತರ ಚಿತ್ತರಂಜನ ಸರ್ಕಲ್, ಕೊಳದಪೇಟೆಗೆ ವರ್ಗವಾಯಿತು.

1970 - 80ರ ದಶಕದಲ್ಲಿ ಒಂದಿಷ್ಟು ದಿನ ತನ್ನದೇ ಆದ ನಾಟಕ ಕಂಪೆನಿ ಕಟ್ಟಿಕೊಂಡು ಉಡುಪಿ ಪರಿಸರದ ಕಲಾಭಿಮಾನಿಗಳಿಗೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳ ಮೂಲಕ ರಂಗಭೂಮಿಯತ್ತ ಆಸಕ್ತಿ ಕುದುರಿಸುವಲ್ಲಿ ಸಹಕಾರಿಯಾಗಿದ್ದರು. ನಾಟಕ ಕಂಪೆನಿ ನಷ್ಟವಾದಾಗ, ಪರದೆ, ಸೆಟ್ಟಿಂಗ್, ಡ್ರೆಸ್ ಇತ್ಯಾದಿ ಅವರ ಮನೆಯಂಗಳಕ್ಕೆ ಬಂದು ಬಿದ್ದಿತ್ತು. ಆ ಒತ್ತಡದಲ್ಲಿ ಕೂಡ ರಾಜನ ಕಿರೀಟಗಳಲ್ಲಿ ಒಂದನ್ನು ತಮ್ಮ ತಲೆಯ ಮೇಲಿರಿಸಿಕೊಂಡು,

ಮತ್ತೊಂದನ್ನು ನನ್ನ ತಲೆಯ ಮೇಲಿರಿಸಿ, ಪೌರಾಣಿಕ ನಾಟಕವೊಂದರ ತುಣುಕನ್ನು ವಾಸು ಚಿಕ್ಕಪ್ಪ ಆಡಿ ತೋರಿಸುತ್ತಿದ್ದರು.

ಧೀಮಂತ ವ್ಯಕ್ತಿತ್ವದ ವಾಸು ಚಿಕ್ಕಪ್ಪ ಬಿಳಿ ವೇಷ್ಟಿ, ಬಿಳಿ ಜುಬ್ಬಾ ಧರಿಸಿ ಸದಾ ಶ್ವೇತ ವಸ್ತ್ರಧಾರಿಯಾಗಿಯೇ ಕಾಣಿಸಿಕೊಳ್ಳುವವರು. ಅವರ ಉಡುಪಿನಂತೆಯೇ ಅವರ ಮಾತು, ನಡೆ ಎಲ್ಲವೂ ಸರಳ.

ಇತ್ತೀಚೆಗೆ ನಮ್ಮೂರಿಗೆ ಕ್ಷೇತ್ರದರ್ಶನಗೈಯಲು ಬಂದಿದ್ದ ವಾಸು ಚಿಕ್ಕಪ್ಪ ನಮ್ಮ ಮನೆಗೂ ಸಣ್ಣದೊಂದು ಭೇಟಿ ಕೊಟ್ಟು, ನಮ್ಮಲ್ಲಿ ಹರುಷ ಮೂಡಿಸಿದರು. ಅದೇ ನಲವತ್ತು ವರ್ಷದ ಹಿಂದಿನ ವಾಸು ಚಿಕ್ಕಪ್ಪನನ್ನೇ ಕಂಡಂತಾಗಿತ್ತು. ಸರಳ ಮಾತು; ನಡೆ-ನುಡಿಗಳೆಲ್ಲ ಸಂಗೀತಮಯ; ವ್ಯಕ್ತಿತ್ವವೇ ನಾದಮಯ. ಮರೆಯಲಾಗದ ಮಹಾನ್ ವ್ಯಕ್ತಿತ್ವ ವಾಸು ಚಿಕ್ಕಪ್ಪ.

ಬಂಧುತ್ವ - ಆತ್ಮೀಯತೆ

ಕೆ. ಜಿ. ರಾಮಚಂದ್ರ

ಅಂದು 30-5-1997, ಶುಕ್ರವಾರ. ಬೆಳಿಗ್ಗೆ ಏಳೂವರೆಯ ಹೊತ್ತಿಗೆ ಒಂದು ದೂರವಾಣಿ ಕರೆ. ಆಕಡೆಯಿಂದ "ನಾನು ಉಡುಪಿ ವಾಸುದೇವ ಭಟ್ ಮಾತಾಡ್ತ ಇರೋದು. ನಿಮ್ಮನ್ನು ಭೇಟಿಯಾಗಬೇಕಾಗಿದೆ. ಈಗ ಬರಬಹುದೇ?" ಎಂದರು. "ಆದೀತು, ಒಂಭತ್ತೂವರೆಗೆ ನಾನು ಕೆಲಸಕ್ಕೆ ಹೋಗಬೇಕಾಗುತ್ತದೆ" ಎಂದೆ. "ನಾನೀಗ ಶ್ರೀನಿವಾಸ ತಂತ್ರಿಯವರ ಮನೆಯಲ್ಲಿದ್ದೇನೆ. ಕೂಡ್ಲೆ ಹೊರಡುತ್ತೇನೆ" ಎಂದರು. ನಜರ್‌ಬಾದ್‌ನಲ್ಲಿರುವ ನಮ್ಮ ವಾಸಸ್ಥಳಕ್ಕೆ ಬರುವ ಮಾರ್ಗವನ್ನು ತಿಳಿಸಿದೆ. ಸ್ವಲ್ಪ ಸಮಯದಲ್ಲಿಯೇ ಶುದ್ಧ ಶ್ವೇತಾಂಬರಧಾರಿಯೊಬ್ಬರು ಪ್ರತ್ಯಕ್ಷರಾದರು. ಅವರ ಮುಖಮಂಡಲ, ಅದರಲ್ಲಿ ವಿಶಿಷ್ಟವಾಗಿ ಕಾಣುವ ಮೂಗು, ವಿಶಿಷ್ಟ ರೀತಿಯ ಧ್ವನಿ ಅವರು ಕುಶಾಗ್ರಮತಿ ಎಂಬುದನ್ನು ಸೂಚಿಸುತ್ತಿತ್ತು. ಪರಸ್ಪರ ನಮಸ್ಕಾರ, ಸ್ವಾಗತದ ಮಾತಾದ ಬಳಿಕ ನನ್ನ ಮತ್ತು ನನ್ನ ಹೆಂಡತಿಯ ವಾಸ್ತವ ಪರಿಚಯ ಹೇಳುತ್ತಿರುವಾಗಲೆ ನನ್ನ ಅಳಿಯ ವಿಶ್ವನಾಥ ರಾಯರು ಒಳಗೆ ಬಂದರು. ಅತಿಥಿಯ ಪರಿಚಯ ಮಾಡಿಸಿ ಅವರು ಬಂದ ವಿಷಯ ಪ್ರಸ್ತಾಪಿಸಿದರು. ಅವರು (ಅತಿಥಿಗಳು) ಒಂದು ಚಿಟಿಕೆಯಷ್ಟು ಪ್ರೇರಣಾಚೂರ್ಣವನ್ನು ನಾಸಿಕ ರಂಧ್ರಗಳಲ್ಲಿ ಸೇರಿಸಿ ಸಂಕ್ಷಿಪ್ತವಾಗಿ ಮಗಳ ಗುಣ, ರೂಪ, ನಕ್ಷತ್ರ, ಕಾರ್ಯ ಚಟುವಟಿಕೆಗಳನ್ನು ತಿಳಿಸಿದರು. "ನನ್ನ ಮಗ ನಿಮ್ಮ ಮಗಳನ್ನು ನೋಡಿದ್ದಾನೆಂದು ವಿಶ್ವನಾಥ ರಾಯರು ಹೇಳಿದರು. ಅವನ ಮೌನವನ್ನು ಸಮ್ಮತಿ ಸೂಚಕವೆಂದು ಭಾವಿಸಿದ್ದೇವೆ" ಎನ್ನುವಷ್ಟರಲ್ಲಿ ನನ್ನ ಮಗ ಮಂದಸ್ಮಿತನಾಗಿ ಅಲ್ಲಿಗೆ ಬಂದ. ನಾನಂದೆ, "ಆಗಬಹುದು, ಎಲ್ಲಾ ಅನುಕೂಲವಾಗಿಯೇ ಕಾಣುತ್ತಿದೆ. ಇದೇ ಬರುವ ಜ್ಯೇಷ್ಠ ಶುಕ್ಲ ದಶಮಿಯ ದಿನ ವಿವಾಹಕ್ಕೆ ಶುಭಮುಹೂರ್ತವಿದೆ. ನಿಮಗೆ ಒಪ್ಪಿಗೆಯಾಗುವುದಾದರೆ ವ್ಯವಸ್ಥೆ ಮಾಡಲು ಸಾಧ್ಯವಾಗುವುದಾದರೆ 15-6-1997 ಭಾನುವಾರ ವಿವಾಹಕ್ಕೆ ಅನುಕೂಲ ಮಾಡಿಕೊಳ್ಳಬಹುದು. ನಿಶ್ಚಿತಾರ್ಥ ಇತ್ಯಾದಿ ಅನಾವಶ್ಯಕ ಕಾರ್ಯಕ್ರಮಗಳು ಅಗತ್ಯವಿಲ್ಲ" ಎಂದೆ.

"ನಿಮ್ಮ ಸಹಕಾರ ಇದ್ದರೆ ಆ ದಿನದ ಮುಹೂರ್ತವೇ ಆದೀತು" ಎಂದರು. "ನಮ್ಮ ಸಹಕಾರ ಎಂದರೆ, ನಾವು ನಿಮ್ಮ ಕೈ ಕಡೆ ನೋಡುವವರಲ್ಲ. ದಕ್ಷಿಣೆ ಉಪಚಾರಾದಿಗಳ ಅಗತ್ಯವಿಲ್ಲ. ಸರಳ ರೀತಿಯಲ್ಲಿ ವಿವಾಹದ ವ್ಯವಸ್ಥೆ ಮಾಡಿದರೆ ಸಾಕು. ನಿಮಗೆ ಕಾಲಾವಕಾಶ ಬೇಕಾಗಬಹುದೋ ಏನೋ?" ಎಂದೆ.

"ಹಾಗೇನಿಲ್ಲ, ನಾನು ಒಂಟಿಯಲ್ಲ. ನನ್ನ ಮಕ್ಕಳು ಅಳಿಯಂದಿರು, ಪ್ರಭಾಕರ ರಾಯರು ಮುಂತಾದ ಆತ್ಮೀಯರು ಮತ್ತು ಬಂಧುಗಳು ನನ್ನ ಸಹಾಯಕ್ಕೆ ಸಿದ್ಧರಾಗಿದ್ದಾರೆ" ಎಂದರು.

ಈ ರೀತಿ ಪ್ರಾರಂಭವಾದ ಪರಿಚಯ 15-6-1997 ಭಾನುವಾರದಂದು ಬಾಂಧವ್ಯದಲ್ಲಿ ಪರಿವರ್ತನೆಯಾಯಿತು. ಕೇವಲ ಹತ್ತೇ ದಿನದಲ್ಲಿ ಚೆನ್ನಾಗಿ, ವ್ಯವಸ್ಥಿತವಾಗಿ ಮಗಳ ವಿವಾಹ ಮಂಗಳ ಕಾರ್ಯವನ್ನು ನೆರವೇರಿಸಿ ಯಶಸ್ವಿಯಾದರು ಎಂಬುದು ಶ್ಲಾಘನೀಯ!

ಒಮ್ಮೆ ನಾವಿಬ್ಬರು ಕುಳಿತು ಏನೋ ಮಾತಾಡುತ್ತಿದ್ದೆವು. ನಾನು ವಾಸುದೇವ ಭಟ್ಟರನ್ನು ಕೇಳಿದೆ, "ನೀವು ಪ್ರತಿಭಾಸಂಪನ್ನ ಸಂಗೀತ ವಿದ್ವಾಂಸರು, ಡಾ. ಪಿ. ಬಿ. ಶ್ರೀನಿವಾಸ್ ಸಂಪರ್ಕದಲ್ಲಿದ್ದವರು, ಮೈಸೂರಿನ ಬಿಡಾರಂ ಕೃಷ್ಣಪ್ಪನವರ ಪರಂಪರೆಗೆ ಸೇರಿದವರು ಎಂದು ಕೇಳಿದ್ದೇನೆ. ಸಮಾಜದಲ್ಲಿ ಗಣ್ಯಾತಿಗಣ್ಯ ವ್ಯಕ್ತಿಗಳಿಗೆ ಸುಗಮ ಸಂಗೀತವನ್ನು ಕ್ಷಿಪ್ರವಾಗಿ ಕಲಿಸುತ್ತಿದ್ದೀರಿ. ಈ ಸಂಗೀತ - ನೃತ್ಯ ಕ್ಷೇತ್ರಕ್ಕೆ ನಿಮ್ಮ ಕೊಡುಗೆ ಏನು?" ಎಂದೆ. ಅದಕ್ಕೆ ಅವರು, ಅದುವರೆಗಿನ ತಮ್ಮ ಸಾಧನೆಯನ್ನು ವಿವರಿಸಿ, ಏಸುಕ್ರಿಸ್ತನನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿದ್ದು, ಕ್ರಿಸ್ತನ ಜೀವನವನ್ನು ಆಧರಿಸಿ 20ಕ್ಕೂ ಹೆಚ್ಚು ಬ್ಯಾಲೆಗಳನ್ನು ಮಾಡಿದ್ದು, ಮತ್ತು 'ಭುವನಜ್ಯೋತಿ' ಎಂಬ ಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆ ಬರೆದು ಸಂಗೀತ ನಿರ್ದೇಶನ ಮಾಡಿ, ಅದರಲ್ಲಿ ಪಾತ್ರವಹಿಸಿದ್ದು ಸಹ ವಿವರಿಸಿದರು. 90ಕ್ಕೂ ಹೆಚ್ಚು ಕ್ಯಾಸೆಟ್, ಎಲ್.ಪಿ. ರೆಕಾರ್ಡ್ ಮತ್ತು ಸಿ.ಡಿ.ಗಳನ್ನು ಸಂಗೀತ ನಿರ್ದೇಶನದ ಮೂಲಕ ಸಂಗೀತ ಲೋಕಕ್ಕೆ ಕೊಟ್ಟಿದ್ದನ್ನು ಸಹ ವಿವರಿಸಿದರು. ಮುಂದೆ ನಿಮ್ಮ ಸಾಧನೆಯ ಮಾರ್ಗ ಯಾವುದು ಎಂದೆ. ಅದಕ್ಕೆ ಅವರು ನಾದಚಿಕಿತ್ಸೆಯ ಮೂಲಕ ತಾವು ಮಾಡಬೇಕೆಂದಿರುವ ವಿಶೇಷ ಪ್ರಯೋಗವನ್ನು ವಿವರಿಸಿದರು. ಮಾನಸಿಕ ಗೊಂದಲ ಅಥವಾ ಅಸಮತೋಲನದಿಂದಾಗುವ ಹಲವು ನ್ಯೂನತೆಗಳನ್ನು ನಿವಾರಿಸಿ ಚಿಕಿತ್ಸೆ ಮಾಡುವ ವಿಧಾನದ ಬಗ್ಗೆ ವಿವರಿಸಿ ಸಂಶೋಧನೆ ಮಾಡುವ ಅಪೇಕ್ಷೆ ವ್ಯಕ್ತಪಡಿಸಿದರು. ಆಗ ನನ್ನ ಬಳಿ ಇದ್ದ ದಾಸಸಂಪುಟಗಳನ್ನು ಮತ್ತು ಶ್ರೀ ಪುಟ್ಟಸ್ವಾಮಿಯವರ ಲಲಿತಾ ಉಪಾಖ್ಯಾನ, ಸೌಂದರ್ಯ ಲಹರಿಯ ಪದ್ಯರೂಪಗಳ ಪುಸ್ತಕಗಳನ್ನು ಅವರಿಗೆ ಕೊಟ್ಟೆ. ನಿಮ್ಮ ಸಂಶೋಧನೆಗೆ ಮತ್ತು ನಾದಾಭಿಯಾನಕ್ಕೆ ಇವುಗಳಿಂದ ಸಹಾಯವಾದರೆ ಸಂತೋಷವೆಂದೆ.

ಇನ್ನೊಂದು ಸಂದರ್ಭದಲ್ಲಿ ಶ್ರೀ ಭಟ್ಟರು ನಮ್ಮಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸಮಯ: "ನಿಮ್ಮ ಪ್ರಯೋಗದಲ್ಲಿ ಇದುವರೆಗೂ ಹಲವಾರು ಪ್ರಸಿದ್ಧ ಕವಿಗಳ ಕವಿತೆಗಳಿಗೆ, ಭಾವಗೀತೆಗಳಿಗೆ ರಾಗಸಂಯೋಜನೆ ಮಾಡಿದ್ದೀರಿ ಎಂದು ಕೇಳಿದ್ದೇನೆ. ನಿಮ್ಮ ನೆಚ್ಚಿನ ಕವಿಗಳು ಯಾರು?" ಎಂದೆ. ಅದಕ್ಕೆ ಅವರು ರಾಷ್ಟ್ರಕವಿ, ಕರ್ನಾಟಕ ರತ್ನ ಕುವೆಂಪು, ಶ್ರೀ ದ. ರಾ. ಬೇಂದ್ರೆ, ಶ್ರೀ ಗೋಪಾಲಕೃಷ್ಣ ಅಡಿಗರು, ಜಿ. ಎಸ್. ಶಿವರುದ್ರಪ್ಪನವರು, ಕುರಾಡಿ ಸೀತಾರಾಮ ಅಡಿಗರು, ಪಳಕಳ ಸೀತಾರಾಮ ಭಟ್ಟರು, ಡಾ. ನಾ. ಮೊಗಸಾಲೆ, ಅಂಶುಮಾಲಿ ಮುಂತಾಗಿ ತಾವು ಮೆಚ್ಚಿದ ಕವಿಗಳ ಪಟ್ಟಿಯನ್ನು ತೆರೆದಿಟ್ಟರು. ಇಷ್ಟೇ ಅಲ್ಲ, ಪ್ರಸಿದ್ಧರ ಹಲವಾರು ಕೃತಿಗಳನ್ನು ನೂರರ ಸಂಖ್ಯೆಯಲ್ಲಿ ಕೊಂಡು ತಮ್ಮ ಆತ್ಮೀಯರಿಗೆ, ಸಹೃದಯರಿಗೆ ಉಡುಗೊರೆಯಾಗಿ ಕೊಡುತ್ತಿರುವುದನ್ನು ಸ್ಮರಿಸಿಕೊಂಡರು.

ನಾವು ಹಲವಾರು ಬಾರಿ ಒಟ್ಟಾಗಿ ಕಲೆತು ಮಾತನಾಡಿ ಒಬ್ಬರನ್ನೊಬ್ಬರು ಅರಿತು ಅರ್ಥ ಮಾಡಿಕೊಳ್ಳುವ ಅವಕಾಶಗಳು ಬಂದವು. ಸಮಾನ ಆಸಕ್ತಿ, ಸಮಾನ ಮನೋಭಾವ, ಸಹಸ್ಪಂದನದ ಮೂಲಕ ಬಾಂಧವ್ಯಕ್ಕೂ ಮಿಗಿಲಾಗಿ ಆತ್ಮೀಯರಾದೆವು.

ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ

(ಭಗವದ್ಗೀತೆ ಅಧ್ಯಾಯ 3 ಶ್ಲೋಕ 11 ಉತ್ತರಾರ್ಧ)

ಪರ್ವ : ಎರಡು

ಸುನಾದ ವಿನೋದಿನಿ

ಸಾಮವೇದಾದಿ ಸಂಗೀತಮ್

ಡಾ। ವಿ. ಎಸ್. ಸಂಪತ್ಕುಮಾರಾಚಾರ್ಯ

ಸಾಮಜಾಲ ಜಲಾಕೀರ್ಣಂ ಛಂದಃ ಕಲ್ಲೋಲ ಸಂಕುಲಂ ।
ತಂತ್ರಗ್ರಾಹಾನ್ವಿತಂ ವಂದೇ ಸಾಮವೇದ ಮಹಾರ್ಣವಂ ॥

ವೇದವೆಂದರೆ ಜ್ಞಾನ. ಇದು ಸತ್, ಚಿತ್, ಆನಂದವನ್ನು ಸೂಚಿಸುವುದರಿಂದ 'ಸಚ್ಚಿದಾನಂದ' ಎಂದಾಗುತ್ತದೆ. ಚತುರ್ವಿಧ ಪುರುಷಾರ್ಥಗಳಲ್ಲಿ ಅರ್ಥ ಮತ್ತು ಕಾಮಗಳನ್ನು ಲೌಕಿಕ ವ್ಯವಹಾರದಿಂದ ತಿಳಿಯಬಹುದು. ಆದರೆ ಧರ್ಮ ಮತ್ತು ಮೋಕ್ಷಗಳಿಗೆ ಅಪೌರುಷೇಯವಾದ ವೇದ ವಿದ್ಯೆಯೇ ಸಾಧಕವೆಂದು ಆದಿಶಂಕರಾಚಾರ್ಯರು ಹೇಳಿದ್ದಾರೆ. ವೇದವು ಒಂದೇ ಆದರೂ ವಿನಿಯೋಗದ ದೃಷ್ಟಿಯಿಂದ ಋಗ್, ಯಜುಸ್, ಸಾಮ ಮತ್ತು ಅಥರ್ವವೆಂದು ವಿಭಾಗಿಸಿ ಮಹರ್ಷಿ ವ್ಯಾಸರು ವೇದವ್ಯಾಸರೆನಿಸಿಕೊಂಡರು. ಸಾಮವು ಬ್ರಹ್ಮವಸ್ತುವಿನ ತೇಜಸ್ಸನ್ನು ಸೂಚಿಸುತ್ತದೆ. (ವೇದಾನಾಂ ಸಾಮವೇದೋಸ್ಮಿ) ಇತರ ವೇದಗಳಿಗೆ ಸಂಬಂಧಿಸಿದಂತೆ ಸಾಮವೇದಕ್ಕೆ ಸಂಬಂಧಿಸಿದ ಗ್ರಂಥಗಳಿವೆ.

ಸಾಮವೆಂದರೆ ಹಾಡು. 'ಸಾ' ಎಂಬುದು ಋಕ್ ಅಥವಾ ವಾಕ್ಕನ್ನೂ ಅಮ ಎಂಬುದು ಸ್ವರ ಅಥವಾ ಪ್ರಾಣ-ಜೀವಶಕ್ತಿಯನ್ನು ಸೂಚಿಸುತ್ತವೆ. ಇವೆರಡೂ ಪರಸ್ಪರಾವಲಂಬಿಗಳು. ತಿಳಿದ ಸ್ವರಗಳಿಂದ ವಿಸ್ತರಿಸುವುದು ಸಾಮಕ್ಕೆ ಆಶ್ರಯ. ಸಾಮವೇದವು ಉದ್ಗಾತೃ ಎಂಬುವನು ಹಾಡಲು ಸಿದ್ಧವಾದ ವೇದ. ಋಗ್ವೇದದ ಋಕ್‌ಗಳು ಸಾಮವೇದದ ಮೂಲ ಸಾಮಗ್ರಿ. ಸಾಮವೇದದ 104 ಮಂತ್ರಗಳನ್ನು ಬಿಟ್ಟರೆ ಮಿಕ್ಕೆಲ್ಲವೂ ಋಗ್ವೇದವೇ ಆಗಿವೆ. ಋಗ್ವೇದದ ಮಾತು ಸಾಮವೇದದ ಧಾತು. ಸಂಗೀತವನ್ನು ಮಾರ್ಗೀ ಮತ್ತು ದೇಶೀ ಎಂಬ ಎರಡು ಬಗೆಗಳಾಗಿ ಹೇಳುವುದು ರೂಢಿ. ಮಾರ್ಗೀ ಸಂಗೀತಕ್ಕೆ ಸಾಮವೇದವು ಆಕರ. ಸಂಗೀತ ಅಥವಾ ಗಾಂಧರ್ವ ವೇದವು ಸಾಮವೇದದ ಉಪವೇದವೆನಿಸಿಕೊಂಡಿದೆ. ಸಾಮವೇದದ ಋಕ್‌ಗಳು ಹೆಚ್ಚಾಗಿ ಗಾಯತ್ರೀ ಛಂದಸ್ಸಿನಲ್ಲಿವೆ.

ಸಾಹಿತ್ಯವನ್ನು ಗಾನಕ್ಕೆ ಅಳವಡಿಸಿ ಹಾಡುವಾಗ ಕೆಲವು ಮಾರ್ಪಾಡುಗಳಾಗುವುದು ಸಹಜ. ಇವುಗಳಿಗೆ ಸಾಮವಿಕಾರಗಳೆಂದು ಹೆಸರು. ಕೆಲವು ವೇಳೆ ಪದಗಳು ಗುರುತಿಸಲಾಗದಷ್ಟು ಬದಲಾವಣೆ ಹೊಂದುತ್ತವೆ. ಇವಲ್ಲದೆ ಸ್ವರಗಳು, ವ್ಯಂಜನಗಳು, ಅರ್ಥವಿಲ್ಲದ ಶಬ್ದಗಳು, ಹೊಸ ಪದಗಳು ಬರುತ್ತವೆ. ಸಾಮಗಾನದಲ್ಲಿ ಅ, ಇ, ಒ, ಔ, ಹ, ಹೋ, ಹಾಉ, ಉಹಾ, ಹಿಂ, ತಾಯೋ, ಹಸ್, ಹುಪ್ ಇತ್ಯಾದಿಗಳು ಬರುತ್ತವೆ. ನಮ್ಮ ಶಾಸ್ತ್ರೀಯ ಸಂಗೀತದಲ್ಲಿ ಅ, ಇ, ಒ, ತ, ನಂ ಇತ್ಯಾದಿಗಳನ್ನು ಬಳಸುವುದನ್ನು ಇಲ್ಲಿ ಸ್ಮರಿಸಬಹುದು. ಈ ಅರ್ಥರಹಿತವಾದ ಶಬ್ದಗಳಿಗೆ ಸ್ತೋಭಗಳೆಂದು ಹೆಸರು. ಇವು ಸಾಮಗಾನದಲ್ಲಿ ಋಚೆಗಳು

ಆರು ಬಗೆಯ ವಿಕಾರಗಳನ್ನು ಹೊಂದಿರುತ್ತವೆ. ಅಗ್ನ ಎಂಬುದು ಓಗ್ನಾಯಿ, ವೀತಯೇ ಎಂಬುದು ಓಯ್ ತೋಯಾಯ್ ಔಹೊವಾ, ಹಾಉವಾ, ಓ ಇಡಾ, ಹಿಂ ಮಾ ಇತ್ಯಾದಿ.

ಸಾಮಗಾನದಲ್ಲಿ ಗಾನಕ್ರಿಯೆ ಮುಖ್ಯವಾದುದು. ಇಲ್ಲಿ ವ್ಯಾಕರಣ, ಛಂದಸ್ಸು ಇತ್ಯಾದಿಗಳ ನಿಯಮಗಳನ್ನು ಮೀರಿದುದು ಸಾಮಗಾನ. ಕೆಲವು ಸಲ ಗಾನವಶದಿಂದ ಪದಗಳು ಭಂಗಗೊಂಡರೆ ಅದನ್ನು ದೋಷವೆಂದು ಭಾವಿಸಕೂಡದು. ಹಾಗೆಂದು ಅನಾವಶ್ಯಕವಾಗಿ ಹಾಡುಗಳ ಸಾಹಿತ್ಯವನ್ನು ಗಾಯಕರು ವಿರೂಪಗೊಳಿಸಬಾರದು.

ಗ್ರಾಮಗೇಯ

ಹಳ್ಳಿಗಳಲ್ಲಿ, ಸಭ್ಯರ ಮುಂದೆ ಸಂದರ್ಭೋಚಿತವಾಗಿ ಹಾಡುವುದು. ಇವು ಈಗಿನ ಭಜನೆ, ಸಂಕೀರ್ತನೆ ಇತ್ಯಾದಿಗಳಿರುವಂತೆ. ಇದರಲ್ಲಿ ಬಳಸಲಾಗುವ ರಾಗಗಳು ಊಹಗಾನದ ರಾಗಗಳು. ಊಹ್ಯವೆಂದರೆ ಹಿಂದೆ ಇರದಿದ್ದುದನ್ನು ಹೊಸದಾಗಿ ಎತ್ತಿ ತೋರಿಸುವುದು. ಇದರಲ್ಲಿ ಪ್ರಕೃತಿ ಮತ್ತು ವಿಕೃತಿ ಸ್ವರಗಳ ಬಳಕೆಯಿತ್ತು. ಇದು ಮನೋಧರ್ಮ ಸಂಗೀತದಂತೆ. ಒಂದೇ ಋಕ್ಕನ್ನು ಸರಳವಾಗಿ ಪ್ರೌಢವಾದ ರೀತಿಯವರೆಗೆ ಹಾಡುತ್ತಿದ್ದರು. ಒಂದೇ ಹಾಡನ್ನು ಸರಳವಾಗಿ, ಸಂಗತಿಗಳು ಮತ್ತು ಗಮಕಗಳೊಡನೆ ಹಾಡುವುದನ್ನು ಈಗಿನ ಸಂಗೀತ ಪದ್ಧತಿಗೆ ಹೋಲಿಸಬಹುದು. ಉದ್ಗಾತೃ ಸಾಮವನ್ನು 2ರಿಂದ 7 ಋಕ್‌ಗಳನ್ನು ಒಂದೇ ರಾಗದಲ್ಲಿ ಹಾಡುತ್ತಿದ್ದನು. ಆ ವರ್ಗಕ್ಕೆ ಸೇರಿದ ಇತರ ಋಕ್‌ಗಳನ್ನು ಅದೇ ರಾಗದಲ್ಲಿ ಹಾಡಲಾಗುತ್ತಿತ್ತು. ಪಲ್ಲವಿ, ಅನುಪಲ್ಲವಿ ಮತ್ತು ಮೊದಲ ಚರಣದ ಸಾಹಿತ್ಯ ಮತ್ತು ಸ್ವರಲಿಪಿಯನ್ನು ಕೊಟ್ಟು, - ಇತರ ಚರಣಗಳ ಸಾಹಿತ್ಯವನ್ನು ಮಾತ್ರ ಕೊಟ್ಟು - ಮೇಲಿನ ಚರಣದಂತೆಯೇ ಎಂದು ಸೂಚಿಸುವ ಈಗಿನ ಸ್ವರಲಿಪಿ ಪದ್ಧತಿಗೆ ಇದನ್ನು ಹೋಲಿಸಬಹುದು.

ಸಾಮಗಾಯಕನು ವೀಣೆಯೊಂದಿಗೆ ಗಾನಮಾಡುತ್ತಿದ್ದನು. ಕಾಲಕ್ರಮದಲ್ಲಿ ಅವಶ್ಯಕತೆಗೆ ತಕ್ಕಂತೆ 7 ತಂತಿಗಳ ಚಿತ್ರವೀಣಾ, ಶತತಂತ್ರೀ - ಕಾತ್ಯಾಯನ ವೀಣೆ ಉಂಟಾದುವು. ವ್ಯಾಖ್ಯಾಗಾನ ಅಥವಾ ಕಾವ್ಯಗಳ ಶ್ಲೋಕಗಳನ್ನು ಹಾಡಲು 9 ತಂತಿಗಳ ವಿಪಂಚಿ ವೀಣೆ, 21 ತಂತಿಗಳ ಮತ್ತ ಕೋಕಿಲ ಮುಂತಾದ ಮೆಟ್ಟಿಲುಗಳಿಲ್ಲದ ವೀಣೆಗಳುಂಟಾದುವು. ವ್ಯಾಖ್ಯಾಗಾನವು ಈಗಿನ ಗಮಕವಾಚನ ಕಲೆಗೆ ಮೂಲವೆನ್ನಬಹುದು.

ಋಕ್‌ನ್ನು ಓಂಕಾರದಿಂದ ಆರಂಭಿಸಿ, ನಂತರ ಉದ್ಗೀಥ ಭಾಗವನ್ನು, ಕೊನೆಯ ಪದವನ್ನು ಹಿಡಿದು ಪ್ರತಿಹರ ಭಾಗವನ್ನೂ ಉಪದ್ರವದ ನಂತರ ಮೂವರು ಋತ್ವಿಕರೂ ಸೇರಿ ಮುಕ್ತಾಯ ಅಥವಾ ನಿಧನ ಭಾಗವನ್ನು ಹಾಡುವರು. ಹಿಂಕಾರವು ಆಧಾರ ಶ್ರುತಿ. ಈ ಪದ್ಧತಿಯು ನಮ್ಮ ಸಂಗೀತದ ಆಸ್ಥಾಯಿ, ಉದ್ಗ್ರಾಹ, ಅಂತರಾ, ಆಭೋಗ ಎಂದಾಯಿತು.

ಸಾಮಗಾನವು ಅವರೋಹಣ ಕ್ರಮದಲ್ಲಿದೆ ಎಂದು ವಿದ್ವಾಂಸರ ಅಭಿಪ್ರಾಯ. ಕಾಲಾನುಕ್ರಮದಲ್ಲಿ ನಾಲ್ಕು ಸ್ವರಗಳ ಜೊತೆಗೆ ಇತರ ಸ್ವರಗಳೂ ಸೇರಿ ಸಪ್ತಸ್ವರಗಳುಳ್ಳ ಮೇಳವಾಯಿತು. ಸ್ವರಗಳಿಗೆ 'ಯಮ' ಎಂಬ ಹೆಸರಿತ್ತು. ಖರಹರಪ್ರಿಯ ಮೇಳವು ಶುದ್ಧಮೇಳವೆಂದು ಪರಿಗಣಿಸಲ್ಪಟ್ಟು ರೂಢಿಯಲ್ಲಿತ್ತು. ಸಾಮವೇದದ ಸ್ವರಗಳನ್ನು ಮಂದ್ರ,

ಮಧ್ಯ, ತಾರ ಎಂಬ ಮೂರು ಸ್ಥಾಯಿಗಳಲ್ಲಿ ಅಡಗಿಸಿರುವುದು ಪ್ರತಿಶಾಖೆಯಲ್ಲಿ ಕಂಡುಬರುತ್ತದೆ. ಈಗ ಜೈಮಿನೀಯ, ಕೌಥುಮ ಮತ್ತು ರಾಣಾಯನೀಯ - ಈ ಮೂರು ಶಾಖೆಗಳು ಉಳಿದುಕೊಂಡಿವೆ. ಸಾಮಗಾನದಲ್ಲಿ ಬರುವ ಏಳು ಸ್ವರಗಳು ವಕ್ರಗತಿಯಲ್ಲಿದ್ದು ಕೊಳಲಿನ ಮಗರಿಸನಿದಪ ಎಂಬ ಸ್ವರಗಳನ್ನು ಹೋಲುತ್ತದೆ.

ಸಾಮವೇದದ ಸ್ವರಲಿಪಿಯು ಸಂಖ್ಯಾಸೂಚಕ. ಮೊದಲ ಅಕ್ಷರದ ಮೇಲಿರುವ ಸಂಖ್ಯಾಸೂಚಕ ಸ್ವರವೇ ಆ ಸಾಮದ ಆಧಾರ ಸ್ವರ. ಈ ಸಂಖ್ಯೆಗಳು ಮಾತ್ರ ಕಾಲಸೂಚಕ. ಸಾಮಗಾಯಕನು ತನ್ನ ಬಲ ಅಂಗೈಯ ಬೆರಳುಗಳ ರೇಖೆಗಳನ್ನು ಸಾಮದ ಸ್ವರಗಳನ್ನು ನೆನಪಿನಲ್ಲಿಟ್ಟು ಬಳಸುತ್ತಾನೆ. ಆದ್ದರಿಂದ ಬಲಗೈಯನ್ನು ಗಾತ್ರವೀಣಾ ಎಂದಿದ್ದಾರೆ.

ಸಾಮಗಾನದಲ್ಲಿ ಸ್ವರಗಳ ಕುಣಿತವು ಛಂದಸ್ಸಿನ ರೂಪದಲ್ಲಿ ವ್ಯಕ್ತವಾಗಿದೆ. ಇವು ಮಾತ್ರೆಗಳನ್ನು ಅವಲಂಬಿಸಿವೆ. ಈ ಸ್ವರವಿನ್ಯಾಸವು ತಾಳಕ್ಕೆ ಎಡೆಮಾಡಿಕೊಟ್ಟಿದೆ ಎನ್ನಬಹುದು. ಒಂದೊಂದು ಸಾಮವೂ ಬೇರೆ ಬೇರೆ ಸ್ವರಗಳಿಂದ ಪ್ರಾರಂಭವಾಗಿರುವುದರಿಂದ ಇದು ಮೂರ್ಛನ ಪದ್ಧತಿಗೆ ಆಧಾರವಾಗಿ, ಜಾತಿಗಳು, ಅವುಗಳಿಂದ ರಾಗಗಳಿಗೆ ದಾರಿಯಾಗಿ, 51 ತಾನಗಳಿಗೆ ದಾರಿಯಾಯಿತು.

ಹಾಡುವ ಕಾಲದ ಉಷ್ಣಾಂಶ, ಅನುಕೂಲ, ಪ್ರತಿಕೂಲಗಳ ದೃಷ್ಟಿಯಿಂದ ಸಾಮಗಳ ಗಾನವನ್ನು ಕಾಲಾನುಕ್ರಮವಾಗಿ ವರ್ಗೀಕರಿಸಿದರು. ಈ ಕ್ರಮವು ನಮ್ಮ ಸಂಗೀತ ಪದ್ಧತಿಯಲ್ಲಿದೆ. ಬೆಳಗಿನ ವೇಳೆ, ಮುಂಜಾನೆ, ಮಧ್ಯಾಹ್ನ, ಸಂಜೆ, ರಾತ್ರಿ ಮತ್ತು ಎಲ್ಲಾ ವೇಳೆಗಳಲ್ಲಿ ಹಾಡಬಹುದಾದ ರಾಗಗಳ ವರ್ಗೀಕರಣದ ಮೂಲವನ್ನು ಇಲ್ಲಿ ಕಾಣಬಹುದು.

ಒಟ್ಟಿನಲ್ಲಿ ಪಲ್ಲವಿ, ಅನುಪಲ್ಲವಿ, ಚರಣ - ಇವುಗಳ ಸ್ವರ ಲಿಪಿ ಪದ್ಧತಿ, ಗಮಕವಾಚನ, ಮನೋಧರ್ಮ ಸಂಗೀತ, ಆವರ್ತದ ಕಲ್ಪನೆ, ವಿಳಂಬ ಕಾಲದ ಎಣಿಕೆ, ಮೂರ್ಛನೆ, ತಾಳಪದ್ಧತಿ, ಜಾತಿ ಮತ್ತು ರಾಗಗಳ ಬೆಳವಣಿಗೆ ಇತ್ಯಾದಿಗಳ ಮೂಲವನ್ನು ನಾವು ಸಾಮವೇದದಲ್ಲಿ ಕಾಣಬಹುದು. ಆದ್ದರಿಂದಲೇ ಪ್ರತಿಯೊಂದು ಸಂಗೀತ ಶಾಸ್ತ್ರ ಗ್ರಂಥಗಳಲ್ಲಿ 'ಸಾಮವೇದಾದಿ ಸಂಗೀತಂ ಸಂಜಿಗ್ರಾಹ ಪಿತಾಮಹಃ' ಎಂದು ಹೇಳಿರುವುದಲ್ಲದೆ, ಸದ್ಗುರು ತ್ಯಾಗರಾಜಸ್ವಾಮಿಯು 'ಸಾಮನಿಗಮಜ ಸುಧಾಮಯ಼ ಗಾನ' ಎಂದು ಹಾಡಿದ್ದಾರೆ. ಇದಲ್ಲದೆ ಹೇಳಿದ್ದಾರೆ:

'ದೇಹದಿಂದ ಉದ್ಭವವಾಗುವ ನಾದವು ಪವಿತ್ರವಾದ ಪ್ರಣವಸ್ವರೂಪವಾಗಿದೆ' (ವರರಾಗಲಯಜ್ಞುಲು - ಚೆಂಚುಕಾಂಭೋಜಿ)

ಸಪ್ತಸ್ವರೈಸ್ಸಮಸ್ತಂ ಯೋ ಜಗದೇತಚ್ಚರಾಚರಂ
ಸಂಜೀವಯತಿ ವಿಶ್ವಾತ್ಮಾ ಸ ನೋ ವಿಷ್ಣುಃ ಪ್ರಸೀದತು

ಕರ್ನಾಟಕ ಸಂಗೀತದಲ್ಲಿ 'ವರ್ಣ'ದ ಪಾತ್ರ

✍ ಡಾ. ಸುಕನ್ಯಾ ಪ್ರಭಾಕರ್

ಕರ್ನಾಟಕ ಸಂಗೀತದಲ್ಲಿ 'ವರ್ಣ' ರಚನಾಪ್ರಕಾರವಾಗಿ ಅತಿಮುಖ್ಯ ಸ್ಥಾನವನ್ನು ಪಡೆದ, ಪ್ರಪಂಚದ ಮತ್ತಾವ ಸಂಗೀತ ಪದ್ಧತಿಯಲ್ಲೂ ಕಾಣಬರದಂತಹ ಒಂದು ವಿಶಿಷ್ಟ ಪ್ರಕಾರವಾಗಿದೆ. 'ವರ್ಣ' ಎಂಬ ಪದವನ್ನು ಅಮರಕೋಶವು ಹೀಗೆ ವಿವರಿಸುತ್ತದೆ:

ವರ್ಣೋ ದ್ವಿಜಾದೌ ಶುಕ್ಲಾದ್
ಸ್ತುತ್ಯಾವರ್ಣಂತು ವಾಕ್ಷರೇ

ದ್ವಿಜ (ಬ್ರಾಹ್ಮಣ) ಮುಂತಾದ ಜಾತಿಗಳು, ಬಿಳಿ ಮುಂತಾದ ಬಣ್ಣಗಳು, ಹೊಗಳು ಮತ್ತು ವರ್ಣಾಕ್ಷರ ಎಂಬುದಾಗಿ ಅರ್ಥೈಸುತ್ತದೆ. 'ವರ್ಣೋತಿ' ಎಂಬ ಕ್ರಿಯಾಪದದಿಂದ ಬಂದಿರುವಂಥದು - 'ವರ್ಣ'.

ರಚನಾಪ್ರಕಾರವಾಗಿ 'ವರ್ಣ' ತನ್ನ ಸ್ಥಾನವನ್ನು ಅಭ್ಯಾಸಗಾನದಲ್ಲಿ ಮಧ್ಯದಲ್ಲೂ ವೇದಿಕೆಯಲ್ಲಿ ಪ್ರಥಮದಲ್ಲೂ ಇರಿಸಿಕೊಂಡಿದೆ. ಮೊದಲ ಅಭ್ಯಾಸಪಾಠಗಳಾದ ಸರಳೆ, ಜಂಟಿವರಸೆ, ಅಲಂಕಾರ, ಗೀತೆ, ಜತಿಸ್ವರ, ಸ್ವರಜತಿಯ ಅನಂತರ ಅಭ್ಯಸಿಸುವ ಪ್ರಕಾರ 'ವರ್ಣ'. ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಕಲಿತು ಪಾಂಡಿತ್ಯವನ್ನು ಸಂಪಾದಿಸಬೇಕೆಂದು ಅಪೇಕ್ಷಿಸುವವನು ಅಮರಕೋಶದ ಮೊದಲ ಮೂರು ಕಾಂಡಗಳನ್ನು ಅವಶ್ಯಕವಾಗಿ ಹೇಗೆ ಅಭ್ಯಾಸ ಮಾಡಬೇಕೋ ಹಾಗೆಯೆ ಸಂಗೀತದಲ್ಲಿ ಪಾಂಡಿತ್ಯ ಸಂಪಾದಿಸಲು ನಿಘಂಟಿ (Dictionary)ನಂತಿರುವ ವರ್ಣದ ಅಭ್ಯಾಸ ಅತ್ಯಗತ್ಯ.

ಅಭ್ಯಾಸ ಗಾನವಾದ ಸ್ವರಾವಳಿಗಳೆಲ್ಲ ಮುಗಿದ ನಂತರ ಗೀತೆಗಳಿಗೆ ಸುಲಭವಾದ ಸ್ವರಾಕ್ಷರ ಸಾಹಿತ್ಯ ಪ್ರಾರಂಭವಾಗುತ್ತಾ ಹೋಗುತ್ತದೆ. ಅಂತೆಯೇ ಸ್ವಲ್ಪಮಟ್ಟಿನ ಲಯದಲ್ಲಿ ವ್ಯತ್ಯಾಸಮಾಡಿ ಸಾಹಿತ್ಯ-ಸ್ವರ ಒಟ್ಟೊಟ್ಟಾಗಿ ಅಭ್ಯಾಸ ಮಾಡುವ ಸ್ವರಜತಿಗಳು ವರ್ಣದ ಹಿಂದಿನ ಮೆಟ್ಟಿಲು. ನಿಧಾನವಾಗಿ ಸಂಗೀತವನ್ನು ಸಾಹಿತ್ಯದೊಂದಿಗೆ ಮಿಳಿತಗೊಳಿಸಿ ಬರುವ ರಚನೆ 'ವರ್ಣ'. ಇದು ರಚನಾಪ್ರಕಾರವಾಗಿ ತನ್ನ ಔನ್ನತ್ಯವನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಮುಂದಿನ ಅಭ್ಯಾಸಗಳಿಗೆ ಅಡಿಗಲ್ಲಾಗಿಯೂ ಕಾರ್ಯನಿರ್ವಹಿಸುತ್ತದೆ. "After these comparatively simpler forms, the Varnam appears on scene, rich in textual expression of Raga swaroopa, incorporating vigour and delicacy, - that is Thandava and Lasya - qualities of the Raga" ಎನ್ನುತ್ತಾರೆ ಶ್ರೀಮತಿ ಲಲಿತಾ ರಾಮಕೃಷ್ಣ ಅವರು, ತಮ್ಮ 'The Varnam' ಎಂಬ ಗ್ರಂಥದಲ್ಲಿ.

ಸಂಗೀತಾಭ್ಯಾಸಿಗೆ ವರ್ಣದ ಅಭ್ಯಾಸ ಸತ್ವಪರೀಕ್ಷೆಯ ಕಾಲ. ವಿಳಂಬ, ಮಧ್ಯಮ, ದೃತಲಯಗಳ ಅರಿವು, ರಾಗದ ವಿವಿಧ ಛಾಯೆಯೊಂದಿಗೆ ತಿಳಿಯುತ್ತಾ ಸಾಗಬೇಕು. ತಮಿಳಿನ ಅಡಿಯಾರಕ್ಕುನಲ್ಲಾರ್ ಹೀಗೆ ಹೇಳುತ್ತಾರೆ, "The name Varnam was apt for this musical form, since the term meant colour and the Varnam is full of colour" - ನಿಜ, 'ವರ್ಣ' ವರ್ಣಮಯವೇ ಆಗಿದೆ. ವರ್ಣ - ತಾಳ ಪ್ರಬಂಧವೂ ಹೌದು, ರಾಗಪ್ರಬಂಧವೂ ಹೌದು.

'ವರ್ಣ' ರಚನಾಪ್ರಕಾರವಾಗಿ ಬೆಳೆದುದರ ಹಿನ್ನೆಲೆ ಹೇಗಿದೆ...? ಮೊತ್ತಮೊದಲಾಗಿ ನಮಗೆ ನೆರವಾಗುವುದು ಲಕ್ಷಣಗ್ರಂಥಗಳು. ಸುಮಾರು ಎರಡನೆಯ ಶತಮಾನದ್ದೆಂದು ಹೇಳುವ ಭರತನ 'ನಾಟ್ಯಶಾಸ್ತ್ರ' - ವರ್ಣ ಒಂದು ರೀತಿಯ 'ಗಾನಕ್ರಿಯೆ' - ಎಂದು ಕರೆದಿದೆ. 'ಯಾಳ್' ಅಥವಾ 'ಹಾರ್ಪ್' ಮಾದರಿಯ ವಾದ್ಯಗಳ ಕಾಲವಾಗಿದ್ದು ಸ್ವರಗುಚ್ಛಗಳ ಮಾದರಿಯನ್ನು ಅಲಂಕಾರವೆಂದು ಕರೆಯಲಾಗಿದೆ. ಸ್ಥಾಯಿ, ಆರೋಹಿ, ಅವರೋಹಿ ಮತ್ತು ಸಂಚಾರಿ - ಈ ನಾಲ್ಕು ವಿಧದ ವರ್ಣ ಅಥವಾ ಸ್ವರಸಂಚಾರ ಎಂಬಲ್ಲಿ 'ವರ್ಣ' ಎಂಬ ಪದಪ್ರಯೋಗವಾಗಿದೆ. ಕಾಕತಾಳೀಯವಾಗಿ ಈ ನಾಲ್ಕೂ ಅಂಶಗಳನ್ನೂ ವರ್ಣದಲ್ಲಿ ಕಾಣಬಹುದಾಗಿದೆ. ಕಾಕತಾಳೀಯವಾಗಿ ಈ ನಾಲ್ಕೂ ವಿಧಗಳು ಇಂದು 'ವರ್ಣ' ಎಂದು ಕರೆಯಲಾಗುವ ರಚನಾಪ್ರಕಾರದಲ್ಲಿ ಬಳಸಿಕೊಳ್ಳಲ್ಪಟ್ಟಿದೆ ಎನ್ನುವುದು ಗಮನಾರ್ಹ. ಅನಂತರ ಬರುವ ಮತಂಗನ 'ಬೃಹದ್ದೇಶಿ' - "ಯೋ ಸೌ ಧ್ವನಿವಿಶೇಷಸ್ತು ಸ್ವರವರ್ಣವಿಭೂಷಿತಃ" - ಸ್ವರ ಮತ್ತು ವರ್ಣಗಳ ಧ್ವನಿವಿಶೇಷವೇ ರಾಗ ಎಂದು ಹೇಳುವಾಗ ಇಂದಿನ ವರ್ಣದ ಮೂಲ ಕೂಡ ಅದೇ ಆಗಿದ್ದು, 'ವರ್ಣ' ಎಂಬ ಹೆಸರನ್ನೇ ಪಡೆದಿರುವಂಥದ್ದೂ ಸಹಜವಾಗಿದೆ. ಮುಂದೆ ಹದಿಮೂರನೆಯ ಶತಮಾನದ ವೇಳೆಗೆ ಬಂದ 'ಸಂಗೀತರತ್ನಾಕರ' ಗ್ರಂಥವು ತನ್ನ ಪ್ರಬಂಧಾಧ್ಯಾಯದಲ್ಲಿ ಎರಡು ರೀತಿಯ ವರ್ಣಗಳನ್ನು ವಿವರಿಸುತ್ತದೆ: (೧) ವರ್ಣಪ್ರಬಂಧ (೨) ವರ್ಣಸ್ವರಪ್ರಬಂಧ. ವರ್ಣಪ್ರಬಂಧದಲ್ಲಿ ವರ್ಣ ತಾಳದಲ್ಲಿ ನಿಬದ್ಧ. ಕರ್ಣಾಟ ಭಾಷೆ, ಇದರ ಸಾರಾಂಶ ಬಿರುದು ಅಥವಾ ಹೊಗಳಿಕೆ ಎಂದು ವಿವರಿಸುತ್ತದೆ. (ಬಿರುದಾಃ ವರ್ಣ ತಾಳೇನವರ್ಣಾಃ ಕರ್ಣಾಟಭಾಷಯಾ, ತಾಳತ್ರೈವಿಧ್ಯಸ್ತಸ್ಯ ತ್ರೈವಿಧ್ಯಂ ಕಥಿತಾಂಬುಧೈಃ)

ವರ್ಣಸ್ವರಪ್ರಬಂಧದಲ್ಲಿ ಸ್ವರ, ಪಾಟಾಕ್ಷರ (Rhythmic syllables), ಪದ (words) ಮತ್ತು ತೇನಕ (auspicious syllables) [ಸ್ವರೈಃ ಪಾಟೈಃ ಪದೈಃ ತೇನರಚನಾವಾಂಛಿತ ಕ್ರಮಾತ್ / ಯಸ್ಯಸ್ಯಾತ್ ತೇನಕೈಃ ನ್ಯಾಸಾಃ ಸಾ ವರ್ಣಸ್ವರಯುಕ್ತತೇ]. ಕಟ್ಟುನಿಟ್ಟಾದ ನಿಯಮಗಳೊಂದಿಗಿದ್ದ ಆ ಪ್ರಬಂಧಗಳು ಸುಮಾರು 17ನೇ ಶತಮಾನದ ವೇಳೆಗೆ ಅಭಿವೃದ್ಧಿಗೊಂಡಿರಬಹುದೆಂದು ಊಹಿಸಬಹುದು. ಈ ಪ್ರಬಂಧಗಳು ರಾಜ ಅಥವಾ ಜಮೀನ್ದಾರರನ್ನು ಹೊಗಳಿ ರಚಿತವಾದವುಗಳೆನಿಸುತ್ತದೆ. ತೆಲುಗು ಭಾಷೆ ಬಳಸಿದ್ದು, ಇದರ ವಸ್ತು ಶೃಂಗಾರದೊಂದಿಗೆ ಹೊಗಳಿಕೆಯನ್ನು ಒಳಗೊಂಡಿದ್ದಿರಬಹುದೆಂದು ಅಂದಾಜು ಮಾಡಬಹುದು.

ಹೀಗೆ ಭರತನಿಂದ ಹಿಡಿದು ವೇಂಕಟಮುಖಿಯವರೆಗೂ ಎಲ್ಲ ಪ್ರಮುಖ ಲಾಕ್ಷಣಿಕರೂ ಇದೇ ವಿವರಗಳನ್ನು ಮುಂದುವರಿಸಿದರೂ, 'ಸಂಗೀತ ಪಿತಾಮಹ' ಎಂದು ಕರೆಸಿಕೊಳ್ಳಲ್ಪಡುವ ಶ್ರೀ ಪುರಂದರದಾಸರಾಗಲಿ, ಶ್ರೀ ಅನ್ನಮಾಚಾರ್ಯರಾಗಲಿ ಈ ವರ್ಣಪ್ರಕಾರವನ್ನಿತ್ತಿರುವುದು ಕಂಡುಬರುವುದಿಲ್ಲ. ಅಭ್ಯಾಸಗಾನಗಳಾದ ಸರಳೆ, ಜಂಟಿವರಸೆ, ಅಲಂಕಾರ, ಗೀತೆ ಮುಂತಾದುವುಗಳನ್ನು ನೀಡಿದ್ದಾರೆ. ಅಂತೆಯೇ ಅನ್ನಮಾಚಾರ್ಯರು ಕೀರ್ತನಪ್ರಕಾರದಲ್ಲಿ ಅಸಂಖ್ಯ ರಚನೆಗಳನ್ನು ರಚಿಸಿ ಕೃತಿಪ್ರಕಾರಕ್ಕೆ ಮೂಲವನ್ನೊದಗಿಸಿದ್ದಾರೆ. ಹೀಗಿದ್ದರೂ ಕೇವಲ ಲಕ್ಷಣಪ್ರಕಾರಕ್ಕೇ ಸೀಮಿತವಾಗಿ ನಿಂತ ವರ್ಣಪ್ರಕಾರ ತನ್ನ ರೂಪವನ್ನು ತಳೆಯಲು 17ನೇ ಶತಮಾನದ ಕೊನೆಯವರೆಗೂ ಕಾಯುವಂತಾಯಿತು ಎನ್ನುವುದು ಸೋಜಿಗದ ಸಂಗತಿ.

ಹೀಗೆ ಲಕ್ಷಣಗ್ರಂಥಗಳ ಉಲ್ಲೇಖದಲ್ಲೇ ಉಳಿದು ಅಜ್ಞಾತವಾಸ ಅನುಭವಿಸಿದ 'ವರ್ಣ'ಪ್ರಕಾರ ಬೆಳಕಿಗೆ ಬರಲು ತೆಗೆದುಕೊಂಡ ಕಾಲವಾದರೂ 17ನೇ ಶತಮಾನದ ಕೊನೆ ಹಾಗೂ 18ನೇ ಶತಮಾನದ ಮೊದಲಿಗೆ. ಹಾಗೆ ವರ್ಣ ರಚಿಸಿದ ಆದ್ಯಪ್ರವರ್ತಕರಲ್ಲಿ, ಗೋವಿಂದಸ್ವಾಮಯ್ಯ, ಕೂವನಸ್ವಾಮಯ್ಯ, ಪಚ್ಚಿಮಿರಿಯಂ ಆದಿಅಪ್ಪಯ್ಯ, ಸೊಂಠಿ ವೆಂಕಟಸುಬ್ಬಯ್ಯ, ಸೊಂಠಿ ವೆಂಕಟರಮಣಯ್ಯ (ತ್ಯಾಗರಾಜರ ಗುರು), ರಾಮಸ್ವಾಮಿ ದೀಕ್ಷಿತರು ಮುಂತಾದವರು ಕೆಲವರು. ಗೋವಿಂದಸ್ವಾಮಯ್ಯ ವರ್ಣದ ಆದ್ಯಪ್ರವರ್ತಕರು.

ಇನ್ನು ಕರ್ಣಾಟಕ ಸಂಗೀತದ ಸುವರ್ಣಯುಗಕ್ಕೆ ಕಾರಣಕರ್ತರಾದ ತ್ರಿಮೂರ್ತಿಗಳ ಕಾಲಕ್ಕೆ ಬಂದರೆ, ಶ್ರೀ ತ್ಯಾಗರಾಜರು ಈ ಪ್ರಕಾರವನ್ನೇ ಏಕೆ, ಕೃತಿ, ಕೀರ್ತನೆ ಬಿಟ್ಟು ಮಿಕ್ಕಾವ ಪ್ರಕಾರವನ್ನೂ ಮುಟ್ಟದೇ ಇರುವುದು ಕಾಣಬರುತ್ತದೆ (ಕೆಲವು ನಿಯಮಗಳನ್ನು ಸಡಿಲಿಸಿದರೆ ಪಂಚರತ್ನ ಕೃತಿಗಳನ್ನು ಪದವರ್ಣಕ್ಕೆ ಸೇರಿಸಬಹುದು). ಶ್ರೀ ಮುತ್ತುಸ್ವಾಮಿ ದೀಕ್ಷಿತರು ಕೇವಲ ಒಂದು ವರ್ಣ - ಅದೂ ತ್ರಿಶ್ರರೂಪಕದಲ್ಲಿ (ಗಜಾನನಾಯ - ಶಂಕರಂ)- ರಚಿಸಿದ್ದಾರೆ. ಶ್ರೀ ಶ್ಯಾಮಾಶಾಸ್ತ್ರಿಗಳು ವಿವಿಧ ತಾಳಗಳಲ್ಲಿ (ತ್ರಿಶ್ರಮಠ್ಯ, ಖಂ. ಅಟ್ಟ, ಚತುರಶ್ರ ಅಟ್ಟ ಹಾಗೂ ಆದಿ) 4 ವರ್ಣಗಳನ್ನು ರಚಿಸಿದ್ದಾರೆ. ಅನಂತರ ಬಂದ ವಾಗ್ಗೇಯಕಾರರಿಂದ ವರ್ಣರಚನಾಪ್ರಕಾರ ಪ್ರವಾಹದೋಪಾದಿಯಲ್ಲಿ ಇಂದಿನವರೆಗೂ ಹರಿಯುತ್ತಲೇ ಇದೆ.

ಹೀಗೆ ವರ್ಣ ನಡೆದು ಬಂದ ದಾರಿಯನ್ನು ಗುರುತಿಸಿದ ನಂತರ ವರ್ಣ ಪ್ರಭೇದಗಳೇನು? ವರ್ಣದ ಲಕ್ಷಣಗಳೇನು? ಹಾಗೇ ವಿಶೇಷವೆನಿಸಿದ ವರ್ಣಗಳಾವುವು? ಎಂಬುದರ ಬಗೆಗೆ ಕಣ್ಣುಹಾಯಿಸಿದರೆ, ವರ್ಣದ ವೈವಿಧ್ಯತೆ, ವೈಶಿಷ್ಟ್ಯಗಳು ಕಾಣಬರುತ್ತವೆ.

ವರ್ಣಗಳಲ್ಲಿ ತಾನವರ್ಣ, ಪದವರ್ಣ, ದರುವರ್ಣ ಎಂಬ ಪ್ರಮುಖ ಪ್ರಭೇದಗಳಿವೆ. ತಾನವರ್ಣ, ಪದವರ್ಣ ಹಾಗೂ ದರುವರ್ಣ ಮೂರರಲ್ಲೂ ಪಲ್ಲವಿ, ಅನುಪಲ್ಲವಿ, ಚಿಟ್ಟೆಸ್ವರ, ಚರಣ, ಎತ್ತುಗಡೆ ಸ್ವರಗಳಿದ್ದು, ತಾನವರ್ಣದಲ್ಲಿ ಪಲ್ಲವಿ, ಅನುಪಲ್ಲವಿಯ ನಂತರ ಚಿಟ್ಟೆಸ್ವರ, ಚರಣ, ಎತ್ತುಗಡೆ ಸ್ವರಗಳು ಇರುತ್ತವೆ.

1. ಸಾಮಾನ್ಯವಾಗಿ ವರ್ಣಗಳ ರಚನೆಯಲ್ಲಿ ತಾನವರ್ಣ ಪ್ರಧಾನ ಸ್ಥಾನದಲ್ಲಿದ್ದು, ಅಭ್ಯಾಸ ಗಾನ ಹಾಗೂ ವೇದಿಕೆ ಎರಡರಲ್ಲೂ ಇದರ ಪಾತ್ರ ಬಹಳ ದೊಡ್ಡದು.

ಹಿಂದೆ ವರ್ಣಗಳಿಗೆ ಅನುಬಂಧ ಎನ್ನುವ ಒಂದು ಭಾಗವಿರುತ್ತಿತ್ತು. ಎತ್ತುಗಡೆ ಸ್ವರಗಳನ್ನು ಹಾಡಿದ ನಂತರ ಚರಣದ ಭಾಗದ ಮುಂದುವರೆದ ಸಾಹಿತ್ಯ ಭಾಗವೇ ಆಗಿರುತ್ತಿತ್ತು. ಬಹುಶಃ ವರ್ಣದ ಸುದೀರ್ಘತೆಯ ದೃಷ್ಟಿಯಿಂದ ಈ ಭಾಗ ಮುಂದೆ ಕಣ್ಮರೆಯಾಯಿತೆಂದು ತೋರುತ್ತದೆ (ಉದಾ: ಭೈರವಿ ವರ್ಣದ ಒಂದು ಅನುಬಂಧ).

2. ಅದೇ ಪದವರ್ಣ ಎಂಬ ಪ್ರಭೇದದಲ್ಲಿ ಪಲ್ಲವಿ, ಅನುಪಲ್ಲವಿ, ಚಿಟ್ಟೆಸ್ವರ, ಚರಣ, ಎತ್ತುಗಡೆ ಸ್ವರ ಎಲ್ಲ ಭಾಗಗಳಲ್ಲೂ ಸಾಹಿತ್ಯ ವಿಸ್ತಾರಗೊಂಡಿರುತ್ತದೆ. ಇದು ಪ್ರಮುಖವಾಗಿ ನೃತ್ಯಕ್ಕಾಗಿಯೇ ರಚಿತವಾಗಿರುವ ಪ್ರಭೇದ.

ತಾನವರ್ಣ ಹಾಗೂ ಪದವರ್ಣಗಳೆರಡರಲ್ಲೂ ರಾಗಮಾಲಿಕೆ ಇರಬಹುದು. ರಾಗಮಾಲಿಕಾ ವರ್ಣ ಎಂದರೆ ಪ್ರತಿಯೊಂದು ಖಂಡವೂ ಬೇರೆ ಬೇರೆ ರಾಗದಲ್ಲಿ ಮುಂದುವರೆಯುತ್ತದೆ. ಇದು ಕೇಳುಗರಿಗೆ ಒಂದು ವಿಶಿಷ್ಟ ಆನಂದವನ್ನು ನೀಡುವಂತಹುದು.

3. ಇನ್ನು ಮೂರನೆಯ ವಿಭಾಗವಾದ ದರುವರ್ಣ. 'ದರು' ಎನ್ನುವುದು ನಾಟಕದಲ್ಲಿ ಬಳಕೆಯಾಗುವ ಒಂದು ಸಾಹಿತ್ಯ ಭಾಗ. ಆದರೆ ದರುವರ್ಣದಲ್ಲಿ ಪಲ್ಲವಿ, ಅನುಪಲ್ಲವಿ, ಚಿಟ್ಟೆಸ್ವರ, ಚರಣ, ಎತ್ತುಗಡೆಗಳಿದ್ದು ಇವುಗಳಲ್ಲಿ ವಿಶೇಷವಾಗಿ ಸ್ವರ, ಸಾಹಿತ್ಯಗಳೇ ಅಲ್ಲದೆ, ಪಾಟಾಕ್ಷರಗಳೂ ಇದ್ದು ವಿಶೇಷವೆನಿಸುತ್ತದೆ. ಇದು ಬಹುಶಃ 'ಸಂಗೀತರತ್ನಾಕರ'ದಲ್ಲಿ ವರ್ಣಿಸುವ ವರ್ಣಸ್ವರಪ್ರಬಂಧವನ್ನು ಹೋಲುತ್ತದೆ ಎಂದು ಹೇಳಬಹುದು.

4. ಈ ಪ್ರಕಾರದ ರಚನೆಯಲ್ಲಿ ಬಾಲುಸ್ವಾಮಿ ದೀಕ್ಷಿತರು, ಸುಬ್ಬರಾಮ ದೀಕ್ಷಿತರು, ಮುಖ್ಯವಾಗಿ ಮುತ್ತಯ್ಯ ಭಾಗವತರು ಪ್ರಸಿದ್ಧರಾಗಿದ್ದಾರೆ.

ಸಾಮಾನ್ಯವಾಗಿ ವರ್ಣಗಳು ಆದಿ, ಅಟ್ಟದಲ್ಲಿರುವುದೇ ಹೆಚ್ಚು. ಆದರೆ ವಿಶೇಷವಾಗಿ, ವಿವಿಧ ಜಾತಿಯ ತಾಳಗಳಲ್ಲಿ, 35 ಸುಳಾದಿ ತಾಳಗಳಲ್ಲಿರುವುದನ್ನೂ ನಾವು ಕಾಣುತ್ತೇವೆ. ಇದಕ್ಕೆ ತ್ರಿಮೂರ್ತಿಗಳಲ್ಲೊಬ್ಬರಾದ ಶ್ಯಾಮಾಶಾಸ್ತ್ರಿಗಳೇ ಮೂಲ. ಅವರ ಹಾದಿಯಲ್ಲಿ ನಡೆದ ನಮ್ಮ ಹೆಮ್ಮೆಯ ವಾಗ್ಗೇಯಕಾರರಾದ ಶ್ರೀ ವೀಣಾ ಶೇಷಣ್ಣನವರು ಹಲವು ರೀತಿಯ ತಾಳಗಳಲ್ಲಿ ವರ್ಣ ರಚಿಸಿ ಪ್ರಸಿದ್ಧರಾಗಿದ್ದಾರೆ.

5. ಖಂ.ಮಠ್ಯ, ಮಿಶ್ರ ಸಂಕೀರ್ಣ, ಖಂ.ಅಟ್ಟ ಹೀಗೆಲ್ಲ ಪ್ರಯೋಗ ಮಾಡಿದ್ದಾರೆ. ವೇದಿಕೆಯಲ್ಲಿ ಹೆಚ್ಚು ಬಳಕೆಯಲ್ಲಿಲ್ಲದಿದ್ದು ಸಾಧನೆಗೆ ಅಮೂಲ್ಯವಾದ ಸಂಪತ್ತನ್ನಿಲ್ಲಿ ಕಾಣಬಹುದು.

6. ಅಂತೆಯೇ ಮತ್ತೊಂದು ಸುಳಾದಿ ಸಪ್ತತಾಳಗಲ್ಲೊಂದಾದ ಮಿಶ್ರ ಝಂಪೆ. ಇದೂ ಸಹ ನಮ್ಮ ಕರ್ಣಾಟಕದ ವಾಗ್ಗೇಯಕಾರರಿಂದಲೇ (ರುದ್ರಪಟ್ಟಣ ವೆಂಕಟರಮಣಯ್ಯ) ರಚಿತವಾಗಿರುವಂಥದು. ಕೇಳಿಯೇ ಸುಖಿಸಬೇಕು.

7. ನಮ್ಮ ಇತ್ತೀಚಿನ ವಾಗ್ಗೇಯಕಾರರು ತಮ್ಮ ಅದ್ಭುತ ಕಲ್ಪನಾಶಕ್ತಿಯಿಂದ ವಿವಿಧ ರೀತಿಯ ಪ್ರಯೋಗಗಳನ್ನು ಮಾಡಿರುವಂಥದು ಕಾಣಬರುತ್ತದೆ. ಇದರಲ್ಲಿ ಪ್ರಮುಖವಾದವುಗಳು ಗ್ರಹಭೇದವರ್ಣ (ಕಲ್ಕತ್ತಾ ಕೃಷ್ಣಮೂರ್ತಿ ವಿರಚಿತ). ಅಂತೆಯೇ ಪಂಚಜಾತಿ ರಾಗಮಾಲಿಕೆ (ಶ್ರೀ ಸಿ. ರಂಗಯ್ಯನವರು). ಇದರ ವಿಶೇಷವೆಂದರೆ - ಜಾತಿಪ್ರಭೇದ ಲಘುವಿಗೆ ಮಾತ್ರ ಅನ್ವಯ. ಲಘು ವಿವಿಧ ಜಾತಿಯಲ್ಲಿ ನಡೆದರೆ ದೃತ ಮಾತ್ರ ಚತುರಶ್ರದಲ್ಲೇ ಇರುತ್ತದೆ. ಹೀಗೆ ತ್ರಿಶ್ರ, ಚತುರಶ್ರ, ಖಂಡ, ಮಿಶ್ರ, ಸಂಕೀರ್ಣ ಒಂದೊಂದು ಜಾತಿಯೂ ಒಂದೊಂದು ರಾಗದಲ್ಲಿ ಬದಲಾಗುತ್ತಾ ಹೋಗುತ್ತದೆ. ನಿಜವಾಗಿಯೂ, ಸಾಧಕರಿಗೆ ಸವಾಲಾಗಿರುವ ರಚನೆ.

ಮತ್ತೊಂದು ವಿಶೇಷ ಪ್ರಯೋಗದಲ್ಲಿ ಶ್ರೀ ವೀಣಾ ಶೇಷಣ್ಣನವರ ಒಂದು 'ರಾಗಮಾಲಿಕಾ ವರ್ಣ' ಎಂಬ ಪ್ರಭೇದದಡಿ ಪಲ್ಲವಿ, ಅನುಪಲ್ಲವಿ, ಚಿಟ್ಟೆಸ್ವರ, ಚರಣ, ಎತ್ತುಗಡೆ ಎಲ್ಲವೂ ಒಂದೇ ರಾಗದಲ್ಲಿ ಮುಂದುವರೆದು, ಅನಂತರ ರಾಗಗಳು ಬದಲಾಗುತ್ತಾ ಒಂದೊಂದು ಎತ್ತುಗಡೆ ಸ್ವರ ಇರುತ್ತದೆ. ಹೀಗೆ 14, 16 ರಾಗಗಳ ಸುದೀರ್ಘ ರಚನೆಯನ್ನು ನಾವು ವಿಶೇಷವಾಗಿ ಕಾಣಬಹುದು. ವರ್ಣಗಳ ರಚನೆಯಲ್ಲಿ ಕರ್ನಾಟಕದವರ ಪಾತ್ರ ಬಹಳ ದೊಡ್ಡದು.

8. ಇನ್ನು, ವರ್ಣ ಹಾಡುವ ಕ್ರಮವಾದರೂ ಏನು? ಸಾಮಾನ್ಯವಾಗಿ ಎರಡು ಕಳೆಯಲ್ಲಿ ಪ್ರಾರಂಭ ಮಾಡಿ ಅದಕ್ಕೆ ಮುಂದಿನ ಕಾಲವನ್ನು ಹಾಡುವುದು ಒಂದು ರೀತಿ.

9. ಚರಣದಿಂದ ಒಂದು ಕಳೆಯಲ್ಲಿ ಹಾಡುವುದೂ ವಾಡಿಕೆ. ಈ ಪದ್ಧತಿಯನ್ನು ಸಾಮಾನ್ಯವಾಗಿ ವೇದಿಕೆಯಲ್ಲಿ ಕಾಣುತ್ತೇವೆ. ಅದೇ ರೀತಿ ಇಡೀ ವರ್ಣವನ್ನು ತ್ರಿಶ್ರ ನಡೆಯಲ್ಲಿ ಹಾಡುವ ಪದ್ಧತಿಯೂ ವಿದ್ವತ್ತಿನ ಸಂಕೇತವಾಗಿ ಮುಂದುವರಿಯುತ್ತದೆ.

10. ಲಯದ ದೃಷ್ಟಿಯಿಂದ, ಗಮಕಗಳ ಸರಿಯಾದ ಪ್ರಯೋಗ ದೃಷ್ಟಿಯಿಂದ, ವರ್ಣಗಳನ್ನು ಚೌಕಕಾಲದಲ್ಲಿ ಅಭ್ಯಾಸ ಮಾಡುವುದು ಸಾಧಕನ ಸಂಗೀತದ ಬೆಳವಣಿಗೆಯ ದೃಷ್ಟಿಯಿಂದ ಅತ್ಯುತ್ತಮವಾದುದು. ಚೌಕದಲ್ಲಿ ಒಂದು ಪೆಟ್ಟಿಗೆ 4 ಅಕ್ಷರಗಳ ಲೆಕ್ಕದಲ್ಲಿ ಒಂದನೇ ಕಾಲವೂ, ಎರಡನೇ ಕಾಲದಲ್ಲಿ 8 ಅಕ್ಷರಗಳೂ, ಮೂರನೇ ಕಾಲದಲ್ಲಿ 16 ಅಕ್ಷರಗಳೂ ಬರುತ್ತವೆ. ಇದು ವರ್ಣದ ಅನುಲೋಮ ಕ್ರಮ. ಇದನ್ನೇ ತ್ರಿಶ್ರದಲ್ಲೂ ಹಾಡಬಹುದು (1, 2, 3). ತದನಂತರ ವಿಲೋಮಕ್ರಮದಲ್ಲಿಯೂ (3, 2, 1) ಹಾಡಬಹುದು. ಅಂತೆಯೇ ಅಟ್ಟತಾಳ ವರ್ಣವಾಗಿದ್ದಲ್ಲಿ ಅದನ್ನು ಮಿಶ್ರನಡೆ ಆದಿತಾಳ ಅಥವಾ ಚತುರಶ್ರ ತ್ರಿಪುಟದಲ್ಲಿಯೂ ಹಾಡಬಹುದು. ಇದು ನಿಜವಾಗಿಯೂ ಸಾಧಕನ ಅವಧಾನದ ಪ್ರತೀಕ.

ಹೀಗೆ ಎಷ್ಟೆಷ್ಟೋ ವಿಧದಲ್ಲಿ ಅಭ್ಯಾಸ ಮಾಡುವ ಈ ಪರಿ, ವರ್ಣಪ್ರಕಾರವನ್ನು ಬಿಟ್ಟು ಮತ್ತಾವ ರಚನಾಪ್ರಕಾರಗಳಲ್ಲಿಯೂ (ಪಲ್ಲವಿಯನ್ನುಳಿದು) ಸಾಧ್ಯವಿಲ್ಲ.

ಇಷ್ಟೆಲ್ಲಾ ಹೇಳಿದ ನಂತರ ವರ್ಣ ಹಾಡುವುದರ ಪ್ರಯೋಜನದ ಬಗೆಗೆ ಕಣ್ಣು ಹಾಯಿಸೋಣವೇ?

ಪ್ರಪ್ರಥಮವಾಗಿ ಸಂಗೀತಾಭ್ಯಾಸಿಗೆ: (೧) ರಾಗದ ಮೊದಲ ಅಭಿಪ್ರಾಯ, ಅಕಾರಗಳನ್ನು ಹೆಚ್ಚಾಗಿ ಬಳಸುವುದು ತಿಳಿಯುತ್ತದೆ. (೨) ಗಮಕದೊಂದಿಗೆ ರಾಗದ ಪ್ರತಿಸ್ವರವನ್ನೂ ಹೇಗೆ ಬಳಸಬೇಕೆಂದು ವರ್ಣದಲ್ಲೇ ಪರಿಚಯವಾಗುತ್ತದೆ. ಒಂದು ಎರಡು ಕಾಲಗಳಲ್ಲಿ ಹಾಡುವುದರಿಂದ ತಾಳದ ಮೇಲಿನ ಹಿಡಿತ ಬರುತ್ತದೆ.

ಇನ್ನು, ಸ್ವಲ್ಪ ಮುಂದುವರಿದ (ಪ್ರೌಢ) ಅಭ್ಯಾಸಿಗಳಿಗೆ: (೧) ರಾಗಲಕ್ಷಣಗಳ ಪರಿಚಯ, (೨) ಅಪರೂಪ ರಾಗಗಳ ಖಚಿತ ಪ್ರಯೋಗ, (೩) ರಾಗಾಲಾಪನೆ, ಸ್ವರಕಲ್ಪನೆಗೆ ಉತ್ತಮ ಅಡಿಪಾಯ, (೪) ಸ್ವರಗಳ ನೆರವಿನಿಂದ ತಾನೇ ವರ್ಣಗಳನ್ನು ಅಭ್ಯಸಿಸಿ ಹಾಡಲು ಸಹಾಯಕ, (೫) ನಡೆ ಭೇದಗಳಿಂದ ತಾಳದ ಮೇಲಿನ ಹಿಡಿತ, (೬) ಸ್ವರಗುಚ್ಛಗಳ ಸರಿಯಾದ ಪ್ರಯೋಗವನ್ನು ತಾನಕ್ಕೆ ಅಳವಡಿಸಿಕೊಳ್ಳುವುದು, (೭) ಸ್ವರಗಳಲ್ಲಿನ ಮುಕ್ತಾಯ ಹಾಗೂ ಯತಿಗಳ ಪ್ರಯೋಗವನ್ನು ಗುರುತಿಸಬಹುದು.

ಇನ್ನು, ವೇದಿಕೆಯ ಕಲಾವಿದರಿಗೆ: (೧) ವರ್ಣ - ಕಂಠದ ಸರಿಯಾದ ಬಳಕೆ, (೨) ಸಂಗೀತ ವಾತಾವರಣ ನಿರ್ಮಾಣ, (೩) ಪಕ್ಕವಾದ್ಯಗಳೊಂದಿಗೆ ಒಂದು ಸಹೃದಯ ಸಹಕಾರ, (೪) ಶ್ರೋತೃಗಳನ್ನು ಮುಂದಿನ ನಾದಪ್ರಪಂಚಕ್ಕೆ ಕರೆದೊಯ್ಯುವ ಒಂದು ಮುಂಬಾಗಿಲು.

ಹೀಗೆ ವರ್ಣ ಅಭ್ಯಾಸಕ್ಕೆ ಸಾಧನೆಯ ಮಧ್ಯದ ಹಂತವಾದರೆ, ಪ್ರೌಢಿಮೆಯ ಗಾಯನಕ್ಕೆ ಮೊದಲ ಮೆಟ್ಟಿಲೂ ಆಗಿದೆ ಎನ್ನುವುದೇ 'ವರ್ಣ'ದ ವಿಶಿಷ್ಟತೆ ಹಾಗೂ ವೈವಿಧ್ಯ.

ನೆರವು ಪಡೆದಿರುವ ಗ್ರಂಥಗಳು:

1. ಕರ್ನಾಟಕ ಸಂಗೀತವಾಹಿನಿ - ಡಾ. ರಾ. ಸತ್ಯನಾರಾಯಣ
2. The Varnam - Lalitha Ramakrishna
3. ಕರ್ನಾಟಕ ಗಾನ ಕಲಾಸಿರಿ - (ಸಂಪುಟ ಎರಡು)

'ಸುರಭಿ', 10ನೇ ಮುಖ್ಯರಸ್ತೆ, 3ನೇ ಹಂತ, ಗೋಕುಲಂ, ಮೈಸೂರು - 2

ತ್ಯಾಗರಾಜರ ಪಂಚರತ್ನ ಕೃತಿಗಳು

✍ ಆರ್. ಕೆ. ಶ್ರೀಕಂಠನ್

ಕರ್ನಾಟಕ ಸಂಗೀತದ ಗೇಯ ಪ್ರಬಂಧಗಳು ಕಾಲಾನುಗುಣವಾಗಿ ಅನೇಕ ಬದಲಾವಣೆಗಳಿಗೆ ಎಡೆ ಕೊಟ್ಟು, ಕ್ರಿ.ಶ. 1750ರಿಂದ 1850ರ ಒಂದು ಶತಮಾನದ ಅವಧಿಯಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿದವು. ಆ ಶತಮಾನದಲ್ಲಿ ಬಾಳಿ ಬದುಕಿದ ವಾಗ್ಗೇಯಕಾರರಲ್ಲಿ ಸಂಗೀತ ತ್ರಿಮೂರ್ತಿಗಳಾದ ಶ್ಯಾಮ ಶಾಸ್ತ್ರಿಗಳು, ತ್ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರು ಪ್ರಮುಖರು. ಇವರ ಸಮಕಾಲೀನರಾಗಿ ಹಲವಾರು ಶ್ರೇಷ್ಠ ಸಂಗೀತ ವಿದ್ವಾಂಸರೂ ಲಾಕ್ಷಣಿಕರೂ ತಂಜಾವೂರಿನಲ್ಲಿದ್ದರು. ಕ್ರಿ.ಶ. 1600ರಿಂದ 1900ರವರೆಗೆ (ಮೂರು ಶತಮಾನಗಳು) ಅರಸರಾದ ಮರಾಠ ವಂಶಸ್ಥರು ಸಂಗೀತಾದಿ ಕಲೆಗಳಿಗೆ ಅತಿಶಯವಾದ ಪ್ರೋತ್ಸಾಹವನ್ನು ಕೊಡುತ್ತಿದ್ದರು. ನಾಡಿನ ಬೇರೆ ಬೇರೆ ಕಡೆಗಳಿಂದಲೂ ವಿದ್ವಾಂಸರು ತಂಜಾವೂರಿಗೆ ಬಂದು ರಾಜಸಮ್ಮಾನಗಳನ್ನು ಪಡೆಯುತ್ತಿದ್ದರು. ತ್ಯಾಗರಾಜರು ಚಿಕ್ಕವರಾಗಿದ್ದ ಸಮಯದಲ್ಲಿ ತಂಜಾವೂರು ಆಸ್ಥಾನದಲ್ಲೇ 360 ಮಂದಿ ಸಂಗೀತಗಾರರಿದ್ದರೆಂದು ತಿಳಿದು ಬರುತ್ತದೆ. ತ್ಯಾಗರಾಜರು ಪ್ರಸಿದ್ಧರಾಗುವ ಸಂದರ್ಭದಲ್ಲಿ ತಂಜಾವೂರು ಜಿಲ್ಲೆಯಲ್ಲಿ ಸಂಗೀತ ಸಾಹಿತ್ಯಾದಿ ಕಲೆಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ವಾಗ್ಗೇಕಾರ ತ್ಯಾಗರಾಜರ ಕೀರ್ತಿ ತಂಜಾವೂರು ಜಿಲ್ಲೆ ಮತ್ತು ಸುತ್ತುಮುತ್ತಲಿನ ಸ್ಥಳಗಳಲ್ಲೂ ಪಸರಿಸಿತ್ತು.

ವಾಲ್ಮೀಕಿ, ವ್ಯಾಸ, ಭರತಾದಿ ಋಷಿಪುಂಗವರ ಪರಂಪರೆಗೆ ಸೇರಿದ ಶ್ರೀ ತ್ಯಾಗರಾಜ ಸ್ವಾಮಿಗಳು ರಾಮಾಯಣ ವಾಗ್ಗೇಯಕಾರರಾಗಿದ್ದಾರೆ. ಅವರ ಕೃತಿಗಳ ಅರ್ಥಗೌರವ, ಪದಸಾಮರಸ್ಯ, ರಸವಿಲಾಸ, ಗೇಯ ಕಲ್ಪನಾ ವೈಚಿತ್ರ್ಯ, ರಾಗ, ಭಾವ, ಲಯಾದಿಗಳ ಚಿತ್ರಪೂರ್ಣ ಸ್ವರ ಸಂದರ್ಭಗಳು ರಸಿಕರ ಹೃದಯವನ್ನು ಅಲೌಕಿಕಾನಂದ ಪರವಶರನ್ನಾಗಿ ಮಾಡುತ್ತವೆ. ಅವರ ಕೃತಿಗಳ ಸೌಲಭ್ಯ, ಗುಣ ಅಸದೃಶ. ಅವರ ಪ್ರತಿಭೆ ಬಹುಮುಖವಾದುದು. ಶುದ್ಧ ಸಂಗೀತದ ಸುಸ್ವರೂಪವನ್ನು ಮನಗಾಣಲು ಮಧುರಾಮೃತದ ಸಂಗೀತದ ರುಚಿಯನ್ನು ಸವಿಯಲು ಅವರ ಕೃತಿಗಳು ನೆರವಾಗುತ್ತವೆ. ತ್ಯಾಗರಾಜರಿಗೆ ಸಂಗೀತವೇ ಪುರುಷಾರ್ಥವಾಗಿತ್ತು. ಉದಾತ್ತತೆಯಲ್ಲೂ ಮಹತ್ವದಲ್ಲೂ ಅವರ ಸಂಗೀತವನ್ನು ಮೀರಲು ಶಕ್ಯವೇ ಇಲ್ಲ.

ತ್ಯಾಗರಾಜರ ಬೃಂದಾವನದ ಮುಂದೆ ಸಮೂಹಗಾನ ರೂಪದಲ್ಲಿ ಹಾಡಲ್ಪಡುವ ಪಂಚರತ್ನ ಕೃತಿಗಳ ಗೇಯ ಗುಣ ಮತ್ತು ಮೌಲ್ಯ ವಿಸ್ಮಯಕರ. ಗೇಯ ಪ್ರಬಂಧ ರಾಶಿಯಲ್ಲಿ

ಈ ಘನರಾಗ ಪಂಚರತ್ನ ಕೃತಿಗಳು ವಿಶೇಷ ಗೌರವಕ್ಕೆ ಪಾತ್ರವಾದ ರಚನೆಗಳು. ಈ ಕೃತಿಗಳಲ್ಲಿ ತ್ಯಾಗರಾಜರು ಬುದ್ಧಿಪೂರ್ವಕ ತಮ್ಮ ಸಂಗೀತ ಪ್ರತಿಭೆಯ ಸಾರಭೂತ ಅಂಶಗಳನ್ನೆಲ್ಲ ಕ್ರೋಢೀಕರಿಸಿದ್ದಾರೆ. ಈ ರಚನೆಗಳು ಗೊತ್ತುಗುರಿ ಇಲ್ಲದ (ರೇಂಡಮ್), ಅಡ್ಡದಾರಿ ಹಿಡಿದ (ಸ್ಟ್ರೇ) ರಚನೆಗಳಲ್ಲ. ಅವು ಉದ್ದೇಶಪೂರ್ವಕ, ಕ್ರಮವಿನ್ಯಾಸದಿಂದ ಕೂಡಿದ ರಾಗ, ಪದ ಮತ್ತು ಲಯಗಳಿಂದ ಕೂಡಿ ಕರ್ನಾಟಕ ಶಾಸ್ತ್ರೀಯ ಸಂಗೀತ ಪದ್ಧತಿಯ ಸಂಪ್ರದಾಯ ಪ್ರದರ್ಶಕ ರಚನೆಗಳು. ಐದು ಕೃತಿಗಳಿಗೆ ಐದು ಘನರಾಗಗಳನ್ನೇ ಆರಿಸಿಕೊಂಡಿರುವುದು ತ್ಯಾಗರಾಜರ ವೀಣಾ ಸಂಪ್ರದಾಯದ ಅನುಸರಣೆಯನ್ನು ವ್ಯಕ್ತಪಡಿಸುತ್ತದೆ. ತ್ಯಾಗರಾಜರು ಸ್ವತಃ ವೈಣಿಕರೂ ಆಗಿದ್ದವರು. ವೀಣಾವಾದನ ಸಂಪ್ರದಾಯದಲ್ಲಿ ಈ ಐದು ರಾಗಗಳಿಗೆ ಘನರಾಗಗಳೆಂದು ಹೆಸರು. ಇದು ಪ್ರಾಚೀನ ಸಂಪ್ರದಾಯ. ಘನರಾಗವೆಂಬುದಕ್ಕೆ ಸಂಗೀತ ಶಾಸ್ತ್ರದಲ್ಲಿ ಹಲವು ಲಕ್ಷಣಗಳು ಹೇಳಲ್ಪಟ್ಟಿವೆ.

'ದೂರಶ್ರವಣ ಯೋಗ್ಯಸ್ತುಘನಃ ಅಂತಸ್ಸಾರಯುತಃ' ಎಂದರೆ, ದೂರದಿಂದ ಕೇಳಲು ತಕ್ಕದ್ದು, ಅಂತಸ್ಸಾರವುಳ್ಳದ್ದೂ ಆದ ಧ್ವನಿಯನ್ನು ಘನವೆನ್ನುತ್ತಾರೆ. ಈ ನಾದವು ಶೌರ್ಯೋತ್ಸಾಹಯುಕ್ತ ವೀರನಂತೆ ಗಾಂಭೀರ್ಯವನ್ನೂ ಬಲವನ್ನೂ ಉಳ್ಳದ್ದು. ಇಂತಹ ನಾದವನ್ನು ಹೊರಹೊಮ್ಮಿಸಲು ಸಾಧಕನು ಬ್ರಹ್ಮಚರ್ಯನಿಷ್ಠನಾಗಿ, ದೃಢವಾದ ಮೈಕಟ್ಟುಳ್ಳವನಾಗಿ ಸ್ಥಿರಚಿತ್ತನೂ ಕಷ್ಟಸಹಿಷ್ಣುವೂ ಹಟವಾದಿಯೂ ಆಗಿರಬೇಕು. ವಾಗ್ಗೇಯಕಾರರು ನಿರೂಪಿಸುವಂತೆ ತಾರಸ್ಥಾಯಿಯಲ್ಲಿ ಮಧುರವೂ ರಂಜಕವೂ ಮೃದುವೂ ಕಾಂತಿಪ್ರಾಚುರ್ಯಾದಿ ಗುಣವುಳ್ಳದ್ದೂ ಆದ ಉತ್ತಮ ಶರೀರವನ್ನು ಪಡೆದಿರಬೇಕು. ಇಂಥವನ ಕಂಠದಿಂದ ಹೊರಡುವ ನಾದವು ಸಿಂಹಘರ್ಜನೆಯಂತಿದ್ದು ಪ್ರತಿಧ್ವನಿಯು ತನ್ನ ಸುತ್ತಿನ ಆವರಣದಲ್ಲೆಲ್ಲ ವ್ಯಾಪಿಸಿ, ಶ್ರೋತೃಗಳ ಹೃದಯದಲ್ಲೂ ನಾದವು ಅನುರಣಿಸುತ್ತಿರುವಂತೆ ಅನುಭವಕ್ಕೆ ಬರುತ್ತದೆ. ಪೌರುಷಪ್ರಧಾನವಾದ, ಗಂಭೀರವಾದ, ದೃಢವಾದ ನಾಭಿತಾನದಿಂದ ಹಾಡುವ ಕ್ರಮವನ್ನು ಘನಮಾರ್ಗವೆಂದೂ, ಈ ಕ್ರಮದಲ್ಲಿ ಹಾಡಲು ತಕ್ಕುದಾದ ರಾಗಗಳನ್ನು ಘನರಾಗಗಳೆಂದೂ ಹೇಳುವರು. ಗಾಯಕನು ತನ್ನ ಸಾಧನಾಬಲದಿಂದ ಯಾವ ರಾಗವನ್ನಾದರೂ ಘನಮಾರ್ಗಕ್ಕೆ ಒಯ್ಯಲು ಸಾಧ್ಯವಿದ್ದರೂ ಕೆಲವು ರಾಗಗಳು ಸ್ವರೂಪತಃ ಈ ಕ್ರಮದ ಹಾಡಿಗೆ ಸಹಜ ಸಹಕಾರ ನೀಡುವುದರಿಂದ ಕೆಲವು ರಾಗಗಳನ್ನು ಮಾತ್ರ ನಮ್ಮ ಹಿರಿಯರು ಘನರಾಗಗಳೆಂದು ಗುರುತಿಸಿದ್ದಾರೆ. ವೆಂಕಟಮಖಿಯು ತನ್ನ 'ಚತುರ್ದಂಡಿ ಪ್ರಕಾಶಿಕೆ'ಯಲ್ಲಿ,

ಘನರಾಗಾ ನಾಟಿ ಗೌಳೋ ವರಾಳೀ ಬೌಲಿರೇವಚ
ಶ್ರೀರಾಗ ಆರಭಿಶ್ಚೈವ ಮಾಲವಶ್ರೀಸ್ತತಃ ಪರಮ್ ।
ರೀತಿಗೌಳೋಷ್ಟರಾಗಸ್ತೇ ಘನರಾಗಾಃ ಪ್ರಕೀರ್ತಿತಾ ॥

ನಾಟಿ, ಗೌಳ, ವರಾಳೀ, ಬೌಳಿ, ಶ್ರೀ, ಆರಭಿ, ಮಾಲವಶ್ರೀ ಮತ್ತು ರೀತಿಗೌಳ ಈ ಎಂಟು ರಾಗಗಳನ್ನು ಘನರಾಗಗಳೆಂದು ಹೇಳಿದ್ದಾರೆ.

ಕೇದಾರ, ನಾಟಕುರಂಜಿ, ನಾರಾಯಣಗೌಳ ಮತ್ತು ಸಾರಂಗ-ನಾಟ ಈ ರಾಗಗಳೂ ಘನರಾಗಗಳೆಂದು ಕೆಲವು ವಿದ್ವಾಂಸರಿಂದ ಪರಿಗಣಿಸಲ್ಪಟ್ಟಿವೆ. ಪ್ರಕೃತ ಕಾಲದಲ್ಲಿ ನಾಟ, ಗೌಳ, ಆರಭಿ, ವರಾಳಿ ಮತ್ತು ಶ್ರೀರಾಗಗಳನ್ನು ಘನರಾಗಗಳೆಂದು ಕರೆಯುತ್ತಿದ್ದಾರೆ. ಘನರಾಗಗಳನ್ನು ಹಾಡುವಾಗ ಜಂಟಿ ಮತ್ತು ದಾಟು ಸ್ವರಪ್ರಯೋಗಗಳೂ, ಸ್ಥಾಯಿಭೇದಗಳ ಮಿಶ್ರಣವೂ, ತಿಶ್ರ, ಮಿಶ್ರ, ಖಂಡಾದಿ ಜಾತಿಗಳಲ್ಲಿ ಭಾವಕ್ಕೆ ತಕ್ಕಂತೆ ರಾಗಗಳನ್ನು ಅಕಾರ ಇಕಾರಗಳಿಂದ ವಿಸ್ತರಿಸುವಾಗ ಆಯಾ ಕಾಲಗಳಿಗೇ ಆದ್ಯತೆಯನ್ನು ಕೊಡಬೇಕಾದ ವಿಧಿಯಿದ್ದರೂ ಘನರಾಗದಲ್ಲಿ ಮಧ್ಯ ನಡೆಗೆ ಪ್ರಾಮುಖ್ಯವು. ಘನರಾಗಗಳ ವ್ಯಾಸಂಗದಿಂದ ಶಾರೀರ ಹಾಗೂ ಲಯಶುದ್ಧಿ ಏರ್ಪಡುವುದು. ಶ್ವಾಸಧಾರಣೆಯು ಗಾಯಕನಿಗೆ ವಶವಾಗಿ ಶ್ರುತಿಲೀನತೆಗೆ ಸಹಕಾರಿಯಾಗುತ್ತದೆ. ವೈಣಿಕರಿಗಾಗಿ ಈ ಘನರಾಗಗಳಲ್ಲಿ ನೂರಾರು ಚಿಟ್ಟ ತಾನಗಳು ಕಲ್ಪಿತವಾಗಿವೆ. ಅವನ್ನು ವ್ಯಾಸಂಗ ಮಾಡುವುದರಿಂದ ವಿಚಿತ್ರ ರೀತಿಯ ಮೀಟುಗಳೆಲ್ಲ ಬೆರಳಿಗೆ ಅಭ್ಯಾಸವಾಗಿ ವಾದ್ಯವು ಒದಗಿ ಬರುತ್ತದೆ. ಈ ಐದು ರಾಗಗಳು ದ್ವಾವಿಂಶತಿ ಶ್ರುತಿಗಳ ಬಳಕೆಯಿಂದ ಪೂರ್ಣ ರಾಗಗಳಾಗಿವೆ. ಉದಾ: ಗೌಳ ರಾಗದಲ್ಲಿ ಏಕಶ್ರುತಿ ರಿಷಭ, ನಾಟ ರಾಗದಲ್ಲಿ ವಿವಾದಿ ದೋಷ ಪ್ರಯುಕ್ತವಾಗದಂತೆ ಧಾತು ರಚನೆ, ಆರಭಿ ರಾಗದಲ್ಲಿ ಗಾಂಧಾರ, ನಿಷಾದಗಳ ಅಲ್ಪತ್ವ, ವರಾಳಿ ರಾಗದ ಶುದ್ಧ ಗಾಂಧಾರ ಮತ್ತು ತೀವ್ರ ಮಧ್ಯಮ (ಇದಕ್ಕೆ ವರಾಳಿ ಮಧ್ಯಮವೆಂದೇ ಹೆಸರು) ಇತ್ಯಾದಿ. ತಾನದ ವಿಸ್ತರಣೆಗೆ ಅಗತ್ಯವಾದ ಮಾರ್ಗದರ್ಶನ ಈ ಕೃತಿಗಳ ಗುರಿ. ಪ್ರಾಚೀನ ರಾಗಗಳಾದ ಆರಭಿ ಮತ್ತು ನಾಟ ರಾಗಗಳು ತಮಿಳುನಾಡಿನ ಪಣ್ ರಾಗ ಪದ್ಧತಿಯಲ್ಲೂ ರೂಢಿಯಲ್ಲಿತ್ತು ಎಂಬುದಕ್ಕೆ ನಿದರ್ಶನವಾಗಿ ಈ ರಾಗಗಳಲ್ಲಿ ತೇವಾರಗಳೂ ದಿವ್ಯಪ್ರಬಂಧಗಳೂ ರಚನೆಯಾಗಿವೆ. ಇವುಗಳ ಪ್ರಭಾವದಿಂದ ವೀಣಾ ವಿದ್ವಾಂಸರು ಕ್ರಮೇಣ ಈ ರಾಗಗಳಲ್ಲಿ ತಾನವನ್ನು ಅಮೋಘವಾಗಿ ನುಡಿಸುವುದನ್ನು ರೂಢಿಸಿದರು. ಧಾತು ರಚನಾ ದೃಷ್ಟಿಯಿಂದ ಈ ಪಂಚರತ್ನ ಕೃತಿಗಳಲ್ಲಿ ಬೆರಗುಗೊಳಿಸುವ ರೀತಿಯಲ್ಲಿ ಕ್ರಮಬದ್ಧವಾದ ರಾಗರೂಪದ ಬೆಳವಣಿಗೆಯನ್ನು ಕಾಣುತ್ತೇವೆ. ಅಂತೆಯೇ ಅತ್ಯಂತ ಆಕರ್ಷಕವೂ ಮನೋರಂಜಕವೂ ಆದ ಮುಕ್ತಾಯ. ಪ್ರತಿ ಕೃತಿಯಲ್ಲೂ ಚರಣದ ನಂತರ ಬರುವ ಎತ್ತುಗಡೆ ಸ್ವರಸಂಯೋಜನೆ ತರಂಗದೋಪಾದಿಯಲ್ಲಿ ಉಕ್ಕಿ ಬರುತ್ತದೆ. ರಾಗಭಾವವೂ ವಾಚ್ಯಾರ್ಥವೂ ಸೊಗಸಾಗಿ ಲಯದೊಂದಿಗೆ ಹೊಂದಿಕೊಂಡು ಹರಿಯುತ್ತದೆ. ಪ್ರತಿ ಕೃತಿಗೂ ಅದಕ್ಕನುಗುಣವಾದ ಕಾಲಪ್ರಮಾಣವುಂಟು. ಎಲ್ಲ ಕೃತಿಗಳೂ ಆದಿತಾಳದಲ್ಲೇ ರಚಿತವಾಗಿವೆ. ವರಾಳಿ ಮಾತ್ರ ವಿಳಂಬ ಕಾಲ. ಸರ್ವಲಘು ವಿನ್ಯಾಸದಲ್ಲಿ ತ್ಯಾಗರಾಜರು ಆಯಾ ರಾಗದ ಸಂಪೂರ್ಣ ಸ್ವರೂಪವನ್ನು, ವ್ಯಾಪ್ತಿಯನ್ನು ಯಾವ ಕೊರತೆಗೂ ಅವಕಾಶವಿಲ್ಲದಂತೆ ಚಿತ್ರಿಸಿದ್ದಾರೆ. ಅರ್ಥ ಗೌರವ, ಪದ ಸಾಮರಸ್ಯ, ರಸವಿಲಾಸ, ಗೇಯ ಕಲ್ಪನಾ ಸೌಂದರ್ಯ ಮತ್ತು ವೈಚಿತ್ರ್ಯ ಮೊದಲಾದ ಗುಣವಿಶೇಷಗಳ ದೃಷ್ಟಿಯಿಂದ, ಈ ಗುಣಗಳ ವರ್ಧನೆಯ ದೃಷ್ಟಿಯಿಂದ ಸಾಹಿತ್ಯದ ಪಾತ್ರ

ಹಿರಿದಾಗಿದೆ. ಕೃತಿಯಲ್ಲಿ ಮೇಲಿನ ಗುಣಗಳು ಇರಬೇಕಾದುದು ಅಗತ್ಯವಾದರೆ ಈ ಪಂಚರತ್ನ ಕೃತಿಗಳು ತಕ್ಕುದಾದ ನಿದರ್ಶನ.

ಪಂಚರತ್ನ ಕೃತಿಗಳಲ್ಲಿನ ಸಾಹಿತ್ಯ ಮಹಾಕಾವ್ಯದ ಲಕ್ಷಣಗಳನ್ನುಳ್ಳ ಸಾಹಿತ್ಯವೆಂದೇ ವಿದ್ವಾಂಸರ ಅಭಿಪ್ರಾಯ. ಈ ಸಾಹಿತ್ಯಕ್ಕೆ ನಾಯಕ ಸಾಕ್ಷಾತ್ ಶ್ರೀರಾಮನೇ. ಕೇವಲ ಸಾಹಿತ್ಯ ಮತ್ತು ರಸಾಭಿಜ್ಞತೆಯ ದೃಷ್ಟಿಯಿಂದ ಪ್ರತ್ಯೇಕವಾಗಿಯೇ ಈ ಕೃತಿಗಳ ಸಾಹಿತ್ಯವು ಅಧ್ಯಯನಯೋಗ್ಯವಾದದ್ದಾಗಿದೆ. ತ್ಯಾಗರಾಜರ ಸಾಹಿತ್ಯ poems set to music ಎಂಬಂತೆ ಇದೆ. ಅದು ಕೃತಿಯ ಸಾಹಿತ್ಯಾತ್ಮಕ ಬಂಧ ಅಥವಾ ಸ್ವರೂಪ.

ಈ ಪಂಚರತ್ನ ಕೃತಿಗಳ ಪಲ್ಲವಿ ಮತ್ತು ಅನುಪಲ್ಲವಿಯ ಭಾಗಗಳಲ್ಲಿ ಅನೇಕ ಸಂಗತಿಗಳಿಗೆ ಆಸ್ಪದವಿದ್ದು ರಾಗ ಸ್ವರೂಪ ವರ್ಧನೆಗೆ ಸಹಕಾರಿಯಾಗಿದೆ. ಚರಣಗಳೆಲ್ಲ ಮಧ್ಯಮ ಕಾಲದಲ್ಲೇ ರಚಿಸಲ್ಪಟ್ಟು, ಸ್ವರಭಾಗ ಮತ್ತು ಸಾಹಿತ್ಯವನ್ನು ಪ್ರತ್ಯೇಕವಾಗಿಯೇ ಹಾಡಿ ಪಲ್ಲವಿಯನ್ನು ಸೇರುವುದು ರೂಢಿ. ಚರಣಗಳ ಧಾತು ತ್ರಿಸ್ಥಾಯಿ ಸಂಚಾರವುಳ್ಳದ್ದು. ಸಮಯೋಚಿತವಾಗಿ ಧಾತು ರಚನೆಯಲ್ಲಿ ರಾಗಸ್ವರೂಪಕ್ಕನುಗುಣವಾಗಿ ದಾಟುಸ್ವರ ಮತ್ತು ಜಂಟಿಸ್ವರ ಪ್ರಯೋಗಗಳು ಅತ್ಯಂತ ರಂಜನೀಯ. ಕೃತಿಗಳ ಶೈಲಿಯೇ ಸುಟಿಯಾಗಿದ್ದು, ಸಾಧನೆ ಮತ್ತು ಸಿದ್ಧಿಗೆ ಯೋಗ್ಯವಾಗಿದೆ. ಮಹೋನ್ನತ ನಾಯಕನ ರೂಪ, ಗುಣಾದಿ ವರ್ಣನೆಗಳನ್ನೂ ಕಥಾಪ್ರಸಂಗಗಳನ್ನೂ ಸಾರಾಸಾರ ವಿವೇಚನೆಯಿಂದ ಸಮೃದ್ಧವಾಗಿ ಪ್ರಕಟಿಸುವ ಪ್ರಕಾರಗಳು ಈ ಕೃತಿಗಳು. ಕೃತಿರಚನಾ ಕೌಶಲವನ್ನು ಎತ್ತಿಹಿಡಿಯುವ ಅತ್ಯುತ್ತಮ ನಿದರ್ಶನಗಳು ರಾಗಲಕ್ಷಣಕ್ಕೆ ಉದಾಹರಣೆಯಾಗಿಯೂ ರಾಗವಿಸ್ತಾರಕ್ಕೆ ಶ್ರೇಷ್ಠ ಮಾದರಿಯಾಗಿಯೂ ನಿಲ್ಲುವ ಲಕ್ಷ್ಯ ರಚನೆಗಳು. ಭಾವಾವೇಶ (rapture), ಆತ್ಮಪರೀಕ್ಷೆ (introspection), ಯುಕ್ತಾಯುಕ್ತ ಪರಿಜ್ಞಾನವನ್ನವಲಂಬಿಸಿದ ಜೀವನ ತತ್ತ್ವ (prudence), ಮೆಚ್ಚುಕೆ ಅಥವಾ ಶ್ಲಾಘನೆ, ಆನಂದಾನುಭವ, ದೊಡ್ಡವರಲ್ಲಿ, ಮಹಾನುಭಾವರಲ್ಲಿ ಗೌರವ, ನಮ್ರತೆ ಮುಂತಾದುವುಗಳನ್ನು ಚಿತ್ರಿಸಲು ಯೋಗ್ಯವಾದ ರಸಸ್ವರೂಪವುಳ್ಳ ರಾಗಗಳು ಈ ಐದು ಘನರಾಗಗಳು.

ಈ ರಾಗರಸಕ್ಕೆ ತಕ್ಕ ನುಡಿಯ ನಡೆ ಅತ್ಯಂತ ಸುಂದರ! ಈ ಕೃತಿಗಳು ಸಂಗೀತ ಕವಿತ್ವದ ಅತ್ಯುನ್ನತ ಮಾದರಿಗಳು. ತಾನದ ಶೈಲಿಯಲ್ಲಿ ರಚನೆಯಾಗಿ ತಾನವಿನ್ಯಾಸಕ್ಕೆ ಮಾರ್ಗದರ್ಶನ ನೀಡುವ ರಚನೆಗಳು. ಗೋಷ್ಠಿಗಾನಕ್ಕೆ ಯೋಗ್ಯವಾದ ಕೃತಿಗಳು. ಸಂಗೀತ ಸಂಪ್ರದಾಯ ಲಕ್ಷಣಗಳಿಂದ ಕೂಡಿದ ಸಂಗೀತ ಮಹಾಕಾವ್ಯ. ವೈವಿಧ್ಯಮಯವಾದ ಸಾಹಿತ್ಯಪಾದಗಳಿಂದಾದ ರಚನೆ ಈ ಕೃತಿಗಳ ವಿಶೇಷ. ದಶವಿಧ ಗಮಕಗಳ, ಯತಿ ವಿಕ್ರಮಗಳ, ಗತಿಭೇದಗಳ ಪ್ರಸ್ತಾರಗಳಿಂದ ಕೂಡಿ, ಸಂಗೀತಜ್ಞರಿಗೆ ವಿಶೇಷವಾದ ಸಂಗೀತ ರಹಸ್ಯಗಳನ್ನು ಬೋಧಿಸುವ ಗೇಯಪ್ರಕಾರಗಳೆಂದು ಇತರ ವಾಗ್ಗೇಯಕಾರರೂ ಇವುಗಳ ಮಾರ್ಗ ತಮ್ಮ ಗೇಯ

ರಚನೆಗಳಲ್ಲಿ ಅನುಸರಿಸಿದ್ದಾರೆ. ಉದಾ: ವೀಣಾ ಕುಪ್ಪಯ್ಯರ್ ಅವರ ಕಾಳಹಸ್ತೀ ಪಂಚರತ್ನ, ವೆಂಕಟೇಶ ಪಂಚರತ್ನ ಮೊದಲಾದುವುಗಳನ್ನು ಸ್ಮರಿಸಬಹುದು. ತ್ಯಾಗರಾಜರ ಬೇರೆ ರಚನೆಗಳಲ್ಲಿ ಕಾಣದ ವಿಶಿಷ್ಟ ರೀತಿಯ ಗೇಯ ಪ್ರಕಾರವು. ಒಂದೊಂದು ವಾಕ್ಯವೇ ಚರಣವಾಗಿ 2, 3, 4 ವಾಕ್ಯಗಳ ಚರಣಗಳಾಗಿ, ವಿಲಕ್ಷಣವಾದ ಛಂದಸ್ಸಿನಿಂದ ಕೂಡಿ ತಾಳಪ್ರಕ್ರಿಯೆಯ, ಸ್ವರಸಮೂಹದ ರಂಜಕತ್ವದ ಭಿನ್ನತೆಯನ್ನು ಬಿಂಬಿಸುತ್ತದೆ. ಉದಾ: ಜಗದಾನಂದಕಾರಕ ಕೃತಿಯ 'ನಿಗಮ ನೀರಜ' ಎಂಬ ಚರಣದಲ್ಲಿ ಒಂದನೇ ಪಾದ 21 ಮಾತ್ರಾ ಪ್ರಮಾಣ, ಎರಡನೆಯ ಪಾದ 24 ಮಾತ್ರಾ ಪ್ರಮಾಣ, ಮೂರನೆಯ ಪಾದ 17 ಮಾತ್ರಾ ಪ್ರಮಾಣ; ಆದರೆ, ಈ ಕೃತಿಯ ಪಲ್ಲವಿಯ ಎರಡು ಪಾದ ಸಾಹಿತ್ಯ 31 ಮಾತ್ರಾ ಪ್ರಮಾಣ; ಹಾಗೆಯೇ 'ಇಂದ್ರನೀಲಮಣಿ' ಎಂಬ ಚರಣದ ಎರಡು ಪಾದಗಳು 31 ಸಮಮಾತ್ರಾ ಪ್ರಮಾಣ. ಅನುಪಲ್ಲವಿಯ ಮೊದಲನೇ ಪಾದದಲ್ಲಿ 20 ಮಾತ್ರಾ ಪ್ರಮಾಣವಿದ್ದು ಎರಡನೇ ಪಾದ ಮೊದಲ ಪಾದದ ಒಂದೂವರೆಯಷ್ಟು ಅಂದರೆ 24 ಮಾತ್ರಾ ಪ್ರಮಾಣವಿರುತ್ತದೆ. ಇದೇ ರೀತಿಯ ಛಂದೋಬಂಧವನ್ನು ಉಳಿದ ಕೃತಿಗಳಲ್ಲಿ ಕಾಣಬಹುದು. ವಿಶೇಷವಾದ ರಚನೆಯಾದ (ಸಾಹಿತ್ಯ, ಸಂಗೀತದ ದೃಷ್ಟಿಯಿಂದ) ಆರಭಿ ಮತ್ತು ಶ್ರೀರಾಗಗಳ ರಚನೆಯನ್ನು ಗಮನಿಸಿದಾಗ, ಚರಣವನ್ನು ಬಿಟ್ಟು ಅನುಬಂಧ ಸಾಹಿತ್ಯವನ್ನು ಹೊಂದಿರುವುದಲ್ಲದೇ, ಇದರ ಗಾಯನ ಉಳಿದ ಚರಣಗಳಿಂದ ವಿಭಿನ್ನವಾಗಿ ನಿಲ್ಲುತ್ತದೆ. ಉದಾ: ಸಾಧಿಂಚನ + ಸದ್ಭಕ್ತುಲ; 'ಎಂದರೋ' ಕೃತಿಯ ಕಡೇ ಚರಣವನ್ನು ಹಾಡಿ ಪಲ್ಲವಿಗೆ ಸೇರಿ ತಕ್ಷಣ ಅನುಬಂಧ ಸಾಹಿತ್ಯವಾದ 'ಪ್ರೇಮಮುಪ್ಪಿರಿ'ಯನ್ನು ಹಾಡಿ ಪುನಃ ಪಲ್ಲವಿಯನ್ನು ಹಾಡಿ ಮುಕ್ತಾಯ ಮಾಡುವುದು. ಈ ಅನುಬಂಧ ಸಾಹಿತ್ಯ ಉಳಿದ ಮೂರು ಕೃತಿಗಳಿಗೆ ಇಲ್ಲ. ಆರಭಿ ರಾಗದ ಕೃತಿಯಲ್ಲಿ ಚರಣಗಳನ್ನು ಕ್ರಮವಾಗಿ ಹಾಡಿ ಪಲ್ಲವಿಯನ್ನು ಸೇರದೆ ಪುನಃ ಚರಣದ ಪ್ರಾರಂಭದ ಸಾಹಿತ್ಯವಾದ 'ಸಮಯಾನಿಕಿ' ಭಾಗವನ್ನೇ ಹಾಡುವುದು ಸರಿಯಲ್ಲ. ಅರ್ಥದ ಅನ್ವಯಕ್ಕೆ ಧಕ್ಕೆ ಬರುತ್ತದೆ. ಈ ಕ್ರಮವನ್ನು ಯಾರು ಏಕೆ ರೂಢಿಸಿದರೋ ತಿಳಿಯದು. ಮಿಕ್ಕ ಕೃತಿಗಳಂತೆ ಚರಣಗಳನ್ನು ಹಾಡಿ ಪಲ್ಲವಿಯನ್ನು ಸೇರುವುದೇ ವಿಹಿತವಾದುದು. ಈ ಐದು ಕೃತಿಗಳಲ್ಲಿ ಮೊದಲು ರಚನೆಯಾದುದು 'ಸಾಧಿಂಚನೆ', ನಂತರ 'ಎಂದುರೋ ಮಹಾನುಭಾವುಲು'. ಇವುಗಳ ನಂತರ ಮಿಕ್ಕ ಮೂರು ಕೃತಿಗಳ ರಚನೆಯಾದವು.

ಆದಿ ನಾಟ ಅಂತ್ಯ ಸುರಟಿ ಎಂಬ ವಚನಾನುಸಾರ ನಾಟ ರಾಗದ ಕೃತಿಯಿಂದ ಗಾಯನವನ್ನು ಪ್ರಾರಂಭಿಸುವುದು ರೂಢಿ. 'ಜಗದಾನಂದಕಾರಕ' ಕೃತಿಯ ಸಾಹಿತ್ಯ ಸಂಸ್ಕೃತ. ಮಂಗಳಪ್ರದವಾದ ನಾಟ ರಾಗದ ಕೃತಿಯೊಂದಿಗೆ ಶ್ರೀರಾಮನಿಗೆ ಜಯವನ್ನು ಕೋರುವ ಮೂಲಕ ಕೃತಿಯು ಪ್ರಾರಂಭವಾಗುತ್ತದೆ. ನಾಟ ರಾಗದಲ್ಲಿ ವೀರ ಮತ್ತು ಅದ್ಭುತ ರಸಗಳು ರಾಗದ ಸ್ವರಸ್ಥಾನದಿಂದಲೇ ಸಹಜವಾಗಿ ಸಿದ್ಧವಾಗಿವೆ. ಈ ರಾಗದಲ್ಲಿ ಷಡ್ಜ, ರಿಷಭ, ಗಾಂಧಾರ,

ಮಧ್ಯಮ, ಪಂಚಮ, ನಿಷಾದ ಸ್ವರಗಳು ಗ್ರಹಾಂಶನ್ಯಾಸ ಸ್ವರಗಳು. ದೈವತವು ನ್ಯಾಸವಾಗಲಾರದು ಮತ್ತು ಅಲ್ಪ ಪ್ರಯೋಗವುಳ್ಳ ಸ್ವರ. ಪ-ರಿಷಭ-ದೈವತ ಪರಸ್ಪರ ವಾದಿ ಸಂವಾದಿ ಸ್ವರಗಳು. ರಿಷಭ, ಮಧ್ಯಮ, ನಿಷಾದ ಸ್ವರಗಳು ರಾಗಛಾಯಾ ಸ್ವರಗಳು. ನಾಟ ರಾಗದ ಕೃತಿಯಲ್ಲಿ ಶ್ರೀರಾಮನ ನಾನಾ ಗುಣಗಳನ್ನು, ಚರಿತ್ರೆಯನ್ನು ತ್ಯಾಗರಾಜರು ಹಾಡಿ ಹೊಗಳುತ್ತಾರೆ. 'ಗಗನಾಧಿಪ ಸತ್ಕುಲಜ' ಎಂಬ ಅನುಪಲ್ಲವಿಯ ವಾಕ್ಯ ವಾಲ್ಮೀಕಿಯ 'ಇಕ್ಷ್ವಾಕು ವಂಶ ಪ್ರಭವೋ ರಾಮೋನಾಮ' ಎಂಬ ವಾಕ್ಯವನ್ನು ಜ್ಞಾಪಕಕ್ಕೆ ತರುತ್ತದೆ. ಕೃತಿಯ ಸಾಹಿತ್ಯ ರಾಮಾಷ್ಟೋತ್ತರಶತ ನಾಮಗಳನ್ನು ಒಳಗೊಂಡು ನಾಮಪೂಜೆಯಂತಿದೆ. ಈ ರಾಗದಲ್ಲಿನ ವಿವಾದಿ ಸ್ವರ ದೋಷವನ್ನು ಗಮನಿಸಿಯೇ ಧಾತು ರಚನೆಯಾಗಿದೆ. ರಾಗದ ಸ್ವರೂಪವನ್ನು ಸಂಪೂರ್ಣವಾಗಿ ವಿವರಿಸುವ ಎಲ್ಲ ಬಗೆಯ ಸಂಚಾರಗಳೂ ಅಡಕವಾಗಿವೆ. ಪ್ರತಿ ಚರಣದ ಸ್ವರ ಸಂಯೋಜನೆಯಲ್ಲಿ ಚಿತ್ರವಿಚಿತ್ರವಾದ ಲಯ ವಿನ್ಯಾಸವು ಗಮನಾರ್ಹ (ಉದಾ: ಕೊನಕೋಲ ಸಹಿತ). ಕೆಲವು ಚರಣಗಳು ತ್ರಿಸ್ಥಾಯಿ ಸಂಚಾರ.

ಈ ಘನ ಗಾಂಭೀರ್ಯದ ಕೃತಿಯ ನಂತರ ಮನಸ್ಸಿನ ಅಳಲನ್ನು ತೋಡಿಕೊಳ್ಳುವ (plaintive), ಪಶ್ಚಾತ್ತಾಪದಿಂದ ಕೂಡಿದ ದೈನ್ಯರಸಪ್ರಧಾನವಾದ ಕೃತಿ 'ದುಡುಕುಗಲ'. ಈ ಕೃತಿಯ ಆರನೆಯ ಚರಣದಲ್ಲಿ 'ಸಂಗೀತ ಕಲೆಯ ಸ್ವರೂಪ ಮತ್ತು ಮಹತ್ವವನ್ನು ತಿಳಿಯದ ನಟ, ವಿಟಾದಿಗಳಿಗೂ ಸ್ತ್ರೀಯರಿಗೂ ಉಪದೇಶ ಮಾಡುವುದರಿಂದ ಅವರು ನನ್ನ ವಶರಾಗುತ್ತಾರೆ. ಅದರಿಂದ ನನ್ನ ಸ್ವಾರ್ಥವೂ ನೆರವೇರುತ್ತದೆ ಎಂಬ ಅಜ್ಞಾನದಿಂದ ಕಲೆಯ ಉಪದೇಶಕ್ಕೆ ತೊಡಗಿದೆ. ಇಂತಹ ದುಡುಕಿನ ಗುಣ ಉಳ್ಳವನನ್ನು ಯಾವ ರಾಜಕುಮಾರ ತಾನೇ ಕಾಪಾಡಿಯಾನು' ಎಂಬ ಮಾತಿನಿಂದ ಚೆನ್ನಾಗಿ ಗಮನಿಸಬೇಕಾದ್ದು ತ್ಯಾಗರಾಜರು ಸಂಗೀತ ಕಲೆಯ ವಿಷಯದಲ್ಲಿ ಇಟ್ಟಿದ್ದ ಭಕ್ತಿ ಗೌರವಗಳನ್ನು. ಅಂತೆಯೇ ಒಂಬತ್ತನೇ ಚರಣದ ಭಾವವೂ ಉತ್ಕೃಷ್ಟವಾದುದು - ವಿವರಣೆ ಆರನೇ ಚರಣ ಮತ್ತು ಒಂಬತ್ತನೇ ಚರಣದ ಸಾಹಿತ್ಯ ತಾತ್ಪರ್ಯ.

ತ್ಯಾಗರಾಜರ ಯಾವ ಕೃತಿಯನ್ನು ನೋಡಿದರೂ ಅವರು ಲೋಕಕ್ಕೆ ಯಾವ ಆದೇಶವನ್ನು ಮತ್ತು ಉಪದೇಶವನ್ನು ಮಾಡಲು ಹೊರಡಲಿಲ್ಲ. ಅವೆಲ್ಲವನ್ನು ತಮಗೇ ತಮ್ಮ ಮನಸ್ಸಿಗೇ ಹೇಳಿಕೊಂಡವರು. ಮಾಯಾಮಾಳವಗೌಳ ರಾಗದ ಜನ್ಯವಾದ ಗೌಳ ರಾಗ ಪ್ರಾಚೀನ ರಾಗ. ನಿಷಾದ ಗ್ರಹ. ಆದರೆ ಷಡ್ಜ, ರಿಷಭ, ಮಧ್ಯಮ ಮತ್ತು ಪಂಚಮ ಸ್ವರಗಳು ಗ್ರಹಸ್ವರಗಳಾಗುತ್ತವೆ. ಸಾಮಾನ್ಯವಾಗಿ ಅದ್ಭುತ ರಸವೇ ಪ್ರಧಾನವಾದರೂ 'ರಿಗಮರಿಗಸ' ಎಂಬ ರಾಗಸಂಚಾರದಲ್ಲಿ ಈ ವೀರರಸ ಕೊಂಚ ಶಮನವಾಗುತ್ತದೆ. ರಿಷಭ-ಮಧ್ಯಮ-ನಿಷಾದ ರಾಗ ಛಾಯಾಸ್ವರಗಳು, ಕೃತಿಯ ಧಾತು ಸಂಯೋಜನೆಯಲ್ಲಿ ಕಂಡು ಬರುವ ಲಯವಿನ್ಯಾಸ. ಈ ರಾಗದಲ್ಲಿ ಮಧ್ಯಮ ಕಾಲದ ಸಂಚಾರಗಳೇ ರಂಜನೀಯ.

ಆರಭಿ ರಾಗದ ಕೃತಿ

ಇದು ನಿಂದಾಸ್ತುತಿ. ತಮ್ಮ ಮನಸ್ಸನ್ನು ಕುರಿತು, 'ಎಲೆ ಮನಸೇ, ಶ್ರೀರಾಮನು ತಾನೇ ಬೋಧಿಸಿದ ಸದುಪದೇಶಗಳನ್ನೆಲ್ಲ ಸುಳ್ಳಾಗಿಸಿ, ಸಮಯಕ್ಕೆ ತಕ್ಕಂತೆ ಮಾತನಾಡುತ್ತ ತಾನು ಹಿಡಿದ ಪಟ್ಟನ್ನು ಬಿಡದೆ ಸಾಧಿಸಿಕೊಂಡ, ವಸುದೇವ ದೇವಕಿಯನ್ನು ಸಂಕಟಕ್ಕೀಡು ಮಾಡಿದ ಇಂಥವನಿಗೆ ರಂಗನೆಂಬ ಹೆಸರು. ಗಂಗಾಜನಕ, ಸಂಗೀತ ಸಂಪ್ರದಾಯವನ್ನು ತಿಳಿದವನು. ತ್ಯಾಗರಾಜನಾದ ನನ್ನಿಂದ ಸ್ತೋತ್ರ ಮಾಡಲ್ಪಟ್ಟ ಶ್ರೀರಾಮ, ಚೆಂತರಾಕನೆ - ನನ್ನ ಹತ್ತಿರ ಬರದೇನೇ ತನ್ನ ಪಟ್ಟನ್ನು ಸಾಧಿಸಿಕೊಂಡ' ಅನ್ನುತ್ತಾರೆ.

ಆರಭಿಃ ಆರಭಿಸ್ಸರ್ವರಾಗೇಯೋ ಆರೋಹೇಗನಿವರ್ಜಿತಃ
ಕ್ವಚಿದಾರೋಹ ಸಂಯುಕ್ತ ನಿಷಾದೋ ನಿಗ್ರಹೋಭವೇತ್

ಈ ರಾಗ ನಿಷಾದ ಗ್ರಹವುಳ್ಳದ್ದು. ಆದರೆ ಷಡ್ಜ, ರಿಷಭ, ಪಂಚಮ, ದೈವತ ಈ ಸ್ವರಗಳು ಗ್ರಹಸ್ವರಗಳಾಗುತ್ತವೆ. ಮಧ್ಯಮ ಕಾಲ ನಡಿಗೆಯುಳ್ಳ ರಾಗ. ರಿಷಭ, ಮಧ್ಯಮ, ದೈವತಗಳು ಜೀವಸ್ವರಗಳು. ರಿಷಭ ಮತ್ತು ಪಂಚಮ ನ್ಯಾಸಸ್ವರಗಳು. 'ರಿದ' ವಾದಿ ಸಂವಾದಿ ಸ್ವರಗಳು. ನಿಷಾದ ಗಾಂಧಾರಗಳು ನ್ಯಾಸವಲ್ಲ (ಮೇಲಿನ ಶ್ಲೋಕದಲ್ಲಿ ನಿಷಾದ ಗ್ರಹಸ್ವರವೆಂದು ಹೇಳಲ್ಪಟ್ಟಿದ್ದರೂ ನಿಷಾದವು ಅತಿ ದುರ್ಬಲ ಸ್ವರವಾದ್ದರಿಂದ ಈ ಶಾಸ್ತ್ರವಚನ ಸಾರ್ಥಕವಾಗಲಾರದು). ಈ ರಾಗದಲ್ಲಿ ಶೃಂಗಾರ, ವೀರ ಮತ್ತು ಅದ್ಭುತ ರಸಗಳೇ ಪ್ರಧಾನ. ನಿಂದಾಸ್ತುತಿಗೂ ಅಷ್ಟೇ ಯೋಗ್ಯವಾದುದು. ಉತ್ಸಾಹ, ಆವೇಗ, ಹರ್ಷ, ಮದ ಮುಂತಾದ ಸ್ಥಿತಿಗಳೂ ವಿಶದವಾಗುತ್ತವೆ.

ಮುಂದಿನ ವರಾಳಿ ರಾಗದ ಕೃತಿಯಲ್ಲಿ ಶ್ರೀರಾಮನ ದಿವ್ಯ ಸೌಂದರ್ಯವನ್ನು ವರ್ಣಿಸುತ್ತಾರೆ. ಆ ಅಲೌಕಿಕ ಸೌಂದರ್ಯವನ್ನು ನೋಡಿದಷ್ಟೂ ತೃಪ್ತಿಯೇ ಆಗದೆ ಪುನಃ ಪುನಃ ನೋಡಬೇಕೆಂಬ ಬಯಕೆಯು ಬಲಿಯುವಂಥ ಸ್ವರೂಪ.

ಈ ರಾಗ 39ನೇ ಝಾಲವರಾಳಿ ಅಥವಾ ಧಾಲಿವರಾಳಿ. ಗಾಂಧಾರವೇ ಈ ರಾಗದ ಜೀವ ಮತ್ತು ಛಾಯಸ್ವರ. ಪ್ರತಿಮಧ್ಯಮ ಮತ್ತು ಕಾಕಲಿ ನಿಷಾದಗಳು ಪರಸ್ಪರ ವಾದಿ ಸಂವಾದಿ ಸ್ವರಗಳು. ಈ ರಾಗದ ಮಧ್ಯಮ ಸ್ವರಕ್ಕೆ ವರಾಳಿ ಮಧ್ಯಮವೆಂದೇ ಹೆಸರು. ಅದು ಪ್ರತಿಮಧ್ಯಮದ ಸ್ಥಾನಕ್ಕಿಂತ ಒಂದು ಶ್ರುತಿಪ್ರಮಾಣ ತೀವ್ರವಾಗಿಯೇ ಇರುತ್ತದೆ. ಪಂಚಮ ಸಂಬಂಧವಾಗಿಯೇ ನುಡಿಯುತ್ತದೆ. ಭಕ್ತಿರಸಪ್ರಧಾನವಾದ ರಾಗ. ಮಧ್ಯಮ, ಪಂಚಮ, ಶುದ್ಧ ದೈವತಗಳು ಗ್ರಹಾಂಶ ನ್ಯಾಸ ಸ್ವರಗಳು. 'ಸನಿಪಸರಿಗಾರಿಸ' ಎಂಬ ಸಂಚಾರದಲ್ಲಿ ಗಾಂಧಾರವು ಒಂದು ಶ್ರುತಿ ಪ್ರಮಾಣ ಕಮ್ಮಿಯಾಗಿಯೇ ನುಡಿಯುತ್ತದೆ. ಕರುಣಾರಸ ಪ್ರಧಾನವಾದ ರಾಗ. ತ್ರಿಸ್ಥಾಯಿ ಸಂಚಾರವುಳ್ಳ ರಾಗ. ಗಾಂಧಾರ ಸ್ವರವನ್ನು ಚತುಶ್ರುತಿ ರಿಷಭದ ಸಮೀಪದಲ್ಲಿ ಗಮಕದಿಂದ ಹಾಡುವುದರಿಂದ ವಿವಾದಿತ್ವವನ್ನು ಹೋಗಲಾಡಿಸಬಹುದು.

ಕೊನೆಯದಾಗಿ ಮಂಗಳಪ್ರದವಾದ ಶ್ರೀರಾಗ ಕೃತಿ 'ಎಂದರೋ ಮಹಾನುಭಾವುಲು'. ಈ ರಾಗದಲ್ಲಿ ನಿಷಾದ, ರಿಷಭ, ಷಡ್ಜ, ಪಂಚಮ ಸ್ವರಗಳು ಗ್ರಹಾಂಶನ್ಯಾಸ ಸ್ವರಗಳು. ಗಾಂಧಾರ, ನಿಷಾದ ಸ್ವರಗಳು ತಗ್ಗು ಛಾಯೆಯಲ್ಲೇ ನುಡಿಯುತ್ತವೆ. ರಿಷಭದಿಂದಲೇ ಏರು ಗಮಕದೊಡನೆ ಗಾಂಧಾರವು ನುಡಿಯುತ್ತದೆ. ಶಾಂತರಸ ಪ್ರಧಾನವಾದ ರಾಗ.

ಇನ್ನು ಭಾವದ ವಿಚಾರ. ಭಾವ ಮನದ ಮೊದಲ ವಿಕ್ರಿಯೆ. 'ನಿರ್ವಿಕಾರಾತ್ಮಕೇ ಚಿತ್ತೇ ಭಾವಃ ಪ್ರಥಮ ವಿಕ್ರಿಯಃ, ಭಾವಂಪುನಃ ಪ್ರವೃತ್ತಿ'. ಈ ರೀತಿ ಭಾವವನ್ನು ಲಾಕ್ಷಣಿಕರು ವ್ಯಾಖ್ಯಾನಿಸುತ್ತಾರೆ. ಹೊಸದಾಗಿ ಗೋಚರಿಸಿದ ವಿಷಯದ ಮೇಲೆ ಒಡನೆಯೆ ಮನಸ್ಸು ತಾಳುವ ಕ್ರಿಯೆಯೇ ಭಾವ ಎನಿಸುತ್ತದೆ. ಈ ಭಾವವು ರಸಪುಷ್ಟಿಯನ್ನು ವಿಶೇಷಿಸುವುದರಿಂದಾಗಿ 'ವಿಭಾವ'ವೆನಿಸುತ್ತದೆ. ಈ ಭಾವದಿಂದಲೇ ವಿಶಿಷ್ಟವಾಗಿ ಜನಿಸಿದ ರಸವನ್ನು ಭಾವುಕರು ಅರಿತು ಅನುಭವಿಸುವುದರಿಂದ 'ಅನುಭಾವ'ವೆನಿಸುತ್ತದೆ. ಇದು ಸ್ಥಿರವಾಗಿ ಮನಸ್ಸಿನಲ್ಲಿ ನಿಲ್ಲುವುದೇ ಸ್ಥಾಯೀಭಾವ. ಇದೇ ರಸಸ್ಥಾಯಿ. ಇದನ್ನು ಆನಂದಿಸಿ ಸವಿಯುವವರೇ ರಸಿಕರು.

ಕೃತಿಯ ಶರೀರದೊಳಗಣ ದಿವ್ಯ ತ್ರಾಣವೇ ಸಾಹಿತ್ಯ. ಈ ಸಾಹಿತ್ಯ ಸಂಗೀತಗಳಲ್ಲಿ ವಾಗ್ಗೇಯಕಾರನು ಕಂಡ ಉದ್ದೀಪನದ ಅಲಂಬನ ಭಾವಗಳಿಂದ ಉಕ್ಕಿಬಂದ ರಸಪ್ರಣಾಳಿಗಳು ಧಾತು ಮತ್ತು ಮಾತು ರೂಪದಲ್ಲಿ ಹರಿಯುತ್ತದೆ. ಈ ರಸೋತ್ಥಾನಕ್ಕೆ ಆತನೇ ಕರ್ತೃ. ವಾಗ್ಗೇಯಕಾರನು ಮಾಡಿಟ್ಟಿರುವ ರಸಪಾಕವನ್ನು ಶ್ರೋತೃಗಳಿಗೆ ಹಂಚುವ ಹರಿಕಾರನಾಗಬೇಕು ಗಾಯಕ. ಈ ಗಾಯಕ ವಾಗ್ಗೇಯಕಾರನ ಹೃದಯವನ್ನರಿತವನಾಗಿರಬೇಕು. ವಾಗ್ಗೇಯಕಾರನ ಕುಶಲಕರ್ಮವೇ ಕೃತಿ. ರಸಗಳ ಸಮ್ಮಿಲನವು ಕೃತಿಯಲ್ಲಿ ವಾಗ್ಗೇಯಕಾರನ ಮನೋಭಾವದಿಂದ ಅರಳಿದ್ದು ರಸದ ಮುದ್ರೆಯೊಡನೆ ಗಾಯಕನ ಹೃದಯದಲ್ಲಿ ಅರಳಿ ಆಲಾಪಿಸಲ್ಪಟ್ಟಾಗ ಆ ರಸವೇ ಶ್ರೋತೃವಿನ ಮನಸ್ಸಿಗೆ ಸುರಿಯಲ್ಪಟ್ಟು ಭಾವಪೂರ್ಣವಾದೀತು. ಇದುವೇ ಗಾಯನದಲ್ಲಿ ರಸಭಾವ ಮತ್ತು ಗಾಯನದ ಪ್ರಭಾವ. ಆಗ ವಾಗ್ಗೇಯಕಾರನು ಶ್ರೋತೃವಿನ ಹೃದಯದಲ್ಲಿ ಹುಟ್ಟಿ ಬಂದಂತಾಗುವುದು. ಇಂತಹ ಪ್ರಕ್ರಿಯೆ ವಾಗ್ಗೇಯಕಾರನಿಗೆ ಅಮರತ್ವವನ್ನೂ ಕೃತಿಗೆ ಶಾಶ್ವತ ಕೀರ್ತಿಯನ್ನೂ ತಂದು ಕೊಡಬಲ್ಲುದು. ಗಾಯಕರು ಈ ಮರ್ಮವನ್ನರಿತು ಹಾಡಬೇಕು. ತ್ಯಾಗರಾಜರ ಕೃತಿಗಳಲ್ಲಿ ಜಾಗೃತ ಸಂಗೀತವಿದೆ. ಆಳವಾಗಿ ಏಕಾಗ್ರತೆಯಿಂದ ವ್ಯಾಸಂಗ ಮಾಡಿದರೆ ಇಂದ್ರಜಾಲದಂತೆ ನಮ್ಮ ಶಕ್ತಿಗಳನ್ನು ಬೆಳೆಸಬಲ್ಲ ಪ್ರಭಾವವನ್ನು ಅವುಗಳಲ್ಲಿ ಕಾಣಬಹುದು. ಶಾಶ್ವತವಾಗಿ ಉಳಿಯುವಂತಹ ಕೃತಿಗಳು ಇವು. ಏಕಕಾಲದಲ್ಲಿ ಕವಿ, ಸಂತ, ದಾರ್ಶನಿಕರಾಗಿ ತಮ್ಮ ಧ್ಯೇಯಗಳಿಗೆ ತಕ್ಕಂತೆ ಬದುಕನ್ನು ನಡೆಸಿದ ಆದರ್ಶ ಮಹನೀಯರು ಶ್ರೀ ತ್ಯಾಗರಾಜ ಸ್ವಾಮಿಗಳು.

ನಂ. 4, ಪುಟ್ಟರಂಗಣ್ಣ ಲೇಔಟ್, ಶೇಷಾದ್ರೀಪುರಂ, ಬೆಂಗಳೂರು - 20

ದೀಕ್ಷಿತರ ರಚನೆಗಳಲ್ಲಿ ಸಂಗೀತ ಮತ್ತು ಸಾಹಿತ್ಯಗಳ ಅಭಿವ್ಯಕ್ತಿ

✍ ಆನಂದರಾಮ ಉಡುಪ

ಹಿನ್ನೆಲೆ

ಮನೋಧರ್ಮ ಸಂಗೀತದ ಮುಖ್ಯ ಪ್ರಕಾರವೇ ರಾಗಾಲಾಪನೆ, ತಾನ. ಅದನ್ನನುಸರಿಸಿ ಬರುವಂಥವು ವಿವಿಧ ಗೀತಪ್ರಕಾರಗಳು - ವರ್ಣ, ದರು, ಸ್ವರಜತಿ, ಕೃತಿ, ದೇವರನಾಮ, ಪದ, ರಾಗಮಾಲಿಕೆ, ಜಾವಳಿ, ತಿಲ್ಲಾನ, ಶ್ಲೋಕ ಇತ್ಯಾದಿ. ಇವುಗಳ ನಡುವೆ ರಾಗ-ತಾನ-ಪಲ್ಲವಿ ಗಾಯನ ಸೇರುತ್ತದೆ. ಭಕ್ತಿಪೂರಿತ ಸಾಹಿತ್ಯದಿಂದ ವಿವಿಧ ದೇವತೆಗಳನ್ನು ಸ್ತುತಿಸುವ 'ಕಲ್ಪಿತ ಸಂಗೀತ'ದ ಮುಖ್ಯ ಪ್ರಕಾರವಾದ 'ಕೃತಿ' (ಹಿಂದೆ ಇವುಗಳನ್ನೇ 'ಕೀರ್ತನೆ'ಗಳು ಎಂದು ಕರೆಯುತ್ತಿದ್ದರು)ಗಳು ವೈಭವೋಪೇತವಾದ ಸಾಹಿತ್ಯ ಸೌಧಗಳನ್ನು ಅಳವಡಿಸಿಕೊಂಡು ಧಾತು-ಮಾತು (ಸ್ವರಪ್ರಸ್ತಾರ-ಸಾಹಿತ್ಯ)ಗಳು ಜತೆಜತೆಯಾಗಿ ಸಾಗುವ ರಚನೆಗಳು. ಇವುಗಳಲ್ಲಿ ಚಿಟ್ಟೆಸ್ವರ-ಸಾಹಿತ್ಯ, ಸೊಲ್ಕಟ್ಟು ಸ್ವರ (ಚಿಟ್ಟೆಸ್ವರದೊಡನೆ ಮಿಳಿತವಾಗಿರುವ ಜತಿ)ಗಳೂ ಸೇರುವುದಿದೆ.

'ಧಾತು'ವಿಗನುಗುಣವಾದ 'ಮಾತು', ಹಾಗೆಯೇ 'ಮಾತು'ವಿಗೆ ಅನುಗುಣವಾದ ಧಾತು, ಅಲ್ಲಲ್ಲಿ ಹದವರಿತು ಸ್ವರಾಕ್ಷರಗಳು (ಧಾತು-ಮಾತು ಒಂದೇ ಆಗಿರುವ ವಾಗ್ಗೇಯ ನೈಪುಣ್ಯ), ಪ್ರಾಸಾನುಪ್ರಾಸಗಳು, ಇತ್ಯಾದಿ - ಹೀಗಿದ್ದರೇನೇ ಭಾವಪೂರ್ಣವಾದ ಸಂಗೀತ ಹೊಮ್ಮುತ್ತದೆ. ಇವೆಲ್ಲ ಸಾಧಿಸುವಲ್ಲಿ ವಾಗ್ಗೇಯಕಾರನು ಆಯಾ ರಾಗಗಳ ರಂಜಕ ಪ್ರಯೋಗಗಳನ್ನೂ ನೀಡುವಲ್ಲಿ ಕುಶಲತೆ ಹೊಂದಿರಬೇಕು. ಈಯೆಲ್ಲ ವಾಗ್ಗೇಯ ಗುಣಗಳನ್ನು ಹೊಂದಿದ್ದ ಸಂಗೀತ ರತ್ನತ್ರಯರಾದ ನಾದಯೋಗಿ ತ್ಯಾಗರಾಜರು (1767 - 1847), ವೈಣಿಕ-ಗಾಯಕ ಗುರುಗುಹ ನಾದಜ್ಯೋತಿ ಮುತ್ತುಸ್ವಾಮಿ ದೀಕ್ಷಿತರು (1775 - 1835) ಮತ್ತು ದೇವೀಭಕ್ತ ಶ್ಯಾಮಾಶಾಸ್ತ್ರಿಗಳು (1762 - 1827) ಇಂದಿಗೂ ಪ್ರಸ್ತುತರಾಗಿದ್ದಾರೆ. ಒಬ್ಬೊಬ್ಬರೂ ಒಂದೊಂದು ಹಂತದಲ್ಲಿ ತಮಗೆ ಸಾಟಿಯಿಲ್ಲ ಎಂಬುದನ್ನು ತೋರಿಸಿದ್ದಾರೆ. ತ್ಯಾಗರಾಜರ ರಚನೆಗಳು ದ್ರಾಕ್ಷಾಪಾಕವೆಂದರು. ದೀಕ್ಷಿತರ ಕೃತಿಗಳು ಕದಳೀಪಾಕವೆಂದರು. ಶ್ಯಾಮಾಶಾಸ್ತ್ರಿಗಳ ಕೊಡುಗೆ ನಾಳೀಕೇರಪಾಕವೆಂದು ಹೆಸರಾಯಿತು. ದ್ರಾಕ್ಷಾಪಾಕದಂತೆ ಆಪಾತಮಧುರವಾಗಿವೆ ಸ್ವಾಮೀ ತ್ಯಾಗರಾಜರ ರಾಮಭಕ್ತಿಪೂರ್ಣ ಗೇಯ ರಚನೆಗಳು. ದೀಕ್ಷಿತರ ಕೃತಿಗಳನ್ನು ಸವಿಯಬೇಕಾದರೆ ಕದಳೀಫಲದ ಕವಚ ತೆಗೆದಂತೆ ತುಸು ಮೇಲ್ಮಟ್ಟದ ಸಂಗೀತದ ಜ್ಞಾನ ಬೇಕು. ರಾಗಸ್ವರೂಪವನ್ನು ನಿಚ್ಚಳವಾಗಿ ತೋರಿಸುವ, ಅನೇಕ ಕ್ಷೇತ್ರದೇವತೆಗಳನ್ನು ಸ್ತುತಿಸುವ,

ಶ್ರೇಷ್ಠ ಸಂಸ್ಕೃತ ಸಾಹಿತ್ಯ ಗೇಯರೂಪಗಳನ್ನು ಹೊಂದಿದ ರಚನೆಗಳವು. ಸಾಹಿತ್ಯದ ಸೊಗಸಿನ ಜತೆಗೆ ಲಯದ ಗಾಂಭೀರ್ಯವನ್ನೂ, ಕ್ಲಿಷ್ಟತೆಯನ್ನೂ ಹೊಂದಿದ ಶ್ಯಾಮಾಶಾಸ್ತ್ರಿಗಳ ರಚನೆಗಳನ್ನು ಸವಿಯಲು ನಾಳೀಕೇರದ ಪದರಗಳನ್ನು ಒಳಹೊಕ್ಕು ತಿರುಳನ್ನು ಸವಿಯಬೇಕಾಗಿದೆ. ಅವರು ತಮ್ಮ ಆರಾಧ್ಯದೈವ ಬಂಗಾರು ಕಾಮಾಕ್ಷಿ, ಕಂಚಿ ಕಾಮಾಕ್ಷಿಯರನ್ನು ಸ್ತುತಿಸಿದ್ದೇ ಹೆಚ್ಚು.

ದೀಕ್ಷಿತ ಕೃತಿಗಳ ವೈಶಿಷ್ಟ್ಯಗಳು

ನಾವು ಈ ಲೇಖನದಲ್ಲಿ ಪರಿಶೀಲಿಸ ಹೊರಟಿರುವುದು ದೀಕ್ಷಿತರ ನಾದಸೃಷ್ಟಿ ಮತ್ತು ಅದಕ್ಕೆ ಹೊಂದಿಕೆಯಾದ ಅನುಪಮ ಸಾಹಿತ್ಯಪುಷ್ಟಿ. ರಾಗದ ಸುಂದರ ಚಿತ್ರಣ ಸಾಗಿದಂತೆ ಅವರ ಸಂಸ್ಕೃತ ಸಾಹಿತ್ಯ ಸೃಷ್ಟಿಯ ಸೊಗಸೇ ಬೇರೆ. ಅನುಪಲ್ಲವಿಯ ಅಥವಾ ಚರಣಗಳ ಕೊನೆಯಲ್ಲಿ ಬರುವ ಮಧ್ಯಮಕಾಲದ ಒಂದೆರಡು ಆವರ್ತಗಳನ್ನುಳಿದು, ಆಯಾ ರಾಗಗಳು ವಿಳಂಬ ಗತಿಯಲ್ಲಿ ಸಾಗುವಾಗ ರಾಗ ಸಂಚಾರಗಳು ಹೆಚ್ಚು ನಿಚ್ಚಳವಾಗಿ ಕಾಣುತ್ತವೆ. ರಾಗಾಲಾಪನೆಯಲ್ಲಂತೂ ವಿಳಂಬ ಗತಿಯ ಆಲಾಪನಾ ವೈಖರಿಗೇ ಗಾಯಕರು ಹೆಚ್ಚು ಪ್ರಾಶಸ್ತ್ಯ ನೀಡುವುದನ್ನು ನಾವು ಕಾಣುತ್ತೇವೆ.

ದೀಕ್ಷಿತರ ರಚನೆಗಳು ಸಂಸ್ಕೃತ ಭಾಷೆಯಲ್ಲಿವೆ. ಅದು ವಿದ್ವದ್‌ಭಾಷೆಯಷ್ಟೆ. ಎರಡೋ ಮೂರೋ ಮಣಿಪ್ರವಾಳ ಶೈಲಿಯಲ್ಲಿವೆ (ಸಂಸ್ಕೃತದೊಂದಿಗೆ ಒಂದೋ ಎರಡೋ ಇತರ ದ್ರಾವಿಡ ಭಾಷೆಗಳು ಮಿಳಿತವಾಗಿರುವುದು ಮಣಿಪ್ರವಾಳ ಶೈಲಿ). ದೀಕ್ಷಿತರು ಶ್ರೇಷ್ಠ ಸಂಗೀತಜ್ಞರು ಮಾತ್ರವಲ್ಲ, ಸಂಸ್ಕೃತ, ಕಾವ್ಯ, ಅಲಂಕಾರ, ವ್ಯಾಕರಣ, ಅದ್ವೈತ ವೇದಾಂತ ಇತ್ಯಾದಿ ಶಾಸ್ತ್ರಪ್ರಕಾರಗಳಲ್ಲಿ ಅಪ್ರತಿಮ ಪಂಡಿತ. ಮಂತ್ರ-ತಂತ್ರ, ಶೈವಾಗಮ ಶಾಸ್ತ್ರಗಳಲ್ಲಿ ನಿಷ್ಣಾತರು. ಶ್ರೀವಿದ್ಯೋಪಾಸಕರು. ವೈಣಿಕರು ಹಾಗೂ ಗಾಯಕರು. 'ನಾದಜ್ಯೋತಿ' ಎಂಬ ಬಿರುದಾಂಕಿತರು. ಅವರ ಕೃತಿಗಳು ವಿವಿಧ ಗಮಕಪ್ರಯೋಗಗಳನ್ನು ಮೈವೆತ್ತು ಬಹುತೇಕ ವಿಳಂಬ ಗತಿಯಲ್ಲಿ ಸಾಗುತ್ತವೆ. ಅವರ ಕೃತಿಗಳಲ್ಲಿ ಸಂಗೀತ ಮತ್ತು ಪ್ರೌಢ ಸಾಹಿತ್ಯ ಶೈಲಿಗಳ ಮಿಳನ ಬಹು ಸುಂದರ.

ಸಂಗೀತ ಸಂಪ್ರದಾಯ, ಆರ್ಷೇಯ ಪ್ರಯೋಗಗಳನ್ನು ಬಿಂಬಿಸುವ ಅವರ ಕೃತಿಗಳನ್ನು ಬಳಸುವಲ್ಲಿ ಶುದ್ಧಪಾಠ, ನಿಷ್ಕೃಷ್ಟ ಸ್ವರಪ್ರಸ್ತಾರಗಳಿಂದ ಕೂಡಿದ ಅವರ ಶಿಷ್ಯ-ಪ್ರಶಿಷ್ಯರೇ ಬರೆದು ಪ್ರಸ್ತುತಪಡಿಸಿದ ಪಾಠವನ್ನೇ ಅಭ್ಯಸಿಸಬೇಕು. 'ಸಂಗೀತ ಸಂಪ್ರದಾಯ ಪ್ರದರ್ಶಿನಿ' ಗ್ರಂಥದಲ್ಲಿ (1904) ಗಮಕ ಚಿಹ್ನೆಗಳಿಂದ ಕೂಡಿದ, ದೀಕ್ಷಿತರ 229 ರಚನೆಗಳಿವೆ. ಮುತ್ತುಸ್ವಾಮಿ ದೀಕ್ಷಿತರ ತಮ್ಮ ಬಾಲುಸ್ವಾಮಿ ದೀಕ್ಷಿತರ ಮಗಳ ಮಗ ಬ್ರಹ್ಮಶ್ರೀ ಸುಬ್ಬರಾಮ ದೀಕ್ಷಿತರು ಈ ಗ್ರಂಥವನ್ನು ಬರೆದರು (ಇವರನ್ನು ಬಾಲುಸ್ವಾಮಿ ದೀಕ್ಷಿತರೇ ದತ್ತು ತೆಗೆದುಕೊಂಡು ಸಾಂಗವಾಗಿ ಶಾಸ್ತ್ರಾಧ್ಯಯನಗಳನ್ನು ಮಾಡಿಸಿದ್ದರು). [ಆಸಕ್ತ ಕಲಾರಸಿಕರೂ ಸಂಗೀತ ವಿದ್ಯಾರ್ಥಿಗಳೂ ಸಂಗೀತ ಸಂಪ್ರದಾಯ ಪ್ರದರ್ಶಿನಿಯ ಕನ್ನಡ

ಅವತರಣಿಕೆಯ ಸಂಪುಟಗಳನ್ನು ನೋಡಬಹುದು. ಸುಬ್ಬರಾಮ ದೀಕ್ಷಿತರು ಬರೆದ ಇನ್ನೊಂದು ಪುಸ್ತಕ, 'ಪ್ರಥಮಾಭ್ಯಾಸ ಪುಸ್ತಕ'ವು (1905) - ಇದರ ಕನ್ನಡ ಅವತರಣಿಕೆಯೂ ಲಭ್ಯವಿದೆ. ಪ್ರಕಾಶಕರು: ಅನನ್ಯ, ಜಿ.ಎಮ್.ಎಲ್. ಕಲ್ಚರಲ್ ಅಕಾಡೆಮಿ, ಬೆಂಗಳೂರು - 3] ಸುಬ್ಬರಾಮ ದೀಕ್ಷಿತರ ಪುತ್ರ ಅಂಬಿ ದೀಕ್ಷಿತರೂ ಹೆಸರಾಂತ ವಿದ್ವಾಂಸರೇ; ವಾಗ್ಗೇಯಕಾರರೂ ಕೂಡ. ಅವರ ಶಿಷ್ಯರಾದ ಕಲ್ಲಿಡೈಕುರಿಚಿ ವೇದಾಂತ ಭಾಗವತರೂ, ಕಲ್ಲಿಡೈಕುರಿಚಿ ಅನಂತಕೃಷ್ಣ ಅಯ್ಯರ್ ಮತ್ತು ಸುಂದರಂ ಅಯ್ಯರ್ (ಇವರೆಲ್ಲ ವೈಣಿಕರೂ ಕೂಡಾ) ಅಂಬಿ ದೀಕ್ಷಿತರಿಂದ ದೀಕ್ಷಿತ ಕೃತಿಗಳ ಸರಿಯಾದ ಪಾಠವನ್ನು ಬರೆದುಕೊಂಡು ತಮಿಳಿನಲ್ಲಿ ಪ್ರಕಟಿಸಿದರು. ದೀಕ್ಷಿತರ ಉಪಲಬ್ಧವಾಗಿರುವ (ಸುಮಾರು 476 ವಿವಿಧ ರಚನೆಗಳನ್ನು) ಎಲ್ಲ ಕೃತಿಗಳನ್ನೂ ವರ್ಗೀಕರಣ ಮಾಡಿ, ಶುದ್ಧವಾದ ಸಾಹಿತ್ಯ ಪಾಠ, ಅಧಿಕೃತ ಸ್ವರಪ್ರಸ್ತಾರದೊಂದಿಗೆ 'ಗುರುಗುಹ ಗಾನವೈಭವ' ಎಂಬ ಸಂಕಲನವು ಎರಡು ಸಂಪುಟಗಳಲ್ಲಿ ಕನ್ನಡದಲ್ಲಿ ಇದೇ ಲೇಖಕನ ಸಂಪಾದಕತ್ವದಲ್ಲಿ ಪ್ರಕಟವಾಯಿತು (ಇಸವಿ 2000). ಪ್ರೊ। ಸಾ. ಕೃ. ರಾಮಚಂದ್ರರಾಯರು ಕೃತಿಗಳ ಸಾಹಿತ್ಯಭಾಗದ ಪಾರಿಭಾಷಿಕ ಪದಗಳ, ಪ್ರಯೋಗಗಳ ಹಾಗೂ ದೇವೀ ಉಪಾಸನೆಯ ವಿವರಗಳನ್ನು ಸಂಕಲನದ 3ನೆಯ ಭಾಗದಲ್ಲಿ 'ದೀಕ್ಷಿತರ ಕೃತಿಗಳ ಅರ್ಥ ವೈಭವ' ಎಂಬ ಶೀರ್ಷಿಕೆಯಲ್ಲಿ ಸಂಕ್ಷೇಪವಾಗಿ ಬರೆದಿದ್ದಾರೆ; ಸುದೀರ್ಘವಾದ ಮುನ್ನುಡಿಯನ್ನೂ ಈ ಹಿರಿಯ ವಿದ್ವಾಂಸರೇ ಬರೆದಿರುವುದು ಸಂಕಲನದ ಉಪಯುಕ್ತತೆಯನ್ನು ಹೆಚ್ಚಿಸಿದೆ. ದೀಕ್ಷಿತರ ಕೃತಿಗಳಲ್ಲಿರುವ ಸೊಗಸು, ಬಿಗಿ ಎರಡನ್ನೂ ಈ ಸಂಕಲನದಿಂದ ಕಂಡುಕೊಳ್ಳುವುದಾದೀತು ಎಂದಿದ್ದಾರೆ ಪ್ರೊ। ಸಾ. ಕೃ. ರಾ.

ಮುತ್ತುಸ್ವಾಮಿ ದೀಕ್ಷಿತರ ಶಿಷ್ಯರಲ್ಲಿ ಪ್ರಮುಖರಾದವರು ತಂಜಾವೂರು ಸಹೋದರರು (ಪೊನ್ನಯ್ಯ, ಚಿನ್ನಯ್ಯ, ಶಿವಾನಂದಂ ಮತ್ತು ವಡಿವೇಲು) ಇವರು ವಾಗ್ಗೇಯಕಾರರು, ನೃತ್ಯಪಟುಗಳೂ ಕೂಡ; ಶುದ್ಧಮದ್ದಳಂ ತಂಬಿಯಪ್ಪನ್, ತಿರುವಾರೂರು ಅಯ್ಯಾಸ್ವಾಮಿ, ವಳ್ಳರ್ ಕೋವಿಲ್ ಅಮ್ಮಣಿ, ಕೊರನಾಡು ರಾಮಸ್ವಾಮಿ (ಭರತನಾಟ್ಯ ಪ್ರವೀಣ) ಮುಂತಾದವರು.

ದೀಕ್ಷಿತರ ತಂದೆ ರಾಮಸ್ವಾಮಿ ದೀಕ್ಷಿತರೂ ಶ್ರೇಷ್ಠ ವಾಗ್ಗೇಯಕಾರರೇ (ಇವರೇ ಹಂಸಧ್ವನಿ ರಾಗದ ಕರ್ತೃ). ತಂಜಾವೂರಿನ ದೊರೆ ವಿಜಯರಾಘವ ನಾಯಕನ (1633 - 1673) ಮಂತ್ರಿಯಾಗಿದ್ದ ಪ್ರಸಿದ್ಧ ಶಾಸ್ತ್ರಕಾರ ವೆಂಕಟಮಖಿಯ ವಂಶದಲ್ಲಿ ಬಂದ ವೆಂಕಟವೈದ್ಯನಾಥ ದೀಕ್ಷಿತರೂ ರಾಮಸ್ವಾಮಿ ದೀಕ್ಷಿತರ ಒಬ್ಬ ಗುರುಗಳು. ಹೀಗೆ ತಮ್ಮ ಉಜ್ವಲ ಪರಂಪರೆಯ, ಅಂದರೆ ವೆಂಕಟಮಖಿಯ 'ಚತುರ್ದಂಡಿ ಪ್ರಕಾಶಿಕೆ'ಯ ಗ್ರಂಥದಲ್ಲಿ ಕಾಣಿಸಲಾದ ಮೇಳರಾಗ ಪದ್ಧತಿಯನ್ನೂ ಅವುಗಳ ಜನ್ಯರಾಗಗಳನ್ನೂ, ಅವೇ ನಾಮರೂಪ ಮತ್ತು ಆರೋಹಣಾವರೋಹಣಗಳನ್ನು ಬಳಸಿ ಮುತ್ತುಸ್ವಾಮಿ ದೀಕ್ಷಿತರು ಕೃತಿರಚನೆ ಮಾಡಿದರು (ಅವರ ಶಿಷ್ಯರೂ ತಮ್ಮ ಗುರುಗಳ ಹಾದಿಯಲ್ಲೇ ಕೃತಿರಚನೆ ಮಾಡಿದರು).

ಮಗನ ಸಂಗೀತ ಶಿಕ್ಷಣದ ಮೊದಲ ಗುರು ರಾಮಸ್ವಾಮಿ ದೀಕ್ಷಿತರೇ. ದೀಕ್ಷಿತರು ನೆಲಸಿದ್ದ ತಿರುವಾರೂರು ಹಾಗೂ ಮದ್ರಾಸಿನ ನೆರೆಯ ಊರಾದ ಮಣಲಿ ಇವುಗಳ ನಡುವಿನ ಕ್ಷೇತ್ರಗಳಿಗೆ ದೀಕ್ಷಿತರ ಪರ್ಯಟನೆ, ವಿವಿಧ ಕ್ಷೇತ್ರಾಧಿಪತಿಗಳ ಕುರಿತ ಅವರ ಕೃತಿರಚನೆಗಳಿಗೆ ಕಾರಣವಾಯಿತು. ಆ ಕ್ಷೇತ್ರದೇಗುಲಗಳ ಐತಿಹ್ಯ, ಅಲ್ಲಿ ನಡೆಯುವ ಉತ್ಸವಗಳು, ಸಂಪ್ರದಾಯಗಳು, ಪೂಜಾಕಾಲ, ಪೂಜಾವಿಧಾನಗಳು ಇತ್ಯಾದಿ ವಿವರಗಳು ಅವರ ಕೃತಿಗಳಲ್ಲಿ ಸೇರಿವೆ. ಮಣಲಿಗೆ ಒಮ್ಮೆ ಪ್ರವಾಸ ಬಂದಿದ್ದ ಚಿದಂಬರನಾಥಯೋಗಿ ಎಂಬವರ ಜತೆಯಲ್ಲಿ ದೀಕ್ಷಿತರು ಕಾಶಿಗೆ ಹೋದರು. ಅಲ್ಲಿ 5 ವರ್ಷಗಳ ಕಾಲ ಇದ್ದು ಈ ಯೋಗಿಗಳಿಂದ ಶ್ರೀವಿದ್ಯೆಯ ಉಪದೇಶ ಪಡೆದು ಸಾಧನೆ ಮಾಡಿದರು. ಕಾಶಿಯಲ್ಲಿದ್ದಾಗ ಹಿಂದೂಸ್ಥಾನಿ ಸಂಗೀತ ಪದ್ಧತಿಯನ್ನೂ ಅಭ್ಯಸಿಸಿ ಆ ಪದ್ಧತಿಯ ಅನೇಕ ರಾಗಗಳನ್ನು (ಜುಜಾವಂತಿ, ಬೃಂದಾವನಿ, ಯುಮುನಾಕಲ್ಯಾಣಿ ಇತ್ಯಾದಿ) ತಮ್ಮ ಕೃತಿಗಳಲ್ಲಿ ಬಳಸಿದರು.

ಚಿದಂಬರನಾಥಯೋಗಿಗಳ ದೇಹಾಂತ್ಯದ ಬಳಿಕ ದೀಕ್ಷಿತರು ತಿರುತ್ತಣಿ ಕ್ಷೇತ್ರಕ್ಕೆ ಹಿಂದಿರುಗಿದರು. ಸುಬ್ರಹ್ಮಣ್ಯಸ್ವಾಮಿಯ ಪೂರ್ಣಕಟಾಕ್ಷ ಹೊಂದಿ "ಶ್ರೀನಾಥಾದಿ ಗುರುಗುಹೋ ಜಯತಿ" ಎಂಬ ಕೀರ್ತನೆಯೊಂದಿಗೆ ತಮ್ಮ ಕೃತಿರಚನೆ ಆರಂಭಿಸಿದರು. ಇಷ್ಟದೇವತೆ ಸುಬ್ರಹ್ಮಣ್ಯ ಸ್ವಾಮಿಯೇ ದೀಕ್ಷಿತರ ಅಂಕಿತ 'ಗುರುಗುಹ'.

ದೀಕ್ಷಿತರು ತಮ್ಮ ಪೂರ್ವಜರಾದ ಲಾಕ್ಷಣಿಕ ವೆಂಕಟಮಖಿ ಕಲ್ಪಿಸಿದ 72 ಮೇಳಕರ್ತ ರಾಗಗಳಲ್ಲಿ ಹಾಗೂ ಅಂದು ಬಳಕೆಯಲ್ಲಿದ್ದ ಜನ್ಯರಾಗಗಳಲ್ಲಿ ಅವೇ ನಾಮರೂಪಗಳನ್ನು ಬಳಸಿ ಕೃತಿರಚನೆ ಮಾಡಿದರು. ವೆಂಕಟಮಖಿ ನಿರೂಪಿಸಿದ ಕ್ರಮಸಂಪೂರ್ಣವಲ್ಲದ (ಅಂದರೆ, 'ಸರಿಗಮಪದನಿಸ - ಸನಿದಪಮಗರಿಸ'ವೇ ಆಗಿರದೆ ಆರೋಹಣಾವರೋಹಣಗಳನ್ನು ಒಟ್ಟಾಗಿ ತೆಗೆದುಕೊಂಡಾಗ ಮಾತ್ರ ಸಂಪೂರ್ಣ ರಾಗಗಳಾಗುವಂತೆ ಏರ್ಪಡಿಸಿದ ಮೇಳ - ರಾಗಾಂಗ ರಾಗಗಳು) ಮೇಳರಾಗಗಳಲ್ಲಿ ವೆಂಕಟಮಖಿ ಅತಿಜಾಣ್ಮೆಯಿಂದ ಆರೋಹಣದಲ್ಲೋ ಅವರೋಹಣದಲ್ಲೋ ವಿವಾದಿ ಸ್ವರವನ್ನು ವರ್ಜಿಸಿ ಆರೋಹಣಾವರೋಹಣಗಳನ್ನು ಹೇಳಿದ್ದಾರೆ. ವಿವಾದಿ ಸ್ವರಗಳು ಯಾವುವೆಂದರೆ ಷಟ್ಶ್ರುತಿ ರಿಷಭ (ರಿ$_3$), ಶುದ್ಧಗಾಂಧಾರ (ಗ$_1$), ಷಟ್ಶ್ರುತಿ ದೈವತ (ದ$_3$) ಮತ್ತು ಶುದ್ಧನಿಷಾದ (ನಿ$_1$) - ಈ ನಾಲ್ಕು. ಈ ನಾಲ್ಕು ಸ್ವರಗಳೂ ಕ್ರಮವಾಗಿ ಸಾಧಾರಣ ಗಾಂಧಾರ (ಗ$_2$), ಚತುಶ್ಶ್ರುತಿ ರಿಷಭ (ರಿ$_2$), ಕೈಶಿಕಿ ನಿಷಾದ (ನಿ$_2$) ಮತ್ತು ಚತುಶ್ಶ್ರುತಿ ದೈವತ (ದ$_2$)ಗಳಿಗೆ ಸಮನಾಗಿವೆ. ಇವಿಷ್ಟು ವಿವಾದಿ ಸ್ವರಗಳ ವಿವರಗಳು. ದೀಕ್ಷಿತರು ಈ ವಿವಾದಿ ಸ್ವರಗಳನ್ನು ಅತಿಕೌಶಲ್ಯದಿಂದ, ತಮ್ಮ ರಚನೆಗಳಲ್ಲಿ ಪ್ರಯೋಗಿಸುವಾಗ ಬಹುಶ್ರಾವ್ಯವಾಗಿಯೇ ಸಂಚಾರಗಳನ್ನು ನೀಡಿದ್ದಾರೆ ಎಂಬುದು ಗಮನಾರ್ಹ.

ಛಂದಸ್ಸು, ವ್ಯಾಕರಣದ ಸೊಗಸು ಮತ್ತು ಬಿಗಿ, ಪ್ರಗಲ್ಭ ವಾಕ್ಯ ವೈಖರಿ, ಪುಂಖಾನುಪುಂಖವಾಗಿ ಬರುವ ಪ್ರಾಸಾನುಪ್ರಾಸ, ಆದಿಪ್ರಾಸ, ಅಂತ್ಯಪ್ರಾಸಗಳು,

ಕೃತಿಯುದ್ದಕ್ಕೂ ಒಂದು ವಿಭಕ್ತಿಯನ್ನೇ ನಡೆಸುತ್ತ ಸಾಗುವ ಜಾಣ್ಮೆ, ವಿವಿಧ ಅಲಂಕಾರಗಳ ನಿರೂಪಣೆ ಎಲ್ಲವೂ ಸೇರಿವೆ ಅವರ ಕೃತಿಗಳಲ್ಲಿ. ಸ್ತೋತ್ರ ಸಾಹಿತ್ಯಗಳಿಂದಲೂ ಉಪನಿಷದ್ವಾಕ್ಯಗಳಿಂದಲೂ ಯಥೇಚ್ಛವಾಗಿ ಕೃತಿಗಳಲ್ಲಿ ಬಳಸಿದ್ದಾರೆ. ಕಮಲಾಂಬಾ ನವಾವರಣ ಕೃತಿಗಳಲ್ಲಿ, ಅಭಯಾಂಬಾ ವಿಭಕ್ತಿ ಕೃತಿಗಳಲ್ಲಿ ತಂತ್ರವಿಧಾನಕ್ಕನುಸಾರವಾಗಿ ಶ್ರೀವಿದ್ಯೋಪಾಸನೆಯ ವಿವರಗಳನ್ನು ಕಾಣಿಸಿದ್ದಾರೆ. ಆಗಮ, ತಂತ್ರಗಳೆಲ್ಲ ಸಂಸ್ಕೃತದಲ್ಲೇ ಇದ್ದು, ಅವರು ಕೃತಿರಚನೆಗೆ ಸಂಸ್ಕೃತ ಭಾಷೆಯನ್ನೇ ಆರಿಸಿಕೊಂಡುದು ಅವಶ್ಯವೂ ಔಚಿತ್ಯಪೂರ್ಣವೂ ಆಯಿತೆಂದು ಹೇಳಬಹುದು.

ನಾದಬ್ರಹ್ಮನ ಆರಾಧನೆಗೆ ವೈಣಿಕ-ಗಾಯಕ-ಗುರುಗುಹ ನಾದಜ್ಯೋತಿ ಮುತ್ತುಸ್ವಾಮಿ ದೀಕ್ಷಿತರು ನೀಡಿದ ಸಾಮಗ್ರಿ ಅನನ್ಯವಾದುದು. ಭಾವಪೂರ್ಣ ಶ್ರೇಷ್ಠ ಸಂಗೀತ, ನಡಿಗೆಯಲ್ಲಿ ಲಾವಣ್ಯ, ಲಯದಲ್ಲಿ ಗಾಂಭೀರ್ಯ ಇವೆಲ್ಲ ಅವರ ಕೃತಿಗಳ ಹೆಗ್ಗುರುತುಗಳು. ಸಂದರ್ಭೋಚಿತವಾದ ರಾಗನಿರೂಪಣೆಯಲ್ಲಿ ಅವರು ಅಗ್ರಗಣ್ಯರೆಂದು ವಿದ್ವಾಂಸರ ಅಭಿಪ್ರಾಯ. ವೆಂಕಟಮಖಿ ನಿರೂಪಿಸಿದ ಅನೇಕ ಅಪೂರ್ವ ರಾಗಗಳಿಗೆ ಅವರ ರಚನೆಗಳೇ ಆಧಾರ. ರಾಗರಂಜಕ ಸಂಚಾರಗಳು ಅವರ ಕೃತಿಗಳಲ್ಲಿ ಅತಿ ನವುರಾಗಿ, ಆದರೂ ಸ್ಪಷ್ಟವಾಗಿ ಒಡಮೂಡಿದ್ದನ್ನು ಕಾಣುತ್ತೇವೆ.

ತಳಸ್ಪರ್ಶಿಯಾದ ಲಕ್ಷಣಜ್ಞತೆ, ಚಿತ್ರ-ವಿಚಿತ್ರವಾದ ಸ್ವತಂತ್ರ ಮಾರ್ಗ, ವಿಳಂಬ ಲಯವೇ ಮುಖ್ಯವಾಗಿ ತೋರುವ ರಸಪುಷ್ಟಿ, ಅನುಪಲ್ಲವಿಯನ್ನು ಕೈಬಿಟ್ಟಲ್ಲಿ ಸಮಷ್ಟಿ ಚರಣಗಳು, ಅನುಪಲ್ಲವಿ, ಚರಣಗಳ ಕೊನೆಯಲ್ಲಿ ಕಾಣಬರುವ ಮಧ್ಯಮಕಾಲ ಸಾಹಿತ್ಯ, ಎಲ್ಲವೂ ಮಿಳಿತವಾಗಿವೆ ಅವರ ಕೃತಿಗಳಲ್ಲಿ. ಏಕಾಗ್ರವಾದ ಕಾಲಪ್ರಮಾಣ ಜ್ಞಾನ, ವಿಳಂಬ ನಡೆಯಲ್ಲಿ ಸ್ವಾಮ್ಯ, ಶುದ್ಧ ಶಾರೀರ, ತ್ರಿಸ್ಥಾಯಿಗಳಲ್ಲೂ ಸುಲಭವಾಗಿ, ಕಿವಿಗೆ ಹಿತವಾಗಿ, ಸಂಚರಿಸುವ ನೈಪುಣ್ಯ, ಶ್ವಾಸ ಸಿದ್ಧಿ, ಅಲ್ಪಪ್ರಾಣ, ಮಹಾಪ್ರಾಣಗಳ ಸ್ಪಷ್ಟ, ಆದರೂ ಅತಿರೇಕವಲ್ಲದ (ಕಿವಿಗೆ ಕರ್ಕಶವಾಗಿ ಕೇಳಿಬರದ) ಉಚ್ಚಾರ, ಗಮಕಕ್ಕೆ ಇಂಬುಗೊಡುವ ಶಾರೀರ, ಇವೆಲ್ಲವೂ ಬೇಕು, ದೀಕ್ಷಿತರ ಕೃತಿಗಳ ತೃಪ್ತಿಕರ ಗಾಯನಕ್ಕೆ. ಅಥವಾ ಅವರ ಕೃತಿಗಳ ಕ್ರಮಬದ್ಧ ಅಭ್ಯಾಸ, ಗಾಯನಗಳಿಂದ ಇವೆಲ್ಲ ಸಾಧಿತವಾಗುತ್ತವೆ ಎಂದರೂ ತಪ್ಪಿಲ್ಲ.

ವಿವಿಧ ವಾಗ್ಗೇಯ ಸಲ್ಲಕ್ಷಣಗಳನ್ನು ಹೊಂದಿದ ದೀಕ್ಷಿತರ ಕೃತಿಗಳನ್ನು ವಿದ್ವಾಂಸರು ಹೆಚ್ಚು ಹೆಚ್ಚಾಗಿ ಹಾಡಿ ಜನಪ್ರಿಯಗೊಳಿಸಬೇಕು, ಅವರ ಕೃತಿಗಳು ಇನ್ನೂ ಹೆಚ್ಚು ಪ್ರಚಾರಗೊಳ್ಳಬೇಕು ಎಂಬ ಆಶಯವನ್ನು ಬಹು ಹಿಂದೆಯೇ, ಅಂದರೆ 1968ರಲ್ಲಿ ನ್ಯಾಯಮೂರ್ತಿ ಟಿ. ಎಲ್. ವೆಂಕಟರಾಮ ಅಯ್ಯರ್ ಹೇಳಿದ್ದರು. ಈ ಮಾತು ಇಂದಿಗೂ ಪ್ರಸ್ತುತವಾಗಿದೆ. ಈ ನ್ಯಾಯಾಧೀಶರು ಅಂಬಿ ದೀಕ್ಷಿತರನ್ನು ಚೆನ್ನೈಗೆ ಕರೆಸಿ, ಅವರ ವಾಸ್ತವ್ಯಕ್ಕೆ ಏರ್ಪಾಡು ಮಾಡಿ, ಅವರಿಂದ ದೀಕ್ಷಿತರ ಕೃತಿಗಳನ್ನು ಸಮರ್ಪಕವಾಗಿ ಅಭ್ಯಸಿಸಿದರು. ಸಂಗೀತ ಕಲಾನಿಧಿ ಡಿ. ಕೆ. ಪಟ್ಟಮ್ಮಾಳ್ ಕೂಡಾ ಅಂಬಿ ದೀಕ್ಷಿತರಲ್ಲಿ ದೀಕ್ಷಿತರ ಕೃತಿಗಳನ್ನು ಅಭ್ಯಾಸ ಮಾಡಿದವರೇ.

ದೀಕ್ಷಿತರ ವೈವಿಧ್ಯಪೂರ್ಣ ರಚನೆಗಳಲ್ಲಿ ಇಂಗ್ಲಿಷ್ ನೋಟ್ ಆಧರಿಸಿ ರಚಿಸಿದ ನೋಟು ಸ್ವರ, ಸಾಹಿತ್ಯಗಳು 39 ಸಿಗುತ್ತವೆ. ಈ ತುಣುಕುಗಳನ್ನು ದೀಕ್ಷಿತರ ಲಘುರಚನೆಗಳೆನ್ನಬಹುದು. ಅವರ ತಮ್ಮ ಬಾಲುಸ್ವಾಮಿ ದೀಕ್ಷಿತರು (ಪಿಟೀಲು ವಿದ್ವಾಂಸರೂ ಕೂಡ) ಈ ನೋಟು ಸ್ವರಗಳನ್ನು ಪಿಟೀಲಿನಲ್ಲಿ ನುಡಿಸಲು ಅಭ್ಯಸಿಸಿದರಂತೆ. ದೀಕ್ಷಿತರು ಈ ನೋಟ್‌ಗಳನ್ನು ಕೇಳಿ, ಅವಕ್ಕೆ ಕರ್ನಲ್ ಬ್ರೌನ್ ಎಂಬವರ ಸಲಹೆಯಂತೆ ಸಂಸ್ಕೃತ ಸಾಹಿತ್ಯವನ್ನು ಅಳವಡಿಸಿದರು. 'ಗಾಡ್ ಸೇವ್ ದಿ ಕಿಂಗ್' ಎಂಬ ಬ್ರಿಟಿಷ್ ರಾಷ್ಟ್ರಗೀತೆಯ ಧಾಟಿಯಲ್ಲಿ 'ಸಂತತಂ ಪಾಹಿಮಾಂ ಸಂಗೀತ ಶ್ಯಾಮಲೇ' ಎಂಬ ರಚನೆಯಾಯಿತು, ಇತ್ಯಾದಿ. ಈ ಚಿಕ್ಕ ಚಿಕ್ಕ ಗೀತಗಳನ್ನು ವಿದ್ಯಾರ್ಥಿಗಳು ಪಿಳ್ಳಾರಿ ಗೀತೆಗಳ ಅಭ್ಯಾಸದ ತರುವಾಯ ಕಲಿಯುತ್ತಾರೆ. 'ಶಕ್ತಿಸಹಿತ ಗಣಪತಿಂ ಶಂಕರಾದಿ ಸೇವಿತಂ' ಎಂಬಿತ್ಯಾದಿ ನೋಟ್ ಸಾಹಿತ್ಯಗಳು ಜನಪ್ರಿಯವಾಗಿವೆ.

ಕ್ರಿ.ಶ. 1834ರ ಅಶ್ವಯುಜ ಮಾಸದ ದೀಪಾವಳಿ - ಕೃಷ್ಣಪಕ್ಷ ಚತುರ್ದಶಿಯಂದು ಪ್ರಾತಃಕಾಲ ದೀಕ್ಷಿತರು ಸ್ನಾನ ಮಾಡುತ್ತಿದ್ದಾಗ ಕಾಶೀ ಅನ್ನಪೂರ್ಣೇಶ್ವರಿಯ ದರ್ಶನವಾಯಿತಂತೆ. ಅಂದು ದೇವಿಗೆ ನವಾವರಣ ಪೂಜೆ ಸಲ್ಲಿಸಿ ಅನ್ನಪೂರ್ಣೇಶ್ವರಿಯನ್ನು ಕುರಿತು ಹಾಡಿದರು. ಅಂದು ಪ್ರಾತಃ ಸಮಯದಲ್ಲಿ ದೀಕ್ಷಿತರು ದೇವೀಪರ ಕೃತಿಗಳನ್ನು ತಮ್ಮ ಶಿಷ್ಯರಿಂದ ಹಾಡಿಸಿ ಕೇಳಿದರು. ಶಿಷ್ಯರು 'ಮೀನಾಕ್ಷಿಮೇ ಮುದಂ ದೇಹಿ' (ಗಮಕಕ್ರಿಯಾ ರಾಗ) ಕೃತಿಯನ್ನು ಹಾಡುತ್ತಿದ್ದಂತೆಯೇ ತಮ್ಮ ಅಂತ್ಯಕಾಲ ಸಮೀಪಿಸಿತೆಂದು ತಿಳಿದ ದೀಕ್ಷಿತರು, ಶಿಷ್ಯರು 'ಮೀನಲೋಚನಿ ಪಾಶಮೋಚನಿ' ಎಂಬ ಅನುಪಲ್ಲವಿಯ ಸಾಹಿತ್ಯಭಾಗವನ್ನು ಹಾಡುತ್ತಿದ್ದಂತೆ ಅದನ್ನೇ ಮತ್ತೆ ಮತ್ತೆ ಶಿಷ್ಯರಿಂದ ಹಾಡಿಸಿ ಕೇಳುತ್ತ ಇಹವನ್ನು ತ್ಯಜಿಸಿದರು. ನಾದಜ್ಯೋತಿಯು ನಾದಸ್ವರೂಪಿಣಿಯ ತೇಜೋಮಂಡಲದಲ್ಲಿ ಲೀನವಾಯಿತು. ಎಟ್ಟಯಪುರದಲ್ಲಿರುವ ದೀಕ್ಷಿತರ ಸಮಾಧಿಸ್ಥಳ ಕಲಾರಸಿಕರ ಯಾತ್ರಾಸ್ಥಳವಾಯಿತು.

ಕೆಲವು ಉದಾಹರಣೆಗಳು

ದೀಕ್ಷಿತರ ಕೃತಿಗಳಲ್ಲಿನ ವೈಶಿಷ್ಟ್ಯಗಳನ್ನು ಮೇಲೆ ವಿವರಿಸಿದ್ದಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಿ ತೋರಿಸಬಹುದು.

1. 'ಶ್ರೀನಾಥಾದಿ ಗುರುಗುಹೋ ಜಯತಿ' ಅವರ ಮೊದಲ ಕೃತಿ. ತಿರುತ್ತಣಿಯಲ್ಲಿ ದೀಕ್ಷಿತರು ಧ್ಯಾನಾಸಕ್ತರಾಗಿದ್ದಾಗ ವಯೋವೃದ್ಧರೊಬ್ಬರು ಅವರ ಬಾಯಲ್ಲಿ ಕಲ್ಲುಸಕ್ಕರೆಯ ತುಂಡನ್ನು ಹಾಕಿ ಸುಬ್ರಹ್ಮಣ್ಯನ ಗುಡಿಯಲ್ಲಿ ಅಂತರ್ಧಾನರಾದರಂತೆ. ಆ ಬಳಿಕ ದೀಕ್ಷಿತರ ಕೃತಿರಚನೆ ಆರಂಭವಾಯಿತು.

ಪುರಂದರದಾಸರು ಆರಂಭದ ಪಾಠಗಳಿಗೆ ಮಾಯಾಮಾಳವಗೌಳ ರಾಗವನ್ನು ನಿಯೋಜಿಸಿದಂತೆ ಈ ಕೃತಿಯೂ ಅದೇ ರಾಗದಲ್ಲಿದೆ. ಆರಂಭದ ಪಾಠಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಂತಿದೆ.

ಆದಿತಾಳ

ಸಾ , ರೀ ಗಾ ಮ	ಪ ದ ನಿ ಸ	, ನಿ ದ ಪ ಮ ಗ ರಿ	॥
ಶ್ರೀ. ನಾ ಥಾ ದಿ	ಗು ರು ಗು ಹೋ	. ಜ ಯ ತಿ ಜ ಯ ತಿ	॥
ಸಾ ಸ ನೀ ನೀ, ದ ದಾ	ದ ಪಾ ಪ ಮ ಮ ಗಾ	ಗ ರೀ ರಿ ಸ ಸ ನಿ ನಿ	॥
ಶ್ರೀಚಿದಾ ನಂ ದ ನಾ	ಥೋ. ಹ ಮ ತಿ ಸಂ	ತ ತಂ ಹೃ ದಿ ನಿ ಭ ಜ	॥
ಸಾ , ನೀ ದಾ ಪ	ಧ ನಿ ಸ ರಿ	, ಸ ನಿ ಸಾ	॥
ಶ್ರೀ. ನಾ ಥಾ ದಿ	ಗು ರು ಗು ಹೋ	. ಜ ಯ ತಿ	॥

ಮೊದಲನೆ, ಎರಡನೆ ಹಾಗೂ ಮೂರನೆ ಕಾಲಗಳೂ, ಮಂದ್ರಸ್ಥಾಯಿ ವರಸೆಯೂ ಈ ಕೃತಿಯ ಪಲ್ಲವಿಯಲ್ಲಿ ಬರುತ್ತವೆ.

2. *ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ* - ರಾಗ: *ಕಾಂಭೋಜಿ* - ತಾಳ: *ರೂಪಕ.*

ಈ ಕೃತಿಯ ಚರಣದಲ್ಲಿ ಸಂಬೋಧನಾ ವಿಭಕ್ತಿಯ ಸೊಗಸು ನೋಡಿ-

ತಾ ರ ಕ ಸಿಂ	ಹ ಮು ಖ ಶೂ ರ	ಪ ದ್ಮಾ ಸು ರ	ಸಂ ಹರ್ತ್ರೇ ॥
ತಾ ಪ ತ್ರ ಯ	ಹ ರ ಣ ನಿ ಪು ಣ	ತ ತ್ಪು ಪದೇ-	ಶ ಕ ರ್ತ್ರೇ ॥
ವೀ ರ ನು ತ ಗು	ರು ಗು ಹಾ ಯಾ	ಜ್ಞಾ ನ ಧ್ವಾಂ-	ತ ಸ ವಿ ತ್ರೇ ॥
ವಿ ಜ ಯ ವ ಲ್ಲೀ ಭ ರ್ತ್ರೇ ॥	ಶ ಕ್ತ್ಯಾ ಯು ಧ ಧ ರ್ತ್ರೇ ॥		
ಧೀ ರಾ ಯ ನ ತ ವಿ ಧಾ ತ್ರೇ ॥	ದೇ ವ ರಾ ಜ ಜಾ ಮಾ ತ್ರೇ ॥		
ಭೂ ರಾ ದಿ ಭು ವ ನ ಭೋ ಕ್ತ್ರೇ ॥	ಭೋ ಗ ಮೋ ಕ್ಷ ಪ್ರ ದಾ ತ್ರೇ ॥		

3. *ಪಾಲಯಮಾಂ ಪಾರ್ವತೀಶ* - ರಾಗ: *ಕನ್ನಡ* - ತಾಳ: *ರೂಪಕ*

ಈ ಕೃತಿಯ ಚರಣದ ಮೊದಲನೆ ಪಂಕ್ತಿಯು ನೆರವಲ್ ಮತ್ತು ಸ್ವರಪ್ರಸ್ತಾರಕ್ಕೆ ಬಹು ಪ್ರಶಸ್ತ. ಹಾಗೆಯೇ, ಅಷ್ಟೇ ಅರ್ಥಗರ್ಭಿತ.

ಗಾ ಮಾ ರೀ ಸಾ ನೀ ಸಾ	ರೀ ಸಾ ಗಾ ಮಾ ರೀ ;	ಗಾ ಮಾ ದಾ ; ನೀ ಪಾ
ಗಾ . ನಾ . ಮೃ ತ	ರ ಸ ಪಾ . ನ .	ಕ ಲಿ ಕ . ಲ್ಮ ಷ

ದಾ ಪಾ ಗಾ ಮಾ ರೀ ಸಾ ॥
ವಿ ನಾ . ಶ ನ . ॥

4. ದೀಕ್ಷಿತರ ಕೃತಿಗಳ ಸ್ವರಪ್ರಸ್ತಾರವನ್ನು ಮಾತ್ರ ಅಲ್ಲಲ್ಲಿ ಹಾಡಿ ನೋಡಿ. ಅವು ರಾಗಾಲಾಪನೆಗಳಂತೆಯೇ ಇರುತ್ತವೆ. ಉದಾಹರಣೆಗೆ, ಈ ನೀಲಾಂಬರಿ ರಾಗ ಕೃತಿಯನ್ನು ನೋಡಿ-

ನೀಲಾಂಗಂ ಹರಿಂ - ತಾಳ: ಖಂಡ ಏಕ

।।ಪಲ್ಲವಿ।।

ನಿ ಸಾ ನಿ ನಿ ಪಾ ಮ ಮ ಗ ಗ ರಿ ಗಾ , ಮ ಪ ಮ ಮಾ̂̂̂ ; ||
ನೀ . . ಲಾಂ . . ಗಂ . . . ಹ . . . . . ರಿಂ . ||

; ಗ ಮ ಪ ನಿ$_2$ ದ ನಿ$_2$ ಪಾ ಮಾ ಗಾ ರಿ ಗ ಮಾ ಗ ಗ ಸಾ ||
. ನಿ . ತ್ಯಂ . . . ಸ್ಮ . ರಾ . . . . . ಮಿ . ||

ನಿ ಸಾ ನಿ ಪ ನಿ ಸ ನಿ ಪ ಮ ಗ ರಿ ಗಾ , ಮ ಪ ಮ ಮಾ̂̂̂ ||
ನೀ . . ಲಾಂ . . . ಗಂ . . . ಹ . . . . . ರಿಂ ||

; ಮ ಗ ರಿ ಗ ಮ ಪ ಮ ಗ ರಿ ಗ ಮ ಗ ರಿ ಗ ಸಾ ; ; ; ; ||
. . . . ||

ಇದೇ ಕೃತಿ ಮುಂಬರಿದು 'ಚರಣ'ದಲ್ಲಿ -

ಸ̇ಾ ; ರೀ ಗಾ ಮ ಗ ರಿ ಗ ಮಾ ಮ ಗ ಸಾ ; ||
ಸಾ . ರ ಸ ಕ . ರಂ . . ವ . ರಂ . ||

ಸಾ ಸಾ ಸಾ ಸಾ ಸಾ ದ ನಿ ಸಾ ನಿ ಪ ಪ ಗ ಮಾ ||
ಸ ರ ಸ ಸು ಗು ಣಾ . . ಕ . ರಂ . . ||

ಪಾ ನಿ$_2$ ದ ದಾ , ನಿ$_2$ ಪಾ ಮಾ ಪ ಮ ದ ಪ ಮ ಗ ಮಾ ; ||
ಶ್ರೀ . . ರು . . . ಕ್ಮ ಣೀ . . . ವ . ರಂ . ||

ಸಾ ; ರೀ ಗಾ ಮಾ ಗ ಸ ಸ ನಿ ದ ನಿ ಸಾ ||
ಶೃಂ. . ಗಾ ರ ಶೇ . . . ಖ . ರಂ ||

ಹೀಗೆಯೇ ಬೇಗಡೆ, ಶಹನ, ಆನಂದಭೈರವಿ - ಇತ್ಯಾದಿ ರಾಗ ಕೃತಿಗಳಿಂದಲೂ ಅನೇಕ ಉದಾಹರಣೆಗಳನ್ನು ನೀಡಬಹುದು.

5. ಹೆಚ್ಚು ಪ್ರಚಾರದಲ್ಲಿಲ್ಲದ ಈ ನಾಗಗಾಂಧಾರಿ ರಾಗದ ಕೃತಿ ನೋಡಿ - ಚರಣದ ಈ ಪಂಕ್ತಿಯಲ್ಲಿ ಒಡಮೂಡಿರುವ ಸಾಹಿತ್ಯ ಭಾವ ಎಷ್ಟೊಂದು ಸುಂದರವಾಗಿದೆ!

ಆದಿತಾಳ

ಸಾರೀಮಾ ಪಾ,ಸ ನಿದಾ,ಪಾ । ಪಾ,ದ ಪಮಪಾ । ರಿ ಗ ಸ ರಿ ರಿ ಮಗಾ ||
ಪರಮ ಶಾಂ.. ತ .. ಸ್ವ ।ರೂ.. ಪಾ . . । ಕಾ . . . ರೇ . . ||

ಸಾಹಿತ್ಯಕ್ಕೆ ಸಂಗೀತ (ಸ್ವರಪ್ರಸ್ತಾರ)ದ ಹೊಂದಿಕೆ ಅಷ್ಟೊಂದು ಸಮರ್ಪಕ.

6. ಔತ್ತರೇಯ ರಾಗಗಳಲ್ಲಿ ದೀಕ್ಷಿತರ ಕೃತಿ ಒಡಮೂಡಿದಾಗ ಕಾಣುವ ಅಂದ ನೋಡಿ-

ಜಂಬೂಪತೇ - ರಾಗ: *ಯಮುನಾಕಲ್ಯಾಣಿ* - ತಾಳ: *ರೂಪಕ*

ಚರಣದಲ್ಲಿ :-

ಸ̇ದಾ , ಸ̇ಾರ̇ೀ ರ̇ಿ ಗ̇ಾ, । ; ರ̇ೀ ಗ̇ಾ ರ̇ೀ ಗ̇ಾ ಸ̇ಾ । ಗ̇ ರ̇ಿ ಗ̇ಾ ಗ̇ಾ ಗ̇ ಮ̇$_1$ರ̇ೀ ; ।

ನಿ . . ವರ್ಚ ನೀ .. । . ಯನಾ . . ದ । ಬಿಂ . .ದೋ. . . . ।

ರ̇ೀ; ಸ̇ಾ ನೀ ಸ̇ಾ ನೀ । ನಿ ದ ಪ ಮ ಪಾ ಗ ಗಾಮ$_1$ರೀ । ಗ ದ ಪ ಮ ಗರೀ,ರಿಸ ಸಾ, ।

ನಿ . ತ್ಯಮೌ . ಳಿ । ವಿ. ಧೃ . ತ ಗಂ . . . । ಗೇಂ. . . ದೋ... .. ।

ಹೀಗೆಯೇ ಬೃಂದಾವನ ಸಾರಂಗ, ದ್ವಿಜಾವಂತಿ ಇತ್ಯಾದಿ ರಾಗ ಕೃತಿಗಳಿಂದಲೂ ಉದಾಹರಿಸಬಹುದು.

7. ಕೆಳಗೆ ಉದಾಹರಿಸಿದ ಕೃತಿಯ ಸಾಲುಗಳಲ್ಲಿ ಆಯಾ ರಾಗದ ಹೆಸರನ್ನು ಕಾಣಿಸಿದ ಜಾಣ್ಮೆ ನೋಡಿ:

'ವೇದನುತ ಗೌರೀಪಾಂತ ರಂಗಾದಿನುತ' ಎಂಬಲ್ಲಿ 'ಗೌಡಿಪಂತು' ಎಂಬ ರಾಗದ ಹೆಸರು ಸೂಚಿತವಾಗಿದೆ.

'ವೀಣಾಭೇರೀ' ಎಂಬಲ್ಲಿ 'ಆಭೇರಿ' ರಾಗ ಸೂಚಿಸಿದೆ.

'ಸೇವಿತ ರಮಾಹರಿಕಾವಿಧಾತ್ರೇ ಎಂಬಲ್ಲಿ 'ಆಹಿರಿ' ರಾಗದ ಹೆಸರು ಸೇರಿದೆ.

'ಮೂರ್ಧನ್ಯಾಶಿವ' ಎಂಬಲ್ಲಿ 'ಧನ್ಯಾಶಿ' ಎಂಬ ರಾಗನಾಮವು ಸೇರಿದೆ.

'ಈಶಾನಾದಿ ಶಿವಾಕರ ಮಂಚೇ' ಎಂಬಲ್ಲಿ 'ಶಾನಾ' ಎಂಬ ಹೆಸರಿದೆ. ಈ ರಾಗವನ್ನು ಶಹನ, ಸಹನ, ಶಾನಾ ಎಂದೂ ಹೇಳುತ್ತಾರೆ.

'ಸಂಸಾರಭೀತ್ಯಾಪಹೇ' ಎಂಬಲ್ಲಿ 'ಆರಭಿ' ಎಂಬ ಹೆಸರಿದೆ.

'ಭಜೇಹಂ ವೀರನುತಂ' ಎಂಬಲ್ಲಿ ರಾಗದ ಹೆಸರು 'ಹಂವೀರು' ಎಂಬುದಾಗಿ ಸೂಚಿತವಾಗಿದೆ.

ಇತ್ಯಾದಿ, ಇತ್ಯಾದಿ.

8. ವಿವಿಧ 'ಯತಿ' (ಅಲಂಕಾರ)ಗಳು ಸಾಹಿತ್ಯದಲ್ಲಿ (ಧಾತು) ಲೀಲಾಜಾಲವಾಗಿ ಬಂದಿವೆ-

ತ್ಯಾಗರಾಜಯೋಗವೈಭವಂ - ರಾಗ: *ಆನಂದಭೈರವಿ* - ತಾಳ: *ರೂಪಕ*

(ಪಲ್ಲವಿಯಲ್ಲಿ)

ಗೋಪುಚ್ಛ

ತ್ಯಾಗರಾಜಯೋಗವೈಭವಂ - ಅಗರಾಜಯೋಗವೈಭವಂ - ರಾಜಯೋಗವೈಭವಂ - ಯೋಗವೈಭವಂ - ವೈಭವಂ - ವಂ.

ಅದೇ ಕೃತಿಯ ಸಮಷ್ಟಿ ಚರಣದಲ್ಲಿ-

ಸ್ರೋತೋವಹ

ಶಂ - ಪ್ರಕಾಶಂ - ಸ್ವರೂಪಪ್ರಕಾಶಂ - ತತ್ತ್ವಸ್ವರೂಪಪ್ರಕಾಶಂ - ಸಕಲತತ್ತ್ವಸ್ವರೂಪ ಪ್ರಕಾಶಂ - ಶಿವಶಕ್ತ್ಯಾದಿ ಸಕಲತತ್ತ್ವಸ್ವರೂಪಪ್ರಕಾಶಂ.

ಮುಗಿಸುವ ಮುನ್ನ

9. ವಿವಾದಿ ಸ್ವರ/ಸ್ವರಗಳಿರುವ ರಾಗಗಳಲ್ಲಿ ವಿವಾದಿ ಸ್ವರಗಳು (ಷಟ್ಶ್ರುತಿ ರಿಷಭ, ಶುದ್ಧ ಗಾಂಧಾರ, ಷಟ್ಶ್ರುತಿ ದೈವತ, ಶುದ್ಧ ನಿಷಾದ) - ವಿವರಣೆಗಳು ಹಿಂದೆಯೇ ಬಂದಿವೆ - ಕಿವಿಗೆ ಹಿತವಾಗಿಯೇ ಕೇಳುವಂತೆ ಒಡಮೂಡಿದ ಸಂದರ್ಭಗಳು, ಸೊಲ್ಕಟ್ಟು ಸ್ವರಗಳ - ಅಂದರೆ, ಸ್ವರ ಮತ್ತು ಜತಿಗಳು ಜತೆಜತೆಗೆ ಸಾಗುವ ಸೌಂದರ್ಯ, ಒಂದೇ ವಿಭಕ್ತಿ ಪ್ರತ್ಯಯವನ್ನು ಕೃತಿಯ ಉದ್ದಕ್ಕೂ ನಡೆಸುವ ಕೌಶಲ್ಯ, ಮಣಿಪ್ರವಾಳ ಕೃತಿಗಳಲ್ಲಿ ಸಾಹಿತ್ಯದ ಸೊಗಸು, ಈಯೆಲ್ಲ ಲಕ್ಷಣಗಳನ್ನು ಕಾಣಿಸುವ ಲಕ್ಷ್ಯರೂಪಗಳನ್ನು ಶ್ರೋತೃಗಳು ಕೇಳಿದಾಗ ಮಾತ್ರ ಲಕ್ಷಣಗಳ ಹೊಳಹು ನಿಚ್ಚಳವಾಗಿ ವೇದ್ಯವಾಗುತ್ತದೆ. ರಸಿಕರ ರಸಾಭಿಜ್ಞತೆಗೆ ಪುಟವಿಟ್ಟಂತಾಗುತ್ತದೆ, ಗಾನಸಾಮ್ರಾಜ್ಯದ ಅರಿವು ಗಾಢವಾಗುತ್ತದೆ. ಎಲ್ಲವನ್ನೂ ಉದಾಹರಿಸಲು ಒಂದು ಸುದೀರ್ಘ ಸೋದಾಹರಣ ಭಾಷಣವನ್ನೇ ಏರ್ಪಡಿಸಬೇಕಾದೀತು.

ದೀಕ್ಷಿತರ ಕೃತಿಗಳಲ್ಲಿ ಲಭಿಸುವ ಈ ವೈಶಿಷ್ಟ್ಯಗಳನ್ನು ಹೊತ್ತು ನಿಂತ ಕೃತಿಗಳ ಗಾಯನವನ್ನು ಸಮರ್ಥ ಗಾಯಕರ ಹಾಡಿಕೆಯಲ್ಲಿ ಕೇಳಿದಾಗ ರಸಿಕನಿಗೆ ಲಭಿಸುವ ರಸದೌತಣ ಅನನ್ಯವಾದುದು.

76, ಮೊದಲನೆಯ ಘಟ್ಟ, ಪೋಸ್ಟಲ್ ಕಾಲನಿ, ಸಂಜಯನಗರ, ಬೆಂಗಳೂರು - 560094

ಧಾರ್ಮಿಕ ಸಂಗೀತ ಮತ್ತು ಶ್ರೀಸಾಮಾನ್ಯ

ಡಾ. ರಾ. ಸತ್ಯನಾರಾಯಣ

ವೈದಿಕ ಸಂಗೀತವೂ ಶಾಸ್ತ್ರೀಯ ಸಂಗೀತವೂ ಸಮಾಜದಲ್ಲಿ ಕೆಲವೇ ವರ್ಗಗಳಿಗೆವ ಮಿತವಾಗಿವೆ; ಇವನ್ನು ಶಿಷ್ಟವರ್ಗಗಳು ಎಂದು ಕರೆಯಬಹುದು. ಶ್ರೀಸಾಮಾನ್ಯರ ಸಂಗೀತ ಮೂಲಕವಾದ ಧಾರ್ಮಿಕಾಭಿವ್ಯಕ್ತಿಯು ಸಂಕೀರ್ಣವಾದುದು; ಅದರಲ್ಲಿ ಪ್ರಾಣಿಪೂಜೆ, ಪುರಾತನರ ಪೂಜೆ, ಸಂಸ್ಕೃತಿನಾಯಕ ಪೂಜೆ, ಬಹುದೇವತಾರಾಧನೆ ಮುಂತಾದ ಹಲವು ಅಂಶಗಳು ಸೇರಿವೆ.

ಅವೈದಿಕ ದೇವತೆಗಳ ಪೂಜೆಯಲ್ಲಿ ದುರ್ಗಾ ಆರಾಧನೆಯು ತುಂಬಾ ಪುರಾತನವೂ ವ್ಯಾಪಕವೂ ಆಗಿದೆ. ಮಾತೃಪೂಜೆ ಎಂಬ ಅರ್ಥದಲ್ಲಿ ಇದು ಜಗದ್ವ್ಯಾಪಿಯಾದುದು. ಇದನ್ನು ವೈದಿಕಧರ್ಮದಲ್ಲಿ ಸಮನ್ವಯಗೊಳಿಸುವ ಪ್ರಯತ್ನಗಳು ಬಹಳ ಹಿಂದಿನಿಂದಲೂ ನಡೆದಿದ್ದು ಯಶಸ್ವಿಯಾಗಿವೆ. ಭಾರತದಲ್ಲಿ ಇದು ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ರಾಪವನ್ನು ತಳೆದಿದೆ. ಈ ಪೂಜೆಗಳಲ್ಲಿ ವೈದಿಕ ಹಾಗೂ ತಾಂತ್ರಿಕ ಆಚರಣೆಗಳು ಬೆರಕೆಯಾಗಿವೆ. ವೇದವಾಙ್ಮಯದಲ್ಲೇ ಇದರ ಇಂಗಿತಗಳು ಸಾಕಷ್ಟು ದೊರೆಯುತ್ತವಾದರೂ ಮಾರ್ಕಂಡೇಯ ಪುರಾಣ ಮತ್ತು ಬ್ರಹ್ಮಾಂಡ ಪುರಾಣಗಳಲ್ಲಿ ಇದರ ವ್ಯವಸ್ಥಿತವೂ ಸ್ಪಷ್ಟವೂ ಆದ ವಿಧಾನಗಳು ದೊರೆಯುತ್ತವೆ. ಜೈನರಲ್ಲಿ ಜ್ವಾಲಾಮಾಲಿನೀ, ಬೌದ್ಧರಲ್ಲಿ ತಾರಾ, ಛಿನ್ನಮಸ್ತಾ, ವಾರಾಹೀ, ಹೇರಂಬ ಮುಂತಾದ ರೂಪಗಳಲ್ಲಿ ಇದು ಹಿಂದೂಮತದಿಂದ ಹೋಗಿ ವ್ಯಾಪಿಸಿದೆ. ಪೂರ್ವಭಾರತದಲ್ಲಿ ಮಾನಸಾ, ತಾರಿಣೀ, ಕಾಲೀ; ಪಶ್ಚಿಮಭಾರತದಲ್ಲಿ ಅಂಬಾ, ವಿಂಧ್ಯವಾಸಿನೀ; ಉತ್ತರಭಾರತದಲ್ಲಿ ಸಂತೋಷೀ, ಲಜ್ಜಾ; ದಕ್ಷಿಣಭಾರತದಲ್ಲಿ ಶಾರದಾ, ಕಾಮಾಕ್ಷೀ, ಮೀನಾಕ್ಷೀ, ಮಾರಿ ಮುಂತಾದ ಶಿಷ್ಟ-ಧರ್ಮ ರೂಪಗಳಲ್ಲಿ ಈ ಪೂಜೆಯು ಪ್ರಸಿದ್ಧವಾಗಿದೆ. ಪೌರಾಣಿಕವಾಗಿ ರೂಢಿಸಿರುವ ಅದೆಷ್ಟೋ ಬೇರೆ ಬೇರೆ ದೇವಿಯರು ಜನಸಾಮಾನ್ಯರಲ್ಲಿ ಪೂಜೆಯನ್ನು ಕೈಗೊಳ್ಳುತ್ತಾರೆ. ಶ್ರೀವಿದ್ಯಾತಂತ್ರದ ಕಾದಿಮಾರ್ಗವೊಂದರಲ್ಲಿಯೇ ಭರತಖಂಡದಲ್ಲಿ ಐವತ್ತು ಶಕ್ತಿಪೀಠಗಳೂ ನೂರಾರು ದೇವೀತೀರ್ಥಕ್ಷೇತ್ರಗಳೂ ಇವೆ. ಶಾಕ್ತಾಗಮದಲ್ಲಿ ಅಪೋದೇವತೆಯೂ ಸರ್ಪದೇವತೆಯೂ ಆದ ಮನಸಾಳ ಆರಾಧನೆಯು ದೇವಧ್ವನಿ ಎಂಬ ಹಬ್ಬದಲ್ಲಿ ಉಳಿದು ಬಂದಿದೆ. ಇದು ಮಂಚಮ್ಮನೆಂಬ ಜಾನಪದ ದೇವತೆಯ ಶಿಷ್ಟರೂಪ. ಅದನ್ನು ಬಂಗಾಳ, ಅಸ್ಸಾಂ, ಮಿಥಿಲಾ ಇತ್ಯಾದಿ ನೈಋತ್ಯ ಪ್ರಾಂತಗಳಲ್ಲಿ ಪೂಜಿಸುತ್ತಾರೆ. ಇದರಲ್ಲಿ ಸ್ತ್ರೀಭಕ್ತೆಯರು ದೇವಿಯ ಆವೇಶಕ್ಕೆ ಸಾಮೂಹಿಕವಾಗಿ ಒಳಗಾಗುತ್ತಾರೆ. ಆಗ ಗಂಡಸರು ಮನಸಾಮಂಗಳ (= ಚಂಡೀಮಂಗಳ, ಮಂಗಳಗೀತಿ = ನಮನಗೀತಿ)ಗಳನ್ನು ಹಾಡಿ ಪೂಜಿಸುತ್ತಾರೆ. ಇವರಿಗೆ ಓಝಾಪಾಲಿಗಳೆಂದು

ಹೆಸರು. ಇದು ಇಡೀ ಪೂರ್ವಭಾರತದ ಗ್ರಾಮೀಣ ಭಾಗಗಳಲ್ಲಿ ಚೆನ್ನಾಗಿ ಪ್ರಚಾರದಲ್ಲಿದೆ. ಪಶ್ಚಿಮಭಾರತದಲ್ಲಿಯೂ ದೇವೀ ಆರಾಧನೆಯ ಅಂಗವಾಗಿ ಇಂತಹ ಸಾಮೂಹಿಕ ಗಾಯನಗಳನ್ನು, ಭಿಲ್ಲರ ಬುಡಕಟ್ಟುಗಳಲ್ಲಿಯೂ ಮಹಾರಾಷ್ಟ್ರದ ಅಂಬಾಭವಾನಿ ಗೊಂದಳಗಳಲ್ಲಿಯೂ ಕಾಣಸಿಗುತ್ತವೆ. ಇಂತಹ ಜಾಗರಣ ರಾತ್ರಿಗಳೂ ಸ್ಥಳೀಯ ದೇವಿಯ ಪವಾಡಗಳು, ಭವಿಷ್ಯವಾಣಿ, ರೋಗನಿವಾರಣ - ಇವುಗಳನ್ನೂ ಅಖಂಡವಾಗಿ ಹಾಡುತ್ತಾರೆ.

ಭಕ್ತಿಪಂಥವು ಉದಯವಾಗಿ ಭಾರತದಲ್ಲೆಲ್ಲ ತುಂಬಿಕೊಂಡಾಗ ಶ್ರೀಸಾಮಾನ್ಯರಲ್ಲಿ ಭಜನಪದ್ಧತಿಯು ಬಹು ಜನಪ್ರಿಯವಾಯಿತು. ಇಡೀ ಭಾರತದಲ್ಲಿ ಅಪವಾದವಿಲ್ಲದೆ ಹಳ್ಳಿಹಳ್ಳಿಯಲ್ಲೂ ಒಂದು ಭಜನಮಂದಿರವಿರುತ್ತದೆ ಅಥವಾ ಭಜನಮಂಡಲಿಯು ಅಲ್ಲಿಯ ಮುಖ್ಯ ದೇವಸ್ಥಾನಕ್ಕೆ ಲಗತ್ತಾಗಿರುತ್ತದೆ. ಭಜನಪದ್ಧತಿಯು ಲಘುಭಕ್ತಿಸಂಗೀತ ಅಥವಾ ಧಾರ್ಮಿಕ ಸಂಗೀತಗಳಿಗೆ ಪರ್ಯಾಯವೆನ್ನಿಸಿತು. ಬೇರೆ ಬೇರೆ ಪ್ರಾಂತಗಳಲ್ಲಿ ಇದು ಪದ, ಕೀರ್ತನ್, ಚರ್ಯಾಗೀತಿ ಎಂಬ ಹೆಸರುಗಳಲ್ಲಿ ರೂಢಿಸಿತು. ಇವುಗಳಲ್ಲಿ ಪರಸ್ಪರ ರಚನಾವಿನ್ಯಾಸ ಸಂಬಂಧಗಳೂ ಇಲ್ಲದಿಲ್ಲ. ಭಜನಗೋಷ್ಠಿಗಳ ಉದ್ದೇಶವು ಭಗವದ್ಭಕ್ತಿಯನ್ನೂ ಪಾರವಶ್ಯತೆಯನ್ನೂ ಪಾಲುಗೊಳ್ಳುವುದರಿಂದ ಉಂಟಾಗುವ ಆನಂದವನ್ನೂ ಸಾಮೂಹಿಕವಾಗಿ ಪ್ರಚೋದಿಸುವುದೇ ಆಗಿದೆ. ಇದನ್ನು ಪೂರೈಸಲೆಂದು ಅದು ಕೆಲವು ಉಪಾಯಗಳನ್ನು ನಿರ್ಮಿಸಿಕೊಂಡಿದೆ. ನಾಯಕ (= ಭಾಗವತ)ನು ಪುನಃ ಪುನಃ ಪುಂಡರೀಕವನ್ನು (ಉದಾ: 'ಪುಂಡರೀಕವರದ ಗೋವಿಂದ', 'ಪಾರ್ವತೀಕಾಂತಸ್ಮರಣ', 'ರಮಾರಮಣಗೋವಿಂದ' ಇತ್ಯಾದಿ) ಘೋಷಿಸುತ್ತಾನೆ. ಇದಕ್ಕೆ ಜವಾಬು ಸಾಮೂಹಿಕವಾಗಿರುತ್ತದೆ ('ಗೋವಿಂದ', 'ಹರಹರ ಮಹಾದೇವ', 'ಗೋವಿಂದ' ಇತ್ಯಾದಿ). ಎಲ್ಲಾ ಗಾಯನವೂ ಉಚ್ಚಧ್ವನಿಯಲ್ಲಿರುತ್ತದೆ. ಗಾಯನವು ಎರಡು ಭಾಗಗಳಲ್ಲಿರುತ್ತದೆ. ಭಾಗವತನು ಹಾಡಿದ ಪಙ್ಕ್ತಿಯ ಧಾತುಮಾತುಗಳನ್ನು ಗೋಷ್ಠಿಯು ಯಥಾವತ್ತಾಗಿ ಪುನರುಚ್ಚರಿಸುತ್ತದೆ ಅಥವಾ ಬೇರೊಂದು ನಿಯತವಾದ ಪಙ್ಕ್ತಿಯನ್ನು ನಿಯತವಾದ ಒಂದೇ ಧಾತು-ಮಾತುಗಳಲ್ಲಿ ಪುನರುಚ್ಚರಿಸುತ್ತದೆ. ಗಾನವನ್ನು ಸಾಮಾನ್ಯವಾಗಿ ಸುಲಭಶೈಲಿಯ ಮಾತುಗಳಲ್ಲಿ, ಹೆಚ್ಚಾಗಿ ನಾಮಾವಳಿಯಲ್ಲಿ, ಜಾನಪದ ಛಂದಸ್ಸು ಮತ್ತು ಮಟ್ಟುಗಳಲ್ಲಿ ಕನಿಷ್ಠ ಗಮಕವಿರುವ ಧಾತುಪಙ್ಕ್ತಿಗಳಲ್ಲಿ, ಜನಸಾಮಾನ್ಯರಿಗೆ ಸುಪರಿಚಿತವಾದ, ಅನುಕರಿಸಲು ಸುಲಭವಾದ, ರಾಗಭಾವಗಳಲ್ಲಿ ರಚಿಸಲಾಗುತ್ತದೆ. ಹಾಡುಗಳನ್ನು ಆಯಾ ಭಾಷೆಗಳ ಮಹಾಭಕ್ತರ ಮತ್ತು ಸಂತರ ರಚನೆಗಳಿಂದ ಆಯ್ಕೆ ಮಾಡಲಾಗುತ್ತದೆ. ಇವರು ಹಲವು ವೇಳೆ ಭಕ್ತಿಪಂಥದ ಪ್ರವರ್ತಕರೋ ಸ್ಥಾಪಕರೋ ಆಗಿರುವುದೂ ಉಂಟು. ಗಾಯನದ ಜೊತೆಗೆ ಸರಳವಾದ ಹಸ್ತಪಾದ ಚಲನೆಗಳನ್ನುಳ್ಳ ನರ್ತನದಲ್ಲಿಯೂ ಭಾಗವತನೂ ಗೋಷ್ಠಿಯೂ ತೊಡಗುತ್ತಾರೆ. ಮನಸ್ಸು, ದೇಹ, ಕಂಠಗಳು ಮೂರೂ ಒಂದೇ ಎಡೆಯಲ್ಲಿ ಕೇಂದ್ರೀಕೃತವಾಗುವ ಕ್ರಿಯೆಗಳಲ್ಲಿ ತೊಡಗುವುದರಿಂದ ಪಾರವಶ್ಯತೆಯು ಸುಲಭವಾಗುತ್ತದೆ.

ಭಜನಗೋಷ್ಠಿಗಳಲ್ಲಿ ವೃತ್ತಿವಂತರು, ಅಲ್ಲದವರು ಎಂಬ ವಿಭಾಗವುಂಟು. ಜೋಗಿಗಳು,

ಬೈರಾಗಿಗಳು, ಗೋಸಾಯಿಗಳು, ಗುಂಪುಗಳಲ್ಲಿ ಅಥವಾ ಏಕಾಂಗಿಯಾಗಿ ವಿಶೇಷವಾದ ಭಜನಗೀತಗಳನ್ನು ಹಾಡುತ್ತ ಊರಿಂದೂರಿಗೆ ಸಂಚರಿಸುತ್ತ ಭಿಕ್ಷಾಟನಚರ್ಯದಲ್ಲಿರುತ್ತಾರೆ. ಇಂತಹವರು ಸಾಮಾನ್ಯವಾಗಿ ಯಾವುದಾದರೊಬ್ಬ ಸಂತನ ರಚನೆಗಳನ್ನು ಮಾತ್ರ ಹಾಡುತ್ತಾರೆ. ಇಂತಹವರು ತತ್ತ್ವಪದಗಳನ್ನು ಮತ್ತು ಅನುಭಾವಗೀತೆಗಳನ್ನು ಹೆಚ್ಚಾಗಿಯೂ ನೀತಿ, ಸಮಾಜಪ್ರಜ್ಞೆ, ಅಪೇಕ್ಷಣೀಯವಾದ ಗುಣಗಳ ಸಂವರ್ಧನ ಮುಂತಾದವನ್ನು ಕುರಿತು ಒಮ್ಮೊಮ್ಮೆಯೂ ಹಾಡುತ್ತಾರೆ. ಇತ್ತೀಚೆಗೆ ನಗರಗಳಲ್ಲಿ ವೃತ್ತಿವಂತ ಸಂಗೀತಗಾರರು ಸಿನಿಮಾಗಳಲ್ಲಿರುವ ಭಕ್ತಿಗೀತಗಳನ್ನು ಭಜನೆಗಳ ರೂಪದಲ್ಲಿ ಹಾಡಿ, ಗೋಷ್ಠಿಗಳ ನಾಯಕತ್ವವನ್ನು ವಹಿಸಿ ಜನಪ್ರಿಯರಾಗುತ್ತಾರೆ. ಅಂತಹ ಧ್ವನಿಮುದ್ರಿಕೆಗಳೂ ಧ್ವನಿಸುರುಳಿಗಳೂ ಪ್ರಕಟವಾಗುತ್ತಿವೆ. ಕೆಲವು ಹಿಂದೂಸ್ಥಾನೀ ಗಾಯಕರು ಸಾಂಪ್ರದಾಯಿಕ ಭಜನರಚನೆಗಳಿಗೆ ರಾಗತಾಳಗಳನ್ನು ಅಳವಡಿಸಿ ಠುಮ್ರಿಶೈಲಿಯಲ್ಲಿ ಹಾಡುತ್ತಿದ್ದಾರೆ.

ಭಜನಗೋಷ್ಠಿಗಳಲ್ಲಿ ನಿರ್ಗುಣೋಪಾಸನೆ ಹಾಗೂ ಸಗುಣೋಪಾಸನೆಯ ಎರಡು ಪಂಥಗಳಿವೆ. ನಿರ್ಗುಣೋಪಾಸನೆಯಲ್ಲಿ ಮುಖ್ಯವಾಗಿ ಬೋಧೆ, ತತ್ತ್ವ, ಪ್ರಮೇಯ, ಚರ್ಯಾ ಇವುಗಳ ಹಾಡುಗಳಿದ್ದು ಇವು ಅನೇಕ ವೇಳೆ ಅನುಭಾವಾತ್ಮಕವಾಗಿಯೋ ಸಂಕೇತಮಯವಾಗಿಯೋ ಇರುತ್ತವೆ. ಇವುಗಳಲ್ಲಿ ಕಬೀರ್ ಮತ್ತು ನಾನಕರ ಭಜನಪದ್ಧತಿಗಳು ಮುಖ್ಯವೆಂದು ಹೆಸರಿಸಬಹುದು. ಭಕ್ತಿಯ ಉದ್ವೇಗವಿಲ್ಲದಿದ್ದರೂ ನಿರುಪಾಧಿಕ ಸಂವಿತ್ತಿನ ಅನ್ವೇಷಣೆಯ ಸಾಹಸವಿದೆ. ಈ ಪದ್ಧತಿಯಲ್ಲಿ ಸಗುಣಭಕ್ತಿಯ ಭಜನಪದ್ಧತಿಯೇ ಹೆಚ್ಚು ಜನಪ್ರಿಯವಾಗಿದೆ. ಹಿಂದಿಯಲ್ಲಿ ಅಷ್ಟಛಾಪಕವಿಗಳು, ಮೀರಾಬಾಯಿ, ತುಲಸೀದಾಸ, ಸೂರದಾಸ; ಮರಾಠಿಯಲ್ಲಿ ಜ್ಞಾನದೇವ, ನಾಮದೇವ ಮೊದಲಾದ ಅಭಂಗಕಾರರು; ಗುಜರಾತಿನಲ್ಲಿ ನರಸೀ ಮೆಹತಾ; ತೆಲುಗಿನಲ್ಲಿ ವೇಮನ, ರಾಮದಾಸ, ತ್ಯಾಗರಾಜ; ತಮಿಳಿನಲ್ಲಿ ನಾಯನ್ಮಾರರು, ಆಳ್ವಾರರು; ಕನ್ನಡದಲ್ಲಿ ಶಿವಶರಣರು, ಹರಿದಾಸರು; ಬೆಂಗಾಲಿಯಲ್ಲಿ ಚಂಡೀದಾಸ, ವಿದ್ಯಾಪತಿ, ಚೈತನ್ಯ ಮುಂತಾದ ಕೀರ್ತನಕಾರರು ಸಗುಣಭಕ್ತಿಯ ನೇತಾರರೂ ಆಗಿ ಅದನ್ನು ನಾಡಿನ ಉದ್ದ ಅಗಲಗಳಲ್ಲಿ ಹರಡಿದರು. ಇದರಲ್ಲಿ ಭಕ್ತಿಯು ಎಲ್ಲಾ ಪ್ರಕಾರಗಳಿಗೂ ಸ್ಥಾನವಿದ್ದರೂ ಮಧುರಭಾವಕ್ಕೆ, ಎಂದರೆ ನಾಯಕ-ನಾಯಿಕಾ ಭಾವಕ್ಕೆ ಪ್ರಾಧಾನ್ಯವಿದೆ. ಹೀಗೆ ನಾಯಿಕೆಯಂತೆ ವೇಷಭೂಷಣಭಾವಗಳನ್ನು ತಳೆದು ಪರಮಾತ್ಮನನ್ನು ವಿರಹಭಾವದಲ್ಲಿ ಅನುಭವಿಸುವ ಸಂತರೂ ಭಾರತದಲ್ಲಿ (ಉದಾ: ನಾಯಕೀಸ್ವಾಮಿ) ಇಲ್ಲದಿಲ್ಲ. ಇದಕ್ಕೆ ಪ್ರತಿಯಾಗಿ ತಾನೇ ಕೃಷ್ಣನೆಂಬ ಭಾವದಲ್ಲಿ ಚೈತನ್ಯಗೌರಾಂಗನು ಬಂಗಾಲದಲ್ಲಿ ಭಕ್ತಿಪಂಥವನ್ನು ಎತ್ತಿಹಿಡಿದು ನಡೆಸಿದುದನ್ನು ಸ್ಮರಿಸಬಹುದು. ಬಂಗಾಲದ ಕೀರ್ತನ, ನಾಮಕೀರ್ತನ, ಭಜನಪದ್ಧತಿಗಳು ಇವುಗಳಿಂದ ಅಲ್ಲಿನ ಮುಖ್ಯ ಭಕ್ತಿಚಳವಳಿಯು ರೂಪುಗೊಂಡಿತು, ಇಂದಿನ ಹರೇಕೃಷ್ಣ ಚಳವಳಿಗೆ ನಾಂದಿಯಾಯಿತು, ಎನ್ನಬಹುದು.

ದಕ್ಷಿಣಭಾರತದ ಎಲ್ಲ ಪ್ರಾಂತ್ಯಗಳಲ್ಲೂ ಭಜನಪದ್ಧತಿಯು ವ್ಯಾಪಕವಾಗಿ ರೂಢಿಸಿದೆಯೆಂದು ಮೇಲೆ ಹೇಳಿದೆಯಷ್ಟೆ. ಇಲ್ಲಿ ಭಜನೆಯೆಂದರೆ ಭಗವಂತನನ್ನು ಯಾವ

ಭೇದಭಾವವೂ ಇಲ್ಲದೆ ಎಲ್ಲರೂ ಒಟ್ಟುಗೂಡಿ ಭಕ್ತಿಯಿಂದ ಸಂಗೀತಮಾಧ್ಯಮದಲ್ಲಿ ಆರಾಧಿಸುವ ಸುಲಭವಿಧಾನ ಎಂದಿಟ್ಟುಕೊಳ್ಳಬಹುದು. ಇದರಲ್ಲಿ ದೇವರ ನಾನಾರೂಪಗಳ ನಾಮಾವಳಿ, ನಾಮಸಂಕೀರ್ತನ, ಭಕ್ತಿಯನ್ನು ಬೋಧಿಸುವ ಹಾಡುಗಳ ಮೂಲಕ ಸ್ತೋತ್ರ ಇವೆಲ್ಲ ಸೇರಿರುತ್ತವೆ. ಇದರಲ್ಲಿ ಭಾಗವಹಿಸುವವರು ನಾಯಕನಾಗಿ ಎಂದರೆ ಭಾಗವತನಾಗಿ, ಗಾಯಕರಾಗಿ, ವಾದಕರಾಗಿ, ಶ್ರೋತೃಗಳಾಗಿ ಇರಬಹುದು. ಇದರಲ್ಲಿ ವಯಸ್ಸು, ಲಿಂಗ, ಜಾತಿಗಳ ಭೇದವಿಲ್ಲ ಮಕ್ಕಳು - ಮುದುಕರು, ಗಂಡಸರು - ಹೆಂಗಸರು, ಬಡವರು - ಬಲ್ಲಿದರು, ಪಂಡಿತರು - ಪಾಮರರು ಎಲ್ಲರೂ ಭಾಗವಹಿಸಬಹುದು. ಉಪದೇಶ, ದೀಕ್ಷೆ ಮುಂತಾದವುಗಳ ಆವಶ್ಯಕತೆಯು ಇಲ್ಲಿಲ್ಲ. ಒಂದು ಭಜನಮಂಡಲಿಯಲ್ಲಿ ಭಾಗವಂತನೆಂಬ ನಾಯಕನಿರುತ್ತಾನೆ, ಗಾಯಕರಿರುತ್ತಾರೆ, ವಾದ್ಯಗಳನ್ನು ನುಡಿಸುವವರಿರುತ್ತಾರೆ, ಸುಮ್ಮನೆ ಕೇಳುವವರೂ ಇರುತ್ತಾರೆ. ಗಾಯಕರು ಭಾಗವತನು ಹಾಡಿದ್ದನ್ನು ನಂತರ ಪುನರುಚ್ಚರಿಸಬಹುದು, ಜೊತೆಯಲ್ಲಿಯೇ ಹಾಡಬಹುದು, ಪ್ರತ್ಯೇಕವಾಗಿ ಬೇರೆಯೇ ಹಾಡಬಹುದು. ವಾದಕರಲ್ಲಿ ಈ ಆಧಾರಶ್ರುತಿಯನ್ನು ಹಿಡಿಯಲೆಂದು ತಂಬೂರಿಯನ್ನೋ ಹಾರ್ಮೋನಿಯಂ ವಾದ್ಯವನ್ನೋ ನುಡಿಸುವವರು, ಪಿಟೀಲು, ಕೊಳಲು ಅಥವಾ ಹಾರ್ಮೋನಿಯಂ ಪಕ್ಕವಾದ್ಯವನ್ನು ನುಡಿಸುವವರು, ತಬಲ, ಮೃದಂಗ, ಮದ್ದಳೆ, ಕಂಜರಿ, ಜಾಲರಾ, ಚಿಟಿಕೆ (ಚಿಪ್ಳಾ), ತ್ರಿಕೋಣ, ಕೈತಾಳ ಇವುಗಳಲ್ಲಿ ಕೆಲವನ್ನು ಅಥವಾ ಎಲ್ಲವನ್ನೂ ನುಡಿಸುವವರು ಇರುತ್ತಾರೆ. ಶ್ರುತಿಗಾಗಿ ಶ್ರುತಿಪೆಟ್ಟಿಗೆಯನ್ನು ಬಳಸುವುದೂ ಉಂಟು. ಒಂದು ಗೋಷ್ಠಿಯಲ್ಲಿ ಹಲವರು ಜಾಲರಾಗಳನ್ನೂ ಕೈತಾಳಗಳನ್ನೂ ಚಿಟಿಕೆಗಳನ್ನೂ ಉಪಯೋಗಿಸುವುದುಂಟು. ಇದರಿಂದ ಗೋಷ್ಠಿಯ ವಾತಾವರಣವು ಉದ್ದೀಪನಗೊಳ್ಳುತ್ತದೆ, ತನ್ಮಯತೆಯು ಹೆಚ್ಚಾಗುತ್ತದೆ; ಏಕೆಂದರೆ ಪಾಲುಗೊಳ್ಳುವಿಕೆಯ ಆತ್ಮೀಯತೆಯು ಇದರಿಂದ ಲಭಿಸುತ್ತದೆ. ಪಂಢರಾಪುರದ ಜಾಲರಾಗಳು ತಮ್ಮ ಸುನಾದಕ್ಕಾಗಿ ಪ್ರಸಿದ್ಧವಾಗಿವೆ. ಒಂದು ದೃಷ್ಟಿಯಿಂದ ಗ್ರಾಮೀಣ ಜನರಿಗೆ ಸಂಗೀತದ ಪ್ರಥಮ ಪರಿಚಯವು ಭಜನಗೋಷ್ಠಿಗಳಿಂದಲೇ ಎಂದರೂ ತಪ್ಪಿಲ್ಲ.

ಭಜನಗೋಷ್ಠಿಗಳು ಸಾಮಾನ್ಯವಾಗಿ ಯಾವುದಾದರೊಂದು ದೇವಸ್ಥಾನದಲ್ಲಿ ಸೇರುತ್ತವೆ ಅಥವಾ ಭಜನಮಂಡಲಿಗೆ ಸೇರಿದ ಅಥವಾ ಸೇರದಿರುವ ಒಬ್ಬ ಭಕ್ತರ ಮನೆಯಲ್ಲಿ ಕಲೆಯಬಹುದು; ಭಾಗವತರ ಮನೆಯಲ್ಲೂ ಗೋಷ್ಠಿಯು ನಡೆಯಬಹುದು. ಶುಕ್ರವಾರ, ಶನಿವಾರ, ಅಮಾವಾಸ್ಯೆ, ಹುಣ್ಣಿಮೆ, ಏಕಾದಶೀ ತಿಥಿಗಳು, ಕೃತ್ತಿಕಾ, ರೋಹಿಣೀ, ಪುನರ್ವಸೂ ನಕ್ಷತ್ರಗಳಿರುವ ತಿಥಿಗಳು ಇದಕ್ಕೆ ಪ್ರಶಸ್ತ. ಭಜನೆಗಳನ್ನು ಮಠಗಳಲ್ಲಿ ಅಥವಾ ಮಂದಿರಗಳಲ್ಲಿ, ಗರಡಿಗಳಲ್ಲಿ, ಊರಿನ ಚಾವಡಿಗಳಲ್ಲಿ ಸಹ ನಡೆಸಬಹುದು. ಎಷ್ಟೋ ಊರುಗಳಲ್ಲಿ ಜನರು ಪ್ರತ್ಯೇಕವಾದ ಭಜನಮಂದಿರವನ್ನೇ ಕಟ್ಟಿಸಿರುವುದೂ ಉಂಟು.

ಭಜನಗೋಷ್ಠಿಯು ಭಕ್ತಿಯ ಸಂಪ್ರದಾಯನಿಷ್ಠರೂ ಆಗಿರುವ ಸಂಗೀತ ವಿದ್ವಾಂಸರುಗಳ ಮನೆಗಳಲ್ಲೂ ನಡೆಯುತ್ತದೆ; ಆದರೆ ಇಲ್ಲಿ ನಡೆಯುವುದು ಅತಿಥಿ - ಅಭ್ಯಾಗತ ಸಂಗೀತ ವಿದ್ವಾಂಸರ ಸಂಗೀತ ಕಛೇರಿ; ಪಕ್ಕವಾದ್ಯ ವಿದ್ವಾಂಸರೂ ಅತಿಥಿ,

ಅಭ್ಯಾಗತರೇ ಆಗಿರುತ್ತಾರೆ. ಹೀಗೆ 'ಭಜನೆ'ಯಲ್ಲಿ ಪಾಲುಗೊಳ್ಳುವುದು ಸೌಜನ್ಯ, ಪುಣ್ಯಕರ ಎಂದು ವಿದ್ವಾಂಸರೂ ಭಾವಿಸುತ್ತಾರೆ. ಅಂತಹ ವಿದ್ವಾಂಸರು ಯಾರೂ ಬಾರದಿರುವಾಗ ಅಥವಾ ಬಂದು ಹಾಡಿ ನುಡಿಸಿದಾಗ, ಮಂಗಳರೂಪದಲ್ಲಿ ಆತಿಥೇಯ ವಿದ್ವಾಂಸನೇ ಹಾಡುತ್ತಾನೆ ಅಥವಾ ನುಡಿಸುತ್ತಾನೆ. ಇಂತಹ ಸಂಗೀತ ಭಜನೆಗಳು ಸಾಮಾನ್ಯವಾಗಿ ಗುರುವಾರ, ಶುಕ್ರವಾರ ಅಥವಾ ಶನಿವಾರಗಳ ಸಂಜೆ ನಡೆಯುತ್ತವೆ. ಬೇರೆ ಬೇರೆ ಸ್ಥಳೀಯ, ಪರಸ್ಥಳೀಯ ಸಂಗೀತ ವಿದ್ವಾಂಸರನ್ನು ಸತ್ಕರಿಸಲು, ಅವರ ಸಂಗೀತವನ್ನು ಕೇಳಿ ತಮ್ಮ ಜ್ಞಾನದ ಹಾಗೂ ಅನುಭವದ ಮೇರೆಗಳನ್ನು ವಿಸ್ತರಿಸಿಕೊಳ್ಳುವುದಕ್ಕೆ ಇದು ಅತ್ಯುತ್ತಮ ಸಾಧನವಾಗಿತ್ತು. ರಸಿಕಭಕ್ತರಿಗೆ ಇವು ಸುವರ್ಣಾವಕಾಶಗಳಾಗಿದ್ದವು. ಇಂತಹ ಗೋಷ್ಠಿಗಳು ಈಗ ಅಪರೂಪವಾಗುತ್ತಿರುವುದು ದುರದೃಷ್ಟಕರ.

ಭಜನಗೋಷ್ಠಿಯ ಭಾಗವತನೂ ಆಸ್ತಿಕನೂ ಭಕ್ತನೂ ಧರ್ಮಾಚರಣನಿರತನೂ ಆಗಿರಬೇಕು. ತನಗಿಂತ ಹಿರಿಯ ಭಾಗವತನಿಂದ ದೀಕ್ಷೆಯನ್ನು ಪಡೆದಿರಬೇಕು. ಇಂತಹ ದೀಕ್ಷೆಯ ಲಾಂಛನವಾಗಿ ತನ್ನ ಬಲತೋಳಿನಲ್ಲಿ ದೀಕ್ಷಾಗುರುವು ಕಟ್ಟಿದ ಸೂತ್ರವನ್ನು ಧರಿಸಿರಬೇಕು.

ದೇವಾಲಯ, ಮಠ, ಮಂದಿರ, ಮನೆಗಳಲ್ಲಿ ನಡೆಯುವ ಭಜನೆಯು ಸ್ಥಾವರವಾದುದು. ಎಂದರೆ, ಅದರಲ್ಲಿ ಭಾಗವಹಿಸುವವರೆಲ್ಲರೂ ಒಂದೆಡೆ ಸೇರಿ, ಕುಳಿತು ಇಡೀ ಭಜನೆಯನ್ನು ಮಾಡಿ ಮುಗಿಸುತ್ತಾರೆ. ಇದಲ್ಲದೆ ಜಂಗಮ ಭಜನೆಗಳೂ ಇರುತ್ತವೆ. ಉದಾಹರಣೆಗೆ, ದಿವ್ಯನಾಮಸಂಕೀರ್ತನದಲ್ಲಿ ಗೋಷ್ಠಿಯು ನಡೆಯುವ ಹಜಾರದ ಮಧ್ಯದಲ್ಲಿ ಒಂದು ಪವಿತ್ರ ದೀಪಸ್ತಂಭವನ್ನು ಸ್ಥಾಪಿಸಿ, ದೀಪವನ್ನು ಹೊತ್ತಿಸಿ, ಗೊತ್ತುಮಾಡಲ್ಪಟ್ಟ ಕೆಲವರು ಅದನ್ನು ಪ್ರದಕ್ಷಿಣೆ ಸುತ್ತುತ್ತಿರುತ್ತಾರೆ ಮತ್ತು ಭಜನ ಸಂಕೀರ್ತನೆಗಳನ್ನು ಅವರೂ ಗೋಷ್ಠಿಯ ಇತರರೂ ಹಾಡುತ್ತಿರುತ್ತಾರೆ. ಬೇರೆಯ ಚರಗೋಷ್ಠಿಯಲ್ಲಿ ದೇವಾಲಯದ ಉತ್ಸವಮೂರ್ತಿಯ ಮೆರವಣಿಗೆಯೊಂದು ನಡೆಯುವಾಗ ವೇದಪಾರಾಯಣಗೋಷ್ಠಿಯ ಹಿಂದೆ ಭಜನಗೋಷ್ಠಿಯು ಮಡಿಯನ್ನುಟ್ಟು, ನಾಮಾವಳಿ ಮತ್ತಿತರ ಹಾಡುಗಳನ್ನು ಹಾಡುತ್ತ, ನುಡಿಸುತ್ತ ನಡೆಯುತ್ತದೆ. ಹಳ್ಳಿಗಳಲ್ಲೂ ನಗರಗಳ ವಿವಿಧ ಬಡಾವಣೆಗಳಲ್ಲೂ ಧನುರ್ಮಾಸದ (ಮಾರ್ಗಶೀರ್ಷ, ಡಿಸೆಂಬರ್ - ಜನವರಿ) ಸೂರ್ಯೋದಯಕ್ಕೆ ಮುಂಚೆ ಹೆಂಗಸರೂ ಗಂಡಸರೂ ಗೋಷ್ಠಿಗಳಾಗಿ ದೇವಾಲಯದಲ್ಲಿ ಸೇರಿ ಬೀದಿಬೀದಿಗಳಲ್ಲಿ ಭಜನೆ ಮಾಡುತ್ತ ನಡೆದು ಸೂರ್ಯೋದಯದ ವೇಳೆಗೆ ಪುನಃ ದೇವಾಲಯಕ್ಕೆ ಹಿಂತಿರುಗಿ ದೇವರ ದರ್ಶನ ಮಾಡಿ, ತೀರ್ಥ (ಪೊಂಗಲು) ಪ್ರಸಾದಗಳನ್ನು ಸ್ವೀಕರಿಸಿ ಹೋಗುತ್ತಾರೆ. ಆಸ್ತಿಕರು ತಮ್ಮ ತಮ್ಮ ಮನೆ ಬಾಗಿಲಲ್ಲಿ ನಿಂತು ಗೋಷ್ಠಿಯನ್ನು ಸ್ವಾಗತಿಸಿ, ನಡುರಸ್ತೆಗೆ ಬಂದು ಭಾಗವತ ಹಿಡಿದುಕೊಂಡಿರುವ ದೇವರ ಪಟಕ್ಕೂ ಗೋಷ್ಠಿಯ ಮುಂದೆ ಒಯ್ಯಲಾಗುವ ದೀಪಸ್ತಂಭಕ್ಕೂ ನಮಸ್ಕರಿಸಿ ಕಾಣಿಕೆಯನ್ನು ಸಮರ್ಪಿಸುತ್ತಾರೆ. ಚೈತ್ರಮಾಸದಲ್ಲಿ ರಾಮೋತ್ಸವ ಭಜನಗೋಷ್ಠಿಗಳೂ ಹೀಗೆಯೇ. ಆದರೆ ಉದಯಾತ್‌ಪೂರ್ವವೆಂಬ ನಿಯಮವಿಲ್ಲದೆ ನಡೆಯುತ್ತದೆ.

ಚರಗೋಷ್ಠಿಗಳಲ್ಲಿ ಉಂಛವೃತ್ತಿಯು ಮುಖ್ಯವಾದುದು. ಭಾಗವತನು ತಲೆಯಲ್ಲಿ ಪಾಗು, ಹಣೆಯಲ್ಲಿ ಪುಂಡ್ರ, ಕೊರಳಲ್ಲಿ ತುಲಸೀಮಣಿಯ ಹಾರ; ಕೈಗಳಲ್ಲಿ ತಂಬೂರಿ, ಚಿಟಿಕೆ, ಹೆಗಲಲ್ಲಿ ಉತ್ತರೀಯ, ಕಚ್ಚೆಯ ಧೋತರ, ಕಾಲಲ್ಲಿ ಗೆಜ್ಜೆ ಇವುಗಳನ್ನು ಧರಿಸಿ ಬೀದಿಬೀದಿಗಳಲ್ಲಿ ಭಗವನ್ನಾಮಸಂಕೀರ್ತನೆಯನ್ನೂ ನಾಮಾವಳಿಯನ್ನೂ ಹಾಡುತ್ತ ನಡೆಯುತ್ತಾನೆ. ಅವನ ಹಿಂದೆ ಗೋಷ್ಠಿಯು ಅವನನ್ನು ಅನುಸರಿಸಿ ಅನುಗಾಯನ ವಾದನಗಳನ್ನು ಮಾಡುತ್ತ ಹಿಂಬಾಲಿಸುತ್ತದೆ. ಒಂದು ಹಾಡನ್ನು ಪೂರ್ತಿ ಹಾಡಿ ಮುಗಿಸುವವರೆಗೆ ಗೋಷ್ಠಿಯು ಒಂದೇ ಎಡೆಯಲ್ಲಿ ನಿಂತು ಭಜನೆಗೈಯುತ್ತದೆ. ಅದರಲ್ಲಿ ಎಲ್ಲರೂ ಸರಳವಾದ ದೈಹಿಕ ಚಲನೆಗಳಿಂದ ನರ್ತನದಲ್ಲಿ ತೊಡಗುತ್ತಾರೆ. ಹಾಡು ಮುಗಿದ ಮೇಲೆ ನಾಮಾವಳಿಯನ್ನೋ ದಿವ್ಯನಾಮವನ್ನೋ ಹಾಡುತ್ತ ಗೋಷ್ಠಿಯು ಮುಂದುವರೆಯುತ್ತದೆ. ದಾರಿಯ ಇಕ್ಕೆಲಗಳಲ್ಲಿ ಭಕ್ತರು ತಮ್ಮ ತಮ್ಮ ಮನೆಬಾಗಿಲುಗಳಲ್ಲಿ ಕಾಯುತ್ತಿದ್ದು ದವಸಧಾನ್ಯಗಳನ್ನೂ ಕಾಣಿಕೆಯನ್ನೂ ಸಲ್ಲಿಸಿ, ನಮಿಸಿ ಕೃತಾರ್ಥರಾಗುತ್ತಾರೆ. ಭಾಗವತನು ಬಡತನದ, ನಾಳೆಗೆಂದು ಆತಂಕಪಟ್ಟು ಸಂಗ್ರಹಿಸದ, ಸರಳವಾದ, ನಿರಾಡಂಬರವಾದ, ಪರಿಶುದ್ಧ ಜೀವನವನ್ನು ಸಂಪೂರ್ಣ ಸ್ವಯಂಸಮರ್ಪಣದ ಪ್ರಪತ್ತಿಯ ಮಾರ್ಗದಲ್ಲಿ ನಡೆಸಬೇಕು. ಭಕ್ತರು ತುಂಬಿಸಿದ ಜೋಳಿಗೆಯಿಂದ ಅವನು ತನ್ನ ಕುಟುಂಬದ ಹಾಗೂ ಶಿಷ್ಯರ ಉದರಂಭರಣವನ್ನು ಮಾಡಬೇಕು. ದಿನದ ಉಳಿದ ಭಾಗವನ್ನು ಶಿಷ್ಯೋಪದೇಶದಲ್ಲಿ, ಭಗವನ್ನಾಮಸಂಕೀರ್ತನದಲ್ಲಿ ಕಳೆಯಬೇಕು. ಸಂತ ಶ್ರೀ ತ್ಯಾಗರಾಜರು ಇಂತಹ ಶ್ರೇಷ್ಠ ಉಂಛವೃತ್ತಿಯ ಭಾಗವತರಾಗಿದ್ದರು. ದಕ್ಷಿಣದೇಶದಲ್ಲಿ ತಾಳ್ಳಪಾಕಂ ಚಿನ್ನಯ್ಯನು ಭಜನ ಪದ್ಧತಿಯ ಮೂಲಪುರುಷನೆಂದು ಹೇಳಲಾಗಿದೆ. ಅವನೂ ಪುರಂದರದಾಸ, ಭದ್ರಾಚಲ ರಾಮದಾಸ, ಬೋಧೇಂದ್ರ ಸದ್ಗುರುಸ್ವಾಮಿ, ಶ್ರೀಧರ ಅಯ್ಯಾವಾಳ್, ಸದಾಶಿವ ಬ್ರಹ್ಮೇಂದ್ರ, ಕೃಷ್ಣಚೈತನ್ಯ, ತುಕಾರಾಂ ಮುಂತಾದ ಹಲವರು ಭಜನಗೀತದ ಪದ್ಧತಿಯನ್ನು ತಮ್ಮ ಶ್ರೇಷ್ಠ ರಚನೆಗಳಿಂದ ಶ್ರೀಮಂತವನ್ನಾಗಿಸಿದ್ದಾರೆ. ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ವಂದನ, ದಾಸ್ಯ, ಸಖ್ಯ, ಅರ್ಚನ ಮತ್ತು ಆತ್ಮನಿವೇದನ ಎಂಬ ನವವಿಧಭಕ್ತಿಯಲ್ಲಿ ಭಜನಪದ್ಧತಿಯು ಮೊದಲನೆಯ ಆರು ವಿಧ ಭಕ್ತಿಗಳಿಗೆ ಎಡೆಮಾಡಿಕೊಡುತ್ತದೆ.

ಚರಭಜನ ಗೋಷ್ಠಿಗಳಲ್ಲಿ ತಿರುವಯ್ಯಾರಿನ ಸಪ್ತಸ್ಥಾನವೆಂಬ ಉತ್ಸವವು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದುದು. ಇದು ತಂಜಾವೂರಿನ ಸಮೀಪದಲ್ಲಿದೆ. ಇದು ಏಪ್ರಿಲ್ ತಿಂಗಳಲ್ಲಿ ನಡೆಯುತ್ತದೆ. ತಿರುವಯ್ಯಾರ್, ತಿರುಪ್ಪಯಣಂ, ತಿರುಚ್ಚ್ಯೋಟ್ರುತ್ತುರೈ, ತಿರುವೇದಿಕುಡಿ, ತಿರುಕ್ಕಂಡಿಯೂರ್, ತಿರುಪ್ಪೂನ್ತುರುತಿ ಮತ್ತು ತಿಲ್ಲೈ (ಚಿದಂಬರಂ) ಎಂಬ ಏಳು ಸ್ಥಾನಗಳಲ್ಲಿರುವ ದೇವಸ್ಥಾನಗಳ ದೇವರುಗಳ ಉತ್ಸವವು ಇದರಲ್ಲಿ ಸೇರುವುದರಿಂದ ಸಪ್ತಸ್ಥಾನವೆಂಬ ಹೆಸರು ಬಂದಿದೆ. ಈ ಉತ್ಸವಮೂರ್ತಿಗಳು ಸುಂದರವಾಗಿ ಅಲಂಕರಿಸಿದ ಗಾಜಿನ ಪಲ್ಲಕ್ಕಿಗಳಲ್ಲಿ ಮೆರವಣಿಗೆ ಬರುತ್ತವೆ. ರಾತ್ರಿ ಪ್ರಾರಂಭವಾಗುವ ಈ ಉತ್ಸವವು

ಬೆಳಗಿನ ಜಾವ ತಿರುವಯ್ಯಾರಿನಲ್ಲಿ ಮುಗಿಯುತ್ತದೆ. ಏಳೂ ಗ್ರಾಮಗಳಲ್ಲಿ ಚಪ್ಪರಗಳನ್ನು ಹಾಕಿ ಅಲಂಕರಿಸಿ ಉತ್ಸವವನ್ನು ಎದುರುಗೊಂಡು, ಮೆರವಣಿಗೆಯಲ್ಲಿ ಬರುವ ಭಕ್ತರಿಗೆಲ್ಲ ಊಟೋಪಚಾರಗಳ ಸತ್ಕಾರವನ್ನು ನೀಡುತ್ತಾರೆ. ಸಾವಿರಾರು ಜನ ಈ ಉತ್ಸವದಲ್ಲಿ ಪಾಲುಗೊಳ್ಳುತ್ತಾರೆ. ಇದರಲ್ಲಿ ನೂರು ಭಜನಗೋಷ್ಠಿಗಳು ಭಾಗವಹಿಸುತ್ತಿದ್ದು ಉತ್ಸವದ ಇಂತಿಂತಹ ಹಂತಗಳಲ್ಲಿ ಇಂತಹ ರಾಗದ ಇಂತಹ ಕೃತಿಯ ಗಾಯನವು ನಡೆಯಬೇಕು ಎಂಬ ಕಟ್ಟಳೆಯು ಏರ್ಪಟ್ಟಿತ್ತು. ಸಂತ ತ್ಯಾಗರಾಜರು ತಮ್ಮ ಭಜನಗೋಷ್ಠಿಯೊಡನೆ ಇದರಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಸ್ಥಾವರ ಭಜನಗೋಷ್ಠಿಯು ಒಂದು ನಿಯತವಾದ ಕ್ರಮದಲ್ಲಿ ನಡೆಯುತ್ತದೆ. ಅದು ಸಾಮಾನ್ಯವಾಗಿ ರಾತ್ರಿ ಒಂಭತ್ತು ಘಂಟೆಗೆ ಪ್ರಾರಂಭವಾಗಿ ಮಾರನೆಯ ಬೆಳಗ್ಗೆ ಬ್ರಾಹ್ಮೀಮುಹೂರ್ತದವರೆಗೆ ಸುಮಾರು ಎಂಟು ಘಂಟೆಯಷ್ಟು ಕಾಲ ಜರುಗುತ್ತದೆ. ಇದನ್ನು ಸಾಮಾನ್ಯವಾಗಿ ಏಕಾದಶಿಯಂದು ಮತ್ತು ಇತರ ಪವಿತ್ರ ದಿನಗಳಂದು ಆಚರಿಸುತ್ತಾರೆ. ಆಚರಣೆಯ ಕ್ರಮವು ಹೀಗಿದೆ: ೧) ನಾಮಾವಳಿ ೨) ಗಣೇಶ, ಸರಸ್ವತಿ, ಪ್ರಹ್ಲಾದ, ನಾರದ ಮತ್ತಿತರ ಭಕ್ತರ, ಭಾಗವತರ ಸ್ತುತಿಶ್ಲೋಕಗಳು, ನಾಮಮಾಹಾತ್ಮ್ಯವನ್ನು ಕುರಿತ ಶ್ಲೋಕಗಳು ೩) ತೋಡಯ ಮಂಗಳ ೪) ಗುರುಕೀರ್ತನ ೫) ಜಯದೇವನ ಅಷ್ಟಪದಿ ೬) ನಾರಾಯಣತೀರ್ಥರ ಕೃಷ್ಣಲೀಲಾತರಂಗಿಣಿಯಿಂದ ಒಂದು ತರಂಗ ೭) ಗಣೇಶ, ಸುಬ್ರಹ್ಮಣ್ಯ, ಸರಸ್ವತಿ, ಶಿವ, ಪಾರ್ವತಿ - ಈ ದೇವರುಗಳನ್ನು ಸ್ತುತಿಸುವ ಕೃತಿಗಳು ೮) ಸುಪ್ರಭಾತದಿಂದ ಶಯನೋತ್ಸವದವರೆಗಿನ ವಿವಿಧ ಉಪಚಾರಗಳನ್ನೊಂಡ ಕೃತಿಗಳು ೯) ರಾಮ, ಸೀತೆ, ಆಂಜನೇಯರನ್ನು ಸ್ತುತಿಸುವ ಕೀರ್ತನೆಗಳು ೧೦) ಶ್ರೀ ಕೃಷ್ಣಸ್ತುತಿಯ ಕೃತಿಗಳು. ಇದು ಭಜನೆಯ ಪೂರ್ವಾರ್ಧ. ಇದು ಮುಗಿದ ಮೇಲೆ ನೆರೆದಿರುವ ಅತಿಥಿ ಅಭ್ಯಾಗತರಿಗೆ ತಮ್ಮ ಗಾಯನಸೇವೆಯನ್ನು ಸಲ್ಲಿಸುವ ಅವಕಾಶವಿರುತ್ತದೆ. ಭಜನೆಯ ಉತ್ತರಾರ್ಧವು ದಿವ್ಯನಾಮ ಸಂಕೀರ್ತನೆಯ ಹಾಡುಗಳಿಂದ ಪ್ರಾರಂಭವಾಗುತ್ತದೆ. ಪೂರ್ವಾರ್ಧದಲ್ಲಿ ದೀಪದ ಕಂಬವನ್ನು ದೇವರ ವಿಗ್ರಹ ಅಥವಾ ಪಟದ ಹತ್ತಿರ ಇಟ್ಟಿದ್ದುದನ್ನು ಈಗ ಹಜಾರದ ಅಥವಾ ತೊಟ್ಟಿಯ ಮಧ್ಯದಲ್ಲಿ ಇಡುತ್ತಾರೆ. ಆಗ ಗೋಷ್ಠಿಯಲ್ಲಿ ಮೊದಲೇ ಗೊತ್ತಾದ ಕೆಲವರು ದೀಪವನ್ನು ಪ್ರದಕ್ಷಿಣೆ ಮಾಡುತ್ತ ದಿವ್ಯನಾಮ ಸಂಕೀರ್ತನದ ಹಾಡುಗಳನ್ನು ಹಾಡುತ್ತಾರೆ. ಇವು ದೇವರ ಉಪಚಾರ, ನಾಮಮಾಹಾತ್ಮ್ಯ ಮುಂತಾದವುಗಳನ್ನು ಕುರಿತಾಗಿರುತ್ತವೆ. ಈ ವೇಳೆಗೆ ಬೆಳಗಿನ ಜಾವ ಸುಮಾರು ಐದು ಘಂಟೆಯಾಗಿರುತ್ತದೆ. ಈಗ ಗೋಪಿಕಾಗೀತೆಯನ್ನು ಹಾಡಿ ದೀಪವನ್ನು ಪುನಃ ದೇವರ ಸಮೀಪದಲ್ಲಿಡುತ್ತಾರೆ. ಎಲ್ಲರೂ ಮಂಗಳವನ್ನು ಹಾಡಿದ ಮೇಲೆ ಪ್ರಸಾದ ವಿನಿಯೋಗವಾಗುತ್ತದೆ. ಭಜನಗೋಷ್ಠಿಯು ಸ್ವಸ್ಥಾನಕ್ಕೆ ತೆರಳುತ್ತದೆ.

ತಮಿಳುನಾಡಿನಲ್ಲಿ ತೇವಾರಂ, ತಿರುವಾಚಕಂ, ತಿರುವಾಯ್‌ಮೊಳಿ, ದಿವ್ಯಪ್ರಬಂಧ (ನಾಲಡಿಯರ್) ಮುಂತಾದ ಪವಿತ್ರ ಕೃತಿಗಳ ಭಜನಗೋಷ್ಠಿಗಳನ್ನು ನಡೆಸುತ್ತಾರೆ. ಗೋಷ್ಠಿಯ ನಾಯಕರಿಗೆ ಓದುವರ್ ಎಂದು ಹೆಸರು. ಓದುವರ್ ಎಂದರೆ ಓದುವವರು, ವಾಚಕರು.

ಇವರು ದೇವಸ್ಥಾನಗಳಲ್ಲಿ ಮೇಲೆ ಹೇಳಿದ ಪವಿತ್ರ ಕೃತಿಗಳನ್ನು ಸಾಂಪ್ರದಾಯಿಕ ಪರ್ಣಗಳಲ್ಲಿ ಅನೇಕ ತಲೆಮಾರುಗಳ ಪರಂಪರೆಯಿಂದ ಹಾಡಿಕೊಂಡು ಬಂದಿರುತ್ತಾರೆ. ಇಂತಹ ಭಜನಗೋಷ್ಠಿಗಳಲ್ಲಿ ಜಾಲರಾಗಳ ಬದಲು ಕಂಚಿನ ತಾಳಗಳನ್ನು ಬಳಸುತ್ತಾರೆ. ಈ ರೀತಿಯ ಭಜನೆಗಳು ಸ್ಥಾವರಗೋಷ್ಠಿಗಳಲ್ಲೂ ಚರಗೋಷ್ಠಿಯಲ್ಲೂ ನಡೆಯುತ್ತವೆ.

ಮೊದಲು ಹೇಳಿದ ಭಜನಗೋಷ್ಠಿಗಳು ವಯೋಲಿಂಗಜಾತಿಭೇದಗಳನ್ನು ಪರಿಗಣಿಸುವುದಿಲ್ಲ. ಸಂಸ್ಕೃತ, ತೆಲುಗು, ತಮಿಳು, ಮರಾಠೀ ಮತ್ತು ಕನ್ನಡ ಭಾಷೆಗಳ ಹಾಡುಗಳನ್ನು ಒಳಗೊಂಡಿರುವುದರಿಂದ ಅವು ಭಕ್ತಿಯ ಮೂಲಕ ಭಾವೈಕ್ಯವನ್ನು ಸಾಧಿಸುತ್ತವೆ. ಈ ಶತಮಾನದ ಪ್ರಾರಂಭದ ವರ್ಷಗಳಲಿ ಇಂತಹ ಭಜನೆ, ಹಾಡುಗಳ ದೊಡ್ಡ ದೊಡ್ಡ ಸಂಗ್ರಹಗಳು ಪ್ರಕಟವಾದವು. ಇವುಗಳಲ್ಲಿ ಭಾಗವತ ಭಜನೋತ್ಸವ ಪದ್ಧತಿ (ಗ್ರಂಥಲಿಪಿ, ಕುಂಭಕೋಣಂ, ೧೯೨೦)ಯು ಭಜನಪದ್ಧತಿಯ ಕ್ರಮದಲ್ಲಿಯೇ ಹಾಡುಗಳನ್ನು ವ್ಯವಸ್ಥೆ ಮಾಡಿದೆ. ಭಾಗವತ ಭಜನಪದ್ಧತಿಯು (ಟಿ. ಪಿ. ಕೋದಂಡರಾಮಯ್ಯರ್, ಮದ್ರಾಸ್ ೧೯೧೩) ತೆಲುಗು, ತಮಿಳು, ಸಂಸ್ಕೃತ, ಕನ್ನಡ, ಮರಾಠೀ ಭಾಷೆಗಳ ಸಾವಿರಕ್ಕೂ ಹೆಚ್ಚಿನ ಹಾಡುಗಳನ್ನು ಒಳಗೊಂಡಿದೆ. ತಚ್ಚೂರು ಸಿಂಗ್ರಾಚಾರ್ಯ ಸಹೋದರರ ಭಾಗವತ ಸಾರಾಮೃತಂ (ಮದ್ರಾಸ್, ೧೯೧೬) ಎಂಬುದು ತೆಲುಗು ಭಕ್ತಿಕೃತಿಗಳ ಸಂಗ್ರಹ. ಕನ್ನಡದಲ್ಲಿ ಸಂಗೀತ ಪಾರಿಜಾತ (ಶ್ರೀಕಂಠ ಶಾಸ್ತ್ರೀ, ನಂಜನಗೂಡು), ಹರಿಭಜನಕುಸುಮವಲ್ಲರೀ (ಕೆ. ರಾಮಯ್ಯಂಗಾರ್), ಸರ್ವದಾನಂದಬೋಧೆ (ನಂಜುಂಡಯ್ಯ, ೧೯೨೬), ಸದಾನಂದಬೋಧೆ (ಆರು ಭಾಷೆಗಳಲ್ಲಿ ಭಜನೆಯ ಹಾಡುಗಳು, ರಂಗದಾಸ, ೧೯೨೬), ಸಂಗೀತ ಕುಸುಮಾವಳಿ (ಏಳು ಭಾಷೆಗಳಲ್ಲಿ ಭಜನೆಯ ಹಾಡುಗಳು, ಟಿ. ಕೆ. ತಿಮ್ಮಯ್ಯ ೧೯೨೬), ಪಂಚಭಾಷಾಕೀರ್ತನ ಮಂಜರೀ (ಬಿ. ಕೆ. ತಿಮ್ಮಯ್ಯ, ೧೯೦೫), ವೆಲ್ಲ ನಂಜುಂಡದಾಸರ ಕೃತಿಗಳು (ಸು. ೧೯೩೦), ಶಿವಕೀರ್ತನೆಗಳು (ಬಿ. ಭೀಮರಾಜು, ೧೯೨೨), ಗೀತಮಂದಾರ (೧೯೨೦) ಮುಂತಾದ ಭಜನೋಪಯೋಗೀ ಕೃತಿಸಂಗ್ರಹಗಳು ಪ್ರಕಟವಾಗಿವೆ.

ಶಾಸ್ತ್ರೀಯ ಸಂಗೀತ ಮತ್ತು ರಸಿಕ

✍ ಸುಕುಮಾರ ಆಲಂಪಾಡಿ

ಒಂದು ಕಲೆಯಿಂದ ಒಬ್ಬ ರಸಿಕ ಅಥವಾ ಕಲಾಸ್ವಾದಕ ಏನನ್ನು ಬಯಸುತ್ತಾನೆಂಬುದನ್ನು ಸಾಮಾನ್ಯೀಕರಿಸಿ ಹೇಳುವುದು ಸುಲಭ. ಆನಂದ ಅನುಭೂತಿ ರಸಾನುಭವ ಎಂಬ ಪದಗಳಲ್ಲಿ ಆತ ಕಲೆಯಿಂದ, ಸಂಗೀತದಿಂದ ಬಯಸುವ, ಪಡೆಯುವ ಅನುಭವಗಳನ್ನು ಒಟ್ಟಾಗಿ ಸಂಕಲಿಸಿ ಹೇಳಲು ಸಾಧ್ಯವಾಗುತ್ತದೆ. ಆದರೆ ಈ ಆನಂದ ಅನುಭೂತಿ ರಸಾನುಭವಗಳು ಹೇಗೆ ಹುಟ್ಟಿಕೊಳ್ಳುತ್ತವೆ, ಅವು ಯಾವ ಪರಿಣಾಮಗಳ ಫಲಶ್ರುತಿಗಳು ಎಂಬ ಪ್ರಶ್ನೆಗಳೂ ಇಲ್ಲಿ ಉತ್ತರ ಕೇಳುತ್ತವೆ. ಒಬ್ಬಾತ ಸಂಗೀತದಿಂದ ಆನಂದವನ್ನೋ ಬ್ರಹ್ಮಾನಂದವನ್ನೋ ಅಥವಾ ಇಂತಹ ಯಾವುದೋ ಒಂದು ಅನುಭವವನ್ನು ಪಡೆದುಕೊಳ್ಳಬೇಕಾದರೆ ಆತನ ಮಾನಸಿಕ ವ್ಯಾಕರಣಗಳು ಸಂಗೀತದ ವ್ಯಾಕರಣಗಳೊಂದಿಗೆ ನೇರವಾಗಿ ವ್ಯವಹರಿಸಬೇಕಾಗುತ್ತದೆ. ಕಲೆಯಲ್ಲಿ ನಾವು ತಾದಾತ್ಮ್ಯ ತಾಳಬೇಕಾದರೆ ಕಲೆಯ ವ್ಯಾಕರಣಗಳಲ್ಲಿ ಒಂದಂಶವನ್ನಾದರೂ ಹೆಕ್ಕಿ ನಮ್ಮ ಮನಸ್ಸಿನಲ್ಲಿ ಅದಕ್ಕೆ ಸಹಸ್ಪಂದಿಸಬೇಕಾಗುತ್ತದೆ. ಇಂತಹ ಸಹಸ್ಪಂದಿ ವ್ಯಾಕರಣಗಳು ರಸಿಕನಿಂದ ರಸಿಕನಿಗೆ ಭಿನ್ನವಾಗಿರುವುದು ಸಹಜವಾಗುತ್ತದೆ. ಆದುದರಿಂದಲೇ ಸಂಗೀತದಿಂದ ಒಬ್ಬ ರಸಿಕ ನಿರ್ದಿಷ್ಟವಾಗಿ ಏನನ್ನು ಅಪೇಕ್ಷಿಸುತ್ತಾನೆ ಎಂಬುದನ್ನು ಸಾಮಾನ್ಯೀಕರಿಸಲು ಸಾಧ್ಯವಾಗುವುದಿಲ್ಲ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತ ಬರುತ್ತದೆ ಅಥವಾ ರಸಿಕನ ವೈಯಕ್ತಿಕ ನೆಲೆವಾರವನ್ನು ಅವಲಂಬಿಸುತ್ತದೆ - ಹೀಗಾಗಿಯೇ ಸಂಕೀರ್ಣ ಉತ್ತರವಾಗುತ್ತದೆ.

ಒಂದು ಜೇನುನೊಣ ಹೂವಿನ ಮಕರಂದವನ್ನು ಮಾತ್ರ ಹೀರುತ್ತದೆ. ಮಕರಂದದಲ್ಲಿ ಮಾತ್ರ ತನ್ನ ಆಸಕ್ತಿಯನ್ನು ಕೇಂದ್ರೀಕರಿಸಿರುತ್ತದೆ. ಎಲೆಕೀಟ ಹಸಿರೆಲೆಯ ಹಸಿರನ್ನು ಮಾತ್ರ ತಿನ್ನುತ್ತದೆ. ಒಂದು ಆಡು ಮೇದಾಗ ಅದು ಎಲೆಯನ್ನು, ಹೂವನ್ನು, ಮಕರಂದವನ್ನು ಎಲ್ಲವನ್ನೂ ಪೂರ್ತಿಯಾಗಿ ತಿನ್ನುತ್ತದೆ. ಅಂತೆಯೆ ಒಬ್ಬಾತನಿಗೆ ಬಾಲಮುರಳಿಯ ವಿಭಿನ್ನ ಸ್ಥಾಯಿಗಳಲ್ಲಿ ಕುಣಿದು ಕುಪ್ಪಳಿಸುವ ಸ್ವರಗಳ ಮಾದಕತೆ ಇಷ್ಟವಾದರೆ, ಮತ್ತೊಬ್ಬನಿಗೆ ಅವರ ರಾಮದಾಸರ ಕೀರ್ತನೆಗಳಲ್ಲಿನ ಭಕ್ತಿಸಾಂದ್ರತೆ ಇಷ್ಟವಾಗಬಹುದು. ಕೆಲವರು ಪಾಲ್ಘಾಟ್ ನಾರಾಯಣ ಸ್ವಾಮಿಯ ಗಜನಡೆಯ ಶ್ರೀಮತ್ ಗಾಂಭೀರ್ಯವನ್ನು ಮೆಚ್ಚಿದರೆ, ಕೆಲವರು ಎಂ. ಎಸ್.ರ ಭಕ್ತಿಸಾಂದ್ರತೆಯ ಸಾಂತ್ವನವನ್ನು ಮನಸಿನಾಳದಲ್ಲಿ ಮೂರ್ತೀಭವಿಸಲು ಶಕ್ತರಾಗುತ್ತಾರೆ. ಮಧುರೈ ಮಣಿಯವರ ಸರ್ವಲಘು ಪ್ರಯೋಗಗಳು, ಚೆಂಬೈಯ ರಾಜಠೀವಿ,

ತ್ರಿಚೂರು ಅವರ ವೇಗಧಾಟಿ - ಹೀಗೆ ಸಂಗೀತದ ಹತ್ತು ಹಲವು ವಿಷಯ ವ್ಯಾಕರಣಗಳು ರಸಿಕರನ್ನು ಭಿನ್ನ ಭಿನ್ನ ಸ್ತರಗಳಲ್ಲಿಯೇ ತಲಪುತ್ತವೆ. ಆದುದರಿಂದಲೇ ಶಾಸ್ತ್ರೀಯ ಸಂಗೀತದಿಂದ ಒಬ್ಬ ರಸಿಕ ಏನು ಬಯಸುತ್ತಾನೆ ಅಥವಾ ಏನು ನಿರೀಕ್ಷಿಸುತ್ತಾನೆ ಎಂಬುದು ಒಂದು ವಿಸ್ತಾರದ ವಿಷಯವಾಗುತ್ತದೆ. ಆತ ಸುಲಭದಲ್ಲಿ ಏನು ಜೀರ್ಣಿಸಿಕೊಳ್ಳುತ್ತಾನೆ ಎಂಬುದರ ಮೇಲೆಯೆ ಇದು ಅವಲಂಬಿತವಾಗಿದೆ.

ಒಂದು ಕಲೆ ಬೆಳೆಯುವುದು ಕಲಾವಿದ, ಕಲಾರಸಿಕ, ಕಲಾಪೋಷಕ - ಈ ಮುಪ್ಪುರಿಯ ಸಮಷ್ಟಿಯ ಪ್ರಯತ್ನದಿಂದ. ಸಂಗೀತವೂ ಇದಕ್ಕೆ ಹೊರತಲ್ಲ, ಸಂಗೀತ ಆತ್ಮತೃಪ್ತಿಗಾಗಿ ಎನ್ನುವವರು ಇರಬಹುದು. ಆದರೆ, ಆತ್ಮತೃಪ್ತಿಗಾಗಿ ಮಾತ್ರ ಇದ್ದರೆ ಸಂಗೀತ ಕಲೆಯಾಗಿ ಆ ವ್ಯಕ್ತಿಗೆ ಮಾತ್ರ ಸೀಮಿತವಾಗಿ ಬೆಳೆದು ವ್ಯಕ್ತಿಯ ಸಾವಿನೊಂದಿಗೆ ಎಲ್ಲಿಯೋ ಅಜ್ಞಾತವಾಗಿ ನಶಿಸುತ್ತದೆ. ಇಂತಹ ಅಪಾಯವಿರುವುದರಿಂದಲೇ ಕಲೆ ಸಮಷ್ಟಿಗಾಗಿ ಇರಬೇಕಾದ ಅನಿವಾರ್ಯತೆಯನ್ನು ನಮಗೆ ಕಡೆಗಾಣಿಸಲು ಸಾಧ್ಯವಿಲ್ಲ. ಕಲೆ ಸಮಷ್ಟಿಗಾಗಿ ಎಂದು ನಾವು ಒಪ್ಪಿಕೊಂಡಾಗ ಕಲೆಯ ಬೆಳವಣಿಗೆಯಲ್ಲಿ ರಸಿಕನ ಪಾತ್ರವೂ ಇದೆ. ಇಲ್ಲಿ ಕಲಾರಸಿಕ ಎಂಬ ಪದದ ವ್ಯಾಪ್ತಿಯನ್ನು ಪರಿಶೀಲಿಸುವುದು ಸಮುಚಿತವಾಗುತ್ತದೆ. ಒಬ್ಬಾತನಿಗೆ ಸಂಗೀತದ ಬಗೆಗೆ ಮಾಹಿತಿ, ಆಸಕ್ತಿ ಇಲ್ಲವಾದರೆ ಅಥವಾ ಸಂಗೀತದಿಂದ ಆತ ಏನನ್ನೂ ಪಡೆದುಕೊಳ್ಳಲು ಶಕ್ತನಾಗುವುದಿಲ್ಲವಾದರೆ ಆ ಸಂಗೀತ ಆತನಿಗೆ ಏನೂ ಅಲ್ಲ. ಅಂತೆಯೇ ಕಲಾವಿದನೂ ಆತನಿಗೆ ಏನೇನೂ ಅಲ್ಲ, ತನ್ನಂತಹ ಇನ್ನೊಬ್ಬ ವ್ಯಕ್ತಿ. ಅಂದರೆ ಸಂಗೀತದ ವ್ಯಾಪ್ತಿ ಮತ್ತು ಪ್ರಭಾವ ಕಲೆಯಲ್ಲಿನ ಆಸಕ್ತಿಯನ್ನು ಕೇಂದ್ರೀಕರಿಸಿ ಮಾತ್ರ ವ್ಯಕ್ತವಾಗುತ್ತದೆ. ಈ ಮಾತು ಸಾರ್ವತ್ರಿಕ. ಎಲ್ಲ ವಿಷಯಗಳಿಗೂ ಅನ್ವಯಿಸುವಂತಹದು. ಇಂತಹ ವ್ಯಾಪ್ತಿ ಬೆಳೆಯುವುದು ಸಂಗೀತದಲ್ಲಿ ವ್ಯವಹರಿಸುವ ವ್ಯಕ್ತಿಗಳೊಡನೆ ಅಂತಹ ವ್ಯವಹಾರಗಳನ್ನು ಒಪ್ಪುವ ಆರಾಧಕರಿದ್ದರೆ ಮಾತ್ರ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಇವರನ್ನೇ ನಾವು ಸಂಗೀತ ರಸಿಕರು ಎನ್ನುತ್ತೇವೆ. ಇಲ್ಲಿ ಅವರು ಸಂಗೀತವನ್ನು ಯಾವ ಮಟ್ಟದಿಂದ ಸ್ವೀಕರಿಸುತ್ತಾರೆ ಎಂಬ ಅಂಶ ಗೌಣ. ಕಲೆಯ ವ್ಯಾಕರಣಗಳೊಂದಿಗೆ ಅವರು ಸಹಸ್ಪಂದಿಸಿ ಕಲಾವಿದನ ನೆಲೆಯನ್ನು ಅರ್ಥಮಾಡಿ ಕಲೆಯನ್ನು ಅನುಭವಿಸುತ್ತಾರೆ, ಆರಾಧಿಸುತ್ತಾರೆ ಎಂಬುದೇ ಮಹತ್ವದ ಅಂಶ.

ಒಮ್ಮೆ ಒಬ್ಬ ಉದಯೋನ್ಮುಖ ಕಲಾವಿದೆಯೊಡನೆ, ನೀವು ಹಾಡುವ ಕೃತಿಗಳ ಪರಿಚಯವನ್ನು ಹೇಳಿ, ಬಳಿಕ ಹಾಡಿ ಎಂದು ನಾನು ಸೂಚಿಸಿದೆ. ಆದರೆ ಆಕೆ ಸರ್ವಥಾ ಒಪ್ಪಲಿಲ್ಲ. ನಾನು ಹಾಡುವ ಕೃತಿಗಳ ಅರ್ಥವಾಗುವವರಿಗೆ ಮಾತ್ರ ಸಾಕು ಎಂಬ ನಿಲುವು ಆಕೆಯದು. ಇಂತಹ ಧೋರಣೆಯ ಹಿನ್ನೆಲೆಯನ್ನು ನಾವು ಅರ್ಥಮಾಡಿಕೊಳ್ಳಬಹುದು. ಕಲಾವಿದ ಕೊಟ್ಟದ್ದನ್ನು ನೀವು ಸ್ವೀಕರಿಸಬೇಕು, ಕೃತಾರ್ಥರಾಗಬೇಕು ಎಂಬ ಈ ಭಾವದ ಹಿಂದೆ ನನ್ನ ಕಲೆಯ ಹಿಂದೆ ನನ್ನ ಕಠಿಣ ಸಾಧನೆಯಿದೆ, ಅದು ಸುಲಭಗಮ್ಯವಲ್ಲ ಎಂಬುದನ್ನು

ನೀವು ತಿಳಿದುಕೊಳ್ಳಬೇಕು ಎಂಬ ಉಡಾಫೆಯೂ ಇದೆ. ಕೆಲವು ಸಂಗೀತ ಶಿಕ್ಷಕರಲ್ಲಿಯೂ ಈ ರೀತಿಯ ಒಣಪ್ರತಿಷ್ಠೆಯಿದೆ. ಸಂಗೀತ ಹಾಗೆಲ್ಲ ನಿನಗೆ ಸುಲಭದಲ್ಲಿ ಎಟಕುವ ವಿದ್ಯೆಯಲ್ಲ, ಇದು ಸರಸ್ವತಿ ಎಂದು ಹೇಳಿ ವಿದ್ಯಾಕಾಂಕ್ಷಿಗಳನ್ನು ಹೆದರಿಸಿ ತಮಗೊಂದು ಪ್ರಭಾವಳಿಯನ್ನು ಕೃತಕವಾಗಿ ಸೃಷ್ಟಿಸಲು ಪ್ರಯತ್ನಿಸುತ್ತಾರೆ. ಆದರೆ ಜನಪದ ಸಂಗೀತವೇ ಶಾಸ್ತ್ರದ ಚೌಕಟ್ಟಿನಲ್ಲಿ ಬೆಳೆಯುತ್ತಾ ಸಂಗೀತವಾಯಿತು ಎಂಬಂತಹ ಸತ್ಯದತ್ತ ಮುಖವನ್ನೇ ತಿರುವುವುದಿಲ್ಲ.

ಕಲೆ ಜನಪದದಿಂದ ಜನಪದಕ್ಕೆ ತನ್ನ ನೆಲೆಯನ್ನು ವಿಸ್ತರಿಸುತ್ತ ಬರಲು ಸಾಧ್ಯವಿಲ್ಲವಾದರೆ ಕಲೆಯ ನೆಲೆ ಕುಸಿಯುವುದು ಅನಿವಾರ್ಯವಾಗುತ್ತದೆ. ಕಲೆಯ ನೆಲೆಯನ್ನು ವಿಸ್ತರಿಸುವುದು ಕಲಾವಿದ ಮತ್ತು ರಸಿಕರ ಸಮಷ್ಟಿಯ ಪ್ರಯತ್ನದಿಂದ ಮಾತ್ರ ಸಾಧ್ಯವಾಗುತ್ತದೆ. ಕಲಾವಿದನಾದರೂ ನಾನು ಬೆಳೆಯುತ್ತೇನೆ, ನೀವು ಬೇಕಾದರೆ ಬೆಳೆಯಿರಿ ಎನ್ನುವ ಚಿಂತನೆಗೆ ಪರ್ಯಾಯವಾಗಿ, ನಾನೂ ಬೆಳೆಯುತ್ತೇನೆ ನಿಮ್ಮೊಂದಿಗೆ ಎನ್ನುವ ಸಂತುಲಿತ ದೃಷ್ಟಿಯನ್ನು ಹೊಂದಿರಬೇಕಾಗುತ್ತದೆ. ಸಂಗೀತದ ಬೆಳವಣಿಗೆ ಅಥವಾ ಸಂಗೀತ ಪ್ರವೇಶ ಎಂದರೆ ಒಂದು ವಿಹಾರ ನೌಕಾಯಾನ. ಆನಂದದ ರಸಾನುಭವದ ಕಡಲಿನಲ್ಲಿ ಒಂದು ವಿಹಾರ ಎಂದಾಗ ನಮಗೆ ಈ ಕುರಿತು ಸ್ಪಷ್ಟ ಕಲ್ಪನೆಯಾಗಬಹುದು. ದೋಣಿಯನ್ನು ಒದಗಿಸುವಾತ - ಕಲಾಪೋಷಕ - ಪರಿಸರ, ಸಮಾಜ ದೋಣಿಯನ್ನು ಒಯ್ಯುವಾತ ಕಲಾವಿದ. ಕಲಾವಿದನೊಡನೆ ನೌಕಾವಿಹಾರ ಮಾಡುತ್ತಿರುವವರು ರಸಿಕರು. ಕಲಾವಿದನೂ ಈ ವಿಹಾರ ಪ್ರಪಂಚದಲ್ಲಿಯೇ ಇರುತ್ತಾನೆ.

ಒಬ್ಬ ರಸಿಕ ಶಾಸ್ತ್ರೀಯ ಸಂಗೀತದಿಂದ ಏನನ್ನು ಬಯಸುತ್ತಾನೆ ಅಥವಾ ಏನನ್ನು ಬಯಸಬೇಕು ಎಂಬ ಪ್ರಶ್ನೆಗೆ ಈಗ ಎರಡು ಉತ್ತರಗಳನ್ನು ಕೊಡಬೇಕಾಗುತ್ತದೆ. ಒಂದು, ನಾವು ಈಗಾಗಲೇ ಹೇಳಿದಂತೆ ರಸಿಕ ಸಂಗೀತದಿಂದ ಏನು ಪಡೆಯುತ್ತಾನೆಯೋ, ಅದು. ಅಥವಾ ನಾವು ಆರಂಭದಲ್ಲಿ ಸಾಮಾನ್ಯೀಕರಿಸಿ ಹೇಳಿದಂತೆ - ಆನಂದ, ಅನುಭೂತಿ, ರಸಾನುಭವಗಳು. ಇದು ವೈಯಕ್ತಿಕ. ಇನ್ನೊಂದು, ಸಮಷ್ಟಿಯಲ್ಲಿ ಕಲೆ ಬೆಳೆಯುವ ಸಾಧ್ಯತೆಗಳ ಪ್ರೇಷಣೆ. ಇದಕ್ಕೆ ರಸಿಕ ಒಬ್ಬನೆ ಹೊಣೆಗಾರ ಅಲ್ಲವಾದರೂ ಸಮಷ್ಟಿಯ ಚಿಂತನೆಯಲ್ಲಿ ಆತನೂ ಒಬ್ಬ ಪಾತ್ರಧಾರಿಯಾಗಿರುವುದರಿಂದ ಸಮಾಜದಲ್ಲಿ ಕಲೆಯ ಒಟ್ಟು ಊರ್ಧ್ವಮುಖ ಚಿಂತನೆಯಲ್ಲಿ ಆತನ ಜವಾಬ್ದಾರಿಯನ್ನು ನಿರಾಕರಿಸಲು ಸಾಧ್ಯವಿಲ್ಲ.

ಸಂಗೀತ ಮತ್ತು ರಸಿಕರ ನಡುವಿನ ಸುಲಲಿತ ಸಂವಹನವೇ ಕಲೆಯ ಬೆಳವಣಿಗೆಯಲ್ಲಿ ರಸಿಕನ ವ್ಯಕ್ತವಾದ ಪಾತ್ರವಾಗುತ್ತದೆ. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಸಂಗೀತ ಬೆಳೆದುಬಂದ ರೀತಿಯನ್ನು ಅರ್ಥಮಾಡಿಕೊಳ್ಳಬೇಕು. ಸಂಗೀತವೂ ಎಲ್ಲ ಕಲೆಗಳಂತೆ ಒಂದು ಭಾವ ಪ್ರಕಟನೆಯ ಮಾಧ್ಯಮವಾಗಿಯೇ ಹುಟ್ಟಿಕೊಂಡಿತು. ಭಾವ ಪ್ರಕಟಗಳು ಸಾರ್ಥಕವಾಗುವ ಕ್ಷಣಗಳನ್ನು ಗುರುತಿಸಿದ ಒಂದು ಶಾಸ್ತ್ರದ ಶಿಸ್ತಿಗೆ ಕಲೆಯನ್ನು ಅಳವಡಿಸಿದಾಗ

ಇದು ಶಾಸ್ತ್ರೀಯ ಸಂಗೀತವಾಯಿತು. ಇಲ್ಲಿ ಭಾವದ ವ್ಯಂಜನವಾಗಿ ಮಾತ್ರ ಕಲೆ ಉಳಿಯುವುದಲ್ಲ, ಅದರ ಬೆಳವಣಿಗೆಯ ಸಾಧ್ಯತೆಗಳನ್ನು ಅನುಲಕ್ಷಿಸಿಕೊಂಡು ಶಾಸ್ತ್ರದ ಶಿಸ್ತಿನಲ್ಲಿ ಕಲೆ ಅರಳುತ್ತದೆ. ಈ ಶಾಸ್ತ್ರದ ಶಿಸ್ತು ಜನಸಾಮಾನ್ಯನಿಗೆ ಸುಲಭಗಮ್ಯವಲ್ಲವಾಗದೆ ಇರಲೂ ಸಾಧ್ಯ. ಕಲಾ ವಾತಾವರಣದ ಪರಿಪೂರ್ತಿಯಲ್ಲಿ ಮಾತ್ರ ಜನಸಾಮಾನ್ಯರೆಲ್ಲಾ ಸಂಗೀತ ರಸಿಕರಾಗಲು ಸಾಧ್ಯ ವಿನಹ ಟಿಸಿಲೊಡೆಯುತ್ತಿರುವ ಕಲಾಪದದಲ್ಲಿ ರಸಿಕರ ವ್ಯಾಪ್ತಿಯನ್ನು ಬೆಳೆಸುವ ಅಗತ್ಯವೂ ಇರುತ್ತದೆ.

ಶಾಸ್ತ್ರೀಯ ಸಂಗೀತದ ಸಮಷ್ಟಿಯ ನೌಕೆಯಲ್ಲಿ ಎಲ್ಲರನ್ನೂ ಹೊತ್ತುಕೊಂಡು ಹೋಗಬೇಕು ಎಂದಾಗ ಸಂಗೀತದ ಹರವನ್ನು ವಿಸ್ತರಿಸುವ ಹೊಣೆಗಾರಿಕೆ ಸಮಷ್ಟಿಯಾಗಿಯೆ ಬರುತ್ತದೆ. ರಸಿಕನೂ ಒಂದು ಛಾಪಿನ ರಸಿಕನಾಗುವುದಕ್ಕಿಂತಲೂ ಸಂಗೀತದ ಸನ್ಮನಸುಗಳನ್ನು ಅರಿಯುವ ಕುತೂಹಲಿಯಾಗಬೇಕಾಗುತ್ತದೆ. ಆತ ಜೇನುನೊಣವೋ ಎಲೆಕೀಟವೋ ಆಗಬಾರದು, ಎಲ್ಲವನ್ನೂ ಏಕಕಾಲದಲ್ಲಿ ಸವಿಯುವ ಆಡಾಗಬೇಕು. ಶಾಸ್ತ್ರೀಯ ಸಂಗೀತದ ಒಂದು ವಿಶಿಷ್ಟ ಗುಣ, ಅದಕ್ಕೆ ಒಂದೇ ಕಾಲಕ್ಕೆ ವಿಭಿನ್ನ ಆಯಾಮಗಳನ್ನು ಬಿತ್ತರಿಸಲು ಸಾಧ್ಯವಾಗುತ್ತದೆ. ಆದುದರಿಂದಲೇ ಒಂದು ಉತ್ತಮ ಕಛೇರಿ ಯಾವ ಕೋನದಿಂದಲೂ ಆಪ್ಯಾಯಮಾನವಾಗಿಯೇ ಇರುತ್ತದೆ. ವಿಭಿನ್ನ ಸ್ಥಾಯಿಗಳಲ್ಲಿ ಕುಣಿದು ಕುಪ್ಪಳಿಸುವ ಸ್ವರಗಳ ಲಹರಿ, ಅಮೋಘ ಶ್ರುತಿಲೀನತೆ, ಕಲ್ಪನಾಸ್ವರಗಳ ವೈಖರಿ, ರಾಗವಿಸ್ತಾರದ ಹರವು, ತಾಳಗಳ ನಿಬದ್ಧತೆ - ಎಲ್ಲವೂ ಒಂದೊಂದು ಸ್ತರಗಳಲ್ಲಿ ಮನಸ್ಸುಗಳನ್ನು ತಟ್ಟುತ್ತದೆ. ಇಲ್ಲ ಎಂದರೆ ರಸಿಕನ ಆಸಕ್ತಿ ತೇಲುನೋಟದ್ದು, ಆತ ನಿಜವಾಗಿ ಸಂಗೀತದಿಂದ ಏನನ್ನು ಪಡೆಯಲು ಶಕ್ತನಾಗುವುದಿಲ್ಲ, ಆತನ ಸಂಸ್ಕಾರಗಳಿಗೆ ಪುನಶ್ಚೇತನ ಕೊಡಬೇಕು ಎಂದೇ ಅರ್ಥ ಬರುತ್ತದೆ. ಎಲ್ಲವನ್ನೂ ಏಕಕಾಲದಲ್ಲಿ ಅನುಭವಿಸುವಾತ, ಆಸ್ವಾದಿಸುವಾತ ರಸಾನುಭವವನ್ನು ಸುಲಭದಲ್ಲಿ ಹೊಂದುತ್ತಾನೆ. ಆದುದರಿಂದಲೇ ಸಂಗೀತದ ಎಲ್ಲ ಆಯಾಮಗಳನ್ನು ಅರಿತು ಅನುಭವಿಸಲು ಪ್ರಯತ್ನಿಸುವಾತನೆ ನಿಜವಾದ ರಸಿಕನಾಗುತ್ತಾನೆ. ಪ್ರಾಯಶಃ ಕಲಾವಿದನಿಗಿಂತಲೂ ಹೆಚ್ಚಾಗಿ ಸಂಗೀತದಿಂದ ಆತ ಪಡೆದುಕೊಳ್ಳುತ್ತಾನೆ, ಭಾವ-ಶ್ರೀಮಂತನಾಗುತ್ತಾನೆ.

'ಸುಪ್ರಭಾತ', ಅಂಚೆ: ಆಲಂಪಾಡಿ, ಕಾಸರಗೋಡು - 671123

ಕರ್ನಾಟಕ ಸಂಗೀತ, ವಿದೇಶಗಳಲ್ಲಿ

✍ ಡಾ. ಮೈಸೂರು ಮಂಜುನಾಥ್

ವಿಶ್ವದ ಶ್ರೇಷ್ಠ ಸಂಗೀತ ಪ್ರಕಾರಗಳಲ್ಲಿ ಒಂದೆನಿಸಿ, ತನ್ನ ಅಸಾಮಾನ್ಯ ಲಕ್ಷಣಗಳಿಂದಾಗಿ ನಾದಲೋಕದ ಎಲ್ಲಾ ವಿದ್ವಾಂಸರಿಂದಲೂ ಮನ್ನಣೆ ಗಳಿಸಿರುವ ಕರ್ನಾಟಕ ಶಾಸ್ತ್ರೀಯ ಸಂಗೀತ ನಿಸ್ಸಂದೇಹವಾಗಿ ಭಾರತೀಯ ಸಂಸ್ಕೃತಿಯ ಒಂದು ಅನರ್ಘ್ಯ ರತ್ನವೇ ಸರಿ. ಪ್ರಾಯಶಃ ಕಲಾವಿದನೊಬ್ಬನಿಗೆ ತನ್ನ ಕ್ರಿಯಾಶೀಲತೆ, ಅವಿಚ್ಛಿನ್ನ ಮನೋಧರ್ಮದಲ್ಲಿ ಮೂಡಿಬರುವ ಭಾವಾಭಿವ್ಯಕ್ತತೆ, ವಿವಿಧ ಮನೋಧರ್ಮ ಪ್ರಕಾರಗಳ ಮೂಲಕ ಪಾಂಡಿತ್ಯ ಪ್ರದರ್ಶನಕ್ಕಿರುವ ವಿಪುಲ ಅವಕಾಶ ಹಾಗೂ ನಾದಾನುಸಂಧಾನದಿಂದ ಉತ್ತಮ ಶ್ರೋತೃಗಳೊಂದಿಗೆ ಸಾಧ್ಯವಾಗುವ ಸಂವಹನ - ಈ ಅಂಶಗಳಿಗೆ ಇಲ್ಲಿ ದೊರಕಿರುವಷ್ಟು ಅವಕಾಶ ಬೇರೊಂದು ಸಂಗೀತ ಪ್ರಕಾರದಲ್ಲಿ ದೊರಕಲಾಗದೇನೋ! ಶುದ್ಧ ಭಾರತೀಯ ಪರಂಪರೆಯ ಬೇರಿನ ಮೇಲೆ ಬೃಹದಾಕಾರವಾಗಿ ಬೆಳೆದು ನಿಂತಿರುವ ಕರ್ನಾಟಕ ಶಾಸ್ತ್ರೀಯ ಸಂಗೀತ ಹಲವಾರು ಶತಮಾನಗಳಿಂದಲೂ ಸಂಗೀತ ರಸಿಕರ ಹೃದಯ ಮತ್ತು ಮನಸ್ಸನ್ನು ತಣಿಸುತ್ತ ಬಂದಿರುವುದಷ್ಟೇ ಅಲ್ಲದೆ, ಅಸಂಖ್ಯಾತ ನಾದಯೋಗಿಗಳ ನಾದ, ಭಕ್ತಿ ಮತ್ತು ಅಧ್ಯಾತ್ಮ ಸಾಧನೆಗಳಿಗೆ ಸಾಕ್ಷಿಯಾಗಿರುವುದು ಎಲ್ಲರಿಗೂ ತಿಳಿದ ವಿಚಾರವೇ!

ಇಂತಹ ಭವ್ಯ ಪರಂಪರೆಯನ್ನು ಹೊಂದಿರುವ ನಮ್ಮ ಸಂಗೀತ ಹೊರದೇಶಗಳಿಗೆ ಪರಿಚಯವಾದದ್ದು ಹಲವು ದಶಕಗಳ ಹಿಂದಷ್ಟೆ! ಭಾರತೀಯ ಸಂಗೀತ ವಿದ್ವಾಂಸರು ಹೊರರಾಷ್ಟ್ರಗಳಿಗೆ ತೆರಳಿ ಅಲ್ಲಿನವರಿಗೆ ನಮ್ಮ ಸಂಗೀತದ ಪರಿಚಯವಾಗತೊಡಗಿದ್ದು ಬಹುಶಃ 1930 - 40 ರ ದಶಕಗಳಲ್ಲೆಂದು ಕಾಣುತ್ತದೆ. ಈ ತೆರನಾಗಿ ಪ್ರಾರಂಭದ ಪ್ರಯತ್ನಗಳೆಲ್ಲವೂ ಹಿಂದೂಸ್ಥಾನಿ ವಿದ್ವಾಂಸರುಗಳಿಂದಲೇ ನಡೆದುದು ಗಮನಾರ್ಹ. ಪಂಡಿತ್ ರವಿಶಂಕರ್ ಆದಿಯಾಗಿ ಹಲವಾರು ಖ್ಯಾತ ಹಿಂದೂಸ್ಥಾನಿ ವಿದ್ವಾಂಸರು ವಿದೇಶಗಳಿಗೆ ತೆರಳಿ ಸಂಗೀತ ಕಾರ್ಯಕ್ರಮಗಳನ್ನು ನೀಡಲಾರಂಭಿಸಿದುದೇ ಅಲ್ಲದೆ, ಕೆಲವರು ಅಲ್ಲಿಯೇ ನೆಲಸಿ, ಸಂಗೀತ ಶಾಲೆಗಳನ್ನು ತೆರೆದು, ಆಸಕ್ತ ವಿದೇಶೀ ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣವನ್ನು ನೀಡಲಾರಂಭಿಸಿದುದು ಭಾರತೀಯ ಸಂಗೀತದ ಪ್ರಚಾರದ ದೃಷ್ಟಿಯಿಂದ ಅತ್ಯಂತ ಮಹತ್ತರದ ಮಜಲು. ಹಾಗಾಗಿಯೇ ಪಾಶ್ಚಾತ್ಯರಿಗೆ ಭಾರತೀಯ ಸಂಗೀತದ ಮೊದಲ ದರ್ಶನವಾದದ್ದು ಹಿಂದೂಸ್ಥಾನಿ ಸ್ವರೂಪದಲ್ಲಿ!

ಅತ್ತ ಹಿಂದೂಸ್ಥಾನಿ ಕಲಾವಿದರ ಈ ಪ್ರಯತ್ನಗಳಿಂದ ಹಿಂದೂಸ್ಥಾನಿ ಸಂಗೀತವು ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದರೆ, ಇತ್ತ ದಕ್ಷಿಣದಲ್ಲಿ, ಇಂತಹ ಪ್ರಯತ್ನಗಳನ್ನು ಮಾಡಲು

ಶಕ್ತರಾಗಿದ್ದ ಕೆಲವು ಹಿರಿಯ ವಿದ್ವಾಂಸರು ಈ ದಿಶೆಯಲ್ಲಿ ಆಸಕ್ತಿಯನ್ನೇ ತೋರದಿದ್ದುದು ಕುತೂಹಲಕಾರಿ ಅಂಶ! ಕಟ್ಟುನಿಟ್ಟಿನ ಆಚಾರ ವಿಚಾರಗಳ ಆಚರಣೆಯ ಬಂಧನದಲ್ಲಿದ್ದ ಕೆಲವು ಹಿರಿಯ ವಿದ್ವಾಂಸರು, 'ಸಮುದ್ರ ದಾಟುವುದು ಶಾಸ್ತ್ರಸಮ್ಮತವಲ್ಲ' ಎಂದು ತಿಳಿದು ಸುಮ್ಮನಾದರೆ, ಇನ್ನಿತರರು ಭಾಷೆಯ ತೊಂದರೆಯಿಂದಾಗಿ ಹೊರರಾಷ್ಟ್ರಗಳಿಗೆ ತೆರಳಲು ಹಿಂಜರಿದಂತೆ ತೋರುತ್ತದೆ. ಕಾರಣವೇನೇ ಇರಲಿ, ಹಿಂದೂಸ್ಥಾನಿ ಸಂಗೀತಕ್ಕೆ ಈ ತೆರನಾಗಿ ಶೀಘ್ರವಾಗಿ ದೊರಕಿದ ವಿಶ್ವ ವ್ಯಾಪಕತೆ ಕರ್ನಾಟಕ ಸಂಗೀತಕ್ಕೆ ಆರಂಭದ ದಿನಗಳಲ್ಲಿ ದೊರೆಯದಿದ್ದುದು ಇಂದು ಇತಿಹಾಸ.

ಹಿಂದೂಸ್ಥಾನಿ ಸಂಗೀತವು ಬಹು ಸುಲಭವಾಗಿ ಪಾಶ್ಚಾತ್ಯರನ್ನು ತಲುಪಲು ಸಾಧ್ಯವಾದದ್ದು ವಾದ್ಯ ಸಂಗೀತದ ಮೂಲಕ ಎನ್ನುವುದು ಇಲ್ಲಿ ಗಮನಾರ್ಹ ಅಂಶ. ಇಂದಿಗೂ ಸಹಾ ಭಾರತೀಯ ವಾದ್ಯ ಸಂಗೀತ ಕಾರ್ಯಕ್ರಮಗಳೇ ವಿದೇಶಗಳಲ್ಲಿ ಹೆಚ್ಚು ಜನಪ್ರಿಯವಾದದ್ದು ಎಂಬುದು ಎಲ್ಲರಿಗೂ ತಿಳಿದ ವಿಚಾರವೇ! ಈ ದೃಷ್ಟಿಕೋನದಿಂದ ಅವಲೋಕಿಸಿದರೆ ಕೆಲವು ಸಂಗೀತ ತಜ್ಞರು, ಕೇಳುಗನಿಗೆ ಸಂಗೀತ ಪ್ರಕಾರವೊಂದು ಹೆಚ್ಚು ನಿಕಟವಾಗುವ ಪ್ರಕ್ರಿಯೆಯ ಆಧಾರದ ಮೇಲೆ, ಕರ್ನಾಟಕ ಸಂಗೀತದ ಲಕ್ಷಣಗಳನ್ನು ಅಧ್ಯಯನ ಮಾಡಿ ಕೆಲವು ಪ್ರಮುಖ ಅಂಶಗಳನ್ನು ಗುರುತಿಸಿದ್ದಾರೆ. ಇವರ ಪ್ರಕಾರ, ಅತ್ಯದ್ಭುತ ಗುಣವಿಶೇಷಗಳನ್ನು ಹೊಂದಿದ್ದರೂ, ಕರ್ನಾಟಕ ಸಂಗೀತವು ವಿಶ್ವಮನ್ನಣೆಯನ್ನು ಪಡೆಯುವಲ್ಲಿ ತುಸು ವಿಳಂಬವಾದುದಕ್ಕೆ ಕಾರಣ, ಪ್ರಾಯಶಃ ಆದಿಯಿಂದಲೂ ಗಾಯನಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾ ಬಂದಿರುವುದು, ವಾದ್ಯ ಸಂಗೀತದ ಮಹತ್ವವನ್ನು ಅರಿಯುವಲ್ಲಿ ವಿಳಂಬವಾದದ್ದು ಮತ್ತು ಸಾಹಿತ್ಯವೇ ಪ್ರಧಾನವೆಂಬ ಅಂಶವನ್ನು ಹೆಚ್ಚು ವೈಭವೀಕರಿಸಿದುದು, ಇತ್ಯಾದಿ.

ವಾದ್ಯ ಸಂಗೀತವು ಪುರಾತನವೂ ಹಾಗೂ ವಿಶ್ವವ್ಯಾಪಕತೆಯನ್ನು ಹೊಂದಿರುವುದು ಎಲ್ಲರಿಗೂ ತಿಳಿದದ್ದೇ! ಬಲ್ಲವರು ಹೇಳುವಂತೆ, ಮೂಲತಃ ಸಂಗೀತವು ತನ್ನ ನಿಜಸ್ವರೂಪದಲ್ಲಿ ಹೊರಹೊಮ್ಮುವುದೇ ವಾದ್ಯ ಸಂಗೀತದ ಮೂಲಕ. ಸಾಹಿತ್ಯವು ಕೇಳುಗನಿಗೆ ಸಂಗೀತವನ್ನು ಮತ್ತಷ್ಟು ನಿಕಟಗೊಳಿಸುತ್ತದೆ ನಿಜ. ವಾಗ್ಗೇಯಕಾರನು ತನ್ನ ಕಲ್ಪನಾವಿಲಾಸವನ್ನು ಸಾಹಿತ್ಯದ ಮೂಲಕ ಕೇಳುಗನಿಗೆ ಸುಲಭವಾಗಿ ತಲುಪಿಸಲು ಸಾಧ್ಯ. ಆದರೆ ಯಾವ ಕೇಳುಗನಿಗೆ? ಆ ಭಾಷೆಯನ್ನು ಬಲ್ಲವನಿಗೆ ಮಾತ್ರ! ರಚಿತವಾಗುವ ಸಾಹಿತ್ಯದ ಭಾಷೆಯನ್ನು ಅರಿಯದ ಶ್ರೋತೃವಿಗೆ ಸಂಗೀತ ಸಂವಹನವಾಗುವುದು ಕೇವಲ ಸ್ವರಗಳನ್ನಾಧರಿಸಿದ ನಾದ ಮಾಧುರ್ಯದಿಂದ ಮಾತ್ರವೇ! ವಿಶ್ವದಾದ್ಯಂತ ಎಣಿಸಲೂ ಬಾರದಷ್ಟು ಭಾಷೆಗಳಿದ್ದರೂ, ಸಂಗೀತ ಸ್ವರಗಳು ಮಾತ್ರ ಎಲ್ಲೆಡೆಯಲ್ಲೂ ಒಂದೇ ತೆರನಾದದ್ದು! ಹಾಗೂ ಎಲ್ಲರನ್ನೂ ಮುಟ್ಟಲು ಶಕ್ತವಾದದ್ದು! ಈ ಕಾರಣದಿಂದಾಗಿಯೇ ವಾದ್ಯ ಸಂಗೀತ ಇಂದು ಜಗದ್ವ್ಯಾಪಿಯಾಗಲು ಸಾಧ್ಯವಾದದ್ದು! ಆದರೆ ವಾದ್ಯ ಸಂಗೀತದ ಈ ಮಹತ್ವ ನಮಗೆ ಅರಿವಾಗುವಲ್ಲಿ ಸ್ವಲ್ಪ ವಿಳಂಬವಾಯಿತೇನೋ ಎಂಬುದು ಬಲ್ಲವರ ಅಭಿಪ್ರಾಯ.

ಅದು ಹೇಗಾದರೂ ಇರಲಿ, ಕರ್ನಾಟಕ ಸಂಗೀತದ ಅರಿವು ಪಾಶ್ಚಾತ್ಯರಿಗೆ ಗಮನಾರ್ಹ ಪ್ರಮಾಣದಲ್ಲಿ ಆಗತೊಡಗಿದ್ದು ಇತ್ತೀಚಿನ ಕೆಲವು ದಶಕಗಳಿಂದಷ್ಟೆ. ನಮ್ಮ ಗಾಯಕರು ವಿದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನೀಡುತ್ತಲೇ ಬಂದಿದ್ದರೂ, ಅಲ್ಲಿ ಇವರ ಗಾಯನ ಕಾರ್ಯಕ್ರಮಗಳನ್ನು ಆಯೋಜಿಸಿ, ಕೇಳುವವರು ಪ್ರಮುಖವಾಗಿ ಅಲ್ಲಿ ನೆಲೆಸಿರುವ ಅನಿವಾಸಿ ದಕ್ಷಿಣ ಭಾರತೀಯರೇ! ಆದರೆ ಪಾಶ್ಚಾತ್ಯರದ್ದೇ ಸಂಸ್ಥೆ ಹಾಗೂ ಸಂಗೀತೋತ್ಸವಗಳಲ್ಲಿ ಅವರು ಹೆಚ್ಚಾಗಿ ಅಪೇಕ್ಷಿಸುವುದು ನಮ್ಮ ವಾದ್ಯ ಸಂಗೀತವನ್ನು. ನಮ್ಮ ಸಂಗೀತವನ್ನು ನೈಜ ಅರ್ಥದಲ್ಲಿ ಪಾಶ್ಚಾತ್ಯರಿಗೆ ಮುಟ್ಟಿಸುವ ಮಹತ್ತರ ಕೆಲಸ ಇಂದು ಸಮರ್ಥವಾಗಿ ನಡೆಯುತ್ತಿರುವಲ್ಲಿ ವಾದ್ಯ ವಿದ್ವಾಂಸರ ಪಾತ್ರ ಅತ್ಯಂತ ಮಹತ್ತರವಾದದ್ದು.

ಕರ್ನಾಟಕ ಸಂಗೀತದ ಹಲವು ಶ್ರೇಷ್ಠ ವಿದ್ವಾಂಸರುಗಳ ಪರಿಶ್ರಮದಿಂದ ಇಂದು ಇದರ ಭವ್ಯತೆಯ ಅರಿವು ವಿದೇಶೀಯರಿಗೆ ಆಗಿರುವುದು ಸಂತಸದ ವಿಚಾರವೇ ಸರಿ. ಅಧಿಕ ಸಂಖ್ಯೆಯ ಸಂಗೀತಾಸಕ್ತ ವಿದೇಶೀಯರು ಇಂದು ನಮ್ಮ ಸಂಗೀತದತ್ತ ಒಲವನ್ನು ತೋರಿಸುತ್ತಿದ್ದಾರೆ. ಕರ್ನಾಟಕ ಸಂಗೀತದಲ್ಲಿ ನಾದವೇ ಪ್ರಧಾನವಾದದ್ದು ಹಾಗೂ ಹೆಚ್ಚಿನಾಂಶ ಮನೋಧರ್ಮವೇ ಇರುವಂತದ್ದು. ಜಗತ್ತಿನ ಬೇರೆಲ್ಲೂ ಕಂಡುಬಾರದ ಗಮಕ ವೈವಿಧ್ಯಗಳು ನಮ್ಮಲ್ಲಿವೆ. ಮನೋಧರ್ಮದಲ್ಲಂತೂ ನಮ್ಮ ಸಂಗೀತ ಉತ್ಕೃಷ್ಟತೆಯ ಪರಾಕಾಷ್ಟತೆಯನ್ನೇ ಮುಟ್ಟಬಲ್ಲದು! ಸಾಮಾನ್ಯವಾಗಿ, ಮುಂಚೆ ರಚಿತವಾಗಿರುವ ರಚನೆಗಳನ್ನೇ ಮುಂದಿಟ್ಟುಕೊಂಡು, ನುಡಿಸುವ ಪರಿಪಾಠವಿರುವ ವಿದೇಶೀಯರಿಗೆ, ನಮ್ಮ ವಿದ್ವಾಂಸರು ಅದು ಹೇಗೆ ರಾಗವೊಂದನ್ನು ಗಂಟೆಗಟ್ಟಲೆ ಮನೋಧರ್ಮದಿಂದ ವಿಸ್ತರಿಸಬಲ್ಲರು? ಎಂಬುದೇ ಬಹು ಆಶ್ಚರ್ಯಕರವಾಗಿ ತೋರುತ್ತದೆ! ಸಾಮಾನ್ಯವಾಗಿ ನಮ್ಮ ಕರ್ನಾಟಕ ಶಾಸ್ತ್ರೀಯ ಸಂಗೀತದ ರಸಗ್ರಹಣೆಗೆ ಸ್ವಲ್ಪವಾದರೂ ಸಂಗೀತ ಕೇಳ್ಮೆಯ ಅನುಭವ ಅಗತ್ಯವಾದರೂ, ಇವಾವುದೂ ಇಲ್ಲದೆಯೇ ನಮ್ಮ ಸಂಗೀತದ ಅಗಾಧತೆ ಹಾಗೂ ವೈಶಿಷ್ಟ್ಯಗಳನ್ನು ದರ್ಶನ ಮತ್ತು ಸೀಮಿತ ಆಸ್ವಾದನೆ ಖಂಡಿತ ಸಾಧ್ಯವೆಂಬುದಕ್ಕೆ ವಿದೇಶಗಳಲ್ಲಿ ನಮ್ಮ ಶಾಸ್ತ್ರೀಯ ಸಂಗೀತಕ್ಕೆ ಹೆಚ್ಚುತ್ತಿರುವ ಬೇಡಿಕೆಯೇ ಉತ್ತಮ ನಿದರ್ಶನ.

ಇಷ್ಟೇ ಅಲ್ಲದೆ, ಗಣನೀಯ ಸಂಖ್ಯೆಯ ವಿದೇಶೀಯರು ಇಂದು ನಮ್ಮ ಸಂಗೀತ ಶಿಕ್ಷಣ ಪಡೆಯುತ್ತಿದ್ದಾರೆ. ನಮ್ಮ ವಾದ್ಯಗಳನ್ನು ಅತ್ಯಂತ ಆಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದಾರೆ. ಮೂಲತಃ ಪಾಶ್ಚಾತ್ಯ ವಾದ್ಯವಾದ ವಯೊಲಿನ್ ಅನ್ನು, ಅಲ್ಲಿ ನಿಂತು ನುಡಿಸುವ ಕ್ರಮ ರೂಢಿಯಲ್ಲಿದ್ದರೂ, ಹಲವಾರು ವಿದೇಶೀಯರು ಭಾರತೀಯ ಸಂಪ್ರದಾಯದಂತೆ ಪದ್ಮಾಸನದಲ್ಲಿ ಕುಳಿತು ನುಡಿಸುವುದನ್ನು ಕಲಿಯುತ್ತಿದ್ದಾರೆ.

ಜಾಗತಿಕ ವಲಯದಲ್ಲಿ ವಿಭಿನ್ನ ಸಂಗೀತ ಪ್ರಕಾರಗಳೊಂದಿಗೆ ನಮ್ಮ ಸಂಗೀತವನ್ನು ಹೋಲಿಸಿ ನೋಡುವ ಸನ್ನಿವೇಶಗಳು ಆಗಿಂದಾಗ್ಗೆ ಕಂಡು ಬರುತ್ತಿವೆ. ಯೂರೋಪ್ ಮತ್ತು ಅಮೇರಿಕಾದ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಕರ್ನಾಟಕ ಸಂಗೀತ ವಿಭಾಗಗಳನ್ನು

ಪ್ರಾರಂಭಿಸಿರುವುದು ನಮ್ಮ ಸಂಗೀತ ಜಾಗತಿಕ ಮನ್ನಣೆ ಗಳಿಸುತ್ತಿರುವುದಕ್ಕೆ ಅತ್ಯುತ್ತಮ ನಿದರ್ಶನ. ಹಲವಾರು ಸಂಗೀತಾಭ್ಯಾಸಿಗಳು ಈ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ಸಂಗೀತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅಲ್ಲದೇ ನಮ್ಮ ಸಂಗೀತದ ಕೆಲವು ಅಂಶಗಳನ್ನು ಫ್ಯೂಷನ್ ಪ್ರಯತ್ನದ ಮೂಲಕ ಬಳಸಿಕೊಂಡು ನವೀನ ಶೈಲಿಗಳ ರಚನೆಗೆ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಎಲ್ಲಾ ಸಂದರ್ಭಗಳಲ್ಲೂ ಕರ್ನಾಟಕ ಸಂಗೀತವು ನಮ್ಮ ದೇಶದ ಸಾಂಸ್ಕೃತಿಕ ಪ್ರತಿನಿಧಿಯಾಗಿ ಗೌರವವನ್ನು ಗಳಿಸಿಕೊಳ್ಳುತ್ತಿರುವುದಷ್ಟೇ ಅಲ್ಲದೆ, ತನ್ನ ಅಸಾಧಾರಣ ಗುಣಲಕ್ಷಣಗಳಿಂದಾಗಿ ಸಂಗೀತ ಪ್ರಪಂಚದ ಒಂದು ಅಗ್ರಮಾನ್ಯ ಪ್ರಕಾರವಾಗಿ ಮನ್ನಣೆ ಪಡೆಯುತ್ತಿರುವುದು ಭಾರತೀಯರೆಲ್ಲರೂ ಹೆಮ್ಮೆ ಪಡಬೇಕಾದ ವಿಷಯ.

ಮುಂಬರುವ ದಿನಗಳಲ್ಲಿ ಕರ್ನಾಟಕ ಸಂಗೀತವು ವಿದೇಶಗಳಲ್ಲಿ ಮತ್ತಷ್ಟು ಖ್ಯಾತಿಯನ್ನು ಪಡೆಯುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿವೆ. ತಮಗೆ ನಿಜಕ್ಕೂ ಹೊಸದಾದ ಕರ್ನಾಟಕ ಸಂಗೀತದ ಬಗ್ಗೆ ಆಳವಾಗದ ಜ್ಞಾನವಾಗಲೀ, ಕೇಳ್ಮೆಯ ಅನುಭವವಾಗಲೀ ಇಲ್ಲದಿದ್ದರೂ, ಶ್ರದ್ಧೆಯಿಂದ ಕುಳಿತು, ಸಂಗೀತ ಕಛೇರಿಯನ್ನು ತನ್ಮಯತೆಯಿಂದ ಆಲಿಸಿ, ಅದರ ಸೂಕ್ಷ್ಮ ವಿಶೇಷಗಳನ್ನು ತಿಳಿದು ಆಸ್ವಾದಿಸಬೇಕೆನ್ನುವ ಪ್ರಾಮಾಣಿಕ ಪ್ರಯತ್ನವನ್ನು ಪಾಶ್ಚಾತ್ಯ ಶ್ರೋತೃಗಳು ಮಾಡುವ ಪರಿ ನಿಜಕ್ಕೂ ಅಭಿನಂದನಾರ್ಹ. ಇದು ಜಗತ್ತಿನ ಒಂದು ಶ್ರೇಷ್ಠ ಕಲಾ ಪ್ರಕಾರಕ್ಕೆ ಅವರು ಕೊಡುವ ಗೌರವ! ಹಾಗೆಯೇ ಸಂಗೀತವನ್ನು ಕಲಿಯುವುದು, ಪ್ರದರ್ಶನ ಮಾಡುವುದೂ ಸಹಾ ಪಾಶ್ಚಾತ್ಯ ಸಮಾಜದಲ್ಲಿ ಒಂದು ಗೌರವಯುತ ಪರಿಪಾಠವಾಗಿ ಬೆಳೆದು ಬಂದಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಆದರೆ, ಕೇವಲ ಹಣಸಂಪಾದನೆಯಷ್ಟನ್ನೇ ಗುರಿಯಾಗಿಟ್ಟುಕೊಂಡು, ಅದಕ್ಕೆ ಪೂರಕವಾಗಿಯೇ ಸಾಗುತ್ತಿರುವ ನಮ್ಮ ಶೈಕ್ಷಣಿಕ ವ್ಯವಸ್ಥೆಯು ಅಂತಹುದೇ ಅಭಿಪ್ರಾಯವುಳ್ಳ ಸಮಾಜವನ್ನು ಸೃಷ್ಟಿಸುತ್ತಿರುವ ಈ ಯುಗದಲ್ಲಿ, ಅನಾದಿಕಾಲದಿಂದಲೂ ಗೌರವ - ಮನ್ನಣೆಗಳನ್ನು ಗಳಿಸಿದ ಶಾಸ್ತ್ರೀಯ ಸಂಗೀತ-ಕಲೆ-ಸಾಹಿತ್ಯಗಳ ಮಹತ್ವವನ್ನು ನಾವು ಮತ್ತೊಮ್ಮೆ ಮನನ ಮಾಡಿಕೊಳ್ಳುವುದರ ಜೊತೆಗೆ, ಇವುಗಳಿಂದ ಜೀವನವು ಪರಿಪೂರ್ಣತೆಯನ್ನು ಪಡೆದು ಸಂಸ್ಕಾರಗೊಳ್ಳಲು ಸಾಧ್ಯವೆಂಬ ಸತ್ಯವನ್ನು ಇಂದಿನ ನಮ್ಮ ಯುವಜನಾಂಗಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ.

'ನಾದಲೋಕ', ಅನಿಕೇತನ ರಸ್ತೆ, 12ನೇ ಕ್ರಾಸ್, ಕುವೆಂಪು ನಗರ, ಮೈಸೂರು - 570023

ಭಾರತೀಯ ಸಂಗೀತದಲ್ಲಿ ದಾರ್ಶನಿಕತೆ

✍ ಪ್ರೊ. ವೀ. ಅರವಿಂದ ಹೆಬ್ಬಾರ್

ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣೀ ॥

ಪಶು - ಶಿಶುಗಳಾದಿಯಾಗಿ ಸರ್ವರನ್ನೂ ಮೋಹಿಸುವ ಶಕ್ತಿಯುಳ್ಳದ್ದಾಗಿದೆ, ಸಂಗೀತ. ಸಂಗೀತವಿಲ್ಲದ ಜಗತ್ತೇ ಇಲ್ಲ. ಮಾನವನ ಭಾವನೆಗಳ ಅಭಿವ್ಯಕ್ತಿ ಹಾಗೂ ರಸಾನುಭವದ ಮಾಧ್ಯಮವೇ ಸಂಗೀತ. ಸಂಗೀತವು ಪೂರ್ವದ್ದಾಗಿರಲಿ, ಪಶ್ಚಿಮದ್ದಾಗಿರಲಿ ಅದು ನಿಜವಾದ ಸುಖ-ಸಂತೋಷಗಳನ್ನು ಹೊರಗೆಡಹುವುದಕ್ಕೆ ಎಂದು ಬಳಸಿದ ಮಾಧ್ಯಮ. ಸಂಗೀತವು ಮಾನವನ ಸಂಸ್ಕೃತಿಯು ಉನ್ನತ ಮಟ್ಟಕ್ಕೆ ಬರಲು ತುಂಬ ಸಹಕಾರಿ. ತನ್ನ ಈ ಶಕ್ತಿಯಿಂದ ಅದು ಎಲ್ಲರನ್ನೂ ಒಟ್ಟು ಸೇರಿಸುತ್ತದೆ; ಒಂದುಗೂಡಿಸುತ್ತದೆ; ತನ್ಮೂಲಕ ಐಕಮತ್ಯವನ್ನು ಸಾಧಿಸುತ್ತದೆ. ವಾಸ್ತವಿಕ ಪ್ರಪಂಚವನ್ನು ಮಧುರ ಕಲ್ಪನಾಲೋಕವಾಗಿ ಪರಿವರ್ತಿಸುವ ಸಾಧನೆ ಸಂಗೀತದ್ದು.

ಪ್ರಾಚ್ಯ ಪಾಶ್ಚಾತ್ಯ ಸಂಗೀತ ಸಂಪ್ರದಾಯಗಳು ಗ್ರೀಕ್, ಈಜಿಪ್ಟ್, ಟ್ಯೂನಿಶಿಯಾ, ಪರ್ಷಿಯಾ ದೇಶಗಳ ಮೂಲದಿಂದ ಪ್ರಪಂಚದಾದ್ಯಂತ ಈಗ ಹರಡಿವೆ. ಭಾರತೀಯ ಸಂಗೀತ ಪದ್ಧತಿಯಾದರೋ ಸ್ಪಷ್ಟವಾಗಿ ಭಿನ್ನ ಸ್ವರೂಪಗಳಿಂದ ಕಾಣಿಸಿಕೊಂಡಿದೆ. 'ಭಾರತೀಯ ಪದ್ಧತಿಯಲ್ಲಿ ನಾದವು ಕಾಲುವೆಯಲ್ಲಿ ನೀರಿನಂತೆ ಅಲೆಯುಲೆಯಾಗಿ ಏಕಧಾರೆಯಾಗಿ ಹರಿಯುವುದು; ಪಾಶ್ಚಾತ್ಯ ಪದ್ಧತಿಯಲ್ಲಿ ಅದು ಮಳೆಯ ಹುಯ್ಲಿನಂತೆ ಅನೇಕ ಧಾರೆಗಳಾಗಿ ಸುರಿಯುವುದು. ನಮ್ಮ ಕಲೆಯಲ್ಲಿ ಸ್ವರಗಳು ಕ್ರಮಮಾರ್ಗದಲ್ಲಿ ನಡೆಯುವುವು; ಅವರ ಕಲೆಯಲ್ಲಿ ಅವು ಮೇಳಮಾರ್ಗದಲ್ಲಿ ನಡೆಯುವುವು. ಇವೆರಡೂ ಸಂಗೀತಗಳಲ್ಲೂ ಬಳಕೆಯಾಗುವ ನಾದ-ಕಾಲಗಳಲ್ಲಿ ಭೇದವಿಲ್ಲ'. ಅದೇ ಸಪ್ತ ಸ್ವರಗಳು ಇವೆರಡೂ ಪದ್ಧತಿಗಳಲ್ಲೂ ಬಳಕೆಯಾಗುತ್ತವೆ. ಆದರೆ ಸ್ವರಗಳನ್ನು ನಾವು ಪೋಣಿಸಿ ಅನುಭವಿಸುತ್ತೇವೆ; ಅವರು ಹೆಣೆದು ಸವಿಯುತ್ತಾರೆ. ನಮ್ಮದು ಸ್ವರಗಳ ಸರ; ಅವರದು ಸ್ವರಗಳ ಗೊಂಚಲು. ನಮ್ಮದು ನಾದ ತಪಸ್ಸು; ಅವರದು ನಾದ ಭಜನೆ. ನಮ್ಮ ಪದ್ಧತಿಗೆ 'ಮೆಲೊಡಿ' ಎಂದೂ, ಅವರದಕ್ಕೆ 'ಹಾರ್ಮೊನೀ' ಎಂದೂ ಅವರೇ ಇಟ್ಟ ಹೆಸರು. ಈ ಎರಡರಲ್ಲಿ ಯಾವುದು ಶ್ರೇಷ್ಠ ಯಾವುದು ಕನಿಷ್ಠ ಎಂಬ ಸ್ಪರ್ಧೆಗೆ ಇಳಿಯುವುದು ಬೇಡ. ಆಯಾಯ ಸಂಸ್ಕೃತಿಯ ಆಶ್ರಯದಲ್ಲಿ ಆಯಾಯ ಸಂಗೀತವು ದೇಶ-ಕಾಲಕ್ಕೆ ಸೀಮಿತವಾಗಿ ಶ್ರೇಷ್ಠವಾಗಿಯೇ ಇರುತ್ತದೆ. ರಾಳ್ಳಪಳ್ಳಿ, ಅನಂತ ಕೃಷ್ಣ ಶರ್ಮ ಅವರ ಅಭಿಪ್ರಾಯದಂತೆ ಇವೆರಡೂ ಪ್ರಕಾರಗಳದು

"ಭಿನ್ನವಾದ ದಾರಿಗಳಾದ್ದರಿಂದ ಕಲೆಗಳ ಸ್ವರೂಪವೂ ಭಿನ್ನವೆಂದೂ, ಇವೆರಡೂ ನೆರೆಹೊರೆಯವರಂತೆ ಮೈತ್ರಿಯಿಂದ ಇರಬಲ್ಲವೇ ಹೊರತು ಒಂದು ಸಂಸಾರವಾಗಿ ಒಂದೇ ಕಡೆ ಇರುವುದು ಸಾಧ್ಯವಿಲ್ಲ". ಪಾಶ್ಚಾತ್ಯರದು ಸಾಂಘಿಕ ಕಲಾರಚನೆ. ಮೂರು ಸಾವಿರ ಮಂದಿಯನ್ನೂ ಸೂತ್ರಧಾರನೊಬ್ಬ ಹಿಡಿದಿಟ್ಟು ಏಕಕಾಲದಲ್ಲಿ ಹಾಡಿಸಿ, ಬಾರಿಸಿ, ಬಾಜಿಸಿ ಹೊಸ ನಾದಸೃಷ್ಟಿಯನ್ನು ಉಂಟುಮಾಡುವ ವಿಚಿತ್ರಲೋಕ ಅದರದು.

ನಮ್ಮ ದಾರಿಯೇ ಬೇರೆ. ಮನುಷ್ಯನ ಹೃದಯದಲ್ಲಿ ಉದಯಿಸುವ ಅರ್ಥಭಾವಗಳಂತೆ, ಸಂಗೀತದ ಸ್ವರಗಳೂ ಒಂದರ ತರುವಾಯ ಮತ್ತೊಂದು ಧಾರೆಯಾಗಿಯೇ ಹರಿಯುವುದು. ಇದು ಸಾಂಘಿಕವಾಗಿ ನಡೆಯುವಂತಹುದಲ್ಲ, ಏಕಾಂತ ಪದ್ಧತಿ. ಇಲ್ಲಿ ಸ್ವರಗಳು ಒಂದಾದ ಮೇಲೆಯೇ ಮತ್ತೊಂದು ಬಂದೀತಲ್ಲದೆ, ಒಮ್ಮೆಲೇ ಎರಡು ಸ್ವರಗಳು ಒಟ್ಟಾಗಿ ಹೊರಹೊಮ್ಮವು. ಭಾಷೆಗೆ ನಿಲುಕದ ಆತ್ಮೀಯ ಭಾವಗಳನ್ನು ಅನಂತವಾಗಿ, ಅನಿರ್ವಚನೀಯವಾಗಿ ನಮ್ಮ ಸಂಗೀತವು ಹೊರಗೆಡಹುತ್ತದೆ.

ನಮ್ಮ ಜೀವಿತದಲ್ಲಿನ ಪ್ರತಿ ಕಾರ್ಯದೊಡನೆಯೂ ಸಂಗೀತವನ್ನು ನಮ್ಮಷ್ಟು ದೃಢವಾಗಿ ಮೇಳೈಸಿರುವಷ್ಟು ಯಾವ ದೇಶದಲ್ಲಿಯೂ, ಯಾವ ಜಾತಿಯಲ್ಲಿಯೂ ಇಲ್ಲ. ಆಸೇತುಹಿಮಾಚಲವೂ ಹಿಂದೂಗಳೆಲ್ಲರೂ ಸಂಗೀತದಿಂದ ಶುಭಕರ್ಮಗಳನ್ನು ನಡೆಯಿಸುವರು. ಸಂಗೀತದಿಂದಲೇ ಭಗವದ್ಭಜನೆ ಮಾಡುವರು; ಓದುವುದು, ನೀತಿ ಉಪದೇಶಗಳನ್ನು ಉಪದೇಶಿಸುವುದೂ ಸಂಗೀತದಿಂದಲೇ. ವೇದಗಾಯನ (ಸಾಮಗಾನ)ವು ನಮ್ಮ ಸಂಗೀತಕ್ಕೆ ಮೂಲ. 'ವೇದಾನಾಂ ಸಾಮವೇದೋಸ್ಮಿ' - ವೇದಗಳಲ್ಲಿ ನಾನು ಸಾಮವೇದವೇ ಆಗಿದ್ದೇನೆ ಎಂದವನು ಶ್ರೀಕೃಷ್ಣ. ಆತನು ಕುರುಕ್ಷೇತ್ರ ಮಹಾಯುದ್ಧರಂಗದಲ್ಲಿ ಅರ್ಜುನನಿಗೆ ಉಪದೇಶ ಮಾಡಿದ ಯೋಗವಿದ್ಯೆಗೆ 'ಆಜ್ಞೆ', 'ಉಪದಿಷ್ಟೆ' ಎನ್ನದೆ 'ಗೀತೆ' ಎಂದು ಹೆಸರಿಟ್ಟಿದ್ದಾನೆ. ನಮ್ಮ ಹರಿಕಥೆ, ಪುರಾಣಗಳೆಲ್ಲ ಗಾನಪ್ರಧಾನ. ನಮ್ಮ ಆದಿಕಾವ್ಯವಾದ ಶ್ರೀಮದ್ರಾಮಾಯಣವನ್ನು ರಚಿಸಿದ ವಾಲ್ಮೀಕಿಯು ಅದನ್ನು ಮೊದಲು ಪ್ರಪಂಚಕ್ಕೆ ತಿಳಿಸುವ ವೇಳೆ, ತನ್ನ ಮುದಿಶಾರೀರದಿಂದ ಓದಿದರೆ ಸ್ವಾರಸ್ಯ ಕೆಡುವುದೆಂದು ಯೋಚಿಸಿಯೇ, ಕುಶ ಲವರ ಕೋಮಲ ಗಾತ್ರದಿಂದ ಅದನ್ನು ಹಾಡಿಸಿದ್ದಾನೆ. ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಜನಪದ ಹಾಡುಗಳಂತೂ ಸಂಗೀತವಾಗಿಯೇ ಪ್ರವಹಿಸಿವೆ. ತೊಟ್ಟಿಲ ಹಾಡುಗಳು, ಹಿಟ್ಟು ಬೀಸುವ ಪದಗಳು, ಒನಕೆ ಕುಟ್ಟುವ ಹಾಡುಗಳು, ಉದಯರಾಗಗಳು, ಮೊಸರು ಕಡೆಯುವಾಗ, ನಾಟಿ (ನೇಜಿ) ನೆಡುವಾಗ, ಕಸುಬು ವೃತ್ತಿಯ ಏಕತಾನತೆ ಇರುವಾಗ, ವಧೂವರರ ಹಸೆಯ ಹಾಡುಗಳು, ಭಿಕ್ಷಾನ್ನದ ಬ್ರಹ್ಮಚಾರಿಯು ಕೂಗುವಾಗ, ಬೀದಿಯಲ್ಲಿ ಹಾಲು-ಮೊಸರು, ಕಾಯಿ ಸೊಪ್ಪು ಮಾರುವವಳು ಕೂಗಿ ಕರೆವಾಗ, ಬುಡುಬುಡಿಕೆ, ದಾರಿ ದಾಸಯ್ಯ, ಅಷ್ಟೇ ಏಕೆ, ರೈಲ್ವೇ ಸ್ಟೇಶನ್ನಿನಲ್ಲಿ ಕಾಫಿ - ಟೀಗಳನ್ನು ಮಾರುವಾಗ, ಇನ್ನೂ ಹೇಳುವುದಾದರೆ ಮನೆಯ ಪಡಸಾಲೆಯ ಕಂಬವೊಂದಕ್ಕೆ ಒರಗಿ ಮುಸ್ಸಂಜೆಯ ವೇಳೆ ಗುನುಗುನಿಸುವ ಮಗ್ಗಿಲೆಕ್ಕವನ್ನು

ಕಂಠಪಾಠ ಬರೆಯುವಾಗ - ಹೀಗೆ ಎಲ್ಲೆಲ್ಲೂ ಸಂಗೀತ ಪ್ರವಹಿಸುತ್ತದೆ. ಸಂಗೀತ ಹೀಗೆ ಜೀವನಾಡಿಯೇ ಆಗಿದೆ.

ನಮ್ಮ ದೇವರುಗಳಾದ ಸರಸ್ವತಿಯು ಕೈಯಲ್ಲಿ ವೀಣೆ, ನಾರದ ಋಷಿಗಳ ಕೈಯಲ್ಲಿ ಕೈವೀಣೆ, ತುಂಬುರನ ಕೈಯಲ್ಲಿ ತಂಬೂರಿ, ಪರಮೇಶ್ವರನ ಕೈಯಲ್ಲಿ ಡಮರುಕ, ಶ್ರೀಕೃಷ್ಣನ ಕೈಯಲ್ಲಿ ಕೊಳಲು - ಇವೆಲ್ಲವೂ ಮಾನುಷವಾದ ಭೋಗ್ಯವಸ್ತು ಮಾತ್ರವೇ ಅಲ್ಲದೆ, ದಿವ್ಯವಾದ ಪೂಜ್ಯ ವಸ್ತುವೂ ಆಗಿ ಇರುವುದನ್ನು ನಾವು ನೋಡುತ್ತೇವೆ.

ವೇದಗಳಿಂದ ಹುಟ್ಟಿದ ಸಂಗೀತವು ಅದಕ್ಕೂ ಹಿಂದೆ ಗಾಂಧರ್ವ ವಿದ್ಯೆಯಾಗಿತ್ತಂತೆ. ಅದು ಈಗ ಉಪಲಬ್ಧವಿಲ್ಲ. ಇದು ಮಾರ್ಗಸಂಗೀತ. ಇದನ್ನು ಹಾಡುವ ಕ್ರಮ ಯಾರೂ ತಿಳಿದಿಲ್ಲ. ವೇದಗಳನ್ನು ಕಟ್ಟುನಿಟ್ಟಾದ ಉದಾತ್ತ - ಅನುದಾತ್ತ - ಸ್ವರಿತ ಎಂಬ ಏರು - ಇಳಿತ ಸ್ವರಗಳಿಂದ ಹಾಡಲಾಗುತ್ತದೆ.

ಉದಾ:- ಶಂ ನೋ ಮಿತ್ರಃ ಶಂ ವರುಣಃ । ಶಂ ನೋ ಭವತ್ವರ್ಯಮಾ ।
ಶಂ ನ ಇಂದ್ರೋ ಬೃಹಸ್ಪತಿಃ । ಶಂ ನೋ ವಿಷ್ಣುರುರುಕ್ರಮಃ

ಋಗ್ವೇದದ ಋಕ್ಕುಗಳನ್ನು ಸಾಮಗಾನದಲ್ಲಿ ಗೇಯ ರೀತಿಯಲ್ಲಿ ಹಾಡಲಾಗುತ್ತದೆ. ಇದೊಂದು ಗಾಯತ್ರಿ ಸಾಮ:-

ಓಂ ತತ್ಸವಿತುರ್ವರೇಣಿಯೋಂ ಭಾರ್ಗೋ ದೇವಸ್ಯ ಧೀಮಾಹೀs2
ಧಿಯೋಯೋನಃ ಪ್ರಚೋs 1 2 1 2 ಹಿಂ ಆs 2 ॥ದಾ ಯೋ ಆs 3 4 5

ಗಾಯನಕ್ಕಾಗಿ ಇಲ್ಲಿ ಆಗಿರುವ ಅಕ್ಷರ ವಿಕಾರತೆ, ಅಕ್ಷರ ಪಲ್ಲಟ ಮತ್ತು ಹಿಂ, ದಾಯೋ ಮತ್ತು ಆ ಎಂಬ ಅರ್ಥರಹಿತ ತುಂಡುಗಳನ್ನು ಗಮನಿಸಬೇಕು. ಸಂಗೀತದ ಗೇಯಕ್ಕಾಗಿ, ಅಕ್ಷರಗಳನ್ನು ದೀರ್ಘಾಕ್ಷರಗಳನ್ನಾಗಿ ಮಾಡಬಹುದೆಂಬುದನ್ನು ಸಾಮವು ವಿಧಿಸಿದೆ. ಇದು ಮನಸ್ಸಿಗೊಂದು 'ಮಧುರ ಸ್ವನ'ವಾಗಿ ಇಂಬು ನೀಡುತ್ತದೆ*. ಮಂತ್ರಗಳ ಸ್ವರಗಳ ಏರಿಳಿತಗಳು ದೇಹದ ಮೇಲೆ ಮತ್ತು ನಮ್ಮ ಪರಿಸರದ ಮೇಲೆ ನಿರ್ದಿಷ್ಟ ಪರಿಣಾಮ ಬೀರುತ್ತವೆ. ಹಾಗಾಗಿ, ಅಲ್ಲಿ ಆದೇಶಿಸಿದ ಉದಾತ್ತ - ಅನುದಾತ್ತ - ಸ್ವರಿತಗಳು ತಪ್ಪಾಗದೇ ಉಚ್ಚರಿಸಲ್ಪಡಬೇಕು. [1984ರ ಡಿಸೆಂಬರ್ 3ರಂದು ಭೋಪಾಲ್‌ನ ಯೂನಿಯನ್ ಕಾರ್ಬೈಡ್ ಸಂಸ್ಥೆಯಲ್ಲಾದ ದುರಂತದ ಪರಿಣಾಮವಾಗಿ ಮಿಥೈಲ್ ಐಸೋಸಯನೇಟ್ ಎಂಬ ಅನಿಲವು ಪರಿಸರಕ್ಕೆ ಸೂಸಲ್ಪಟ್ಟು, ಆ ಮಾಲಿನ್ಯದ ಕಾರಣದಿಂದ ಸಾವಿರಾರು ಜನ ಸಾವನ್ನಪ್ಪಿದರು. ಭೋಪಾಲಿನ ಪಕ್ಕದ ಹಳ್ಳಿಯೊಂದರಲ್ಲಿ ತೊಡಗಿದ್ದ ಯಾಗ - ಹೋಮ - ಮಂತ್ರಗಳ ಪರಿಣಾಮವಾಗಿ,

---

* ಖಾಂಡನ । ಭಾವ । ಬಾಂಧಾನ । ಜಾಗ । ವಾಂದನ । ವಾಂದಿ । ತೋಮಾಯ್
(ಖಂಡನ ಭವ ಬಂಧನ ಜಗವಂದನ ವಂದಿತೋ ಮಾಯ್) - ಶ್ರೀ ರಾಮಕೃಷ್ಣ ಆರತ್ರಿಕಾ ಸ್ತೋತ್ರ (ಬಂಗಾಲಿ) - ಇಲ್ಲಿ ಅಕ್ಷರಗಳನ್ನು ದೀರ್ಘ ಮಾಡಿದುದನ್ನು ಗಮನಿಸಬಹುದು.

ಆ ಹಳ್ಳಿಯಲ್ಲಿ ಕಣ್ಣು ಕಳೆದುಕೊಂಡ ವರದಿಯಾಗಲೀ, ಶ್ವಾಸಕೋಶಗಳ ಕಾಯಿಲೆಗಳಾಗಲೀ, ಜಾನುವಾರು, ಪಕ್ಷಿಗಳ ಸಾವಿನ ಪ್ರಮಾಣವಾಗಲೀ ಗಣನೀಯವಾಗಿ ಕಡಿಮೆಯಿದ್ದುದು ವೈಜ್ಞಾನಿಕ ಸಂಶೋಧನೆಗಳಿಂದ ತಿಳಿದು ಬಂದಿದೆ.] ಮಂತ್ರಗಳ ಅರ್ಥ ತಿಳಿದಿದ್ದರೆ ಅನುಸಂಧಾನ ಇನ್ನೂ ಚೆನ್ನಾಗಿಯೇ ಇರುತ್ತದೆ.

ಕ್ರಿ.ಪೂ. 3 ಮತ್ತು ಕ್ರಿ.ಶ. 2ನೇ ಶತಮಾನದ ಮಧ್ಯೆ ಭರತನೆಂಬ ಮುನಿಯೊಬ್ಬ ಭಾರತೀಯ ಸಂಗೀತದ ಬಗ್ಗೆ ಉತ್ಕೃಷ್ಟವಾದ ಗ್ರಂಥವನ್ನು ಬರೆದ. 'ನಾಟ್ಯಶಾಸ್ತ್ರ'ವೆಂಬ ಈ ಸಂಸ್ಕೃತ ಗ್ರಂಥದ ಹಲವು ಭಾಗಗಳು ಉಪಲಬ್ಧವಿಲ್ಲ. ಆದರೂ ಸಿಕ್ಕಿದುದರಲ್ಲಿ ಇರುವ 28ರಿಂದ 33ನೇ ವರೆಗಿನ ಅಧ್ಯಾಯಗಳು ಸಂಗೀತಕ್ಕೆ ಸಂಬಂಧಿಸಿದುದಾಗಿವೆ. ಇಲ್ಲಿ ನಾದವೆಂದರೇನು? ಆಹತ - ಅನಾಹತ ನಾದ, ಪ್ರಣವ, ಓಂಕಾರಗಳ ಮಹತ್ವ, ನಿಸರ್ಗದಲ್ಲಿರುವ ಪ್ರಾಣಿ ಪಕ್ಷಿಗಳ ಇಂಚರದಿಂದಲೇ ಉತ್ಪತ್ತಿಯಾದ ಸಪ್ತಸ್ವರಗಳು, ಸ್ವರಭೇದಗಳು, 22 ಶ್ರುತಿ ಭೇದಗಳು - ಈ ಮೊದಲಾದ ಅನೇಕ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ಮನುಷ್ಯ ದೇಹದಲ್ಲಿರುವ ಷಟ್ಚಕ್ರಗಳಿಗೂ, ನಾದಮೂಲ, ನಾದಪ್ರವಾಹಗಳಿಗೂ ನೇರ ಸಂಬಂಧ ತಿಳಿಸಿ, ಮನುಷ್ಯನ ಮೋಕ್ಷಸಾಧನೆಗೆ 'ಆನಂದ' ಮಾರ್ಗವನ್ನೂ ಹೇಳಲಾಗಿದೆ.

ಪ್ರಣವ

ಓಂ-ಕಾರ (ಅಉಮ) (AUM)

ಅ - ಬ್ರಹ್ಮ	- ಸೃಷ್ಟಿ	- ಹೊಟ್ಟೆಯ ಕೆಳಭಾಗ	- $^1/_3$	- ಸ
ಉ- ವಿಷ್ಣು	- ಸ್ಥಿತಿ	- ಎದೆ ಭಾಗ	- $^1/_3$	- ಪ
ಮ- ಮಹೇಶ್ವರ	- ಲಯ	- ಭ್ರೂ, ಶಿರಭಾಗ	- $^1/_3$	- ಸ̇

ಷಟ್ಚಕ್ರಗಳು

ಆಜ್ಞಾ	- ಭ್ರೂ ಭಾಗ
ವಿಶುದ್ಧ	- ಗಂಟಲು
ಅನಾಹತ	- ಹೃದಯ
ಮಣಿಪೂರ	- ಹೊಕ್ಕಳು
ಸ್ವಾದಿಷ್ಠಾನ	- ಹೊಟ್ಟೆಭಾಗ
ಮೂಲಾಧಾರ	- spine (ಜನನೇಂದ್ರಿಯ ಭಾಗ)

ಸಪ್ತಸ್ವರಗಳು

ಸ	ಷಡ್ಜ	ನವಿಲು	C	ಪ್ರಕೃತಿ ಸ್ವರ
ರಿ	ಋಷಭ	ಎತ್ತು	D	$ರಿ_1$ $ರಿ_2$ $ರಿ_3$
ಗ	ಗಾಂಧಾರ	ಆಡು	E	$ಗ_1$ $ಗ_2$ $ಗ_3$
ಮ	ಮಧ್ಯಮ	ಕ್ರೌಂಚ	F	$ಮ_1$ $ಮ_2$
ಪ	ಪಂಚಮ	ಕೋಗಿಲೆ	G	ಪ್ರಕೃತಿ ಸ್ವರ
ದ	ದೈವತ	ಕುದುರೆ	A	$ದ_1$ $ದ_2$ $ದ_3$
ನಿ	ನಿಷಾದ	ಆನೆ	B	$ನಿ_1$ $ನಿ_2$ $ನಿ_3$

ಸಂಗೀತಕ್ಕೆ ಎರಡು ಮುಖ್ಯ ಅಂಗಗಳಿವೆ - ಒಂದು, ಶ್ರುತಿ. ಎರಡು, ಲಯ. 'ಶ್ರುತಿರ್ಮಾತಾ ಲಯ ಪಿತಾ ।' ಎಂದಿದ್ದಾರೆ ಶಾಸ್ತ್ರಕಾರರು. ಅತಿ ಸೂಕ್ಷ್ಮವಾಗಿಯೂ, ಅತ್ಯಲ್ಪವಾಗಿಯೂ ಇದ್ದು ಸೂಕ್ಷ್ಮ ಶ್ರವಣ ಶಕ್ತಿ ಪಡೆದಿರುವ, ಕಿವಿಗೆ ಕೇಳಿಸುವಂತಹ ನಾದಕ್ಕೆ ಶ್ರುತಿ ಎಂದು ಹೆಸರು. ಹಾಡುಗಾರನು ಹಾಡುವ ಸೌಲಭ್ಯಕ್ಕಾಗಿ ಆಧಾರವಾಗಿಟ್ಟುಕೊಳ್ಳುವ ಈ ಸಂಕೇತ ನಾದಕ್ಕೆ ಶ್ರುತಿ (Drone) ಅಥವಾ ಆಧಾರ ಶ್ರುತಿ ಎಂದು ಹೆಸರು. ಇದು ಪ್ರಕೃತಿ ಸ್ವರ. ಇದರ ಆಧಾರದ ಮೇಲೆ ಉಳಿದ ವಿಕೃತಿ ಸ್ವರಗಳ (ರಿ ಗ ಮ ದ ನಿ) ಚಲಾವಣೆಯಾಗುತ್ತದೆ. ಇದೇ ಆಧಾರ ಷಡ್ಜ. ಇದರೊಂದಿಗೆ ಪಂಚಮ (ಪ)ವನ್ನೂ ಸಂವಾದಿಯಾಗಿ ಜೋಡಿಸಿಕೊಂಡರೆ, ಈ ಪ್ರಕೃತಿ ಸ್ವರಗಳು ಬೆನ್ನೆಲುಬಿನಂತೆ ಗಟ್ಟಿಯಾಗಿ ನಿಂತು ಹಾಡಿನ ಶ್ರೇಣಿಯನ್ನು ಬಂಧಿಸುತ್ತವೆ. ಸ - ಪ - ಸ ಗಳ ಅನುಸಂಧಾನ ಸಂಗೀತದ ವಾತಾವರಣವನ್ನು ಸೃಷ್ಟಿಸಿ, ಮನಸ್ಸಿಗೆ ಒಂದು ಅವ್ಯಕ್ತ ವಿಶ್ರಾಂತಿ, relaxationನ್ನು ಒದಗಿಸುತ್ತದೆ. ಭಾರತೀಯ ಸಂಗೀತ ಈ ರೀತಿಯಾಗಿ ಮೈದೆರೆಯುಕೊಳ್ಳುತ್ತದೆ. ಅಲ್ಲಿ ಉದ್ವೇಗ, ಉದ್ರೇಕ, ಕೋಪ, ತಾಪ, ರಭಸಾಟಗಳು ಸ್ಫುರಿಸುವುದಿಲ್ಲ. ಬದಲಾಗಿ ಪ್ರಶಾಂತತೆ, ನೀರವತೆ, ನಿಷ್ಕಾಮತೆ ಮತ್ತು ಹಗುರವೆನಿಸುವ ವಿಶ್ರಾಂತ ಮನಸ್ಸು ಇವೇ ನಲಿಯುತ್ತಿರುತ್ತವೆ.

ಶಾಸ್ತ್ರೀಯ ಭಾರತೀಯ ಸಂಗೀತದಲ್ಲಿ ಎರಡು ಕವಲುಗಳಿವೆ. ಒಂದು ಉತ್ತರ ಭಾರತದಲ್ಲಿ ಹೆಚ್ಚಾಗಿ ಜನಪ್ರಿಯವೆನಿಸಿರುವ ಹಿಂದೂಸ್ತಾನೀ ಅಥವಾ ಉತ್ತರಾದಿ ಸಂಗೀತ ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತವಿರುವ ಕರ್ನಾಟಕ ಸಂಗೀತ ಅಥವಾ ದಕ್ಷಿಣಾದಿ ಸಂಗೀತ. ಔತ್ತರೇಯರ ಸಂಗೀತದಲ್ಲಿ ಶ್ರುತಿ ಪ್ರಾಧಾನ್ಯ. ದಕ್ಷಿಣಾದಿಯಲ್ಲಿ ಲಯಕ್ಕೆ ಸ್ವಲ್ಪ ಹೆಚ್ಚಿನ ಒತ್ತು. ಅವರದು ಹೃದಯ ಸಂವಾದ. ನಮ್ಮದು ಹೆಚ್ಚಾಗಿ ಬೌದ್ಧಿಕ ಸಂವಾದ. ಅವರ ಸಂಗೀತಕ್ಕೆ ಸಾಹಿತ್ಯ ನೆಪಕ್ಕೆ ಮಾತ್ರ. ಆದರೆ ನಮ್ಮಲ್ಲಿ ಸಾಹಿತ್ಯವೇ ಜೀವಾಳ. ಶಾಂತ,

ಕರುಣ, ಶೃಂಗಾರ, ವೀರ ರಸಗಳು ಹಿಂದೂಸ್ತಾನೀ ಸಂಗೀತದಲ್ಲಿ ಸರ್ವೇಸಾಮಾನ್ಯ. ಕರ್ನಾಟಕ ಸಂಗೀತದಲ್ಲಿ ಒಂಭತ್ತು ನವರಸಗಳೂ (ಶೃಂಗಾರ - ಹಾಸ್ಯ - ಕರುಣ - ರೌದ್ರ - ವೀರ - ಭಯಾನಕ - ಭೀಭತ್ಸ - ಅದ್ಭುತ - ಶಾಂತ) ಲೀಲೆಯಾಡುತ್ತಿರಬಹುದು. ಏನಿದ್ದರೂ, ಅದು ದೇವರ ಕುರಿತಾದ ಸಂಕೀರ್ತನೆ ಅಥವಾ ಸ್ತುತಿ ಅಥವಾ ಭಕ್ತಿಪರವಶತೆ ಅಥವಾ ಕೊಂಡಾಟ ಅಥವಾ ಸಂವಾದ ಅಥವಾ ಮಹಿಮೆ.

ಇವೆಲ್ಲವನ್ನೂ ರಾಗವೊಂದರಲ್ಲಿ ಸೃಷ್ಟಿಸಲಾಗುತ್ತದೆ. 'ರಂಜಯತಿ ಇತಿ ರಾಗಃ' ಎಂದದ್ದು ಮತಂಗ ಮುನಿ (8ನೇ ಶತಮಾನ). ರಂಜನೀಯವಾಗಿ ಮೈದೆರೆದುಕೊಳ್ಳುತ್ತಾ ಭಾವವೊಂದನ್ನು ಸೃಷ್ಟಿ ಮಾಡುವ ಶಕ್ತಿ ರಾಗಕ್ಕಿದೆ. ಕೆಲವು ರಾಗಗಳನ್ನು ಹಗಲಿನಲ್ಲೇ ಹಾಡತಕ್ಕದ್ದು. ಮತ್ತೆ ಕೆಲವು ರಾತ್ರಿ ಹೊತ್ತಿನಲ್ಲೇ ಹಾಡತಕ್ಕದ್ದು ಎಂಬ ನಿಯಮವಿದೆ. ಹಿಂದೂಸ್ತಾನೀಯರಲ್ಲಿ ಇದು ಈಗಲೂ ಕಟ್ಟುನಿಟ್ಟಾಗಿ ಪರಿಪಾಲಿಸಲ್ಪಡುತ್ತಿದೆ. ಕರ್ನಾಟಕ ಸಂಗೀತದಲ್ಲಿ ಈ ಬಂಧನವು ಕಳಚಿಕೊಂಡಿದೆ.

ಮುಂಜಾನೆಗೆ	ಮಧ್ಯಾಹ್ನ	ಮುಸ್ಸಂಜೆ	ನಡುರಾತ್ರಿ
ಭೈರವ ರಾಗಗಳು	ಸಾರಂಗ್ ರಾಗಗಳು	ಯಮನ್	ದರ್ಬಾರೀ
ತೋಡಿ ರಾಗಗಳು		ಪೂರಿಯಾ	ಅಡಾಣಾ
		ಮಾರ್‌ವಾ	ಆಭೋಗಿ
		ಶ್ರೀ	

ಹಿಂದೂಸ್ತಾನೀ ಪದ್ಧತಿಯಲ್ಲಿ ರಾಗ - ರಾಗಿಣಿ ಎಂಬ ವರ್ಗೀಕರಣ ವಿಧಾನವಿದೆ. ಇದರ ಪ್ರಕಾರ ಕೆಲವು ರಾಗಗಳು ಪುರುಷ ರಾಗಗಳು. ಇನ್ನು ಕೆಲವು ಸ್ತ್ರೀ ರಾಗಗಳು (ರಾಗಿಣಿ). ಮಾತ್ರವಲ್ಲ, ಈ ಕಲ್ಪನೆಯನ್ನು ಮುಂದುವರೆಸಿ, ಅದಕ್ಕೊಂದು ಚಿತ್ರರಚನೆ ಮಾಡಿ ಸೃಷ್ಟಿ ಮಾಡಿದ್ದೂ ಇದೆ. 17-18ನೇ ಶತಮಾನದಲ್ಲಿ ಈ ಬಗೆಗಿನ ಹಲವಾರು ರಾಗ - ರಾಗಿಣಿ ಚಿತ್ರಕಲೆಗಳು ಬೆಳಕಿಗೆ ಬಂದಿವೆ.

ರಾಗಗಳು	ರಾಗಿಣಿಗಳು	
ಹಿಂದೋಳ	ಬಿಲಾವಲ್	ಕೇದಾರ
ತೋಡಿ	ಸಾವೇರಿ	ಅಸಾವರಿ
ವಸಂತ	ಧನಾಶ್ರೀ	
ದೀಪಕ	ಮಧುಮಾಧವಿ	

ಈ ಎಲ್ಲಾ ವಿಷಯಗಳು ಸಂಗೀತ ಕಲೆಗೂ, ನಿಸರ್ಗಕ್ಕೂ, ಮಾನವನ ಮಾನಸಿಕಾನುಭವಕ್ಕೂ ಇರುವ ಸಂಬಂಧವನ್ನು ಹೇಳುತ್ತವೆ.

ಒಂದು ರಾಗವೆಂದು ನಾವು ಕರೆಯುವುದು, ಕೆಲವು ಸ್ವರಗಳ ಪೋಣಿಕೆಯಲ್ಲಾಗುವ ಸರಸತೆಯನ್ನು. ಉದಾಹರಣೆಗೆ, ದಕ್ಷಿಣಾದಿ ಸಂಗೀತದ *ಮೋಹನ* ರಾಗವನ್ನು ತೆಗೆದುಕೊಳ್ಳೋಣ.

ಮೋಹನ ರಾಗವನ್ನು ತಿಳಿಸಲು ಐದು ಸ್ವರಗಳು ಬೇಕು:

ಸ ರಿ$_2$ ಗ$_3$ ಪ ದ$_2$ ಸ / \ ಸ ದ$_2$ ಪ ಗ$_3$ ರಿ$_2$ ಸ

ಇದು ಈ ರಾಗದ ಆರೋಹಣ / \ ಅವರೋಹಣ. ಇಷ್ಟರಲ್ಲೇ ಮೋಹನ ರಾಗವು ಮೈದಳೆಯಲಾರದು.

ಗಪದಸಾ ಸದರಿಸ ದಾಪ ಪದಸಗಾ ರಿಗಪ ಗರಿಸಾ

ಸರಿಗಪದಸದಪಗರೀಸಾ ಧಾರೀಸಾ ಧಾ ಫಾ ಧಾಸಾ ॥

ಮೇಲೆ ಹೇಳಿದ ಸಂಚಾರವನ್ನು ಹಾಡಿದಾಗ ಮೋಹನವು ವಿಜೃಂಭಿಸುತ್ತದೆ. ಗಾ ಮತ್ತಾ ಧಾ ಗಳು ಹೆಚ್ಚಾಗಿ ಬಳಸಲ್ಪಟ್ಟದ್ದನ್ನು ಗಮನಿಸಬೇಕು. ವಿಶಾಲ ವ್ಯಾಪ್ತಿಯುಳ್ಳ ರಕ್ತಿರಾಗವಾದ ಮೋಹನವು ವೀರ, ಶಾಂತ, ಕರುಣ, ಹಾಸ್ಯ, ಅದ್ಭುತಗಳಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ:

ರಂಗನಾಯಕಾ ರಾಜೀವಲೋಚನ ಬೆಳಗಾಯಿತಯ್ಯ ಏಳು ॥	ಶಾಂತ/ಭಕ್ತಿ
ಭವನುತ ಸದಾ ಯಮುನ ರತಿ ॥	ವೀರ
ಮೋಹನ ರಾಮಾ ॥ ಸುಖಿಜಿತ ಸೋಮಾ ॥	ಶಾಂತ/ಭಕ್ತಿ
ಮಡಿ ಮಡಿ ಮಡಿಯೆಂದು ಅಡಿಗಡಿಗ್ಹಾರುವಿ ಮಡಿ ಮಾಡುವ ಬಗೆ ಬೇರುಂಟು ॥	ಹಾಸ್ಯ/ಲೇವಡಿ
ಕರುಣಿಸೋ ರಂಗಾ ಕರುಣಿಸೋ ಇರುಳು ಹಗಲು ನಿನ್ನ ಸ್ಮರಣೆ ಮಾಡುವಂತೆ ॥	ಕರುಣ/ಭಕ್ತಿ
ಫಡಫಡಾ ಶಿಖಂಡಿಯೆಂದಡಿಗಡಿಗೆ ನುಡಿಯಬೇಡೆಲೋ ಮೂಢಾ	ರೌದ್ರ
ಸ್ವಾಗಂತ ಕೃಷ್ಣಾ ಸುಸ್ವಾಗತಂ ಕೃಷ್ಣಾ ಸ್ವಾಗತಂ ಸುಸ್ವಾಗತಂ ಶರಣಾಗತಂ ಕೃಷ್ಣಾ	ಶೃಂಗಾರ/ಭಕ್ತಿ

18679

ರಾಗ ಭಾವದಿಂದ ನವರಸಗಳೋ, ಹಗಲು ರಾತ್ರಿಗಳೋ, ಋತು ಸಂವತ್ಸರಗಳೋ ಸ್ಫುರಿಸುವಂತೆ, ಸ್ತ್ರೀಯರ ವೈಯಾರ-ಬೆಡಗುಗಳು, ಪುರುಷರ ವೀರ-ಅದ್ಭುತ ಲಕ್ಷಣಗಳು ಕಾಣಲು ಸಾಧ್ಯವಿದೆ. ಶಾಸ್ತ್ರಕಾರರು ಒಂದೊಂದು ರಾಗವೂ ಒಂದೊಂದು ಬಣ್ಣವನ್ನು ನೀಡುತ್ತದೆ ಎನ್ನುತ್ತಾರೆ. ಹಾಗೆಯೇ ಒಬ್ಬೊಬ್ಬ ಅಧಿದೇವತೆಯನ್ನೂ ಸಾಕ್ಷಾತ್ಕರಿಸಿಕೊಳ್ಳುತ್ತದೆ ಎನ್ನುತ್ತಾರೆ. ಇಂತಹ ಸಾಧಕರು ಭೈರವಿ, ತೋಡಿ, ಪೂರ್ವಿಕಲ್ಯಾಣಿ ಮುಂತಾದ ರಾಗಗಳನ್ನು ವಿಶೇಷವಾಗಿ ಅಭ್ಯಸಿಸಿ 'ವಶೀಕರಿಸಿ'ಕೊಂಡ ಹಲವಾರು ದಂತಕತೆಗಳಿವೆ. ಭೈರವಿ ಕೆಂಪಯ್ಯ, ತೋಡಿ ಸೀತಾರಾಮಯ್ಯ ಮುಂತಾದ ನಾಮಧೇಯಗಳು ಅವರ ನಿಜ ಹೆಸರಿಗೆ ಹೀಗೆ ಅಂಟಿಕೊಂಡ ಪ್ರಸಂಗಗಳಿವೆ. ವೈಯಕ್ತಿಕ ಜೀವನದಲ್ಲಿ ಇಕ್ಕಟ್ಟು ಬಂದಾಗ, ಕೆಲವು ರಾಗಗಳನ್ನು ಅಡವಿಟ್ಟು, ಸಾಲಮಾಡಿದ ಪ್ರಸಂಗಗಳೂ ನಮ್ಮಲ್ಲಿ ಹಲವಾರು ಇವೆ.

ಮೇಘಮಲ್ಹಾರ ರಾಗವನ್ನು ಹಾಡಿ ತಾನಸೇನನೂ, ಅಮೃತವರ್ಷಿಣಿ ರಾಗವನ್ನು ಹಾಡಿ ಮುತ್ತುಸ್ವಾಮಿ ದೀಕ್ಷಿತರೂ ಮಳೆಬರಿಸಿದ ಪವಾಡಗಳೂ ಗ್ರಂಥಗಳಲ್ಲಿ ಉಕ್ತವಾಗಿವೆ. ಅಟಾಣಾ ರಾಗದ 'ಬೃಹಸ್ಪತೇ' ಎಂಬ ಗುರುಗ್ರಹದ ಕುರಿತಾದ ಸ್ವಂತ ರಚನೆಯೊಂದನ್ನು ಹಾಡಿ ಮುತ್ತುಸ್ವಾಮಿ ದೀಕ್ಷಿತರು ಹೊಟ್ಟೆನೋವನ್ನು ಪರಿಹರಿಸಿದ ಕತೆಯೂ ದಾಖಲಾಗಿದೆ. ದೀಪಕ ರಾಗದಿಂದ ದೀಪ ಹೊತ್ತಿ ಉರಿದದ್ದಂತೂ ಅತ್ಯಂತ ಪ್ರಸಿದ್ಧ ಕತೆ. ತ್ಯಾಗರಾಜರು ಬಿಲಹರಿ ರಾಗದ 'ನಾ ಜೀವಾಧಾರ' ಎಂಬ ಕೃತಿ ಹಾಡಿ, ಮರಣವನ್ನಪ್ಪಿದ ಓರ್ವನನ್ನು ಬದುಕಿಸಿದ ಪವಾಡವೂ ನಮ್ಮಲ್ಲಿ ಹೇಳಲ್ಪಟ್ಟಿದೆ. ರಾಗಗಳಿಗಂತೂ ಅದ್ಭುತ ಶಕ್ತಿಯಿದೆ. ಅದನ್ನು ಸಾಧನೆಯಿಂದ ಗುರುಮುಖೇನ ಕಲಿತು, ಸಿದ್ಧಿಸಿಕೊಂಡರೆ ಇಂತಹ ಪವಾಡಗಳೂ ಆಗಬಹುದೆಂಬುದು ಈ ಕತೆಗಳ ಹಿಂದೆ ಇರುವ ದಾರ್ಶನಿಕತೆ.

ರಾಗವನ್ನು ಅನಿಬದ್ಧವಾಗಿ, ತಾಳದ ಬಂಧನಕ್ಕೊಳಪಡಿಸದೆ ಹಾಡಿದರೆ (ಅಥವಾ ನುಡಿಸಿದರೆ) ಆಲಾಪ/ನೆಯಾಗುವುದು. ಇದರೊಂದಿಗೆ ಸಾಹಿತ್ಯವನ್ನೂ ಬೆರೆಸಿ ಹಾಡಿದಾಗ ಹೊಸ ಆಯಾಮ ಸೃಷ್ಟಿಯಾಗುತ್ತದೆ. ಅದು ನಿಬದ್ಧವಾಗಿ ಹಾಡಲ್ಪಟ್ಟಾಗ ಇನ್ನೊಂದೇ ಮೆರುಗು ಪಡೆಯುತ್ತದೆ. ಅದನ್ನು ವೈವಿಧ್ಯಮಯವಾಗಿ ಚಿತ್ರಿಸಲು ಹೊರಟಾಗ ರಾಗ ಭಾವ, ರಸ ಭಾವ, ಅರ್ಥ ಭಾವಗಳ ವಿವಿಧ ಭಂಗಿಗಳು ಪ್ರಕಟಗೊಂಡು ರಾಗ-ತಾಳ-ಭಾವ-ಸಾಹಿತ್ಯಗಳ ಅಪೂರ್ವ ಸಮಾಗಮವಾಗುವುದು.

ಇಷ್ಟೆಲ್ಲ ಇದ್ದರೂ, 'ಪ್ರೇಮವಿಲ್ಲದ ಗಾನ'ವೆಂದಾದರೆ, ನಮ್ಮ ಹರಿಯು ಅದನ್ನು ಕೇಳನು:

ಕೇಳನೋ ಹರಿ ತಾಳನೋ
ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ ॥

- ಶ್ರೀ ಪುರಂದರದಾಸರು

ಅದನ್ನೇ ತ್ಯಾಗರಾಜರು,

'ಸಂಗೀತ ಜ್ಞಾನಮು ಭಕ್ತಿ ವಿನಾ ಸನ್ಮಾರ್ಗಮು ಗಲದ' ಎಂದದ್ದು. ನಮ್ಮ ಸಂಗೀತದಲ್ಲಿ ಪ್ರವಹಿಸಲೇಬೇಕಾದ್ದು ಭಕ್ತಿ, ಪ್ರೇಮ ಎನ್ನುವುದು ಸ್ಪಷ್ಟ.

ಕರ್ನಾಟಕ ಸಂಗೀತದಲ್ಲಿ ಅರ್ಥಪೂರಿತ ಕೆಲವೊಂದು ಸಾಲುಗಳನ್ನು ಹಾಡುವಾಗ, ವೈವಿಧ್ಯಮಯವಾಗಿ ನಾಲ್ಕಾರು ಬಾರಿ, ಏಳೆಂಟು ಬಾರಿ ಹೇಳಲಾಗುತ್ತದೆ. ಇದಕ್ಕೆ 'ಸಂಗತಿ'ಗಳೆಂದು ಹೆಸರು. ತ್ಯಾಗರಾಜರಂತಹ ಮಹಾ ವಾಗ್ಗೇಯಕಾರರ 'ಚಕ್ಕನಿರಾಜಮಾರ್ಗ' (ಖರಹರಪ್ರಿಯ ರಾಗ) ಎಂಬ ರಚನೆಗೆ ಕನಿಷ್ಠ 20 ಸಂಗತಿಗಳನ್ನಾದರೂ ಹೇಳುವುದುಂಟು. ಇದು ಆ ಸಾಲಿನ ಅರ್ಥಭಾವದ ಸಂಚಾರೀ ಭಾವಗಳನ್ನು ಪ್ರಕಟಿಸುತ್ತದೆ.

ಉದಾ:- 'ಕೃಷ್ಣಾ ನೀ ಬೇಗನೇ ಬಾರೋ' ಎಂಬುದಾಗಿ ಮುದ್ದು ಕೃಷ್ಣನನ್ನು ಕರೆಯುವಾಗ ಒಮ್ಮೆ ಬಾಲಕೃಷ್ಣನನ್ನು ಕರೆದಂತೆ; ತಂಟೆ ಕೃಷ್ಣನನ್ನು ಪೀಡಿಸಬೇಡ ಎನ್ನುವಂತೆ; 'ಬರೋದಿಲ್ಲವಾ?' ಎನ್ನುವಂತೆ; ಮುನಿಸುಗೊಂಡಂತೆ; 'ಬರದಿದ್ದರೆ ಬೇಡ' ಎಂದು ಹುಸಿಕೋಪ ತೋರುವಂತೆ; ನಾಚಿಕೊಂಡು ಕರೆವಂತೆ; 'ಬೇಗನೆ ಬಂದುಬಿಡು' ಎಂದು ಅವಸರವಸರವಾಗಿ ಹೇಳಿ ಒಲಿಸುವಂತೆ ಅಥವಾ ಎರಡೂ ಕೈಗಳನ್ನು ಹಿಡಿದು ಆಟವಾಡಿಸುತ್ತಾ ಕರೆದುಕೊಂಡು ಬರುವಂತೆ... ಹೀಗೆ ಹಲವಾರು ಬಗೆಯ ಭಾವ ವ್ಯಕ್ತವಾಗುವಂತೆ ಹಾಡಲು ಸಾಧ್ಯವಿದೆ. ಇಲ್ಲಿ ಕೃಷ್ಣನನ್ನು ಕರೆಯುವುದು ಸ್ಥಾಯೀಭಾವ. ಕರೆಯುವ ರೀತಿ, ಭಾವ ಭಿನ್ನ ಭಿನ್ನ. ಇದೇ ಸಂಚಾರಿ ಭಾವ. ಇದನ್ನು ಅರಿತರೆ, ಸಂಗೀತದಲ್ಲಿ ಬರುವ ಸಂಗತಿಗಳನ್ನು ನಮ್ಮ ನಮ್ಮ ರಸಗ್ರಹಣದ ಅರಿವಿಗೆ ತಕ್ಕಂತೆ ರಸಾಸ್ವಾದ ಮಾಡಬಹುದು. ಅದೊಂದು ದಿವ್ಯದರ್ಶನವೇ ಸರಿ.

ಕರ್ನಾಟಕ ಸಂಗೀತದ ಸಾಹಿತ್ಯ ರಚನಕಾರರು ರಚಿಸಿದ ಎಲ್ಲಾ ರಚನೆಗಳು ವಿವಿಧ ದೇವ-ದೇವಿಯರ ಕುರಿತಾದದ್ದೇ. ಗಣಪತಿ (ವಿದ್ಯಾಗಣಪತಿ, ಶಕ್ತಿಗಣಪತಿ, ಬುದ್ಧಿಗಣಪತಿ, ಪ್ರಸನ್ನಗಣಪತಿ, ನಾಟ್ಯಗಣಪತಿ, ಕ್ಷಿಪ್ರಪ್ರಸಾದ ಗಣಪತಿ, ಉಚ್ಚಿಷ್ಟ ಗಣಪತಿ...), ಸರಸ್ವತಿ, ಶಾರದೆ, ದುರ್ಗಾ, ಚಾಮುಂಡೇಶ್ವರಿ, ಉಮೆ, ಪಾರ್ವತಿ, ಭೈರವಿ, ಕಾಳೀ, ಕಾಮಾಕ್ಷಿ, ತ್ರಿಪುರಸುಂದರಿ, ಕಮಲಾಂಬಾ ಮುಂತಾದ ದೇವಿ ಪರ ರಚನೆಗಳು, ಸುಬ್ರಹ್ಮಣ್ಯ (ಷಣ್ಮುಖ, ಮುರುಗ, ವಲ್ಲಿನಾಯಕ...), ನಾಗ, ಶ್ರೀಕೃಷ್ಣ, ರಾಮ ಮತ್ತು ವಿಷ್ಣುಪರ ಅನೇಕ ಕೃತಿಗಳು, ಶಿವನ ಪರವಾದ ಅನೇಕ ರಚನೆಗಳು - ಇತ್ಯಾದಿ ಹಲವಿವೆ. ಮುತ್ತುಸ್ವಾಮಿ ದೀಕ್ಷಿತರಂತೂ ನಿರ್ಗುಣೋಪಾಸನೆಯ ಮಾಯೆಯನ್ನು, ಜ್ಯೋತಿಷ್ಯ, ತಂತ್ರ, ಆಗಮಗಳನ್ನು ಕುರಿತಾದ ರಚನೆಗಳನ್ನು, ನವಗ್ರಹಗಳ ಮೇಲೆ ಒಂದೊಂದು ಕೃತಿಯನ್ನು, ಚಕ್ರಪೂಜೆಗಾಗಿ ನವಾವರಣ ಕೀರ್ತನೆಗಳನ್ನು, ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಲಿಂಗ (ಪಂಚಲಿಂಗ ಕ್ಷೇತ್ರ) ಕುರಿತಾದ ಪ್ರಗಲ್ಭ ಸಂಸ್ಕೃತ ರಚನೆಗಳನ್ನು ನೀಡಿದ್ದಾರೆ. ಅವರು ಹಿಂದೂಸ್ತಾನೀ ರಾಗಗಳಲ್ಲಿ ಹಲವಾರು ರಚನೆ (ದ್ವಿಜಾವಂತಿ, ಬೃಂದಾವನ ಸಾರಂಗ, ಹಮೀರ್ ಕಲ್ಯಾಣಿ, ಮಾರುವ, ಭೈರವ, ಲಲಿತ ಇತ್ಯಾದಿ)ಗಳನ್ನು ನಮ್ಮ ಸಂಗೀತಕ್ಕೆ ಎರವಲು ತಂದಿದ್ದಾರೆ. ಅಷ್ಟೇ ಅಲ್ಲ, ಪಾಶ್ಚಾತ್ಯ ಸಂಗೀತದ

ಬ್ಯಾಂಡ್ ಮಾದರಿಯ ರಚನೆಗಳನ್ನು 'ನೋಟ್ ಸ್ವರ' ಎಂಬ ಹೆಸರಿನಲ್ಲಿ ರಚಿಸಿದ್ದಾರೆ. ಇವರ ತಮ್ಮ ಬಾಲುಸ್ವಾಮಿ ದೀಕ್ಷಿತರು ಪಾಶ್ಚಾತ್ಯ ವಾದ್ಯವಾದ ವಯಲಿನ್‌ನ್ನು ನಮ್ಮ ಕರ್ನಾಟಕ ಸಂಗೀತಕ್ಕೆ ತಂದು ಹೊಸ ಕ್ರಾಂತಿಯನ್ನೇ ಮಾಡಿದರು. ಇಂದು ಕರ್ನಾಟಕ ಸಂಗೀತದ ಹಾಡುಗಾರಿಕೆಗೆ ವಯಲಿನ್ (ಫಿಡ್ಲ್/ಪಿಟೀಲು) ಇಲ್ಲದೆ ಕಛೇರಿಯೇ ನಡೆಯದು. ದೀಕ್ಷಿತರು, ಮಹಾರಾಜಾ ಸ್ವಾತಿ ತಿರುನಾಳರು, ಜಯಚಾಮರಾಜೇಂದ್ರ ಒಡೆಯರರು, ತಮಿಳು - ತೆಲುಗು - ಕನ್ನಡ - ಮಲಯಾಳ - ಹಿಂದಿ ಭಾಷೆಗಳಲ್ಲೂ ರಚನೆಗಳನ್ನು ಮಾಡಿ (ಮಣಿಪ್ರವಾಳ ಕೃತಿಗಳು), ಭಾಷಾ ಸಾಮರಸ್ಯವನ್ನು ಎತ್ತಿ ಹಿಡಿದಿದ್ದಾರೆ.

ಇನ್ನೂ ಹಲವಾರು ಸಾಹಿತ್ಯ ರಚನೆಗಳು ನಾಟಕ ಸಂಬಂಧಿಯಾದ 'ದರೂ' ರಚನೆಗಳು. ಇನ್ನು ಕೆಲವು ನಾಟ್ಯಸಂಬಂಧಿಯಾದ 'ತಿಲ್ಲಾಣ' ರಚನೆಗಳು. ದಾಸವರೇಣ್ಯರು ನೀತಿಬೋಧೆ, ಟೀಕೆ, ನಿಂದಾಸ್ತುತಿ, ಶರಣಾಗತಿ, ವಿಡಂಬನೆ, ಭಕ್ತಿಪರವಶತೆ, ಸಂಕೀರ್ತನೆ ಮೊದಲಾದವುಗಳನ್ನು ಸಾವಿರಾರು, ಏಕೆ ಲಕ್ಷೋಪಲಕ್ಷ ರಚನೆಗಳಿಂದ ಜನಮನ ಮುಟ್ಟಿದ್ದಾರೆ. ಗೀತೆ, ಗೀತಿಕೆ, ಉಗಾಭೋಗ, ಸೂಳಾದಿ ಮೊದಲಾದ ಸಂಗೀತ ರಚನೆಗಳು 'ದಾಸವಾಙ್ಮಯ'ದಲ್ಲಿ ಹೇರಳವಾಗಿವೆ. ಹಾಗೆಯೇ ಶರಣರ ವಚನಗಳೂ ಕೂಡಾ ಸಾಮಾಜಿಕ ಪರಿವರ್ತನೆಯನ್ನೇ ಮಾಡಿದ ಸಾಹಿತ್ಯ ರಚನೆಗಳು. ಶೃಂಗಾರ ಕಾವ್ಯವಾಗಿ ಜಯದೇವನ 'ಗೀತಗೋವಿಂದ'ದಿಂದ ಆರಂಭಗೊಂಡ ಹಲವಾರು ರಚನೆಗಳಲ್ಲಿ ನಾಯಕ-ನಾಯಿಕಾ ಭಾವ ನಿಚ್ಚಳವಾಗಿ ಕಾಣಸಿಗುತ್ತವೆ. ಜ್ಯಾವಳಿ ಎಂಬ ರಚನೆಗಳಂತೂ ಮಾನವನ ಪ್ರೇಮಾತುರತೆ, ಉತ್ಕಟ ಪ್ರೇಮವನ್ನು ಬಿಂಬಿಸುತ್ತವೆ.

ಭಕ್ತಿಮಾರ್ಗಬೋಧೆ

ರಾಮಮಂತ್ರವ ಜಪಿಸೋ ಮನುಜಾ
- ಪುರಂದರದಾಸರು

ಪಿಬರೇ ರಾಮರಸಂ ರಸನೇ
ಜನನ ಮರಣ ಭಯ ಶೋಕ ವಿದೂರಂ
ಸಕಲ ಶಾಸ್ತ್ರ ನಿಗಮಾಗಮ ಸಾರಂ
-ಸದಾಶಿವ ಬ್ರಹ್ಮೇಂದ್ರ

ತೆಲಿಯಲೇರು ರಾಮ ಭಕ್ತಿಮಾರ್ಗಮುನು
- ತ್ಯಾಗರಾಜರು

ಸದಾ ಎನ್ನ ಹೃದಯದಲ್ಲಿ
- ವಿಜಯದಾಸರು

ಹರಿಭಜನೆ ಮಾಡೋ
- ವಾದಿರಾಜರು

ಟೀಕೆ

ನಗೆಯು ಬರುತಿದೆ ಎನಗೆ
- ಪುರಂದರದಾಸರು

ಕುಲ ಕುಲ ಕುಲವೆಂದು ಹೊಡೆದಾಡದಿರಿ
- ಕನಕದಾಸರು

ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು
- ಬಸವಣ್ಣ

ಮಡಿ ಮಡಿ ಮಡಿ ಎಂದು
- ಪುರಂದರದಾಸರು

ಸತ್ಯವಂತರಿಗಿದು ಕಾಲವಲ್ಲ
- ಪುರಂದರದಾಸರು

ಅನುಗಾಲವು ಚಿಂತೆ
- ಪುರಂದರದಾಸರು

ತತ್ತ್ವಬೋಧೆ
ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ
- ಪುರಂದರದಾಸರು
ರಾಗೀ ತಂದೀರಾ ಭಿಕ್ಷಕೆ
- ಪುರಂದರದಾಸರು
ಧರ್ಮವೆ ಜಯವೆಂಬ ದಿವ್ಯಮಂತ್ರ
- ಪುರಂದರದಾಸರು
ನೀ ಮಾಯೆಯೊಳಗೊ
- ಕನಕದಾಸರು

ಜ್ಯಾವಳಿ
ಮಾತಾಡಬಾರದೇನೋ ಮಾರಮಣನೆ
ಸ್ಮರಸುದರಾಂಗು ನೀ
ಸಾರಮ್ಮೆನ ಮಾಟಲೆಂತೊ ಚಾಲುರಾ

ವಿರಹ/ಶೃಂಗಾರ
ಲಲಿತಲವಂಗ ಲತಾ ಪರಿಶೀಲನ
ಕೋಮಲಮಲಯ ಸಮೀರೇ
ಮಧುಕರ ನಿಕರ ಕರಂಬಿತ ಕೋಕಿಲ
ಕೂಜತ ಕುಂಜ ಕುಟೀರೇ ॥ ರಾಧೇ
ವಿಹರತಿ ಹರಿರಿತಿ ಹರಸಿ ಭವಂತಂ...
- ಜಯದೇವ ಕವಿ
ರಾಧಿಕಾ ಕೃಷ್ಣಾ ರಾಧಿಕಾ ॥
ತವ ವಿರಹೇ ಕೇಶವಾ ॥
ಸ್ತನವಿನಿ ಹಿತಮಪಿ ಹಾರಮುದಾರಂ
ಸಾಮನುತೇ ಕೃಶ ತನುರಿವ ಭಾರಂ ॥
ಹರಿರಿತಿ ಹರಿರಿತ ಜಪತಿ ಸಖಾಮಂ
ವಿರಹ ವಿಹಿತ ಮರಣೇವನಿಕಾಮಂ
ಶ್ರೀ ಜಯದೇವ ಭಣಿತನುತ ಗೀತಂ
ಸುಖಯತು ಕೇಶವಪದಮುಪನೀತಂ ॥

ನಿರಾಶೆ
ಕರುಣಾಕರ ನೀನೆಂಬುವದೇತಕೊ
- ಪುರಂದರದಾಸರು
ಗಿಳಿಯು ಪಂಜರದೊಳಿಲ್ಲಾ
- ಪುರಂದರದಾಸರು
ಅಪಮಾನವಾದರೆ ಒಳ್ಳಿತು
- ಪುರಂದರದಾಸರು

ಲಾಲಿ
ಆಡಿಸಿದಳೆಶೋದಾ ಜಗದೋದ್ಧಾರನ
ಲಾಲಿಸಿದಳು ಮಗನ
ಜೋ ಜೋ ಶ್ರೀಕೃಷ್ಣ ಪರಮಾನಂದ
- ಪುರಂದರ

ಲಯವು ಸಂಗೀತದ ಮತ್ತೊಂದು ಮಗ್ಗುಲು. ವಿಳಂಬ, ಮಧ್ಯ, ದ್ರುತ, ಅತಿದ್ರುತ ಲಯಗಳು ಆಯಾಯ ವೇಗವನ್ನು ಸೂಚಿಸುವ ಕಾಲಮಾನಗಳು. ಲಯವೆಂದರೆ ವಿಶ್ರಾಂತಿ ಸ್ಥಾನವೆಂಬುದು ಶಾಸ್ತ್ರಕಾರರ ಮತ. ಚಪ್ಪಾಳೆ ತಟ್ಟುವ ಕ್ರಿಯೆಯಲ್ಲಿ ಎರಡು ಕರಾಸ್ಫಾಲನಗಳ ನಡುವಣ ವಿಶ್ರಾಂತಿ ಸ್ಥಾನವೇ ಇಲ್ಲಿ ಗಮನಿಸಬೇಕಾದುದು. ಈ ವಿಶ್ರಾಂತಿ ಸ್ಥಾನದ

ಕಾಲಪ್ರಮಾಣ ನಿಯತವಾಗಿ ಒಂದೇ ಸಮನಾಗಿದ್ದರೆ 'ಲಯ'ದಲ್ಲಿದೆ ಎನ್ನುತ್ತೇವೆ. ಗಡಿಯಾರದ ಟಿಕ್ ಟಿಕ್ ಸದ್ದು ಲಯಬದ್ಧವಾಗಿ ನಡೆಯುತ್ತದೆ. ನಮ್ಮ ದೇಹದ ಉಸಿರಾಟವೂ ಹೀಗೆ ಲಯಬದ್ಧವಾಗಿದೆ. 1, 2 - 1, 2 - 1, 2... ಎಂಬಂತೆ ಅದರ ಲಯ. ಇದನ್ನೇ 1, 2, 3, 4 - 1, 2, 3, 4... ಎಂದೂ ಆವರ್ತಿಸಬಹುದು. ಪ್ರಕೃತಿಯಲ್ಲಿ ಚತುರಸ್ರತೆಯ ಈ ಲಯವಿದೆ. ಗಾಳಿಯ ಸೊಯ್ಯು, ಜಲಪಾತದ ಆರ್ಭಟ, ಸಮುದ್ರದ ಭೋರ್ಗರೆತ ಚತುರಶ್ರ ಲಯದಲ್ಲಿವೆ. ಫ್ಯಾನಿನ ತಿರುಗುವಿಕೆ, ರೈಲುಗಾಡಿಯ ಓಡಾಟ, ಎನ್‌ಸಿಸಿ ಕವಾಯಿತಿನ ಹೆಜ್ಜೆ - ಇವೆಲ್ಲವೂ ಚತುರಶ್ರ ಗತಿಯಲ್ಲಿವೆ. ಸಂಗೀತದಲ್ಲಿ ಹೆಚ್ಚಿನ ರಚನೆಗಳು ಚತುರಶ್ರ ಗತಿಯಲ್ಲಿಯೇ ಇರುತ್ತವೆ. ಅದು ಮನಸ್ಸಿಗೆ ಹೆಚ್ಚಿನ ವಿಶ್ರಾಂತಿ ನೀಡುತ್ತದೆ. ಶ್ಲೋಕ - ಸ್ತೋತ್ರಗಳೆಲ್ಲವೂ ಹೆಚ್ಚಾಗಿ ಚತುರಸ್ರ ನಿಯಮದ ಅನುಷ್ಟುಪ್ ಛಂದಸ್ಸಿನಲ್ಲಿವೆ.

	1	2	3	4
1.	ಸರ್ವಮಂಗಳ	ಮಾಂಗಲ್ಯೇ	ಶಿವೇ ಸರ್ವಾರ್ಥ	ಸಾಧಿಕೇ
	ಶರಣ್ಯೇ	ತ್ರ್ಯಂಬಕೇ ದೇವಿ	ನಾರಾಯಣೀ	ನಮೋಸ್ತುತೇ
2.	ವಿಶ್ವಂ ವಿಷ್ಣುರ್	ವಷಟ್ಕಾರೋ	ಭೂತಭವ್ಯ	ಭವತ್ಪ್ರಭುಃ
3.	ಯಾದೇವೀ	ಸರ್ವಭೂತೇಷು	ವಿಷ್ಣುಮಾಯೇತಿ	ಶಬ್ದಿತಾ
	ನಮಸ್ತಸ್ಯೈ	ನಮಸ್ತಸ್ಯೈ	ನಮಸ್ತಸ್ಯೈ	ನಮೋನಮಃ
4.	ಓಂ ಭೂರ್ಭುವಸ್ವಃ	ತತ್ಸವಿತುರ್ವರೇಣ್ಯಂ	ಭರ್ಗೋ ದೇವಸ್ಯಧೀಮಹಿ	ಧಿಯೋಯೋನಃ ಪ್ರಚೋದಯಾತ್
5.	ಬಾಳೆಯ	ತೋಟದ	ಪಕ್ಕದ	ಕಾಡೊಳು
	ವಾಸಿಸು	ತಿದ್ದವು	ಮಂಗಗ	ಳೂ...
6.	Twinkle	Twinkle	Little	Star
	How	I wonder	what you	are

ಲಯದ ಗತಿಯನ್ನು ತೋರಿಸಲು 'ತಾಳ'ವಿದೆ. ತಾಳವನ್ನು ಹೆಚ್ಚಾಗಿ ಕೈ (ಹಸ್ತ)ಯಿಂದಲೇ ತೋರಿಸಲಾಗುತ್ತದೆ. ಹಸ್ತದ ಘಾತದಿಂದ ಅಥವಾ ವುಸಿಯಿಂದ ಅಥವಾ ಬೆರಳೆಣಿಕೆಯಿಂದ ತಾಳವನ್ನು ತೋರಿಸುವುದು ರೂಢಿ. ಒಂದೊಂದು ಎಣಿಕೆಗೆ 1, 2, 3, 4, 5, 6, 7, 8, 9 ಅಕ್ಷರಗಳನ್ನಿಟ್ಟು ಆವರ್ತವೊಂದನ್ನು ಲೆಕ್ಕಿಸಬಹುದು. ಒಂದು ಆವರ್ತದಲ್ಲಿ 8 ಎಣಿಕೆಗಳಿರಲಿ, ಪ್ರತಿಯೊಂದು ಎಣಿಕೆಗೆ ಬರುವ ಅಕ್ಷರಗಳ ಸಂಖ್ಯೆಯನ್ನು ಗಮನಿಸಿರಿ.

	1	2	3	4	5	6	7	8
1(ತ)	ಗ	ಗ	ಗ	ಗ	ಗ	ಗ	ಗ	ಗ
2(ತಕ)	ಗಣ	ಗಣ	ಗಣ	ಗಣ	ಗಣ	ಗಣ	ಗಣ	ಗಣ
3(ತಕಿಟ)	ಗಣಪ	ಗಣಪ	ಗಣಪ	ಗಣಪ	ಗಣಪ	ಗಣಪ	ಗಣಪ	ಗಣಪ
4(ತಕಧಿಮಿ)	ಗಣಪತಿ	..	..	..	..	..	..	..
5(ತಕತಕಿಟ)	ಗಜವದನ	..	..	..	..	..	..	..
6(ತಕಿಟ-ತಕಿಟ)	ಗಣಪ-ಗಣಪ	..	..	..	..	..	..	..
7(ತಕಿಟ-ತಕಧಿಮಿ)	ಗಣಪ-ಗಣಪತಿ..		..	..	..	..	..	..
8(ತಕಧಿಮಿ-ತಕಝುಣು)	ಗಣಪತಿ-ಗಣಪತಿ		..	..	..	..	..	..
9(ತಕಧಿಮಿ-ತಕ-ತಕಿಟ)	ಗಣಪತಿ-ಗಣ-ಗಣಪ		..	..	..	..	..	..

ಮೂರಕ್ಷರಗಳ ನಡೆಗೆ ತ್ರಿಶ್ರ; ನಾಲ್ಕಕ್ಷರಗಳ ನಡೆಗೆ ಚತುರಶ್ರ; ಐದಕ್ಷರಗಳ ನಡೆಗೆ ಖಂಡ; ಏಳಕ್ಷರಗಳ ನಡೆಗೆ ಮಿಶ್ರ ಮತ್ತು ಒಂಭತ್ತಕ್ಷರಗಳ ನಡೆಗೆ ಸಂಕೀರ್ಣ ನಡೆ ಎಂಬುದಾಗಿ ಕರೆಯುತ್ತಾರೆ.

ಉದಾ:-

ತ್ರಿಶ್ರ: ತಾರಕ್ಕ। ಬಿಂದಿಗೆ। ನಾನೀರಿ। ಗ್ಹೋಗುವೆ। ತಾರೇ। ಬಿಂದೀಗೆ। ಯಾ. ।।

ಚತುರಸ್ರ: ತಾ.ರಕ್ಕ। ಬಿಂ.ದಿಗೆ। ನಾ.ನೀರಿ। ಗ್ಹೋ.ಗುವೆ। ತಾ.ರೇ। ಬಿಂ.ದಿಗೆ। ಯಾ.. ।।

ಖಂಡ: ತಾ.ರ.ಕ್ಕ। ಬಿಂ.ದೀಗೆ। ನಾ.ನೀರಿ। ಗ್ಹೋ.ಗೂವೆ। ತಾ.ರೇ. । ಬಿಂ.ದೀಗೆ। ಯಾ... ।।

ಮಿಶ್ರ: ತಾ.ರ.ಕ್ಕಾ। ಬಿಂ.ದೀಗೆ. । ನಾ.ನೀರೀ। ಗ್ಹೋ.ಗೂವೇ। ತಾ.ರೇ.. । ಬಿಂ.ದೀಗೆ. । ಯಾ;;।

ಹೀಗೆ ಹಾಡುವುದು ಬೌದ್ಧಿಕ ಕಸರತ್ತೂ ಹೌದು, ಅದರೊಂದಿಗೆ ಕಸರತ್ತನ್ನು ಮಾಡುತ್ತೇನೆಂಬುದನ್ನು ಪ್ರಕಟಿಸದೆ, ಭಾವ/ಸಾಹಿತ್ಯ ಪ್ರಧಾನವಾಗಿ ಹಾಡಿದರೆ 8-9 ನಮೂನೆಯ ಭಾವ ಪ್ರಕಟಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಸಾಮಾನ್ಯನೋರ್ವನಿಗೆ ತ್ರಿಶ್ರ, ಚತುರಸ್ರ ನಡೆಯೆ ಹೆಚ್ಚು ಹಿಡಿಸುತ್ತದೆ ಎಂಬುದನ್ನು ಇಲ್ಲಿ ಮನಗಾಣಬೇಕು.

ತ್ರಿಶ್ರ: 1. ನನ್ನ । ಹರಣ । ನಿನಗೆ । ಶರಣ । ಸಕಲ । ಕಾರ್ಯ । ಕಾರಣಾ।

2. ಎಣ್ಣೆ ಹೊ । ಯ್ಯಮ್ಮ । ದೀಪಕ್ಕೆ । ಬತ್ತೀ । ಒಣಗುತ್ತಿದೆ । ಬೆಳಕು ।

3. ರಾಮ । ನಾಮ । ಪಾಯ । ಸಕ್ಕೆ । ಕೃಷ್ಣ । ನಾಮ । ಸಕ್ಕರೆ ।

4. ಮಲ್ಲೀಗೆ । ಹೂವಾಗಿ । ಚೆಲ್ಲೀತು । ನಿನ್ ಪರ್ಸೆ । (ಜನಪದ)

18679

ಚತುರಶ್ರ: 1. ತೋಪಿನ । ಮರದಲಿ । ಮೊಳಗಲು । ತೊಡಗಿವೆ । ಬೆಳವನ । ಹಕ್ಕಿ । ಸಖಿ
ಓಪನ । ಓಪಳ । ಕೂಗಿದು । ಜಗದಲಿ । ಹಳೆ । ಕಾಲದ । ಕೂಗೂ

2. ಮಡಿ ಮಡಿ । ಮಡಿ ಎಂದು । ಅಡಿಗಡಿ । ಗ್ಹಾರುವಿ

ಖಂಡ: 1. ಮುಂ.ಜಾವ । ದಲಿ. ಹಸಿರು । ಹು.ಲ್ಲು ಮಕ । ಮ.ಲ್ಲಿನಲಿ
ಪಾರಿಜಾ । ತವು ಹೂವ । ಸುರಿ.ಸಿದಂ । ತೇ... ॥

2. ಜಗವೆಲ್ಲ । ನಗುತಿರಲಿ । ಜಗದಳುವು ನನಗಿರಲಿ
ನಾ ನಕ್ಕು । ಜಗವಳಲು । ನೋಡಬಹುದೇ ॥

3. ನಗುವು ಸಹ । ಜದ ಧರ್ಮ । ನಗಿಸುವುದು । ಪರಧರ್ಮ
ನಗುವ ಕೇಳು । ತ ನಗುವು । ದತಿಶಯದ । ಧರ್ಮ

ಮಿಶ್ರ: 1. ಕದಳಿಯೊಳು ಮದ । ದಾನೆ ಹೊಕ್ಕಂ । ದದದಿ ಹೆಚ್ಚಿದ । ಚಾತುರಂಗದ

2. ಶಿವಾ ನಿನ್ನ । ಪಾದವ । ನಂಬಿದೆ । ಎನ್ನ
ಕಾಯುವ । ಭಾರವು । ನಿನ್ನದು । ಎಂದೇ

3. ಶ್ರೀ ರಾಮಚಂದ್ರ ಕೃಪಾಳು ಭಜಮನ ॥

ನಮ್ಮ ಕರ್ನಾಟಕ ಸಂಗೀತದಲ್ಲಿ ಸೂಳಾದಿ 35 ತಾಳಗಳು ಇವೆ. ಪ್ರಾಚೀನದಲ್ಲಿ ಅಷ್ಟೋತ್ತರ ಶತ (108) ತಾಳಗಳಿದ್ದವು. ಅವೆಲ್ಲವೂ ಬೌದ್ಧಿಕ ಲೆಕ್ಕಾಚಾರಗಳ ಎಣಿಕೆಗಳು. ಹಿಂದೂಸ್ತಾನೀ ಸಂಗೀತದಲ್ಲೂ ಅನೇಕ ಬೌದ್ಧಿಕ ಲೆಕ್ಕಾಚಾರಗಳಿದ್ದರೂ ಅವುಗಳ್ಯಾವುವೂ ಹೆಚ್ಚಾಗಿ ಹಾಡಲ್ಪಡುವುದಿಲ್ಲ. ಪ್ರಪಂಚದಲ್ಲಿರುವ ಎಲ್ಲಾ ಸಂಗೀತಗಾರರೂ, ಭಾರತೀಯ ಕರ್ನಾಟಕ ಸಂಗೀತದ permutation ಮತ್ತು combinationಗಳ ಅದ್ಭುತ ಲೆಕ್ಕಾಚಾರಗಳಿಂದ ಭಯ, ಆಶ್ಚರ್ಯ ಮತ್ತು ಉತ್ಸುಕತೆಯಿಂದ ನೋಡುತ್ತಿದ್ದಾರೆ; ಕಲಿಯುತ್ತಿದ್ದಾರೆ. ನಮ್ಮ ಮೃದಂಗ, ತಬಲಾ ವಾದಕರ ಈ ಲೆಕ್ಕಾಚಾರಗಳು ಸಂಗೀತದ ಲಯ ಮಾಧುರ್ಯದ ಮತ್ತು ಲಯ ವರಸೆಗಳ ದಿವ್ಯದರ್ಶನವನ್ನೇ ಮಾಡಿವೆ.

ಸಂಗೀತದಿಂದ ಆರೋಗ್ಯ ಚಿಕಿತ್ಸೆಗಾಗಿ ಹಲವು ಸಂಶೋಧನೆಗಳು, ಪ್ರಯತ್ನಗಳು ನಡೆದಿವೆ. ಸರ್ ಜಗದೀಶ್ ಚಂದ್ರ ಭೋಸ್‌ರವರು ಸಸ್ಯಗಳು ಸಂಗೀತಕ್ಕೆ ತೋರುವ ಸಂವೇದನೆಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದಾರೆ. ಅವಕ್ಕೂ ನೋವು, ನಲಿವು,

ಉದ್ವಿಗ್ನತೆ, ಒತ್ತಡ, ಆಯಾಸವಿರುವುದನ್ನು ಅವರು ದಾಖಲಿಸಿದ್ದಾರೆ. ಸಸ್ಯಗಳಲ್ಲಿ ಹೆಚ್ಚಿನ ಧಾನ್ಯವೃದ್ಧಿ, ಫಲವತ್ತತೆ, ಪಶುಗಳಲ್ಲಿ ಹೆಚ್ಚಿನ ಹಾಲು ವೃದ್ಧಿಯಾದುದರ ಬಗ್ಗೆ ಇತ್ತೀಚೆಗೆ ಹೆಚ್ಚಿನ ಸಂಶೋಧನೆಗಳು ನಡೆಯುತ್ತಿವೆ. ಮೈಸೂರಿನಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯುತ್ತಿರುವ ಸಂಗೀತ ಚಿಕಿತ್ಸೆ ಹಲವು ಸಂಗೀತಗಾರರ ಹಾಗೂ ಸಂಶೋಧಕರ ಗಮನ ಸೆಳೆದಿದೆ. ಬ್ಯಾಕ್ಟೀರಿಯಾದ ಕೋಶಭಿತ್ತಿಯನ್ನು ಭೇದಿಸಲು sonic wavesಗಳನ್ನು ಬಳಸಿಕೊಳ್ಳುವ ಆಧುನಿಕ ಜೈವಿಕ ತಂತ್ರಜ್ಞಾನ, ಹೊಸ ಹೊಸ ಸಂಶೋಧನೆಗಳನ್ನು ಹೊರತರುತ್ತಿದೆ. ಓಂಕಾರದ ಸಾಧನೆಯಿಂದ ಮನಸ್ಸನ್ನು, ದೇಹವನ್ನು ನಿಯಂತ್ರಿಸಿ ಏಕಾಗ್ರತೆಯನ್ನು ಸಾಧಿಸುವತ್ತ, ಅದರಿಂದ ಮೋಕ್ಷ ಸಾಕ್ಷಾತ್ಕಾರದ ಅಧ್ಯಾತ್ಮ ಪ್ರಯೋಗಗಳು, ಪಾಶ್ಚಾತ್ಯ - ಪೌರಾತ್ಯ ಹಾಗೂ ಭಾರತ ದೇಶದಲ್ಲಿ ಬಿರುಸಾಗಿ ನಡೆಯುತ್ತಿವೆ. ಸಂಗೀತದಿಂದ ಮಾನವೀಯತೆ ಸಂಪಾದಿಸುವ ಪ್ರಯತ್ನ ನಾವೆಲ್ಲಾ ಮಾಡಬಹುದು. ಅದಕ್ಕೆ ಬೇಕಾದುದು ಸಂಗೀತದ ಕಡೆಗೆ ಒಲವು. ಅದು ಭಾರತೀಯ ಸಂಗೀತದ ಸೊತ್ತು. ಅದಾದಾಗಲೇ ನಾವು ಉನ್ನತ ದಾರ್ಶನಿಕ ಮಟ್ಟಕ್ಕೆ ಏರುವುದು ಸಾಧ್ಯ.

ಎಂದರೋ ಮಹಾನುಭಾವುಲು ಅಂದರಿಕಿ ವಂದನಮು

[RIMSEಯಲ್ಲಿ (ಮೈಸೂರು) ನಡೆದ Orientation Courseನಲ್ಲಿ ಮಾಡಲಾದ ಸೆಮಿನಾರ್‌ನಲ್ಲಿ (ದಿನಾಂಕ: 4-3-2004 ರಂದು) ಪ್ರಸ್ತುತ ಪಡಿಸಲಾದ ಲೇಖನ/ಉಪನ್ಯಾಸ]

ಪ್ರಾಚಾರ್ಯರು, ಎಂ.ಜಿ.ಎಂ. ಕಾಲೇಜು, ಉಡುಪಿ - 576102

ನೃತ್ಯರೂಪಕಗಳಲ್ಲಿ ಪೂರಕ ಸಂಗೀತ

✍ ಉದ್ಯಾವರ ಮಾಧವ ಆಚಾರ್ಯ

ಸಂಗೀತ ಎಲ್ಲ ಕಲೆಗಳಂತೆ ಸಾಮೀಪ್ಯವನ್ನು ಬಯಸುತ್ತದೆ. ಆದರೆ ತುಸು ಭಿನ್ನ ಸ್ತರದಲ್ಲಿ. ಸಂಕೀರ್ಣ ಸ್ತರದಲ್ಲಿ. ಕಾರಣ, ಅದರ ಮೂಲದ್ರವ್ಯವಾದ 'ನಾದ' ತನ್ನ ನಡೆಯ ನಡೆದಾಟದಲ್ಲಿ ಹೆಜ್ಜೆಹೆಜ್ಜೆಗೆ ಸ್ಮೃತಿಯಾಗುತ್ತ, ಸವಿಯಾಗುತ್ತ, ಸರಸವಾಗುತ್ತ, ಸಮ್ಮೋಹನವಾಗುತ್ತ ಸರಸರನೆ ಸರಿಯುತ್ತ, ಸುಳಿಯಾಗುವ ಅದೃಶ್ಯ ಅನುಭವ ಮಾತ್ರ. ತಂಪುಗಾಳಿಯಂತೆ. ಸೊಂಪು ಕಂಪಿನಂತೆ. ನಿರಂತರವಾಗಿರುವ ಸಾವುನೋವು ಬದುಕಿನ ಸೊಗಕ್ಕೆ ನೆಲೆಯಾದಂತೆ. ಉಸಿರು ಉಡಿಯನ್ನು ಚಿಗುರಿಸಿದಂತೆ. ಆ ಕ್ಷಣದ ಉಸಿರು ಆ ಕ್ಷಣದ ಜೀವವಾದಂತೆ. ನಾದಕ್ಕೆ ನಡೆಯೆ ಜೀವ-ಜೀವನ. ಜೀವಸ್ವರಗಳ ಆವಾಹನೆ ಅನಿವಾರ್ಯ. ಸಾಹಿತ್ಯದಂತೆ ಈ ಆವಾಹನೆ ಸ್ಥಿರಬಿಂದುವಿನಲ್ಲಿ ನಿಲ್ಲಲಾರದು. ಸಾಹಿತ್ಯ ಹೀಗಲ್ಲ.

ಅಕ್ಷರದ ಒಳಗೆ ಹುದುಗಿರುವ ಸಾಹಿತ್ಯ ಅಕ್ಷರದೊಳಗೆ ಭದ್ರ. ಬರವಣಿಗೆ ಇಲ್ಲದ ಆಡು ಹಾಡುನುಡಿಯೂ ಒಂದು ಮಿತಿಯಲ್ಲಿ ಮನಸ್ಸಿನೊಳಗೆ ಭದ್ರ. ಭಿತ್ತಿಯಲ್ಲಿ ಬಳ್ಳಿಯಾಗುವ, ಬಣ್ಣವಾಗುವ, ಭಾವ ಲಹರಿಯಾಗುವ ಚಿತ್ರವೋ ಶಿಲ್ಪವೋ ಮನಸ್ಸಿನಲ್ಲಿಮರುಸ್ಥಾಪನೆಗೊಳ್ಳುವಷ್ಟು ಕಾಲದ ಹೊಡೆತಗಳ ನಡುವೆಯೂ ಶಾಶ್ವತ. ಛಂದಸ್ಸಿನ ಚೌಕಟ್ಟು ಸ್ಥಿರ. ಮಾತುಗಳು ಮಂತ್ರವಾಗಿ ಮತ್ತೆ ಮತ್ತೆ ಮರುಕಳಿಸುವುದು ಸಾಧ್ಯ. ಹೀಗೆ ತರ್ಪಣಕ್ಕಾದರೂ ಋಷಿಗಳು ಉಳಿದರು. ಅವರೊಂದಿಗೆ ಅವರ ಮಾತುಗಳೂ ಉಳಿದವು. ಕವಿಗಳು ಉಳಿದರು. ಅಂಕಿತಗಳು ಅನಾವರಣಗೊಂಡವು. ಕವಿಗಳ ಕಾಣ್ಕೆಗಳು ಉಳಿದವು. ಚೇಣಿನ ಚೀತ್ಕಾರ ಮರೆಯಾದರೂ ಶಿಲ್ಪಗಳು ಉಳಿದವು. ನಾದ ಅನುಸಂಧಾನ ಹೀಗೆ ಮರುಸ್ಥಾಪನೆಗೊಳ್ಳುವುದು ಅಸಾಧ್ಯ. ಅದು ಗಳಿಗೆ ಗಂಡಾಂತರದ ಗಾನ ವಿಹಾರ! ತೂಕಡಿಸಿದರೆ ತೂಕ ತಪ್ಪುವ ತಪಸ್ಸು.

ಹೌದು. ನಾದವನ್ನುಳಿಸುವ ಸಾಧನಗಳು ಇಂದು ಲಭ್ಯ. ಇನ್ನಷ್ಟು ಆವಿಷ್ಕಾರಗಳೂ ಸಾಧ್ಯ. ಧ್ವನಿಗ್ರಹಣ ಸುರುಳಿ-ತಟ್ಟೆಗಳೆಲ್ಲ ನಾದತರಂಗಿತತೆಯನ್ನು ತಮ್ಮೊಳಗಿರಿಸಿ ಮತ್ತೆ ಧ್ವನಿಸಬಲ್ಲವು. ನುಡಿತ ಬಡಿತಗಳ ಉಗ್ರಾಣವಾಗಬಲ್ಲವು. ಸ್ವರ ಸಂಗ್ರಹ ಸ್ಥಿರವಾಗಿ ಮರು ಆಸ್ವಾದನೆ ಸಾಧ್ಯ. ಆದರೆ ಸಂಗೀತ - ನೃತ್ಯ ಪ್ರದರ್ಶನ ಕಲೆಗಳ ಜೀವಜಿನುಗುವಿಕೆಗೆ, ಆಗ ಮಾತ್ರ ಸಮಾಗಮಗೊಳ್ಳುವ ಸಹೃದಯ ಸ್ಪಂದನಕ್ಕೆ, ಮಿಡಿತಕ್ಕೆ, ಮಿಲನಕ್ಕೆ ಈ ಸಾಧನಗಳು ಸಾಕ್ಷಿಯಾಗಲಾರವು. ನಿನ್ನೆಯ ರತಿ ನಿನ್ನೆಗೆ. ಅದನ್ನು ಪ್ರತಿ ಮಾಡಲಾಗದು. ದಿನಂಪ್ರತಿ ಪ್ರತಿಯಲ್ಲ. ಅದು ಸಾಲು ಸರತಿಯೂ ಅಲ್ಲ. ಆಸ್ವಾದನೆಯ ಒಂದು ಅವಸ್ಥೆ.

ಸೂರ್ಯಕಿರಣವನ್ನೆಲ್ಲ ತನ್ನೊಳಗೆ ಸೆರೆಹಿಡಿದು ಮಿನುಗಿ ಸಿಡಿದು ಸುಳಿಯೊಳಗೆ ಒಂದಾಗುವ ನೀರಗುಳ್ಳೆ. ನಾದ - ಅನುಭವದಲ್ಲಿ ಹದಗೊಂಡು ಮುದನೀಡುವ ಅಮೂರ್ತ ಅಭಿವ್ಯಕ್ತಿ. ಆ ಸಂಜೆ ರಾಗರತಿಯ ನಂಜೇರಿದ್ದು ಅಕ್ಷರದ ಆಕಾರ ಪಡೆದು ಕಾವ್ಯವಾಗಿ ಉಳಿಯಿತು - ಆ ರಾಗ ಅದೃಶ್ಯ ಅನುಭವವಾಗಿ ಅಳಿಯಿತು. ಸಂಗೀತ ಬಯಸುವ ಸಾಮೀಪ್ಯ ಸಂಗಾತಿಯೊಡನೆ ಸರಸದಂತೆ. ಆಕಸ್ಮಿಕವಾದಷ್ಟು ಆಪ್ಯಾಯಮಾನ. ಅಶಾಶ್ವತದಲ್ಲಿ ಶಾಶ್ವತವಾದುದನ್ನು ಪಡೆಯುವ ಸಹೃದಯತನಕ್ಕೆ ಸಂಗೀತದ ಆಸ್ವಾದನೆ ಇನ್ನೊಂದು ಹೆಸರು. ಅದು ಅಸ್ಥಿರ ಸಂಸಾರದ ಸ್ಥಿರ ಸಂಬಂಧ.

ಮೇಲಿನ ಮಾತುಗಳೆಲ್ಲ ಒಗಟಾಗಿ ತೋರಬಹುದು. ಸಂಗೀತ ನೃತ್ಯಗಳ ಬಗೆಗೆ ವಿವರಣಾತ್ಮಕವಾಗಿ ಬರೆಯುವುದೇ ಕೆಲವೊಮ್ಮೆ ವ್ಯರ್ಥಪ್ರಯತ್ನ. ನಾದತರಂಗಿತತೆ ಸೂತ್ರಗಳ ಹಿಡಿತಕ್ಕೆ ಸಿಗುವಂಥದಲ್ಲ. ಅದರ ನುಡಿತ ಸುಡಿಗಡಿ ಮೀರಿದ್ದು. ಅದು ನುಡಿತಕ್ಕಿಂತ ಹೆಚ್ಚು ಸ್ವರತುಡಿತ. ಭಾಷೆಯ ಬೇಲಿಗೆ ಬಾಗದೆ ಬೆಳೆಯುವುದೇ ಅದರ ಜಾಯಮಾನ. ಸಂಗೀತದ ಕುರಿತಾಗಿ ಯಾವುದೇ ಗ್ರಂಥದ ಬರವಣಿಗೆ ನಡೆದಿಲ್ಲ ಎಂದು ಊಹಿಸೋಣ. ಸಂಗೀತವೇ ಇಲ್ಲ ಎಂದಾಗುವುದಿಲ್ಲ. ಈಗ ಪ್ರಕಟಗೊಂಡದ್ದಕ್ಕಿಂತ ನೂರಾರು ಪಟ್ಟು ಸಂಗೀತ ಸಂಬಂಧಿ ಬರವಣಿಗೆಗಳು ಮೂಡಿ ಬಂದರೂ ಆ ಅಬ್ಬರದಲ್ಲಿ ಸಂಗೀತ ಕಳೆದು ಹೋಗಲಾರದು. ವಿಶ್ವವೆಂಬ ಗರ್ಭಗುಡಿಯಲ್ಲಿ ಅದು ಮೂಲಬಿಂಬ. ಅದು ಮೂಲಬಿಂಬದ ವಿಶ್ವರೂಪ. 'ನೃತ್ಯರೂಪಕಗಳಲ್ಲಿ ಪೂರಕವಾಗಿ ಸಂಗೀತದ ಬಳಕೆ' ಎಂಬ ವಿಷಯವನ್ನು ನನಗೆ ನೀಡಿದ್ದರಿಂದ ಮತ್ತು ಸಂಗೀತದ ಮೂಲಜ್ಞಾನ, ಪರಿಣತಿ, ಪಾಂಡಿತ್ಯ, ಪ್ರತಿಭೆ ಪ್ರವೇಶ ನನಗಿಲ್ಲದಿರುವುದರಿಂದ ನೆಲಗಟ್ಟಿಲ್ಲದ ಮೇಲಂತಸ್ತಿನ ಮೇಲೇರಿ ಮಾಡನ್ನು ಮುಟ್ಟುವ ಹವಣಿಕೆ ನನ್ನದು. ಆದುದರಿಂದಲೆ 'ಸಾಮೀಪ್ಯ' ಎಂಬುದನ್ನು ಪ್ರಾರಂಭಿಕ ಪರಿಕಲ್ಪನೆಯಾಗಿಸಿ ವಿಷಯ ಪ್ರವೇಶ ಮಾಡಬೇಕಾಯಿತು. ನೃತ್ಯರೂಪಕಗಳಲ್ಲಿ ಸಂಗೀತ ಪೂರಕವಾಗುವುದೆಂದರೆ 'ಸಾಮೀಪ್ಯ' ಸಾಯುಜ್ಯಗೊಳ್ಳುವುದು. ನೃತ್ಯ ಮತ್ತು ಸಂಗೀತ ಬೇರೆ ಬೇರೆಯಾಗದೆ ಒಂದಾಗಿ ಅಂದಗೊಳ್ಳುವುದು. ಹಿಂದಾಗಿ ಮುಂದಾಗಿ ಆಗಿ ಒಂದಾಗಿ ಒಂದಕ್ಕೊಂದು ಬಾಗುವುದು ಮತ್ತು ಒಂದರೊಳಗೆ ಇನ್ನೊಂದು ಮಾಗುವುದು. ಹಿನ್ನೆಲೆ ಮುನ್ನೆಲೆಯಲ್ಲಿ ನೆಲೆ ಕಾಣುವುದು. ಬಳಕೆದಾರನಿಗಾಗಿ ಬಳಕೆದಾರನಲ್ಲದವ ಸಗಟು ವ್ಯಾಪಾರ ಮಾಡುವಂತೆ ನಾನೀ ಲೇಖನ ಬರೆಯುತ್ತಿರುವುದರಿಂದ ಒಗಟಾಗದೆ ಇನ್ನೇನಾದೀತು?

ಆದುದರಿಂದಲೆ ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಾದುದು ಈ ಪ್ರಶ್ನೆಯನ್ನು - ಯಾರಿಗಾಗಿ ಈ ಲೇಖನ? ನೃತ್ಯಗುರುಗಳು, ನೃತ್ಯ ವಿದ್ಯಾಕಾಂಕ್ಷಿಗಳು ಮತ್ತು ನೃತ್ಯ ಪ್ರೇಕ್ಷಕರು ಸಾಕಷ್ಟು ಸಂಖ್ಯೆಯಲ್ಲಿರುವ ಇಂದಿನ ದಿನಗಳಲ್ಲಿ ಇದೆಂಥ ಪ್ರಶ್ನೆ ಎಂದೆನ್ನಿಸಬಹುದು. ನನ್ನೀ ಲೇಖನ ಯಾರನ್ನೂ ಸ್ಪರ್ಶಿಸದೆ ಹೋಗಬಹುದು ಎಂಬ ಆತಂಕವಲ್ಲ, ಅನುಮಾನ ನನ್ನಲ್ಲಿರುವುದರಿಂದಲೆ ಈ ಪ್ರಶ್ನೆಯನ್ನು ಮುಂದಿರಿಸಿ ನನ್ನ ವಿಷಯವನ್ನು ವಿಸ್ತರಿಸಬೇಕಾಗಿದೆ. ಒಂದು ನೃತ್ಯ ಪ್ರಸ್ತುತಿಯೂ ಸಂಗೀತ ಪ್ರಸ್ತುತಿ ಪ್ರತಿ ಹಂತದಲ್ಲಿ ಹೇಗೆ ಹೊಸ ಸೃಷ್ಟಿಯೋ

ಸಹೃದಯ ಸಾಮೀಪ್ಯ ಸಾಂಗತ್ಯವನ್ನು ಬಯಸುತ್ತದೋ ಅಷ್ಟೇ ಮತ್ತು ಕೆಲವು ಸಂದರ್ಭಗಳಲ್ಲಿ ಅದಕ್ಕಿಂತ ಅಧಿಕ ಪ್ರಮಾಣದಲ್ಲಿ 'ನೃತ್ಯರೂಪಕವೂ ಸೃಷ್ಟಿವಿಕಾಸದ ಒಂದು ರಚನೆ ಎಂಬುದಾಗಿ ಯಾರೆಲ್ಲ ತಿಳಿಯುತ್ತಾರೋ ಅವರೆಲ್ಲ ನನ್ನೀ ಲೇಖನದ ಒಂದೆರಡು ವಿಚಾರಗಳಿಗಾದರೂ ಸ್ಪಂದಿಸಿಯಾರು ಎಂಬುದೇ ಯಾರಿಗಾಗಿ ಎಂಬ ಪ್ರಶ್ನೆಗೆ ಉತ್ತರ. ಆರೋಪವಲ್ಲ, ಹೊಸ ಹೊಸ ನೃತ್ಯರೂಪಕ ಸಂಯೋಜನೆ ಕೈಗೆತ್ತಿಕೊಳ್ಳುವ ಮನಸುಗಳು-ಕನಸುಗಳು ಕ್ಷೀಣಿಸುತ್ತಿರುವ ಪರಿಸ್ಥಿತಿ ಇಂದಿನದು. ಹೀಗಾಗಿ ಈ ಪ್ರಶ್ನೆ ಅನಿವಾರ್ಯವಾಯಿತು. ನೃತ್ಯವು ರೂಪಕವಾಗಿ ಸಂಗೀತವೂ ರೂಪಕವಾಗಿ ಈ ಎರಡು ರೂಪಕಗಳು ಒಂದು ರಂಗರೂಪಕವಾಗಿ ರೂಪಿಸುವವರಿಗೆ ಮತ್ತು ಅಂಥ ರೂಪಕಗಳಿಗೆ ಸಾಮೀಪ್ಯಸ್ಥಿರತೆ ನೀಡುವ ಸಹೃದಯರಿಗೆ ಒಂದೆರಡು ಒಳನೋಟಗಳನ್ನಷ್ಟೆ ಈ ಲೇಖನ ನೀಡೀತು! ಈ ಒಳನೋಟ ಯಾ ನಿಲುವು ನೆಲೆಗಳು ನೃತ್ಯ-ಸಂಗೀತ ಪರಿಣತರ ಪಾಕಕ್ರಿಯೆಯಿಂದ ಹೊಸರುಚಿಗೆ ಬಾಣಲೆಯಾದೀತು ಎಂಬುದಷ್ಟೆ ಈ ಹಂತದಲ್ಲಿ ಲೇಖಕನ ಆಶಯ. 'ನೃತ್ಯರೂಪಕಗಳಲ್ಲಿ ಪೂರಕವಾಗಿ ಸಂಗೀತದ ಬಳಕೆ' ಎಂಬ ಸೂಚಿತ ವಿಷಯದ ಹಳಿಯನ್ನು ಬಿಡದೆ ಒಟ್ಟು ರಂಗರೂಪಕದ ವ್ಯಾಪಕ ಸಾಧ್ಯತೆಗಳನ್ನು ವಿಶ್ಲೇಷಿಸುವುದೂ ಈ ಆಶಯದ ಒಂದು ಭಾಗವೆ.

ಎಂದು ಪ್ರಾರಂಭಗೊಂಡಿತೋ, ಪ್ರಾಯಶಃ ಪುರಾಣಾಭಿವ್ಯಕ್ತಿಯ ಅತಿಶಯಗಳಿಂದಿರ ಬಹುದು - ಪೌರಾಣಿಕ ಸಾಹಿತ್ಯ ಸಂದರ್ಭಗಳು ಭಾರತೀಯ ನೃತ್ಯ ಸಂಗತಿಗಳ ಮೈ ತುಂಬತೊಡಗಿದ್ದು. ಅವಕ್ಕೆ ಆಯಾಮ, ಆಕಾರ, ಆಧಾರ, ನೀಡತೊಡಗಿದ್ದು. ಇಲ್ಲಿ ಶ್ರೀಕೃಷ್ಣನ ಲೀಲಾವಿನೋದದ್ದೆ ಮೇಲುಗೈ. ಆದಿಶಕ್ತಿ, ಆದಿಮಾಯೆ, ನಟರಾಜ, ನೃತ್ಯಗಣಪತಿಯ ಮಹಿಮೆಗಳೆಲ್ಲ ನೃತ್ಯ-ಸಂಗೀತ ವಿಕಾಸಕ್ಕೆ ನೀರೆರೆದರೂ ಕೃಷ್ಣಲೀಲೆ ರಾಸ ಸರಸ ಒಂದು ಪ್ರತ್ಯೇಕ ಶೈಲಿಯೋ ಎಂಬಂತೆ ಸ್ಥಾಪಿತವಾದುದು ಸತ್ಯ. ಈ ಸತ್ಯದ ಸುಳಿಯಲ್ಲಿರುವ ಭಾರತೀಯ ಸಂಗೀತ ನೃತ್ಯಗಳ ಒಳಸುಳಿದಾಟದ ಹೊಸ ಹುಡುಕಾಟಕ್ಕೆ ಹಿನ್ನೆಲೆ ಸಂಗೀತ ಮುನ್ನೆಲೆಯಲ್ಲಿ ಮಿಡಿಯಬೇಕಾದ ಅನಿವಾರ್ಯತೆಯನ್ನು ಪೌರಾಣಿಕ ಸಾಹಿತ್ಯ ಸಂದರ್ಭಗಳು ಮರೆಸಿದರೆ, ತಗ್ಗಿಸಿದರೆ ನಾದನಾಟ್ಯದ ನಡುವೆ ಸಾಂಗತ್ಯ ಅಸಾಧ್ಯ.

ಹೇಳಿದ್ದನ್ನೆ ಹೇಳುತ್ತಿದ್ದಾನೆ ಎಂದು ನಿಮಗನ್ನಿಸುತ್ತಿದೆಯಾದರೂ ಹೇಳುತ್ತಿದ್ದೇನೆ - ನಾದನೃತ್ಯದ ಯಾವತ್ತು ಪರಿಣತಿ ನನಗಿಲ್ಲ. ಆದ್ದರಿಂದ ನನ್ನೀ ಭಾವೋದ್ಗಾರಗಳಿಗೆ ವ್ಯಾಕರಣ ಅಸಾಧ್ಯ. ಆದರೂ ನನ್ನ ಮುಂದಿರುವ ಪ್ರಶ್ನೆ ಇದು - ಹಿನ್ನೆಲೆ ಒದಗಿಸುವ ಪೌರಾಣಿಕ ಪಾತಳಿ ಕೇವಲ ಪಾತ್ರ ಪರಿಚಯಕ್ಕೆ ಪ್ರಸನ್ನಗೊಳ್ಳದೆ ಅದನ್ನು ಮೀರುವ ಪ್ರಯತ್ನವಾಗುವುದು ಹೇಗೆ? ನಾದ ನಡೆಯಾಗುವುದು ಹೇಗೆ? ನರ್ತನ ನಾಟಕವಾಗುವುದೇ ಅಂತಿಮ ಗುರಿಯೇ? ಇವೆಲ್ಲ ಕೇವಲ ಪ್ರಶ್ನೆಗಳಲ್ಲ. ನನ್ನ ಮುಂದಿನ ವಿಶ್ಲೇಷಣೆಗಳಿಗೆ ಅಸ್ಪಷ್ಟ ಪ್ರಮೇಯಗಳೂ ಹೌದು. ನಾದನೃತ್ಯದ ನಡುವೆ ನಾಟಕ ನಿರ್ಮಾಣಗೊಳ್ಳುವ ಸೂಕ್ಷ್ಮಗಳೆಲ್ಲ ಈ ಪ್ರಮೇಯಗಳ ಭಾಗವೆ.

ಹೌದಲ್ಲ. ನರ್ತನ ನಾಟಕವಾಗುತ್ತ ಬಂತು ಅನಾದಿಯಿಂದ. ಈ ಹಾದಿಯಲ್ಲಿ ಬೇರೆ ಬೇರೆ ಕಾರಣಗಳಿಂದ ಬೇರೆ ಬೇರೆ ಸಂದರ್ಭಗಳಲ್ಲಿ ರೂಪುಗೊಂಡ ಗಮಕಗಳೆಲ್ಲ ನೃತ್ಯ ನಿಯಮಗಳಿಗೆ ನುರಿತ ನುಡಿಗಳಾಗತೊಡಗಿದವು. ನಮ್ಮಲ್ಲಿ ಅತಿಮಾನುಷ ಆರಾಧನಾ ಶಕ್ತಿಗಳನ್ನು ತನ್ನಲ್ಲಿ ಆವಾಹಿಸಿ ಆವೇಶಕ್ಕೊಳಗಾದ 'ಪಾತ್ರಿ' ಆ ಶಕ್ತಿಯ ಅನುಗ್ರಹ ಆಣತಿಗಳನ್ನು ಒಂದೇ ಧಾಟಿಯಲ್ಲಿ ನುಡಿಕಟ್ಟಾಗಿಸಿ ನುಡಿಯುವಂತೆ, ಮಂತ್ರಗಳೆಲ್ಲ ಯಾಂತ್ರಿಕ ಪುರಸ್ಸರಕ್ಕೆ (ಪುನರುಚ್ಚಾರಣೆಗೆ) ಒಳಗಾದಂತೆ ಹಿನ್ನೆಲೆ ಗಾಯನ ನುರಿತ ನುಡಿಗಳಾಗ ತೊಡಗಿದವು. ಈ ಯಾಂತ್ರಿಕತೆ ನೃತ್ಯದ ಸುವ್ಯವಸ್ಥೆಗೆ ಅನುಕೂಲ. ಅಗತ್ಯವೂ ಹೌದು. ಆದರೆ ನುರಿತ ನುಡಿಗಳಾದಾಗ ಆ ಸಂಗೀತಕ್ಕೆ ಒದಗಿ ಬರುವ ಸ್ಪಂತಿಕೆ ಮುಂದಿರುವ ನೃತ್ಯಕ್ಕೆ 'ಮಾತೃಕೆ' ಮಾತ್ರ ಆದರೆ ಸಾಲದು ಎಂಬ ಎಚ್ಚರ ನೃತ್ಯದ ಜೀವಂತಿಕೆಗೆ ಬಹಳ ಅಗತ್ಯ. 'ಮಾತೃಕೆ' ಮಾತ್ರ ಆಗುವುದೆಂದರೆ ಖಚಿತ, ನಿರ್ದಿಷ್ಟ ಲೆಕ್ಕಾಚಾರಕ್ಕೆ ನಾದನೃತ್ಯಗಳೆರಡೂ ತಮ್ಮನ್ನು ಕಟ್ಟಿಹಾಕಿಕೊಳ್ಳುವುದು. ಶಾಸ್ತ್ರವಿಲ್ಲದೆ ಕಲೆ ಇಲ್ಲ. ನಿಜ. ಆದರೆ ಶಾಸ್ತ್ರದ ಎಲ್ಲವೂ ರಂಗದ ಮೇಲೆ ನಡೆಯುವ ಕಲೆಯ ಆವಿಷ್ಕಾರಕ್ಕೆ ಪೂರಕವಾಗಲಾರವು. ತಾಯಿಯ ಹಿಡಿತದಲ್ಲಿಯೆ ಮಗು ಜಿಗಿಯುವ, ಹಾರುವ, ಮತ್ತೆ ಮತ್ತೆ ಅವಳ ಮಡಿಲನ್ನೆ ತುಳಿಯುತ್ತ ನಗುವ ಮತ್ತು ಅಳುವ ಪ್ರಕ್ರಿಯೆಯಂತಿರುತ್ತದೆ ಈ ಶಾಸ್ತ್ರ ಮತ್ತು ರಂಗಪಾತ್ರದ ಸಂಬಂಧ. ಕೃಷಿ ಪಾಂಡಿತ್ಯಕ್ಕಿಂತ ಹೆಚ್ಚಿನ ಹೊಲದೊಡನೆ ಒಡನಾಟ ಹುಲುಸು ಬೆಳೆಗೆ ಕಾರಣವಾಗುವಂತೆ ತುಸು ಭಾವನಾತ್ಮಕ ಬೆಸುಗೆ ಈ ಸಂಬಂಧಕ್ಕೆ ಒಂದು ಆಕಾರವನ್ನು ನೀಡುತ್ತದೆ. ಧ್ವನಿಮುದ್ರಿಕೆಯ ಹಿನ್ನೆಲೆಯಲ್ಲಂತೂ ಇಂಥ ಬೆಸುಗೆಯನ್ನು ಊಹಿಸುವುದೂ ಸಾಧ್ಯವಿಲ್ಲ. ಕೃತಕ ಗರ್ಭಧಾರಣೆಯಲ್ಲಿ ರಾಗರತಿಗೆಲ್ಲಿ ಸ್ಥಾನ?

ಮುನ್ನೆಲೆಗೆ ಹಿನ್ನೆಲೆ ಎಂದರೆ ದರ್ಶನಪಾತ್ರಿಯ ಕೆಯಲ್ಲಿರುವ ಹಿಂಗಾರದ ಹೂವು ಇನ್ನಷ್ಟು ಬಿರಿದಂತೆ. ಇನ್ನಷ್ಟು ಹಿಗ್ಗಿದಂತೆ. ಇನ್ನಷ್ಟು ಆವೇಶಕ್ಕೊಳಗಾದಂತೆ. ಆವೇಶಕ್ಕೊಳಗಾದವನ ಕಾಯವನ್ನು ಅಂದಗೊಳಿಸಿದಂತೆ. ಮತ್ತು ಅವನ ಎದೆಗಂಟೆ ಅವನೊಳಗೆ ಒಂದಾದಂತೆ. ಬಾನು ಮೋಡ ಒಟ್ಟು ಚಲಿಸಿದಂತೆ. ನದಿಯಿಂದ ದಡಗಳಿಗೆ ಮತ್ತು ದಡಗಳಿಂದ ನದಿಗೆ ಒಂದು ಆಕಾರ ಒದಗಿ ಬಂದಂತೆ. ಆಭರಣಕ್ಕೆ ಆಕಾರ ಇದೆ. ಆದರೆ ಅಂದಗೊಳ್ಳುವುದು ಇನ್ನೊಂದು 'ಅಂದ'ದೊಡನೆ ಅದು ಆತ್ಮೀಯಗೊಂಡಾಗ. ಚೆಲುವು ಒಲವು ಒಟ್ಟಾದಾಗ. ಇದೇ ರೀತಿ ಹಿನ್ನೆಲೆ ಆಭರಣವೂ ಆಗಬೇಕು. ತಾನೂ ಅಂದಗೊಳ್ಳುತ್ತ ಮುನ್ನೆಲೆಯನ್ನು ಅಂದಗೊಳಿಸಬೇಕು. ಸೀಮಂತದ ಬಸುರಿಯ ಮುಡಿಗೆ ಮಲ್ಲಿಗೆ ಮುಡಿಸುವ ಕೈಗಳು ಬಯಕೆಯ ಬಳ್ಳಿಯಾಗಿ ಮದುಮಗಳೊಡನೆ ಬೆರೆತಂತೆ ಬೆರೆಯಬೇಕು. ತಾನೆ ಅಂದಣವಾಗಿ ಮುನ್ನೆಲೆಗೆ ಪಲ್ಲಕ್ಕಿಯಾಗಬೇಕು.

ಮುನ್ನೆಲೆಯ ನೃತ್ಯವನ್ನಷ್ಟೆ ಒಂದು ಪ್ರಧಾನ ಆಕರ್ಷಣೆಯಾಗಿ ಮತ್ತು ಈ ಆಕರ್ಷಣೆಗೆ ಪೂರಕವಾದ ಸಂಗೀತದ 'ಬಗೆ'ಯನ್ನಷ್ಟೆ ಪ್ರಸ್ತಾಪಿಸಿರುವುದು ಪ್ರಾರಂಭಿಕ ನೆಲೆಯನ್ನು ಸ್ಪಷ್ಟಗೊಳಿಸಲೆಂದೇ ವಿನಹ ಅವುಗಳ ತಾಂತ್ರಿಕ ಸಂಬಂಧಗಳನ್ನು ವಿವೇಚಿಸಲೆಂದಲ್ಲ. ನೃತ್ಯ

ನೃತ್ತದ ವಿವಿಧ ಮಜಲುಗಳು, ಅವುಗಳಿಗೆ ಆಧಾರವನ್ನೊದಗಿಸುವ ರಾಗ ತಾಳ ಬಂಧ ಬಳುಕುಗಳು ಮತ್ತು ಕುಣಿತ ನುಡಿತಗಳ ನಡುವಿರಬೇಕಾದ ಆತ್ಮೀಯ ಒಡಂಬಡಿಕೆಗಳು - ಇವುಗಳೆಲ್ಲದರ ಬಗೆಗೆ ಅರಿವು ಅಗತ್ಯ. ಈ ಅರಿವಿಲ್ಲದಿದ್ದರೆ ಸಂಯೋಜನೆ ಅಸಾಧ್ಯ. ಸಂಯೋಜನೆಯನ್ನು ಮೀರಿ ಕೆಲವು ವಿಚಾರಗಳ ಹುಡುಕಾಟ ಹಿನ್ನೆಲೆ ಮುನ್ನಲೆಗಳ ನಡುವಿನ ಭಾವಸ್ಪಂದಕ್ಕೆ ಅಗತ್ಯ ಎಂಬುದನ್ನು ಮನಗಾಣುವುದಷ್ಟೆ ಈ ಲೇಖನದ ನಿರ್ಮಿತಿ ಮತ್ತು ಮಿತಿ. ಒಂದು ಸರಳ ಉದಾಹರಣೆಯನ್ನು ಪರಿಶೀಲಿಸಿದರೆ ದಾರಿ ಸುಗಮಗೊಳ್ಳುತ್ತದೆ. ದಾಸವರೇಣ್ಯರ ಪ್ರಸಿದ್ಧ ಕೀರ್ತನೆ "ಆಡಿಸಿದಳೆಶೋದೆ..." ಕೃತಿ ಆಧ್ಯಾತ್ಮಿಕ ಅನುಭವದಲ್ಲಿ ಮತ್ತು ಕಲಾತ್ಮಕ ಅಭಿವ್ಯಕ್ತಿಯಲ್ಲಿ ಸಾಕಷ್ಟು ಅವಕಾಶ, ಆಕಾರ, ಆಳ ಹೊಂದಿದ ಕೃತಿ. ಈ ಕೃತಿ ಇಲ್ಲಿ ಉದಾಹರಣೆ ಮಾತ್ರ. ಇಂಥದೇ ಯಾವುದೇ ಕೃತಿಯನ್ನು 'ಪ್ರದರ್ಶನ'ದ - ಹಾಡುವುದನ್ನೂ ಒಂದು ಅದೃಶ್ಯ ಪ್ರದರ್ಶನ ಭಾವವೆಂದೆಣಿಸಿ - ರೂಪಕ್ಕೆ ರೂಪಾಂತರಗೊಳಿಸುವಾಗ ಆ ಕೃತಿಯ ಬೇರೆ ಬೇರೆ ಭಾಗಗಳು ಬೇರೆ ಬೇರೆ 'ನಡೆ' (ಚಲನೆ, ಅಭಿನಯ, ನಿಲುವು, ನಿಲುಗಡೆ, ನೆಲೆಗಳನ್ನು) ನೀಡುತ್ತವೆ ಎಂಬುದು ಒಂದು ಉತ್ಸಾಹವಾಗಿ ಹೊರಹೊಮ್ಮಬೇಕಾದರೆ ಹಿನ್ನೆಲೆಯ 'ಹಾಡು' ಮುನ್ನೆಲೆಯ 'ಮಾಡು' ಒಂದು 'ಗೂಡಾ'ಗಲೇ ಬೇಕಾಗುತ್ತದೆ. ಚಾಲ್ತಿಯ ಕೇಳ್ಮೆಯಲ್ಲಿರುವ ಅಥವಾ ವಾಗ್ಗೇಯ ನಿಯಮ ನಿಬಂಧನೆಗಳಿಗನುಗುಣವಾಗಿರುವ ರಾಗದ ಆಯ್ಕೆ, ಸಿದ್ಧಿ ಪ್ರಸಿದ್ಧಿಗಳ ಫಲಿತಾಂಶವಾಗಿ ಹಿಗ್ಗುವ ಸಂಗತಿಗಳು, ಪಲುಕುಗಳ ಬಳಕೆ ಇವುಗಳನ್ನಷ್ಟೆ ಅವಲಂಬಿಸಿ ನೃತ್ಯ ಸಂಗತಿಗಳು ಸಂಯೋಜನೆಗೊಳ್ಳುವುದು ರೂಢಿಯಲ್ಲಿರುವ ಕ್ರಮ. ಮತ್ತು ನೃತ್ಯಗಾರನಿಗೆ ಪ್ರಾಪ್ತವಾಗಿರುವ ಗುರುಶೈಲಿಯ ಛಾಪು ಪುನರ್‌ಮುದ್ರಣಗೊಳ್ಳುವುದೂ 'ಪರಂಪರೆ' ಎಂಬ ಮುದ್ರೆಯಡಿ ಬಟವಾಡೆಯಾಗುವುದೂ ಕ್ರಮ. ಅಕ್ರಮವಲ್ಲ. ಖಂಡಿತಕ್ಕೂ ಸಕ್ರಮ. ಈ ಸಕ್ರಮವನ್ನು ಹೊಸ ಹೊಳಪಿನಿಂದ ಒಬ್ಬ ನೃತ್ಯಗಾರ ಬೆಳಗಿಸುತ್ತಿದ್ದಾನೆ ಎಂದೆನ್ನಿಸಬೇಕಾದರೆ ಅದೇ ರಾಗದ ಅದೇ ಸಂಗತಿಗಳ ಹಾಡಿನ ಜಾಡು ನಿತ್ಯದಾಂಪತ್ಯದಲ್ಲಿ ನೂತನ ಭಾವ ಸುಳಿದಂತೆ ನಳನಳಿಸಲೇ ಬೇಕಾಗುತ್ತದೆ.

ಇದು ಆಕಸ್ಮಿಕವಲ್ಲ. ಅನಿರೀಕ್ಷಿತ ಪವಾಡವಲ್ಲ. ಸಿದ್ಧತೆಯ ಮತ್ತು ಪರಸ್ಪರ ಬದ್ಧತೆಯ ಫಲಿತಾಂಶ. ರಾಗಕ್ಕೊಂದು ಜೀವಸ್ವರವಿದ್ದಂತೆ ನೃತ್ಯಕ್ಕೊಂದು ಜೀವಪದಾಘಾತವಿದ್ದಂತೆ ರಾಗ ನೃತ್ಯ ಸಂಗಮ ಸರಿಗಮದಲ್ಲಿ ಜೀವಮಿಡಿತ ಇರಲೇಬೇಕಾಗುತ್ತದೆ. ಯಾರ ಮೇಲೂ ದೂರಲ್ಲ. ಅಪವಾದವಲ್ಲ. ಪರಿಪೂರ್ಣ ಜ್ಞಾನದಿಂದ ಹೇಳುವ ತೀರ್ಮಾನವಲ್ಲ. ರಾಗ ಮತ್ತು ರಂಗ ಅಂಗಾಂಗ ಸಂಬಂಧವಿಲ್ಲದೆ ಭಾವಭಂಗಕ್ಕೆಡೆ ಮಾಡಿಕೊಡುವ ನೃತ್ಯಾಭಿವ್ಯಕ್ತಿಗಳೇ 'ಶಾಸ್ತ್ರೀಯ' ಎಂಬ ರಹದಾರಿಯ ಬಲದಿಂದ ವಿಶ್ವಸಂಚಾರಿಯಾಗಿವೆ. ಆಗುತ್ತಿವೆ. "ಜಗದೋದ್ಧಾರನ..." ಎಂಬೀ ಪ್ರಸಿದ್ಧ ಕೀರ್ತನೆ ಪದಾಭಿನಯದ ಸವೆತದಿಂದ ಯಾ ಬಿಗಿಯಿಂದ ಹೊರಹೊಮ್ಮಲು ಹಾಡುಗಾರಿಕೆ ಏನು ಮಾಡಬಲ್ಲುದು, ಮಾಡಬೇಕು ಎಂಬ ಚಿಂತನೆಯ ಅಗತ್ಯವಿದೆ ಎಂದು ಸೂಚಿಸಲಷ್ಟೆ ಈ ಉದಾಹರಣೆಯ ಪ್ರಸ್ತಾಪ. ನೃತ್ಯರೂಪಕ ಚೇತನಮಯವಾಗುವುದೆಂದರೆ

ಮತ್ತೇನಲ್ಲ - ಹಂತ ಹಂತದ ನೃತ್ಯಬಂಧಗಳೆಲ್ಲ ಸಿದ್ಧ ಹಾಡುಗಾರಿಕೆಯ ಯಾಂತ್ರಿಕತೆಯಿಂದ ಬಿಡುಗಡೆಗೊಳ್ಳುತ್ತ ಹಾಡು ನೃತ್ಯದ ಗತಿಯನ್ನು ಇನ್ನಷ್ಟು ಕಲಾತ್ಮಕಗೊಳಿಸುವುದು. ಲಾಲಿತ್ಯಗೊಳಿಸುವುದು.

ಏಕವ್ಯಕ್ತಿ ಅಥವಾ ಬಿಡಿಬಿಡಿ ನೃತ್ಯಪ್ರಸ್ತುತಿಗಳ ಜೀವಂತಿಕೆಗೆ ಹಿನ್ನೆಲೆ ಸಂಗೀತ ಪ್ರತ್ಯೇಕ ಹಳಿಯಲ್ಲಿ ಸಾಗದಿರಬೇಕಾದ್ದು ಅತಿ ಅಗತ್ಯ. ಈ ಅರಿವೇ ನೃತ್ಯರೂಪಕಕ್ಕೂ ಅಗತ್ಯ. ಕಾರಣ ಬಿಡಿಬಿಡಿ ನೃತ್ಯಪ್ರಸ್ತುತಿಗಳಲ್ಲಿ ಸಂಗೀತ ಯಾ ನಾದವೈಭವದಿಂದ ಅಭಿವ್ಯಕ್ತವಾಗುವ 'ರೂಪಕ'ವೇ (ಸಾಹಿತ್ಯ ದೃಶ್ಯಗೊಳ್ಳುತ್ತ ಅರ್ಥಾಲಂಕಾರಗಳನ್ನು ಪಡೆಯುವ ಕಲಾತ್ಮಕತೆಯೇ) ನೃತ್ಯರೂಪಕದ ಮೂಲಾಕ್ಷರಗಳು. ಇಲ್ಲಿ ಏನೂ ವ್ಯತ್ಯಾಸವಿಲ್ಲ. ಬಿಡಿ ನೃತ್ಯವಾದರೂ ಅಷ್ಟೆ ನೃತ್ಯರೂಪಕವಾದರೂ ಅಷ್ಟೆ - ಸಂಗೀತ ತನ್ನ ಪ್ರತ್ಯೇಕತೆಯನ್ನು, ಏಕಾಕಿತನವನ್ನು ಸಾಧ್ಯವಾದಷ್ಟು ಬಿಟ್ಟುಕೊಡುವುದು. ತಾನೂ ರೂಪಕವಾಗುತ್ತ ರೂಪಾಂತರಗೊಳ್ಳುವುದು. ನೃತ್ಯಗಾರ ಯಾ ನೃತ್ಯಗಾತಿ ಒಂದು ತೀವ್ರ ಭಾವಾಭಿನಯದ ಹಂತವನ್ನು ಮುಟ್ಟುವ ಹಂತದಲ್ಲಿ ಯಾ ಆ ಬಿಂದುವಿನಲ್ಲಿ ಮಾತ್ರ ಹಿನ್ನೆಲೆಯ ನಾದವಾದನಗಳಲ್ಲಿ ಏನೋ ತೀವ್ರತೆ, ಬದಲಾವಣೆ, ಅಬ್ಬರ, ತರಂಗಿತತೆ ನಿರ್ಮಾಣಗೊಳ್ಳಬೇಕು ಎಂದೆಣಿಸಿದರೆ ರೂಪಾಂತರ ಅಸಾಧ್ಯ. ಚೆಲುವನ್ನು ಹಿಗ್ಗಿಸಿಕೊಳ್ಳಲು ಕ್ಷಣದಲ್ಲಿ ಅಲಂಕಾರ ಸಾಧನಗಳ ಹೇರಿಕೆ ಹೇಗೆ ಸಹಾಯಕವಾಗಲಾರದೋ ಹಾಗೆ ಇಂಥ ನಾದೋದ್ಗಾರ ಸಹಾಯಕವಾಗಲಾರದು. ಇವೆಲ್ಲ ಬಹಳ ಸೂಕ್ಷ್ಮ ಸಂಗತಿಗಳು. ಇವನ್ನೆಲ್ಲ ಗಮನಿಸದೆ ಕಲಿತದ್ದನ್ನು ಎರಡು ಪಂಗಡಗಳು (ಹಿಮ್ಮೇಳ - ಮುಮ್ಮೇಳ) ಹೊರಗೆಡಹ ಹೊರಟಾಗ ಕ್ಷಣಕ್ಷಣದ ಆಸ್ಫೋಟ ಅವಸ್ಥಾಂತರಗಳು ಮಾತ್ರ ಸಾಧ್ಯವಾಗುತ್ತವೆ. ರೂಪಕ ನಿರ್ಮಾಣ ಆಗದ ಮಾತು. ಎಷ್ಟೋ ನೃತ್ಯ ಪ್ರಸ್ತುತಿಗಳು ನಮ್ಮ ಕಣ್ಣುಗಳಿಗೆ ಯಾಂತ್ರಿಕವಾಗಿ ಒಗ್ಗಿವೆ ಎಂಬುದರಿಂದ ಇಂಥ ಸೂಕ್ಷ್ಮಗಳ ಅವಗಣನೆ ಸಲ್ಲದು. ಮಾತಿಗಾಗಿ ಮಾತು ಬಂದಂತೆ ನಾದನೃತ್ಯ ಬರಬಾರದೆಂದೇ ಈ ವಿಶ್ಲೇಷಣೆಯ ಅರ್ಥ. ರಂಗಪ್ರಸ್ತುತಿಗೆ ಬರುವಾಗ ಇದು ಇನ್ನಷ್ಟು ಜಟಿಲ. ಕಾರಣ ಹಿನ್ನೆಲೆಯ ಸಂಗೀತದ ವ್ಯಾಕರಣ ಮತ್ತು ಮುನ್ನೆಲೆಯ ನೃತ್ಯದ ವ್ಯಾಕರಣ ಬೇರೆ ಬೇರೆ. ರಾಗದ ಚಲನೆ, ಏರಿಳಿತ, ವಿಸ್ತಾರ, ಮನೋಧರ್ಮ ಇವೆಲ್ಲ ಸಂಗೀತದ ಸ್ವರೂಪವನ್ನು ಯಾವ ಪ್ರೇರಣೆಗಳಿಂದ ನಿಶ್ಚಯಿಸುತ್ತವೆಯೋ ಅವನ್ನೆಲ್ಲ ನೃತ್ಯದ ಅಂಗ ಆಯಕ್ಕೆ ಅಂಗಿ ಹೊಲಿದಂತೆ ಹೊಂದಿಸಬೇಕು ಎನ್ನುವ ಎಚ್ಚರವೇ ಜಟಿಲತೆಯನ್ನು ಕಡಿಮೆ ಮಾಡುವ ಶಕ್ತಿ. ಎಷ್ಟೇ ಪರಿಣತಿ, ಅಭ್ಯಾಸವಿದ್ದರೂ ಪ್ರತಿ ಹಂತದಲ್ಲೂ ಹಾಡುಗಾರಿಕೆ ರಾಗದ ಜಾಡನ್ನು ಹುಡುಕುತ್ತಲೇ ಇರುತ್ತದೆ. ಹಾಡುಗಾರಿಕೆ ಮಾತ್ರವಾದರೆ ಈ ಹುಡುಕಾಟ ಬಳ್ಳಿ, ಹಬ್ಬಿ ಹೂ ಬಿಡುವಂತೆ ಅಂದವಾಗಿ ಕೇಳುಗನ ಅನುಭವವನ್ನು ಹೃದ್ಯಗೊಳಿಸಬಹುದು. ಆದರೆ, ರಂಗಪ್ರಸ್ತುತಿಯಲ್ಲಿ ಈ ಹುಡುಕಾಟ ಒಂದು ಮರೆಯಲ್ಲಿರುತ್ತದೆ. ಅದು ಹಿನ್ನೆಲೆ. ಕೇಳುಗ - ನೋಡುಗ ಇಬ್ಬರನ್ನೂ ಗುರಿಯಾಗಿರಿಸಿಕೊಂಡಿರುತ್ತದೆ. ಮತ್ತು ಈ ಹುಡುಕಾಟ ಸಾಹಿತ್ಯಾಭಿವ್ಯಕ್ತಿಯ ರಂಗಚಲನೆಗೆ ಮೈಮಾಟಕ್ಕೊಪ್ಪುವ ಸೆರಗಿನಂತಿರುತ್ತದೆ. ಹಾರಿ ಹೋಗಬಾರದು. ಹಾರದೆ ಬಿಗಿಯಾಗಿ

ಅಂಟಿಕೊಳ್ಳಲೂಬಾರದು. ಇದು ಮುಚ್ಚುಮರೆಯೂ ಹೌದು. ಬಿಚ್ಚು ಬಾಗುವಿಕೆಯೂ ಹೌದು. ನಾದನೃತ್ಯದಲ್ಲಿ ಹಾಡು ಕೇಳುಗನನ್ನು ನೋಡುವಂತೆ ಮಾಡಬೇಕು ಮತ್ತು ನೋಟಕನನ್ನು ಕೇಳುವಂತೆ ಮಾಡಬೇಕು.

ಶಾಸ್ತ್ರವೂ ಇದನ್ನೆ ಹೇಳುತ್ತದೆ. ನನ್ನ ಮಿತ ಓದಿನ ಒಂದು ಉದಾಹರಣೆ 'ಪುಂಡರೀಕ ಮಾಲಾ'ದ ನರ್ತನ ನಿರ್ಣಯದ ಅಕ್ಷರ ಅಕ್ಷರವನ್ನು ಗಮನಿಸಿ. ಇದಕ್ಕೂ ಹಿಂದಿನ ಲಭ್ಯ ಅಲಭ್ಯ ಶಾಸ್ತ್ರಗ್ರಂಥಗಳಲ್ಲೂ ಹೇರಳ ಲಕ್ಷಣಗಳ ವಿವರಣೆ ಖಂಡಿತಕ್ಕೂ ಇವೆ. ಸುಲಭಗ್ರಾಹ್ಯವೆಂದು ಈ ಪ್ರಸ್ತಾವನೆ ಕೇಳುವವರ ಹೃದಯವನ್ನು ರಂಜಿಸುವ ಸ್ವರಕಂಪನವು ಗಮಕ ಎಂದೆನ್ನಿಸುತ್ತದೆ ಎಂದು ಹೇಳುತ್ತ ಶಾಸ್ತ್ರಕಾರ ಅಂದರೆ ಈ ಎಲ್ಲ ಪ್ರಯೋಗಗಳನ್ನು ಮಾಡಿಯೋ, ಮಾಡಿದ್ದನ್ನು ನೋಡಿಯೋ, ನೋಡಿದ್ದನ್ನು ಅನುಭವಿಸಿಯೋ - ಗಮಕದ ಭೇದಗಳನ್ನು ಪಟ್ಟಿಮಾಡುತ್ತಾನೆ - ತಿರಿಪ, ಸ್ಫುರಿತ, ಕಂಪಿತ ಹೀಗೆ ಒಂದೊಂದು ವಾದನಕ್ಕೆ ಒಂದೊಂದು ಅಳತೆಯಲ್ಲಿ ಅನುಭವದಿಂದ ಈ ಗಮಕಗಳ ಅಭ್ಯಾಸ ನಡೆದಾಗ ಫಲಿತಾಂಶವಾಗುವ ನುಡಿತದ ಭಾಷೆ ನೃತ್ಯಕ್ಕೆ ಭಾಷ್ಯ, ಆಧಾರ, ಅರ್ಥ ನೀಡಬೇಕೆಂಬುದೇ ಈ ಲಕ್ಷಣಾಲಂಕಾರ ವಿವರಣೆಗಳ ಉದ್ದೇಶವಲ್ಲವೇ? ಡಮರೋ ಇನ್ನಾವುದೋ ನುಡಿತದ ಯಾವ ಅಳತೆಯ, ವೇಗದ ಕಂಪನಕ್ಕೆ ಎಂಥ ಪದಗತಿ, ಹೆಜ್ಜೆಗಾರಿಕೆ, ಲಾಸ್ಯ, ಲವಲವಿಕೆ ಹೊಂದಿಕೆಯಾಗುತ್ತದೆ ಎನ್ನುವುದರ ಕರಣ-ವ್ಯಾಕರಣ ವಿವೇಚನೆಯೇ ಶಾಸ್ತ್ರದ ವ್ಯಾಪ್ತಿ. ಹಿನ್ನೆಲೆ - ಮುನ್ನೆಲೆ ಮುಂದಾಗದೆ ಹಿಂದಾಗದೆ ಒಂದಾಗುವುದಕ್ಕೆ ಶಾಸ್ತ್ರ ತ್ಯಜಿಸಿ ಏನೋ ಹಾರಾಟ ನಡೆಸಿದರೆ ಸಾಕು ಎಂಬ ಭಾವನೆ ಮೂಡಿಬರಬಾರದೆಂದೆ ಅತಿಕಡಿಮೆ ತಿಳಿವಳಿಕೆಯಿಂದ ಈ ಉದಾಹರಣೆಯನ್ನು ಇಲ್ಲಿ ನೀಡಲಾಗಿದೆ. ಈಗಾಗಲೇ ಈ ದಿಸೆಯಲ್ಲಿ ಅಧ್ಯಯನ ನಿರತರಾದವರು ಅನೇಕ ಮಂದಿ ಖಂಡಿತ ಇದ್ದಾರೆ. ಎಳೆಯ ನೃತ್ಯಾಕಾಂಕ್ಷಿಗಳನ್ನು ಗಮನದಲ್ಲಿರಿಸಿಕೊಂಡು ಹೇಳಬಹುದಾದ ಮಾತು - ಈ ಕ್ಷೇತ್ರದಲ್ಲಿ ಅಜ್ಞಾನ ಅಹಂಕಾರದಿಂದ ಮೆರೆಯುತ್ತಿದೆ. ಅಧ್ಯಯನ ವಿನಯಶೀಲವಾಗಬೇಕಾಗಿದೆ. ಸಂಗೀತ-ನೃತ್ಯ ಶಾಸ್ತ್ರದ ಅಧ್ಯಯನದಿಂದ ನಾದನೃತ್ಯದ ಸಾಂಗತ್ಯಕ್ಕೆ ಪೂರಕವಾಗುವಂಥ ವ್ಯಾಕರಣ ಕರಗತವಾದಾಗ ಹಿನ್ನೆಲೆ ಮುನ್ನೆಲೆಯ ಭಾವಸಂಬಂಧ ಸುಸಂಬದ್ಧಗೊಳ್ಳುವುದು ಸಾಧ್ಯ. ಅಂಗ, ಪ್ರತ್ಯಂಗ, ಉಪಾಂಗ, ಕರಣ, ಅಂಗಹಾರ, ಚಾರಿ, ಸ್ಥಾನಕ, ಮಂಡಲ ಹೀಗೆ ರಂಗಪ್ರಸ್ತುತಿಯ ಪ್ರತಿ ವಿಭಾಗದ ಲಕ್ಷಣ, ಭೇದಗಳು, ವಿನಿಯೋಗಗಳನ್ನೆಲ್ಲ ಕರಾರುವಾಕ್ಕಾಗಿ ಹೇಳಿದ ಪ್ರತಿಯೊಂದು ವಿಚಾರಕ್ಕೂ ನಾದಸಾಂಗತ್ಯ ಹೇಗೆ ಕೂಡಿ ಬರಬೇಕು ಎಂಬ ಚಿಂತನೆ ನಿಜಕ್ಕೂ ಒಂದು ಸಮೂಹ ಪ್ರಯತ್ನ - ಹಿನ್ನೆಲೆಯ ಮುನ್ನೆಲೆಯ ಮತ್ತು ಸಭಾಸಹೃದಯರನ್ನೆಲ್ಲ ಒಳಗೊಳ್ಳುವ ಸಮೂಹ ಪ್ರಯತ್ನ.

ನೃತ್ಯರೂಪಕಕ್ಕೆ ಬರುವಾಗ ಇದು ಇನ್ನಷ್ಟು ಸಮೂಹ ಪ್ರಯತ್ನ. ಈ ಪ್ರಯತ್ನವನ್ನೆ ಒಂದು ಪರಿಕಲ್ಪನೆಯಾಗಿ ಈ ಬರಹ ಕೈಗೆತ್ತಿಕೊಂಡಿದೆ. ಆ ಪರಿಕಲ್ಪನೆಯೇ ಭಾವನಿರ್ದೇಶನ. ಭಾವನಿರ್ದೇಶನವೆಂದರೆ ನಾದನೃತ್ಯವನ್ನು ಪ್ರತ್ಯೇಕವಾಗಿ ಕಾಣದೆ ಒಂದು ವಸ್ತು (ಕಥೆ, ಪುರಾಣ,

ಭಾವಸಂಬಂಧ, ಚರ್ಯೆ, ನಡೆನುಡಿ)ವನ್ನು ರೂಪಕವಾಗಿಸಲು ನಡೆಸುವ ಕಲಾತ್ಮಕ ಪ್ರಯತ್ನ. ಅದು ರಂಗಪ್ರಸ್ತುತಿಯಲ್ಲಿ ಅಭಾವವನ್ನು ಹೋಗಲಾಡಿಸುವ ಅಥವಾ ಮರೆಸುವ ರಂಗಕ್ರಿಯೆಯ ಕಲ್ಪನಾ ನಿರ್ದೇಶನ. ನಾದನೃತ್ಯದ ವ್ಯಾಕರಣವನ್ನು ದುಡಿಸಿಕೊಳ್ಳುತ್ತ ಔಚಿತ್ಯಪೂರ್ಣ ರೂಪಕವಾಗಿಸುವ ಪ್ರಯತ್ನ. ಹಿನ್ನೆಲೆ ಮುನ್ನೆಲೆಯನ್ನು ಪರಸ್ಪರ ಪೂರಕವಾಗಿಸುವ ಪ್ರಯತ್ನವೂ ಹೌದು. ಆದರೆ ಇದು ವ್ಯಾಕರಣಕ್ಕೆ ಸರಿಯಾಗಿ ಶಬ್ದಗಳನ್ನು ಛಂದೋಬಂಧಕ್ಕೊಳಪಡಿಸುವುದಿಲ್ಲ. ಅಳತೆಗೆ ಸರಿಯಾಗಿ ಶಿಲ್ಪದ ಕಾಲನ್ನು ಕೆತ್ತಿ ಕೈ ಇಡುವಲ್ಲಿ ಇಡುವುದಲ್ಲ. ಶಾಸ್ತ್ರವನ್ನು ಕೇವಲ ಲೆಕ್ಕಾಚಾರ - ಬಿಗಿನಿಯಮ - ಶುಷ್ಕಸೂಚನೆಗಳಷ್ಟೆ ಎಂದು ತಿಳಿದು ತೀರ ಲಕ್ಷಿಸದಿರುವುದು ಅಥವಾ ಅತಿಯಾಗಿ ಅವಲಂಬಿಸುವುದು ಕಲೆ ಮಾತ್ರವಲ್ಲ, ಜೀವನದ ವಿವಿಧ ವಿಚಾರಗಳ ಕ್ರಿಯಾಶೀಲತೆಗೆ ಅಪಾಯ ಎಂಬ ನಿಲುವಿನಿಂದ ನೃತ್ಯರೂಪಕ - ಸಂಗೀತ ಸಂಬಂಧಗಳ ಕಿರುಸ್ಪರ್ಶದೊಂದಿಗೆ ಈ ಬರಹ ಮುಕ್ತಾಯಗೊಳ್ಳಲಿದೆ.

ಭಾರತೀಯ ರಂಗಭೂಮಿಗೆ ಸಂಬಂಧಿಸಿ ಹೇಳುವುದಾದರೆ 'ನೃತ್ಯರೂಪಕ' ತುಂಬ ಪ್ರಾಚೀನ ಪರಂಪರೆ ಹೊಂದಿದ ಒಂದು ಕಲಾಪ್ರಕಾರ. ತುಂಬ ಅವಗಣನೆಗೆ ತುತ್ತಾದ ರಂಗಪ್ರಕಾರವೂ ಹೌದು. ಯಾವತ್ತು ಶಾಸ್ತ್ರೀಯ ಶಿಸ್ತಿಗೆ ಒಳಪಟ್ಟು ಮೆರುಗನ್ನು ಪಡೆಯಬೇಕಾದ ಈ ವಿಭಾಗ ಒಂದೋ ಔಚಿತ್ಯರಹಿತವಾಗಿ ಶಾಸ್ತ್ರದ ಅನುಕರಣೆ ಯಾ ಶಾಸ್ತ್ರಾಧ್ಯಯನದ ಕೊರತೆಯಿಂದ ನಿರ್ಲಕ್ಷ್ಯ ನಿಲುವಿನಿಂದ ತನ್ನ ಅಪಾರ ಸಾಧ್ಯತೆಗಳಿಂದ ವಂಚಿತವಾದ ವಿಭಾಗವೂ ಹೌದು. ಶಾಸ್ತ್ರದ ಪ್ರಕಾರ ನಮ್ಮ ನೃತ್ಯದ ಹುಟ್ಟು ಮತ್ತು ವಿಕಾಸದಲ್ಲೆ ಸಮೂಹ ಮೇಳ, ರಂಗಕ್ರಿಯೆಗೆ ಆದ್ಯತೆ ನೀಡಲಾಗಿದೆ. ದೇವತೆಗಳು ಒಟ್ಟಾಗಿ ಅಭಿನಯಿಸಿದ ರಂಗಪ್ರಕಾರವಾಗಿ, ರೂಪಕವಾಗಿ ಗುರುತಿಸಲಾಗಿದೆ. ಹಿಮ್ಮೇಳದಲ್ಲೂ ಸಂಖ್ಯಾ ಬಾಹುಳ್ಯಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಪ್ರತಿ ವಿಭಾಗದಲ್ಲಿ ಇಬ್ಬರಿಗಿಂತ ಹೆಚ್ಚು - ತಾಳಕ್ಕೆ ಇಬ್ಬರು, ಮದ್ದಳೆಗೆ ಇಬ್ಬರು ಹೀಗೆ ಲಾಸ್ಯರಂಜನದಲ್ಲಿ ವಿವರಿಸಿದರೆ ನರ್ತನ ನಿರ್ಣಯದಲ್ಲಿ ಸಂಗೀತ ವೃಂದಕ್ಕೆ ಎಂಟು ಶ್ರೇಷ್ಠ ಗಾಯಕರು, ನಾಲ್ವರು ನಟ್ಟುವಾಂಗದವರು, ನಾಲ್ವರು ಮೃದಂಗ ವಾದಕರು, ನಾಲ್ವರು ಕೊಳಲು ವಾದಕರು ಮೇಳೈಸಿದರೆ ನೃತ್ಯಕ್ಕೆ ಪೂರಕವಾದ ಉತ್ತಮ ವೃಂದ ಎಂದು ನಿರ್ಧರಿಸಲಾಗಿದೆ. ಕಹಳೆ ಇತ್ಯಾದಿ ಇತರ ವಾದನಗಳಿಗೂ ಗಮನ ನೀಡಲಾಗಿದೆ. ಗೀತವಾದ್ಯ, ನೃತ್ತ ನೃತ್ಯಾದಿಗಳ ಪರಸ್ಪರ ಒಡಂಬಡಿಕೆಗೆ ಒತ್ತುಕೊಡಲಾಗಿದೆ. ಯುಗಗಳಿಂದ ಇದ್ದಂತೆ ಕಂಡುಬರುವ ಈ ರಂಗಪ್ರವಾಹ ನಮಗೆ ಅಪರಿಚಿತವಾದಷ್ಟು, ತೊಡಗುವಿಕೆ ಕುಗ್ಗಿದಷ್ಟು ರೂಪಕ ಶಕ್ತಿ ಕ್ಷೀಣಿಸುತ್ತದೆ ಎಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕಾದರೆ ತೀರ ಇತ್ತೀಚೆಗೆ ಬೆಳೆದು ವಿಕಾಸಗೊಂಡ ಪಶ್ಚಿಮದ ನೃತ್ಯರಂಗದೆಡೆ ನಾವು ನೋಡಬೇಕಾಗುತ್ತದೆ. ಆಗ ನಮಗೆ ನಮ್ಮಲ್ಲಿರುವ ಶಾಸ್ತ್ರಸಂಪತ್ತನ್ನು ಬಿಡಿ ನೃತ್ಯವಾಗಲಿ, ನೃತ್ಯರೂಪಕವಾಗಲಿ ಹೇಗೆ ಮತ್ತು ಏಕೆ ಅವಲಂಬಿಸಿ ಹೆಚ್ಚಿಸಿಕೊಳ್ಳಬೇಕು ಎಂಬುದರ ಅರಿವಾಗುವುದು ಸಾಧ್ಯ. ಸಾವಿರಾರು ವರ್ಷಗಳ ಪರಂಪರೆಯಲ್ಲಿ ನಾವು ಕಳೆದುಕೊಂಡದ್ದೆಷ್ಟು ಮತ್ತು ಹೆಚ್ಚು ಕಡಿಮೆ ಮೂರು ನಾಲ್ಕು ಶತಮಾನಗಳಷ್ಟೆ ಶೈಶವ ಸ್ಥಿತಿಯ ಪಾಶ್ಚಿಮಾತ್ಯ ನೃತ್ಯರಂಗ ಹಿಗ್ಗಿಕೊಂಡದ್ದೆಷ್ಟು ಎಂಬುದರ ಅರಿವಾಗುವುದೂ ಸಾಧ್ಯ.

ಮೊದಲು ಯುರೋಪಿನಲ್ಲಿ ನಂತರ ಅಮೇರಿಕವೂ ಸೇರಿ ಪಶ್ಚಿಮದ ಎಲ್ಲೆಡೆ ಸಂಗೀತ ಆಧಾರಿತ ನೃತ್ಯರಂಗದ ಹುಟ್ಟುವಿಕಾಸ ನಡೆದದ್ದು ಹೆಚ್ಚು ಕಡಿಮೆ ಹದಿನೇಳನೆಯ ಶತಮಾನದ ನಂತರವೆ. ನೃತ್ಯ ಹಿಂದಿರಲಿಲ್ಲ ಎಂದರ್ಥವಲ್ಲ. ನಾಗರೀಕತೆಯ ಎಲ್ಲ ಪ್ರಾರಂಭಿಕ ಹಂತಗಳಲ್ಲೂ ನಾದ ನೃತ್ಯಾಸಕ್ತಿ ಜೀವನದೊಡನೆ ಬೆರೆತದ್ದೆ. ಆದರೆ ಶ್ರೀಮಂತ ರಂಗಪ್ರದರ್ಶನವಾಗಿ, ಪ್ರಯೋಗದಿಂದ ಪ್ರಯೋಗಕ್ಕೆ ಹೊಸ ಹೊಸ ಎತ್ತರಗಳನ್ನು ದೊಳಗಳಲ್ಲಿ ವಿಸ್ತಾರವಾಗತೊಡಗಿದ್ದು ಈ ಮೂರು ನಾಲ್ಕು ಶತಮಾನಗಳ ಅವಧಿಯಲ್ಲೆ. ಸಂಗೀತ ಮತ್ತು ರಂಗಭೂಮಿಗೆ ಸಂಬಂಧಿಸಿದ ಅನೇಕ ಪಾಶ್ಚಿಮಾತ್ಯ ಅಧ್ಯಯನಗಳು 'ಓರಿಯಂಟ್' ಅಂದರೆ ಪೂರ್ವದ ಕಲಾಜಗತ್ತಿನ ಸುದೀರ್ಘ ಪರಂಪರೆಯನ್ನು ಒಪ್ಪಿಕೊಳ್ಳುತ್ತ ತಮ್ಮ ಪ್ರತ್ಯೇಕತೆಯನ್ನು ಗಂಭೀರವಾಗಿ ಪರಿಗಣಿಸುವುದನ್ನು ನಾವು ಒಂದು ಪಾಠವಾಗಿ ಗ್ರಹಿಸಬೇಕು. ಕಾರಣ ನಮಗಿರುವ ಹಾಗೆ ಸಿದ್ಧ ಪೌರಾಣಿಕ ರಮ್ಯ ರಂಗಚಿತ್ರಣಗಳ ಬಲವಿಲ್ಲದೆ (ಆ ಅನುಕೂಲ ನಮಗೆಷ್ಟಿದೆ ಎಂದರೆ ಎಷ್ಟೋ ಕಥಾನಕಗಳನ್ನು ಏನೇನೂ ಕಷ್ಟವಿಲ್ಲದೆ ಕನಿಷ್ಠ ರಂಗಕ್ರಿಯೆಯಿಂದ ಪ್ರಸ್ತುತ ಪಡಿಸಿದರೂ ಪ್ರೇಕ್ಷಕರು ಸಂಪೂರ್ಣ ಅರ್ಥಮಾಡಿಕೊಳ್ಳುವಷ್ಟು) ಅವರ ನೃತ್ಯರಂಗಭೂಮಿ ಪ್ರಯೋಗ, ಶಿಸ್ತು ಮತ್ತು ರಂಗನಿಷ್ಠೆಯ ಫಲಿತಾಂಶವಾಗಿಯೇ ತುಂಬಿ ಬರಬೇಕಾಗಿದೆ. ಅಸಹಜವೆನ್ನಿಸುವ ಪೌರಾಣಿಕ ಪ್ರಪಂಚವನ್ನು ಸಹಜ ಅನುಭವವಾಗಿಸುವ ನಮ್ಮ ರಂಗನಿರ್ಮಿತಿಗಳು ತುಸು ಅವಜ್ಞೆಯಿಂದ ಎಂಥ ಕಲಾನಷ್ಟಕ್ಕೊಳಗಾಗುತ್ತವೆ ಎಂಬುದನ್ನು ಪಾಶ್ಚಿಮಾತ್ಯರ ಸಹಜ ವಸ್ತುವನ್ನು ಅಸಹಜವಾಗಿಸುವ ರಂಗಪ್ರಯತ್ನದಿಂದ ನಾವು ತಿಳಿಯಬಹುದು. ಸಹಜತೆ (realistic)ಯನ್ನು ತ್ಯಾಗಮಾಡುತ್ತ ಕಲಾತ್ಮಕತೆಗೆ ಪ್ರಯತ್ನಿಸುವ ಆ ಮಾರ್ಗದಲ್ಲಿರುವ ಹಿಮ್ಮೇಳ ಮುಮ್ಮೇಳದ ಸೂಕ್ಷ್ಮ ಹೊಂದಾಣಿಕೆಗಳ ಪರಿಶೀಲನೆ ನಮ್ಮ ಅನುಕೂಲಕರ ಶಾಸ್ತ್ರಬದ್ಧ ಸಂಪತ್ತಿನ ಉಚಿತ ಕೊಡುಗೆಗಳ ಬೆಲೆಯನ್ನರಿಯಲು ಅಗತ್ಯ ಎಂಬುದನ್ನು ತಿಳಿಸಲೆಂದೆ ಈ ಹೋಲಿಕೆಯ ಮಾತನ್ನೆತ್ತಿದ್ದೇನೆ. Action is unfold through song - ಸಂಗೀತದ ಮೂಲಕ ಅಭಿನಯ ಸುರುಳಿ ಬಿಚ್ಚುವ ಪಾಶ್ಚಿಮಾತ್ಯ ಸಂಗೀತ ನೃತ್ಯರೂಪಕಗಳ ಒಂದೆರಡಾದರೂ ಪ್ರಯೋಗಗಳನ್ನು (ನನ್ನ ಅಮೇರಿಕಾ ಪ್ರವಾಸದಲ್ಲಿ ಗಮನವಿಟ್ಟು ಕಂಡ ಧೈರ್ಯದಿಂದ) ಮನಸ್ಸಿಗೆ ತಂದುಕೊಂಡು ನಾನು ಹೇಳಬಯಸುವ ವಿಚಾರ ರಂಗ ಸಾಮೀಪ್ಯ ನಾದ ನೃತ್ಯದ ನಡುವೆ ಅತಿ ಅಗತ್ಯ ಎಂದು.

ಅಂಥ ನಾದ ನೃತ್ಯ ಮೈತ್ರಿಯಿಂದ ಏನೆಲ್ಲ ಸಾಧ್ಯ ಎಂದು ಊಹಿಸಿದರೆ ನಮ್ಮ ಸಹೃದಯತನ ರೋಮಾಂಚನಗೊಳ್ಳುತ್ತದೆ. ಸಿದ್ಧ ಉಡುಪಿನ ಬದ್ಧ ತೊಡುಗೆ ಮೀರಿ ರಂಗಾಲಂಕಾರವಿದೆ ಎಂಬುದರಲ್ಲಿ ಈ ಮೈತ್ರಿಯ ರಹಸ್ಯ ಅಡಗಿದೆ. ಅಪವಾಗಳಿವೆ, ಆದರೂ ಹೆಚ್ಚಿನ ನಮ್ಮ ನೃತ್ಯ ಪ್ರಸ್ತುತಿಗಳು ತೀರ ಯಾಂತ್ರಿಕ ಎಂದೆನ್ನಿಸಿದರೆ ಅದಕ್ಕೆ ಕಾರಣ ಈ ನಾದ ನೃತ್ಯ ಮೈತ್ರಿಯ ಕೊರತೆ. ನೃತ್ಯರೂಪಕ ಎಂದೊಡನೆ ಕೇವಲ ಪೌರಾಣಿಕ ಸಿದ್ಧ

ಕಥಾವಸ್ತುವಿನ ವಿಸ್ತರಣೆಯಷ್ಟೆ ಎಂದು ತಿಳಿದಾಗ ಈ ಮೈತ್ರಿ ಅಸಾಧ್ಯ. ಒಂದು ಉದಾಹರಣೆ ಗಮನಿಸಿ: ಹದಿನೆಂಟನೆಯ ಶತಮಾನದ ಒಬ್ಬ ಆಪ್ರಾ (Opera) ನಿರ್ದೇಶಕ ಮೋಜಾರ್ (Mozart) ಎಂಬವ 1783ರಲ್ಲಿ ಸುಮಾರು 100 ರಂಗಕೃತಿಗಳನ್ನು (librettors) ಪರಿಶೀಲಿಸಿದನಂತೆ ತನ್ನ ರಂಗಪ್ರಸ್ತುತಿಗಾಗಿ. ಅವುಗಳಲ್ಲಿ ಒಂದೂ ಅವನಿಗೆ ತೃಪ್ತಿ-ಸಮಾಧಾನ ನೀಡದ ಕಾರಣ ಆಯ್ಕೆ ಮಾಡಲಾಗಲಿಲ್ಲ ಎಂಬುದೇ ಈ ಉದಾಹರಣೆ. ಇಷ್ಟು ಗಂಭೀರವಾಗಿ, ಕಾಳಜಿಯಿಂದ ರಂಗಕೃತಿಯನ್ನು ಆಯ್ಕೆ ಮಾಡುವುದೆಂದರೆ ಹೊಸ ಜನ್ಮಕ್ಕಾಗಿ ಗರ್ಭವನ್ನು ಅಣಿಗೊಳಿಸುವುದೆಂದೇ ಅರ್ಥ. ತಾನು ರೂಪಿಸುವ ರಂಗವೈಭವಕ್ಕೆ, ರಂಗನಿರ್ಮಾಣಕ್ಕೆ ಎಂಥ ಸಂಗೀತ, ಎಂಥ ರಂಗಚಲನೆ, ಎಂಥ ನೃತ್ಯಾಭಿನಯ, ಎಷ್ಟು ಜನ ನರ್ತಕ ನರ್ತಕಿಯರು (ಮುಖ್ಯವಾಗಿ ಫ್ರೆಂಚ್ ಬ್ಯಾಲೆಯಲ್ಲಿ ನಾಲ್ಕುನೂರು - ಐನೂರು ಮಂದಿ ಒಳಗೊಳ್ಳುವ ಪ್ರಸಂಗಗಳೂ ಇವೆ. 440 ಪಾತ್ರಧಾರಿಗಳನ್ನು ಬಳಸಿ Puccini ತನ್ನ Turandat ಎಂಬ ರಂಗರೂಪಕವನ್ನು ಸಿದ್ಧಪಡಿಸಿದ ಎಂಬಂಥ ಅನೇಕ ಉದಾಹರಣೆಗಳು ಪಶ್ಚಿಮದ ರಂಗಗ್ರಂಥಗಳಲ್ಲಿ ನಮ್ಮ ಗಮನಕ್ಕೆ ಬರುತ್ತವೆ) ಎಷ್ಟು ಮಾನ, ಎಷ್ಟು ಅಬ್ಬರ, ಎಂಬುದೆಲ್ಲ ಒಬ್ಬನಲ್ಲಿ, ಅವನ ಕಾಣ್ಕೆಯಲ್ಲಿ, ಕಲ್ಪನೆಯಲ್ಲಿ ಖಚಿತತೆಯನ್ನು ಪಡೆಯುವುದೇ ರಂಗಸಾಮೀಪ್ಯದ ಭಾವ ನಿರ್ದೇಶನ. ಹೀಗೆ ಆಯ್ಕೆಯಾದ ರಂಗಕೃತಿಯ - ಸಾರಾಂಶವಲ್ಲ, - ಪೂರ್ಣಪಠ್ಯವನ್ನು ನೋಟಕರೂ ತಿಳಿದಿರಬೇಕೆಂದು ಪಾಶ್ಚಿಮಾತ್ಯ ನಾದನೃತ್ಯ ರೂಪಕ ಪ್ರಪಂಚ ಬಯಸುತ್ತದೆ. ಇದು ಭಾವನಿರ್ದೇಶನಕ್ಕೆ ಅಗತ್ಯವೂ ಹೌದು (ಯಕ್ಷಗಾನಕ್ಕೆ ಇಂಥ ಸಹೃದಯತನ ನಮ್ಮ ಹಳ್ಳಿಗಳಲ್ಲಿತ್ತು).

ಇಂಥ ನಿಷ್ಠೆ ನಮ್ಮಲ್ಲಿ ನಿರ್ಮಾಣವಾದಾಗ 'ನೃತ್ಯರೂಪಕ' ಕೇವಲ ಒಂದು ಕಥೆಯ ಅಭಿವ್ಯಕ್ತಿ ಮಾತ್ರವಾಗಿ ಉಳಿಯಲಾರದು. ಉಳಿಯಲಾಗದು. ಹಿನ್ನೆಲೆ ಹಿನ್ನೆಲೆಯಲ್ಲಿ ಉಳಿಯಬಾರದು. ಉಳಿಯದು. ಕಾರಣ, ನೃತ್ಯರೂಪಕದಲ್ಲಿ ಕಥೆ ಬೇಕು - ಕಥೆಯೇ ಮುಖ್ಯವಲ್ಲ. ನೃತ್ಯ-ರಂಗಚಲನೆ ಅಗತ್ಯ. ಆದರೆ ಅವುಗಳೆಲ್ಲ ಬಿಡಿಬಿಡಿಯಾದ ಹೂವಿನ ಉದುರಿದ ಎಸಳುಗಳಾಗಬಾರದು. ಹೀಗಾಗದಿರಲು ಸಂಗೀತ ಪ್ರತ್ಯೇಕಗೊಳ್ಳಬಾರದು. ಬದಲು, ನೃತ್ಯದ ಹತ್ತಿರ ಹತ್ತಿರ - ಹೊಸ ಮದುವಣಗಿತ್ತಿ, ಮದುವಣಗ ಮುದುಡಿ ಮುದುಡಿ ಮಣೆಯ ಅಂತರ ಕಡಿಮೆ ಮಾಡಿಕೊಳ್ಳುವಂತೆ - ಸ್ಪರ್ಶಸುಖವನ್ನು ಹೊಂದುವುದು ಸಾಧ್ಯ. ನೃತ್ಯರೂಪಕದ ಸಾಹಿತ್ಯದ ಪ್ರತಿ ಶಬ್ದ, ಘಟನೆ, ಪಾತ್ರಚಲನೆ ಮತ್ತು ರಸಾಭಿನಯ ಸಂಗೀತದ ವೃತ್ತದಿಂದ ನುಸುಳಿ ಜಾರಿಹೋಗದೆ ನಾದನೃತ್ಯದ ಕಲ್ಪನೆಗಳು ಗರಿಗೆದರಿಕೊಳ್ಳುವುದು ಸಾಧ್ಯ. ಪೌರಾಣಿಕ ಬಂಧಕ್ಕೆ ಸಂಗತಗೊಂಡ 'ಆಡಿಸಿದಳೆಶೋದೆ' ಕೃತಿಯ ಸಂಗೀತ ಆ ಬಂಧದಿಂದ ಬಿಡುಗಡೆಗೊಳ್ಳುವುದು ಸಾಧ್ಯವೇ ಇಲ್ಲ ಎಂದು ನೃತ್ಯಕ್ಕಣಿಯಾದರೆ ಕಲ್ಪನೆಗಳ ಹೊಸ ಅವತಾರ ಅಸಾಧ್ಯ. ಈ ಸ್ಥಿತಿಯನ್ನು ಹೀಗೆ ಅರ್ಥೈಸಿಕೊಳ್ಳಬಹುದು- ನಮ್ಮ ಬಹುತೇಕ ಆರಾಧನಾ ನೃತ್ಯಗಳಲ್ಲಿ ನೃತ್ಯ ಭಾಷೆಯಾಗದೆ, ಅನುಭವವಾಗದೆ ಒಂದು ಕ್ರಿಯೆ ಮಾತ್ರ, ಹೇಗೆ ಆಗುತ್ತದೆಯೋ, ನಂಬಿದವರಿಗೆ ಹಾಗಾದರೆ ಸಾಕೋ, ಹಾಗೆ ಕಲ್ಪನೆಗಳಿಗೆಡೆಯಿಲ್ಲದೆ ನೃತ್ಯಗಳ

ಸರಪಣಿ ಚಟುವಟಿಕೆಯ ರೂಪ ಮಾತ್ರ ಪಡೆಯುವಂತಾಗುತ್ತದೆ. ನಮ್ಮಲ್ಲಿ ಮಾತ್ರವಲ್ಲ, ಜಗತ್ತಿನ ವಿವಿಧೆಡೆ ಪಾವಿತ್ರ್ಯ - ಧಾರ್ಮಿಕ ಆರಾಧನಾ ನೃತ್ಯಗಳ ಸ್ಥಿತಿ ಹೀಗೆಯೆ. ಬಹ್ಮಾ ರಾಜಧಾನಿ ಸಾಲ್ವಡರ್‌ನಲ್ಲಿ ಸಂತರ ಪುತ್ರಿಯರೆಂಬ ಆವಾಹನೆಗೊಳಗಾಗಿ ಓರಿಶಾಸ್ ಎಂಬ ಶಕ್ತಿದೇವತೆಗಳೊಡನೆ ಒಂದಾಗುವ ನೃತ್ಯಗಾರ್ತಿಯರ ವೃತ್ತಾಕಾರದ ನರ್ತನದಲ್ಲಿ ಚಲನೆ, ಬಾಗುವಿಕೆ, ಬಳುಕು ಎಲ್ಲ ತನ್ನಿಂದ ತಾನೆ ನಡೆಯುತ್ತದಂತೆ. ಮತ್ತು ಆಯಾಯ ದೇವತೆಗೆ ನಿರ್ದಿಷ್ಟ ಬಡಿತ ನುಡಿತ ಲಯವಾದನ ಹಾಗೂ ನಿರ್ದಿಷ್ಟವಾಗಿ ಗುರುತಿಸಲ್ಪಡುವ ನರ್ತನ ಶೈಲಿಯೂ ಇರುತ್ತದೆಯಂತೆ - ನಮ್ಮಲ್ಲಿ ದೇಗುಲದ ಬಲಿಕಲ್ಲುಗಳಿಗೆ ಉತ್ಸವದ ಪ್ರದಕ್ಷಿಣೆಯಲ್ಲಿ ತಂತ್ರಿಗಳು ಬಲಿ ಸಮರ್ಪಿಸುವಾಗ ಪಂಚವಾದ್ಯಗಳ ನುಡಿತ ವೈವಿಧ್ಯದಂತೆ. (ಆಗಮ ಶಾಸ್ತ್ರಬದ್ಧವಾದ ಈ ತಾಳಗಳು ಸಂಗೀತ ಶಾಸ್ತ್ರದ ತಾಳಗಳ ಎಣಿಕೆಗಿಂತ ಭಿನ್ನ ಎಂಬುದನ್ನು ನಾವು ಗಮನಿಸಬೇಕು. ಅಂಥ ಒಂದು ತಾಳದ ಪಟ್ಟಿ - ಶ್ಲೋಕ ಮಿತ್ರ ಡಾ. ಮಂಜುನಾಥ ಸೋಮಯಾಜಿಯವರ ಹಿರಿಯರಿಂದ ನಾನು ಪಡೆದು, ವಿದ್ವಾಂಸರಾದ ದಿ. ರಾಜಗೋಪಾಲಾಚಾರ್ಯರಿಗೆ ನೀಡಿದಾಗ ಅವರು ಈ ವಿಷಯವನ್ನು ನನಗೆ ತಿಳಿಸಿದ್ದರು). ಇಲ್ಲಿ ವಿಷಯ ಇಷ್ಟೆ, ಈ ಕ್ರಮಬದ್ಧ ಚಲನೆಯೋ ನರ್ತನವೋ ಆರಾಧನೆ ಎಂಬ ಒಂದೇ ಉದ್ದೇಶವನ್ನಿರಿಸಿಕೊಂಡರೆ ನೃತ್ಯರೂಪಕದಲ್ಲಿ ಶಬ್ದ ಶಬ್ದ, ನುಡಿತ ಬಡಿತ, ರಾಗರಂಜನೆಗಳೆಲ್ಲ ನೃತ್ಯಗಾರರ ರಂಗಚಲನೆಯ ಮೂಲಕ ಹೊಸ ಹೊಸ ರಂಗಚಿತ್ರಣಗಳನ್ನು ನೀಡುವ ಕಲಾತ್ಮಕ ಪರಿಕರಗಳು. ಸಂಗೀತ ಇಲ್ಲಿ ಆಧಾರ. ಸಾಧಾರ. ಅದು ಚಲನೆಯಲ್ಲಿ ಕರಗಿದಾಗ ಹೊಸ ಹುಟ್ಟು. ಚಲನೆಯೇ ಇಲ್ಲಿ ಆ ಸಂಗೀತವನ್ನು ಆವಾಹಿಸಿಕೊಳ್ಳುವ ಆಕೃತಿ. ಊದುವ ಗಾಳಿಯ ತರಂಗಿತತೆಗನುಗುಣವಾಗಿ ನೀರ್‌ಗುಳ್ಳೆಗಳು ಆಕಾರ - ಚಲನೆ ಪಡೆದಂತೆ. ಸಂಗೀತ ನಿಧಾನ ಹಿನ್ನೆಲೆಯಾಗುತ್ತ, ಕರಗುತ್ತ ನರ್ತನದೊಡನೆ ಬೆರೆಯುವುದು ಮುಖ್ಯ. ಕಾರಣ ಅಂತಿಮವಾಗಿ ಅಭಿವ್ಯಕ್ತಿಯ ತೀವ್ರ ಭಾವಸ್ವರೂಪಕ್ಕೆ ನೃತ್ಯದ ಚಲನೆ, ಲಹರಿ, ಸಮತೋಲವೇ ಮುಖ್ಯ ವಿನಹ ಸಾಹಿತ್ಯವೂ ಅಲ್ಲ, ನಾದವಾದನವೂ ಅಲ್ಲ. ಏಕೆಂದರೆ ನಮ್ಮ ಮುಂದಿರುವುದು ಸಂಗೀತರೂಪಕವಲ್ಲ, ನೃತ್ಯರೂಪಕ. ಬಳಸಿಕೊಂಡ ಸಾಹಿತ್ಯವನ್ನು ಮೀರಿ, ಸಂಗೀತವನ್ನು ಮೀರಿ ನೃತ್ಯವು ರೂಪಕವಾಗುವುದೆಂದರೆ ಪ್ರತಿ ಹೆಜ್ಜೆ ತನ್ನಿಂದ ತಾನೇ ಭಾವನಾತ್ಮಕ ವಿವರಣೆಗಳನ್ನು ನೀಡುವುದು. ಶಬ್ದದಿಂದ ವಿವರಿಸಲಾಗದ್ದನ್ನು ನೃತ್ಯದ ಚಲನೆ ವಿವರಿಸುವುದು ಸಾಧ್ಯ. ಕಾರಣ ಅದು ಸ್ವತಃ ವಿವರಣಾಭಿವ್ಯಕ್ತಿ. ಈ ರೀತಿ ನೃತ್ಯಸಮೂಹ ತನ್ನ ಚಲನೆಯಲ್ಲಿ ಅರ್ಥ ಸೂಸಲಾರದೆ ಹೋದರೆ ನಡೆವ ರಂಗಕ್ರಿಯೆ ಸೋತಿತೆಂದೇ ಹೇಳಬೇಕಾಗುತ್ತದೆ. ತಾಯಿ ಮಗುವನ್ನು ನಡೆಸುವಂತೆ ಸಂಗೀತ ನೃತ್ಯಚಲನೆಗೆ ಆಧಾರವಾಗುತ್ತದೆ. ಅವಲಂಬನೆ ಮಾತ್ರ ಅಲ್ಲ, ಆಕಾರಕ್ಕೊಂದು ಸೆಳೆತವಾಗಿ. ಭಾರತೀಯ ನಾದನೃತ್ಯ ಪ್ರಯೋಗಗಳಲ್ಲಿ ನನ್ನೀ ಬರಹದಲ್ಲಿ ನನ್ನ ಮಿತಿಯಿಂದಾಗಿ, ಅಲ್ಪ ಓದಿನಿಂದಾಗಿ, ಸಂಗೀತ ನೃತ್ಯ ಪರಿಣತಿ ಇಲ್ಲದಿರುವುದರಿಂದಾಗಿ ಅಮೂರ್ತ, ಅಸ್ಪಷ್ಟ ಉದ್ಗಾರಗಳಂತೆ ಮೂಡಿಬಂದ ಮಾತುಗಳ ಹಿಂದಿರುವ ಅನೇಕ ಚಿಂತನೆಗಳು ಸಾಕಾರಗೊಂಡಿದ್ದವು ಎಂಬುದರಲ್ಲಿ ಸಂಶಯವಿಲ್ಲ.

ಇಲ್ಲದಿದ್ದಲ್ಲಿ ಅಚ್ಚರಿ ಮೂಡುವಷ್ಟು ನಾದನೃತ್ಯ ಶಾಸ್ತ್ರಸೂಕ್ಷ್ಮಗಳು ಉಲ್ಲೇಖಗೊಳ್ಳುತ್ತಿರಲಿಲ್ಲ. ಭಾರತದ ನೃತ್ಯ ವಿಶಾಲ ಭಾರತದಲ್ಲಿ ವಿಕಾಸಗೊಳ್ಳುತ್ತಿರಲಿಲ್ಲ. ಒಂದು ಅಧ್ಯಯನದ ಪ್ರಕಾರ - "The influence of Indian dance has been felt not just in S. E. Asia, but as far away as China, Japan and even some scholars believe, the islands of South Pacific" ಎಂಬ ತಿಳಿವಳಿಕೆ ಅನೇಕ ಅಧ್ಯಯನ ಗ್ರಂಥಗಳಲ್ಲಿ ದಾಖಲೆಗೊಂಡಿದೆ. ಒಂದು ಪರಿಪೂರ್ಣ ನೃತ್ಯರೂಪಕವನ್ನು ಇಂಥ ಪ್ರಭಾವೀ ನೃತ್ಯಪದ್ಧತಿಯನ್ನಳವಡಿಸಿ ಸಂಯೋಜಿಸುವುದೆಂದರೆ, ಅರ್ಥವ್ಯಾಪ್ತಿಯ ವಸ್ತು ಯಾ ಸಾಹಿತ್ಯದ ಆಯ್ಕೆ, ಅದರ ಗೇಯಾಂಶದ ಗುರುತಿಸುವಿಕೆ, ಸಂಗೀತಕ್ಕೊಪ್ಪುವ ಭಾಷೆಯ ಪದಪ್ರಯೋಗ (ಎಲ್ಲ ಭಾಷೆಗಳೂ ನೃತ್ಯರೂಪಕದ ಸಂಗೀತಕ್ಕೆ ಹೃದ್ಯವಾಗಲಾರದು ಎಂಬುದನ್ನೂ ನಾವು ಗಮನಿಸಬೇಕು), ಆ ಪದಲಾಲಿತ್ಯಕ್ಕೆ ಲೇಪಿಸುವ ರಾಗ-ವಾದನ ಕವಚ, ಇವುಗಳ ಬಲದಿಂದ ನೃತ್ಯ ವ್ಯಾಕರಣವನ್ನು ರಂಗದ ಮೇಲೆ ಭಾವರಾಪಕವಾಗಿಸುವ ಚಾತುರ್ಯ ಎಲ್ಲವೂ ಆಗಿರುತ್ತದೆ. ಇದಕ್ಕೆ ಬೇಕು ಅಪಾರ ಸಹನೆ, ಅರ್ಹತೆ, ಕಾಣ್ಕೆ, ಹಂಬಲ ಎಲ್ಲ.

ಸುಮಾರು 1980ರ ದಶಕದುದ್ದಕ್ಕೂ ಪ್ರತಿಭಾವಂತ ಸಂಗೀತ ವಿದ್ವಾಂಸರೂ ಕಲಾವಿದರೂ ಆದ ಶ್ರೀ ಉಡುಪಿ ವಾಸುದೇವ ಭಟ್ಟರೊಡನೆ ಹತ್ತಾರು ರೂಪಕಗಳ ನಿರ್ಮಾಣದ ಹಂಬಲ ತಾಳಿದಾಗ ನನ್ನ ಇಂಥ ಹತ್ತು ಹಲವು ಅಸ್ಪಷ್ಟ ಯೋಚನಾ ಲಹರಿಗಳು ನನ್ನಲಿದ್ದವು. ಆ ಲಹರಿಗಳಿಗೆ ಸ್ಪಂದಿಸಿದ ಶ್ರೀ ವಾಸುದೇವ ಭಟ್ಟರಲ್ಲಿ ಸಂಗೀತ ಸಾಧ್ಯತೆಗಳನ್ನು ಗುರುತಿಸಿ ಅಭಿವ್ಯಕ್ತಿಸುವ ಅಪಾರ ಅರ್ಹತೆ ಇದೆ ಎಂದು ನನ್ನೆಣಿಕೆ. ಇದು ನನ್ನ ಶಿಫಾರಸಲ್ಲ. ಹೊಗಳಿಕೆಯೂ ಅಲ್ಲ. ಶ್ರೀ ವಾಸುದೇವ ಭಟ್ಟರು ಮಿತ್ರ ಗುರುರಾಜ ಮಾರ್ಪಳ್ಳಿ, ಹಿರಿಯರಾದ ಶ್ರೀ ಮಧೂರು ಬಾಲಸುಬ್ರಹ್ಮಣ್ಯ ಹಾಗೂ ಮಿತ್ರ ಭಾವಗಾಯನ ಪಟು ಶ್ರೀ ಎಚ್. ಚಂದ್ರಶೇಖರ ಕೆದಿಲಾಯ ಇವರೆಲ್ಲರೊಡನೆ ಹಾಗೂ ಒಂದೆರಡು ಸಂದರ್ಭಗಳಲ್ಲಿ ಪ್ರತಿಭಾನ್ವಿತೆ ಶ್ರೀಮತಿ ವಾರಿಜಾಕ್ಷಿ ಆರ್. ಭಟ್ ಅವರೊಡನೆ ಸಂಗೀತ ಸಾಧ್ಯತೆಗಳಲ್ಲಿ ಹೊಸ ದಾರಿಗಳನ್ನು ನಾನು ಗುರುತಿಸಿಕೊಂಡದ್ದರಿಂದಲೇ ನಾನು ಆಯ್ದ ಅಥವಾ ರಚಿಸಿದ ಕೆಲವು ರಂಗಕೃತಿಗಳಿಗೆ ಭಿನ್ನ ನೃತ್ಯ ಮುಖ ಕೊಡುವುದು ಸಾಧ್ಯವಾಯಿತು. ನನ್ನೀ ಲೇಖನ ಈ ಎಲ್ಲ ಒಡನಾಟದ ಫಲಿತಾಂಶವೇ.

ಒಂದಂಶವನ್ನು ಹೀಗೆ ಹೇಳಬಹುದೋ ಏನೋ. ಶಾಸ್ತ್ರೀಯ ಸಂಗೀತ ಪ್ರಸ್ತುತಿಯಲ್ಲೂ ಕಲ್ಪನಾಸ್ವರಗಳ ಸದ್‌ಬಳಕೆಯಲ್ಲಿ ಅನಿರ್ವಚನೀಯ ಆನಂದವನ್ನು ಸ್ಫುರಿಸುವ ಪ್ರತಿಭಾವಂತ ಕಲಾವಿದರಿದ್ದಾರಲ್ಲ, ಅಂತೆಯೆ ನೃತ್ಯರೂಪಕ ಪ್ರಸ್ತುತಿಯಲ್ಲೂ ಚೌಕಟ್ಟನ್ನು ಬಿಡದೆ ರಾಗವನ್ನು ಹಿಗ್ಗಿಸುವ ಅನೇಕ ಹಿನ್ನೆಲೆ ಕಲಾವಿದರಿಂದಲೇ ನೃತ್ಯಕ್ಕೊಂದು ರಂಜನೀಯ ಆಯಾಮ ಒದಗಿ ಬರುತ್ತದೆ ಎಂದು. 'ಅರುಂಧತಿ' ಎಂಬ ಜಾನಪದ ಗೀತಗುಚ್ಛಕ್ಕೆ ಶ್ರೀ ವಾಸುದೇವ ಭಟ್ಟರು ಅಂಥ 'ನುಡಿನಡೆ' ಸಂಗೀತವನ್ನು ನೀಡಿದ್ದರು ಎಂಬುದು ನನ್ನ ಬಲವಾದ ನಂಬಿಕೆ. ಅದೇ ರೀತಿ ತೆಲುಗು ಮೂಲದ ಕೆಂಪಯ್ಯ ಅನುವಾದಿಸಿದ ಯಾಲಪದಗಳ ನಳಚರಿತ್ರೆಯಲ್ಲಿ

ನಳಚಕ್ರವರ್ತಿ ಬೇಟೆಗೆ ಹೊರಟ ಸಂದರ್ಭದಲ್ಲಿ- "ಒಂದಾನೊಂದು ದಿನ ನಳ ಮಹಾರಾಜ..." ಎಂಬ ಸಾಧಾರಣ ಸರಳ ವಿವರಣೆಯ ಸಾಲಿಗೆ ಶ್ರೀ ಭಟ್ಟರು ನೀಡಿದ ಸ್ವರದ ಎಳೆತ ಆ ಒಂದಾನೊಂದು ದಿನ ನೃತ್ಯಭಾಷೆಯ ಮೂಲಕ ಯಾವುದೋ ಕಾಲದ ಹಿಂದೊಂದು ದಿನ ಎಂಬ ಭಾವಕ್ಕೆಡೆ ಮಾಡಿಕೊಟ್ಟದ್ದನ್ನು ನಾನೆಂದಿಗೂ ಮರೆಯಲಾರೆ.

ನೃತ್ಯಕ್ಕೆ, ನೃತ್ಯರೂಪಕಕ್ಕೆ ಸಂಗೀತ ಪೂರಕ ಎನ್ನುವದಕ್ಕಿಂತ ಭಿನ್ನವಾಗಿ ಸಂಗೀತದ ಬಗ್ಗೆ ತಿಳಿಯ ಹೊರಟರೆ ಮಾತ್ರ ಅಂಥ ಸಂಗೀತದಿಂದ ಬಳಸುವ ಸಾಹಿತ್ಯಕ್ಕೆ, ನೃತ್ಯಕ್ಕೆ ಮತ್ತು ರಂಗಚಲನೆಗೆ ಹೊಸ ವಿಸ್ತಾರ, ಮೆರುಗು ಒದಗಿಬರುವುದು ಸಾಧ್ಯ. 'ಫ್ಯಾಂಟಮ್ ಆಫ್ ಆಪ್ರಾ' ಅಂಥ ಒಂದು ಸಾಮಾನ್ಯ ಕಥಾನಕವನ್ನು ನೂರಾರು ವಾದ್ಯವಾದನಗಳನ್ನು ಬಳಸಿ ಅದ್ಭುತ ಅನುಭವವಾಗಿಸಿದ್ದನ್ನು ಉದಾಹರಣೆಯಾಗಿ ಗಮನಿಸಿ ಹೇಳಬಹುದಾದ ಮಾತು - ಭಾರತೀಯ ನೃತ್ಯವಿಧಾನದಲ್ಲಿಯೇ ಉತ್ಕೃಷ್ಟ ರೂಪಕ ಶಕ್ತಿ ಇದೆ. ಹಿನ್ನೆಲೆಯ ಸಂಗೀತದಲ್ಲಿ ಧ್ವನ್ಯಾಲೋಕವಿದೆ. ಈ ಧ್ವನಿಯ ಇಂಪಿಗೆ ಸೊಂಪು ನೀಡುವ ವಾದನ ವೈವಿಧ್ಯಗಳಿವೆ. ಇವುಗಳೆಲ್ಲದರ ಸೂಕ್ಷ್ಮ ಹೊಂದಾಣಿಕೆಯಿಂದ ರೂಪುಗೊಳ್ಳುವುದೇ ನೃತ್ಯರೂಪಕ. ಅದು ಕಥೆ ಮಾತ್ರ ಅಲ್ಲ. ಅವತಾರ ಮಹಿಮೆ ಮಾತ್ರ ಅಲ್ಲ. ಪೌರಾಣಿಕ ಅದ್ಭುತ ಮಾತ್ರವಲ್ಲ. ಕಲಾವಿದನ ಮೈಮನ (ಮುನ್ನೆಲೆ) ಮತ್ತು ಕಲಾವಿದನ ಕಂಠ-ಕರಗಳ ಚಲನೆ (ಹಿನ್ನೆಲೆ) ಒಂದೇ ಹೂವಾಗಿ ಅರಳುವ ಮುಂಜಾನೆಯ ಬೆಳಗು. ಆಗ ಇದು ಬರಿ ಬೆಳಗಲ್ಲೋ ಅಣ್ಣಾ ಅನ್ನಿಸುತ್ತದೆ. ಅಂಥ ಬೆಳಗನ್ನು ಕಾಣುವ ತವಕ ಮಾತ್ರ ನನ್ನದು.

'ಸಿರಿಮನೆ', 6-1-82C, ಚಿಟ್ಪಾಡಿ, ಉಡುಪಿ - 576102

ಕರ್ನಾಟಕ ಸಂಗೀತದಲ್ಲಿ ವಿದೇಶೀ ವಾದ್ಯಗಳು

✍ ಎ. ಈಶ್ವರಯ್ಯ

Old order changeth yielding the place to new - ಅನ್ನುವುದು ಆಂಗ್ಲಭಾಷೆಯ ಒಂದು ನಾಣ್ಣುಡಿ. ಹೊಸತಿಗೆ ಜಾಗವನ್ನೊಪ್ಪಿಸಿ ಹಳತು ಹಿನ್ನೆಲೆಗೆ ಸರಿಯುವುದು ಪ್ರಕೃತಿ ನಿಯಮ. ಕಲೆಯೂ ಇದಕ್ಕೆ ಹೊರತಲ್ಲ. ಕಾಲಘಟ್ಟಗಳಲ್ಲಿ ಕಲಾಪ್ರಕಾರಗಳ ಕೆಲವು ಅಂಶಗಳು ಕಾಣೆಯಾಗುತ್ತವೆ, ಬದಲಾಗುತ್ತವೆ, ಇನ್ನೊಂದಕ್ಕೆ ಅವಕಾಶ ಮಾಡಿಕೊಡುತ್ತವೆ. ನಮ್ಮ ಸಂಗೀತವೇ ಇದಕ್ಕೊಂದು ಒಳ್ಳೆಯ ಉದಾಹರಣೆಯಾಗಬಹುದು.

ಕಳೆದ ಐನೂರು ವರ್ಷಗಳಿಂದ ರಾಜಕೀಯ, ಸಾಮಾಜಿಕ ಒತ್ತಡಕ್ಕೆ ಪಕ್ಕಾಗಿ ನಮ್ಮ ಕಲೆಗಳು ಪಾಶ್ಚಾತ್ಯ ಮತ್ತು ಇಸ್ಲಾಂ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗುತ್ತ ಬಂದಿವೆ. ಸಂಗೀತದ ಮೇಲಂತೂ ಈ ಪ್ರಭಾವ ಅತ್ಯಂತ ದಟ್ಟವಾಗಿದೆ. ಹಿಂದೂಸ್ಥಾನಿ ಸಂಗೀತವೆನ್ನುವ ಶೈಲಿ ಹುಟ್ಟಿಕೊಂಡದ್ದೇ ಈ ನೆಲೆಯಲ್ಲಿ. ಭಾರತಕ್ಕೆ ಬಂದ ಪಾಶ್ಚಾತ್ಯರು ಮತ್ತು ಮುಸ್ಲಿಮರು ತಮ್ಮೊಂದಿಗೆ ತಮ್ಮ ಸಂಗೀತ ವಾದ್ಯಗಳನ್ನೂ ತಂದರು. ಇವುಗಳಲ್ಲಿ ಕೆಲವು ವಾದ್ಯಗಳು ನೇರವಾಗಿ ನಮ್ಮ ಸಂಗೀತ ಕ್ಷೇತ್ರವನ್ನು ಪ್ರವೇಶಿಸಿ ಗಟ್ಟಿಯಾಗಿ ತಳವೂರಿದರೆ ಇನ್ನು ಕೆಲವು ಸಣ್ಣ ಪುಟ್ಟ ಮಾರ್ಪಾಡುಗಳೊಂದಿಗೆ ಸೇರಿಕೊಂಡವು. ನಮ್ಮದೇ ಕೆಲವು ವಾದ್ಯಗಳು ರಂಗದಿಂದ ಮರೆಯಾದವು. ಇನ್ನೂ ಕೆಲವು ತಾವೂ ರೂಪಪಲ್ಲಟ ಮಾಡಿಕೊಂಡವು. ಏನಿದ್ದರೂ ಈ ಹೊಸ ಬಗೆಯ ವಾದ್ಯಗಳು ಭಾರತೀಯ ಸಂಗೀತದ ಆಯಾಮವನ್ನು ಹೆಚ್ಚಿಸಿ ಶ್ರೀಮಂತಗೊಳಿಸಿದವು ಎನ್ನುವುದರಲ್ಲಿ ಎರಡು ಮಾತಿಲ್ಲ.

ಹಾರ್ಮೋನಿಯಂ

ಹತ್ತೊಂಬತ್ತನೇ ಶತಮಾನದ ಮಧ್ಯ ಭಾಗದಲ್ಲಿ ಕ್ರಿಶ್ಚನ್ ಮಿಶನರಿಗಳ ಮೂಲಕ ನಮ್ಮಲ್ಲಿಗೆ ಬಂದ ಹಾರ್ಮೋನಿಯಂ ಅನ್ನುವ ವಾದ್ಯ ಕ್ಷಿಪ್ರದಲ್ಲಿ ಜನಪ್ರಿಯವಾಗಿ ಸಂಗೀತದ ಎಲ್ಲ ಪ್ರಕಾರಗಳಲ್ಲೂ ವ್ಯಾಪಿಸಿಕೊಂಡಿತು.

ಪೇರಿಸ್‌ನ ಅಲೆಕ್ಸಾಂಡರ್ ಡಿಬೈನ್ ಅನ್ನುವವರು 1842ರಲ್ಲಿ ಹಾರ್ಮೋನಿಯಂ ವಾದ್ಯವನ್ನು ನಿರ್ಮಿಸಿದರು. 42 ರೀಡ್‌ಗಳನ್ನು ಹೊಂದಿರುವ, ಗಾಳಿಯ ಒತ್ತಡದಿಂದ ನಾದ ಹೊಮ್ಮಿಸುವ ಈ ವಾದ್ಯದಲ್ಲಿ ಹಲವು ಮಾದರಿಗಳಿವೆ. ಪಾಶ್ಚಾತ್ಯ ದೇಶಗಳಲ್ಲಿ ಕಾಲಲ್ಲಿ ಪೆಡಲ್ ತುಳಿದು ನುಡಿಸುವ ಹಾರ್ಮೋನಿಯಂ (ಆರ್ಗನ್) ಹೆಚ್ಚು ಜನಪ್ರಿಯ. ಪಾಶ್ಚಾತ್ಯ ಸಂಗೀತದ ನುಡಿಸಾಣಿಕೆಯಲ್ಲಿ 'ಕಾರ್ಡ್ಸ್' (chords) ಜೊತೆಗೂಡಿಸುವ ಅವಶ್ಯಕತೆ

ಇರುವುದರಿಂದ ಎರಡೂ ಕೈಗಳು ಬಿಡುವಾಗಿರಬೇಕಾದ್ದು ಅಗತ್ಯ. ಭಾರತೀಯ ಸಂಗೀತದಲ್ಲಿ ಅದರ ಅವಶ್ಯಕತೆ ಇಲ್ಲದ ಕಾರಣ ಕೈಯಲ್ಲಿ ಬೆಲ್ಲೋಸ್ ಒತ್ತುವ ಮಾದರಿ ಇಲ್ಲಿ ಹೆಚ್ಚು ಜನಪ್ರಿಯ.

ನಮಗಷ್ಟೇ ಸೀಮಿತವಾದ ಕೆಲವೊಂದು ಮಾರ್ಪಾಡುಗಳು ಹಾರ್ಮೋನಿಯಂನಲ್ಲಿ ಕಾಣಿಸಿಕೊಂಡವು. ಮುಖ್ಯವಾಗಿ ಹಾರ್ಮೋನಿಯಂನ ಮುಂಭಾಗದಲ್ಲಿ ಮೂರೋ ನಾಲ್ಕೋ ಶ್ರುತಿ ಬಿರಡೆಗಳು ಸೇರಿಸಲ್ಪಟ್ಟವು. ಮಡಚಿ ಸೂಟ್‌ಕೇಸ್ ರೂಪದಲ್ಲಿ ಒಯ್ಯಬಹುದಾದ 'ಪೇಟಿ'ಗಳೂ ಚಾಲ್ತಿಗೆ ಬಂದವು. ಒಂದು ಪಟ್ಟಿ ಒತ್ತಿದಾಗ ಒಂದಕ್ಕಿಂತ ಹೆಚ್ಚು ಸ್ವರಸ್ಥಾನಗಳು ಮೂಡುವಂತಹ 'ಮಲ್ಟಿರೀಡ್ಸ್' ಹಾರ್ಮೋನಿಯಂಗಳು ಹಿಂದೆ ಕಂಪೆನಿ ನಾಟಕಗಳಲ್ಲಿ ಬಹಳ ಪ್ರಸಿದ್ಧವಾಗಿದ್ದವು.

ಆರಂಭದ ಘಟ್ಟದಲ್ಲಿ ಉತ್ತರದಲ್ಲಿ ಪಂ. ಭೀಷ್ಮದೇವ್ ವೇದಿ, ಪಂ. ಮುನೇಶ್ವರ ದಯಾಲ್, ಪಂ. ಮೊಂಟು ಬ್ಯಾನರ್ಜಿ, ಜ್ಞಾನಪ್ರಕಾಶ್ ಘೋಷ್ ಮೊದಲಾದವರು ಹಾರ್ಮೋನಿಯಂ ವಾದ್ಯವನ್ನು ವೇದಿಕೆಯಲ್ಲಿ ಜನಪ್ರಿಯಗೊಳಿಸಿದರು. ಹಿಂದೂಸ್ಥಾನಿ ಖಯಾಲ್ ಗಾಯನದಲ್ಲಿ ಹಾರ್ಮೋನಿಯಂ ವಾದ್ಯಕ್ಕೆ ಒಂದು ಪ್ರತಿಷ್ಠಿತ ಸ್ಥಾನ ದೊರಕುವಂತೆ ಮಾಡಿದವರು ಪಂ. ತುಲಸೀದಾಸ್ ಬೋರ್ಕರ್, ಪಂ. ಅಪ್ಪಜಲಗಾಂವ್ಕರ್, ಪುರುಷೋತ್ತಮ ವಲವಾಲ್ಕರ್ ಮತ್ತು ಡಾ. ಅರವಿಂದ ತಟ್ಟೆ. ಇಂದು ಹಿಂದೂಸ್ಥಾನಿ ಶಾಸ್ತ್ರೀಯ ಗಾಯನಕ್ಕೆ ಹಾರ್ಮೋನಿಯಂ ಅಧಿಕೃತ ಪಕ್ಕವಾದ್ಯವೆನಿಸಿದೆ.

ಬೆಂಗಳೂರು ಅರುಣಾಚಲಪ್ಪ, ಪಲ್ಲಡಂ ವೆಂಕಟರಮಣನ್ ಮೊದಲಾದ ಪ್ರತಿಬಾವಂತರ ಪ್ರಯತ್ನದ ಹೊರತಾಗಿಯೂ ಹಾರ್ಮೋನಿಯಂ ಕರ್ನಾಟಕ ಸಂಗೀತದಲ್ಲಿ ಗಟ್ಟಿಯಾಗಿ ಬೇರಿಳಿಸುವಲ್ಲಿ ವಿಫಲವಾಯಿತು. ಇದಕ್ಕೆ ಮುಖ್ಯ ಕಾರಣವೆಂದರೆ ಶಾಸ್ತ್ರೀಯ ಸಂಗೀತದ ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳನ್ನು ಗಾಯಕನಂತೆ ತಾನೂ ನುಡಿಯಬಲ್ಲ ಪಿಟೀಲು ಕಛೇರಿಯ ವೇದಿಕೆಯನ್ನು ಆಕ್ರಮಿಸಿಕೊಂಡದ್ದು. ಎರಡನೆಯದಾಗಿ ಸಾಹಿತ್ಯ, ವಿಶಿಷ್ಟ ಬಗೆಯ ಗಮಕಗಳು ಮತ್ತು ಅರ್ಧ, ಕಾಲು ಸ್ವರಗಳ ಪ್ರಯೋಗ ಕರ್ನಾಟಕ ಸಂಗೀತದ ಜೀವಾಳವಾಗಿರುವುದರಿಂದ ಹನ್ನೆರಡು ನೇರ ಸ್ವರಸ್ಥಾನಗಳಿರುವ ಹಾರ್ಮೋನಿಯಂ ಇವನ್ನು ನಿರ್ವಹಿಸುವಲ್ಲಿ ಸಂಪೂರ್ಣ ಸೋತುಹೋಗುತ್ತದೆ. ಹಾಗಾಗಿ ಪ್ರಕೃತ ಸಂಗೀತದ ಪ್ರಾಥಮಿಕ ಕಲಿಕೆಯಲ್ಲಿ ಮಾತ್ರ ಕೆಲವೊಮ್ಮೆ ಈ ವಾದ್ಯ ಬಳಕೆಯಾಗುತ್ತಿದೆ.

ವಯೊಲಿನ್

ನಾಲ್ಕು ತಂತಿಗಳ ಈ ಪುಟ್ಟ ವಾದ್ಯ ವಿಶ್ವ ಸಂಗೀತರಂಗದಲ್ಲಿ ಅದ್ಭುತವೆನಿಸುವ ಸ್ಥಾನಮಾನ ಗಳಿಸಿಕೊಂಡಿದೆ. ಪಿಟೀಲಿನ ಮೂಲ ಎಲ್ಲಿ ಅನ್ನುವುದು ಇನ್ನೂ ಪ್ರಶ್ನಾರ್ಥಕವಾಗಿಯೇ ಉಳಿದುಕೊಂಡಿದೆ. ಭಾರತದ 'ರಾವಣಾಸ್ತ್ರ', ಅರಬ್ ಜಗತ್ತಿನ

'ರಬಾಬ್' ವಾದ್ಯಗಳು ಪಿಟೀಲಿನ ಮೂಲವಿದ್ದಿರಬಹುದೆನ್ನುವ ವಾದವೂ ಇದೆ. ಏನಿದ್ದರೂ ಅದು ವಿಕಾಸಗೊಂಡದ್ದು ಐರೋಪ್ಯ ದೇಶಗಳಲ್ಲಿ. 5 ತಂತಿಗಳ 'ವಿಯೆಲ್' ಎನ್ನುವ ವಾದ್ಯ 11ನೇ ಶತಮಾನದಲ್ಲಿ ಐರೋಪ್ಯ ದೇಶಗಳಲ್ಲಿ ಬಳಕೆಯಲ್ಲಿದ್ದ ಉಲ್ಲೇಖಗಳು ದೊರೆಯುತ್ತವೆ. ಕೊನೆಗೆ ಇದು ಪರಿಷ್ಕಾರಗೊಂಡು ವಯೋಲಾ ದ ಗಂಬಾ, ಲಿರಾ ದ ಬ್ರಸಿಯೋ ಮತ್ತು ವಯೋಲಾ ದ ಬ್ರಸಿಯೋ ಎನ್ನುವ ಮೂರು ಬಗೆಯ ವಾದ್ಯಗಳು ರಚನೆಯಾದವು. ಕೊನೆಯ ಮಾದರಿಯಿಂದ ಆಧುನಿಕ ವಯೊಲಿನ್ ಹುಟ್ಟಿಕೊಂಡಿತು.

ಆರಂಭದಲ್ಲಿ (1852) ಪಿಟೀಲು ನಿರ್ಮಿಸಲು ಕೈ ಹಚ್ಚಿದವರು ಇಟಲಿಯ ಲೂಟ್ ವಾದ್ಯ ತಯಾರಕರು. 1855ರಲ್ಲಲಿ ಈ ರಂಗದಲ್ಲಿ ಒಬ್ಬ ಅಸಾಮಾನ್ಯ ವಾದ್ಯ ತಯಾರಕ ಕಾಣಿಸಿಕೊಂಡ. ಅತನೇ ಅಂದ್ರಿಯ ಅಮಾಟಿ. ಈತ ನಿರ್ಮಿಸಿದ ಪಿಟೀಲು ಈಗಲೂ ಅಸ್ತಿತ್ವದಲ್ಲಿದೆ. ಈತನ ಶಿಷ್ಯರಲ್ಲಿ ಒಬ್ಬ ಅಂಟೋನಿಯೋ ಸ್ಟ್ರೆಡಿವರಿ (1644). ಪಿಟೀಲು ತಯಾರಿಯಲ್ಲಿ ಮುಂದೆ ಪರಿಷ್ಕಾರವೇ ಸಾಧ್ಯವಿಲ್ಲ ಅನ್ನುವ ಪರಿಪೂರ್ಣ ರೂಪದ ಪಿಟೀಲುಗಳನ್ನು ತಯಾರಿಸಿ ಜಗದ್ವಿಖ್ಯಾತನಾದವನು. ಈತ ನಿರ್ಮಿಸಿದ ಪಿಟೀಲುಗಳು ಕೆಲವು ನೂರುಗಳಷ್ಟು ಮಾತ್ರ. ಪಿಟೀಲಿನಲ್ಲಿ 'ಸ್ಟ್ರೆಡಿವೇರಿಯಸ್' ಅಂತಿಮ ಹೆಸರು. ಈತನ ಒಂದು ಪಿಟೀಲು ಕಳೆದ ವರ್ಷ ಲಂಡನ್‌ನ ಪ್ರಸಿದ್ಧ ಹರಾಜು ಅಂಗಣದಲ್ಲಿ 50 ಲಕ್ಷ ರೂಪಾಯಿಗಳಿಗೆ ಮಾರಾಟವಾಯಿತು.

ಪಾಶ್ಚಾತ್ಯ ಸಂಗೀತದಲ್ಲಿ ಮೊಜಾರ್ಟ್, ಸೆಬಾಸ್ಟಿಯನ್ ಬಾಕ್, ನಿಕಾಲೋ ಪಗನಿನಿ, ಯೆಹೂದಿ ಮೆನೂಹಿನ್ ಮೊದಲಾದ ಪ್ರತಿಭಾವಂತ ಸಂಯೋಜಕ, ವಾದಕರಿಂದ ಮುಗಿಲೆತ್ತರದ ಖ್ಯಾತಿ ಪಡೆದ ವಯೋಲಿನ್ ಕರ್ನಾಟಕ ಸಂಗೀತಕ್ಕೆ ಲಗ್ಗೆ ಇಟ್ಟದ್ದು 18ನೆಯ ಶತಮಾನದಲ್ಲಿ. ಪ್ರಸಿದ್ಧ ವಾಗ್ಗೇಯಕಾರ ಮುತ್ತುಸ್ವಾಮಿ ದೀಕ್ಷಿತರ ಸಹೋದರ ಬಾಲುಸ್ವಾಮಿ ದೀಕ್ಷಿತರು ಪಾಶ್ಚಾತ್ಯ ಸಂಗೀತ ಕಾರ್ಯಕ್ರಮದಲ್ಲಿ ಈ ವಾದ್ಯವನ್ನು ಕಂಡು, ಮನಸೋತು ಒಂದನ್ನು ಕೊಂಡುತಂದರು. ಪಾಶ್ಚಾತ್ಯ ಶೈಲಿಯ ಶ್ರುತಿಮೇಳದ ಬದಲು 'ಸ ಪ ಸ ಪ' ಶ್ರುತಿ ಮೇಳವನ್ನು ತಂತಿಗಳಿಗೆ ಹೊಂದಿಸಿ ನಮ್ಮ ಸಂಗೀತವನ್ನು ನುಡಿಸಿಯೇ ಬಿಟ್ಟರು. ಈ ವಾದ್ಯವನ್ನು ಹತ್ತು ಕಡೆ ಪ್ರಚಾರ ಮಾಡಿದವರು ಅವರ ಶಿಷ್ಯ, ತಂಜಾವೂರು ಚತುಷ್ಟಯರಲ್ಲಿ ಒಬ್ಬರಾದ ವಡಿವೇಲು. ಪಿಟೀಲಿನಲ್ಲಿ ಭಾರತೀಯ ವಿಧಾನದ ಬೆರಳುಗಾರಿಕೆಯನ್ನು ಪರಿಷ್ಕಾರಗೊಳಿಸಿದವರು ತಿರುಕೋಡಿಕಾವಲ್ ಕೃಷ್ಣ ಅಯ್ಯರ್ ಎನ್ನಲಾಗಿದೆ. ಮುಂದೆ ಅನೇಕ ಪ್ರತಿಭಾವಂತ ಕಲಾವಿದರು ಕರ್ನಾಟಕ ಸಂಗೀತದಲ್ಲಿ ವಯೊಲಿನ್ ಪ್ರಜ್ವಲಿಸುವಂತೆ ಮಾಡಿದರು. ಇವರಲ್ಲಿ ದ್ವಾರಂ ವೆಂಕಟಸ್ವಾಮಿ ನಾಯಿಡು, ಕುಂಭಕೋಣಂ ರಾಜಮಾಣಿಕ ಪಿಳ್ಳೆ, ಮೈಸೂರು ಚೌಡಯ್ಯ, ಲಾಲ್ಗುಡಿ ಜಯರಾಮನ್, ಟಿ. ಎನ್. ಕೃಷ್ಣನ್, ಎಂ. ಚಂದ್ರಶೇಖರ್, ಎಂ. ಎಸ್. ಗೋಪಾಲಕೃಷ್ಣನ್, ಎಲ್. ಸುಬ್ರಹ್ಮಣ್ಯಂ ಮೊದಲಾದವರು

ಪ್ರಮುಖರು. ಪ್ರಕೃತ ಕರ್ನಾಟಕ ಸಂಗೀತದಲ್ಲಿ ಪಿಟೀಲು ತನಿವಾದ್ಯವಾಗಿಯೂ, ಪಕ್ಕವಾದ್ಯವಾಗಿಯೂ ಕಂಗೊಳಿಸುತ್ತಿದೆ.

ಸ್ಯಾಕ್ಸೋಫೋನ್

ಇತ್ತೀಚೆಗೆ ತಾನೇ ಕರ್ನಾಟಕ ಸಂಗೀತದಲ್ಲಿ ಕಾಣಿಸಿಕೊಂಡು ಜನಪ್ರಿಯವಾಗಿರುವ ಒಂದು ವಾದ್ಯವೆಂದರೆ ಸ್ಯಾಕ್ಸೊಫೋನ್. ಸಾಮಾನ್ಯವಾಗಿ ನಾವು ಸ್ಯಾಕ್ಸೋಫೋನನ್ನು ಗುರುತಿಸುವುದು 'ಜಾಸ್' ಸಂಗೀತದೊಂದಿಗೆ. ಆದರೆ ವಾಸ್ತವದಲ್ಲಿ ಅದು ಹುಟ್ಟಿಕೊಂಡದ್ದು ಮಿಲಿಟರಿ ಬ್ಯಾಂಡ್‌ನ ಒಂದು ವಾದ್ಯವಾಗಿ. ಜರ್ಮನಿಯ ಆಡೋಲ್ಫ್ ಸ್ಯಾಕ್ಸ್ ಎನ್ನುವ ಒಬ್ಬ ವಾದ್ಯ ತಯಾರಕ ಕ್ಲಾರಿನೆಟ್ ಮತ್ತು ಕೊರೋನೆಟ್ ವಾದ್ಯಗಳ ವಿನ್ಯಾಸಗಳನ್ನು ಸಂಯುಕ್ತಗೊಳಿಸಿ 1845ರಲ್ಲಿ ಸ್ಯಾಕ್ಸೋಫೋನ್ ವಾದ್ಯವನ್ನು ನಿರ್ಮಿಸಿದ. ವಾದ್ಯದ ಸ್ವರೂಪ ಮತ್ತು ಶ್ರುತಿಯ ಆಧಾರದಲ್ಲಿ ಆಲ್ಟೋ, ಟೆನರ್, ಸೋಪ್ರನೋ ಮತ್ತು ಬಾಸ್ ಎನ್ನುವ ನಾಲ್ಕು ಮಾದರಿಗಳು ಈ ವಾದ್ಯದಲ್ಲಿ ಲಭ್ಯವಿವೆ. ಪಾಶ್ಚಾತ್ಯ ಶಾಸ್ತ್ರೀಯ ಮತ್ತು ಜನಪ್ರಿಯ ಸಂಗೀತದಲ್ಲಿ ಸ್ಯಾಕ್ಸ್‌ಗೆ ಮನ್ನಣೆ ದೊರಕಿಸಿಕೊಟ್ಟವರು ಜಾನ್ ಕಾಲ್ಟ್ರೇನ್, ಅರ್ನೆಟ್ ಕಾಲ್ಮೇನ್, ಜಾನ್ ಹ್ಯಾಂಡಿ, ಚಾರ್ಲಿ ಪಾರ್ಕರ್ ಮೊದಲಾದ ಪ್ರತಿಭಾವಂತ ವಾದಕರು.

ನಮ್ಮ ಬ್ಯಾಂಡ್‌ಸೆಟ್‌ಗಳಲ್ಲಿ (ಮೈಸೂರು ಪ್ಯಾಲೇಸ್ ಬ್ಯಾಂಡ್) ಸ್ಯಾಕ್ಸ್ 70-80 ವರ್ಷಗಳ ಹಿಂದೇನೇ ಕಾಣಿಸಿಕೊಂಡರೂ ಅದು ಕರ್ನಾಟಕ ಸಂಗೀತದ ಪ್ರಧಾನ ತನಿವಾದ್ಯವಾಗಿ ರೂಪುಗೊಂಡಿದ್ದು ಇತ್ತೀಚೆಗೆ. ದ.ಕ. ಪ್ರದೇಶದಲ್ಲಿ ಈ ವಾದ್ಯವನ್ನು ಪ್ರಥಮವಾಗಿ ಜನಪ್ರಿಯಗೊಳಿಸಿದವರು ಪುತ್ತೂರಿನ ಡೋಗ್ರ ಅವರು. ಆದರೆ ಅತ್ಯುನ್ನತ ಪ್ರತಿಭೆ ತೋರಿ, ಕರ್ನಾಟಕ ಸಂಗೀತದ ಎಲ್ಲ ಅಂಶಗಳನ್ನು ಮೈಗೂಡಿಸಿಕೊಂಡು ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದವರು ಕದ್ರಿ ಗೋಪಾಲನಾಥ್. ಪ್ರಕೃತ ಹಲವು ಮಂದಿ ಎಳೆಯ ಕಲಾವಿದರು ಸ್ಯಾಕ್ಸ್ ವಾದನದಲ್ಲಿ ಮುಂದೆ ಬರುತ್ತಿದ್ದಾರೆ.

ಕ್ಲೇರಿನೆಟ್

ಸ್ಯಾಕ್ಸ್‌ಗಿಂತ ಮೊದಲು ನಮ್ಮ ಸಂಗೀತ ಕ್ಷೇತ್ರವನ್ನು ಪ್ರವೇಶಿಸಿ ಅಷ್ಟು ಜನಪ್ರಿಯತೆಯನ್ನು ಗಳಿಸದ ಇನ್ನೊಂದು ಕೀ ವಾದ್ಯ ಕ್ಲೇರಿನೆಟ್. ಆಫ್ರಿಕನ್ ವುಡ್ ಎನ್ನುವ ಮರದಿಂದ ನಿರ್ಮಿಸಲಾಗುವ ಕ್ಲೇರಿನೆಟ್ ಎ ಬಿ ಸಿ ಎನ್ನುವ ಮೂರು ಮಾದರಿಗಳಲ್ಲಿ ಲಭ್ಯವಿದೆ. ನಾದದ ಗಾಂಭೀರ್ಯ ಮತ್ತು ಗಾತ್ರದಲ್ಲಿ ಸ್ಯಾಕ್ಸ್‌ನ್ನು ಸರಿಗಟ್ಟಲಾರದ ಈ ವಾದ್ಯ ಮದುವೆ, ಮುಂಜಿ, ಕೋಲ, ಉತ್ಸವಗಳಲ್ಲಿ ಹಿಂದೆ ಬಳಕೆಯಲ್ಲಿದ್ದ 'ಮೌರಿ' (ವಾಲಗ) ವಾದ್ಯವನ್ನು ಹಿನ್ನೆಲೆಗೆ ತಳ್ಳುವಲ್ಲಿ ಯಶಸ್ವಿಯಾಗಿದೆ. ಆದರೆ ಕಛೇರಿ ಸಂಗೀತದಲ್ಲಿ ಕೇಳಿಬರುವ ದೊಡ್ಡ ಹೆಸರೆಂದರೆ ಎ. ಕೆ. ಸಿ. ನಟರಾಜನ್ ಮಾತ್ರ. ಸ್ಯಾಕ್ಸ್‌ನ ಪ್ರಭಾವದಲ್ಲಿ ಕ್ಲೇರಿನೆಟ್ ಕರ್ನಾಟಕ ಸಂಗೀತದಲ್ಲಿ ಬೆಳೆಯದೆ ಹೋಯಿತು.

ಮೆಂಡೊಲಿನ್

ಕೇವಲ ಒಬ್ಬಾತ ಕಲಾವಿದನ ಪ್ರಚಂಡ ಪ್ರತಿಭೆಯಿಂದ ಜನಪ್ರಿಯತೆ ಗಳಿಸಿದ ಒಂದು ಸಂಗೀತ ವಾದ್ಯ ಮೆಂಡೊಲಿನ್. ಯು. ಶ್ರೀನಿವಾಸ ಅವರ ಹೆಸರು ಮೆಂಡೊಲಿನ್‌ನೊಂದಿಗೆ ಶಾಶ್ವತವಾಗಿ ಬೆಸೆದುಕೊಂಡಿರುತ್ತದೆ. ಇದರ ಮೂಲ ಮಾದರಿ ರೂಪುಗೊಂಡಿದ್ದು ನೇಪಲ್ಸ್ ನಗರದಲ್ಲಿ. ಸರಿಸುಮಾರು 18ನೇ ಶತಮಾನದ ಮಧ್ಯದಲ್ಲಿ ಜೆನಾರೋ ವಿವೇಶಿಯಾ ಎನ್ನುವಾತ ನಿರ್ಮಿಸಿದ ಮೊದಲ ಮೆಂಡೊಲಿನ್ ವಾದ್ಯ ಅಂಡಾಕೃತಿಯಲ್ಲಿತ್ತು. ಅದಕ್ಕೆ ಆಧುನಿಕ ರೂಪ (ಪಿಟೀಲಿನಂತೆ ಹಿಂಬದಿಯಲ್ಲಿ ತುಸು ಮಾತ್ರ ಬಾಗು) ನೀಡಿದವನು ಆರ್ವಿಲ್ ಗಿಬ್ಬನ್ (1856 - 1918).

ಏರು ಶ್ರುತಿ, ಅಖಂಡ ನಾದ ಹೊರಡಿಸದ, ಶಾಸ್ತ್ರೀಯ ಸಂಗೀತದ ದೃಷ್ಟಿಯಿಂದ ಅನೇಕ ಮಿತಿಗಳಿರುವ ಈ ವಾದ್ಯವನ್ನು ಅಲ್ಪ ಬದಲಾವಣೆಯೊಂದಿಗೆ ಒಂದು ಪರಿಪೂರ್ಣ ವಾದ್ಯವಾಗಿ ಮಾರ್ಪಡಿಸಿದ್ದು ಶ್ರೀನಿವಾಸ್ ಅವರ ಅದ್ಭುತ ಪ್ರತಿಭೆ. ಒಂದು ವೀಣೆ ಒದಗಿಸಬಲ್ಲ ಸಂಗೀತ ಸುಖವನ್ನು ಶ್ರೀನಿವಾಸ್ ಅವರ ಮೆಂಡೊಲಿನ್ ವಾದನ ನೀಡುತ್ತದೆ ಅಂದರೆ ಅದು ಖಂಡಿತಕ್ಕೂ ಉತ್ಪ್ರೇಕ್ಷೆಯಲ್ಲ. ಈಗ ಶ್ರೀನಿವಾಸ್ ಅವರ ಶಿಷ್ಯಂದಿರು ಹಾಗೂ ಇನ್ನಿತರರು ಮೆಂಡೊಲಿನ್ ವಾದನದಲ್ಲಿ ಹೆಸರು ಮಾಡುತ್ತಿದ್ದಾರೆ.

ಈ ವಾದ್ಯಗಳಲ್ಲದೆ ಗಿಟಾರ್, ಕೀಬೋರ್ಡ್, ವಯೋಲಾ, ಸೆಲ್ಲೊ, ಪಿಯಾನೋ ವಾದ್ಯಗಳಲ್ಲೂ ಕರ್ನಾಟಕ ಸಂಗೀತವನ್ನು ನುಡಿಸುವ ಯತ್ನ ನಡೆದಿದೆ. ಇವುಗಳಲ್ಲಿ ಯಾವುದು ಕರ್ನಾಟಕ ಸಂಗೀತದ ಪ್ರಧಾನವಾಹಿನಿಯನ್ನು ಸೇರಿಕೊಳ್ಳುತ್ತದೆ ಎನ್ನುವದನ್ನು ಕಾಲವೇ ನಿರ್ಧರಿಸುತ್ತದೆ.

ಹಿರಿಯ ಸಂಪಾದಕರು, 'ಉದಯವಾಣಿ', ಮಣಿಪಾಲ - 576104

ನಾಪತ್ತೆಯಾದ ಗ್ರಾಮಾಫೋನು

✍ ಎಸ್. ದಿವಾಕರ್

1906ರಷ್ಟು ಹಳೆಯದಾದ ಒಂದು ಚಿತ್ರದಲ್ಲಿ ನಮ್ಮ ದೇವತೆ ಸರಸ್ವತಿ ಎಂದಿನಂತೆ ಒಂದು ತಾವರೆ ಹೂವಿನ ಮೇಲೆ ಮಂಡಿಸಿದ್ದಾಳೆ. ಅವಳ ಎಡಗೈಯೇನೋ ವೀಣೆಯ ಮನೆಗಳನ್ನು ಮುಟ್ಟುತ್ತಿದೆ. ಆದರೆ ಅವಳ ಬಲಗಡೆ ಅರಳಿರುವ ಇನ್ನೊಂದು ದೊಡ್ಡ ತಾವರೆಯ ಮೇಲಿರುವುದು ಆ ವೀಣೆಯ ಬುರುಡೆಯಲ್ಲ, ತುತ್ತೂರಿಯ ಸಮೇತ ಇರುವ ಒಂದು ಗ್ರಾಮಾಫೋನ್ ಪೆಟ್ಟಿಗೆ. ಸರಸ್ವತಿ ತನ್ನ ಬಲಗೈಯಲ್ಲಿರುವ ಮುಳ್ಳನ್ನು ಗಾನ ಮುದ್ರಿಕೆಗೆ ಹಚ್ಚುತ್ತಿದ್ದಾಳೆ. ಅವಳ ಬಳಿಯಲ್ಲೇ ಅರಳಿರುವ ಇನ್ನಷ್ಟು ತಾವರೆ ಹೂಗಳು ಕಂತೆ ಕಂತೆ ಗಾನ ಮುದ್ರಿಕೆಗಳನ್ನು ಎತ್ತಿ ಹಿಡಿದಿವೆ. ಮೀನು, ಮೊಸಳೆ, ಕಪ್ಪೆ, ಆಮೆ, ಹಾವು, ಸುಂದರವಾದ ಒಂದು ಹಂಸ - ಎಲ್ಲವೂ ಆ ಗ್ರಾಮಾಫೋನಿನ ಗಾನದಲ್ಲಿ ತಲ್ಲೀನವಾಗಿವೆ. ಎಂಥ ವಿಚಿತ್ರ ಎನ್ನಬೇಡಿ. ಇದೊಂದು ಗ್ರಾಮಾಫೋನ್ ಕಂಪೆನಿಯ ಜಾಹೀರಾತಷ್ಟೆ.

ಸರಸ್ವತಿ ನಮ್ಮ ಪುರಾಣಗಳಲ್ಲಿ ಹೇಗಾದರೂ ಚಿತ್ರಣಗೊಂಡಿರಲಿ, ನಮಗೆಲ್ಲ ಆಕೆ ಪರಿಚಿತಳಾಗಿರುವುದು ರವಿವರ್ಮನಂಥ ಕಲಾವಿದರಿಂದ. ಆಕೆ ವಿದ್ಯೆಯ, ವಿವೇಕದ, ವಿಜ್ಞಾನದ ಕಲೆಗಳ ಅಧಿದೇವತೆ, ದೇವನಾಗರಿ ಲಿಪಿಯ ಸೃಷ್ಟಿಕರ್ತೆ. ಜೊತೆಗೆ ವೀಣಾಪಾಣಿ ಕೂಡ. ಗ್ರಾಮಾಫೋನ್ ಕಂಪೆನಿ ಭಾರತೀಯರ ದೈವಭಕ್ತಿ, ಸಂಗೀತ ಪ್ರೇಮ ಎರಡನ್ನೂ ತನ್ನ ಸರಕಿನ ಮಾರಾಟ ಹೆಚ್ಚಿಸಬಲ್ಲ ಒಂದು ಪ್ರತೀಕವಾಗಿ ಪರಿವರ್ತಿಸಲು ಹೊರಟಾಗ ಅದಕ್ಕೆ ಹೊಳೆದದ್ದು ನಮ್ಮ ಈ ಸರಸ್ವತಿಯೇ. ಇಂಥ ಜಾಹೀರಾತು ನೋಡಿದಾಗ ಆ ಕಾಲದ ನಮ್ಮ ಸನಾತನಿಗಳಿಗೆ ಏನನ್ನಿಸಿರಬಹುದು ಎಂಬ ಕುತೂಹಲ ನನಗೆ. ಯಾಕೆಂದರೆ ಈ ಕಾಲದಲ್ಲಿ ಎಂ. ಎಫ್. ಹುಸೇನರಂಥ ಕಲಾವಿದರು ಕೂಡ ತಮ್ಮ ಕಲ್ಪನೆಯ ಸರಸ್ವತಿಯ ಚಿತ್ರ ಬಿಡಿಸಿ ಪಾರಾಗುವಂತಿಲ್ಲ!

ಬಾರತದಲ್ಲಿ ಗ್ರಾಮಾಫೋನ್ ಉದ್ಯಮ ಪ್ರಾರಂಭವಾಗುವ ಹೊತ್ತಿಗೆ ಸಂಗೀತ, ನೃತ್ಯ ಕಲೆಗಳಿಗಿದ್ದ ರಾಜಾಶ್ರಯ ತಪ್ಪಿಹೋಗುವ ಸ್ಥಿತಿ. 1850ರ ಸುಮಾರಿಗೇ ಬ್ರಿಟಿಷರು ಸ್ಥಾಪಿಸಿದ್ದ ರೈಲ್ವೇ ವ್ಯವಸ್ಥೆ ಭೌಗೋಳಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಂಗಗಳ ಮೇಲೆ ತನ್ನ ಪ್ರಭಾವ ಬೀರತೊಡಗಿತ್ತು. ನಗರ ಪ್ರದೇಶಗಳ ಮಧ್ಯಮ ವರ್ಗದವರು ಸಂಗೀತದ ಪ್ರೋತ್ಸಾಹಕರಾದ ಮೇಲೆ ನಮ್ಮ ಸಂಗೀತಗಾರರು ದೆಹಲಿ, ಮುಂಬೈ, ಕಲ್ಕತ್ತ, ಮದರಾಸುಗಳಂಥ ನಗರಗಳಿಗೆ ಲಗ್ಗೆಯಿಡತೊಡಗಿದ್ದರು.

ನಮ್ಮ ಶಾಸ್ತ್ರೀಯ ಸಂಗೀತಕ್ಕೆ ತಾಂತ್ರಿಕತೆಯ ಸ್ಪರ್ಶವಾದುದು ಇಂಥ ಕಾಲದಲ್ಲಿ.

ಪಾಶ್ಚಾತ್ಯರ ತಾಂತ್ರಿಕತೆ ಅವರಿಗೇ ಅರ್ಥವಾಗದ, ಆದರೆ ಸಾಂಸ್ಕೃತಿಕ ಮಹತ್ವವುಳ್ಳ ಒಂದು ಮಾರುಕಟ್ಟೆಯನ್ನು ನಮ್ಮ ಸಂಗೀತಕ್ಕಾಗಿಯೇ ಸೃಷ್ಟಿಸಿತೆನ್ನಬೇಕು. ಪಾಶ್ಚಾತ್ಯರು ಭಾರತವನ್ನು ಭಾರತಕ್ಕೇ ಹೇಗೆ ಮಾರಬಹುದೆಂದು ಯೋಚಿಸಿದರೆಂಬುದಕ್ಕೆ ಮೇಲೆ ಸೂಚಿಸಿದ ಜಾಹೀರಾತು ಒಂದು ನಿದರ್ಶನ.

ಈಗ ಇತಿಹಾಸದ ಕಡೆಗೆ ತುಸು ಹೊರಳಿ ನೋಡೋಣ. 'ಗ್ರಾಮಾಫೋನ್ ಅಂಡ್ ಟೈಪ್‌ರೈಟರ್ ಲಿಮಿಟೆಡ್' ಲಂಡನ್ನಿನ ಬಹುದೊಡ್ಡ ಕಂಪೆನಿ. ಕಲ್ಕತ್ತೆಯಲ್ಲಿ ಈ ಕಂಪೆನಿಯ ಏಜೆಂಟಾಗಿದ್ದ ಜಾಕ್ ಹಾರ್ಡ್ 1902ರಲ್ಲಿ ಲಂಡನ್ನಿನ ಕೇಂದ್ರ ಕಛೇರಿಗೆ ಹೀಗೆ ಬರೆದ: '(ಇಲ್ಲಿನ) ಸ್ಥಳೀಯ ಸಂಗೀತ ತುರ್ಕಿಷ್ ಸಂಗೀತಕ್ಕಿಂತ ಹೆಚ್ಚು ಕರ್ಕಶವಾಗಿದೆ, ನಿಜ. ಆದರೂ ಇಲ್ಲಿ ನಮಗೆ ಇಷ್ಟವಾಗಿ ನಮ್ಮ ರಿಕಾರ್ಡುಗಳು ಮಾರಾಟವಾಗುವುದಾದರೆ ನಾವೇಕೆ ತಲೆ ಕೆಡಿಸಿಕೊಳ್ಳಬೇಕು?' ಆ ಕಂಪೆನಿ 1899ರಲ್ಲೇ ಲಂಡನ್ನಿನ ಮೆಯ್ಡನ್‌ಲೇನ್ ಸ್ಟುಡಿಯೋದಲ್ಲಿ ಭಾರತೀಯ ಸಂಗೀತದ ಮೊಟ್ಟಮೊದಲ ಗಾನ ಮುದ್ರಿಕೆಗಳನ್ನು ತಯಾರಿಸಿತ್ತು. ಹಾಡಿದ್ದವರು ಕ್ಯಾಪ್ಟನ್ ಬೋಲಾನಾಥ್, ಡಾ. ಹರಿಣಾ ದಾಸ್ ಮತ್ತು ಅಹಮದ್ ಎಂಬವರಂತೆ.

'ಗ್ರಾಮಾಫೋನ್ ಅಂಡ್ ಟೈಪ್‌ರೈಟರ್ ಲಿಮಿಟೆಡ್ (ಜಿಟಿಎಲ್) ಕಂಪೆನಿ 1902ರಲ್ಲಿ ನಮ್ಮ ಸಂಗೀತವನ್ನು ಧ್ವನಿ ಮುದ್ರಿಸಿಕೊಳ್ಳುವುದಕ್ಕಾಗಿ ಫ್ರೆಡ್ ಗೇಸ್‌ಬರ್ಗ್ ಎಂಬುವವನನ್ನು ಭಾರತಕ್ಕೆ ಕಳಿಸಿತು. ಅದೇ ವರ್ಷ ನವೆಂಬರ್ 8ರಂದು ಶನಿವಾರ ಅವನು ಶಶಿಮುಖಿ ಮತ್ತು ಫನಿಬಾಲಾ ಎಂಬ ನಾಚ್ ನರ್ತಕಿಯರ ಹಾಡುಗಳನ್ನು ಧ್ವನಿ ಮುದ್ರಿಸಿಕೊಂಡ.

ಹೀಗೆ ಇನ್ನೂ ಕೆಲವರ ಸಂಗೀತವನ್ನು ಧ್ವನಿ ಮುದ್ರಿಸಿಕೊಂಡ ಮೇಲೆ ಕಲ್ಕತ್ತೆಯ ಬಂಗಾಳಿ ಬಾಬುವೊಬ್ಬರ ಮನೆಯಲ್ಲಿ ಅವನು 'ಕಂಡು ಹಿಡಿದ' ಗಾಯಕಿ ಗೋಹರ್ ಜಾನ್ (1875 - 1930).

ಈಕೆಯ ಹೆಸರನ್ನು ನಾನು ಮೊದಲು ಓದಿದ್ದು ಪ್ರಸಿದ್ಧ ಲೇಖಕ ಕೇಫ ಅವರ ಹಾಸ್ಯ ಬರಹಗಳಲ್ಲಿ. ಗಾನ ಮುದ್ರಿಕೆಗಳ ಆರಂಭ ಕಾಲದಲ್ಲಿ ಈಕೆಯಷ್ಟು ಬೇಡಿಕೆಯಲ್ಲಿದ್ದ ಗಾಯಕಿ ಇನ್ನೊಬ್ಬಳಿರಲಿಲ್ಲವೆಂದು ಇತ್ತೀಚಿನವರೆಗೂ ನನಗೆ ಗೊತ್ತಿರಲಿಲ್ಲ. 'ಜಿಟಿಎಲ್'ನ ಮೊಟ್ಟಮೊದಲ ಧ್ವನಿಮುದ್ರಣ ಕಲಾವಿದೆಯಾದ ಈಕೆ ಗ್ರಾಮಾಫೋನ್ ಮಾಧ್ಯಮದಿಂದ ಜನಪ್ರಿಯತೆಯ ತುತ್ತತುದಿಗೇರಿ, ನಂತರ ಮೂಕಿ ಚಿತ್ರಗಳಲ್ಲಿಯೂ ಅಭಿನಯಿಸಿ ತನ್ನ ಗಾನ ಮುದ್ರಿಕೆಗಳ ಹಾಡಿಗೆ ತಾನೇ ತುಟಿ ಆಡಿಸಿದ್ದುಂಟು. ಗೇಸ್‌ಬರ್ಗ್‌ನ ಧ್ವನಿಮುದ್ರಣಕ್ಕಾಗಿ ಇವಳು ಹಿಂದಿ, ಇಂಗ್ಲಿಷ್, ಅರಾಬಿಕ್, ಕಚ್, ತುರ್ಕಿ, ಸಂಸ್ಕೃತ, ಬಂಗಾಲಿ ಮತ್ತು ಪುಷ್ತು ಭಾಷೆಗಳ ಹಾಡುಗಳನ್ನು ಹಾಡಿದಳು.

ಗೋಹರ್ ಜಾನ್ ಮೂಲತಃ ಆರ್ಮಿನಿಯನ್ ಯೆಹೂದಿ. ಅವಳ ತಂದೆ ವಿಲಿಯಂ ರಾಬರ್ಟ್ ಯಿಯೊವಾರ್ಡ್, ತಾಯಿ ವಿಕ್ಟೋರಿಯಾ ಹೆಮಿಂಗ್. ವಿಕ್ಟೋರಿಯಾ ತನ್ನ ಗಂಡನಿಂದ ವಿಚ್ಛೇದನಗೊಂಡು, ಇಸ್ಲಾಂಗೆ ಮತಾಂತರ ಹೊಂದಿ ಈ ಮಗಳನ್ನು

ವಾರಣಾಸಿಯಲ್ಲಿ ಬೆಳೆಸಿದಳಂತೆ. 'ಜಿಟಿಎಲ್' ಕಂಪೆನಿ ಗೋಹರ್ ಜಾನ್‌ಳಿಂದ ಅದೆಷ್ಟು ಹಾಡುಗಳನ್ನು ಹಾಡಿಸಿತೆಂದರೆ 1930ರಲ್ಲಿ ಕೂಡ ಅದರ ಕ್ಯಾಟಲಾಗುಗಳಲ್ಲಿ ಅವಳ ಗಾನ ಮುದ್ರಿಕೆಗಳು ಲಭ್ಯವಾಗಿದ್ದವು. 1910 - 12ರ ಸುಮಾರಿನಲ್ಲಿ ಒಂದು ರೆಕಾರ್ಡಿಂಗ್ ಸೆಷನ್‌ಗೆ ಒಂದು ಸಾವಿರ ರೂಪಾಯಿ ವಸೂಲು ಮಾಡುತ್ತಿದ್ದಳಂತೆ ಗೋಹರ್ ಜಾನ್!

ಭಾರತದಲ್ಲಿ ಸಿನಿಮಾ, ಟಿವಿಗಳಿಗೂ ಮುಂಚೆ ಸಂಗೀತಕ್ಕೆ ಸಂಬಂಧಿಸಿದ ಸಮೂಹ ಮಾಧ್ಯಮವೆಂದರೆ ಗ್ರಾಮಾಫೋನ್ ಗಾನ ಮುದ್ರಿಕೆಗಳು. ಗ್ರಾಮಾಫೋನ್ ಪೆಟ್ಟಿಗೆಯನ್ನು, ಗಾನ ಮುದ್ರಿಕೆಗಳನ್ನು ಮನೆಯಲ್ಲಿಟ್ಟುಕೊಳ್ಳುವುದೇ ಶ್ರೀಮಂತಿಕೆಯ ಒಂದು ಸಂಕೇತವಾಗಿದ್ದ ಕಾಲ ಅದು. 'ಜಿಟಿಎಲ್' ಕಂಪೆನಿ ಈ ಹೊಸ ತಾಂತ್ರಿಕ ಆವಿಷ್ಕಾರದ ಮೂಲಕ ದೇವದಾಸಿಯರ ಅಂಗಳದಲ್ಲೇ ಗಿರಕಿ ಹೊಡೆಯುತ್ತಿದ್ದ ಸಂಗೀತದ ಹಲವು ಪ್ರಕಾರಗಳನ್ನು ಮಾರುಕಟ್ಟೆಗೆ, ಮಧ್ಯಮ ವರ್ಗದವರ ಮನೆಗಳಿಗೆ ಕರೆದುತಂದಿತೆಂಬುದನ್ನೂ ನಾವು ಮರೆಯುವಂತಿಲ್ಲ. ಅಂದ ಹಾಗೆ, 'ಜಿಟಿಎಲ್' ಕಂಪೆನಿ 1912ರ ವರೆಗೂ ಗ್ರಾಮಾಫೋನುಗಳ ಜೊತೆ ಟೈಪ್‌ರೈಟರ್ ಯಂತ್ರಗಳನ್ನೂ ಮಾರುತ್ತಿತ್ತಂತೆ. ಹಿಂದಿ ಚಲನಚಿತ್ರ ನಟ ಕೆ. ಎಲ್. ಸೈಗಲ್ ಪ್ರಸಿದ್ಧ ಗಾಯಕರಾಗುವುದಕ್ಕೆ ಮೊದಲು ಟೈಪ್‌ರೈಟರುಗಳನ್ನು ಮಾರುತ್ತಿದ್ದುದು ಕೇವಲ ಕಾಕತಾಳೀಯ!

ಗ್ರಾಮಾಫೋನ್ ಜನಪ್ರಿಯವಾಗತೊಡಗಿದ್ದೇ ಕೆಲವರು ಈ ಹೊಸ ಮಾಧ್ಯಮದ ಬಗ್ಗೆ ಕಳವಳಗೊಂಡದ್ದುಂಟು. ಅವರಲ್ಲಿ ಮುಖ್ಯರಾದವರು ಕಲಾ ಇತಿಹಾಸಕಾರ, ದಾರ್ಶನಿಕ ಆನಂದ ಕುಮಾರಸ್ವಾಮಿ. 1909ರಷ್ಟು ಹಿಂದೆಯೇ ಅವರು ಬರೆದದ್ದು ಹೀಗೆ:

"ಸುಸಂಸ್ಕೃತನಾದ, ವಿಶೇಷತಃ ಸಂಗೀತ ಸಂಸ್ಕೃತಿ ಸಂಪನ್ನನಾದ ವ್ಯಕ್ತಿಗೆ ಗ್ರಾಮಾಫೋನಿನ ನಿನಾದ ಒಂದು ಮನೋರಂಜನೆಯಲ್ಲ, ಅದೊಂದು ತೀರ ನಾಜೂಕುತನವುಳ್ಳ ಹಿಂಸೆ. ಒಳ್ಳೆಯ ಸಂಗೀತಾಭಿರುಚಿಯುಳ್ಳ ಹಾಗೂ ಗ್ರಾಮಾಫೋನ್ ಸಂಗೀತದಲ್ಲಿ ವಿಶೇಷ ಒಲವಿರುವ ಒಬ್ಬನೇ ವ್ಯಕ್ತಿಯನ್ನು ಕಲ್ಪಿಸಿಕೊಳ್ಳುವುದು ಕೂಡ ಸಾಧ್ಯವಿಲ್ಲ.

ಮನುಷ್ಯನ ಜಾಗದಲ್ಲಿ ಗ್ರಾಮಾಫೋನನ್ನು ಅಂಗೀಕರಿಸಿದಾಗಲೆಲ್ಲ ನೀವು ಸಂಗೀತಗಾರನನ್ನು ಹೀನಾಯಿಸುತ್ತೀರಿ, ಅವನ ಬದುಕನ್ನು ಕಸಿದುಕೊಳ್ಳುತ್ತೀರಿ, ನಿಮ್ಮ ಜನರ ಸಾಮೂಹಿಕ ಆತ್ಮವನ್ನೇ ಘಾಸಿಗೊಳಿಸುತ್ತೀರಿ.

ಸಂಗೀತಗಾರನೊಬ್ಬ ನೀಡುವ ಕಛೇರಿ ಪುನರಾವರ್ತನೆ ಅಲ್ಲವೇ ಅಲ್ಲ. ಪ್ರತಿಯೊಂದು ಸಂದರ್ಭದಲ್ಲೂ ವಿಭಿನ್ನ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುತ್ತ ಅವನು ಹಳೆಯ ಪ್ರಕಾರದ ಮೂಲಕ ಹೊಸ ಹೊಸ ಅಭಿವ್ಯಕ್ತಿ ಕಂಡುಕೊಳ್ಳುತ್ತಿರುತ್ತಾನೆ. ಅವನ ವೈಯಕ್ತಿಕ ಪ್ರಭಾವ, ಅವನ ವ್ಯಕ್ತಿತ್ವದ ಛಾಪು, ಶಿಸ್ತುಬದ್ಧನಾಗಿ ಪಾರಂಪರಿಕ ಕಲಾಭಾಷೆಯಲ್ಲಿ ಭಾವನೆಗಳಿಗೆ ಅಭಿವ್ಯಕ್ತಿ ನೀಡುವ ಜೀವಂತಿಕೆ - ಇವೆಲ್ಲ ಅವನ ಗಾಯನದಲ್ಲಿ ಮೇಳವಿಸಿರುತ್ತವೆ. ನಿರ್ಜೀವ ಸ್ಥಿತಿಗೆ, ಭಯಂಕರತೆಗೆ ಗ್ರಾಮಾಫೋನಿನಷ್ಟು ಸರಿಸಾಟಿಯಾದುದು ಇನ್ನೊಂದಿಲ್ಲ".

('ಎಸ್ಸೇಸ್ ಇನ್ ನ್ಯಾಷನಲ್ ಐಡಿಯಾಲಿಸಂ' ಎಂಬ ಪುಸ್ತಕ ನೋಡಿ)

ಆನಂದ ಸ್ವಾಮಿಯವರ ಈ ಕಳಕಳಿಯ, ಎಚ್ಚರಿಕೆಯ ಮಾತುಗಳನ್ನು ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲವೆಂದು ಆ ನಂತರದ ಗ್ರಾಮಾಫೋನ್ ಚರಿತ್ರೆಯೇ ಸಾಬೀತುಗೊಳಿಸುತ್ತದೆ. ಹಣವಿದ್ದವರೆಲ್ಲ ಕೊಂಡುಕೊಳ್ಳಬಹುದಾಗಿದ್ದ ಗ್ರಾಮಾಫೋನ್ ಪೆಟ್ಟಿಗೆ ಬಹು ಬೇಗ ಹಳ್ಳಿ-ಪಟ್ಟಣಗಳೆನ್ನದೆ ಎಲ್ಲೆಡೆಯೂ ಹಾಡತೊಡಗಿತು. ದೇವರನಾಮ, ಶಾಸ್ತ್ರೀಯ ಸಂಗೀತಗಳಷ್ಟೆ ಅಲ್ಲ, ಸಿನಿಮಾ ಹಾಡುಗಳ ಪುಸ್ತಕಗಳಿವೆಯಲ್ಲ, ಹಾಗೆ ಆ ಕಾಲದಲ್ಲಿ ಗ್ರಾಮಾಫೋನ್ ಹಾಡುಗಳ ಪುಸ್ತಕಗಳು ಮಾರಾಟವಾಗುತ್ತಿದ್ದವು. 1938ರಲ್ಲಿ ಬೆಂಗಳೂರು ಅವೆನ್ಯೂ ರೋಡಿನ ಡಿ. ಎಸ್. ಸೀತಾರಾಮ ಶೆಟ್ಟಿಯವರು ಹೊರತಂದ 'ಗ್ರಾಮಾಫೋನ್ ಕೀರ್ತನೆಗಳು' ಎಂಬ ನಾಲ್ಕಾಣೆಯ ಪುಸ್ತಕ ಅದು ಹೇಗೋ ಇನ್ನೂ ನನ್ನಲ್ಲಿ ಉಳಿದುಬಿಟ್ಟಿದೆ. ಅದರಲ್ಲಿ ಕೆ. ಅಶ್ವತ್ಥಮ್ಮ, ಇ. ಪಿ. ಗೌರಿ ಅಮ್ಮಾಳ್, ಬಿ. ಎಸ್. ರಾಜಯ್ಯಂಗಾರ್, ಸಿ. ಕಾಂತಾಮಣಿ, ವೇಮೂರಿ ಗಗ್ಗಯ್ಯಗಾರು, ಮೈಸೂರು ಕೆ. ವೆಂಕಟಲಕ್ಷ್ಮಮ್ಮ, ವೆಂಕೂಬಾಯ್ ಬಳ್ಳಾರಿ, ಪ್ರೊಫೆಸರ್ ಸಾಂಬಮೂರ್ತಿ, ಚೆಲ್ಲಂ ವೆಂಕಟರಾಮಯ್ಯರ್, ಉಡುಪಿ ಕೃಷ್ಣಾಬಾಯಿ, ಅರಿಯಕುಡಿ, ಆರ್. ಬೃಹದಾಂಬಾಳ್ ಮೊದಲಾದವರ ಚಿತ್ರಗಳ ಜೊತೆಗೆ ಅವರು ಹಾಡಿರುವ ಹಾಡು/ಕೀರ್ತನೆಗಳಿವೆ. ಇವರಲ್ಲದೆ ಕರ್ನಾಟಕ ಸಂಗೀತದ ಇತರ ಎಲ್ಲ ಘಟಾನುಘಟಿಗಳೂ ಗಾನ ಮುದ್ರಿಕೆಗಳಿಗಾಗಿ ತಮ್ಮ ಧ್ವನಿಯನ್ನು ಧಾರೆಯೆರೆದರಷ್ಟೆ.

'ಜಿಟಿಎಲ್' ಮುಂದೆ 'ದಿ ಗ್ರಾಮಾಫೋನ್ ಕಂಪೆನಿ ಲಿಮಿಟೆಡ್' ಆಯಿತು. ಅದರ ಗಾನ ಮುದ್ರಿಕೆಗಳಿಗೆ 'ಹಿಸ್ ಮಾಸ್ಟರ್ಸ್‌ವಾಯ್ಸ್' (ಎಚ್‌ಎಂವಿ) ಎಂಬ ಮೊಹರು ಬಂತು. ಗ್ರಾಮಾಫೋನ್ ತುತ್ತೂರಿಯ ಮುಂದೆ ಕೂತು ಗಾನಾಮೃತವನ್ನು ಸವಿಯುತ್ತಿರುವ ಒಂದು ನಾಯಿ ಅದರ ಸಾಂಕೇತಿಕ ಚಿತ್ರವಾಯಿತು (1910ರಲ್ಲಿ ಇಂಥ ಚಿತ್ರಕ್ಕೆ ಪೋಸ್ ಕೊಟ್ಟ ನಾಯಿಯ ಹೆಸರು 'ನಿಪ್ಪರ್').

ಹಿಂದೂಸ್ಥಾನಿ ಸಂಗೀತವನ್ನು ಗಾನ ಮುದ್ರಿಕೆಗಳಿಗೆ ಅಳವಡಿಸುವಲ್ಲಿಯೂ 'ಎಚ್‌ಎಂವಿ' ವಹಿಸಿದ ಪಾತ್ರ ಗಮನಾರ್ಹ. 1938ರಲ್ಲಿ ಸ್ವತಃ ಶಾಸ್ತ್ರೀಯ ಗಾಯಕರಾದ ಬಿ. ಎಸ್. ಜೋಶಿ ಧ್ವನಿಮುದ್ರಣ ತಜ್ಞರಾಗಿ ಈ ಕಂಪೆನಿಯನ್ನು ಸೇರಿದರು. ಬಿಸ್ಮಿಲ್ಲಾ ಖಾನ್‌ರಿಂದ ಹಿಡಿದು ಕೇಸರೀಬಾಯಿ ಕೇಳ್ಕರ್‌ವರೆಗೆ ಅವರು ಧ್ವನಿಮುದ್ರಿಸಿಕೊಳ್ಳದ ಹೆಸರಾಂತ ಸಂಗೀತಗಾರರೊಬ್ಬರೂ ಇಲ್ಲ. ಆ ಕಾಲದ ಸಂಗೀತ ಲೋಕ, ಧ್ವನಿಮುದ್ರಣಕ್ಕಾಗಿ ಗಾಯಕರನ್ನು ಒಲಿಸಿಕೊಳ್ಳಬೇಕಾದ ಕಷ್ಟ ಇತ್ಯಾದಿ ಹಲವು ಸಂಗೀತ/ಸಾಂಸ್ಕೃತಿಕ ವಿವರಗಳು ಅವರು ನಿವೃತ್ತರಾದ ಮೇಲೆ ಬರೆದ 'ಡೌನ್ ಮೆಲಡಿ ಲೇನ್' ಎಂಬ ಪುಸ್ತಕದಲ್ಲಿ ತುಂಬ ಸೊಗಸಾಗಿ ಮೂಡಿ ಬಂದಿವೆ. ಅದೇ ಕಾಲಘಟ್ಟದಲ್ಲಿ ಮದರಾಸಿನ ಧ್ವನಿಮುದ್ರಣ ತಜ್ಞರು ಕರ್ನಾಟಕ ಸಂಗೀತದ ದಿಗ್ಗಜರನ್ನೆಲ್ಲ ಗಾನ ಮುದ್ರಿಕೆಗಳಿಗಾಗಿ ಹಿಡಿದುಹಾಕಿದ್ದರಷ್ಟೆ. ಆದರೆ ಯಾಕೋ ಏನೋ ಯಾರೂ, ಯಾವ ಭಾಷೆಗಳಲ್ಲೂ ಆ ಬಗ್ಗೆ ಪುಸ್ತಕ ಬರೆದಂತಿಲ್ಲ.

ಇಪ್ಪತ್ತೊಂದನೆಯ ಶತಮಾನದಲ್ಲಿರುವ ನಮಗೆ ಈಗ ಗ್ರಾಮಾಫೋನ್ ಗತಕಾಲದ ಒಂದು ಕುರುಹು ಮಾತ್ರ. ಆದರೆ, ಕಳೆದ ಶತಮಾನದ ಪೂರ್ವಾರ್ಧ ಕಾಲವನ್ನು ಕತೆ

ಕಾದಂಬರಿಗಳಲ್ಲಿ ಸೆರೆಹಿಡಿಯಬೇಕಾದಾಗ ಅದೇ ಗ್ರಾಮಾಫೋನ್ ಧ್ವನಿಶಕ್ತಿಯುಳ್ಳ ಒಂದು ಪ್ರತೀಕವಾಗಿ ನಮ್ಮ ನೆರವಿಗೆ ಬಂದೀತು. ಅಶೋಕ ಕುಲಕರ್ಣಿ ಬರೆದ 'ನಿರ್ಗತಿಕರು' ಕಾದಂಬರಿಯಲ್ಲಿ ಗ್ರಾಮಾಫೋನ್ ಒಂದು ಸಾರ್ಥಕ ಪ್ರತೀಕವಾಗಿರುವುದು ಹೀಗೆ. ನಾನು ಶಾಲೆಯಲ್ಲಿ ಓದುತ್ತಿರುವಾಗ ಯಾರಾದರೂ ಹೇಳಿದ್ದನ್ನೇ ಹೇಳಿದರೆ 'ಪ್ಲೇಟು ಹಾಕಿಬಿಟ್ಟ' ಎಂದು ತಮಾಷೆ ಮಾಡುತ್ತಿದ್ದರು ಗೆಳೆಯರು. ರಾಮಚಂದ್ರ ಶರ್ಮರ 'ಮುಳ್ಳು ಜಾಡಿಗೆ ಸಿಕ್ಕಿತ್ತು' ಎಂಬ ಕತೆಯಲ್ಲಿರುವ, 'ಗ್ರಾಮಾಫೋನ್ ತಟ್ಟೆಯ ಮೇಲೆ ದಾರಿ ಮರೆತ ಮುಳ್ಳು ತುಳಿದ ದಾರಿಯನ್ನೇ ತುಳಿಯುತ್ತಿತ್ತು' ಎಂಬ ವಾಕ್ಯ ಇಡೀ ಕತೆಯ ಆಶಯವನ್ನು ಸೂತ್ರರೂಪದಲ್ಲಿ ಕಟ್ಟಿಕೊಡುತ್ತದೆ. ಮತ್ತೆ 'ಹಿಸ್ ಮಾಸ್ಟರ್ಸ್ ವಾಯ್ಸ್' ಎಂದರೆ ನನಗೀಗ ತಟ್ಟನೆ ನೆಪಾಗುವುದು ಅಡಿಗರ 'ಮೂಲಕ ಮಹಾಶಯರು' ಎಂಬ ಕವನ.

ಗಾನ ಮುದ್ರಿಕೆಗಳನ್ನು ಮಾರುವ ಒಂದು ಅಂಗಡಿ. ಅಂಗಡಿಯವ ಗಾನ ಮುದ್ರಿಕೆಗಳ ಮೇಲಿನ ಧೂಳನ್ನು ಒರೆಸುತ್ತಿರುವಾಗ ಒಬ್ಬ ಠೊಣಪ, ಇನ್ನೊಬ್ಬ ಲಂಬು ಅಲ್ಲಿಗೆ ಬರುತ್ತಾರೆ. ಲಂಬುವಿನ ಷರಾಯಿಯೊಳಗೆ ಸೇರಿಕೊಂಡಿರುವ ಏಡಿಯೊಂದು ಕಚ್ಚಿದ್ದೇ ಅವನು ಥಕಥಕ ಕುಣಿಯುತ್ತಾನೆ. ಠೊಣಪ ಅವನಿಗೊಂದು ಬಿಗಿಯುತ್ತಾನೆ. ಆಮೇಲೆ ಅವರಿಬ್ಬರಲ್ಲಿ ಹತ್ತಿಕೊಂಡ ಜಗಳಕ್ಕೆ ಅಂಗಡಿಯ ನೂರಾರು ಗಾನ ಮುದ್ರಿಕೆಗಳು ಆಹುತಿಯಾಗುತ್ತವೆ. ನೆನಪಾಯಿತೆ, ಲಾರೆಲ್-ಹಾರ್ಡಿ ಸಿನಿಮಾ? ಮೂಕಿ ಚಿತ್ರಗಳ ಕಾಲದ ಆ ಸಿನಿಮಾ ಕಾಲಪುರುಷನೇ ಗಾನ ಮುದ್ರಿಕೆಗಳನ್ನು ಹಾಳುಮಾಡಿರುವ ಈ ಕಾಲದ ಮುನ್ಸೂಚನೆಯೇ?

ತೀರ ಈಚೆಗೆ, ಅಂದರೆ ಮೂರು ವರ್ಷಕ್ಕೆ ಮುನ್ನ ಕರ್ನಾಟಕ ಸಂಗೀತದ ಆಚಾರ್ಯಪುರುಷರಾದ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರರನ್ನು ನಾನು ಭೇಟಿಯಾಗಿದ್ದಾಗ ತತ್ರಾಪಿ ಈ ಗ್ರಾಮಾಫೋನ್ ರೆಕಾರ್ಡುಗಳ ಬಗ್ಗೆ ಮಾತು ಬಂತು. ತಕ್ಷಣ ಅಯ್ಯರರು, "ಗ್ರಾಮಾಫೋನ್ ರೆಕಾರ್ಡುಗಳು ಬಂದದ್ದೇ ನಮ್ಮ ಸಂಗೀತ ತನ್ನ ಪಾವಿತ್ರ್ಯ ಕಳಕೊಂಡಿತು; ಸಂಗೀತಗಾರರಿಗೆ ಬೇಕಾದ ಮನೋಧರ್ಮ ಇಲ್ಲವಾಯಿತು" ಎಂದು ನಿಟ್ಟುಸಿರಿಟ್ಟವರೇ ತಮ್ಮ ಗುರು ಮಹಾರಾಜಪುರಂ ವಿಶ್ವನಾಥ ಅಯ್ಯರರಿಗೆ ಸಂಬಂಧಿಸಿದ ಒಂದು ಪ್ರಸಂಗ ನೆನಪಿಸಿಕೊಂಡರು. ವಿಶ್ವನಾಥ ಅಯ್ಯರರನ್ನು ಅವರ ಮಿತ್ರರು ಕಾಡಿಸಿ, ಪೀಡಿಸಿ, ಪುಸಲಾಯಿಸಿ ಒಂದು ಗಾನ ಮುದ್ರಿಕೆಗಾಗಿ ಅವರಿಂದ ಹಾಡಿಸಿದರಂತೆ. ಆಮೇಲೆ ರಸಿಕರೊಬ್ಬರು ಆ ಗಾನ ಮುದ್ರಿಕೆಯನ್ನು ಮೆಚ್ಚಿಕೊಂಡು ಮಾತಾಡಿದಾಗ ವಿಶ್ವನಾಥ ಅಯ್ಯರರು, "ನೋಡಿ, ಇದರ ಬೆಲೆ ಇಷ್ಟೇ" ಎಂದು ಆ ಗಾನ ಮುದ್ರಿಕೆಯನ್ನು ನೆಲಕ್ಕೆ ಕುಕ್ಕಿ ಒಡೆದುಹಾಕಿದರಂತೆ.

ನಾವೂ ಹಾಗೆ ಒಡೆಯೋಣವೆಂದರೆ ಗ್ರಾಮಾಫೋನ್ ರೆಕಾರ್ಡುಗಳಾದರೂ ಎಲ್ಲಿವೆ? ನಮ್ಮದೀಗ ಧ್ವನಿಸುರುಳಿಗಳ ಕಾಲ, ಸಿ.ಡಿ.ಗಳ ಕಾಲ.

471, 21ನೆಯ ಅಡ್ಡರಸ್ತೆ, ಬನಶಂಕರಿ ಎರಡನೆಯ ಘಟ್ಟ, ಬೆಂಗಳೂರು - 560070

ಶಾಸ್ತ್ರೀಯ ಸಂಗೀತ ಶಿಕ್ಷಣ - ಪಾರಂಪರಿಕ ಮತ್ತು ಆಧುನಿಕ

✍ ಸರೋಜಾ ಆರ್. ಆಚಾರ್ಯ

ಸಂಗೀತ : ಮನುಕುಲಕ್ಕೆ ದೇವರು ನೀಡಿದಂತಹ ಅಮೂಲ್ಯವಾದ ಉಡುಗೊರೆ! ಮಲ್ಲಿಗೆಯ ಸರುಗಂಪು ಅಗೋಚರವಾದರೂ ಘ್ರಾಣೇಂದ್ರಿಯಕ್ಕೆ ಹಿತ ನೀಡುವಂತೆ, ಶ್ರವಣೇಂದ್ರಿಯದ ಮೂಲಕ ಮನಸ್ಸು, ಬುದ್ಧಿ ಎರಡನ್ನೂ ಏಕಕಾಲಕ್ಕೆ ಆವರಿಸಿ, ಪರಿಣಾಮ ಬೀರುವ ನಾದತರಂಗಗಳು!

ವಿಶ್ವದ ಆದಿಯಲ್ಲಿ, ಪಕ್ಷಿ ಸಂಕುಲದ ಮಧುರ ಉಲಿತದ ಮೂಲಕ, ಹರಿಯುವ ತೊರೆಯ ಮಂಜುಳ ನಿನಾದದ ಮೂಲಕ, ಬಿದಿರುಮೆಳೆಯಲ್ಲಿ ಕರಿದುಂಬಿ ಕೊರೆದ ತೂತಿನೊಳಗೆ ಹೊಕ್ಕು ಹೊರಬಂದ ಗಾಳಿಯ ಮೂಲಕ ಪ್ರಕೃತಿ ನಮಗೆ ತೋರಿಸಿಕೊಟ್ಟ ಈ ಸುಖಾನುಭವಗಳೇ ನಮ್ಮ ಸಂಗೀತದ ಮೊದಲ ಪಾಠ!

ಜನಜೀವನದ ಎಲ್ಲಾ ಸ್ತರಗಳಲ್ಲೂ ಹಾಸುಹೊಕ್ಕಾಗಿರುವ ಸಂಗೀತ ಸುಖ, ದುಃಖ, ಪ್ರೀತಿ, ಕರುಣೆ, ಭಕ್ತಿಗಳ ಅಭಿವ್ಯಕ್ತಿಗೆ ಹಾಗೂ ಭಾವಸಂವಹನಕ್ಕೆ ಏಕಮಾತ್ರ ಮಾಧ್ಯಮವೆನಿಸಿದೆ. ಮನಸ್ಸಿಗೆ ಶಾಂತಿ ಮತ್ತು ಸಂತಸವನ್ನು ನೀಡುವುದೇ 'ಸಂ'ಗೀತದ ಪರಮೋದ್ದೇಶವಾಗಿದೆ. ವಿಶ್ವದ ನೂರಾರು ದೇಶಗಳ ಸಂಗೀತ ಪದ್ಧತಿಗಳು ಆಯಾ ದೇಶಗಳ ಮೂಲ ಸಂಸ್ಕೃತಿಯ ಮುಖವಾಣಿಯಾಗಿ, ಅಲ್ಲಿಯ ಜೀವನಶೈಲಿಗನುಗುಣವಾಗಿ ರೂಪುಗೊಂಡಿವೆ. ಭಾರತೀಯ ಲಲಿತಕಲೆಗಳಲ್ಲೂ ಸಂಗೀತಕ್ಕೆ ಅಗ್ರಮಾನ್ಯವಾದ ಸ್ಥಾನವಿದೆ. ನಮ್ಮಲ್ಲಿ ಪ್ರಾಂತೀಯವೆನಿಸುವ ಅಸಂಖ್ಯವಾದ ಸಂಗೀತ ಪ್ರಕಾರಗಳಿದ್ದರೂ, ಪ್ರಮುಖವಾದ ಮತ್ತು ಪ್ರಾಚೀನವಾದ ಎರಡು ಸಂಗೀತ ಪದ್ಧತಿಗಳು - ಉತ್ತರಾದಿ ಮತ್ತು ದಕ್ಷಿಣಾದಿ - ಬಳಕೆಯಲ್ಲಿವೆ.

* * *

ಭಾರತೀಯ ಸಂಗೀತ ಸಾಮವೇದಜನಿತವಾದದ್ದೆನ್ನುತ್ತಾರೆ. ಸಾಮವೇದದ ಶಿಕ್ಷಾ, ಪ್ರಾತಿಶಾಖ್ಯಾ ಮುಂತಾದ ಅಂಗಗಳಲ್ಲಿ ದೊರೆಯುವ ಮಾಹಿತಿಯಂತೆ, ವೇದ ಶಿಕ್ಷಣದಂತೆಯೇ ಸಂಗೀತ ಶಾಸ್ತ್ರವನ್ನೂ 'ಋಷಿ ಸಂವಾದ' ಶೈಲಿಯಲ್ಲಿ ಬೋಧಿಸಲಾಗುತ್ತಿತ್ತು. ಶಾಸ್ತ್ರಾರ್ಥಿಗಳು ಪರಿಣತನಾದ ಮುನಿಯ ಬಳಿ ಪ್ರಾಥಮಿಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅದಕ್ಕೆ ಆಚಾರ್ಯರು ಉತ್ತರಿಸುತ್ತ, ಸೂಕ್ತ ಕಂಡಲ್ಲಿ ಶಾಸ್ತ್ರದ ಲಕ್ಷ್ಯದಿಂದ ಉದಾಹರಣೆಗಳನ್ನು ಹಾಡಿ ಯಾ ನುಡಿಸಿ (ವೀಣೆ) ತಮ್ಮ ನಿರೂಪಣೆಯನ್ನು ಸ್ಪಷ್ಟಗೊಳಿಸುತ್ತಿದ್ದರು.

ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆ ಭರತಮುನಿಯಿಂದ ರಚಿಸಲ್ಪಟ್ಟ 'ನಾಟ್ಯಶಾಸ್ತ್ರ'ದಲ್ಲಿ ನೃತ್ಯ, ಸಂಗೀತ ಎರಡನ್ನೂ ಜತೆಜತೆಯಲ್ಲಿ ಚರ್ಚಿಸಿ ಬೋಧಿಸುವುದೇ ಒಂದಕ್ಕೊಂದು ಪೂರಕವೆಂದು ಹೇಳಲಾಗಿದೆ. ಸ್ವರ, ಗ್ರಾಮ, ಮೂರ್ಛನ, ತಾನ, ಸ್ಥಾನ, ವರ್ಣ, ಅಲಂಕಾರ, ಶ್ರುತಿ, ಯತಿಗಳ ವಿವರಣೆಯಲ್ಲದೆ ವೀಣೆ ಮುಂತಾದ ವಾದ್ಯಗಳ ಕುರಿತಾದ ಮಾಹಿತಿಯೂ 'ನಾಟ್ಯಶಾಸ್ತ್ರ'ದಲ್ಲಿ ವಿವರಿಸಲಾಗಿದೆ.

7ನೇ ಶತಮಾನದಲ್ಲಿ ಮತಂಗ ಮುನಿಯಿಂದ ರಚಿತವಾದ 'ಬೃಹದ್ದೇಶಿ', 13ನೇ ಶತಮಾನದಲ್ಲಿ ಶಾರ್ಙ್ಗದೇವನಿಂದ ರಚಿತವಾದ 'ಸಂಗೀತ ರತ್ನಾಕರ' ಮತ್ತು 16ನೇ ಶತಮಾನದಲ್ಲಿ ರಾಮಾಮಾತ್ಯನು ರಚಿಸಿದ 'ಸ್ವರಮೇಳ ಕಲಾನಿಧಿ' ಮುಂತಾದ ಪಾಂಡಿತ್ಯಪೂರ್ಣವಾದ ಗ್ರಂಥಗಳು ಆಧಾರಬದ್ಧವಾಗಿದ್ದು ಮುಂದಿನ ಗ್ರಂಥಕರ್ತರಿಗೆ, ಕಲಿಸುವ ಗುರುಗಳಿಗೆ ಮತ್ತು ಕಲಿಯುವ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಅಧಿಕೃತ ಕೈಪಿಡಿಗಳೆನಿಸಿದವು. 17ನೇ ಶತಮಾನದಲ್ಲಿ ವೆಂಕಟಮಖಿಯು ರಚಿಸಿದ 'ಚತುರ್ದಂಡಿ ಪ್ರಕಾಶಿಕೆ'ಯಲ್ಲಿ ರಾಗಗಳು, ಮೇಳಗಳು ಮತ್ತು ಪ್ರಬಂಧಗಳ ಕ್ರಮ ಹಾಗೂ ನಿಯಮಗಳನ್ನು ಸೂಚಿಸಲಾಗಿದ್ದು, ಈ ಗ್ರಂಥ ಸಂಗೀತದ ಲಕ್ಷ್ಯ, ಲಕ್ಷಣ ಭಾಗಗಳೆರಡಕ್ಕೂ ಮಾರ್ಗದರ್ಶಕ ಸೂತ್ರವೆನಿಸಿತು.

ಹೀಗೆ ಶತಮಾನಗಳಿಂದ ಆಗಿಂದಾಗ್ಗೆ ರಚಿತವಾದ ಗ್ರಂಥಗಳಿಂದಾಗಿ ಅತಿ ವಿಸ್ತಾರ ಮತ್ತು ಅತಿ ಜಟಿಲವೆನಿಸಿದ್ದ ಸಂಗೀತ ಶಾಸ್ತ್ರವು ಪರಿಷ್ಕೃತಗೊಂಡು ಸುಲಭಗ್ರಾಹ್ಯವಾಯಿತೆಂದು ಹೇಳಬಹುದು. ಶಾಸ್ತ್ರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಸಂಗೀತಾಚಾರ್ಯರು ಗುರುಕುಲ ಪದ್ಧತಿಯಲ್ಲಿ ತಮ್ಮ ಆಶ್ರಮ ಯಾ ಮನೆಯಲ್ಲಿ ಶಿಕ್ಷಣ ನೀಡುತ್ತಿದ್ದರು. ವಿದ್ಯಾರ್ಥಿಗಳು ದೂರದೂರದಿಂದ ಬಂದು ಗುರುಕುಲಕ್ಕೆ ಸೇರುತ್ತಿದ್ದರು. ರಾಜಮನೆತನದವರೂ, ಶ್ರೀಮಂತರೂ ತಮ್ಮ ಮಕ್ಕಳನ್ನಲ್ಲದೆ ಬೇರೆ ವಿದ್ಯಾರ್ಥಿಗಳನ್ನೂ ಪ್ರಾಯೋಜಿಸಿ ಆಚಾರ್ಯರ ಬಳಿ ಕಳುಹಿಸುತ್ತಿದ್ದರು. ಆಚಾರ್ಯರು ಶಿಷ್ಯರ ಪೂರ್ವೋತ್ತರಗಳನ್ನು ಪರಿಶೀಲಿಸಿ ಆತನು ಸತ್ಪಾತ್ರನಾಗಿದ್ದರೆ ಮಾತ್ರ ಸೇರಿಸಿಕೊಳ್ಳುತ್ತಿದ್ದರು.

ಆಗಿನಿಂದಲೇ ಗುರು ಕುಟುಂಬದ ಸದಸ್ಯನಾಗುವ ನೂತನ ವಿದ್ಯಾರ್ಥಿ ಮೊದಲು ಗುರುವಿನ, ಅವರ ಮನೆಯ, ತೋಟದ, ದನಕರುಗಳ ಸೇವೆ, ಶುಶ್ರೂಷೆಯಲ್ಲಿ ತೊಡಗಿ, ಹಿರಿಯ ಶಿಷ್ಯರಿಗೆ ಗುರುವು ಕಲಿಸುವ ಪಾಠಗಳ ವಿಧಿವಿಧಾನಗಳನ್ನು ಗಮನಿಸುತ್ತಿದ್ದನು. ಶಿಷ್ಯನು ಸಾಕಷ್ಟು ಅನುಭವ ಗಳಿಸಿ, ಶ್ರದ್ಧಾವಂತನೆನಿಸಿದ ನಂತರ ಗುರು ಶಿಷ್ಯನಿಗೆ ಉಚಿತವೆನಿಸುವ ಪಠ್ಯವಿಧಾನವನ್ನು ತೀರ್ಮಾನಿಸಿ ಪಾಠ ಮಾಡುತ್ತಿದ್ದರು.

ಸ್ವರಸ್ಥಾನಗಳ ಪರಿಚಯ, ಆರೋಹಣ - ಅವರೋಹಣ ಕ್ರಮ, ಪ್ರಕೃತಿ - ವಿಕೃತಿ ಸ್ವರಗಳು, ವರ್ಜ್ಯ, ವಕ್ರ ಸ್ವರಗಳು, ಷಾಡವ - ಔಡವ ಮೂರ್ಛನೆಗಳು, ಸ್ವರ

ಸಮುಚ್ಚಯಯುತ ರಾಗ ಸಂಚಾರಗಳಿಗಾಗಿ ವರ್ಣಾಲಂಕಾರಗಳು ಮತ್ತು ಆಯಾ ರಾಗಗಳಿಗೆ ಪುಷ್ಟಿ ನೀಡುವ ವಿಶಿಷ್ಟವಾದ ಗಮಕಗಳು.... ಹೀಗೇ ಸೋಪಾನ ಪದ್ಧತಿಯಲ್ಲಿ ಮುಂದೆ ಸಾಗುವ ಶಿಕ್ಷಣ ಪ್ರೌಢ ರಾಗ ಸಂಚಾರಗಳು, ಕ್ಲಿಷ್ಟ ತಾಳಗಳ ಪ್ರಭೇದಗಳು ಎಂದು ಮುಂದುವರಿಯುತ್ತಿತ್ತು.

ಪಠ್ಯವೆಲ್ಲ ಮುಗಿದ ಮೇಲೆ ವಿಧ್ಯುಕ್ತವಾದ ಸ್ನಾತಕ ಕರ್ಮಗಳನ್ನು ಮಾಡುವ ಆಚಾರ್ಯರು ಗುರುದಕ್ಷಿಣೆಯನ್ನು ಸ್ವೀಕರಿಸಿ, ವಿದ್ವಾಂಸರ ಸಮ್ಮುಖದಲ್ಲಿ ಆತನ ಸಂಗೀತ ಕಛೇರಿಯನ್ನು ಏರ್ಪಡಿಸುವರು. ಅನಂತರ ಶಿಷ್ಯರು ಸ್ವತಂತ್ರನೆನಿಸುತ್ತಿದ್ದರು. ಶಿಷ್ಯರ ಸ್ವಭಾವದ ಗುಣ, ದೋಷ ಮತ್ತು ಅವರ ಆರೋಗ್ಯದ ಕಡೆಗೂ ಗಮನವಿರಿಸುತ್ತಿದ್ದ ಆಚಾರ್ಯರು ಕಂಠ ಸಂಪನ್ಮೂಲವನ್ನು ಉಳಿಸಿ ಬೆಳೆಸಿಕೊಳ್ಳಲು ಔಷಧಿಗಳನ್ನು ಬಲ್ಲವರಾಗಿದ್ದರು.

ಸಂಗೀತ ಶಿಕ್ಷಣ ಪದ್ಧತಿಯನ್ನು ಸಾಂಗೋಪಾಂಗವಾಗಿ ನಿರೂಪಿಸುವ ಎರಡು ಐತಿಹಾಸಿಕ ದಾಖಲೆಗಳೆಂದರೆ ತಂಜಾವೂರಿನ ತುಲಜೇಂದ್ರ ಮಹಾರಾಜನು ಕ್ರಿ.ಶ. 18ನೇ ಪ್ರಥಮ ಪಾದದಲ್ಲಿ ರಚಿಸಿದ 'ಸಂಗೀತ ಸಾರಾಮೃತಂ' ಮತ್ತು ಎಟ್ಟಯಾಪುರಂನಲ್ಲಿ 1904ರಲ್ಲಿ ಸುಬ್ಬರಾಮ ದೀಕ್ಷಿತರು ರಚಿಸಿದ 'ಸಂಗೀತ ಸಂಪ್ರದಾಯ ಪ್ರದರ್ಶಿನಿ'. ಸ್ವರ ಪ್ರಕರಣ, ನೃತ್ಯ ಪ್ರಕರಣ, ವೀಣಾವಾದನದ ಸೂಕ್ಷ್ಮಗಳು, ಸಂಗೀತದ ಸಮಗ್ರ ಪಠ್ಯಕ್ರಮ ಮಾತ್ರವಲ್ಲದೆ, ಇದಕ್ಕೆ ಅತ್ಯಗತ್ಯವಾದ ಸಂಗೀತ ಲಿಪಿ ಮತ್ತು ಸಂಜ್ಞೆಗಳ ವಿವರಣೆಗಳನ್ನೊಳಗೊಂಡ ಈ ಗ್ರಂಥಗಳ ರಚನೆ ಅತ್ಯಂತ ಮಹತ್ವಪೂರ್ಣವೆನಿಸಿದೆ.

(ತ್ರಿಮೂರ್ತಿಗಳಿಗಿಂತಲೂ ಹಿಂದಿನ ಹರಿದಾಸರ ರಚನೆಗಳು ಮತ್ತು ಇನ್ನೂ ಹಿಂದಿನ ಭಕ್ತಿಯುಗದ ಕೊಡುಗೆಗಳು - ಸಂಗೀತ ಲಿಪಿ ಮತ್ತು ಸಂಜ್ಞೆಗಳಿರಲಿಲ್ಲವಾಗಿ - ಶಿಷ್ಯರಿಂದ ಶಿಷ್ಯರಿಗೆ ಕಂಠ ಪರಂಪರೆಯಿಂದಲೇ ಮುಂದುವರಿದಿದ್ದು, ಈ ಪರಂಪರೆಯ ಯಾವುದೇ ಒಂದು ಕೊಂಡಿಯ ಜೋಡಣೆ ತಪ್ಪಿದರೂ ಆ ಸಾಹಿತ್ಯ ಮತ್ತು ಅದರ ಗೇಯರೂಪ ನಷ್ಟವಾಗಿ ಹೋದ ನಿದರ್ಶನಗಳೆಷ್ಟೋ!)

* * *

ಗುರುಕುಲದ ಪದ್ಧತಿ ತೀರ ಇತ್ತೀಚಿನ ವರೆಗೂ - ಇಂದಿನ ಪೀಳಿಗೆಯ ಮುತ್ತಾತಂದಿರ ಕಾಲದವರೆಗೂ - ಕೆಲವು ಸಾಮಯಿಕ ಬದಲಾವಣೆಗಳೊಂದಿಗೆ ಯಶಸ್ವಿಯಾಗಿ ಮುಂದುವರಿದಿತ್ತು.

ಸಂಗೀತ ಕಲೆಗೆ ಮತ್ತು ಸಂಗೀತಜ್ಞರಿಗೆ ರಾಜಾಶ್ರಯ ಯಾ ಶ್ರೀಮಂತರ ಪ್ರೋತ್ಸಾಹವಿದ್ದ ಕಾಲದಲ್ಲಿ ಗುರುಗಳು ಇಡೀ ದಿನವನ್ನು ಸಂಗೀತ ಶಿಕ್ಷಣಕ್ಕೆ, ಅಭ್ಯಾಸಕ್ಕೆ ಮತ್ತು ಅಧ್ಯಯನಕ್ಕೆಂದೇ ಮೀಸಲಿಡುವುದು ಸಾಧ್ಯವಾಗಿತ್ತು. ಶಿಷ್ಯರೂ ಗುರುಗಳ ಮನದಿಂಗಿತವನ್ನು ಅರಿತು, ಅವರ ಸರ್ವ ಸೇವೆಗಳನ್ನು ಮಾಡುತ್ತ, ಗುರುಗಳಿಗೆ ಲಹರಿ ಬಂದಾಗ - ಅದು ನಡುರಾತ್ರಿಯಾದರೂ ಸರಿಯೇ - ವಿಧೇಯರಾಗಿ ಅವರ ಬಳಿ ಸಾರಿ, ಪಾಠ ಕೇಳಿ ಅದನ್ನು

ಸತತವಾಗಿ ಮನನ ಮಾಡುತ್ತಿದ್ದರು. ಜಿಜ್ಞಾಸುಗಳಾದ ವಿದ್ಯಾರ್ಥಿಗಳು ತಮ್ಮೊಳಗೇ ಸಂಗೀತ - ವ್ಯಾಕರಣದ ಚರ್ಚೆಗಳನ್ನು ನಡೆಸುತ್ತಿದ್ದರು. ಗುರುಗಳು ತಾವೂ ಸದಾ ವಿದ್ಯಾರ್ಜನೆ ಮತ್ತು ಸಂಶೋಧನೆಯಲ್ಲಿ ತೊಡಗಿ ಶಿಷ್ಯರಿಗೆ ಆದರ್ಶಪ್ರಾಯರಾಗಿರುತ್ತಿದ್ದರು. ಗುರುಗಳ ಸಂಗೀತ ಕಾರ್ಯಕ್ರಮಗಳಲ್ಲಿ ಸಹಗಾಯನದಲ್ಲಿ, ವಾದನದಲ್ಲಿ ನಿರತರಾಗುವ ಶಿಷ್ಯರು ಅನುಭವ ಸಂಪನ್ನರಾಗುತ್ತಿದ್ದರು. ಈ ಪದ್ಧತಿಯಿಂದಾಗಿ ವಾಗ್ಗೇಯಕಾರರ ಕೃತಿಗಳ ಮೂಲ ಸ್ವರೂಪ ಮತ್ತು ಆಯಾ ಗುರುಗಳ ಗಾಯನ ಶೈಲಿಯ (ಬಾನಿ) ವೈಶಿಷ್ಟ್ಯ ಅಚ್ಚಳಿಯದೆ ಯಥಾವತ್ತಾಗಿ ಶಿಷ್ಯರಿಗೆ ಹಸ್ತಾಂತರವಾಗುತ್ತಿತ್ತು.

* * *

ಮಧ್ಯಯುಗದಲ್ಲಿ ಗುರುಕುಲಗಳು ವಿರಳವಾಗುತ್ತ, ಮೆಲ್ಲ ಮೆಲ್ಲಗೆ ಅದೃಶ್ಯವಾಗ ತೊಡಗಿದವು.. ಈ ಅವನತಿಗೆ ಹಲವಾರು ಕಾರಣಗಳಿದ್ದರೂ ಸ್ವತಃ ಗುರುಕುಲ ಪದ್ಧತಿಯಲ್ಲಿ ಒಂದೆರಡು ಋಣಾತ್ಮಕ ಅಂಶಗಳನ್ನು ಉಲ್ಲೇಖಿಸಬಹುದಾಗಿದೆ.

1. ಸಾಗರದಂತೆ ವಿಶಾಲವಾದ ಸಂಗೀತ ಕಲೆಯನ್ನು ಮೈಗೂಡಿಸಿಕೊಳ್ಳುವಲ್ಲಿ ಕೇಳ್ಮೆ ಜ್ಞಾನವೂ ಅಗತ್ಯವೆನ್ನುವುದು ಸರ್ವವಿದಿತ. ಹತ್ತು ಹಲವು ವಿದ್ವಾಂಸರ ಕಛೇರಿಗಳನ್ನು ಕೇಳುತ್ತ, ವಿಭಿನ್ನ ರೀತಿಯ ಶಿಕ್ಷಣ ಕ್ರಮಗಳನ್ನು ಗಮನಿಸಿ, ಅವುಗಳ ಅಂತಃಸತ್ವವನ್ನು ಗ್ರಹಿಸಿ ಅದನ್ನು ತಾನೂ ರೂಢಿಸಿಕೊಳ್ಳುವುದರಿಂದ ವಿದ್ಯಾರ್ಥಿಯ ಜ್ಞಾನ ವೃದ್ಧಿಯಾಗುತ್ತದೆ; ಸಂಗೀತ ಶ್ರೀಮಂತವಾಗುತ್ತದೆ. ಆದರೆ ರೇಡಿಯೋ, ಧ್ವನಿತಟ್ಟೆಗಳೇನೂ ಇಲ್ಲದ ಕಾಲದಲ್ಲಿ ಈ ಶ್ರವಣ ವ್ಯವಸ್ಥೆ ಕಷ್ಟಸಾಧ್ಯವಾಗುತ್ತಿತ್ತು. ಆದರೂ ಕೆಲವು ಗುರುಗಳು ಮುಕ್ತ ಹೃದಯದಿಂದ ಹೆಸರಾಂತ ವಿದ್ವಾಂಸರನ್ನು ಕರೆಸಿ ಹಾಡಿಸುವ ಏರ್ಪಾಡುಗಳನ್ನು ಮಾಡುತ್ತಿದ್ದರೂ, ಹಲವು ಗುರುಗಳು ಅತಿಯಾದ ಆತ್ಮಾಭಿಮಾನಕ್ಕೆ ಆತುಗೊಂಡವರಾಗಿದ್ದು, ಇಂಥ ವ್ಯವಸ್ಥೆಗಳನ್ನೇನೂ ಮಾಡುತ್ತಿರಲಿಲ್ಲವಾಗಿ, ಶಿಷ್ಯರು ಇತರರನ್ನು ಕೇಳುವ ಮುಕ್ತ ಅವಕಾಶಗಳಿಂದ ವಂಚಿತರಾಗುತ್ತಿದ್ದರು. ಅವರ ಮನೋಧರ್ಮವೂ ವಿಕಸನಗೊಳ್ಳದೆ ನಿಂತ ನೀರಾಗಿ ಬಿಡುತ್ತಿತ್ತು.

2. ಸದಾ ಗುರುಗಳ ಪರಿಚರ್ಯೆಯಲ್ಲಿದ್ದುಕೊಂಡು ಕಲಿಯುವ ಶಿಷ್ಯ ಕೊನೆಗೂ ಸ್ವತಂತ್ರನೆನಿಸುವಾಗಲೇ ಪ್ರೌಢ ವಯಸ್ಸಿನವನಾಗಿರುತ್ತಿದ್ದ. ಇದರ ನಂತರ ಅವನು ವೈಯಕ್ತಿಕ ಜೀವನದಲ್ಲಿ ನೆಲೆಯೂರುವುದೂ, ನಿರ್ವಹಿಸುವುದೂ ಕಷ್ಟಸಾಧ್ಯವಾಗಿ ಬಿಡುತ್ತಿತ್ತು (ಹಿಂದಿನ ತಲೆಮಾರಿನಲ್ಲಿ ಹಿರಿಯ ವಿದ್ವಾಂಸರೊಂದಿಗೆ ಸಹಗಾಯನದಲ್ಲಿದ್ದ ಎಷ್ಟೋ ಮಂದಿ ಶಿಷ್ಯರು - ಒಳ್ಳೆಯ ಜ್ಞಾನಸಂಪತ್ತನ್ನು ಹೊಂದಿದ್ದರೂ - ಒಮ್ಮೆಯೂ ಸ್ವತಂತ್ರವಾಗಿ ಹಾಡದೆ ನೇಪಥ್ಯಕ್ಕೆ ಸೇರಿದ ಉದಾಹರಣೆಗಳಿವೆ).

3. ಸಂಗೀತ ಪೋಷಕರ ಉದಾರಾಶ್ರಯ ತಪ್ಪುತ್ತಿದ್ದಂತೆ, ಗುರುದಕ್ಷಿಣೆಯ ಪರಿಪಾಠ ಅನಿವಾರ್ಯವಾಗಿ, 'ವಿದ್ಯಾದಾನ'ವೆನ್ನುವುದು ಒಂದು ವೃತ್ತಿಯಾಗಿ ರೂಪುಗೊಂಡಿತು.

4. ಪಾಶ್ಚಿಮಾತ್ಯರು ಭಾರತದಲ್ಲಿ ಹೊಸದಾಗಿ ಪರಿಚಯಿಸಿದ ಶಿಕ್ಷಣ ಕ್ರಮದನ್ವಯ ಶಾಲಾ ಕಾಲೇಜುಗಳು ನೀಡುವ ಪದವಿಗಳು ಮುಂದಿನ ಜೀವನೋಪಾಯಕ್ಕೆ ನಾಂದಿಯಾಗಬಲ್ಲದೆನ್ನುವ ಆಶಾವಾದದಿಂದ ವಿದ್ಯಾರ್ಥಿಗಳು ಸ್ವಾಭಾವಿಕವಾಗಿಯೇ ಕವಲುದಾರಿ ಹಿಡಿಯುವಂತಾಯಿತು.

5. ಔದ್ಯೋಗೀಕರಣ ಮತ್ತು ತ್ವರಿತ ಗತಿಯ, ಸ್ಪರ್ಧಾತ್ಮಕ ಜೀವನ ಕ್ರಮದಲ್ಲಿ ಸಂಗೀತಕ್ಕಾಗಿ ಇಡೀ ದಿನವನ್ನು ಮುಡಿಪಾಗಿಡಬಲ್ಲವರ ಸಂಖ್ಯೆ ಕ್ಷೀಣಿಸಿತು.

* * *

ಸ್ವಾತಂತ್ರ್ಯಪೂರ್ವ ಎರಡು ದಶಕಗಳಿಂದೀಚೆಗೆ ಭಾರತೀಯ ಸಂಗೀತ ಪುನರುಜ್ಜೀವನ ಪಡೆಯಿತೆಂದು ನಿಸ್ಸಂಶಯವಾಗಿ ಹೇಳಬಹುದು. ರೇಡಿಯೋ, ಧ್ವನಿತಟ್ಟೆಗಳ ಆಗಮನದಿಂದಾಗಿ ಶಾಸ್ತ್ರೀಯ ಸಂಗೀತ ಮಾತ್ರವಲ್ಲದೆ, ಭಕ್ತಿ ಸಂಗೀತ, ಅರೆ ಶಾಸ್ತ್ರೀಯವೆನ್ನಬಹುದಾದ ಸಿನಿಮಾ ಹಾಡುಗಳು ಎಲ್ಲೆಡೆ ಪ್ರಸಾರವಾಗುತ್ತ ಜನರಲ್ಲಿ ಸಂಗೀತದ ಕುರಿತಾದ ಹೊಸ ಜಾಗೃತಿ, ದೃಷ್ಟಿಕೋನ ಮತ್ತು ಹೊಸ ಅಭಿಮತ ಉಂಟಾಯಿತು.

ಅಲ್ಲಲ್ಲಿ ಕೆಲವು ಮನೆಗಳ ಪಡಸಾಲೆಯಿಂದ ಯಾ ದೇವಾಲಯಗಳಿಂದ ಮಾತ್ರ ಆಗಾಗ ಮೃದುವಾಗಿ ತೇಲಿ ಬರುತ್ತಿದ್ದ ಇಂಪಾದ ಧ್ವನಿಗಳು ಅಥವಾ ನಾದತರಂಗಗಳು ಈಗ ಧ್ವನಿವರ್ಧಕಗಳಿಂದ, ಅಂತೆಯೇ ಮನೆಮನೆಯಲ್ಲಿಟ್ಟ ಪೆಟ್ಟಿಗೆಗಳಿಂದ ಕೇಳುವಂತಾದದ್ದು ಒಂದು ಯುಗಪರಿವರ್ತನೆಯೇ ಸರಿ! ಈ ತನಕ ತೆರೆಮರೆಯಲ್ಲಿದ್ದ ಹಲವಾರು ವಿದ್ವಾಂಸರುಗಳು ನೀಡತೊಡಗಿದ ಆಕಾಶವಾಣಿ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಕಛೇರಿಗಳ ನೇರಪ್ರಸಾರಗಳು ಆಯಾ ಕಲಾವಿದರಿಗೆ ಅಪಾರ ಯಶಸ್ಸನ್ನೂ, ಹಿರಿಮೆಯನ್ನೂ ತಂದುಕೊಟ್ಟವು (ಅರಿಯಾಕ್ಕುಡಿ ರಾಮಾನುಜ ಅಯ್ಯಂಗಾರ್, ಚೆಂಬೈ ವೈದ್ಯನಾಥ ಭಾಗವತರು, ಟೈಗರ್ ವರದಾಚಾರ್, ಜಿ. ಎನ್. ಬಾಲಸುಬ್ರಹ್ಮಣ್ಯಂ, ಬಿಡಾರಂ ಕೃಷ್ಣಪ್ಪ, ಮಹಾರಾಜಪುರಂ ವಿಶ್ವನಾಥಯ್ಯರ್....). ಇದರಿಂದ ಮಾತಾಪಿತರಿಗೂ ತಮ್ಮ ಮಕ್ಕಳಿಗೆ ಸಂಗೀತ ಶಿಕ್ಷಣ ಕೊಡಿಸುವ ಪ್ರೇರಣೆಯುಂಟಾಯಿತು.

* * *

ಈಗ ಸಂಗೀತದ ಜಗತ್ತು ವಿಸ್ತಾರವಾಗಿ ತೆರೆದುಕೊಂಡಿದೆ. ಧ್ವನಿಸುರುಳಿಗಳು, ಸಿ.ಡಿ.ಗಳು, ದೂರದರ್ಶನ, ಕೇಬಲ್ ಚಾನೆಲ್‌ಗಳು... ಒಂದೇ, ಎರಡೇ...! ಪ್ರಗತಿಯ ಮಹಾಪೂರವೆಂದಮೇಲೆ, ಮನಸ್ಸಿಗೆ ಶಾಂತಿ ನೀಡುವ ಶಾಸ್ತ್ರೀಯ ಸಂಗೀತ, ಭಕ್ತಿ, ಭಾವ, ಜಾನಪದ ಗೀತೆಗಳೊಂದಿಗೆ ತಲೆಚಿಟ್ಟು ಹಿಡಿಸುವ ತರತರದ ಶಬ್ದಪುಂಜಗಳೂ ಸಂಗೀತವೆಂಬ ಹೆಸರಿನಲ್ಲಿ ಹರಿದು ಬರುವುದು ಸಹಜವಷ್ಟೆ! ಈಗ ಸಂಗೀತಕ್ಕೆ ಹತ್ತಾರು ಮುಖಗಳು! ಹಲವಾರು ಶಿರೋನಾಮೆಗಳು!

ಹಾಗಿದ್ದರೂ, 'ಈಗಿನ ದಿನಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿ ಶಾಸ್ತ್ರೀಯ ಸಂಗೀತಕ್ಕೆ

ಮನ್ನಣೆ ದೊರೆಯುತ್ತಿದೆ' ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸಂಗೀತ ಕಲಿಕೆಯಲ್ಲಿ ನಿರತರಾಗಿದ್ದಾರೆ. ಇವರಲ್ಲಿ, ತಮ್ಮ ಮಕ್ಕಳನ್ನು ಒಂದೆರಡು ವರ್ಷಗಳ ಅವಧಿಯೊಳಗೆ ಸಕಲಕಲಾಪ್ರವೀಣರನ್ನಾಗಿ ತಯಾರು ಮಾಡುವ ಹೆಬ್ಬಯಕೆಯನ್ನು ಹೊತ್ತ ಹೆತ್ತವರ ಆಣತಿಯಂತೆ ನೃತ್ಯ, ಚಿತ್ರಕಲೆ, ಕರಾಟೆ ತರಗತಿಗಳೊಂದಿಗೆ ಸಂಗೀತ ಪಾಠಕ್ಕೂ ಹಾಜರಾಗುವ ಮಕ್ಕಳು ಸಾಕಷ್ಟು ಮಂದಿ ಇದ್ದಾರೆ. ಅಂತೆಯೇ ಮುಂದೆ ಲಘು ಸಂಗೀತ, ಸಿನಿಮಾ ಸಂಗೀತ ಮುಂತಾದ ಜನಪ್ರಿಯ ಕ್ಷೇತ್ರಗಳಲ್ಲಿ ಪ್ರವೇಶ ಪಡೆಯಲು ಒಂದು ರಹದಾರಿಯಂತೆ ಶಾಸ್ತ್ರೀಯ ಸಂಗೀತದ ಭೂಮಿಕೆಯನ್ನು ಬಳಸುವವರಿದ್ದಾರೆ.

ಆದರೆ ಶುದ್ಧ ಸಂಗೀತದ ಮೌಲ್ಯವರಿತು, ಕ್ರಮಬದ್ಧವಾಗಿ ಶಿಕ್ಷಣ ಕೊಡಿಸುವ ಮಾತಾಪಿತರೂ, ಶ್ರದ್ಧೆಯಿಂದ ಕಲಿಯುವ ವಿದ್ಯಾರ್ಥಿಗಳೂ ಬಹುಸಂಖ್ಯೆಯಲ್ಲಿದ್ದಾರೆನ್ನುವುದು ಆಶಾದೀಪವೆನಿಸಿದೆ. ಶಿಕ್ಷಕರಾದರೂ ತಮ್ಮ ಶಿಷ್ಯರ ಸಮಯಾಭಾವ, ಒತ್ತಡ ಮತ್ತು ವಿವಶತೆಯನ್ನು ಬಲ್ಲವರಾಗಿದ್ದು ಪರಸ್ಪರ ಹೊಂದಾಣಿಕೆಯಿಂದ ಪಾಠ ನಡೆಸುತ್ತಾರೆ. ಸಂಗೀತ ಶಿಬಿರಗಳು, ಕಮ್ಮಟಗಳು ಮತ್ತು ಸ್ಪರ್ಧೆಗಳು ನಿರಂತರವಾಗಿ ನಡೆಯುತ್ತಿರುವುದು, ಸಂಗೀತದ ಗುಣಮಟ್ಟ ದಿನೇ ದಿನೇ ಊರ್ಧ್ವಮುಖವಾಗಲು ಸಹಕಾರಿಯಾಗಿದೆ.

ದೇಶವಿದೇಶಗಳಲ್ಲಿ ಓಡಾಟ, ಪರದೇಶಗಳಲ್ಲಿ ವಾಸ್ತವ್ಯ - ಇವೆಲ್ಲ ಸಾಮಾನ್ಯವಾಗಿರುವ ಈ ದಿನಗಳಲ್ಲಿ ಹಿರಿಯ ವಿದ್ವಾಂಸರು ಹಾಡಿರುವ ಧ್ವನಿಸುರುಳಿಗಳನ್ನು ಅಥವಾ ಸಿ.ಡಿ.ಗಳನ್ನು ಮತ್ತು 'ಸಂಗೀತ ಪಾಠ'ದ ಸಿ.ಡಿ.ಗಳನ್ನು ವಿದೇಶಕ್ಕೆ ಒಯ್ದು, ಅದರಿಂದಲೇ ಸಂಗೀತ ಕಲಿಯಲು ಪ್ರಯತ್ನಿಸುವ ಸಂಗೀತ ಪ್ರೇಮಿಗಳಾದ ಅನಿವಾಸಿ ಭಾರತೀಯರ ಸಂಖ್ಯೆ ಹೆಚ್ಚುತ್ತಿರುವುದು ಒಂದೆಡೆಯಾದರೆ, ನಮ್ಮ ಸಂಗೀತದ ಮಾಧುರ್ಯಕ್ಕೆ ಮನಸೋತು, ಅದನ್ನು ಗುರುಮುಖೇನ ಕಲಿಯಲೆಂದು ಭಾರತಕ್ಕೆ ಬರುವ ವಿದೇಶೀಯರ ಸಂಖ್ಯೆಯೂ ಹೆಚ್ಚುತ್ತಿದೆ.

ಸಂಗೀತದ ಪ್ರಾರಂಭಿಕ ಪಾಠಗಳನ್ನು ನಮ್ಮೆಲ್ಲಾ ಪ್ರಾಥಮಿಕ ಶಾಲೆಗಳ ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಅಳವಡಿಸುವ ಅಗತ್ಯವಿದೆ. ಮುಂದಿನ ಪೀಳಿಗೆಗೆ ನಮ್ಮ ಸಂಗೀತದ, ತನ್ಮೂಲಕ ನಮ್ಮ ಪುರಾತನ ಸಂಸ್ಕೃತಿಯ ಅರಿವು ಮೂಡಿಸುವುದು ನಮ್ಮ ಕರ್ತವ್ಯವಲ್ಲವೇ!

'ಭಾಗ್ಯಶ್ರೀ' 1-2 50 ಬಿ. ಕಡಿಯಾಳಿ, ಕುಂಜಿಬೆಟ್ಟು, ಉಡುಪಿ - 576102

ಸಂಗೀತ ಬೋಧನೆ - ಒಂದು ಪೂಜೆ!

✍ ಟಿ. ಎಸ್. ಅಂಬುಜಾ

ನಾನೇನೂ ಸಂಗೀತದಲ್ಲಿ ಅತ್ಯುನ್ನತ ಮಟ್ಟದ ಜ್ಞಾನ ಹೊಂದಿದವಳಲ್ಲ ಮತ್ತು ಆ ಕುರಿತ ಯಾವ ಸಂಶೋಧನೆಗಳನ್ನಾಗಲಿ, ನವನವೀನ ಪ್ರಯೋಗಗಳನ್ನೇ ಆಗಲಿ ಮಾಡಿದವಳೂ ಅಲ್ಲ. ಆದರೂ ನನ್ನೊಳಗಿರುವ ಸಂಗೀತ ಸಾಗರದ ಕೆಲವೇ ಬಿಂದುಗಳನ್ನಾದರೂ, ನಾನೇ ಹಾಡಿ ಸಂತೋಷಿಸುವುದರಲ್ಲಿ ತೃಪ್ತಿ ಪಡದೇ, ಆಸಕ್ತರಿಗೆ - ಅದೂ ವಯಸ್ಸಿನ ಭೇದವಿಲ್ಲದೆ - ಬೋಧಿಸಿದ ಕೆಲವಾರು ವರುಷಗಳ ಅನುಭವ ನನ್ನದು. ನಿಜ, ಆರು-ಏಳರ ಮುಗ್ಧ ಮಕ್ಕಳಿಂದಾರಂಭಿಸಿ, ಅರುವತ್ತೆರಡರ ಪ್ರೌಢ ವ್ಯಕ್ತಿಗಳೂ ಇಂದು ನನ್ನ ಶಿಷ್ಯವೃಂದದಲ್ಲಿದ್ದಾರೆ ಎಂದು ಹೇಳಿಕೊಳ್ಳುವಲ್ಲಿ ನನಗೆ ಆನಂದವಿದೆ, ತೃಪ್ತಿ ಇದೆ. ಜೊತೆಗೆ, ನನ್ನ ಈ ಬೋಧನಾ ಸಾಮರ್ಥ್ಯದ ಬಗ್ಗೆ, ಅವರೂ ಒಪ್ಪುವ ನನ್ನ ಶೈಲಿಯ ಕುರಿತು ವಿನಯಪೂರ್ವಕವಾದ ಹೆಮ್ಮೆಯೂ ಇದೆ. ಅಪರ ವಯಸ್ಸಿನಲ್ಲೂ ಸಂಗೀತವನ್ನು ಕಲಿಯಲಾರಂಭಿಸಬಹುದು, ಮತ್ತು ಅದರಿಂದ ಉತ್ತಮ ಫಲವನ್ನೂ ನಿರೀಕ್ಷಿಸಬಹುದು ಎನ್ನುವ ವಿಶ್ವಾಸವೂ ಬಂದಿದೆ. ಯಾಕೆಂದರೆ, ನನ್ನ ಶಿಷ್ಯೆಯರೆಲ್ಲ ಸರಿಯಾಗಿ ಮತ್ತು ಚೆನ್ನಾಗಿ ಹಾಡಬಲ್ಲರು. ಅವರಲ್ಲಿ ಕೆಲವರು, ವೇದಿಕೆ ಏರಿ ತಮ್ಮ ಕಲಾಪ್ರದರ್ಶನಕ್ಕೆ ಅಂಜಬಹುದಾದರೂ ಅದು ಅವರದೇ ಆದ ಅಪನಂಬಿಕೆ, ಕೀಳರಿಮೆ, ಸಂಭಾಕಂಪ ಇತ್ಯಾದಿ ದೋಷಗಳಿಂದಾಗಿ ಎಂದು ಅವರವರೇ ಸ್ವಯಂ ಒಪ್ಪಿಕೊಳ್ಳುವರಾಗಿ, ನನ್ನ ಸಂಗೀತ ಬೋಧನೆಯ ಅರ್ಹತೆಯ ಬಗ್ಗೆ ನನಗೆ ವಿಶ್ವಾಸವಿದ್ದೇ ಈ ಬರೆಹವನ್ನು ಬರೆಯಲು ಕೇಳಿಕೆ ಬಂದೊಡನೆ, ಹರ್ಷದಿಂದಲೇ ಸಮ್ಮತಿಸಿದ್ದೇನೆ. ಏನೇ ಇರಲಿ, 'ಕಲೆ' ಎನ್ನುವುದು ಮೊತ್ತಮೊದಲಿಗೆ ಅವರವರ ಆತ್ಮತೃಪ್ತಿಗಾಗಿಯೇ ಅಲ್ಲವೆ? ಆದ್ದರಿಂದ ಯಾವುದೇ ವ್ಯಕ್ತಿಗೆ ಸಂಗೀತವನ್ನು ಅಭ್ಯಸಿಸುವಾಗ ಅಥವಾ ಏಕಾಂತದಲ್ಲಿ ಹಾಡುವಾಗಲೂ, ಮನಸ್ಸು ಖುಷಿ ಪಡುತ್ತದೋ, ಆತಂಕ - ಕಳವಳಗಳು ಮರೆತು ಹೋಗುತ್ತವೋ, ಹೃದಯ ಮುದಗೊಳ್ಳುವುದೋ - ಅಷ್ಟು ಸಾಕು, ಅವರು ಸಂಗೀತವನ್ನು ಕಲಿಯಲು ಯೋಗ್ಯರೇ. ಕೆಲವರ, ಮೈಗೂಡಿಸಿಕೊಳ್ಳಬೇಕೆಂಬ ಇಚ್ಛಾಶಕ್ತಿಯಂತೂ ಪವಾಡವನ್ನೇ ಮಾಡುವುದುಂಟು! ಹಾಗಾಗಿ, ವಯಸ್ಸು, ಲಿಂಗ, ಜಾತಿ, ರೂಪ, ಬಣ್ಣ ಮುಂತಾದುವುಗಳ ಯಾವುದೇ ಅಳತೆಗೋಲೂ ಇಲ್ಲಿ ಬೇಕಾಗಿಲ್ಲ ಮತ್ತು ಸಲ್ಲದು ಸಹ!

ಎಳೆಯರೇನೋ, ಸಂಗೀತದ ಮೊದಲ ಮೆಟ್ಟಿಲಾದ 'ಸರಳೆವರಸೆ'ಯಿಂದಲೇ ಶ್ರೀಕಾರ ಹಾಕುವರಾದರೂ, ಪ್ರೌಢರಲ್ಲಿ ಕೆಲವರು, "ನಮ್ಗೆ ಸರಿಗಮ ಎಲ್ಲ ಬೇಡ. ನಾವೇನು ಇನ್ನು

ಕಛೇರಿ ಮಾಡ್ಬೇಕಾ? ಮತ್ತೆ, ಪರೀಕ್ಷೆ ಕಟ್ಬೇವಾ? ನಮ್ಗೆ ಲಕ್ಷಣವಾಗಿ ಒಂದಿಷ್ಟು ಪದ್ಯಗಳನ್ನು ಶಾಸ್ತ್ರಬದ್ಧ ರೀತಿಯಲ್ಲಿ ಹಾಡ್ಲಿಕ್ಕೆ ಬಂದ್ರೆ ಸಾಕು" ಎಂದೆಲ್ಲ ನನ್ನಲ್ಲಿ ಹೇಳುವುದುಂಟು. ಅದಕ್ಕೆ ಅವರು ನೀಡುವ ಕಾರಣಗಳೂ ಹಲವು. ತಮಗೆ ತಾಳದ ಲೆಕ್ಕಾಚಾರ ತಪ್ಪುತ್ತದೆ. ಶ್ರುತಿಲೀನತೆಗೆ ದನಿ ಒಗ್ಗಿಕೊಳ್ಳಲು ಪ್ರತಿಭಟಿಸುತ್ತದೆ. ಮೂರನೇ - ನಾಲ್ಕನೇ ಕಾಲದಲ್ಲಿ ಹಾಡಲು ನಾಲಿಗೆ ತಡವರಿಸುತ್ತದೆ. ಲಯ ಹಿಡಿತದಲ್ಲಿರಿಸಿಕೊಳ್ಳಲು ಕಷ್ಟವಾಗುತ್ತದೆ ಇತ್ಯಾದಿತ್ಯಾದಿ... ಆದರೆ,... ಮೊಗ್ಗುಗಳನ್ನು ಕಟ್ಟಿ ಜೋಡಿಸಿದರೆ ಮಾತ್ರ ಹೂವಿನ ಮಾಲೆ ಸಿದ್ಧವಾದೀತಲ್ಲವೆ? ಹಾಗಾಗಿ, ಯಾವ ಸಂಗೀತ ಶಿಕ್ಷಕರೇ ಆಗಲಿ, ಈ ಕುರಿತು ಯಾವ ದಾಕ್ಷಿಣ್ಯಕ್ಕೂ ಒಳಗಾಗದೇ, ಯಾವುದೇ ರೀತಿಯ ರಾಜಿ ಮಾಡಿಕೊಳ್ಳದೇ ಆರಂಭದಲ್ಲಿ ಸರಳೆ - ಜಂಟಿ ಮುಂತಾದ 'ಅಭ್ಯಾಸಗಾನ'ವನ್ನು ಬೋಧಿಸಲೇ ಬೇಕಾದ್ದು ಅವರ ಕರ್ತವ್ಯವಾಗುತ್ತದೆ. ಇನ್ನಾವುದೋ ಒತ್ತಡಕ್ಕೊಳಗಾಗಿ, ನೇರ ಕೃತಿಗಳನ್ನೇ ಕಲಿಸಲು ಪ್ರಾರಂಭಿಸಿ, ಹಾಗೆ ತಪ್ಪುತಪ್ಪಾದ ಅರೆಬೆಂದ ಪಾಕಗಳನ್ನು ಉತ್ಪಾದಿಸುವುದು ಒಂದು ರೀತಿಯಲ್ಲಿ ಸಂಗೀತ ಸರಸ್ವತಿಗೆ ಸಲ್ಲುವ ಅಪಚಾರವೇ ಎನಿಸುತ್ತದೆ. ಮೂಲಭೂತ ವಿಷಯುಗಳನ್ನು ಮನನ ಪಡಿಸುವ ಈ 'ಅಭ್ಯಾಸಗಾನ'ವನ್ನೇ ಹೊರತಾಗಿಸಿದರೆ, ಅವರ ಸಂಗೀತ ಕಲಿಕೆಯೇ ತಳಪಾಯವಿಲ್ಲದ ಕಟ್ಟಡದಂತೆ ವ್ಯರ್ಥವೆನಿಸೀತೆಂದು ಅವರಿಗೆ ತಿಳಿಹೇಳಿ, ಅರ್ಥಮಾಡಿಸುವ ಹೊಣೆಗಾರಿಕೆಯೂ ಗುರುವಿನದೇ.

ಇನ್ನು, ಸಪ್ತತಾಳದ ಅಲಂಕಾರಗಳ ಪರಿಚ್ಛೇದದಲ್ಲೂ ಅಷ್ಟೇ, ಸಂಚಾರೀ ಮತ್ತು ಲಕ್ಷಣ ಗೀತೆಗಳಿಗೆ ಬೇಕಾದ ರೂಪಕ, ತ್ರಿಪುಟ ತಾಳಗಳನ್ನಷ್ಟೇ ತಿಳಿಸಿ ಮುಂದಕ್ಕೋಡುವವರಿದ್ದಾರೆ. ನಿಜ, ಉಳಿದ ತಾಳಗಳು ಮುಂದೆ ಸದ್ಯಕ್ಕೆ(!) ಬೇಕಾಗುವುದಿಲ್ಲ. ಆದರೆ, ಅವೆಲ್ಲ ಸಂಗೀತದ ಕನಿಷ್ಠ ಜ್ಞಾನದಲ್ಲೇ ಸೇರ್ಪಡೆಯಾಗುತ್ತದೆ. ಮೂರು - ನಾಲ್ಕು ವರ್ಷಗಳಷ್ಟು ಕಾಲ ಸಂಗೀತ ತರಗತಿಗೆ ಮಣ್ಣು ಹೊತ್ತು, ನಾಲ್ಕಾರು ವರ್ಣ, ಜತಿಸ್ವರ, ಹೆಚ್ಚೇಕೆ? ಹತ್ತಾರು ಕೃತಿಗಳನ್ನೂ ಚೆನ್ನಾಗಿಯೇ ಹಾಡಬಲ್ಲ, ಆದರೆ ಧ್ರುವತಾಳದ ಹೆಸರನ್ನೇ ಕೇಳಿರದ(!), ಮಠ್ಯತಾಳದ ಮುಖವನ್ನೂ ನೋಡಿರದ ಕೆಲವರನ್ನು ನಾನು ನೋಡಿದ್ದೇನೆ! ಒಂದು ರೀತಿಯಿಂದ, ಇವರ ಈ ಸಂಗೀತ ಕಲಿಕೆ ಆನೆಯ ಕುರಿತ ಕುರುಡರ ತಿಳಿವಳಿಕೆಯಂತೆ ಅಸಮಂಜಸವೆನಿಸೀತು. ಕೆಲವೊಮ್ಮೆ ಅಪಹಾಸ್ಯಕ್ಕೂ ತುತ್ತಾದೀತು!

ಹೀಗೆ, ಅಭ್ಯಾಸಗಾನದ 'ಅ - ಈ' ತುಣುಕುಗಳನ್ನು ಬಿಟ್ಟೇ ಬೇಲಿ ಹಾರುವವರು ಆಗೀಗ, ತಾರ - ಮಂದ್ರ ಸ್ಥಾಯಿ ವರಸೆಗಳನ್ನೋ, ದಾಟುವರಸೆಗಳನ್ನೋ ರದ್ದುಪಡಿಸಿ ದಾಟುವುದುಂಟು. ಆದರೆ, ಆ ಬಳಿಕದ ಪಾಠಗಳನ್ನು ಕಲಿಯುವಾಗ, ಇಂತಹ ಸ್ವರಸ್ಥಾನಗಳ ಸ್ಪಷ್ಟ ಕಲ್ಪನೆಯನ್ನು ಮೂಡಿಸುವ ಕಲಿಕೆಯೇ ಅವರಿಗೆ ಇಲ್ಲದ ಕಾರಣವಾಗಿ, ಅದು ಶಿಷ್ಯನಿಗೆ ಹೇಗೂ ಕಷ್ಟಕರ, ಗುರುವಿಗೋ ಇನ್ನೂ ಘೋರ ಕಷ್ಟ! ಅಂತೂ, 'ಪಾಠ' ಎನ್ನುವುದೊಮ್ಮೆ

ಮುಗಿಯಿತೆಂದಾದರೂ, ಅದು ಅತ್ಯಂತ ಸರಿಯಾಗಿಯೇ ಇದ್ದೀತೆನ್ನುವ ನಿಖರತೆ ಇಲ್ಲ. ಅಜ್ಜಿ ಮಾಡಿದ ಉಪ್ಪಿನಕಾಯಿಯ ರುಚಿಗೆ ಸೋತ ಮೊಮ್ಮಗಳು, ಹೇಗೆ ಮಾಡುವುದೆಂದು ಅಜ್ಜಿಯನ್ನೇ ವಿಚಾರಿಸಿ ಕೇಳಿಕೊಂಡು, ಆದರೂ ಮಸಾಲೆಗಳ ಗಾತ್ರಕ್ಕನುಸಾರವಾಗಿಯೇ ಮಾಡದೇ, 'ಹೇಗೋ' ಅಂದಾಜಿನ ಮೇಲೆ, ಕ್ರಮಾಣಬದ್ಧವಲ್ಲದ ಉಪ್ಪಿನಕಾಯಿ ಮಾಡಿ, ಅದು ರುಚಿ ಇಲ್ಲದ್ದಕ್ಕೆ ಮಾತ್ರ ಅಜ್ಜಿಯನ್ನೇ ದೂರಿದಂತಾದೀತು! ಯಾಕೆಂದರೆ, ಹೆಚ್ಚಾಗಿ, ಯಾವುದೇ ವಿದ್ಯಾರ್ಥಿಯ ಅಸಮರ್ಪಕತೆಗೆ ಅಧ್ಯಾಪಕರೇ ಕಾರಣಸ್ಥಾನದಲ್ಲಿ ನಿಲ್ಲಿಸಲ್ಪಡುವುದು ಅತ್ಯಂತ ಸಾಮಾನ್ಯ. ಮೆಟ್ಟಿಲುಗಳಲ್ಲಿ ಹೆಜ್ಜೆ ಊರುತ್ತಲೇ ಸಾಗಿ, ಸುರಕ್ಷಿತವಾಗಿ, ಸುಭದ್ರವಾಗಿ ಕಟ್ಟಡದ ಮೇಲ್ಛಾವಣಿಯನ್ನು ತಲುಪಿಸುವ ಗುರುವಿಗಿಂತ, ನಾಲ್ಕಾರು ಮೆಟ್ಟಿಲುಗಳನ್ನು ಜಿಗಿಯುತ್ತ ತಲುಪಿಸುವ ಗುರು, ಶಿಷ್ಯರ ಅಭದ್ರತೆಯ ಅಥವಾ ದೋಷಗಳ ಅಪವಾದದ ಆರೋಪವನ್ನೂ ಹೊರಲೇಬೇಕಾಗುತ್ತದಲ್ಲವೆ? ಆದ್ದರಿಂದ, ಸಂಗೀತ ಕಲೆಯನ್ನು ಬದುಕಿನ ಯಾವ ಅವಧಿಯಲ್ಲೂ ಮೈಗೂಡಿಸಿಕೊಳ್ಳಲು ಪ್ರಾರಂಭಿಸಬಹುದೇ ಆದರೂ, ಎಳೆತನವೇ ಆಗಲೀ, ಹಿರಿತನವೇ ಆಗಲೀ ಮೊದಲ ಹಂತದಲ್ಲಿ ಪ್ರತಿ ಅಧ್ಯಾಯಗಳನ್ನೂ ಅರಿತುಕೊಳ್ಳುವುದು ಅತ್ಯಂತ ಅಗತ್ಯವೆನಿಸುತ್ತದೆ. ಪ್ರಾಯಶಃ ಇನ್ನಾವುದೇ ಕಲೆಗಳನ್ನು ಕರಗತ ಮಾಡಿಕೊಳ್ಳುವಲ್ಲಿಯೂ ಈ ಮಾತು ಹೊಂದಿಕೊಳ್ಳಬಹುದೇನೋ?

ಕೆಲವೊಮ್ಮೆ, ಕಷ್ಟವಾಗುತ್ತದೆಂಬ ನೆವ ಒಡ್ಡಿ, ಯಾವುದೇ ವರಸೆಗಳನ್ನೂ ಮೂರೂ ಕಾಲಗಳಲ್ಲಿ ಹಾಡದೇ (ಹಾಡಿಸದೇ) ಕೇವಲ ಒಂದನೇ ಕಾಲದಲ್ಲಿ ಮಾತ್ರ ಹಾಡಿ ಮುಗಿಸುವವರುಂಟು. ಜಂಟಿವರಸೆಗಳಲ್ಲೇ ವಿಳಂಬ ಗತಿಯ ತಾಳವನ್ನು ಕಲಿತುಕೊಳ್ಳದೇ ಸರಳವಾದ ಆದಿತಾಳವನ್ನೇ ಅಲ್ಲೂ ಅಳವಡಿಸುವುದುಂಟು. ಇಂತಹ ಕುಂದುಕೊರತೆಗಳೆಲ್ಲ, ಮುಂದೆ, ತಾನ ವರ್ಣದ ಅಭ್ಯಾಸದಲ್ಲಿ ತೊಡಗುವಾಗ ಧುತ್ತೆಂದು ಎದುರಾಗಿ, ಅಂದಿನ 'ಕಷ್ಟ,' ಇಂದು ಮಹಾಕಷ್ಟದ ಗುಡ್ಡವಾಗಿಯೇ ಕಂಡು ಬಂದೀತು! ಹಾಗಾಗಿ, ಎಲ್ಲವನ್ನೂ ಸವಿವರವಾಗಿಯೇ, ಕ್ರಮಬದ್ಧವಾಗಿಯೇ ಅರಿತು ಮುಂದೆ ಸಾಗಿ ಬಂದರೆ, ಮುಂದಿನದೆಲ್ಲವನ್ನೂ ಸುಲಲಿತವಾಗಿ, ಸುಲಭವಾಗಿ ಅಳವಡಿಸಿಕೊಳ್ಳಬಹುದಾಗುತ್ತದೆ. ಆ ಆಮೂಲಾಗ್ರ ಪರಿಚಯದ ಆನಂದವೂ ವಿಭಿನ್ನವೇ.

ಹಿಂದೆಲ್ಲ, ಸರಳೆವರಸೆಗಳಿಂದಾರಂಭಿಸಿ, ಅಲಂಕಾರಗಳ ವರೆಗೂ ಎಲ್ಲವನ್ನೂ, ಮೂರೂ ಕಾಲಗಳಲ್ಲಿ 'ಅಕಾರ' ಸಾಧನೆ ಮಾಡದೇ (ಸ್ವರವನ್ನುಚ್ಚರಿಸದೇ ಕೇವಲ 'ಅ' ಅಕ್ಷರದಲ್ಲಿ ಸ್ವರಸ್ಥಾನಗಳನ್ನು ಹಾಡುವುದು) ಮುಂದಿನ ಪಾಠಕ್ಕೇ ಹೋಗುವಂತಿರಲಿಲ್ಲ. ಕೆಲವೆಡೆ 'ಉಕಾರ', 'ಎಕಾರ', 'ಇಕಾರ'ಗಳನ್ನೂ ಮಾಡಬೇಕಿತ್ತು. ಇದರಿಂದ, ಸ್ವರದಲ್ಲಿ ಗಮಕ ಮತ್ತು ಬಿರ್ಕಾಗಳು ಒಡಮೂಡಲು ತುಂಬ ಸಹಕಾರವಾಗುತ್ತಿತ್ತು. ಆದರೆ, ಇಂದು 'ಸಾಧನೆ'ಯ ದಾರಿಯಲ್ಲಿ ನೂರೆಂಟು ಇತರ ಆಕರ್ಷಣೆಗಳಿರುವುದಕ್ಕೋ ಏನೋ, ನಾವು ಶಿಷ್ಯೆಯರನ್ನು ಅದಕ್ಕಾಗಿ

ಒತ್ತಾಯಿಸುವಂತೆಯೂ ಇಲ್ಲ! ಆದರೂ, ಸ್ವಯಂ ಶ್ರದ್ಧೆಯಿಂದ, ದಿನಕ್ಕೆ ತಾಸುಗಟ್ಟಲೆ ತಾಲೀಮು ನಡೆಸಿ, ಗುರುವನ್ನೂ ಮೀರಿಸಿರುವ ಶಿಷ್ಯೆಯರೂ ಇಂದು ಇಲ್ಲದಿಲ್ಲ. ಅವರ ಆ ತಪಸ್ಸಿಗೆ ದೊರಕುವ ಫಲವೋ ಅಪಾರ! ಕಲಾವಿದರ ಸುಗಮ ಸಂಗೀತ ಕ್ಷೇತ್ರದ ಯಶಸ್ಸಿಗೂ ಇದು ಮುಖ್ಯ ಕಾರಣವೆನಿಸುತ್ತದೆ.

ಜತಿಸ್ವರದಿಂದ ಮೊದಲ್ಗೊಳ್ಳುವ 'ಸಭಾಗಾನ'ದ ಪಾಠಗಳನ್ನೋ, ಇನ್ನೂ ಸೂಕ್ಷ್ಮ ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ. ಯಾಕೆಂದರೆ ಗೀತೆಗಳವರೆಗೆ ಗಮಕರಹಿತ ಗಾಯನದ ರೂಢಿಯಾಗಿರುವುದರಿಂದ, ಇಲ್ಲಿ ಸ್ವರ ಸ್ವರಕ್ಕೂ ಗಮಕದ ಅಳವಡಿಕೆಯೇ ಮುಖ್ಯವಾಗಿರುವಾಗ, ತುಸು ಕ್ಲಿಷ್ಟಕರ ಅನುಭವವಾದರೂ, ಒಮ್ಮೆ ಆ ಶೈಲಿಯ 'ಹಿಡಿತ' ಸಿಕ್ಕಿದರೆ, ಮುಂದೆ ನಿರಾಳವಾಗಿ ವಿವಿಧ ರಾಗಗಳಲ್ಲಿ ಅಳವಡಿಸಲ್ಪಟ್ಟ ಜತಿಸ್ವರಗಳ ಹಾಡುವಿಕೆಯೂ ಸರಳವೆನಿಸೀತು. ಸ್ವರಜತಿಯ ವಾಕ್ಯಗಳಲ್ಲಿರುವ ಸಾಹಿತ್ಯವೂ ಅಷ್ಟೇ, ಅವರೆಗೆ 'ಗೀತೆ'ಗಳ ಸಾಹಿತ್ಯವನ್ನು ಆರಂಭಿಕ ಪಾಠಗಳೆಂಬಂತೆ, ಅಷ್ಟೊಂದು ಮಾಧುರ್ಯಕ್ಕೆ ಒತ್ತು ನೀಡದೆಯೂ ಹಾಡಿರುವುದರಿಂದ, ಇಲ್ಲಿಯ ಸಾಹಿತ್ಯದೊಂದಿಗಿನ ತುಸು ದೀರ್ಘ ಎಳೆತದ ದನಿಗೆ ಒಗ್ಗಿಕೊಳ್ಳಲು ಸತತ ಅಭ್ಯಾಸದ ಅಗತ್ಯವಿದೆ. ಮುಂದೆ ಬರಲಿರುವ ವರ್ಣಗಳಿಗೆ ಅಡಿಪಾಯವೆನಿಸುವ ಈ ಸ್ವರಜತಿಗಳನ್ನು ಚೆನ್ನಾಗಿ ಹಾಡಲು ಸಾಧ್ಯವಾಗಿಸಿಕೊಳ್ಳುವಲ್ಲಿ ತುಸು ಪರಿಶ್ರಮ ಅವಶ್ಯವೇ ನಿಜವಾದರೂ, ಪರಿಣಾಮದ ರೂಪದಲ್ಲಿ ವರ್ಣಗಳನ್ನು ಇಂಪಾಗಿ ಹಾಡಿ, ಕೇಳುಗರಿಂದ 'ಶಹಭಾಷ್' ಪಡೆಯಬಹುದಾದ ಮತ್ತು ಆತ್ಮಾನಂದದ ಅವಕಾಶ ಪ್ರತಿಯೊಬ್ಬ ಅಭ್ಯರ್ಥಿಗೆ ಇದ್ದೇ ಇದೆ.

ತಾನವರ್ಣಗಳನ್ನು ಕಲಿಯುವ ಮುನ್ನವೇ ಪ್ರತ್ಯೇಕ ಸ್ವರಸ್ಥಾನಗಳ ಕುರಿತು ವಿಸ್ತಾರವಾಗಿ (ಥಿಯರಿ ಸಹಿತ) ತಿಳಿದು ಸಂಚಾರ ಲಕ್ಷಣಗಳನ್ನು ವಿವರವಾಗಿ ಅರಿತಿದ್ದರೆ, ಕಲಿಕೆಯ ಮಾರ್ಗ ಹೆಚ್ಚು ಸುರಳೀತವೆನಿಸೀತು. ಬದಲಿಗೆ, ಗಿಳಿಪಾಠದಂತೆ ಗುರು ಹಾಡಿದ್ದನ್ನು ಪುನರಾವರ್ತಿಸುತ್ತ ಹಾಡಿ, 'ಒಟ್ಯಾರೆ'ಯಾಗಿ ವರ್ಣವನ್ನು ಕಲಿತವರ ಆ ಸಾಮರ್ಥ್ಯ ಹೆಚ್ಚು ಕಾಲ ಉಳಿಯಲಾರದು. ಯಾವ್ಯಾವುದೋ ಕಾರಣಗಳಿಂದ ಕೆಲವಾರು ದಿನಗಳು ಹಾಡಲು ಸಮಯ ಸಿಕ್ಕದೇ, ಸಂಗೀತದಿಂದ ದೂರವಿದ್ದರೆಂದರೆ, ಮತ್ತೆ ಎಷ್ಟು ನೆನಪಿಸಿಕೊಂಡರೂ ಫಲ ಸಿಕ್ಕದ ಅಪಾಯವೂ ಇಲ್ಲದೆ. ಆದರೆ, ಒಮ್ಮೆ ನಮಗೆ ಆ ರಾಗದ ಒಳಹೊರಗುಗಳ ಸ್ಪಷ್ಟ ಕಲ್ಪನೆಯಾದರೆ, ಮುಂದೆ ಎಂದಿಗೂ ವರ್ಣದ ಸ್ವರಸಾಹಿತ್ಯಗಳು ಮರೆತು ಹೋಗಿದ್ದರೂ, ಅದರ ಸಂಗೀತ (ಧಾಟಿ) ಮಾತ್ರ ಮಿದುಳಿನಲ್ಲಿ ಅಚ್ಚೊತ್ತಿದ್ದನ್ನು ಎಂದಿಗೂ ಮತ್ತೆ ಹೊರಗೆ ತೆಗೆಯಬಹುದಾಗುತ್ತದೆ. ಆದ್ದರಿಂದ, ಆರಂಭದಲ್ಲೇ ಎರಡೂ ಕಾಲಗಳಲ್ಲೂ ವರ್ಣಗಳನ್ನು ಅಭ್ಯಸಿಸಿ ಮುಂದೆ ಸಾಗುವುದೇ ಸೂಕ್ತವೆನಿಸಿ ಭವಿಷ್ಯದಲ್ಲಿ ಸುಲಭವಾಗುತ್ತದೆ. ಉತ್ತಮ ಫಲ ಸಿಗುತ್ತದೆ. ಸ್ವರಜತಿಗಳಲ್ಲೇ ಆಗಲಿ, ವರ್ಣಗಳಲ್ಲೇ ಆಗಲಿ, ಸಾಹಿತ್ಯದ ವಿಚಾರ ಬಂದಾಗ

ಒಂದು ವಿಷಯವನ್ನು ಇಲ್ಲಿ ಹೇಳಲೇಬೇಕೆನಿಸಿದೆ. ತೆಲುಗಿನಲ್ಲೋ, ಸಂಸ್ಕೃತದಲ್ಲೋ ಇರುವ ಕೆಲವಾರು ವರ್ಣಗಳ ಸಾಹಿತ್ಯವನ್ನು ಅರಗಿಸಿಕೊಳ್ಳುವುದು, ಸಂಗೀತವನ್ನು ಪಚನ ಮಾಡಿಕೊಳ್ಳುವುದಕ್ಕಿಂತಲೂ ಕಷ್ಟ ಎನ್ನುವವರಿದ್ದಾರೆ. ಹೌದು. ಯಾಕೆಂದರೆ, ಇಲ್ಲಿ ಸಾಹಿತ್ಯಕ್ಕಿಂತ ಸಂಗೀತಕ್ಕೇ ಪ್ರಾಧಾನ್ಯ ಎಂದು ಆಯಾ ರಚನಕಾರರೇ ಘೋಷಿಸಿರುವುದರಿಂದ ಮತ್ತು ಯಾವ ಸಂಗೀತಜ್ಞರೂ ಅದನ್ನು ಬದಲಾಯಿಸಿ ಹೇಳಿಕೊಡುವ ಅಧಿಕಾರ ಪಡೆಯದಿರುವಾಗ, ನಾವೂ ಸಾಹಿತ್ಯವನ್ನು 'ಇದ್ದದ್ದನ್ನು ಇದ್ದ ಹಾಗೆ' ಕಲಿಸಬೇಕಾಗುತ್ತದೆ. ಉದಾಹರಣೆಗೆ, ಒಂದು ಇಡೀ ಸಾಲನ್ನು ನಾವು, "ಶ್ರೀ ರಾಜರಾಜೇಶ್ವರಿ ಶಂಕರಿ" ಎಂದು (ಮಾಯಾಮಾಳವಗೌಳ ರಾಗದ ವರ್ಣ), "ಶ್ರಿತಜನ ಪಾಲಿನಿ ಧರ್ಮಸಂವರ್ಧಿನಿ" ಎಂದು, "ಶ್ರೀ ಮಧುನಾಥ ಮನೋಹರಿ" ಎಂದು ಹೇಳಿ ಅರ್ಥ ಮಾಡಿಸಿರುತ್ತೇವಾದರೂ, ಕಲಿಸುವಾಗ (ಹಾಡುವಾಗ) ಮಾತ್ರ ಅಲ್ಲಿಯ ಸ್ವರಸ್ಥಾನಗಳಿಗನುಗುಣವಾಗಿ, "ಶ್ರೀರಾ... ಜಾರಾ... ಜೇ... ಶ್ವಾ... ರೀ..." ಎಂದೇ, "ಶ್ರೀ... ತಾ... ಜಾನಾಪಾ........ಲೀ ನೀಧಾ.....ರ್ಮಾಸಾಂ... ವಾ...ರ್ಧೀ...ನಿ" ಎಂದೇ, "ಶ್ರೀ.... ಮಾಧೂ..... ನಾ..ಥಾ.... ಮಾ....ನೋ.. ಹಾ...ರಿ" ಎಂದೇ ಹೀಗೆ ಎಳೆಯುತ್ತಲೇ, ಮನೋಹರಿಯನ್ನು 'ಹಾರಿಸು'ತ್ತಲೇ(!) ಹಾಡಬೇಕಾಗುತ್ತದೆ! ಹಾಗೇ ಅವರು ಕಲಿಯಬೇಕಾಗುವುದೂ ಅನಿವಾರ್ಯ ಸಹ. ಈಚೆಗೆ, ಕೆಲವಾರು ಸಂಗೀತಾಸಕ್ತ ಕವಿಗಳು ಸ್ವರಜತಿಗಳಿಗೆ, ವರ್ಣಗಳಿಗೆ ಅಂದಿನ ಸ್ವರಗಳನ್ನು ಬದಲಿಸದೆ, ತಕ್ಕುದಾದ, ಸ್ಪಷ್ಟವಾಗಿ ಅರ್ಥವಾಗುವ ಕನ್ನಡ ಸಾಹಿತ್ಯವನ್ನೇನೋ ರಚಿಸಿಕೊಟ್ಟಿದ್ದಾರೆ ನಿಜ. ಆದರೆ, ಮುಂದಿನ ಜನಾಂಗಕ್ಕೆ ನಾವು ಆ ಮೂಲ ಸಾಹಿತ್ಯವನ್ನು ಪರಿಚಯಿಸದೇ, ನೇರ ಇದನ್ನೇ ಕಲಿಸುವಂತಿಲ್ಲವಲ್ಲ? ಏಕೆಂದರೆ, ಕರ್ನಾಟಕ ಸಂಗೀತವೆನ್ನುವುದು ವಿವಿಧ ರಾಜ್ಯ, ವಿವಿಧ ರಾಷ್ಟ್ರಗಳಲ್ಲಿರುವ, ಒಂದೇ ಸೂತ್ರದಲ್ಲಿ ಕಟ್ಟಲ್ಪಟ್ಟ ರೂಪುಗಳಾಗಿರುವಾಗ ಇಲ್ಲಿ ಆ ಸಸ್ಯದ ಬೇರುಗಳನ್ನು ಕಡೆಗಣಿಸುವಂತಿಲ್ಲ. ಆದರೆ, ಸ್ಥಳೀಯವಾಗಿ, ಅಂದರೆ ಕನ್ನಡ ಬಲ್ಲವರೆದುರು ಹಾಡುವಾಗ, ಈ ಸುಲಲಿತ, ಸುಸ್ಪಷ್ಟ, ಕನ್ನಡ ಕಸ್ತೂರಿಯ ಸಾಹಿತ್ಯವನ್ನು ಮೂಲ ಸ್ವರಗಳೊಂದಿಗೆ ಬಳಸಿಕೊಂಡರೆ ಒಳ್ಳೆಯದೇ. ಒಂದು ಉತ್ತಮ ನವೀನ ಪ್ರಯೋಗ ಮತ್ತು ಕನ್ನಡ ಬಲ್ಲ ಕೇಳುಗರಿಗೆ ವಿಶೇಷ ಆನಂದವನ್ನೂ ನೀಡಬಲ್ಲ ಸಂದರ್ಭವೂ ಇಲ್ಲಿದೆ. ಆದರೂ, ತೀರಾ ಮಡಿವಂತಿಕೆಯ ಸಂಗೀತಗಾರರಿಂದ ಈ ಕುರಿತು ಆಕ್ಷೇಪಣೆಯೂ ಬರಬಹುದೇನೋ? ಆದರೆ, ಮೂಲ ರಚನೆಕಾರರ ಭಾವಕ್ಕೆ ಪೂರಕವಾಗಿಯೇ, ಅದೇ ಅರ್ಥವನ್ನೇ ಹೊಂದಿರುವ ಸಾಹಿತ್ಯದಿಂದ, ಮೂಲ ಕರ್ತೃಗಳಿಗೆ ಅಪಚಾರವೆಸಗಿದಂತೇನೂ ಆಗದು ಎಂದೇ ಅನಿಸುತ್ತದೆ. ಏನೇ ಇರಲಿ, ಇಲ್ಲಿ ಆ ಎರಡೂ ಸಾಹಿತ್ಯಗಳನ್ನು ಕಲಿಯುವುದೇ ಅತ್ಯಂತ ಸುರಕ್ಷಿತ ಮತ್ತು ಸುಜ್ಞಾನದ ಲಕ್ಷಣ. ಈ ವರ್ಣಗಳನ್ನು 'ಜೂನಿಯರ್' ಹಂತದಲ್ಲಿ ಒಂದೇ ಕಾಲದಲ್ಲಿ ಹಾಡಿದರೆ ಸಾಕು ಎಂದು ಸಡಿಲತನ ತೋರಿಸಿ, ಬಳಿಕ ಒದ್ದಾಡುವುದಕ್ಕಿಂತ, ಮೊದಲೇ ವೇಗದ ಹಾಡುವಿಕೆಯನ್ನೂ ಕಲಿತುಕೊಳ್ಳುವುದೊಳಿತು.

ಬಳಿಕ, ಮಧ್ಯಮಕಾಲದ ಕೃತಿಗಳು ಮತ್ತು ಚೌಕಕಾಲ (ವಿಳಂಬ)ದ ಕೃತಿಗಳಲ್ಲೂ ಇದೇ ಜಿಜ್ಞಾಸೆ. ಹೆಚ್ಚಾಗಿ ತೆಲುಗಿನಲ್ಲೇ ಇರುವ (ನಮ್ಮೂರ ಸುತ್ತಮುತ್ತ ಕಲಿಸುವ ಕರ್ನಾಟಕ ಸಂಗೀತದಲ್ಲಿ ಪ್ರಚಲಿತವಿರುವ) ಇವು, ನಮಗೆ ವಾಕ್ಯ ವಾಕ್ಯ ಪ್ರಕಾರ ಅರ್ಥವಾಗುವುದಿಲ್ಲವಾಗಿ, ಒಟ್ಟಿನಲ್ಲಿಯ ಭಾವಾರ್ಥವನ್ನು ಮಾತ್ರ ಅರಿತಿರುತ್ತೇವೆ. ಹಾಗಾಗಿ, ಇಲ್ಲಿ ಆಗೀಗ ಅಕ್ಷರದೋಷಗಳು, ಹೆಚ್ಚೇಕೆ, ಶಬ್ದದೋಷಗಳೂ, ವಾಕ್ಯದೋಷಗಳೂ ಯಥೇಚ್ಛವಾಗಿ ನುಸುಳಿರಬಹುದು. ಅವೂ ಬಾಯಿಂದ ಬಾಯಿಗೆ ಬರಬರುತ್ತ ಇನ್ನೂ ವಿಕೃತವಾದ ರೂಪವನ್ನು, ಅಪಾರ್ಥವನ್ನು ತಾಳುವುದೇ ಹೆಚ್ಚು! ಆದರೂ ಈ ಕುರಿತು ನಾವು ಅಸಹಾಯಕರೇ ಎನ್ನಬೇಕು. ಈಚೆಗೆ, ನಾನು ಓರ್ವ ತೆಲುಗು ಮಾತೃಭಾಷೆಯ ಗೆಳತಿಯಲ್ಲಿ ಕೆಲವಾರು ತೆಲುಗು ಕೃತಿಗಳ ಅರ್ಥದ ಕುರಿತು ಚರ್ಚಿಸಿದೆ. ಆದರೆ, ಆಕೆಗೆ ಅದು ಯಾವುದೇ ಸರಿಯಾದ ಅರ್ಥವನ್ನು ಸ್ಫುರಿಸುವ ಶಬ್ದವಲ್ಲವೆಂದು ಗೊತ್ತಾಗುತ್ತಿತ್ತೇ ಹೊರತು, ಅಲ್ಲಿ ಯಾವ ಸರಿಯಾದ ಪದವಿರಬಹುದೆಂದು ತಿಳಿಯುತ್ತಿರಲಿಲ್ಲ. ಆಕೆಯೂ ತುಸುವಾದರೂ ತೆಲುಗು ಸಾಹಿತ್ಯವನ್ನು ಕಂಡವಳೇ ಆಗಿದ್ದರೂ, ಅಂದಿನ ರಚನಕಾರರ ಆ ನಿರ್ದಿಷ್ಟ ಶಬ್ದವನ್ನು ಊಹಿಸುವಷ್ಟು ನಿಪುಣರಾಗಿರಲಿಲ್ಲ. ಅಥವಾ, ಅಂಥಾ ಉತ್ಕೃಷ್ಟ ಕವಿಮಹಾಶಯರ ಸಾಹಿತ್ಯಕ್ಕೆ ಪರ್ಯಾಯ ಪದವನ್ನು ಸೂಚಿಸುವುದೇ ಒಂದು ಅಪರಾಧವೆಂಬಂತೆ ಆಕೆ ಭಾವಿಸಿ, ನನ್ನೆದುರು 'ಗೊತ್ತಿಲ್ಲ' ಎನ್ನುವ ಸುಲಭ, ನಿರಪಾಯ ಪದವನ್ನುಚ್ಚರಿಸಿರಬಹುದೇನೋ?! ಇಂತಹ ಕೆಲವಾರು ಅನುಭವಗಳು ನನಗೆ ತೆಲುಗರಿಂದ ಆಗಿವೆ. ಎಲ್ಲರೂ ಪಿಳ್ಳೆನೆವ ಹೇಳಿ ತಪ್ಪಿಸಿಕೊಂಡವರೇ! ಅಂತೂ, ಇದರಿಂದ ತಿಳಿದು ಬರುವುದೇನೆಂದರೆ, ಕರ್ನಾಟಕ ಸಂಗೀತದಲ್ಲಿ ಯಾವುದೇ ಮೂಲಭೂತ ಸಾಹಿತ್ಯವನ್ನು ಬದಲಿಸುವುದು ಸಿಂಧುವಲ್ಲ ಎಂದೇ ಎಲ್ಲರ ನಂಬಿಕೆ.

ಹಾಗೇ ಇರಲಿ ಬಿಡಿ. ಹಾಗೆ ನೋಡಿದರೆ, ನಮ್ಮ ದಾಸವರೇಣ್ಯರ ಕೀರ್ತನೆಗಳನ್ನು ಅಬದ್ಧವಾಗಿ ಉಚ್ಚರಿಸುವ ಕನ್ನಡೇತರರಿಲ್ಲವೆ? ಮಾತ್ರವಲ್ಲ, ಹುಟ್ಟಾ ಕನ್ನಡಿಗರೂ ಇವುಗಳನ್ನು 'ಸರಿಯಾಗಿ' ಉಚ್ಚರಿಸುತ್ತಾರೆನ್ನುವ ಭರವಸೆ ಇಲ್ಲ! ಮಾದರಿಗಾಗಿ... "ದೇವಾರಾ ದೇವಾ ಶಿಖಾಮಾ...ಣಿ ಬಂದಾ" ಎಂದು, ದೇವರನ್ನೇ ಮಾಣಿಯಾಗಿಸುವ, "ಚರಣಕ..." ಎಂದು ಹಾಡಿ, ಒಂದು ಹೊಡೆತದೊಂದಿಗಿನ ದೊಡ್ಡ ಉಸಿರು ತೆಗೆದುಕೊಂಡು, "...ಮಲನೆನೆ" ಎಂದು, 'ಯಾವುದನ್ನೋ' ನೆನಪಿಸುವ, "ಆದಿಕೇ... ಶವರಾಯ" ಎಂದು ಝುಂಪೆ ತಾಳದ (ಖಂಡಛಾಪು) ಮಾತ್ರೆಗಳಿಗೆ ನಿಖರವಾಗಿ ಹೊಂದಿಕೊಳ್ಳುವಂತೆ ಹಾಡಿ, ಕೇಶವನ ಬದಲು ಶವರಾಯನನ್ನು ಸ್ಮರಿಸುವ, "ಗಣನಾಥನೇ" ಎನ್ನುವಲ್ಲಿ, "ಎಮ್ಮಯ ಗಣನಾತನೇ" ಎಂದು ತಮ್ಮ ವಾಸನೆಯನ್ನೇ ಪ್ರಚುರ ಪಡಿಸುವ,... ಹೀಗೆ ಇನ್ನೆಷ್ಟೋ ಸನ್ನಿವೇಶಗಳು ನಮ್ಮಲ್ಲಿಲ್ಲವೆ?!

ಒಂದು ಸುಗಮವಾದ ಅನುಕೂಲತೆಯೆಂದರೆ, ನಮ್ಮ ದಾಸರುಗಳು ತಮ್ಮ ಯಾವುದೇ

ಹಾಡನ್ನು, ಯಾವುದೇ ರಾಗದಲ್ಲಿ, ಯಾವುದೇ ತಾಳದಲ್ಲಿ ಹಾಡಬಹುದಾದ ಸ್ವಾತಂತ್ರ್ಯವನ್ನು ಹಾಡುಗರಿಗೆ ಕೊಟ್ಟಿರುವುದು. ಹಾಗಾಗಿ, ಸಂಗೀತಜ್ಞರೊಬ್ಬರು ತಾವೇ ಸ್ವತಃ ರಾಗ ಸಂಯೋಜಿಸಿ ಹಾಡಿ, ಅದನ್ನು ಶಿಷ್ಯರಿಗೂ ಕಲಿಸಿ, ಮುಂದಿನ ಕೆಲವಾರು ಜನಾಂಗದವರೆಗೂ ಅದೇ ಧಾಟಿಯನ್ನು ಶಾಶ್ವತವಾಗಿರಿಸಬಹುದಾಗಿದೆ. ರಾಗಗಳ ಹಿಡಿತವಿದ್ದವರು ತಮಗಿಷ್ಟವಾದ ಬಗೆಬಗೆಯ ಕೀರ್ತನೆಗಳನ್ನು ವೈವಿಧ್ಯಮಯ ರಾಗಗಳಿಗೆ ಅಳವಡಿಸಿ, ಹಾಡಿ, ಹಾಡಿಸಿ, ಕೇಳಿ ಸಂತಸ ಪಡಬಹುದಾಗಿದೆ. ಇನ್ನು, ಶರಣರ ವಚನಗಳಂತೂ ಇನ್ನೂ ಸರಳ. ದಾಸರ ಉಗಾಭೋಗಗಳಂತೆ ಇವನ್ನು ಯಾವುದೇ ರಾಗದಲ್ಲಿ ತಾಳದ ಹೊರತಾಗಿಯೂ, ಲಯದ ನಿರ್ಬಂಧಕ್ಕೊಳಪಡಿಸದೆಯೂ ಹಾಡಬಹುದು. ಇದರಿಂದ ಯಾವ ನಿಯಮ ನಿಬಂಧನೆಗಳಿಲ್ಲದ, ಒಂದು ಸ್ವಚ್ಛಂದ ರಾಗಾಲಾಪನೆಗೂ ಹಾಡುಗಾರರಿಗೆ ಆಸ್ಪದವಿರುತ್ತದೆ. ಆದರೂ, ಇವುಗಳನ್ನು ಬೇರೆ ಬೇರೆ ರಾಗ, ನಾನಾ ತಾಳಗಳಿಗೂ ಅಳವಡಿಸಿ ಹಾಡುವುದೂ ಸಾಮಾನ್ಯವೇ. ಅದರದ್ದೇ ಒಂದು ಚೆಂದ - ಇದರದ್ದೇ ಒಂದು ಅಂದ. ಯಾವುದು ಮೇಲು ಎಂಬ ಪ್ರಶ್ನೆ ಇಲ್ಲ. ಯಾಕೆಂದರೆ ಎರಡು ರೀತಿಗಳೂ ಚೆನ್ನವೇ. ಪ್ರಾಯಶಃ ಆಧುನಿಕ ಭಾವಗೀತೆಗಳಂತೆಯೇ ಅರ್ಥಸ್ಪಷ್ಟತೆ ಮತ್ತು ಭಾವನೆಗಳಿಗೆ ಇಲ್ಲಿ ಹೆಚ್ಚಿನ ಸ್ಥಾನವಿದೆ. ವಚನಕಾರರ ಉದ್ದೇಶವೂ ಅದೇ ಆಗಿದ್ದಿರಬೇಕು. ಹಾಗಾಗಿ, ದಾಸರಪದಗಳನ್ನು, ವಚನಗಳನ್ನು ಹಾಡುತ್ತಿರುವವರೊಂದಿಗೇ ಶ್ರೋತೃಗಳು ತಲ್ಲೀನರಾಗುವುದು ಸದಾ ಕಾಣಸಿಗುವ ದೃಶ್ಯ. ಇದಕ್ಕೆ ಇರುವ ಇನ್ನೊಂದು ಕಾರಣ, ಆ ಸರಳಾತಿಸರಳ ಸಾಹಿತ್ಯದ ಸೊಗಡು. ಆದ್ದರಿಂದ ಪುಟ್ಟ ಮಗುವಿಗೂ ಅರ್ಥವಾಗುವಂತಹ ಈ ವಚನಗಳನ್ನು ಹಾಡುವುದನ್ನು ಕೇಳುತ್ತ ತಲೆದೂಗದವರೇ ಅಲ್ಪ! ಹೀಗೆ, ದಾಸರಪದಗಳೇ ಇರಲಿ, ವಚನಗಳೇ ಇರಲಿ, ಇತರೆಲ್ಲ ಸಂಗೀತದ ವಿಭಾಗಗಳಿಗಿಂತ ಕಲಾಭ್ಯಾಸಿಗೆ ಹೆಚ್ಚಿನ ಮುದವನ್ನು ನೀಡಬಲ್ಲುದಾಗಿ, ಮೊದಮೊದಲ ಹಂತದಲ್ಲೇ, ಅತ್ತಣಿಂದ ಶಾಸ್ತ್ರೀಯ ಸಂಗೀತದ ಕಲಿಕೆ ಸಾಗಿದ್ದಂತೇ, ಇತ್ತಣಿಂದ 'ಸುಗಮಸಂಗೀತ'ದ ಹೆಸರಿನಲ್ಲಿ ಇವುಗಳನ್ನು ಹೇಳಿಕೊಡಬಹುದಾಗುತ್ತದೆ. ಅದೂ ಒಳ್ಳೆಯದೇ. ಇಲ್ಲವಾದಲ್ಲಿ, ಸಂಪ್ರದಾಯಬದ್ಧ ಶೈಲಿಯ ಸಂಗೀತದ ಏಕತಾನತೆಗೆ ಹೆದರಿದ ಮನಸ್ಸು, ಈ ಸಂಗೀತ ಕಲಿಕೆಯೇ ಬೇಡವೆಂದು ನಿರ್ಧರಿಸಿ, ಅಲ್ಲಿಗೇ ನಿಲ್ಲಿಸುವ ಅವಕಾಶವೂ ಬರಬಾರದೆಂದೇನಿಲ್ಲ! ಸಂಗೀತವೆಂಬ ಕಬ್ಬಿಣದ ಕಡಲೆಯನ್ನು ಮನಸ್ಸು ಮೆದುವಾಗಿಸಿಕೊಳ್ಳಲು ಇದು ಸಹಕಾರಿ. ಈ ಪ್ರಯೋಜನ ಮಾತ್ರವಲ್ಲ, ಕೀರ್ತನೆಗಳಲ್ಲಿ, ವಚನಗಳಲ್ಲಿ ವರ್ಣಿತವಾಗಿರುವುದು ನಮ್ಮ ಸುತ್ತಮುತ್ತಲಿನ ಬದುಕೇ ಆದ್ದರಿಂದ, ಗುರುವು ಅಕ್ಷರಕ್ಷರವನ್ನು ಅರ್ಥ ಮಾಡಿಸುತ್ತಿದ್ದಂತೇ, ಅದು ಪ್ರತೀ ವಿದ್ಯಾರ್ಥಿಗೂ ಹತ್ತಿರವಾಗುತ್ತದೆ (ಇಲ್ಲವಾದಲ್ಲಿ, "ವರವೀಣಾ ಮೃದುಪ್ರಾಣೀ" ಎಂದು ದೇವತೆಯನ್ನು ಪ್ರಾಣಿಯಾಗಿಸುವ ಸಂದರ್ಭವೂ ಬರುತ್ತದೆ!). ದಾಸರು ಪುಟ್ಟ ಕೃಷ್ಣನನ್ನು ಬಣ್ಣಿಸುವ ರೀತಿ, ಸಮಾಜದ ಅಂಕುಡೊಂಕನ್ನು ವಿಡಂಬನೆ ಮಾಡುವ ಕ್ರಮ, ಜೀವನದಲ್ಲಿ ದೇವರ ಸ್ಮರಣೆಯ ಆವಶ್ಯಕತೆ

ಮುಂತಾದುವುಗಳನ್ನು ಹಾಡಿನ ಮುಖೇನ ಹೊರಹೊಮ್ಮಿಸುವ ಆ ಪರಮ ಆನಂದವನ್ನು ಸವಿದವರೇ ಬಲ್ಲರು! ವಚನಕಾರರು ತೋರಿದ ಸರಳ ಮಾರ್ಗದ ಅಧ್ಯಾತ್ಮಗಳಂತೂ ಎಲ್ಲರಿಗೂ ಪ್ರಿಯವೆನಿಸುತ್ತವೆ. ಇಲ್ಲೊಂದು ಮುಖ್ಯ ವಿಚಾರವೆಂದರೆ, ಕಲಿಸುವ ಮುನ್ನ, ಪ್ರತಿವಾಕ್ಯದ ಸ್ಥೂಲ ಅರ್ಥ, ಸೂಕ್ಷ್ಮ ಅರ್ಥ, ಭಾವಾರ್ಥ, ಒಳಾರ್ಥ ಇತ್ಯಾದಿಗಳನ್ನು ಶಿಷ್ಯರಿಗೆ ವಿವರಿಸಿಯೇ ಮುಂದುವರಿಯಬೇಕಾದ್ದು ಗುರುವಿನ ಕರ್ತವ್ಯವೆನಿಸುತ್ತದೆ. ಯಾಕೆಂದರೆ, ಇಲ್ಲಿ ಕೃತಿಗಳಂತಲ್ಲದೆ, ಸಂಗೀತಕ್ಕಿಂತ ಸಾಹಿತ್ಯಕ್ಕೇ ಪ್ರಧಾನತೆ ಎಂದು ಸ್ವಯಂ ರಚನಕಾರರೇ ಘೋಷಿಸಿರುವರಾಗಿ, ಸಂಗೀತದ ಹೊಂದಾಣಿಕೆಗಾಗಿ ಸಾಹಿತ್ಯವನ್ನು ಹೇಗೆ ಹೇಗೋ ಜಗ್ಗಾಡಿ ಅಪಾರ್ಥವಾಗಿಸುವುದು ಸರ್ವಥಾ ಸರಿಯಲ್ಲ. ಮಾತ್ರವಲ್ಲ, ಇಲ್ಲಿ ಕೆಲವೊಮ್ಮೆ ಶಬ್ದಗಳನ್ನು ಎಳೆದೆಳೆದು ಉಚ್ಚರಿಸಿದಾಗ, ವಿರೋಧಾರ್ಥಗಳೂ ಹುಟ್ಟಿಕೊಳ್ಳಬಹುದಾದ ಸಾಧ್ಯತೆ ಇದೆ. ಮಾದರಿಗಾಗಿ... "ನಿತ್ಯತೃಪ್ತನು ಬಂದ" ಎನ್ನುವಲ್ಲಿ, "ನಿತ್ಯಾತೃಪ್ತನು ಬಂದ" ಎಂದು ಒಂದೇ ಉಸಿರನ್ನುಪಯೋಗಿಸಿ ಹಾಡಿದಾಗ, ನಿತ್ಯ + ಅತೃಪ್ತನು ಎಂಬ ಅಪಶಬ್ದದ ಅಪವಾದವನ್ನು ಶ್ರೀಮನ್ನಾರಾಯಣನೂ ಹೊರಬೇಕಾದೀತು! "ನಾದಪ್ರಿಯನೂ ಅಲ್ಲ ವೇದಪ್ರಿಯನೂ ಅಲ್ಲ. ಭಕ್ತಿಪ್ರಿಯ ಶಿವ ನಮ್ಮ ದೇವ" ಎನ್ನುವಲ್ಲಿ, "ನಾದಾಪ್ರಿಯನೂ ಅಲ್ಲ..." ಎಂದೆಲ್ಲ ಸಂಗೀತಾಲಾಪನೆಯ ವಿಜೃಂಭಣೆ ಹೊಮ್ಮಿಸುತ್ತಾ ಹಾಡಿ, ಕೂಡಲಸಂಗಮದ ದೇವನನ್ನು "ಅಪ್ರಿಯನಲ್ಲ" ಎಂದರೆ 'ಪ್ರಿಯ' ಎನ್ನುವ ಭಾವ ಬರುವ ದ್ವಿವಿರೋಧೀ ಸಮಸಮಾಸದೊಳಗೆ ದೂಡುವವರಿದ್ದಾರೆ! ಹಾಗಾಗಿ, ದಾಸಕೀರ್ತನೆಗಳಲ್ಲೇ ಆಗಲಿ, ಶರಣರ ರಚನೆಗಳಲ್ಲೇ ಆಗಲಿ, ಹಿತಮಿತವಾಗಿ ಸಂಗೀತವನ್ನು ಬಳಸಿ, ಆಯಾ ಪದಕರ್ತೃಗಳ ಅಂದಿನ ಭಾವನೆಗಳನ್ನೂ ಕಲ್ಪಿಸಿಕೊಂಡು, ತಾವೇ ಸ್ವಯಂ ಅನುಭವಿಸಿ ಹಾಡಿದರೆ ಮಾತ್ರ, ಆ ಸೊಗಸೇ ಬೇರೆ. ಆಗ ಶ್ರೋತೃಗಳಿಗಾಗುವ ಸಂತಸವೇ ಭಿನ್ನ. ಆದ್ದರಿಂದಲೇ ತೀರಾ ಶುದ್ಧ ಸಂಗೀತ ಕಾರ್ಯಕ್ರಮಗಳಿಗಿಂತ ಇಂಥವು ಬಹುತೇಕ ಸರ್ವರನ್ನೂ ತಟ್ಟುತ್ತವೆ ಮತ್ತು ಮುಟ್ಟುತ್ತವಾಗಿ, ಇವುಗಳನ್ನು ಕೇಳುವಲ್ಲಿ ಆಸಕ್ತರ ಸಂಖ್ಯೆಯೂ ಹೆಚ್ಚೇ. ಏನೇ ಆದರೂ, ಇವುಗಳನ್ನು ಹೀಗೆ ಮನದುಂಬಿ ಹಾಡಬೇಕಾದರೆ, ಮೊದಲು ಶಾಸ್ತ್ರೀಯ ಸಂಗೀತದ ವಿವಿಧ ಮಜಲುಗಳತ್ತ ಹಾದು ಬರುವುದು ಮಾತ್ರ ಅನಿವಾರ್ಯವಾಗುತ್ತದೆನ್ನುವುದೂ ಎಲ್ಲರೂ ನೆನಪಿಡಬೇಕಾದ ವಿಷಯವೇ. ಸಂಗೀತಜ್ಞರೊಬ್ಬರು ವಿವಿಧ ರಾಗಗಳ 'ರಾಗಮಾಲಿಕೆ'ಯಲ್ಲಿ ಒಂದೇ ಹಾಡಿನ ಬೇರೆಬೇರೆ ಚರಣಗಳನ್ನು ಹಾಡುವುದನ್ನು ಕೇಳುವುದೇ ಚೆನ್ನ. ಹಾಡುಗಾರರ ಅನುಭೂತಿಯೋ ಇನ್ನೂ ಚೆನ್ನ!

ಆ ಬಳಿಕ, 'ವಿಶೇಷ' ಅಲಂಕಾರಗಳನ್ನು ಅಭ್ಯಾಸ ಮಾಡಿಸಿಯೇ, ಒಟ್ಟು 35 ತಾಳಗಳ ಪರಿಚಯ ಮಾಡಿಸುವುದು ಸೂಕ್ತ. ಕೇವಲ ಐದು ಜಾತಿಗಳನ್ನೂ, ಏಳು ತಾಳಗಳನ್ನೂ ಒಟ್ಟು ಸೇರಿಸಿ ವಿವರಿಸಿದ ಮಾತ್ರಕ್ಕೆ, ಅಷ್ಟೂ ತಾಳಗಳ ಸ್ಪಷ್ಟ ಚಿತ್ರ ವಿದ್ಯಾರ್ಥಿಗೆ ದೊರೆತೀತೆನ್ನುವ

ಭರವಸೆ ಇಲ್ಲ. ಬದಲು, ಕನಿಷ್ಠ ಒಂದು ಜಾತಿಯ - ಒಂದು ತಾಳದ (ಸೂಳಾದಿ ಸಪ್ತತಾಳಗಳನ್ನು ಹೊರತುಪಡಿಸಿ) ಒಂದೊಂದು 'ವಿಶೇಷ' ಅಲಂಕಾರವನ್ನಾದರೂ ವಿದ್ಯಾರ್ಥಿ ಮೂರು ಕಾಲಗಳಲ್ಲಿ ಹಾಡುವಂತಾದರೆ, ಆ ಎಲ್ಲ ಮೂವತ್ತೈದನ್ನೂ ಸರಿಯಾಗಿ ಅರಿಯುವಲ್ಲಿ ಸಹಕಾರಿ. ಬೇರೆ ಬೇರೆ ತಾಳಗಳಲ್ಲಿ, ವಿಭಿನ್ನ ಶೈಲಿಯಲ್ಲಿ (ಮುಕ್ಕಾಲು ಎಡ ಇತ್ಯಾದಿ) ಕೃತಿಗಳನ್ನು ಕಲಿಯುವುದು ಅನಿವಾರ್ಯ. ನವರಾಗಮಾಲಿಕಾ ಮತ್ತು ಅಟತಾಳ ವರ್ಣಗಳ ಕಲಿಕೆಯಲ್ಲಂತೂ, ಅವಸರ ಸಲ್ಲದೇ ಸಲ್ಲದು. ಯಾಕೆಂದರೆ, ಈ ಹಿಂದಿನ ಪಾಠಗಳಂತೆ ಸರಳವಾದ ಸ್ವರ - ಸಾಹಿತ್ಯಗಳು ಇಲ್ಲಿಲ್ಲ. ಹಾಗಾಗಿ, ಇವನ್ನು ಎರಡೂ ಕಾಲಗಳಲ್ಲೂ ಹಾಡುವುದೇ ಸರಿಯಾದ ಕ್ರಮ. ಹಾಗಾಗಿ, ಇಲ್ಲಿ ಗುರುವಿಗೆ ಯಾವುದೇ ಸಮಯದ ಕಟ್ಟುಪಾಡುಗಳಿಲ್ಲದೇ ಬೋಧಿಸುವ ಸಾಕಷ್ಟು ಅವಕಾಶವನ್ನು ನೀಡಬೇಕಾದ್ದು, ಶಿಷ್ಯನ ಕಲಾಭವಿಷ್ಯದ ಏಳಿಗೆಯ ದೃಷ್ಟಿಯಲ್ಲಿ ಉತ್ತಮವೇ. ಈ ಮಾತು, ಪಂಚರತ್ನ ಕೀರ್ತನೆಗಳಿಗೂ, ತಿಲ್ಲಾನಗಳಿಗೂ ಅನ್ವಯಿಸುತ್ತದೆ. ಇಲ್ಲೆಲ್ಲ, ನಿಧಾನವಾಗಿ ದೃಢಹೆಜ್ಜೆಗಳನ್ನೂರುತ್ತ ಸಂಚರಿಸಿದರೆ ಮಾತ್ರ, ನಿರ್ದಿಷ್ಟ ಗುರಿಯನ್ನು ತಲುಪಬಹುದಾಗುತ್ತದಲ್ಲದೇ, ಗಡಿಬಿಡಿಗೆ ಬಗ್ಗುವ, ಒಗ್ಗುವ ಮಾರ್ಗ ಇದಲ್ಲವೇ ಅಲ್ಲ. ಅದಕ್ಕೆ, ಸಾಕಷ್ಟು ಆಸಕ್ತಿ, ತಾಳ್ಮೆ, ಏಕಾಗ್ರತೆ ಮತ್ತು ಅಭ್ಯಾಸದ ಅಗತ್ಯವಿದೆ. ಹಾಗಾಗಿಯೇ, ಇಲ್ಲಿಯವರೆಗೂ ತಲುಪಿದ್ದ ಹಲವರು, ತಮ್ಮ 'ಸಂಗೀತಾಭ್ಯಾಸ'ಕ್ಕೆ ತಿಲಾಂಜಲಿ ಇತ್ತು ಆ ಕುರಿತ ಹೊತ್ತಗೆಗಳನ್ನು ಮನೆಯ ಅಟ್ಟಕ್ಕೇರಿಸಿ ನಿಡುಸುಯ್ಯುವುದೂ ಉಂಟು! ಅನಿವಾರ್ಯ ಕಾರಣಗಳೇನೂ ಇಲ್ಲದಲ್ಲಿ, ಅವಕಾಶವಿದ್ದಾಗ, ತುಸುವೇ ಹೆಚ್ಚಿನ ಪರಿಶ್ರಮದಿಂದ ಈ ಶ್ರೇಷ್ಠ ಸಾಲಿನ ಸಂಗೀತ ರಚನೆಗಳನ್ನು ಕಲಿತುಕೊಳ್ಳುವುದು ನಿಜಕ್ಕೂ ಜಾಣತನ ಮತ್ತು ಕಲಾಮಾತೆಯ ಆರಾಧನೆಯ ಪರಿಪೂರ್ಣತೆಯತ್ತ ಸಾಗುವ ಆ ಅನುಭವದ ಸುಖಸಿಂಚನವನ್ನು ಸವಿಯುವ ಸಾರ್ಥಕತೆಯೂ.

ಈ ನಡುವೆ, ರಾಗಾಲಾಪನೆಗಳ ಕ್ರಮ, ಸ್ವರಪ್ರಸ್ತಾರದ ರೀತಿ, ನೆರವಲ್‌ಗಳ ವೈವಿಧ್ಯಗಳನ್ನೂ ಅರಿಯಬಹುದಾಗುತ್ತದೆ. ಒಮ್ಮೆ ಇವುಗಳ 'ರುಚಿ' ಹತ್ತಿದರೆ ಸಾಕು, ಮುಂದೆ ಈ ಕುರಿತ ಕುತೂಹಲ ಹೆಚ್ಚುತ್ತಲೇ ಹೋಗುವುದು ಪ್ರತಿ ಶಿಷ್ಯನ/ಳ ಅನುಭವ. ತಮಗೇ ಅರಿವಿಲ್ಲದಂತೆ ಬೇರೆ ಬೇರೆ ರಾಗಗಳನ್ನು ದುಡಿಸಿಕೊಳ್ಳುವುದು, ಅವರಿಗೆ ಅಪ್ಯಾಯಮಾನವಾಗುತ್ತದೆ. ರೋಚಕವೆನಿಸಿ ಹಾಡುತ್ತ ಮೈಮರೆಯುವಂತಾಗುತ್ತದೆ. ಆಗೀಗ ತುಸುವೇ ಗುರುವಿನ ಸಹಕಾರ ಪಡೆದು ಬಗೆಬಗೆಯ ಶೈಲಿಗಳನ್ನೂ ಸ್ವಯಂ ರೂಪಿಸಿ ಆನಂದಿಸಿದವರಿದ್ದಾರೆ. ಶ್ರೋತೃಗಳೊಂದಿಗೆ ಹಿಮ್ಮೇಳದವರನ್ನೂ ಸಂತಸದ ಸಾಗರದಲ್ಲಿ ಮುಳುಗಿಸಿದವರಿದ್ದಾರೆ. ಮುಂದೆ, ಗುರುವನ್ನೂ ಮೀರಿಸಿ ಸಂಗೀತದಲ್ಲಿ 'ಸರ್ಕಸ್' ಮಾಡಬಲ್ಲವರಾದವರಿದ್ದಾರೆ. ಒಟ್ಟಾರೆ, ಇದೊಂದು ಮಹಾಸಾಗರ. ಎಷ್ಟೇ ಒಳಹೊಕ್ಕು

ನೋಡಿದರೂ ಅದರ ಆಳ - ಉದ್ದಗಲಗಳನ್ನು ಸಂಪೂರ್ಣ ಅರಿತವರಿಲ್ಲ! ಅಷ್ಟೂ ವಿಭಿನ್ನತೆ! ಅಷ್ಟೂ ನಾವೀನ್ಯ! ಅಷ್ಟೂ ವಿಶಾಲತೆ!

ಈಚೆಗೆ ಸಂಗೀತ 'ಪರೀಕ್ಷೆ'ಗಳಿಗಾಗಿ ಸಿಲೆಬಸ್‌ಗಳು, ಪಠ್ಯಪುಸ್ತಕಗಳು ಲಭ್ಯವಿವೆ ಮತ್ತು ಅವನ್ನು ಅನುಸರಿಸಿಯೇ ಶಿಕ್ಷಕರು ಪಾಠ ಮಾಡಬಹುದಾಗುತ್ತದೆ. ಇದು ಒಂದು ರೀತಿಯಿಂದ ಸರಿಯಾದರೂ, ಇದಕ್ಕೆ ಇನ್ನೊಂದು ಬೇರೆ ರೀತಿಯ ಮುಖವೂ ಇದೆ. ಏನೆಂದರೆ, ನಾನು ಆರಂಭದಲ್ಲೇ ತಿಳಿಸಿದ್ದಂತೆ, ವಯಸ್ಕರು, "ನಾವೇನು ಪರೀಕ್ಷೆ ಕಟ್ತೇವಾ?" ಎಂದು ಬುಡದಿಂದ ಕಲಿಯಲು ಇಚ್ಛಿಸುವುದಿಲ್ಲವಾದರೆ, ಮಕ್ಕಳ ಹೆತ್ತವರು, "ಬೇರೆ ಏನೂ ಬೇಡ. ಟೆಕ್ಸ್ಟ್‌ದು ಮಾತ್ರ ಕಲಿಸಿ. ಒಂದು ವರ್ಷದೊಳಗೇ (ಬರುವ ವರ್ಷ?) ಪರೀಕ್ಷೆ ಕಟ್ಟೇಕು ಅವ್ಳು. ಯಾಕಂದ್ರೆ ಮುಂದಿನ ವರ್ಷ ಎಸ್ಸೆಸ್ಸೆಲ್ಸಿಯಲ್ವಾ? ಮತ್ತೆ ಎಷ್ಟಂದ್ರೂ ಅಷ್ಟೆ" ಎಂದು ಶಿಕ್ಷಕರಲ್ಲಿ ಒತ್ತಾಯ ಹೇರುವ ಅವಕಾಶ! ಅತ್ತ - ಇತ್ತ ನೋಡುತ್ತಾ ಎಲ್ಲವನ್ನೂ ಮೇಯುವುದಕ್ಕೂ, 'ಕುದುರೆ ಕನ್ನಡಕ' ಹಾಕಿಕೊಂಡು ಸಾಗುವುದಕ್ಕೂ ಇರುವ ವ್ಯತ್ಯಾಸವೋ ಅಪಾರ! (ಕ್ವಾಂಟಿಟಿಗಿಂತ ಕ್ವಾಲಿಟಿ ಮುಖ್ಯವಲ್ಲವೆ? ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು ಎನ್ನುವಂತೆ, ಕೆಲವೇ ಆದರೂ, ಚೆನ್ನಾಗಿರಬೇಕು. ಆದ್ದರಿಂದ, ಯಾವುದೇ ಹಂತದ ಪರೀಕ್ಷೆಗಳೇ ಆದರೂ, ಕೇವಲ 'ನಿಗದಿತ' ಪಠ್ಯಗಳನ್ನೇ ಆಧಾರವಾಗಿರಿಸದೇ, ಕಲಿಸುವ ಸಂಪೂರ್ಣ ಅಧಿಕಾರ ಗುರುವಿನ ಕೈಯಲ್ಲಿದ್ದಾಗ ಮಾತ್ರ, ಒಂದು ಸುಂದರ ಕಲಾಚೇತನದ ಸೃಷ್ಟಿಯಾದೀತು. ಇಂದಿನ 'ಸರ್ಟಿಫಿಕೇಟ್' ಸಾಕ್ಷಿಯ ಈ ಯುಗದಲ್ಲಿ ಪರೀಕ್ಷೆಗಳು ಬೇಕು ನಿಜ. ಆದರೆ, ಕೇವಲ ಪರೀಕ್ಷೆಗಾಗಿಯೇ ಸಂಗೀತವನ್ನಭ್ಯಸಿಸುವುದು, ಕಲಿಸುವುದು ಮೂರ್ಖತನ! ಯಾವುದೇ ಕಲೆ ಎನ್ನುವುದು ಕಲಿಯುವ ವ್ಯಕ್ತಿಯ ಹೃದಯವನ್ನರಳಿಸುವ ಸಾಧನ. ಬಿಡುವಿನ ಹೊತ್ತಿನಲ್ಲಿ ಹವ್ಯಾಸವಾಗಿ ಬಳಸಲ್ಪಟ್ಟಾಗ ದುಃಖವನ್ನು ಮರೆಸುವ, ನೋವನ್ನು ಅಳಿಸುವ ವಿಷಯ. ಅದರಲ್ಲೂ, ಸಂಗೀತ ಕಲೆ ಎನ್ನುವುದಂತೂ, ನೇರವಾಗಿ ಆತ್ಮಕ್ಕೇ ತಲುಪುವ ಒಂದು ರಹದಾರಿ. ಕಲಿತದ್ದು ತುಸುವೇ ಆದರೂ, ಅದನ್ನೇ ಏಕಾಂತದಲ್ಲಿ ಹಾಡಿಕೊಂಡಾಗಲೂ ವ್ಯಕ್ತಿಗೆ ಸ್ವಯಂ ಸಂತೋಷವಂತೂ ಶತಃಸಿದ್ಧ. ಹಾಗಾಗಿ, ಆ ಖುಷಿಗಿಲ್ಲದ ಕಟ್ಟುಪಾಡು, ಕಲಿಯುವಿಕೆಗೂ ಇಲ್ಲವಾದಾಗ ಮಾತ್ರ ಸಂಗೀತದ ಧಾರೆ ಅಡೆತಡೆ ಇಲ್ಲದೆ ಹರಿಯುವಂತಾದೀತು. ವಿದ್ಯಾರ್ಥಿಯ ಜೊತೆಗೇ ಗುರುವಿನ ಮನಸ್ಸನ್ನೂ ಅರಳಿಸೀತು. ಆದರೂ, ಕಾಲಕ್ಕೆ ತಕ್ಕಂತೇ ಆಯಾ 'ಪರೀಕ್ಷೆ'ಗಳನ್ನೂ ವಿದ್ಯಾರ್ಥಿ ಎದುರಿಸಿದಲ್ಲಿ, ಅಭ್ಯಾಸ ಹೆಚ್ಚಿಸಿಕೊಳ್ಳಲು, ನೈಪುಣ್ಯಕ್ಕೆ ಸಾಣೆ ಹಿಡಿಯಲು, ಮುಂದೆಂದಾದರೂ ಎಂದು ಬದಿಗಿರಿಸಿದ್ದ ಕೆಲವನ್ನು ಆಗಲೇ ಅನಿವಾರ್ಯವಾಗಿ ಕಲಿಯಲು ಅವಕಾಶವಾಗುತ್ತದಾಗಿ, ಪರೀಕ್ಷೆಗಳೂ ಒಳ್ಳೆಯವೇ. ಆದರೆ 'ಸರ್ಟಿಫಿಕೇಟ್' ಪಡೆದಿದ್ದರೂ, ಒಂದಿಷ್ಟೂ ಚೆನ್ನಾಗಿ, ಸರಿಯಾಗಿ ಹಾಡಲು ಬಾರದವರೂ ಇದ್ದಾರೆ! ಯಾವುದೇ 'ಸರ್ಟಿಫಿಕೇಟ್'ಗಳ ಸಂಗ್ರಹವೇ ಇಲ್ಲದೆ ಅಮೋಘವಾಗಿ ಕಛೇರಿ

ನೀಡಿ, ಜನಮನ ಸೂರೆಗೊಳ್ಳುವ ಕಲಾನಿಧಿಗಳೂ ಇದ್ದಾರೆ! ಎಂದೋ ಪರೀಕ್ಷೆ ಪಾಸಾಗಿ, ತದನಂತರ ಎಷ್ಟೋ ಕಾಲ ಶ್ರುತಿಪೆಟ್ಟಿಗೆಯನ್ನು ಕೈಯಲ್ಲೂ ಸ್ಪರ್ಶಿಸದೇ (ಹಾಡದೇ) ಈಗ ಎಲ್ಲವನ್ನೂ ವ್ಯರ್ಥವಾಗಿಸಿಕೊಂಡು ಏನನ್ನೂ ಹಾಡಲಾಗದವರೂ ಇದ್ದಾರೆ. ಅವರು ಆ ಸರ್ಟಿಫಿಕೇಟ್‌ಗಳನ್ನೇನು ಈಗ ಉಪ್ಪು ಬೆಲ್ಲ ಹಾಕಿ ನೆಕ್ಕಿದರೂ ಫಲ ಸಿಕ್ಕೀತೆ?! ಆದ್ದರಿಂದ, ಸಂಗೀತವನ್ನು ಕಲಿಯುವುದು ಮುಖ್ಯವಲ್ಲ, ಬದುಕಿನುದ್ದಕ್ಕೂ ಅದನ್ನು ಮರೆಯದಂತೆ ಕಾಪಾಡುತ್ತ, ತಾಲೀಮು ನಡೆಸುತ್ತಲೇ ಇರುವುದು ಬಲುಮುಖ್ಯವೆನಿಸುತ್ತದೆ. ನನ್ನ ಮಟ್ಟಿಗೆ ಕೇಳಿದರೆ, ಈ ಒಂದು ಕಾರಣಕ್ಕಾಗಿಯೇ ನಾನೂ ಸಂಗೀತ ಬೋಧನೆಯನ್ನು ಕೈಗೆತ್ತಿಕೊಂಡು ಮುಂದರಿಸುತ್ತಿದ್ದೇನೆ. ಇದರಿಂದ ನನ್ನ ಶಿಷ್ಯರಿಗಾಗುವ ಲಾಭಕ್ಕಿಂತಲೂ, ನಾನು ಗ್ರಹಿಸಿರುವ 'ಸ್ವಲ್ಪ'ವನ್ನಾದರೂ ಕಳೆದುಕೊಳ್ಳದೇ ಉಳಿಸಿಕೊಂಡೇ ಇರುವ ದೊಡ್ಡ ಲಾಭ ನನಗಾಗಿದೆ ಎಂದು ಧೈರ್ಯವಾಗಿ ಹೇಳಬಲ್ಲೆ. ಕಲಿಸುತ್ತಲೇ ನನ್ನದನ್ನೂ 'ಹೆಚ್ಚಿಸಿಕೊಂಡ' ಅನುಭೂತಿಯೂ ನನಗಾಗಿದೆ!

ಒಟ್ಟಾರೆ, ಸಂಗೀತ ಬೋಧನೆಯೂ, ಸಂಗೀತ ಕಲಿಕೆಯೂ ಒಂದು ಪವಿತ್ರವಾದ ಪೂಜೆಯೇ ಸರಿ.

'ಈಶಾವಾಸ', ಲಕ್ಷ್ಮೀಂಗ್ರನಗರ, ಉಡುಪಿ - 576102

ದಾಕ್ಷಿಣಾತ್ಯ ಸಂಗೀತದ ಕಥೆ

✍ ವಿಭಾವರಿ ಭಟ್

ನಮ್ಮ ದೇಶದಲ್ಲಿ ಸಂಗೀತದ ಕಥೆ ಇಂತಲ್ಲಿಂದಲೇ ಪ್ರಾರಂಭವಾಯಿತು ಎಂದು ಹೇಳುವುದೇ ಕಷ್ಟ. ವೇದಗಳು ಗಾನವಿಧಿಗೆ ಬದ್ಧವಾಗಿದ್ದು 'ಶಿಕ್ಷಾ' ಎಂಬ ವೇದಾಂಗವೇ ಇದೆ. ವೈದಿಕ ಕ್ರಿಯೆಗಳಲ್ಲಂತೂ ಗಾನವಿಧಿಗೆ ವಿಶೇಷವೇ ಆದ ಸ್ಥಾನವಿದೆ. ಅಲ್ಲಿಂದ ಎಲ್ಲಾ ಕಲಾಪ್ರಕಾರಗಳ ಹಾಗೆ, ಗುರುಶಿಷ್ಯ ಪರಂಪರೆಯಲ್ಲಿ ಬೆಳೆದು, ಬಾಯಿಯಿಂದ ಕಿವಿಗೆ, ತಲೆಮಾರುಗಳನ್ನು ದಾಟಿ ಬರುವಾಗ ಸಂಗೀತವೂ ಒಂದು ಪರಂಪರೆಯಾಗಿ ಬೆಳೆದಿರಬಹುದು. ಮೊದಲು ಪ್ರಯೋಗ, ಅದರ ಹಿಂದೆ ಶಾಸ್ತ್ರ ಎನ್ನುತ್ತಾರೆ ಬಲ್ಲಿದರು. ಹಾಗೆಯೇ ಸಂಗೀತ ಹುಟ್ಟಿರಬಹುದು; ಜೀವನೋತ್ಸಾಹದ ಹೊನಲಾಗಿ ಹರಿದಿರಬಹುದು. ಮತ್ತೆ ಅದಕ್ಕೊಂದು ಚೌಕಟ್ಟು, ದಾಖಲಾಗಿರಬಹುದು.

ಸಂಗೀತ ಶಾಸ್ತ್ರದ ಮೊದಲ ಉಲ್ಲೇಖ ನಮಗೆ ಸಿಗುವುದು ಭರತಮುನಿಯ 'ನಾಟ್ಯಶಾಸ್ತ್ರ' ಎಂಬ ಗ್ರಂಥದಲ್ಲಿ. ಇದರ ಬಹುಭಾಗವು ಅನುಷ್ಟುಪ್ ಛಂದಸ್ಸಿನಲ್ಲಿ ಕಾರಿಕೆಗಳ ರೂಪದಲ್ಲಿದೆ. ಭರತಮುನಿಯ ನಿಖರವಾದ ಕಾಲನಿರ್ಣಯವು ಈ ತನಕ ಆಗಿಲ್ಲವಾದರೂ, ಕ್ರಿ.ಶ. ಎರಡನೆಯ ಶತಮಾನದಲ್ಲಿ 'ನಾಟ್ಯಶಾಸ್ತ್ರ' ಗ್ರಂಥವು ಪ್ರಚಲಿತವಿತ್ತೆಂದೂ, ಅದರ ರಚನೆ ಕ್ರಿ.ಪೂ. ಒಂದನೆಯ ಶತಮಾನದ ಸುಮಾರಿಗೆ ಇದ್ದೀತೆಂದೂ ವಿದ್ವಾಂಸರ ಅಭಿಪ್ರಾಯ. (Manomohan Ghosh: The Date of the Bharata Natyasastra. Journal of the Department of letters, Calcutta University, XXV, Page 52) ಭರತಮುನಿಯು ತನ್ನ ಶಿಷ್ಯಂದಿರ ಪ್ರಶ್ನೆಗಳಿಗೆ ಉತ್ತರಿಸಿದ ರೂಪದಲ್ಲಿ ರಚಿತವಾದ ಈ ಕೃತಿಯು ನಾಟ್ಯಶಾಸ್ತ್ರದ ಬಗ್ಗೆ ಹೇಳುತ್ತಾ, ನಾಟ್ಯದಲ್ಲಿ ಬರುವ ಗೀತ, ವಾದ್ಯಗಳ ಬಗ್ಗೆ ಪ್ರಸ್ತುತವಾದ ಸಂಗತಿಗಳನ್ನು ದಾಖಲಿಸಿದೆ. 'ಅತ್ರ ಆನುವಂಶ್ಯೌ ಶ್ಲೋಕೌ ಭವತಃ' ಎನ್ನುವಂತಹ ಮಾತುಗಳು ಕ್ರಿ.ಪೂ. ಒಂದನೆಯ ಶತಮಾನಕ್ಕೂ ಹಿಂದೆ ಇದ್ದಿರಬಹುದಾದ ಸಂಗೀತ ಶಾಸ್ತ್ರದ ಕುರುಹು ನೀಡುತ್ತವೆ. ನಾಟ್ಯಶಾಸ್ತ್ರದ ಮೇಲೆ ಮಹತ್ವಪೂರ್ಣ ವ್ಯಾಖ್ಯಾನ 'ಅಭಿನವ ಭಾರತಿ'ಯನ್ನು ಬರೆದ ಅಭಿನವಗುಪ್ತರು ಹೇಳಿದಂತೆ, 'ಅಭಿನಯ ತ್ರಯಂ ಗೀತಾತೋದ್ಯೇ ಚೇತಿ ಪಂಚಾಂಗಂ ನಾಟ್ಯಂ'. ಆಂಗಿಕಾಭಿನಯ, ವಾಚಿಕಾಭಿನಯ, ಆಹಾರ್ಯಾಭಿನಯ, ಗಾನ, ವಾದ್ಯ ಎಂಬ ಐದು ಅಂಗಗಳುಳ್ಳದ್ದು ನಾಟ್ಯ. ಗಾನಕ್ಕೆ ಅಧಿಕೃತತೆ ಲಭಿಸಿದ್ದು ಹೀಗಿರಬಹುದು. ಅಭಿನವಗುಪ್ತರ ಸಮಕಾಲೀನರಾಗಿದ್ದ ಮತಂಗರು 'ಬೃಹದ್ದೇಶಿ' ಎಂಬ ಸಂಗೀತಶಾಸ್ತ್ರ ಗ್ರಂಥವನ್ನು ರಚಿಸಿರುವರು. ಇವರು ದಕ್ಷಿಣ ದೇಶದವರೇ ಆಗಿದ್ದರೂ ದಕ್ಷಿಣ-ಉತ್ತರವೆಂಬ ವಿಭಜನೆ-ವಿವರಣೆ ಇವರ ಕೃತಿಯಲ್ಲಿ ಕಾಣಿಸುವುದಿಲ್ಲ. ಇವರಿಗಿಂತಲೂ

ಹಿಂದೆ 'ಕಹೋಳ' ಎಂಬ ಸಂಗೀತ ಶಾಸ್ತ್ರಕರ್ತರು ಇದ್ದಿದ್ದರೆಂಬ ಮಾಹಿತಿ ಸಿಗುತ್ತದಾದರೂ ಇವರ ಕೃತಿ ಈಗ ಉಪಲಬ್ಧವಿಲ್ಲ.

ದಕ್ಷಿಣ ಭಾರತದಲ್ಲಿ ಸಂಗೀತದ ಸ್ವರೂಪವನ್ನು ತಿಳಿಸುವ ಅತಿ ಪ್ರಾಚೀನವಾದ ಗ್ರಂಥ - ನಾಲ್ಕನೆಯ ಶತಮಾನದ ಸುಮಾರಿಗೆ ರಚಿತವಾಗಿದ್ದಿರಬಹುದಾದ 'ಶಿಲಪ್ಪದಿಗಾರಂ' ಎಂಬ ತಮಿಳು ಕೃತಿ. ಇಲಂಗೋವಾದಿಗಳ್ ಎಂಬ ಚೇರಮರಾಜ ರಚಿಸಿದ ಈ ಕೃತಿಯಲ್ಲಿ ರಾಗ, ಸ್ವರ, ಆರೋಹ, ಅವರೋಹಗಳ ಉಲ್ಲೇಖ ಸಿಗುತ್ತದೆ. ಕ್ರಿ.ಶ. ಹನ್ನೆರಡನೆಯ ಶತಮಾನದ ಪ್ರಾರಂಭದಲ್ಲಿ ಚಾಲುಕ್ಯ ಅರಸ ಸೋಮೇಶ್ವರ ಭೂಲೋಕಮಲ್ಲ ಕೃತ 'ಮಾನಸೋಲ್ಲಾಸ' ಸಂಗೀತ ಕಲೆಯ ವಿಶ್ವಕೋಶ. ಇದರಲ್ಲಿ ಮೊದಲಿಗೆ 'ಕರ್ನಾಟಕ ಸಂಗೀತ'ದ ಉಲ್ಲೇಖ ಸಿಗುತ್ತದೆ. ಇದೇ ಶತಮಾನದ ಕೊನೆಯ ಹೊತ್ತಿಗೆ ರಚಿತವಾಗಿದ್ದಿರಬಹುದಾದ 'ಸಂಗೀತ ಸುಧಾಕರ'ದಲ್ಲಿ 'ತದಪಿ ದ್ವಿವಿಧಂ ಜ್ಞೇಯಂ ದಕ್ಷಿಣೋತ್ತರ ಭೇದತಃ' ಎಂಬ ಮಾತು ಬರುತ್ತದೆ. ದಕ್ಷಿಣ ಮತ್ತು ಉತ್ತರವೆಂಬ ಸಂಗೀತದ ಅಧಿಕೃತ ವಿಭಜನೆ ಮೊದಲಿಗೆ ಕಾಣಸಿಗುವುದು ಇಲ್ಲಿ. ಈ ಸುಮಾರಿಗೆ ಬದುಕಿದ್ದ ಶಾರ್ಙ್ಗದೇವರು ರಚಿಸಿದ 'ಸಂಗೀತ ರತ್ನಾಕರ'ದಲ್ಲಿ ದಾಕ್ಷಿಣಾತ್ಯ ಸಂಗೀತದ ಶಾಸ್ತ್ರೀಯ ವಿವರಗಳು ಲಭ್ಯವಿವೆ.

ಶಾರ್ಙ್ಗದೇವ 'ಸಂಗೀತ ರತ್ನಾಕರ'ದಲ್ಲಿ ಉಲ್ಲೇಖಿಸಿರುವುದು 260 ರಾಗ ಮತ್ತು 108 ತಾಳಗಳದ್ದು. ಅಲ್ಲಿ 52 ರಾಗಗಳ ವಿವರಣೆಯೂ ಲಭ್ಯವಿದೆ. ಇದೊಂದು ಮಹತ್ವಪೂರ್ಣ ವಿಚಾರ. ಮುಂದೆ ಬಸವಣ್ಣ, ರಾಘವಾಂಕ, ದಾಸರು ನೆನಪಿಸಿಕೊಳ್ಳುವುದು ಮತ್ತು ದಾಖಲಿಸುವುದು 32 ರಾಗಗಳನ್ನು ಮಾತ್ರ. ನಾವೂ ಇವತ್ತು 'ಬತ್ತೀಸ ರಾಗ' ಎಂದೇ ಹೇಳುತ್ತೇವೆ. ಈ ಕೃತಿಗೆ 1430ರ ಕಾಲದಲ್ಲಿದ್ದ ಕಲ್ಲಿನಾಥ (ಕಲ್ಲಪ್ಪ?) ವ್ಯಾಖ್ಯಾನವನ್ನು ಬರೆದರು.

ಶಾರ್ಙ್ಗದೇವರು ನಮಗೆ ಇನ್ನೊಂದು ಕಾರಣದಿಂದಲೂ ಪ್ರಸ್ತುತರು. ಅವರ ಊರು ಈಗಿನ ದೌಲತಾಬಾದ್ 'ಕರ್ಣಾಟ ದೇಶ'ದಲ್ಲಿತ್ತು. ಎಂದರೆ ಹನ್ನೆರಡನೆಯ ಶತಮಾನದ ಕೊನೆಯಲ್ಲಿಯೂ 'ಗೋದಾವರಿಯ ಆಚೆಗೂ ಕರ್ಣಾಟ ದೇಶವು ಹಬ್ಬಿತ್ತು'.

ಹದಿನಾಲ್ಕನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಮತ್ತು ಶೃಂಗೇರಿಯ ಮಠಗಳ ಇತಿಹಾಸದೊಂದಿಗೆ ಸಂಬಂಧ ಹೊಂದಿದ್ದ ವಿದ್ಯಾರಣ್ಯರು (1300-1385) ತಮ್ಮ ವೈದಿಕ ಜವಾಬ್ದಾರಿಗಳೊಂದಿಗೆ ಸಂಗೀತದ ಕುರಿತೂ ಮಹತ್ವದ ಕೆಲಸಗಳನ್ನು ಮಾಡಿರುವರು. ಅವರು ಸಂಗೀತ ಶಾಸ್ತ್ರದ, ಮುಖ್ಯವಾಗಿ ದಾಕ್ಷಿಣಾತ್ಯ ಸಂಗೀತದ ಮಹತ್ವಪೂರ್ಣ ವಿಚಾರಗಳನ್ನು ಕಲೆಹಾಕಿ 'ಸಂಗೀತಸಾರ'ವೆಂಬ ಶಾಸ್ತ್ರೀಯ ಕೃತಿಯನ್ನು ರಚಿಸಿದರಂತೆ. ಈ ಕೃತಿಯಲ್ಲಿ ಹಿಂದೂಸ್ತಾನೀ, ಕರ್ನಾಟಕ ಸಂಗೀತವನ್ನು ಪ್ರತ್ಯೇಕಿಸಿ, ಮೇಳಜನ್ಯ ತಳಹದಿಯ ಮೇಲೆ ರಾಗಗಳನ್ನು ವಿಂಗಡಿಸುವ ಕೆಲಸ ನಡೆದಿದೆ (C. Goswami: The Story of Indian Music). 'ಶ್ರುತಿರ್ಮಾತಾ ಲಯಃ ಪಿತಾ' ಎಂಬ ಹೇಳಿಕೆಯಿಂದೆ. ಶ್ರುತಿ ತಾಯಿ,

ತಾಳ ತಂದೆ. ಒಂದನ್ನು ಬಿಟ್ಟನ್ನು ಇನ್ನೊಂದು ಇರಲಾರದು. ಮಾತೃಧರ್ಮಗಳಾದ ಕೋಮಲತೆ, ದಯೆ, ಶಾಂತಿ ಮೊದಲಾದ ಗುಣಗಳು ಶ್ರುತಿಪ್ರಧಾನವಾದ ಹಿಂದೂಸ್ಥಾನೀ ಸಂಗೀತದಲ್ಲಿ ಪ್ರಧಾನವಾದರೆ, ಪಿತೃಧರ್ಮಗಳಾದ ಗಾಂಭೀರ್ಯ, ಉತ್ಸಾಹ, ಹಠ ಮೊದಲಾದ ಗುಣಗಳು ತಾಳಪ್ರಧಾನವಾದ ಕರ್ನಾಟಕ ಸಂಗೀತದಲ್ಲಿ ಪ್ರಧಾನ ಎಂಬ ಗುರುತಿಸುವಿಕೆ ಆರಂಭವಾದದ್ದು ಸರಿಸುಮಾರು ಇದೇ ಕಾಲಕ್ಕೆ. ಇವತ್ತಿಗೂ ಹಿಂದೂಸ್ಥಾನೀ ಸಂಗೀತದಲ್ಲಿ ನಾದ ಪ್ರಧಾನ, ಸಾಹಿತ್ಯ ಗೌಣ. ಕರ್ನಾಟಕ ಸಂಗೀತದಲ್ಲಿ ನಾದ, ಸಾಹಿತ್ಯಗಳ ಸಮನ್ವಯ ಮತ್ತು 'ಸಾಹಿತ್ಯ ಶುದ್ಧಿ' ಹೆಚ್ಚು ಅನ್ವಯ.

ಕರ್ನಾಟಕ ಸಂಗೀತದ ಇವತ್ತಿನ ಚೈತನ್ಯದ ಮೂಲ ಒರತೆಯೊಂದನ್ನು ಅರಸಿಕೊಂಡು ಹೋದಲ್ಲಿ ನಾವು ಹದಿನಾಲ್ಕನೇ ಶತಮಾನಕ್ಕೂ ಹಿಂದಿನ ದಾಸಕೂಟದ ಕೊಡುಗೆಯನ್ನು ಗುರುತಿಸುತ್ತೇವೆ. ಈ ಅವಧಿಯಲ್ಲಿ ಯಾವುದೇ ಅಧಿಕೃತ ಗ್ರಂಥಗಳು ರಚನೆಯಾದಂತೆ ಕಾಣಿಸುತ್ತಿಲ್ಲ. ಆದರೆ ಕಳೆದ ಶತಮಾನದ (19-20) ಮಹಾ ಸಂಗೀತಶಾಸ್ತ್ರಜ್ಞ ಸುಬ್ರಹ್ಮಣ್ಯ ದೀಕ್ಷಿತರು ಅಧಿಕೃತವಾಗಿ ಸಮರ್ಥಿಸಿದಂತೆ, ಪುರಂದರದಾಸರನ್ನು ಕೇಂದ್ರವಾಗಿರಿಸಿಕೊಂಡ ಈ ಅವಧಿ ಕರ್ನಾಟಕ ಸಂಗೀತದ ಪರ್ವಕಾಲವೇ ಹೌದು. 'ಕರ್ನಾಟಕ ಸಂಗೀತದ ಪಿತಾಮಹ', 'ಕರ್ನಾಟಕ ಸಂಗೀತ ಸ್ಥಾಪನಾಚಾರ್ಯ' ಎಂದೆಲ್ಲ ಬಿರುದಾಂಕಿತರಾದ ಪುರಂದರದಾಸರು, ನರಹರಿ ತೀರ್ಥರು, ವ್ಯಾಸರಾಯರು ಮೊದಲಾದವರನ್ನು ಒಳಗೊಂಡ ದಾಸಕೂಟವೂ ವಿಪುಲವಾದ ರಾಗ, ಸಾಧ್ಯತೆಗಳ ಬಳಕೆ, ವೈವಿಧ್ಯಮಯ ಶಾಸ್ತ್ರೀಯ ಪ್ರಯೋಗಗಳಿಂದ ಸಂಬದ್ಧವಾದ ಸಂಗೀತ ರೂಪುರೇಷೆಗಳನ್ನು ಗುರುತಿಸಿದೆ. ಈ ಪರ್ವಕಾಲದಲ್ಲಿ ಸಂಗೀತಾಭ್ಯಾಸಕ್ಕೆ ಹೊಸ ಹಾದಿಯೊಂದು ಹುಟ್ಟಿಕೊಂಡಿತು. ದಾಸರ ಪೂರ್ವದಲ್ಲಿ ಖರಹರಪ್ರಿಯ ರಾಗವನ್ನು ಆದಿ/ಶುದ್ಧ ರಾಗವೆಂದು ಪರಿಗಣಿಸಿ ಅದರಿಂದಲೇ ಸಂಗೀತಾಭ್ಯಾಸ ಆರಂಭವಾಗುತ್ತಿತ್ತು. ಎಳೆಯ ಅಭ್ಯಾಸಿಗಳಿಗೆ ಈ ಅಂತರಗಳುಳ್ಳ ಸ್ವರಸ್ಥಾನಗಳನ್ನು ನುಡಿಯುವುದು ಕಷ್ಟ ಎನ್ನುವುದನ್ನು ಗುರುತಿಸಿ, ಪುರಂದರದಾಸರು ಮಾಯಾಮಾಳವಗೌಳ ರಾಗವನ್ನು ಆರಿಸಿಕೊಂಡು ಅದರಲ್ಲಿ ಸರಳವರಸೆ, ಜಂಟಿವರಸೆ, ಅಲಂಕಾರಗಳನ್ನು ರಚಿಸಿದರು; ಕಲಿಯಲು ಅನುಕೂಲವಾದ ಪಿಳ್ಳಾರಿಗೀತೆಗಳನ್ನು ಮಾಳವಗೌಳದಲ್ಲಿ ಜನ್ಯವಾದ ಮಲಹರಿಯಲ್ಲಿ ರಚಿಸಿದರು. ಪುರಂದರದಾಸರು ಬುಡುಬುಡಿಕೆ, ಸುವ್ವಾಲೆ, ಜೋಗೀಪದ ಮತ್ತು ಅನೇಕ ಜಾನಪದ ಮಟ್ಟುಗಳಿಗೆ ಶಾಸ್ತ್ರೀಯ ರಾಗಗಳ ಸ್ವರೂಪ ನೀಡಿ, ರಾಗಗಳ ವೈವಿಧ್ಯ, ಸರಳತೆ ಸಾಧಿಸಿ, ಕೀರ್ತನೆಗಳನ್ನು ಜನಪ್ರಿಯಗೊಳಿಸಿ, ಕರ್ನಾಟಕ ಸಂಗೀತವನ್ನು ಪ್ರಭಾವಶಾಲಿ ಮಾಧ್ಯಮವನ್ನಾಗಿಸಿದರು. ಪಲ್ಲವಿ, ಅನುಪಲ್ಲವಿ, 3-5-7 ಹೀಗೆ ವಿಷಮ ಸಂಖ್ಯೆಯಲ್ಲಿ ಚರಣಗಳು, ಕೊನೆಯಲ್ಲಿ ಅಂಕಿತನಾಮ, ಪಲ್ಲವಿ ಅನುಪಲ್ಲವಿಯಲ್ಲಿ ಹಾಡಿನ ಮುಖ್ಯ ಭಾವಗರ್ಭಿತ, ಪ್ರಾಸ ಅನುಪ್ರಾಸಗಳು - ಹೀಗೆ ಸರಳವಾಗಿ ಕರ್ನಾಟಕ ಸಂಗೀತದ ಸ್ವರೂಪವನ್ನು ನಿರ್ದಿಷ್ಟ ಪಡಿಸಿದ್ದು ಇವರೇನೇ.

ಹದಿನಾರನೆಯ ಶತಮಾನದಲ್ಲಿ ಕರ್ನಾಟಕದ ಹಿನ್ನೆಲೆಯ 'ಪುಂಡರೀಕ ವಿಠಲ'

ಎನ್ನುವವರು ರಾಗಮಂಜರಿ, ರಾಗಚಂದ್ರೋದಯ, ನರ್ತನ ನಿರ್ಣಯ ಮತ್ತು ರಾಗಮಾಲ ಎಂಬ ಕೃತಿಗಳನ್ನು ರಚಿಸಿದ ಮಾಹಿತಿಗಳು ಉಪಲಬ್ಧವಿವೆ. ಹದಿನೇಳನೆಯ ಶತಮಾನದಲ್ಲಿ 'ಸಂಗೀತ ಸುಧೆ' ಎಂಬ ಕೃತಿಯ ಮೂಲಕ ತಂಜಾವೂರಿನ ರಾಜಪ್ರತಿನಿಧಿ (ಮಂತ್ರಿ?) ಗೋವಿಂದ ದೀಕ್ಷಿತರು ಕರ್ನಾಟಕ ಸಂಗೀತದ ಸಮಗ್ರ ಪರಿಷ್ಕರಣೆ ನಡೆಸಿದರು. ಅವರ ಶಿಷ್ಯ (ಅವರ ಪುತ್ರ ಕೂಡಾ ಹೌದು) ವೇಂಕಟಮಖಿಗಳು ಸಂಗೀತ ವ್ಯಾಕರಣಕ್ಕೆ ಇವತ್ತಿಗೂ ಪ್ರಮಾಣ ಗ್ರಂಥವಾಗಿರುವ 'ಚತುರ್ದಂಡೀ ಪ್ರಕಾಶಿಕೆ'ಯನ್ನು ಬರೆದರು. ವೇಂಕಟಮಖಿಗಳ ಶಾಸ್ತ್ರಪದ್ಧತಿಯ ಸಾಧ್ಯತೆಗಳ ಪೂರ್ಣಪ್ರಯೋಗ ನಡೆದದ್ದು 18-19ನೆಯ ಶತಮಾನದಲ್ಲಿ, ತ್ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರ ಮುಖಾಂತರ. ವಿದ್ಯಾರಣ್ಯರ ಕಾಲಕ್ಕೆ ಇದ್ದ 15 ಮೇಳಕರ್ತ ರಾಗಗಳು ವೇಂಕಟಮಖಿಗಳ ಕಾಲಕ್ಕೆ 72 ಆದವು. ಇಂದಿನ ರಾಗವ್ಯವಸ್ಥೆಗೆ ಆ 72 ಆಧಾರವಾಗಿವೆ.

ಹದಿನೆಂಟು ಹತ್ತೊಂಭತ್ತನೆಯ ಶತಮಾನದ ಉತ್ತರಭಾಗದಲ್ಲಿ ಕರ್ನಾಟಕ ಸಂಗೀತಕ್ಕೆ ಸಂಬಂಧಿಸಿದ ಚಟುವಟಿಕೆಗಳು ಕ್ರಮವತ್ತಾಗಿ ತಮಿಳುನಾಡಿಗೆ ಸ್ಥಳಾಂತರಗೊಂಡವು. ಕರ್ನಾಟಕದಾದ್ಯಂತ ಕರ್ನಾಟಕ ಸಂಗೀತಕ್ಕೆ ಸಂಬಂಧಿಸಿದ ಒಂದು ಬಗೆಯ ನಿರ್ವಾತವು ಆವರಿಸಿತು. ಸುದೀರ್ಘ ಅವಧಿಯಲ್ಲಿ ದಾಕ್ಷಿಣಾತ್ಯ ಸಂಗೀತಕ್ಕೆ ಪ್ರಮಾಣ ಗ್ರಂಥಗಳನ್ನು ರಚಿಸಿ, ಸಾಧ್ಯತೆಗಳ ಹೊಸ ಹೊಳಹನ್ನು ಅರಸಿಹೋದವರು ಕನ್ನಡಿಗರೇ ಆಗಿ, ಈ ಸಂಗೀತ ಮಾರ್ಗವು 'ಕರ್ನಾಟಕ ಸಂಗೀತ'ವೆಂದೇ ಗುರುತಿಸಲ್ಪಟ್ಟರೂ, ಅನೂಹ್ಯ ಕಾರಣಗಳಿಂದಾಗಿ ದಾಕ್ಷಿಣಾತ್ಯ ಸಂಗೀತದ ಕೇಂದ್ರಬಿಂದು ತಮಿಳುನಾಡಿನಲ್ಲಿಯೋ, ತೆಲುಗು ದೇಶಂನಲ್ಲಿಯೋ ಇದ್ದಂತೆ ಈಗ ಅನ್ನಿಸತೊಡಗಿದೆ. 'ತೇನ್ನಾಟ್ ಸಂಗೀತ'ವೆಂಬ ಮಾರ್ಗವಾಗಿ ಇದರ ನಾಮಫಲಕವನ್ನು ಯಾರಾದರೂ ತಟ್ಟನೆ ಬದಲಿಸಿಬಿಟ್ಟರೆ (ಒಂದು ರೆಸಲ್ಯೂಶನ್ ಮೂಲಕ!) ಅದಕ್ಕೆ ಅಭಿಮಾನಶೂನ್ಯ ಕನ್ನಡಿಗರಲ್ಲದೇ ಬೇರಾರೂ ಕಾರಣರಾಗರು.

ಪರಿಶುದ್ಧ ಗಾಯನಕೆ ಶರಣಾಗು, ನೀ ಬೆಳೆವೆ

✍ ಜಿ. ಟಿ. ನಾರಾಯಣರಾವ್

ಮೈಸೂರು ಆಕಾಶವಾಣಿ ಪ್ರಾಯೋಜಿಸಿದ್ದ ಒಂದು ಸಾರ್ವಜನಿಕ ಪಿಟೀಲು ದ್ವಂದ್ವ ವಿನಿಕೆಗೆ ನಾನೂ ಒಬ್ಬ ಆಹ್ವಾನಿತ ಶ್ರೋತೃವಾಗಿ ಹೋಗಿದ್ದೆ. ಹದಿಹರೆಯದ ಈ ಸಹೋದರರು ಆ ವೇಳೆಗಾಗಲೇ ಸಾಕಷ್ಟು ಪ್ರಸಿದ್ಧಿ ಗಳಿಸಿ ಕರ್ನಾಟಕ ಸಂಗೀತದ ನವನವೋನ್ಮೇಷಶಾಲಿನಿ ಗುಣಕ್ಕೆ ಇತ್ತೀಚಿನ ನಿದರ್ಶನ ಎಂದು ಪ್ರಚುರಪಡಿಸಲಾಗಿತ್ತು. ಇದು ಹೇಗೂ ಇರಲಿ, 'ಅಡುಗೆಯ ಸೊಗವನು ಊಟದಿ ಕಾಣಾ' (the proof of the pudding is in the eating) ಅಲ್ಲವೇ? ಆ ತೇಜಸ್ವೀ ಯುವಕರು ರಾಮ, ಲಕ್ಷ್ಮಣರಂತೆ ವೇದಿಕೆ ಏರಿದರು, ತುಂಬಿ ಬಿರಿಯುತ್ತಿದ್ದ ಸಭೆಗೆ ವಿನಯಪೂರ್ಣವಾಗಿ ವಂದನೆ ಸಲ್ಲಿಸಿ ಸುಖಾಸೀನರಾದರು, ಅವರ ಉಭಯ ಪಾರ್ಶ್ವಗಳಲ್ಲಿ ಹಿರಿಯ ಮೃದಂಗ ಮತ್ತು ಘಟ ವಿದ್ವಾಂಸರಿಬ್ಬರು ವಸಿಷ್ಠ, ವಿಶ್ವಾಮಿತ್ರರಂತೆ ಮಂಡಿಸಿದರು. ಮುಂದಿನ ಸುಮಾರು ಎರಡು ಗಂಟೆಗಳ ಕಾಲ ಆ ಎಳೆಯರು ತಮ್ಮ ಜಡ ವಾದ್ಯಗಳಿಂದ ಹರಿಸಿದ ಜೀವಾಮೃತಪ್ರವಾಹ "ಇದು ಅಲ್ಲೋ ಬರಿದೇ ಗಾನಾ! ಪಂಚಾಮೃತದಾ ಪಾನಾ!" ಎಂಬ ಬೇಂದ್ರೆಯವರ ರಸೋದ್ಗಾರಕ್ಕೆ ಬರೆದ ಭಾಷ್ಯವಾಗಿತ್ತು. ಹೌದು, ಅಲ್ಲಿ ಆಗ ಇಬ್ಬರು ನವ ಯುವ ವಾದ್ಯಮಾಂತ್ರಿಕರು ಅವತರಿಸಿದ್ದರು! ಮಂಕುತಿಮ್ಮನ ಕ್ಷಮೆಕೋರಿ,

ಆವ ಪೊದೆಯೊಳಗಾವ ಚಿರವಿನೂತನ ದನಿಯೊ
ಆವ ಧೂಳಿನೊಳಾವ ಮಾಧುರ್ಯ ಬನಿಯೊ
ಜೀವವಿಸ್ತಾರದ ರಹಸ್ಯ ನಿನಗಜ್ಞಾತ
ಭಾವಿಸಾ ಸೌಂದರ್ಯ ವೈವಿಧ್ಯ ಅತ್ರಿಸೂನು

ಕಛೇರಿ ಮುಗಿದೊಡನೆ ಸಭಾಸದರೆಲ್ಲ ನೇರ ವೇದಿಕೆಗೆ ಧಾವಿಸಿ ಮಕ್ಕಳ ಮೇಲೆ ಅಭಿನಂದನೆಗಳ ಮಹಾಪೂರವನ್ನೇ ಹರಿಸಿದರು. ಅವರ ಸಂತೃಪ್ತ ಪಿತ ಈ ದೃಶ್ಯಕ್ಕೆ ಕೃತಾರ್ಥ ಸಾಕ್ಷಿಯಾಗಿ ಹಿಂದೆ ನಿಂತಿದ್ದರು. ತಿಮುಕು ತೆಳುವಾದ ಮೇಲೆ ನಾನು ಆ ತಂದೆ ಮಕ್ಕಳಿಗೆ ಯೆಹೂದಿ ಮೆನುಹಿನ್ (1916 - 99) ತಮ್ಮ ಆತ್ಮಚರಿತ್ರೆ Unfinished Journeyಯಲ್ಲಿ ಉಲ್ಲೇಖಿಸಿರುವ ಒಂದು ಘಟನೆಯ ಸಾರ ಅರುಹಿದೆ: ಪಾಶ್ಚಾತ್ಯ ಪಿಟೀಲುವಾದನದಲ್ಲಿ 'A child prodigy', 'A new star with a brilliant lustre' (ಶಿಶು ಪ್ರಚಂಡ, ಮಹೋಜ್ವಲ ಪ್ರಭಾಯುತ ನವನಕ್ಷತ್ರ) ಎಂದು ಮುಂತಾಗಿ ಮಾಧ್ಯಮಗಳಲ್ಲಿ ಬಿಂಬಿತರಾಗಿ

ಮೆನುಹಿನ್ ಆಗ ಜಗದ್ವಿಖ್ಯಾತರಾಗಿದ್ದರು. ಇಂಥ ಪ್ರಭೃತಿಯನ್ನು ಕೇವಲ ಹದಿನಾಲ್ಕರ ಹರೆಯದಲ್ಲಿ ಬರ್ಲಿನ್ನಿನ ಫಿಲ್‌ಹಾರ್ಮೊನಿಕ್ ಸಭಾಂಗಣದಲ್ಲಿ ಪ್ರದರ್ಶಿಸಲಾಯಿತು. ಇದು ನಮ್ಮ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಂತೆ ಪಾಶ್ಚಾತ್ಯ ಸಂಗೀತದ ವರಿಷ್ಠ ನಿಕಷ.

ತಮ್ಮ ಅಂದಿನ ಅನುಭವವನ್ನು ಮೆನುಹಿನ್ ಬಣ್ಣಿಸಿದ್ದಾರೆ. "ಕಿಕ್ಕಿರಿದ ಆ ಸಭಾಸದರಲ್ಲಿ ಜಗತ್ಪ್ರಸಿದ್ಧ ಸಂಗೀತ ರಚಕರನ್ನೂ ವಿಮರ್ಶಕರನ್ನೂ ಸಾಹಿತಿಗಳನ್ನೂ ಕಂಡೆ. ಈ ಎಲ್ಲ ತಾರೆಗಳ ನಡುವೆ ನಕ್ಷತ್ರರಾಜ ಐನ್‌ಸ್ಟೈನ್‌ರನ್ನೇ ನೋಡಿ ರೋಮಾಂಚಿತನಾದೆ. ಮಹಾವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ (1879 - 1955) ಒಬ್ಬ ಉತ್ಕೃಷ್ಟ ಹವ್ಯಾಸೀ ಪಿಟೀಲುವಾದಕರೆಂದು ನನಗೆ ಗೊತ್ತಿತ್ತು. ಬೈಠಕ್ ಮುಗಿದಂತೆ ಈ ರಾಜವಾದಕ ಸಮಸ್ತ ಸಭಾಶಿಷ್ಟತೆಯನ್ನೂ ಉಲ್ಲಂಘಿಸಿ, ನೇರ ವೇದಿಕೆಗೆ ಧಾವಿಸಿ ಬಂದು, ನನ್ನನ್ನು ಗಾಢವಾಗಿ ಆಲಿಂಗಿಸಿ, 'Now I realize there's God in the Heaven' ಎಂದು ಉದ್ಗರಿಸಿದರು!" ಇದನ್ನು ವಿವರಿಸಿ ಆ ಯುವಕಲಾವಿದರಿಗೆ ನಾನೆಂದೆ, "ಐನ್‌ಸ್ಟೈನ್ ಉದ್ಗಾರದ ಮಿಂಚನ್ನು ಇಂದು ನಾನಿಲ್ಲಿ ಕಂಡು, ಕೇಳಿ ಮತ್ತು ಅನುಭವಿಸಿ ಧನ್ಯನಾಗಿದ್ದೇನೆ. ವರ್ತಮಾನ ಯುಗದ ನಾಲ್ವರು ಮಹಾ ಪಿಟೀಲು ವಾದಕರ ಪ್ರಖರ ಪ್ರಭಾವಲಯದಲ್ಲೇ ನೀವು ವಿನೂತನ ಶೈಲಿಯ ಪ್ರವರ್ತಕರಾಗಿರುವುದು ನಿಮ್ಮ ಉಜ್ಜ್ವಲ ಸೃಜನಶೀಲತೆಗೆ ಹಿಡಿದಿರುವ ಕನ್ನಡಿ; ಲಾಲ್ಗುಡಿ - ಮಾಧುರ್ಯ, ಪರೂರು - ಲಾಘವ, ಕೃಷ್ಣನ್ - ಕೌಶಲ ಮತ್ತು ಚಂದ್ರಶೇಖರ್ - ಮಾರ್ದವತೆ ಇವು ನಿಮ್ಮಲ್ಲಿ ಹದವಾಗಿ ಸಂಗಳಿಸಿ ನಿಮ್ಮ ಪ್ರತಿಭೆಯ ಮೂಸೆಯಲ್ಲಿ ಪುಟಪಾಕಗೊಂಡು ನೀವು ನವಶೈಲಿಯ ಹೊಸಬಾಣೆಯ ಹರಿಕಾರರಾಗಿದ್ದೀರಿ, ಕರ್ನಾಟಕ ಸಂಗೀತಕ್ಕೆ ಹೊಸ ಆಯಾಮವಿತ್ತಿದ್ದೀರಿ".

ತಂದೆಯಿಂದ ಅವರ ವಿಳಾಸ ಪಡೆದು, "ಋಜು ಸಂಗೀತಪ್ರಿಯರಿಂದ ಸ್ಥಾಪಿತವಾಗಿ ಇನ್ನೂ ಕಣ್ತೆರೆಯುತ್ತಿರುವ, ಆದರೆ ಆರ್ಥಿಕವಾಗಿ ಬಲಿಷ್ಠವಾಗಿರದ, ನಮ್ಮ ಗಾನಭಾರತೀ ಸಂಸ್ಥೆಗೆ ನೀವು ಬರುವ ಕೃಪೆ ಮಾಡಬೇಕು" ಎಂಬ 'ಬಿನ್ನಹ' ಸಲ್ಲಿಸಿದೆ... ಏಕೆಂದರೆ, "ಬಿನ್ನಹಕೆ ಬಾಯುಂಟು ಅಯ್ಯಾ ಎಮ್ಮಲ್ಲಿ ಇನಿತೂ ಅಪರಾಧವಿಲ್ಲವಾಗಿ!" ಅಷ್ಟೇ ಭಾವಪೂರ್ಣವಾಗಿ ಆ ತಂದೆ ಒಪ್ಪಿಗೆ ಸೂಚಿಸುತ್ತ, "ನಿಮ್ಮಂಥ ಹಿರಿಯ ರಸಿಕರು ಕರೆದರೆ ನಾವು ಮುಫತ್ತಾಗಿ ಬಂದು ಕಛೇರಿ ಸೇವೆ ಸಲ್ಲಿಸಲು ಸಿದ್ಧ".

ಮುಂದೆ ನಾನು ಆ ಬೈಠಕ್ಕಿನ ವಿಮರ್ಶೆ ಬರೆದು ಮೈಸೂರಿನ ದೈನಿಕ Star of Mysoreನಲ್ಲಿ ಪ್ರಕಟಿಸಿ ಅದರ ಒಂದು ಪ್ರತಿಯನ್ನು ಅವರಿಗೆ ಕಳಿಸಿದೆ ಕೂಡ. ಮುಂದಿನ ತಿಂಗಳೇ ಗಾನಭಾರತೀಯಿಂದ ಅವರಿಗೆ ಅಧಿಕೃತ ಆಹ್ವಾನ ಕಳಿಸಿದೆವು, ನಮ್ಮ ಸಂಚಿಯ ಮಿತಿಯಲ್ಲಿ ಯುಕ್ತ ಸಂಭಾವನೆ ಕೊಡುವುದಾಗಿಯೂ ತಿಳಿಸಿದ್ದೆವು. ತಂದೆ ಬರೆದರು, "ನಿಮ್ಮಂಥ ವಿದ್ವಜ್ಜನ ಸಂಭಾವಿತರ ಸಮಕ್ಷಮ ನುಡಿಸುವುದು ನಮ್ಮ ಮಕ್ಕಳಿಗೆ ಒದಗಿರುವ ಅನುಗ್ರಹ. ಹಿಂದೆ ಆಶ್ವಾಸಿಸಿದಂತೆ ನಾವು ಬರುತ್ತೇವೆ, ಚಿಕ್ಕಾಸೂ ಸಂಭಾವನೆ ಬೇಡ. ಆದರೆ

ಒಂದು ಶರತ್ತು: ಮೃದಂಗ ಸಾಹಚರ್ಯಕ್ಕೆ ನೀವು ಮದ್ರಾಸಿನಿಂದಲೇ ನಾವು ಸೂಚಿಸುವ ಒಬ್ಬ ಹಿರಿಯ ಕಲಾವಿದರನ್ನು ಕರೆಸುವ ಉಪಕಾರ ಮಾಡಬೇಕು. ಏಕೆಂದರೆ ಈ ಮಕ್ಕಳ ಪ್ರತಿಭೆಗೆ ಸಾಟಿಯಾಗಿ ಮೃದಂಗ ನುಡಿಸಬಲ್ಲ ಒಬ್ಬನೇ ಒಬ್ಬ ವಾದಕನೂ ಕರ್ನಾಟಕದಲ್ಲಿಲ್ಲ".

ಇಲ್ಲಿಯ ಸಂಚು (ಮದ್ರಾಸಿನಲ್ಲೇ ಓದಿ ಕೆಲಸ ಮಾಡಿದ್ದ) ನನಗೆ ಕೂಡಲೇ ಹೊಳೆದು ಸಿಟ್ಟು ಬಂತು: ಒಂದನೆಯದಾಗಿ, ಇವರೊಪ್ಪುವ ಆ ಮದ್ರಾಸು ಮೃದಂಗಕಾರನ ಶುಲ್ಕ ಖಾತ್ರಿ ತೀರ ದುಬಾರಿಯಾಗಿರುತ್ತದೆ; ಎರಡನೆಯದಾಗಿ, ಅಂಥ ಅಭಿಪ್ರಾಯ ಕರ್ನಾಟಕಕ್ಕೇ ಅಪಮಾನಕಾರಿ; ಮತ್ತು ಮೂರನೆಯದಾಗಿ ಇದು ನಮ್ಮ ವ್ಯವಹಾರ ಸ್ವಾತಂತ್ರ್ಯಕ್ಕೆ ಸಂಕೋಲೆ ತೊಡಿಸುವ ಹುನ್ನಾರ. ಅವರ ಸೂಚನೆಯನ್ನು ನಯವಾಗಿ ನಿರಾಕರಿಸಿದೆವು. ಹೀಗೆ ಆ ಪುಕ್ಕಟೆ ಕಛೇರಿ ಪುಸ್ಸಾಯಿತು. ಶಿಶುನಾಳ ಷರೀಫರ ಸಾಲುಗಳ ನೆನಪಿಗೆ ಬಂದುವು:

ದುಡ್ಡು ಕೆಟ್ಟದ್ದು ನೋಡಣ್ಣಾ... ದುಗ್ಗಾಣಿಗೆ
ಹೆಡ್ಡನಾಗಬೇಡೋ ತಿಂದಿ ನೀ ಮಣ್ಣಾ!
ದುಡ್ಡು ಕೆಟ್ಟದ್ದೊ ಹೆಡ್ಡ ಮೂಢಾತ್ಮ ದೊಡ್ಡ ದೊಡ್ಡವರನ್ನೆ ಹೆಗ್ಗಾಲು ಇಡಿಸಿತು
ದುಡ್ಡು ಕೆಟ್ಟದ್ದು ನೋಡಣ್ಣಾ!
ಹೆಣ್ಣಿನ ಪೂಜೆಗೆ ಇಳಿಸಿ... ಮಣ್ಣಿನ
ಸಂತೇಲಿ ಇಲ್ಲದ ಮರ್ಯಾದೆ ಕೊಡಿಸಿ
ನುಣ್ಣನೆ ತಿಂದೀತು ಬಳಗ... ಮೆಲ್ಲನೆ
ಥಣ್ಣಗ ಮಾಡಿತು ಬೆಂಕಿಯ ಕಿಡಿಯ!

ರೊಕ್ಕ ಮುಕ್ಕಿಸೀತು ಮಣ್ಣು... ಅದ
ತಕ್ಕಂತೆ ಬಳಸಲು ತೆರೆಸೀತು ಕಣ್ಣು
ಮುಕ್ಕುವ ಚಪಲ ಏಣನ್ನು... ಮುಕ್ಕಿ
ಬಿಕ್ಕಳಿಸಲು ಕುಡಿಸೀತು ನೀರನ್ನು!

ಆಸೆ ಬಿದ್ದು ಮನದ ಮಾರಿ
ಹೊಂಟ್ಯಾಳೊ ಹುಡುಕುತ್ತ ನೂರೆಂಟು ಕೇರಿ
ಕಾಸು ಕಾಸನ್ನೂ ಹೆಕ್ಕಿ ... ಮೂಳಿ
ಶಿಶುನಾಳಾಧೀಶನ ಮರೆತಾಳು ಸೊಕ್ಕಿ!

ವರ್ಷಗಳುರುಳಿದುವು. ಯಮುಳ ನಕ್ಷತ್ರಗಳ ಉಜ್ವಲತೆ ಜಗತ್ಪ್ರಸಿದ್ಧಿ ಗಳಿಸಿತು. ರೇಡಿಯೊದಲ್ಲಿ ಪ್ರಸಾರವಾಗುತ್ತಿದ್ದ ಅವರ ವಿನಿಕೆಗಳನ್ನು ತಪ್ಪದೆ ಆಲಿಸುತ್ತಿದ್ದೆ, ಕೆಲವು

ಧ್ವನಿಸುರುಳಿಗಳನ್ನು ಕೇಳಿದ್ದೆ ಕೂಡ. ವೇಗ-ಆರ್ಭಟೆ-ಕಲ್ಪನಸ್ವರ-ಚಮತ್ಕಾರಗಳ ಇಳಿಜಾರಿನಲ್ಲಿ ಅವರ ಶೈಲಿ ಕಡಿದಾದ ಪ್ರಪಾತದತ್ತ ಧಾವಿಸುತ್ತಿದೆ ಎಂದೆನ್ನಿಸಿ ಖೇದವಾಗುತ್ತಿತ್ತು. ಈ ಎಲೆಕ್ಟ್ರಾನಿಕ್ ಯುಗದಲ್ಲಿ ಸಂಗೀತ ಪ್ರಪಂಚಕ್ಕೆ ಬಡಿದಿರುವ ಮೂರು ಪ್ರಾಣಾಂತಿಕ ಪಿಡುಗುಗಳೆಂದರೆ ಅತಿದ್ರುತ ಗತಿ, ಮೃದಂಗ ಘಾತಗಳ ಯಾಂತ್ರಿಕ ಅನುಕರಣೆ (ಸರ್ಕಸ್) ಮತ್ತು ತೀವ್ರಘೋಷದಲ್ಲಿ (high volume) ಧ್ವನಿವರ್ಧಕಗಳ ಅರಚಾಟ. ಇದಕ್ಕೆ ಫ್ಯೂಷನ್ ಮ್ಯೂಸಿಕ್ (confusion music?) ಎಂಬ ಗಂಭೀರ ಗೊಂದಲ ನಾಮ ಬೇರೆ!

ಆ ವರ್ಷದ ಶ್ರೀರಾಮೋತ್ಸವ ಸಂಗೀತ ಸಮಾರಂಭಕ್ಕೆ ನಗರದ ಪ್ರತಿಷ್ಠಿತ ಸಂಗೀತ ಸಭೆಯೊಂದು ಈ ಪಿಟೀಲು ಸಹೋದರರನ್ನು ಆಹ್ವಾನಿಸಿ ಸಾಕಷ್ಟು ಪ್ರಚಾರವಿತ್ತಿತು. ಪ್ರತಿಯೊಂದು ಜೀವಂತ ವೈಕಲ್ಯ ಸೃಜನಶೀಲತೆಯ ಒಂದೊಂದು ಉತ್ಸರ್ಜನೆ, ಆದ್ದರಿಂದ ಅದನ್ನು ಮುಕ್ತ ಮನದಿಂದ ಆಲಿಸಿ ಬಳಿಕ ಯುಕ್ತ ತೀರ್ಮಾನಕ್ಕೆ ಬರಬೇಕು, ಪೂರ್ವಾಗ್ರಹವಿನಿತೂ ಇಲ್ಲಿ ನುಸುಳಕೂಡದು ಎಂಬುದು ನನ್ನ ದೃಢ ನಿಲುವು. ಎಂದೇ ಈ ಕಛೇರಿಗಾದರೂ ವಾಡಿಕೆಯಂತೆ ತುಸು ಮುಂಚಿತವಾಗಿಯೇ ಹೋದೆ. ಇಡೀ ಸಭಾಂಗಣ ಜನಗಡಣದಿಂದ ತುಂಬಿ ಬಿರಿಯುವಂತಿತ್ತು. ಮೂಲೆಯಲ್ಲೆಲ್ಲೋ ಕುಳಿತೆ. ಯಥಾಕಾಲದಲ್ಲಿ ಅವರು ಮೃದಂಗ-ಘಟ-ಮೃಚ್ಚಂಗಿ-ಶ್ರುತಿ ಪರಿವಾರ ಸಹಿತ ರಂಗಪ್ರವೇಶಿಸಿದರು, ಪೈಲ್ವಾನರು ಜಟ್ಟಿ ಕಾಳೆಗಕ್ಕಿಳಿಯುವ ಭಂಗಿಯಲ್ಲಿ.

ಹದಿನೆಂಟು - ಇಪ್ಪತ್ತರ ಹರೆಯದ ಮದ, ಕೀರ್ತಿ ಪ್ರಚಾರಗಳ ಅಮಲು, ಮೆಚ್ಚಿ ಉಲಿಯುವ ವಂದಿ ಮಾಗಧರ ಜೈಕಾರ ಎಲ್ಲವೂ ಬೆಸುಗೆಗೊಂಡಿದ್ದ ದಷ್ಟಪುಷ್ಟ ತರುಣರು. ವ್ಯವಸ್ಥಾಪಕರ ಸೂಚನೆ ಮೇರೆಗೆ ಚಪ್ಪಲಿಗಳನ್ನು ಮೆಟ್ಟಿಲ ಬಳಿ ಬಿಟ್ಟು, ವೇದಿಕೆ ಏರಿ ನೇರ ತಮ್ಮ ಆಸನಗಳತ್ತ ಚಿಮ್ಮಿದರು. ಬದಿಯಲ್ಲೇ ರಾರಾಜಿಸುತ್ತಿದ್ದ ದೇವರ ಮಂಟಪಕ್ಕೆ, ಮತ್ತೆ ವ್ಯವಸ್ಥಾಪಕರ ಆಣತಿಯಂತೆ, ಪ್ರದಕ್ಷಿಣೆ ಹಾಕಿ ಮಂಗಳಾರತಿ ಸ್ವೀಕರಿಸಿ ಆಸೀನರಾದರು, ಅವಸರ, ಅಸಹನೆ, ಅಹಂಕಾರಗಳೇ ಮೈವಡೆದಿದ್ದವೋ ಎಂಬಂತೆ. ಪಿಟೀಲುಗಳಿಗೆ ಲಗತ್ತಿಸಿದ್ದ ಸಂಪರ್ಕ ಮೈಕುಗಳು, ಎದುರಿನಲ್ಲಿ ಇನ್ನೆರಡು ತೆರೆ ಮೈಕುಗಳು, ಮೃದಂಗದ ಕರ್ಣ ಮತ್ತು ಡಗ್ಗಗಳಿಗೊಂದೊಂದು ಮೈಕ್ ಇತ್ಯಾದಿ ಮೈಕ್ ಶ್ರೇಣಿ ಯಾವುದೇ ಅಖಾಡಕ್ಕೆ ಸವಾಲಾಗಿದ್ದುವು. ಘೋಷವನ್ನು ತಾರಕಕ್ಕೆ ಏರಿಸಲು ಮೈಕ್‌ನವನಿಗೆ ಹುಕುಂ ನೀಡಿದರು. ಇಷ್ಟೆಲ್ಲ ಪರಿಕರವೇಷ್ಟಿತ ಯುಗ್ಮವಾದಕರು ಮುಂದಿನ ಸುಮಾರು ಒಂದು ತಾಸಿನಲ್ಲಿ ಕದನಕುತೂಹಲ 'ರಘುವಂಶಸುಧಾಂಬುಧಿ ಚಂದ್ರ', ನವರಸಕನ್ನಡ 'ನಿನುವಿನಾ ನಾಮದೇಂದು', ನಳಿನಕಾಂತಿ 'ಮನವ್ಯಾಲ', ಗರುಡಧ್ವನಿ 'ತತ್ತ್ವಮೆರುಗ ತರಮಾ' ಮುಂತಾದ ಆರೇಳು ಅತಿ ಜನಪ್ರಿಯ ರಾಗ - ಕೃತಿಗಳನ್ನು ಬಜಾಯಿಸಿದಾಗ ಮುಂದೆ ಕುಳಿತಿದ್ದ ಸಭ್ಯ ರಸಿಕರಿಗೆ ಉಸಿರು ಕಟ್ಟಿತು, ಕಿವಿ ಬಿರಿಯಿತು, ಕಣ್ಣು ಬೆಕ್ಕಸಬೆರಗಾಯಿತು. ಆದರೆ ಉಳಿದ

ಸಾವಿರಾರು ಮಂದಿ ಕುಳಿತಲ್ಲಿ ನಿಂತಲ್ಲಿ ಕುಣಿದು ಕುಪ್ಪಳಿಸಿ ತಮ್ಮ ಹರ್ಷೋದ್ಗಾರಗಳನ್ನು ಮುಕ್ತವಾಗಿ ಹರಿಯಗೊಟ್ಟರು - "ಚಂದ್ರೋದಯಕ್ಕಂಬುಧಿ ಪೆರ್ಚುವಂತೆ!"

ಇಷ್ಟಾಗುವಾಗ ಸ್ವತಃ ಸುಸ್ತಾಗಿದ್ದ ವಾದಕರು ತಾಳವಾದ್ಯಗಳ ತನಿವಿನಿಕೆಗೆ ಅವಕಾಶ ಮಾಡಿಕೊಟ್ಟರು. ಸರಿ, ಮುಂದಿನ ಅರ್ಧ ತಾಸು ಆ ನಾಲ್ಕೂ ಕುಟ್ಟಕರ ತಟ್ಟು ಪೆಟ್ಟುಗಳ ಪಟ್ಟುಗಳನ್ನು ಸಹಿಸಿದ್ದಾಯಿತು. ಹೀಗೆ ಪೂರ್ಣಾಹುತಿ ಮುಗಿದು ಮತ್ತೆ ರಾಗಾಲಾಪನೆ ಆರಂಭವಾಗುವ ಮುನ್ನ ಸಹೋದರರು "ಮೈಕ್! ಮೈಕ್!" ಎನ್ನುತ್ತ ಮೈಕ್‌ನವನಿಗೆ ಘೋಷ ಏರಿಸಲು ಅಪ್ಪಣೆ ಮಾಡಿದರು. ಅಷ್ಟು ಹೊತ್ತೂ ಈ ತಾಡನೆಯ ಹತಿ ಸಹಿಸಿದ್ದ ಮುಂದಿನ ಸಾಲುಗಳ ಸಭ್ಯರು, "ಏರಿಸುವುದು ಬೇಡ. ಈಗಾಗಲೇ ವಾಲ್ಯೂಮ್ ಅತಿಯಾಗಿದೆ. ತುಸು ನೆಮ್ಮದಿಯ ಕೃತಿ ನುಡಿಸಬಾರದೇ?" ಎಂದು ಮೆತ್ತಗೆ ಪಿಸುಗುಟ್ಟಿದರು. "ಹಾಗಾದರೆ ನಾವು ನುಡಿಸುವುದಿಲ್ಲ" ಎಂದು ಆ ಚಿಗುರುಮೀಸೆಗಳು ವಾದ್ಯಗಳನ್ನು ಕೆಳಗಿಟ್ಟರು ಸಿಟ್ಟಿನಿಂದ. ಹಿರಿಯರೊಬ್ಬರು ಕಲಾವಿದರ ಬಳಿಗೆ ಸರಿದು ವಿವರಣೆ ನೀಡಲು ತೊಡಗಿದರು. ಆದರೆ ಅಷ್ಟರಲ್ಲೇ ಅಣ್ಣ ಹೇಳಿದ, "ನೀವು ಮೈಸೂರಿಗರಿಗೆ ನಮ್ಮ ಸಂಗೀತ ಕೇಳಿ ಮೆಚ್ಚುವ ಯೋಗ್ಯತೆ ಇಲ್ಲ. ನಾವು ಇಲ್ಲಿ ಕಮಾನು ಎತ್ತುವುದಿಲ್ಲ".

ಮೈಸೂರಿಗೇ ಆದ ಈ ಸಾರ್ವಜನಿಕ ಅಪಮಾನ ಸಹಿಸದ ಜನಜಂಗುಳಿ, "ನೀವು ತೊಲಗಿ" ಎನ್ನುತ್ತ ಕಛೇರಿ ಮುಂದುವರಿಯಲು ಬಿಡುವು ಮಾಡಿಕೊಡಲಿಲ್ಲ. ವ್ಯವಸ್ಥಾಪಕರ ಸಂದರ್ಭಸ್ಫೂರ್ತಿ, ಮಿಗಿಲಾಗಿ ಅವರ ಘನವ್ಯಕ್ತಿತ್ವ ಎರಡೂ ಸೇರಿ ಅಲ್ಲಿ ಹೆಚ್ಚಿನ ಉತ್ಪಾತ ನಡೆಯುವುದು ತಪ್ಪಿತು. ಆದರೆ ಅಂದಿನ ಕಛೇರಿ ಕೈದಾಯಿತು.

ಮರುಸಂಜೆಯ Star of Mysore ದೈನಿಕದಲ್ಲಿ ಅತ್ಯಂತ ಖೇದದಿಂದ ಈ ಘಟನೆ ಬಗ್ಗೆ ತುಸುವೇ ಪ್ರಸ್ತಾವಿಸಿ, "ನಿಸರ್ಗವೀಯುವ ಒಂದು ಅಪೂರ್ವ ವರ ಪ್ರತಿಭೆ. ಇದು ಸಮಾಜದ ಸೊತ್ತು. ಇದನ್ನು ಒಲುಮೆ, ವಿನಯ ಮತ್ತು ಮುಕ್ತ ಮನದಿಂದ ಲಾಲಿಸಿ, ಪಾಲಿಸಿ, ಬೆಳೆಸಿ, ಸಮಾಜಕ್ಕೆ ಒಪ್ಪಿಸಿ ಕೃತಕೃತ್ಯತೆ ಪಡೆಯಬೇಕಾದದ್ದು ವ್ಯಕ್ತಿಯ ಕರ್ತವ್ಯ. ಆದರೆ ದುರ್ದೈವ, ಪ್ರಕೃತ ಸಂದರ್ಭದಲ್ಲಿ ಹೀಗಾಗಲಿಲ್ಲ" ಎಂಬ ವಿಷಾದದ ನುಡಿಯೊಡನೆ ಮುಕ್ತಾಯಗೊಳಿಸಿದೆ.

ಐದಾರು ವಾರಗಳು ಸಲ್ಲುವಾಗ ನನಗೊಂದು ತೂಕವಾದ 'ಉಡುಗೊರೆ' ನೋಂದಾಯಿತ ಅಂಚೆಯಲ್ಲಿ ಬಂತು: ಸರ್ವೋಚ್ಚ ನ್ಯಾಯಾಲಯದ ಹಿರಿಯ ವಕೀಲರೊಬ್ಬರು ಆ ಕಲಾವಿದ-ಕಕ್ಷಿಗಾರರ ಪರವಾಗಿ ಸುದೀರ್ಘ 'ಪ್ರೇಮಪತ್ರ' ಬರೆದಿದ್ದರು, ಅದರ ನಕಲನ್ನು Star of Mysoreಗೂ ರವಾನಿಸಿದ್ದರು. ಸಾರಾಂಶ: "ಅಂಥ ಘಟನೆಯೇ ನಡೆಯಲಿಲ್ಲ, ಅದೇ ಕಲಾವಿದರನ್ನು ಕೆಲವು ವರ್ಷಗಳ ಹಿಂದೆ ಹಾಡಿ ಹೊಗಳಿ ಅಟ್ಟಕ್ಕೇರಿಸಿ ಇದೇ ದೈನಿಕದಲ್ಲಿ ಬರೆದಿದ್ದ ನಾನು ಮುಂದೆ ಅವರು ನನ್ನ ಷರತ್ತಿನ ಪ್ರಕಾರ ನನ್ನ ಯಾವುದೋ ಯಃಕಶ್ಚಿತ್

ಸಭೆಗೆ ಬರಲು ಸಾಧ್ಯವಿಲ್ಲವೆಂದುದಕ್ಕೆ ಜಿದ್ದು ಸಾಧಿಸಲು ಇಂಥ ಕಲ್ಪಿತ ದೃಶ್ಯ ಸೃಷ್ಟಿಸಿ ಇವರ ಅಂತಾರಾಷ್ಟ್ರೀಯ ಖ್ಯಾತಿಗೆ ಮಸಿ ಬಳಿದಿದ್ದೇನೆ. ಇದಕ್ಕೆ ಪ್ರಾಯಶ್ಚಿತ್ತವಾಗಿ ನಾನು ಅವರಿಗೆ ರೂಪಾಯಿಒಂದು ಲಕ್ಷ ಪರಿಹಾರಧನ ಪಾವತಿಸತಕ್ಕದ್ದು, ಮತ್ತು ಬೇಷರತ್ತು ಲಿಖಿತ ಕ್ಷಮಾಯಾಚನೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನನ್ನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಫಿರ್ಯಾದಿ ದಾಖಲಿಸಲಾದೀತು, ಎಚ್ಚರಿಕೆ!"

ಮೊದಲ ಓದಿಗೆ ನೆತ್ತರೊತ್ತಡ ತಾರಕ್ಕೆ ಜಿಗಿದದ್ದು ನಿಜ. ಪುರಂದರದಾಸರು ಮನದೊಳಗೆ ಮಂದ್ರದಲ್ಲಿ ಮಿಡಿದರು, "ಸತ್ಯವಂತರಿಗಿದು ಕಾಲವಲ್ಲ!" ಮರುಗಳಿಗೆ ಅವರೇ ಸಾಂತ್ವನ ನುಡಿದರು ಕೂಡ, "ನಗೆಯು ಬರುತಿದೆ ಎನಗೆ ನಗೆಯು ಬರುತಿದೆ ಜಗದೊಳಿರುವ ಜಾಣರೆಲ್ಲ ಹಗರಣ ಮಾಡುವುದನೆ ಕಂಡು". ಬೆಂಗಳೂರಿನಲ್ಲಿರುವ ನನ್ನ ಶಿಷ್ಯ ಮತ್ತು ಹಿರಿಯ ವಕೀಲರೊಬ್ಬರ ಮೂಲಕ ಅವರಿಗೆ ಕೇವಲ ನಾಲ್ಕು ಸಾಲುಗಳ ಜವಾಬು ನೀಡಿ ಈ ಸವಾಲು ಸ್ವೀಕರಿಸಿದ್ದಾಯಿತು: ವಾಸ್ತವತೆ, ಸತ್ಯ ಮತ್ತು ಸಾರ್ವಜನಿಕ ಸಾಕ್ಷ್ಯ ಎಲ್ಲ ನನ್ನ ಪರವಾಗಿರುವಾಗ, "ಅಂಜಿಕಿನ್ಯಾತಕಯ್ಯಾ ಸಜ್ಜನರಿಗೆ ಭಯವು ಇನ್ಯಾತಕಯ್ಯಾ!" ಮುಂದೆ ಏನೂ ನಡೆಯಲಿಲ್ಲ!

ನಿಜ, "ಧರ್ಮೋ ರಕ್ಷತಿ ರಕ್ಷಿತಃ" ಮತ್ತು ವಿದುಷಿ ಟಿ. ಎಸ್. ಸತ್ಯವತಿ ಇದಕ್ಕೆ ಅನುಮಿತ ಜೋಡಿಸಿರುವಂತೆ, "ಸಂಗೀತಂ ರಕ್ಷತಿ ರಕ್ಷಿತಃ".

ಪರಿಶುದ್ಧ ಗಾಯನಕೆ ಶರಣಾಗು, ನೀ ಬೆಳೆವೆ
ಪರಿಪರಿಯ ಆಮಿಷಕೆ ಮರುಳಾಗು ನೀನಳಿವೆ
ಗುರಿಯಿರಲಿ ತಾರೆಯೆಡೆ ನಡೆಯಿರಲಿ ಭೂಮಿಯಲಿ
ತೆರೆಯುವರು ಕದ ವಾಣಿ ಲಕ್ಷ್ಮಿಯರು ಅತ್ರಿಸೂನು

8, ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತೀಪುರ, ಮೈಸೂರು - 570009

ಯಕ್ಷಗಾನ ಭಾಗವತಿಕೆಯ ಮೇಲೆ ಶಾಸ್ತ್ರೀಯ ಸಂಗೀತದ ಪ್ರಭಾವ

✍ ಎಚ್. ಶ್ರೀಧರ ಹಂದೆ

ಬೇಕಿರಲಿ ಬೇಡವಿರಲಿ, ತನ್ನಿಂದ ತಾನಾಗಿ ಹಿರಿಯರ ಪ್ರಭಾವ ಹಿರಿಯರ ಮೇಲೆ, ಪರಿಸರದ ಪ್ರಭಾವ ಜೀವಜಂತುಗಳ ಮೇಲೆ ಬಿದ್ದೇ ಬೀಳುತ್ತದೆ. ಇಂತಹ ಸಂದರ್ಭ ತಮ್ಮ ತಮ್ಮ ಸ್ವಂತಿಕೆಯನ್ನು ಕಾಯ್ದುಕೊಳ್ಳುವಲ್ಲಿ ಜಾಗ್ರತೆ ಅಗತ್ಯ. ಈ ಬಗೆಯ ಎಚ್ಚರ ನಮ್ಮ ಬದುಕು, ಸಾಹಿತ್ಯ, ಕಲೆ ಮೊದಲಾದ ಎಲ್ಲದಕ್ಕೂ ಅನ್ವಯಿಸುತ್ತದೆ.

ಇಂದು ಯಕ್ಷಗಾನದ ಮೇಲೆ ಸಂಗೀತದ ಪ್ರಭಾವ ಮಾತ್ರವಲ್ಲ, ಜಾನಪದ, ಸಿನೆಮಾ (ಚಿತ್ರಗೀತೆ), ಸುಗಮಸಂಗೀತ, ಭಾವಗೀತೆ ಇತ್ಯಾದಿಗಳ ಗಾಢಪ್ರಭಾವವೂ ಬಿದ್ದಿದೆ. ಇದು ಯಕ್ಷಗಾನ ಹಾಡುಗಾರಿಕೆ ಹೌದೆ! ಅಲ್ಲವೆ! ಎನ್ನುವಷ್ಟರ ಮಟ್ಟಿನ ಪ್ರಭಾವದಿಂದ 'ಯಕ್ಷಗಾನ ಹಾಡುಗಾರಿಕೆ' ಮೂಲ ಶೈಲಿಯನ್ನು ಕಳೆದುಕೊಂಡಿದೆಯೋ ಅನಿಸುತ್ತಿದೆ. ಇದಕ್ಕೆ ಕಾರಣ ಎರಡೇ; ಒಂದು, ಯಕ್ಷಗಾನ ಶೈಲಿಯ ಘನತೆ, ಗಾಂಭೀರ್ಯ, ಮಾಧುರ್ಯ ಇತ್ಯಾದಿಗಳನ್ನು ಸ್ವತಃ ತಿಳಿಯದ ಭಾಗವತರು, ಇನ್ನೊಂದು, ಎಲ್ಲ ವರ್ಗದ ಪ್ರೇಕ್ಷಕರನ್ನು ಸುಲಭವಾಗಿ ತಮ್ಮತ್ತ ಸೆಳೆದುಕೊಳ್ಳಬೇಕೆಂಬ ಅನಿವಾರ್ಯತೆಯ ಚಪಲ.

ಹಿಂದಿನ ಕೀರ್ತಿಶೇಷ ಭಾಗವತರಲ್ಲಿ ಹೆಚ್ಚಿನವರು ನೇರವಾಗಿ 'ಸಂಗೀತ' ಕಲಿತವರಲ್ಲ. ಅವರೆಲ್ಲ ವೃತ್ತಿಪರ ಮೇಳಗಳಲ್ಲಿದ್ದು ಹಿರಿಯ ಭಾಗವತರನ್ನೇ ಅನುಕರಿಸಿ ಮೊದಲು ಒತ್ತುಭಾಗವತರಾಗಿ ನಂತರ ಪ್ರಧಾನ ಭಾಗವತಿಕೆಯ ಸ್ಥಾನಕ್ಕೇರಿದವರು. ಈ ಒತ್ತುಭಾಗವತರನ್ನು 'ಸಂಗೀತಗಾರ'ರೆಂದೇ ಕರೆಯಲಾಗುತ್ತಿತ್ತು. ಪ್ರತಿ ಮೇಳಗಳಲ್ಲಿ ಸಂಗೀತಗಾರ ಮತ್ತು ಭಾಗವತ ಎನ್ನುವ ಇಬ್ಬರು ಹಾಡುಗಾರರು ಇರುವುದು ರೂಢಿ. ದಾಸರ ಪದ್ಯಗಳೇ ಇವರಿಗೆ ರಾಗ-ತಾಳ-ಭಾವಗಳ ಪಾಠವನ್ನು ಚೆನ್ನಾಗಿ ಕಲಿಸಿವೆ. ಬಡಗಿನ ಮರವಂತೆ ದಾಸ ಸಹೋದರರಿರಲಿ, ಅಂಪಾರು ವೈದ್ಯರಿರಲಿ, ಕುಂಜಾಲು ಕಿಣಿಯವರಿರಲಿ, ಮಾರ್ವಿ ಉಪ್ಪೂರರಿರಲಿ ಇವರೆಲ್ಲ ಚಿಕ್ಕಂದಿನಲ್ಲಿ ದಾಸರ ಪದ್ಯಗಳನ್ನು ಏರು ಕಂಠದಲ್ಲಿ ಶ್ರುತಿಬದ್ಧವಾಗಿ ಶುದ್ಧ ರಾಗ-ತಾಳಗಳಲ್ಲಿ ಹಾಡಿ ಜನಮನ ಗೆದ್ದವರು. ಮುಂದೆ ಭಾಗವತರಾದಾಗಲೂ ದಾಸರ ಪದ್ಯಗಳ ಸಾಲುಗಳನ್ನೆ ಸ್ಮರಿಸುತ್ತ ಹೆಚ್ಚಿನ ರಾಗ ಸಂಚಾರಗಳನ್ನು ನೆನಪಿಸಿಕೊಳ್ಳುತ್ತಿದ್ದರು. ಪುರಂದರದಾಸರನ್ನು ಕರ್ಣಾಟಕ ಸಂಗೀತದ ಪಿತಾಮಹ ಎನ್ನಲಾಗುತ್ತಿದೆ. ಅವರ ಹೆಚ್ಚಿನ ಪದ್ಯಗಳ ನೇರ ಪ್ರಭಾವ ಯಕ್ಷಗಾನ ಹಾಡುಗಾರಿಕೆಯ ಮೇಲೆ ಬಿದ್ದಿದೆ ಎನ್ನುವಾಗ ಸಂಗೀತದ ಪ್ರಭಾವ ಗಾಢವಾಗಿ ಯಕ್ಷಗಾನದ ಮೇಲೆ ಬೀರಿದೆ ಎನ್ನುವುದಕ್ಕೆ ಬೇರೆ ಪುರಾವೆ ಬೇಕೆ?

ಸಂಗೀತವನ್ನು ಶಾಸ್ತ್ರೋಕ್ತವಾಗಿ ಕಲಿತ ತೆಂಕಿನ ಶ್ರೀ ದಾಮೋದರ ಮಂಡೆಚ್ಚರು ಕೆಲವಷ್ಟು ವರುಷ ತಮ್ಮದೇ ಹಾಡುಗಾರಿಕೆಯ ಶೈಲಿಯ ಛಾಪನ್ನು ಈ ರಂಗದಲ್ಲಿ ಒತ್ತಿ ಹೋದರು. ಸಂಗೀತ ಪ್ರಿಯರನ್ನೂ ಯಕ್ಷಗಾನದತ್ತ ಸೆಳೆಯುವಲ್ಲಿ ಅವರ ಸೇವೆ ಗಮನಾರ್ಹ. ಬಡಗಿನ ಯುವ ಭಾಗವತರಲ್ಲಿ ಶ್ರೀ ವಿದ್ವಾನ್ ಗಣಪತಿ ಭಟ್ಟರು ಸಂಗೀತ ಶಾಸ್ತ್ರವನ್ನೂ ಕಲಿತೇ ಈ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ, ಜನಾನುರಾಗಿಗಳೂ ಆಗಿದ್ದಾರೆ. ಯಕ್ಷಗಾನದ ಮೂಲಶೈಲಿ ಅಥವಾ ಮಟ್ಟು ಇವರೆಲ್ಲರ ಹಾಡುಗಾರಿಕೆಯಲ್ಲಿ ಎಷ್ಟರ ಮಟ್ಟಿಗೆ ಉಳಿದಿದೆ? ಎನ್ನುವುದು ಮುಖ್ಯ.

ತೆಂಕು, ಬಡಗು - ಬಡಗಿನಲ್ಲೂ ಮಾರ್ವಿ ತಿಟ್ಟು, ಕುಂಜಾಲು ತಿಟ್ಟು, ಕೆರೆಮನೆ, ಕರ್ಕಿ ಹೀಗೆ ವಿವಿಧ ತಿಟ್ಟುಗಳ ಹಾಡುಗಾರಿಕೆಯ ಶೈಲಿಗಳಲ್ಲೂ ಅವುಗಳದ್ದೇ ಪ್ರತ್ಯೇಕವಾದ ಆಕರ್ಷಣೆ, ಮಾಧುರ್ಯಗಳನ್ನು ಹಿಂದೆ ಕಾಣುತ್ತಿದ್ದೆವು. ದೂರದಿಂದಲೇ ಆ ತಿಟ್ಟುಗಳನ್ನು ಕೇಳಿಯೂ ಗುರುತಿಸಬಹುದಾಗಿತ್ತು. ಆದರೆ ಇಂದು ವಿವಿಧ ಮಾಧ್ಯಮಗಳ ಹಾಗೂ ಹಾಡುಗಾರಿಕೆಯ ಶೈಲಿಗಳ ಕಟ್ಟಿ ಪ್ರಭಾವದಿಂದ ಈ ಎಲ್ಲ ತಿಟ್ಟುಗಳು ತಮ್ಮ ಮೂಲ ಯಕ್ಷಗಾನ ಹಾಡುಗಾರಿಕೆಯ ಶೈಲಿಯ ಸೊಗಸನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿವೆ.

ಡಾ. ಕಾರಂತರು ನಾಲ್ಕು ದಶಕಗಳ ಹಿಂದೆ ಬಡಗು ತಿಟ್ಟಿನ ಪ್ರಸಿದ್ಧ ಭಾಗವತರನ್ನು ಕರೆಸಿ ಕೋಟದಲ್ಲಿ 'ಗಾನ ತಾಳಮದ್ದಲೆ' ಮಾಡಿ ಅದನ್ನು ದಾಖಲಿಸಿದ್ದರು. ರಾಗಗಳನ್ನು ಗುರುತಿಸಲಾಗದಿದ್ದರೂ ಶುದ್ಧರಾಗಗಳಲ್ಲಿ ಮಧುರ ಕಂಠದಿಂದ ಹಾಡುತ್ತಿರುವ ಭಾಗವತರನೇಕರಿಗೆ ರಾಗಗಳ ಪರಿಚಯ ಮಾಡಿಸುವ ಮತ್ತು ಹಾಡುವಾಗಿನ ಸಾಹಿತ್ಯ ದೋಷಗಲನ್ನು ಸರಿಪಡಿಸುವ ಮಹಾನ್ ಉದ್ದೇಶ ಇದರ ಹಿಂದೆ ಇದ್ದಿತ್ತು. ಗುರುಮುಖೇನ ಶಾಸ್ತ್ರೀಯವಾಗಿ ಸಂಗೀತ ಕಲಿಯದ ಅನೇಕ ಮುಗ್ಧ ಭಾಗವತರು ಸುಮಾರು ಎಂಭತ್ತು ರಾಗಗಳನ್ನು ಯಕ್ಷಗಾನ ಶೈಲಿಗೆ ಚ್ಯುತಿ ಬಾರದಂತೆ ಶುದ್ಧರೂಪದಲ್ಲಿ ಹಾಡಬಲ್ಲರು ಎನ್ನುವ ರಹಸ್ಯವನ್ನು ಡಾ. ಕಾರಂತರು ಬಹಿರಂಗಗೊಳಿಸಿದರು.

ತಮ್ಮ ಯಕ್ಷಗಾನ 'ಬ್ಯಾಲೆ' ಪ್ರಯೋಗದ ಹಾಡುಗಾರಿಕೆಗೆ ಇನ್ನಷ್ಟು ಸಂಗೀತದ ಪ್ರಭಾವ, ಮಿರುಗು ಅಗತ್ಯವೆನಿಸಿದ ಕಾರಂತರು ಹಿಮ್ಮೇಳಕ್ಕೆ ಪ್ರಸಿದ್ಧ ಸಂಗೀತಜ್ಞರನ್ನೂ ಸೇರಿಸಿಕೊಂಡರು. ಎಂ. ನಾರಣಪ್ಪ ಉಪ್ಪೂರರು, ನೀಲಾವರ ರಾಮಕೃಷ್ಣಯ್ಯ, ಐರೋಡಿ ರಾಮಗಾಣಿಗರಂತಹವರು ಬಹಳ ಪ್ರಯತ್ನದಿಂದ ತಮ್ಮ ಮೂಲ ಶೈಲಿಗೆ ಸಂಗೀತವನ್ನು ಕಾರಂತರ ಸೂಚನೆಗೆ ಅನುಸರಿಸಿ ಬಳಸಿಕೊಂಡರು. ಆದರೆ ಜಾನುವಾರುಕಟ್ಟೆ, ಗೋಪಾಲಕೃಷ್ಣರಂತಹವರಿಗೆ ಅದು ತೀರಾ ಕಷ್ಟವೆನಿಸುತ್ತಿತ್ತು. ಕಾರಂತರ ಬ್ಯಾಲೆಯ ಮಧ್ಯೆ ಜಾನುವಾರುಕಟ್ಟೆ, ಭಾಗವತರ ಹಾಡುಗಾರಿಕೆ ಕೇಳಿಬಂತೆಂದರೆ ಬ್ಯಾಲೆಯನ್ನು ನೋಡುತ್ತಿದ್ದ ಪ್ರೇಕ್ಷಕರಿಗೆ ಮಂದರ್ತಿ ಮೇಳದ ರಂಗಸ್ಥಳದ ನೆನಪಾಗಿ ಮೈ ನವಿರೇಳುತ್ತಿತ್ತು. ಯಕ್ಷಗಾನದ ಮೂಲ ಶೈಲಿ ಅಷ್ಟು ಸತ್ವಪೂರ್ಣ ಎನ್ನುವುದು ಸತ್ಯ. ಇದಕ್ಕೆ ಇನ್ನೊಂದು ನಿದರ್ಶನ, ಕೆಲವು ವರುಷಗಳ ಹಿಂದೆ ಉಡುಪಿಯ ಯಕ್ಷಗಾನ ಕಲಾರಂಗದವರು ಆಯೋಜಿಸಿದ 10-12 ಪ್ರಸಿದ್ಧ

ಇಂದಿನ ಮತ್ತು ಹಿಂದಿನ ಭಾಗವತರ ಗಾನವೈವಿಧ್ಯ ಕಾರ್ಯಕ್ರಮ. ಸಭಾಸದರಿಂದ ತುಂಬಿದ ಪಿ.ಪಿ.ಸಿ.ಯ ರಂಗಮಂದಿರ. "ಚಪ್ಪಾಳೆಯ ಮೂಲಕ ಯಾರೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಬಾರದು, ಈ ಕಾರ್ಯಕ್ರಮವನ್ನು ನಾವು ದಾಖಲೀಕರಿಸುತ್ತೇವೆ" ಎಂದು ಕಾರ್ಯಕರ್ತರು ಮೊದಲೇ ವಿನಂತಿಸಿಕೊಂಡಿದ್ದರು. ವಿನಂತಿಯನ್ನು ಬಹಳ ಹೊತ್ತಿನವರೆಗೆ ಸಹೃದಯ ಪ್ರೇಕ್ಷಕರು ಉಸಿರು ಬಿಗಿಹಿಡಿದು ಪಾಲಿಸಿದ್ದರು. ಆದರೆ ಹೊಸ ಚಿಗುರಿನ ಮಧ್ಯದಲ್ಲಿನ ಹಳೆಯ ಬೇರಾದ ನಲ್ಲೂರು ಮರಿಯಪ್ಪ ಆಚಾರ್ಯ ಇವರು ರತಿಕಲ್ಯಾಣದ 'ತಂಗಿ ಬಾಕಾ ಕೋಮಲಾಂಗಿಯೆ' ಎನ್ನುವ ಭಾಮಿನಿಯನ್ನು ಹಳೆಯ ಶೈಲಿಯ ಮೋಹನ ರಾಗದಲ್ಲಿ ಎತ್ತಿ ಹಾಡಿದಾಗ ಪ್ರೇಕ್ಷಕರೆಲ್ಲ ಪ್ರಾಯೋಜಕರ ಸೂಚನೆಯನ್ನೇ ಮರೆತು ಕಿವಿಗಡಚಿಕ್ಕುವಂತೆ ಚಪ್ಪಾಳೆ ಹೊಡೆದೇ ಹೊಡೆದರು. ಆದರೂ ಭಾಗವತರಿಗೆ ಸಂಗೀತ ಜ್ಞಾನ ಅಗತ್ಯ ಎನ್ನುವದರಲ್ಲಿ ಎರಡು ಮಾತಿಲ್ಲ. ಆ ದಿಸೆಯಲ್ಲಿ ಶ್ರೀ ನೀಲಾವರ ರಾಮಕೃಷ್ಣಯ್ಯ, ಶ್ರೀ ನಾರಣಪ್ಪ ಉಪ್ಪೂರ, ಶ್ರೀ ಕೋಕಿಲ ಕೃಷ್ಣ ಭಟ್ಟ ಮೊದಲಾದವರು ತಮ್ಮ ಅನುಭವಗಳನ್ನು ಮುಂದಿನವರಿಗೂ ದೊರೆಯುವಂತೆ ಪುಸ್ತಕರೂಪದಲ್ಲಿ ಪ್ರಕಟಿಸಿರುತ್ತಾರೆ. ಶ್ರೀ ಎಂ. ರಾಜಗೋಪಾಲ ಆಚಾರ್ಯರೂ ಯಕ್ಷಗಾನ ರಾಗ-ತಾಳಗಳ ಕುರಿತು ಮುಂದಿನ ಭಾಗವತರಿಗೆ ಮಾರ್ಗದರ್ಶನ ಮಾಡಿರುತ್ತಾರೆ.

ಭಜನೆ, ಸುಗಮಸಂಗೀತ, ಶಾಸ್ತ್ರೀಯ ಸಂಗೀತ, ಮದುವೆಯ ಸಂಪ್ರದಾಯದ ಹಾಡು, ಜಾನಪದ, ಯಕ್ಷಗಾನ ಹಾಡುಗಾರಿಕೆ ಇವೆಲ್ಲವುಗಳಲ್ಲಿನ ತಾಳ-ರಾಗಗಳು ಸಾಮಾನ್ಯ ಒಂದೇ. ಆದರೂ ಅವೆಲ್ಲ ಹಾಡುಗಾರಿಕೆಯ ತಮ್ಮ ತಮ್ಮ ಶೈಲಿಗಳಿಂದ ತಮ್ಮದೇ ಆದ ಪ್ರತ್ಯೇಕತೆಯನ್ನೂ ರುಚಿಭೇದವನ್ನೂ ಉಳಿಸಿಕೊಳ್ಳಬೇಕು. ಆದರೆ ಹಾಡುಗಾರಿಕೆಯ ವಿವಿಧ ಶೈಲಿಗಳ ಪರಸ್ಪರ ಪ್ರಭಾವಗಳಿಂದ ಯಾವುದು ತೆಂಕುತಿಟ್ಟಿನ ಭಾಗವತಿಕೆ, ಯಾವುದು ಬಡಗಿನ ಹಾಡುಗಾರಿಕೆ, ಯಾವುದು ಸುಗಮ ಸಂಗೀತ! ಎನ್ನುವುದನ್ನು ಗುರುತಿಸಲಾಗದಷ್ಟು ನಮ್ಮ ಹಾಡುಗಾರಿಕೆಯ ಮೂಲ ಶೈಲಿಗಳು ತಮ್ಮತನವನ್ನು ಕಳೆದುಕೊಂಡಿವೆ.

ಯಕ್ಷಗಾನದಲ್ಲಿ ಸಭಾಲಕ್ಷಣ ಅಥವಾ ಪೀಠಿಕಾ ಭಾಗದಲ್ಲಿ ಹಾಡಲು ಮೊದಲು ಬರುವ ಭಾಗವತನನ್ನು 'ಸಂಗೀತಗಾರ'ನೆಂದೇ ಕರೆಯಲಾಗುತ್ತಿದೆ. ಅದೇಕೆ? ಪ್ರಸಂಗ ಆರಂಭಕ್ಕೆ ಮೊದಲ ಆ ಭಾಗದಲ್ಲಿ ಅನೇಕ ದೇವತಾ ಶ್ಲೋಕಗಳನ್ನು ಭಿನ್ನ ಭಿನ್ನ ರಾಗಗಳಲ್ಲಿ ಆತ ಹಾಡಬೇಕು. ಅಲ್ಲದೆ ನಂತರದ ಪೀಠಿಕಾ ಸ್ತ್ರೀವೇಷಗಳನ್ನು ಕುಣಿಸುವ ಹೆಚ್ಚಿನ ಪದ್ಯಗಳು ದಾಸಸಾಹಿತ್ಯದಿಂದಲೇ ಆರಿಸಲ್ಪಟ್ಟವುಗಳು. ಈ ಹಾಡುಗಳೆಲ್ಲ ಸಂಗೀತಕ್ಕೆ ಹತ್ತಿರವಾದುದರಿಂದಲೇ ಆ ಭಾಗದಲ್ಲಿ ಹಾಡುವವರನ್ನು ಸಂಗೀತಗಾರನೆಂದು ಹೆಸರಿಸಿರಬಹುದೆ?

ಕೆಲವು ವರುಷಗಳ ಹಿಂದೆ ಉಡುಪಿಯ ರಾಜಾಂಗಣದಲ್ಲಿ ರಾಷ್ಟ್ರಮಟ್ಟದ ಸಂಗೀತ ಸಮ್ಮೇಳನ ನಡೆಯಿತುಯ ಅಂದು 'ಯಕ್ಷಗಾನ ಮತ್ತು ಸಂಗೀತ' ಎಂಬ ಶೀರ್ಷಿಕೆಯಲ್ಲಿ ಯಕ್ಷಗಾನ ಹಾಡುಗಾರಿಕೆಗೂ ಒಂದು ಅವಕಾಶ ಕಲ್ಪಿಸಲಾಗಿತ್ತು. ಈ ಕುರಿತು ಪ್ರಾತ್ಯಕ್ಷಿಕೆ

ನಡೆಸುವ ಅರ್ಹತೆಯುಳ್ಳ ಕೆರೆಮನೆ ಶ್ರೀ ಮಹಾಬಲ ಹೆಗ್ಡೆ ಇವರನ್ನು ಇದಕ್ಕಾಗಿ ಆರಿಸಲಾಗಿತ್ತು. ಅಸೌಖ್ಯದ ಕಾರಣ ಅವರು ಗೈರುಹಾಜರಾಗಬೇಕಾದ ಸಂದರ್ಭ ಅಕಸ್ಮಾತ್ ಆ ಕೆಲಸವನ್ನು ಶ್ರೀ ಈಶ್ವರಯ್ಯನವರು ನನಗೆ ವಹಿಸಿಕೊಟ್ಟಿದ್ದರು. ನನ್ನ ಸೀಮಿತ ಸಾಮರ್ಥ್ಯದ ಒಳಗೆ ಶ್ರೀಯುತ ಸದಾನಂದ ಐತಾಳ, ಶ್ರೀ ಜಯಂತ ಕುಮಾರ, ಶ್ರೀ ಕೆ. ಪಿ. ಹೆಗ್ಡೆ ಮುಂತಾದವರನ್ನು ಬಳಸಿಕೊಂಡು ಯಕ್ಷಗಾನದ ತಾಳ, ಗತಿ, ರಾಗ, ಹಾಡುಗಾರಿಕೆಯ ಹಳೆಯ ಶೈಲಿ ಇವುಗಳ ಕುರಿತು ಸುಮಾರು 2 ತಾಸುಗಳ ಕಾಲ ಪ್ರಾತ್ಯಕ್ಷಿಕೆ ಮಾಡಲಾಯಿತು. ಅಂದು ಸೇರಿದ ಪ್ರಸಿದ್ಧ ಸಂಗೀತ ವಿದ್ವಾಂಸರು ಯಕ್ಷಗಾನ ಸಂಪ್ರದಾಯದ ಹಿಂದಿನ ಹಾಡುಗಾರಿಕೆಯ ಶೈಲಿಯನ್ನು ಮುಕ್ತಕಂಠದಿಂದ ಹೊಗಳಿ ಹರಸಿದ ನೆನಪು ಇನ್ನೂ ಹಸಿರಾಗಿದೆ. ಮತ್ತೊಮ್ಮೆ ಹೆಗ್ಗೋಡಿನ ಕೆ. ವಿ. ಸುಬ್ಬಣ್ಣ ಇವರ ನೇತೃತ್ವದಲ್ಲೂ ಇಂತಹ ಸಂದರ್ಭ ಒದಗಿ ಬಂದಿತ್ತು. ಅಂದಿನ ಪ್ರಾತ್ಯಕ್ಷಿಕೆಯಲ್ಲಿ ಸಹಕರಿಸಿದವರು ಪ್ರಸಿದ್ಧ ವೃತ್ತಿಕಲಾವಿದರಾದ ಶ್ರೀ ನೆಬ್ಬೂರ ನಾರಾಯಣ, ಕಪ್ಪೆಕರೆ ಶ್ರೀ ಸುಬ್ರಾಯ, ಶ್ರೀ ನಲ್ಲೂರು ಮರಿಯಪ್ಪ ಆಚಾರ್ ಮೊದಲಾದವರು. ಆದಿನ ಹಾಡಲಾದ ಕಲ್ಯಾಣಿ, ಆರಭಿ, ಶಂಕರಾಭರಣ, ಮಧ್ಯಮಾವತಿ ರಾಗಗಳ ನಡೆಯನ್ನು ಸಂಗೀತ ವಿದ್ವಾಂಸರೂ ವಿಮರ್ಶಕರೂ ಆದ ಮೈಸೂರಿನ ಶ್ರೀ ಸತ್ಯನಾರಾಯಣರು ಪುನಃ ಪುನಃ ಅವುಗಳನ್ನೇ ಹಾಡಿಸಿ, 'ಇವುಗಳು ಶುದ್ಧ ಸಂಗೀತದ ನಡೆಯಲ್ಲೇ ಯಕ್ಷಗಾನೀಯ ಚೌಕಟ್ಟಿನಲ್ಲಿವೆ' ಎಂದು ಪ್ರಶಂಸಿಸಿದ್ದರು. ಅಲ್ಲದೆ ಅಲ್ಲಿ ಹಾಡಲಾದ ತೋಡಿ ಹಾಗೂ ಆನಂದಭೈರವಿ ರಾಗಗಳು ಒಂದು ವಿಶಿಷ್ಟ ರೂಪದಲ್ಲಿ ಹೊರಹೊಮ್ಮಿವೆ ಎಂದೂ ಶ್ಲಾಘಿಸಿದ್ದರು. ಉಡುಪಿಯ ಎಂ.ಜಿ.ಎಂ.ನಲ್ಲಿ ನಡೆದ ಇನ್ನೊಂದು ಗೋಷ್ಠಿಯ ಮುಖ್ಯ ಅತಿಥಿಗಳಾಗಿ ಬಂದ ಮತ್ತೋರ್ವ ಸಂಗೀತಜ್ಞ ಶ್ರೀ ಈಶ್ವರಯ್ಯನವರು 'ಯಕ್ಷಗಾನ ಶುದ್ಧ ಸಂಗೀತ ಆಗಬಾರದು, ಇಲ್ಲಿನ ಗಾನಶೈಲಿಯ ಮಟ್ಟು ವಿಶಿಷ್ಟ, ಆಕರ್ಷಣೆಯಿಂದ ಕೂಡಿದೆ. ಕೆಲವೇ ಸ್ವರಗಳ ಮಧ್ಯೆ ಓಡಾಡುವ ಈ ಗಾನಶೈಲಿ ಅದ್ಭುತ ಪರಿಣಾಮ ಬೀರುತ್ತದೆ' ಎಂದು ಇಂದಿನ ಭಾಗವತರಿಗೆ ಕಿವಿಮಾತು ಹೇಳಿದ್ದರು.

ಹೀಗೆ ಯಕ್ಷಗಾನ ಹಾಡುಗಾರಿಕೆಯಲ್ಲಿ ಸಂಗೀತವಿದೆ, ರಾಗ-ತಾಳಗಳಿವೆ, ಆದರೆ ಅದು ಸಂಗೀತವಾಗಬಾರದು. ಎಲ್ಲ ಪ್ರಭಾವಗಳನ್ನು ಮೈಗೂಡಿಸಿಕೊಂಡು ತನ್ನದೇ ಆದ ಮೂಲ ಧಾಟಿ ಯಾ ಶೈಲಿಗಳನ್ನು ಅದು ಎಂದಿಗೂ ಬಿಡಬಾರದು. ಇಲ್ಲಿನ ಹಾಡುಗಾರಿಕೆ 'ಯಕ್ಷ-ಗಾನ' ಆಗಬೇಕೇ ವಿನಾ 'ಯಕ್ಷ ಸಂಗೀತ' ಆಗಬಾರದು, ಆಗದಿರಲಿ.

ಸಂಚಾಲಕರು, ಸಾಲಿಗ್ರಾಮ ಮಕ್ಕಳ ಮೇಳ, ಪಟೇಲರ ಮನೆ, ಕೋಟ - 576221

ಯಕ್ಷಗಾನ ಭಾಗವತಿಕೆಯಲ್ಲಿ 'ಗಾಂಧಾರಗ್ರಾಮ'

✍ ಶ್ರೀಧರ ಉಪ್ಪೂರ

ಪ್ರಾಚೀನ ಭಾರತೀಯ ಸಂಗೀತ ಪರಂಪರೆಯನ್ನು ಕುರಿತು ವಿವರಿಸುವಾಗ ಶಾಸ್ತ್ರಗ್ರಂಥಗಳಲ್ಲಿ ಷಡ್ಜಗ್ರಾಮ, ಮಧ್ಯಮಗ್ರಾಮ, ಗಾಂಧಾರಗ್ರಾಮಗಳ ಉಲ್ಲೇಖ ಮತ್ತು ಆ ಬಗ್ಗೆ ವಿವರಣೆ ಕಂಡು ಬರುತ್ತದೆ. ಡಾ. ಶಿವರಾಮ ಕಾರಂತರ 'ಯಕ್ಷಗಾನ ಬಯಲಾಟ' ಗ್ರಂಥದಲ್ಲಿ ಹರ್ಬರ್ಟ್ ಪೋಪ್ಲಿ ಎಂಬ ವಿದ್ವಾಂಸ 'ದಿ ಮ್ಯೂಸಿಕ್ ಆಫ್ ಇಂಡಿಯಾ' ಎಂಬ ತನ್ನ ಗ್ರಂಥದಲ್ಲಿ ಈ ಬಗ್ಗೆ ನೀಡಿದ ವಿವರಣೆಯ ಕುರಿತು ಚರ್ಚಿಸಿದ್ದಾರೆ (ನೋಡಿ, ಯಕ್ಷಗಾನ ಬಯಲಾಟ 1963, ಪುಟ 84). ಪ್ರೊ. ಎಂ. ರಾಜಗೋಪಾಲಾಚಾರ್ಯರು ತಮ್ಮ 'ಯಕ್ಷಗಾನ - ಸಂಗೀತ'ದಲ್ಲಿ ಕೂಡ ಈ ಬಗ್ಗೆ ಚರ್ಚಿಸಿದ್ದಾರೆ (ನೋಡಿ, ಯಕ್ಷಗಾನ - ಸಂಗೀತ ಪುಟ 31, 1995). "ಮೊದಲು ಗಾಂಧಾರಗ್ರಾಮ, ಮಧ್ಯಮಗ್ರಾಮ, ಷಡ್ಜಗ್ರಾಮವೆಂಬ ಮೂರು ವಿಧದ ಗ್ರಾಮವಿದ್ದಿತು. ಗ್ರಾಮಗಳಲ್ಲಿ ಸ್ವರಗಳು ಅವರೋಹ ಕ್ರಮದಲ್ಲಿರುತ್ತವೆ. ಈಗ ಗಾಂಧಾರಗ್ರಾಮ, ಮಧ್ಯಮಗ್ರಾಮಗಳೆರಡೂ ರೂಢಿಯಲ್ಲಿಲ್ಲ. ಮಧ್ಯಮಗ್ರಾಮ ಷಡ್ಜಗ್ರಾಮದಲ್ಲಿ ಸೇರಿಹೋಗಿ, ಈಗ ಅದೂ ಸ್ವರಗಳ ಸ್ಥಾಯೀ ರೂಪವನ್ನು ತಳೆದಿದೆ" (ಪುಟ 32, ಯಕ್ಷಗಾನ ಸಂಗೀತ). ಷಡ್ಜಗ್ರಾಮವು ಉತ್ತರಾದಿ ಸಂಗೀತಕ್ಕೂ, ಮಧ್ಯಮಗ್ರಾಮವು ದಕ್ಷಿಣಾದಿ ಸಂಗೀತಕ್ಕೂ ಅನ್ವಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ಗಾಂಧಾರಗ್ರಾಮದ ಕುರಿತು ಬಡಗುತಿಟ್ಟು ಮತ್ತು ತೆಂಕುತಿಟ್ಟು ಭಾಗವತಿಕೆಯ ಕಳೆದ ಒಂದು ಶತಮಾನದ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದಾಗಿದೆ. ಬಡಗುತಿಟ್ಟಿನಲ್ಲಿ ಮಾರ್ವಿ ಶ್ರೀನಿವಾಸ ಉಪ್ಪೂರರ ಶೈಲಿ, ತೆಂಕುತಿಟ್ಟಿನಲ್ಲಿ ಹಿರಿಯ ಬಲಿಪ ನಾರಾಯಣ ಭಾಗವತರ ಶೈಲಿ ಅತ್ಯಂತ ಪ್ರಾಚೀನವಾದುದು. ಆ ಶೈಲಿಯಲ್ಲಿ ಗಾಂಧಾರಗ್ರಾಮ ಎಂದರೆ ತಾರಷಡ್ಜಕ್ಕಿಂತ ಮೇಲಿನ ಗಾಂಧಾರ ಸ್ವರವನ್ನೇ ಆಧಾರವಾಗಿಟ್ಟುಕೊಂಡು ಹಾಡುವುದನ್ನು ಕಾಣಬಹುದು. ಶ್ರೀನಿವಾಸ ಉಪ್ಪೂರರ ಶೈಲಿ ಅವರ ಮಗ ನಾರಾಯಣ ಉಪ್ಪೂರರಲ್ಲಿ, ಹಿರಿಯ ಬಲಿಪರ ಶೈಲಿ ಅವರ ಮೊಮ್ಮಗ ಕಿರಿಯ ಬಲಿಪರಲ್ಲಿ ಮುಂದುವರಿದು ಬಂದಿದೆ.

ಇದಕ್ಕಿಂತ ಭಿನ್ನವಾದುದು ಷಡ್ಜಾಧಾರಿತವಾದ ಕರ್ಣಾಟಕ ಸಂಗೀತ ಅಥವಾ ಭಜನೆ ಪದ್ಯಗಳ ಮೂಲದಿಂದ ಬಂದ ದಾಮೋದರ ಮಂಡೆಚ್ಚರ ಶೈಲಿ ಮತ್ತು ಕಣಜಾಲು ಶೇಷಗಿರಿ ಭಾಗವತರ ಶೈಲಿ. ಮಂಡೆಚ್ಚರು ದಕ್ಷಿಣಾದಿ ಸಂಗೀತ ಅಭ್ಯಾಸ ಮಾಡಿದವರು. ಶೇಷಗಿರಿ

ಭಾಗವತರು ಉಡುಪಿ ಕೃಷ್ಣ ಮಠದ ರಥಬೀದಿಯಲ್ಲಿ ಭಜನೆ, ದಾಸರಪದಗಳನ್ನು ಹಾಡುತ್ತಾ 'ಬೀದೀ ಭಾಗವತ'ರೆಂದು ಹೆಸರು ಗಳಿಸಿದವರು (ನೋಡಿ, ಮದ್ದಳೆಯ ಮಾಯಾಲೋಕ - ಹಿರಿಯಡ್ಕ ಗೋಪಾಲ ರಾವ್, ಪುಟ 51). ಶೇಷಗಿರಿ ಭಾಗವತರ ಶೈಲಿಗೂ ಅವರಿಗಿಂತ ಹಿಂದಿನ ತಲೆಮಾರಿನ ಭಾಗವತರ ಶೈಲಿಗೂ ಇರುವ ವ್ಯತ್ಯಾಸವನ್ನು ಕುರಿತು ಭಾಗವತ ಕೋಟ ಶ್ರೀನಿವಾಸ ನಾಯಕರು ಸುದೀರ್ಘವಾದ ವಿವರಣೆ ನೀಡಿದ್ದಾರೆ (ನೋಡಿ, ಯಕ್ಷಗಾನ ಭಾಗವತನೊಬ್ಬನ ಅನುಭವಗಳು, ಪುಟ 63).

ದಕ್ಷಿಣಾದಿ ಸಂಗೀತ ತಾರಸ್ಥಾಯಿಯ ಷಡ್ಜವನ್ನು ಆಧಾರವಾಗಿಟ್ಟುಕೊಂಡು ಹಾಡುವ ಕ್ರಮವಾಗಿದೆ. ಇದನ್ನೇ ಮುಂದೆ ಕಡತೋಕ ಮಂಜುನಾಥ ಭಾಗವತರು, ಕಾಳಿಂಗ ನಾವಡರು ಅನುಸರಿಸಿದ್ದಾರೆ. ಅದು ಮಧ್ಯಮಗ್ರಾಮವು ಷಡ್ಜಗ್ರಾಮದಲ್ಲಿ ಸೇರಿಹೋದ ದಕ್ಷಿಣಾದಿ ಸಂಗೀತ ಶೈಲಿಯ ವಿಧಾನವಾಗಿದೆ.

ಉತ್ತರಾದಿ ಸಂಗೀತದ ಶೈಲಿ ಇದಕ್ಕಿಂತ ಬಿನ್ನವಾಗಿ ಮಂದ್ರಸ್ಥಾಯಿಯ ಷಡ್ಜವನ್ನು ಆಧಾರವಾಗಿಟ್ಟುಕೊಂಡು ಹಾಡುವ ವಿಧಾನವಾಗಿದೆ. ಇದು ತೀರಾ ಪ್ರಾಚೀನವಾದ ಷಡ್ಜಗ್ರಾಮದ ಹಾಡುಗಾರಿಕೆ. ಅಂದರೆ ಉತ್ತರಾದಿ ಸಂಗೀತವು ಮಂದ್ರಸ್ಥಾಯಿಯ ಪಂಚಮದಿಂದ ಮಧ್ಯಸ್ಥಾಯಿಯ ಪಂಚಮದವರೆಗೆ ಹೆಚ್ಚು ಶಕ್ತಿಯುತವಾಗಿ ಮೊಳಗುತ್ತಾ, ತಾರಸ್ಥಾಯಿಗೆ ಹೋದಂತೆ ಹಾಡುಗಾರನ ಸ್ವರ ಇಂಪಾಗಿ ಕೇಳಿಸುತ್ತದೆ. ಅದೇ ಸಂದರ್ಭದಲ್ಲಿ ದಕ್ಷಿಣಾದಿ ಸಂಗೀತವು ಮಧ್ಯಸ್ಥಾಯಿಯ ಪಂಚಮದಿಂದ ತಾರಸ್ಥಾಯಿಯ ಪಂಚಮದವರೆಗೆ ಶಕ್ತಿಯುತವಾಗಿ ಬಹುದೂರದವರೆಗೆ ಕೇಳಿಸುತ್ತದೆ. ಹೀಗೆ ಮಂದ್ರಸ್ಥಾಯಿಯ ಪಂಚಮದಿಂದ ಮಧ್ಯಸ್ಥಾಯಿಯ ಪಂಚಮದಿಂದ ಮಧ್ಯಸ್ಥಾಯಿಯ ಪಂಚಮದವರೆಗೆ ಪ್ರಮುಖವಾಗಿಟ್ಟುಕೊಂಡು ಹಿಂದೂಸ್ತಾನೀ ಸಂಗೀತವೂ, ಮಧ್ಯಸ್ಥಾಯಿಯ ಪಂಚಮದಿಂದ ತಾರಸ್ಥಾಯಿಯ ಪಂಚಮದವರೆಗೆ ಪ್ರಮುಖವಾಗಿಟ್ಟುಕೊಂಡು ದಕ್ಷಿಣಾದಿ ಸಂಗೀತವೂ ಬೆಳೆಯಿತು.

ಮೊದಲು ಕೇವಲ ನಾಲ್ಕು ಸ್ವರಗಳಿದ್ದವು. ಅನಂತರ ಸಪ್ತಸ್ವರಗಳಾದವು. ಇದು ಭಾರತೀಯ ಸಂಗೀತದ ಇತಿಹಾಸ (ನೋಡಿ, ಕರ್ಣಾಟಕ ಸಂಗೀತ ಸುಧಾ - ಸಂಗೀತ ವಿದ್ವಾನ್ ವಿ. ರಾಮರತ್ನಂ ಮತ್ತು ವಿ. ಎಸ್. ಸಂಪತ್ಕುಮಾರಾಚಾರ್ಯ, ಮೈಸೂರು ವಿ.ವಿ. ಪ್ರಕಟಣೆ 1967, ಪುಟ 10). ಆದ್ದರಿಂದಲೇ ಕಡಿಮೆ ಸ್ವರಗಳುಳ್ಳ ಭೂಪಾಳಿ, ಸಾವೇರಿ, ಮೋಹನ ರಾಗಗಳು ಪ್ರಾಚೀನ ಸಂಗೀತದಲ್ಲಿ ಜನಪ್ರಿಯ.

ಮಂದ್ರವಿರಲಿ, ತಾರವಿರಲಿ ಷಡ್ಜವನ್ನೇ ಆಧಾರವಾಗಿಟ್ಟುಕೊಂಡು ಹಾಡುವ ವಿಧಾನ ಕ್ರಮೇಣ ಜನಪ್ರಿಯವಾದುದರಿಂದ ಗಾಂಧಾರಗ್ರಾಮದ ಹಾಡುಗಾರಿಕೆ ಕಣ್ಮರೆಯಾಯಿತು. ಯಕ್ಷಗಾನ ಭಾಗವತಿಕೆಯಲ್ಲಿ ಗಾಂಧಾರಗ್ರಾಮದ ಹಾಡುಗಾರಿಕೆ ಇದ್ದೂ ಕೂಡಾ ಕ್ರಮೇಣ

ಕಣ್ಮರೆಯಾಗಿ ಷಡ್ಜಗ್ರಾಮವೇ ಸ್ಥಾಪಿತವಾಗಿಬಿಟ್ಟಿದೆ. ಗಂಟಲ ಎಟುಕಿಗೆ ಸುಲಭವಲ್ಲದ ಈ ಗಾನಶೈಲಿಯು (ಗಾಂಧಾರಗ್ರಾಮ) ಕಷ್ಟವಲ್ಲದ ಕಾರಣದಿಂದಲೇ, ಇಂದು ಕಣ್ಮರೆಯಾಗಿರಬೇಕೆನ್ನುತ್ತಾರೆ. 'ಅದು ಇಂದ್ರಲೋಕಕ್ಕೆ ಹೋಯಿತು' ಎಂಬ ನಾಣ್ಣುಡಿ ದಕ್ಷಿಣ ದೇಶದಲ್ಲಿದೆ! (ಯಕ್ಷಗಾನ ಬಯಲಾಟ, ಪುಟ 87). ಆ ಶ್ರುತಿಯಲ್ಲಿ ಹಾಡುವುದು ತೀರ ಕಷ್ಟವೆಂಬುದರಿಂದ 'ಅದನ್ನು ಹಾಡಬಲ್ಲ ಕೊರಳು ದೇವತೆಗಳಿಗೇನೇ ಸರಿ'ಯೆಂದರು. ಯಕ್ಷಗಾನವನ್ನು ಕೂಡ ಹಾಡಬೇಕಾದುದು ಗಾಂಧಾರಕ್ಕೆ ಹೊಂದಿಸಿ ಎಂಬ ಮಾತು ಇದೆ. ಅದಕ್ಕೆ ತಕ್ಕ ಕೊರಳು ಇಲ್ಲದವರು ಅಂಥ ಪ್ರಯತ್ನಕ್ಕೆ ಹೋಗಿ ಅಪಸ್ವರಗಳ ಕಂತೆಯನ್ನು ಹೊರಡಿಸಬಹುದಾದುದೂ ನಿಜ (ಯಕ್ಷಗಾನ ಬಯಲಾಟ ಪುಟ 88).

ಪ್ರಾಧ್ಯಾಪಕ, ಶ್ರೀ ಶಾರದಾ ಕಾಲೇಜು, ಬಸ್ರೂರು - 576211

ಶ್ರುತಿಯೇ, ನೀನೆನ್ನ ಬದುಕಾಗು

✍ ಉಡುಪಿ ವಾಸುದೇವ ಭಟ್

'ಸರಿಗಮಪದನಿ' ಬಾಲ್ಯದಿಂದ ಇಂದಿನವರೆಗೂ ಪ್ರೀತಿಯಿಂದ ಆಲಿಂಗಿಸಿ ಆರಾಧಿಸಿಕೊಂಡು ಬಂದ ಈ ಏಳು ಸ್ವರಗಳು ಬದುಕಿನುದ್ದಕ್ಕೂ ಅಪಾರ ಅನುಭವ, ಜ್ಞಾನ-ಪ್ರೀತಿ-ನೀತಿ, ಕೀರ್ತಿ ತಂದುಕೊಟ್ಟ ಮಹಾನ್ ಮಂತ್ರ, ಉಪಾಸನಾ ಮಂತ್ರ, ಅರ್ಥಾತ್ ನಾದೋಪಾಸನಾ ಮಂತ್ರ.

ಪತ್ರಕರ್ತರಾಗಿದ್ದ ತಂದೆ (ಬಿ. ಯು. ಎಸ್. ಭಟ್), ನನ್ನ ಬದುಕು ಬರವಣಿಗೆ ದಾರಿಯಲ್ಲೇ ಸಾಗಿದರೆ ಚೆನ್ನ ಎಂಬ ಅಭಿಪ್ರಾಯ ಹೊತ್ತಿದ್ದರು. ತಾಯಿ (ಕಮಲಮ್ಮ) ಮಗನು ಸರಿಗಮಪದನಿಯನ್ನೇ ಅನುಸರಿಸಿದರೆ ಚೆನ್ನ ಎಂಬಾಸೆ ಹೊತ್ತಿದ್ದರು. ಇವರಿಬ್ಬರ ಆಸೆಯನ್ನೂ ನೆರವೇರಿಸಿದ ತೃಪ್ತಿ ನನಗಿದೆ. ಸಂಗೀತ ಶಾಸ್ತ್ರದಲ್ಲಿ ಪದವಿ ಪಡೆದು, ಸಾಮಾಜಿಕ ಜೀವನವನ್ನು ಪ್ರವೇಶ ಮಾಡಿದ್ದು, ಪತ್ರಕರ್ತ ಹಾಗೂ ಶಿಕ್ಷಕನಾಗಿ.

ಗುರುಗಳಾದ ಪಿಟೀಲು ಮಂಜುನಾಥಯ್ಯನವರಲ್ಲಿ ಗುರುಕುಲ ಪದ್ಧತಿಯ ಸಂಗೀತ ಶಾಸ್ತ್ರಾಭ್ಯಾಸ ನಡೆಸಿದ ನನಗೆ, ತಂದೆ-ತಾಯಿಗಿಂತಲೂ ಹೆಚ್ಚಾಗಿ ಅವರದೇ ಮಾರ್ಗದರ್ಶನ.

ಒಬ್ಬ ಗಾಯಕ-ಸಾಧಕ ಯಾವ ತೆರನಾಗಿರಬೇಕು, ಸಮಾಜದ ಜನರೊಂದಿಗೆ ಹೇಗೆ ಬೆಸೆದುಕೊಳ್ಳಬೇಕೆಂಬ ಬಗೆಗೆ ಸದಾ ಎಚ್ಚರಿಸುತ್ತಿದ್ದರು. ಸಂಗೀತ ರಸಾಸ್ವಾದನೆಯ ಪರಿ, ಅದರ ಗುರಿಯನ್ನು ಮನನ ಮಾಡಿಸಿದವರು.

'ಹೇಳುವ ಸಂಗೀತ, ಮಾಡುವ ಗಾನ ನಾದ ಶುದ್ಧತೆಯಿಂದ ಇದ್ದಾಗಲೇ ಅದು ಎಲ್ಲರ ಹೃದಯ ತಟ್ಟುವ ಸಂಗೀತ, ಶಬ್ದಬ್ರಹ್ಮ, ನಾದಬ್ರಹ್ಮನೊಂದಿಗೆ ಹಾಲು -ಜೇನಿನೋಪಾದಿಯಲ್ಲಿ ಬೆರೆತಾಗ ಪರಬ್ರಹ್ಮಸ್ವರೂಪವಾದ ಸಂಗೀತ ಸವಿ' ಎನ್ನುತ್ತಿದ್ದ ಅವರ ನುಡಿಯ ಪ್ರಭಾವವೇ 'ನಾದವೈಭವಂ' ಹುಟ್ಟಿಗೆ ಕಾರಣವಾಯಿತು.

ಭಾಷೆ ಯಾವುದೇ ಇರಲಿ, ಭಾವಪೂರ್ಣ ಹಾಡುವಿಕೆ ಪ್ರಾಮುಖ್ಯ. ಭಾಷೆಯನ್ನು ಮೀರಿ ಭಾವ ಮುದ ನೀಡಬಲ್ಲುದು, ಶಾಸ್ತ್ರೀಯ ಸಂಗೀತ ಚೌಕಟ್ಟಿನಲ್ಲೇ ವಿವಿಧ ಭಾಷೆಗಳ ರಚನೆಗಳನ್ನು 'ನಾದವೈಭವಂ' ಪ್ರಚುರಪಡಿಸುತ್ತ ಬಂದಿದೆ. 'ನಾದವೈಭವಂ' ಮೂಲಕ ನಡೆಸಿದ ಸಾಧನೆಯ ಹಿಂದೆ, ಪ್ರಶಂಸೆಯ ಹಿಂದೆ ವೇದನೆಯೂ ಬಹಳಷ್ಟಿದೆ.

ಕಲೆ, ಸಾಹಿತ್ಯ, ಗುರುಪೀಠಗಳು ಸಮಗ್ರ ಸಮಾಜದ ಸೊತ್ತಾಗಿ ಎಲ್ಲರಿಂದ ಗೌರವ

ಸ್ವೀಕರಿಸಿ ಮಾರ್ಗದರ್ಶಕ ಸ್ಥಾನದಲ್ಲಿ ಇದ್ದಿರಬೇಕಾಗಿದ್ದರೂ ಇಂದು ಅವು ತಮ್ಮ ದಿಕ್ಕನ್ನೇ ಬದಲಾಯಿಸಿ ಸ್ವಾರ್ಥ, ಅಗ್ಗದ ಪ್ರಶಂಸೆ, ದಿಢೀರ್ ಶ್ರೀಮಂತಿಕೆಯನ್ನು ಬಯಸುತ್ತಿವೆ.

ಹಿಂದೆ ಈ ದೇಶದಲ್ಲಿ ಕಲೆ, ಸಾಹಿತ್ಯಗಳು ಧೀಮಂತ ರಾಜಾಶ್ರಯದಲ್ಲಿನ ರಕ್ಷಣೆ-ಪೋಷಣೆಯಿಂದ ಬೆಳಗುತ್ತಿದ್ದವು. ಮುಂದೆ ಪ್ರಜಾಪ್ರಭುತ್ವ ಪ್ರಭುಗಳ ಕೃಪಾಶ್ರಯಕ್ಕೆ ಬೀಳುವಂತಾಯಿತು. ಪ್ರಜೆಗಳೇ ಪ್ರಭುಗಳು ತಾನೆ? ಜೊತೆಗೆ ಮಠ-ಮಂದಿರಗಳ ಸಂಘ ಸಂಸ್ಥೆಗಳವರ ಕೃಪಾಶ್ರಯ ಅನಿವಾರ್ಯವೆನಿಸಿ, ಇದೀಗ ಇಲ್ಲೂ ಸಮಗ್ರ ಸಮಾಜದ ಸೊತ್ತಾದ ಕಲೆ, ಸಾಹಿತ್ಯ, ಕಲಾವಿದ, ಬರಹಗಾರ ತನ್ನ ಬೆಳವಣಿಗೆಗೆ ವಿಕೃತ ಮಾರ್ಗಕ್ಕೆ ಶರಣಾಗಬೇಕಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ರಾಜಕೀಯ ಪಕ್ಷಗಳು ಕೇವಲ ತತ್ತ್ವನಿಷ್ಠವಾಗಿದ್ದುವು. ಈಗ ಹಾಗಿಲ್ಲ. ಪಕ್ಷಗಳ ಸಿದ್ಧಾಂತಕ್ಕೆ ಬೆಲೆಯೇ ಇಲ್ಲದೆ, ಸಮಯಕ್ಕೆ ಬೇಕಾದಂತೆ ಜಾತಿ ನಿಷ್ಠೆ, ಮತ ನಿಷ್ಠೆ, ವೈಯಕ್ತಿಕ ನಿಷ್ಠೆಗಳು ಸೇರಿಕೊಂಡು ಹೊಲಸಾಗಿರುವಂತೆ, ಕಲೆಯ ಪೋಷಣೆ, ಪ್ರೋತ್ಸಾಹದಲ್ಲೂ ಈ ರಾಜಕೀಯ ಹೊಲಸು ನಿಷ್ಠೆಯೇ ಸೇರಿಕೊಂಡಿದೆ. ಕಲಾವಿದ, ಬರಹಗಾರರನ್ನು ಜಾತಿಯ ನೆಲೆಯಲ್ಲೇ ಆಧರಿಸಿ ಪುರಸ್ಕರಿಸುವುದು ಒಂದೆಡೆಯಾದರೆ, ಇನ್ನೊಂದೆಡೆ ಕಾಳು-ಜೊಳ್ಳು ಭೇದವರಿಯದೆ ಕೇವಲ ಪ್ರಭಾವಕ್ಕೊಳಗಾಗಿ ಆದರಿಸುವುದು ನಿತ್ಯಸಂಗತಿಯಾಗಿದೆ. ಇದಕ್ಕೆ ಸಾಮಾಜಿಕ ಸಂಘಸಂಸ್ಥೆಗಳೂ ಹೊರತಾಗಿಲ್ಲ. ಎಲ್ಲಿಯವರೆಗೆ ಕಲೆ, ಸಾಹಿತ್ಯ ಇಂಥ ಹಿಡುಗುಗಳಿಂದ ಮುಕ್ತಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ಕಲೆ ಕಲೆಯಾಗಿ ಉಳಿಯಲಾರದು.

ಕೇವಲ ಇಪ್ಪತ್ತನಾಲ್ಕು ತಾಸಿನೊಳಗಾಗಿ ದಿಢೀರ್ ಆಗಿ ನಟಶ್ರೇಷ್ಠನೆನಿಸುವುದು, ಯಾವ ಸಾಧನೆಯೂ ಇಲ್ಲದವ ಮಹಾನ್ ಸಾಧಕನಾಗಿ ಪ್ರಶಂಸಿಸಲ್ಪಡುವುದು, ಸಿದ್ಧಿಯಿಲ್ಲದೇ ಪ್ರಸಿದ್ಧನಾಗುವುದು ಇಂದು ಕಾಣುತ್ತಿರುವ ಕೌತುಕ. ಸ್ವಜನ-ಸ್ವಭಾಷೆಯ ಬಗ್ಗೆ ಅಭಿಮಾನಶೂನ್ಯತೆ, ಪರಭಾಷೆ-ಪರಭಾಷಾ ಕಲಾವಿದರ ಅಸಂಗತ ಓಲೈಸುವಿಕೆ - ಇದು ನಮ್ಮ ಜನರ ಉದಾರ ಕೊಡುಗೆ.

ಕಲೆ, ಕಲಾವಿದರನ್ನು ಆಧರಿಸಿ, ಗೌರವಿಸುವಲ್ಲೂ ಸ್ವಾರ್ಥಭಾವ! ಟೊಳ್ಳು ಹೆಗ್ಗಳಿಕೆಗಾಗಿ ಒದ್ದಾಟ! ಇಂಥ ನೂರಾರು ಪ್ರಸಂಗಗಳಲ್ಲಿ 'ಸರಿಗಮಪದನಿ' ಶ್ರುತಿ ತಪ್ಪದೆ ನಾದ ಪ್ರಸರಿಸಲು ಸಾಧ್ಯವೇ?

'ಕಲೆ' ಎಲ್ಲರನ್ನೂ ಕೈಬೀಸಿ ಕರೆದರೂ ಸಾಧನೆ ನಡೆಸದೆ ಯಾರೂ ನಿಜವಾದ ಕಲಾಕಾರನಾಗಲಾರ. ಸಾಧನೆ ಶೂನ್ಯವಾದರೂ ಕಲಾವಿದನಾಗಿ ಮೆರೆಯುವ ಕನಸುಗಾರರಿಗೆ ಇದೀಗ ಬದಲಾದ ದಿಕ್ಕಿನಲ್ಲಿ ಅವಕಾಶಗಳೂ ನಿರಾಳ.

'ಅನ್ನರಸ ಬಿದ್ದರೇನೇ ಗಾನರಸ ಹೊರಡುವುದು' ಎಂಬ ಕವಿವಾಣಿಯಂತೆ - ಯಾವನೇ

ಕಲಾವಿದ ತನ್ನ ಅನುದಿನದ ಅನ್ನರಸಕ್ಕೆ ಪರದಾಟ ಇಲ್ಲವಾದಲ್ಲಿ ಮಾತ್ರ ತನ್ನತನದಿಂದ ಮೆರೆದು 'ಕಲೆ ಕಲೆಗಾಗಿ, ಜೀವನಕ್ಕಾಗಿ ಅಲ್ಲ' ಎಂಬುದಾಗಿ ತೋರಬಲ್ಲ.

ಇನ್ನೂ ಒಂದು ಅಪಾಯಕಾರಿ ವ್ಯವಸ್ಥೆಯಿದೆ. ಇಲ್ಲಿ ಕಲಾವಿದ ತನ್ನ ರಕ್ಷಣೆಗಾಗಿ ಕಲೆಯನ್ನೇ ಮಾರಿಬಿಡುತ್ತಾನೆ! ಇಂಥಲ್ಲಿ ಕಲಾವಿದ ಮಾತ್ರ ವಿಜೃಂಭಿಸುತ್ತಾನೆ. ಇದು ಒಂದು ಮಾಯಾವಿದ್ಯೆಯ ಜಾಲವಾಗಿ ಸಹೃದಯರನ್ನು ವಂಚಿಸಿ ಬಿಡುತ್ತದೆ. ಶುದ್ಧಕಲೆಯ ಬೆಳವಣಿಗೆಗೆ ಇದು ಎಷ್ಟು ಅಪಾಯಕಾರಿ ಎನ್ನುವುದನ್ನು ನಾವು ತಿಳಿದುಕೊಂಡೂ ದಿವ್ಯ ನಿರ್ಲಕ್ಷ್ಯಮತಿಗಳಾಗಿದ್ದೇವೆ. ಇದು ವಿಸ್ಮಯವಷ್ಟೇ ಅಲ್ಲ, ವಿಷಾದನೀಯವೂ ಹೌದು. ಬೆಂಕಿ ಹತ್ತಿಕೊಳ್ಳದಂತೆ ನೋಡಿಕೊಳ್ಳುವುದು ಜಾಣತನ. ಹತ್ತಿಕೊಂಡ ಮೇಲೆ ಎಚ್ಚೆತ್ತು ಬೊಬ್ಬೆ ಹಾಕುವುದು ಮೂರ್ಖತನ.

ಕಲಾವಿದನೆಂದಾಗ ಪ್ರಶಸ್ತಿ, ಸಮ್ಮಾನ ದೊರೆತರೇ ಆತ 'ಕಲಾವಿದ' ಎಂಬ ಭ್ರಮೆ ಇದೀಗ ಹೆಚ್ಚಿನವರಲ್ಲಿದೆ. ಈ ಒಂದು ಪ್ರಶಸ್ತಿಗಾಗಿ ಕಲಾವಿದ ಎನ್ನುವ ವ್ಯಕ್ತಿ ವರ್ಷದ 364 ದಿನಗಳಲ್ಲೂ ಸಣ್ಣ ಅಧಿಕಾರಿಯಿಂದ ತೊಡಗಿ ದೊಡ್ಡ ಅಧಿಕಾರಿಯವರೆಗೆ ಪ್ರಭಾವ ಬೀರಿಸಿ, ಆ ಪ್ರಭಾವ ಸಾಲದೆಂದಾದರೆ ಮಠಾಧಿಪತಿಗಳು, ಮಂತ್ರಿ ಮಾಗಧರ ಕೃಪಾಶ್ರಯ ಬೇಡಿ, ಕೊನೆಗೂ 365ನೇ ದಿನ ಅದೃಷ್ಟವಶಾತ್ ಅವರ ಮನ ಕರಗಿ, ಇವನಿಗೆ ಪ್ರಶಸ್ತಿ ನಿರ್ಧಾರವಾದಾಗ ಮಹಾನ್ ಸಾಧಕನಂತೆ ಸಂತೋಷಿಸುವ (ಸರಕಾರದಿಂದ ಪ್ರಶಸ್ತಿಯನ್ನು ಕಿತ್ತುಕೊಂಡು ಮೆರೆಯುವ) ಹಾಸ್ಯಾಸ್ಪದ ಕಲಾವಿದರೂ ಈಗ ಇದ್ದಾರೆ ಎನ್ನುವುದು ನಮ್ಮ ದುರ್ದೈವ.

ಅರ್ಹತೆಯ ನ್ಯಾಯದಂಡವನ್ನು ನಾವು ಎತ್ತಿ ಹಿಡಿಯುತ್ತಿಲ್ಲ ಎಂದ ಮೇಲೆ, ಕಲೆಯ ಉದ್ಧಾರವೂ ಇಲ್ಲ! 'ಸರಿಗಮಪದನಿ' ಎನ್ನುವುದು ಶ್ರುತಿ ಶುದ್ಧತೆಯಿಂದ ನುಡಿಸಿದಾಗ, ಹಾಡಿದಾಗಲೇ. ಸಂಗೀತ ನಿತ್ಯಜೀವನದ ದಿನಚರಿಯಲ್ಲೂ, ದಿನಚರಿ ಶಿಸ್ತುಬದ್ಧವಾಗಿದ್ದರಷ್ಟೇ ಬದುಕು ಭವ್ಯವಾಗುವಂತಹ 'ಸರಿಗಮಪದನಿ' ಆದೀತು.

ಅಗ್ಗದ ಖ್ಯಾತಿಗಾಗಿ, ದಿಢೀರ್ ಹಣ ಗಳಿಕೆಗಾಗಿ ಅಲ್ಲದ ಸಲ್ಲದ ಜಾಗಗಳಲ್ಲಿ, ಕಲೆಯ ಹಿರಿತನ ತೋರುವ ಬದಲಾಗಿ ಕಲೆಯನ್ನೆ ಕಿರಿತನಕ್ಕೀಡು ಮಾಡಿ ಪ್ರಾಯೋಜಕರಿಂದ ಪ್ರಶಂಸೆ ಗಿಟ್ಟಿಸಿ ನಡೆಸುವುದೂ ಗುಟ್ಟಾಗಿ ಉಳಿದಿಲ್ಲ. ಎಲ್ಲವೂ ಸುಲಲಿತವಾಗಿ, ಆದರ್ಶವಾಗಿ, ಗೌರವಯುತವಾಗಿ ಇದ್ದಾಗಲೇ 'ಸರಿಗಮಪದನಿ'.

ಇದಕ್ಕೆ ವ್ಯತಿರಿಕ್ತವಾಗಿ ನಡೆಯುತ್ತಿರುವುದೂ ಒಂದು ಸ-ರಿ-ಗ-ಮ-ಪ-ದ-ನಿ!

ಪರಿಶಿಷ್ಟ

ಪ್ರತಿಭಾವಂತ ಸಂಗೀತ ಶಿಕ್ಷಕ ವಾಸುದೇವ ಭಟ್

ಕೃಷ್ಣಮೂರ್ತಿ ನಿಟಿಲಾಪುರ

ಮೈಸೂರಿನ ಆಸ್ಥಾನ ವಿದ್ವಾಂಸರಾಗಿ ಖ್ಯಾತನಾಮ ಕರ್ನಾಟಕ ಸಂಗೀತಗಾರರಾಗಿದ್ದು ಬಿಡಾರಂ ಕೃಷ್ಣಪ್ಪ ಅವರ ಪರಂಪರೆಯನ್ನು ಮುಂದುವರಿಸುತ್ತಿರುವವರಲ್ಲಿ ಶ್ರೀ ಉಡುಪಿ ವಾಸುದೇವ ಭಟ್ ಅವರು ಒಬ್ಬರು. ಬಿಡಾರಂ ಕೃಷ್ಣಪ್ಪನವರ ಶಿಷ್ಯನಾಗಿ ಉಡುಪಿಯಲ್ಲಿ ಐದು ದಶಕಗಳ ಕಾಲ ಸಂಗೀತ ಶಿಕ್ಷಣ ನೀಡಿ ಹಲವಾರು ಶಿಷ್ಯರನ್ನು ತರಬೇತಿ ಮಾಡಿದ ಶ್ರೀ ಪಿಟೀಲು ಮಂಜುನಾಥಯ್ಯ ಅವರು ಶ್ರೀ ಭಟ್ಟರ ಗುರು. ಸಂಬಂಧದಲ್ಲಿ ಅಜ್ಜನಾದ ಶ್ರೀ ಮಂಜುನಾಥಯ್ಯನವರ ಬಳಿ ತನ್ನ 9ನೇ ವಯಸ್ಸಿನಿಂದಲೇ ಶಿಷ್ಯತ್ವ ವಹಿಸಿ 14ನೇ ವಯಸ್ಸಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಯಾಗಿರುವಾಗಲೇ ಗುರುಗಳ ಸಮ್ಮುಖದಲ್ಲಿ ಉಡುಪಿಯ ಶ್ರೀ ಅನಂತೇಶ್ವರ ದೇವಾಲಯದಲ್ಲಿ ನಡೆದ ಸಂಗೀತೋತ್ಸವದಲ್ಲಿ ಮೊದಲ ಕಚೇರಿ ನೀಡಿದರು.

ತಂದೆ ದಿ। ಯು. ಎಸ್. ಭಟ್ ಅವರು ಉಡುಪಿಯ ಖ್ಯಾತ ಪತ್ರಕರ್ತರಾಗಿದ್ದರು. ಹಿಂದೆ ‘ಮದರಾಸ್ ಮೈಲ್’, ‘ನವಭಾರತ’, ‘ಸಂಯುಕ್ತ ಕರ್ನಾಟಕ’ ಮುಂತಾದ ಪತ್ರಿಕೆಗಳ ಪ್ರತಿನಿಧಿಯಾಗಿದ್ದರು. ಅವರ ಈ ಕಸುಬನ್ನು ಹವ್ಯಾಸವಾಗಿರಿಸಿಕೊಂಡ ಶ್ರೀ ವಾಸುದೇವ ಭಟ್ಟರು ಸಂಗೀತ ವಿದ್ವಾನ್ ಪದವಿಯನ್ನು ಗಳಿಸಿ ತನ್ನ 18ರ ಹರೆಯದಲ್ಲೇ ಪ್ರೌಢಶಾಲಾ ಸಂಗೀತ ಶಿಕ್ಷಕರಾದರು. ಸದ್ಯ ಮೂಲ್ಕಿಯ ಮೆಡಲಿನ್ ಬಾಲಿಕಾ ಪ್ರೌಢಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿರುವ ಇವರು ಈ ರಂಗದಲ್ಲಿ ಈಗಾಗಲೇ 22 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಸಂಗೀತವನ್ನು ಅನೇಕರು ಕಲಿಸಬಹುದು; ಆದರೆ, ವಿದ್ಯಾರ್ಥಿಗಳ ಮನೋಭಾವ, ಸಾಮರ್ಥ್ಯಗಳನ್ನು ಅರಿತು ಶಿಕ್ಷಣ ನೀಡುವುದರಲ್ಲಿ ಶ್ರೀ ಭಟ್ಟರು ಎತ್ತಿದ ಕೈ. ಇವರ ಈ ನೈಪುಣ್ಯವನ್ನು ಗುರುತಿಸಿದ ಮಂಗಳೂರಿನ ಕರ್ನಾಟಕ ಥಿಯಾಲಜಿ ಕಾಲೇಜು, ಉಡುಪಿಯ ಶ್ರೀ ಸತ್ಯಸಾಯಿ ಸೇವಾಸಮಿತಿ ಮುಂತಾದ ಅನೇಕ ಸಂಸ್ಥೆಗಳು ಇವರನ್ನು ಗೌರವ ಸಂಗೀತ ನಿರ್ದೇಶಕರನ್ನಾಗಿ ಪರಿಗಣಿಸಿ ಪುರಸ್ಕರಿಸಿವೆ.

ಪುರಂದರದಾಸರು, ಕನಕದಾಸರೇ ಮೊದಲಾದ ಅನೇಕ ದಾಸವರೇಣ್ಯರ ಅಪೂರ್ವ ಕೃತಿಗಳಿಗೆ ಸ್ವತಃ ರಾಗಸಂಯೋಜನೆ ಮಾಡಿ ತನ್ನ ಕಚೇರಿಗಳಲ್ಲಿ ಹಾಡುವ ಶ್ರೀ ಭಟ್ಟರು ದ.ಕ. ಜಿಲ್ಲೆ ಹಾಗೂ ಹೊರ ಜಿಲ್ಲೆಗಳಲ್ಲಿ ಅನೇಕ ಕಾರ್ಯಕ್ರಮ ನೀಡಿದ್ದಾರಲ್ಲದೆ, ಹಾಸನ, ಮೈಸೂರು, ಮುಂಬಯಿ ಮೊದಲಾದ ದೂರದ ಊರುಗಳಲ್ಲೂ ಕಚೇರಿ ನಡೆಸಿದ್ದಾರೆ. ಸುಮಾರು 10 ವರ್ಷ ಕಾಲ ಇವರು ರಾಜ್ಯ ಸರಕಾರದ ಸಂಗೀತ ಪರೀಕ್ಷಾ ಮಂಡಲಿಯ ಸದಸ್ಯ ಹಾಗೂ ಪರೀಕ್ಷಕರಾಗಿದ್ದರು.

ವಿದ್ಯಾರ್ಥಿ ದೆಸೆಯಲ್ಲೆ 'ಆಧುನಿಕ ನಾಟ್ಯ ಸಂಘ'ವನ್ನು ಕಟ್ಟಿ ಪ್ರಸಿದ್ಧ ನಾಟಕಗಳನ್ನು ಅಭಿನಯಿಸುತ್ತಿದ್ದ ಶ್ರೀ ಭಟ್ಟರು 1968ರಲ್ಲಿ 'ವಾಸನ್ ಫೆಟಮೆನ್ಸ್ ಟ್ರೂಪ್' ಎಂಬ ನಾಟಕ ಸಂಸ್ಥೆಯನ್ನು ಪ್ರಾರಂಭಿಸಿ ಎರಡು ವರ್ಷ ಕಾಲ ನಡೆಸಿದರು. ಆಧುನಿಕ ರಂಗಸಜ್ಜಿಕೆ ಹಾಗೂ ದೃಶ್ಯ ಸಂಯೋಜನೆಗಳನ್ನೊಳಗೊಂಡ ಈ ಸಂಸ್ಥೆಯ ನಾಟಕಗಳು ಉಳಿದೆಲ್ಲ ದೃಷ್ಟಿಯಿಂದ ಯಶಸ್ವಿಯಾದರೂ ಭಾರೀ ಆರ್ಥಿಕ ಮುಗ್ಗಟ್ಟಿನಿಂದಾಗಿ ಸಂಸ್ಥೆಯನ್ನೇ ಕೊನೆಗೆ ಅವರು ಕೈಬಿಡಬೇಕಾಯಿತು.

ಉತ್ತಮ ಬರಹಗಾರರೂ ಆಗಿರುವ ಶ್ರೀ ವಾಸುದೇವ ಭಟ್ಟರ ಅನೇಕ ಲೇಖನಗಳು 'ಸ್ವಾತಿಭೂಷಣ' ಎಂಬ ಕಾವ್ಯನಾಮದೊಡನೆ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕೆಲಕಾಲ ಭರತನಾಟ್ಯವನ್ನು ಅಭ್ಯಾಸ ಮಾಡಿದ ಅವರು ವಯೊಲಿನ್ ಹಾಗೂ ಹಾರ್ಮೋನಿಯಂ ವಾದನದಲ್ಲಿ ಕೂಡ ಪರಿಣತಿಯನ್ನು ಪಡೆದಿದ್ದಾರೆ.

ಶ್ರೀ ಭಟ್ಟರ ಬಹುಮುಖ ಪ್ರತಿಭೆಯನ್ನು ಗಮನಿಸಿದ ಕರ್ನಾಟಕ ರಾಜ್ಯ ಸಂಡೇ ಸ್ಕೂಲ್ ಸಂಸ್ಥೆಯ ಮುಖ್ಯಸ್ಥರಾದ ಮಂಗಳೂರಿನ ರೆ|| ಜೆ. ಎಲ್. ಸದಾನಂದ ಅವರು ಕಳೆದ ಹತ್ತು ವರ್ಷಗಳಿಂದ ಅವರನ್ನು ಪ್ರೋತ್ಸಾಹಿಸುತ್ತಿದ್ದಾರೆ. ಇದರ ಫಲವಾಗಿ ಬೈಬಲ್ ಆಧರಿಸಿದ ನೂರಾರು ಕನ್ನಡ ಕೀರ್ತನೆಗಳಿಗೆ ಭಟ್ಟರು ದಾಸರ ಕೀರ್ತನೆಗಳ ಮಾದರಿಯಲ್ಲಿ ರಾಗಗಳನ್ನು ಸಂಯೋಜಿಸಿದ್ದಾರಲ್ಲದೆ ಇವೇ ಕೀರ್ತನೆಗಳನ್ನೊಳಗೊಂಡ ಸಂಗೀತ ಕಚೇರಿಗಳನ್ನು ನೀಡಿದ್ದಾರೆ. ಕರ್ನಾಟಕ ರಾಜ್ಯ ಸಂಡೇ ಸ್ಕೂಲ್ ಸಂಸ್ಥೆಯ ಶಿಬಿರಗಳಲ್ಲಿ ರಾಜ್ಯದ ನಾನಾ ಭಾಗದಿಂದ ಬಂದ ವಿದ್ಯಾರ್ಥಿ - ಶಿಕ್ಷಕರಿಗೆ ಶ್ರೀಯುತರು ಈ ಕೀರ್ತನೆಗಳನ್ನು ಕರ್ನಾಟಕ ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ ಕಲಿಸಿದ್ದಾರೆ. ಶ್ರೀ ಭಟ್ ರಾಗ ಸಂಯೋಜಿಸಿದ ಇಂತಹ ಕೀರ್ತನೆಗಳ ಸಂಗ್ರಹವೊಂದು ಅಚ್ಚಾಗುತ್ತಿದ್ದು ಸದ್ಯದಲ್ಲಿ ಬಿಡುಗಡೆಯಾಗಲಿದೆ.

ಹೀಗೆ ಸಂಗೀತ ಗಾನ ಹಾಗೂ ಶಿಕ್ಷಣ ಎರಡರಲ್ಲೂ ಕೌಶಲ ಇರುವ 'ಸವ್ಯಸಾಚಿ' ಎನಿಸಿದ ಶ್ರೀ ವಾಸುದೇವ ಭಟ್ಟರಿಂದ ಹೆಚ್ಚಿನ ಕಲಾಸೇವೆಯನ್ನು ಸಂಗೀತ ರಸಿಕರು ನಿರೀಕ್ಷಿಸಬಹುದಾಗಿದೆ.

[ಕೃಪೆ: ನವಭಾರತ 29-01-1981]

ಸೂಚನೆ: ಇದು 'ನಾದವೈಭವಂ' ವಾಸುದೇವ ಭಟ್ಟರ ಕುರಿತು ಪ್ರಕಟವಾದ ಮೊದಲ ಪತ್ರಿಕಾ ಬರಹ. ತತ್ಕಾರಣಕ್ಕಾಗಿ ದಾಖಲಾರ್ಹ.

ಇತಿವೃತ್ತ

'ನಾದವೈಭವಂ' ಉಡುಪಿ ವಾಸುದೇವ ಭಟ್ಟರು

ಜನನ : 30 - 08 - 1938, ಉಡುಪಿಯಲ್ಲಿ.

ತಂದೆ, ತಾಯಿ : ಯು. ಸೀತಾರಾಮ ಭಟ್ ಮತ್ತು ಕಮಲಮ್ಮ (ಗಂಗಕ್ಕ)

ವೃತ್ತಿ : ಗಾನವಿದ್ಯಾಬೋಧಕನಾಗಿ ಬೆಥೆನಿ ಶಿಕ್ಷಣ ಸಂಸ್ಥೆಯ ವಿವಿಧ ವಿದ್ಯಾಕೇಂದ್ರಗಳಲ್ಲಿ 1957ರಿಂದ 1994.

ಪ್ರವೃತ್ತಿ : 1. ಗಾಯಕ, ಲೇಖಕ, ಶಿಕ್ಷಕ, ಸಂಗೀತ ನಿರ್ದೇಶಕ.

2. ಪತ್ರಿಕಾ ವರದಿಗಾರ - 1962 ರಿಂದ 1984ರ ವರೆಗೆ, 'ಮದ್ರಾಸ್ ಮೈಲ್', 'ಸಂಯುಕ್ತ ಕರ್ನಾಟಕ', 'ನವಭಾರತ', 'ಜನರಾಜ್', 'ಪ್ರಜಾಪ್ರಭುತ್ವ', 'ಪ್ರಜಾಮತ' ಪತ್ರಿಕೆಗಳಲ್ಲಿ.

3. 'ನಾದಥೆರಪಿ' ಎಂಬ ಮನೋವೈಜ್ಞಾನಿಕ ಶೋಧನೆಯ ಸಾಧನೆಯಲ್ಲಿ ತಲ್ಲೀನ.

4. ನಟನೆ: ನಾಟಕಗಳಲ್ಲಿ ಮತ್ತು ಚಲನಚಿತ್ರಗಳಲ್ಲಿ.

ಸಾಧನೆ : 1. ಉಡುಪಿಯಲ್ಲಿ 'ಆಧುನಿಕ ನಾಟ್ಯಸಂಘ' ಹವ್ಯಾಸಿ ಕಲಾವಿದರ ಕೂಟ ಸ್ಥಾಪನೆ (1958)

2. ಉಡುಪಿಯಲ್ಲಿ 'ವಾಸನ್ ಫೆಟೆಮೆನ್ಸ್ ಟ್ರೂಪ್' ಹವ್ಯಾಸಿ ನಾಟಕ ಕಲಾಸಂಘ ಸ್ಥಾಪನೆ (1967)

3. 'ಶಾಸ್ತ್ರೀಯ ಸಂಗೀತ ಗಾನೋಲ್ಲಾಸ ಕೂಟ' ಸ್ಥಾಪನೆ (1972)

4. 'ನಾದವೈಭವಂ ಸಂಗೀತ ಶಿಕ್ಷಣ ಸಂಶೋಧನ ಸಂಸ್ಥೆ' ಸ್ಥಾಪನೆ (1980)

5. 'ರೇಡಿಯೋ ಸಿಲೋನ್'ಗಾಗಿ 'ಕ್ರಿಸ್ತಗೀತೆಗಳು' ನಿರ್ದೇಶನ. ಉಡುಪಿಯ ಮಠಗಳಿಗಾಗಿ 'ವಾದಿರಾಜರ ಕೀರ್ತನೆಗಳು' ಸಂಗೀತ ನಿರ್ದೇಶನ. ಧ್ವನಿಸುರುಳಿ, ಎಲ್.ಪಿ. ರೆಕಾರ್ಡುಗಳ ನಿರ್ದೇಶನ.

6. ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ವಿವಿಧ ಸಾಂಸ್ಕೃತಿಕ ವೇದಿಕೆಗಳಲ್ಲಿ ಶಾಸ್ತ್ರೀಯ ಸಂಗೀತ, ನೃತ್ಯರೂಪಕ ಇತ್ಯಾದಿಗಳ ಪ್ರದರ್ಶನ.

7. ಚಲನಚಿತ್ರಗಳು: 'ನಾದವೈಭವಂ' ಲಾಂಛನದಲ್ಲಿ 'ಭುವನಜ್ಯೋತಿ' ಚಲನಚಿತ್ರಕ್ಕೆ ಸಂಭಾಷಣೆ, ಸಂಗೀತ ನಿರ್ದೇಶನ, ನಟನೆ, ಚಿತ್ರ ದಿಗ್ದರ್ಶನ 'ಊರ್ವಶಿ', 'ಅಂತ' ಮತ್ತು 'ಜಂಗಲ್‌ಗರ್ಲ್' ಚಿತ್ರಗಳಲ್ಲಿ ನಟನೆ

8. ಸಂಗೀತ ನಿರ್ದೇಶನ: ಕರ್ನಾಟಕ ಶಾಸ್ತ್ರೀಯ ಸಂಗೀತ, ಭಕ್ತಿಗೀತೆಗಳು, ಭಾವಗೀತೆಗಳು, ಜನಪದ ಗೀತೆಗಳು. ದಕ್ಷಿಣ ಭಾರತದ ಸುಪ್ರಸಿದ್ಧ ಗಾಯಕರೆನಿಸಿದ ಪಿ. ಬಿ. ಶ್ರೀನಿವಾಸ್, ಎಸ್. ಜಾನಕಿ, ರಾಜಕುಮಾರ್ ಭಾರತಿ, ಕಲ್ಯಾಣಿ ಮೆನೋನ್, ಮದ್ರಾಸ್ ಲತಾ, ಮಂಜುಳಾ ಗುರುರಾಜ್, ಎ. ವಿ. ಎಂ. ಮೂರ್ತಿ ಮುಂತಾದವರ ಗಾಯನಗಳಿಗೆ ಸಂಗೀತ ನಿರ್ದೇಶನ. ಶತಕದ ಹತ್ತಿರ ಧ್ವನಿಸುರುಳಿ, ಧ್ವನಿಪೆಟ್ಟಿಗೆಗಳಿಗೆ ಸಾಹಿತ್ಯ,ಸಂಗೀತ ನಿರ್ದೇಶನ.

9. 'ರಂಗಭೂಮಿ' ಮತ್ತು 'ಸಮೂಹ' ಸಂಸ್ಥೆಗಳ ರಂಗಪ್ರಯೋಗಗಳಿಗೆ ಸಂಗೀತ ನಿರ್ದೇಶನ.

10. ಕ್ರಿಶ್ಚಿಯನ್ ಗೀತೆಗಳನ್ನು ಹಾಡಲು ಹಲವೆಡೆ ಹದಿನೈದು ದಿನಗಳ 'ಕರ್ನಾಟಕ ಶಾಸ್ತ್ರೀಯ ಸಂಗೀತ' ಶಿಬಿರಗಳು.

ಪ್ರಶಸ್ತಿಗಳು : 1. ಉಡುಪಿ ಸರ್ವಜ್ಞ ಪೀಠದಿಂದ 'ದಾಸ ಸಂಗೀತ ವಿಶಾರದ' (1983)

2. ಮದ್ರಾಸ್ ಗಾಯನ ಕೂಟದ ಪರವಾಗಿ ಪಿ. ಬಿ. ಶ್ರೀನಿವಾಸ್‌ರಿಂದ 'ಕಲಾರತ್ನ' (1984)

3. ಬೆಂಗಳೂರು ಸಾರಸ್ವತ ಮಹಾವಿದ್ಯಾಲಯದ ಪರವಾಗಿ ಪ್ರಸಿದ್ಧ ಜ್ಯೋತಿಷ್ಯ ಶಾಸ್ತ್ರಜ್ಞ ಬಿ. ವಿ. ರಾಮನ್‌ರಿಂದ 'ಸಂಗೀತಸೇವಾದುರಂಧರ' (1986)

4. 'ಗಾನಕಲಾವಿಭೂಷಣ' - ಮಣಿಪಾಲ ಪತ್ರಕರ್ತರ ಅಭ್ಯುದಯ ಸಂಘದಿಂದ (1988)

5. ಪೋಪ್ ಜಾನ್ (2) ಪಾಲ್‌ರಿಂದ 'ಅಭಿನಂದನ ಪ್ರಶಸ್ತಿ' (1994)

6. ಉಡುಪಿ 'ರಂಗಭೂಮಿ' ಸಂಸ್ಥೆಯಿಂದ 'ಸಂಗೀತ ವಿಭೂಷಣ' (2002)

7. ಶ್ರೀ ಶ್ರೀ ಪೇಜಾವರ ಮಠಾಧೀಶರಿಂದ 'ಶ್ರೀರಾಮ ವಿಠಲ ಪ್ರಶಸ್ತಿ' (2004)

8. 'ಜಯಂಟ್ಸ್' ಉಡುಪಿ ಪ್ರಶಸ್ತಿ (2005)

9. ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ (2005)

10. ಸುವರ್ಣ ಕರ್ನಾಟಕ ಪ್ರಶಸ್ತಿ (2006)

ಕುಟುಂಬ : ಸಹಧರ್ಮಿಣಿ ಸುನಂದಾ. ನಾಲ್ವರು ಪುತ್ರಿಯರು - ವಸುದಾ, ಶುಭಾ, ಸುಮಾ ಮತ್ತು ಸ್ಮಿತಾ ಮನೆತನಕ್ಕೆ ಹೆಮ್ಮೆ ತರುವ ಕಲಾವಿದೆಯರು.

ಸಂಪರ್ಕ ವಿಳಾಸ : 'ನಾದವೈಭವಂ', 7-1-90, ಬೈಲಕೆರೆ, ಉಡುಪಿ - 576101
ದೂರವಾಣಿ: 0820-2524345 ಮತ್ತು 9480341367

ವಂಶ ವೃಕ್ಷ

- ನಾರಾಯಣ ಭಟ್ಟ (ಸತ್ಯವತಿ)
  - ಪುಟ್ಟಣ್ಣ ಭಟ್ಟ (ಪದ್ಮಾವತಿ)
    - ಲಕ್ಷ್ಮೀನಾರಾಯಣ ಭಟ್ಟ (ಸತ್ಯಕ್ಕ)
    - ಸೀತಾರಾಮ ಭಟ್ಟ (ಕಮಲಮ್ಮ)
      - ಸುಬ್ರಾಯ ಭಟ್ಟ (ಸುಲೋಚನ)
      - ಶ್ರೀಪತಿ ಭಟ್ (ಜಯಂತಿ)
      - ವಾಸುದೇವ ಭಟ್ಟ (ಸುನಂದಾ)
        - ವಸುದಾ (ಎಂ. ಎಸ್. ಗಿರಿಧರ್)
        - ಶುಭಾ (ಸುಬ್ರಹ್ಮಣ್ಯ ಬಾಸ್ರಿ)
        - ಸುಮಾ (ಅನಿಲ್ ಕುಮಾರ್)
        - ಸ್ಮಿತಾ (ರಾಘವೇಂದ್ರ)
      - ಸುನಂದಾ (ರಾಮಕೃಷ್ಣ ರಾವ್)
    - ಕೃಷ್ಣ ಭಟ್ಟ (ನಾಗವೇಣಿ)
    - ಲಕ್ಷ್ಮೀ (ಶ್ರೀನಿವಾಸ ಪಂಡಿತ)
  - ಗೋವಿಂದ ಭಟ್ಟ (ಅಕ್ಕಮ್ಮ)



ಪರಂಪರೆಯ ದಿವ್ಯಮೂಲ

ಬಿಡಾರಂ ಕೃಷ್ಣಪ್ಪನವರು



ಉಡುಪಿಯಲ್ಲಿ
ಕರ್ನಾಟಕ ಸಂಗೀತದ ಮಹತ್ವದ ಹೆಸರು,
ಬಿಡಾರಂ ಕೃಷ್ಣಪ್ಪನವರ ಆಪ್ತಶಿಷ್ಯ
ಮತ್ತು ವಾಸುದೇವ ಭಟ್ಟರ ಗುರು,
ಪಿಟೀಲು ಮಂಜುನಾಥಯ್ಯನವರು



ಭವ್ಯ ಪರಂಪರೆಯ ಮೂರನೆಯ ಮಜಲು

ವಾಸುದೇವ ಭಟ್ಟರು



ಬಿಡಾರಂ ಸ್ಥಾಪಿಸಿದ ಮೈಸೂರಿನ ಪ್ರಸನ್ನ ಶ್ರೀರಾಮ ಮಂದಿರದಲ್ಲಿ : ವಾಸುದೇವ ಭಟ್ಟರು.



ದಾಂಪತ್ಯದಲ್ಲಿ ನಾದೋಲ್ಲಾಸ-ವಾಸುದೇವ ಭಟ್ಟರು



ಮಕ್ಕಳೊಂದಿಗೆ ವಾಸುದೇವ ಭಟ್ ದಂಪತಿಗಳು



ಮಕ್ಕಳೇ ಸಂಗೀತದ ಸಂಭ್ರಮ



ಮೈಸೂರಿನಲ್ಲಿ 'ನಾದವೈಭವಂ' ಜವಾಬ್ದಾರಿ ಹೊತ್ತಿರುವ
ಸುನಿಲ್, ಸುಮಾ ದಂಪತಿಗಳು



ನಿಡುಗಾಲದ ಮಿತ್ರ
ಅಂಬಲಪಾಡಿ ಶ್ರೀಪತಿ ಆಚಾರ್ಯ ದಂಪತಿಗಳೊಂದಿಗೆ

18679



ಭುವನ ಜ್ಯೋತಿಯ ಅದ್ಭುತ ಕನಸು (ರವಿಭಟ್, ಶಿವು ಮತ್ತು ರಾಮಕೃಷ್ಣ)



ಭುವನ ಜ್ಯೋತಿ ಚಲನಚಿತ್ರದಲ್ಲಿ ವಾಸುದೇವ ಭಟ್ಟರೊಂದಿಗೆ ವಾಸುದೇವ ಶೆಟ್ಟಿಯವರು
ಮತ್ತು ರೆ॥ ಫಾದರ್‌ಮಾಥ್ಯೂ ವಾಸ್ ರವರು



'ಭುವನಜ್ಯೋತಿ'ಯ ಟ್ರಾಯಲ್ ವೀಕ್ಷಣೆ.



ರೆಕಾರ್ಡಿಂಗ್ ನಿರ್ವಹಣೆಯಲ್ಲಿ ವಾಸುದೇವ ಭಟ್ಟರು.



ಾಸುದೇವ ಭಟ್ಟರೊಂದಿಗೆ ಭುವನಜ್ಯೋತಿಯ ತಂಡ. ಸುಮಾ, ಎಲ್.ಎಸ್.ಶಾಸ್ತ್ರಿ, ರವಿಭಟ್,ಮುರಳಿ ಮತ್ತು ಕ್ಯಾಮರ ನಿರ್ವಹಿಸಿದ ಮಿತ್ರ ಅಶೋಕ್ ಕಶ್ಯಪ್



ನಾದ ವೈಭವಂ ಕ್ರಿಸ್ತಗಾನ ತರಂಗಿಣಿಯಲ್ಲಿ ಗಿರಿಧರ್ ಮತ್ತು ವಸುಧಾ.ಈಗ ಬೆಂಗಳೂರಿನಲ್ಲಿ ನಾದವೈಭವಂ ಮತ್ತು ಸತ್ಸಂಗದ ಜವಾಬ್ದಾರಿ ಹೊತ್ತ ದಂಪತಿ ಇವರು.



ದೀರ್ಘ ಕಾಲದ ಸಖ ಉಡುಪಿ ಜಯರಾಂ ರೊಂದಿಗೆ ಒಂದು ಕ್ಷಣ



ನವಿಲುಗೋಣ ಸಂಸ್ಥಾನದ ಧರ್ಮದರ್ಶಿ (ಉ.ಕ.ಜಿಲ್ಲೆ)



ನಾದವೈಭವಂ ನೂರರ ಸತ್ಸಂಗ ಸಂಭ್ರಮ.



ನಾದವೈಭವಂ 'ಜೊತೆಯಾಟದ ಉತ್ಸಾಹ'



ಭಕ್ತಿ ರಸಮಂಜರಿ ಕಾರ್ಯಕ್ರಮದಲ್ಲಿ ಕೃಷ್ಣ ಕಾರಂತ್,ಅಂಶುಮಾಲಿ ಮತ್ತು ವಾಸುದೇವ ಭಟ್ಟರು



ಶಿರೂರು ಶ್ರೀಪಾದರ ದಿವ್ಯ ಸಮಕ್ಷಮದಲ್ಲಿ ನಾದವೈಭವಂ ನಾದಾಭಿಯಾನ ಆರಂಭ.



‘ನಾದವೈಭವಂ’ನಿರ್ದೇಶನದ ‘ಶ್ರೀ ಮಾರಲದೇವಿ ಭಕ್ತಿ ಗೀತೆಗಳು’ ಧ್ವನಿ ಸುರುಳಿ ಬಿಡುಗಡೆ.



ಇಪ್ಪತ್ತು ವರ್ಷಗಳ ಹಿಂದೆ ಆದಮಾರು ಮಠಾಧೀಶ ಶ್ರೀಶ್ರೀ ವಿಶ್ವಪ್ರಿಯ ತೀರ್ಥರ ಪ್ರಥಮ ಪರ್ಯಾಯ ಸಂದರ್ಭದಲ್ಲಿ ‘ಶುಭಾಶಯ’ಧ್ವನಿ ಸುರುಳಿ ಬಿಡುಗಡೆ,ಪುನರೂರು ಬೆರಳೊತ್ತಿನಿಂದ.



ಉಡುಪಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಕ್ರಮವೊಂದರಲ್ಲಿ ಮುಖ್ಯ ಅತಿಥಿಯಾಗಿ



ಬೆಂಗಳೂರಿನಲ್ಲಿ ಅಂಕಿತ ಪ್ರೊಡಕ್ಷನ್‌ರವರ 'ಒಮ್ಮೆನೋಡಿದೆ'
ಚಲನಚಿತ್ರದ ಮುಹೂರ್ತ ನಿರ್ವಹಣೆ



'ಕನ್ನಡ ಸಂಘ ಹೊಸಂಗಡಿ' ಇವರಿಗಾಗಿ 'ವಾಸುದೇವ ಗಾನಸುಧೆ'



ಕಾಂತಾವರ ಕನ್ನಡ ಸಂಘದಿಂದ ಅಭಿನಂದನೆ ಅಭಿವಂದನೆ.



ಉರ್ವ ಮಾರಿಗುಡಿಯಲ್ಲಿ ಅಭಿನಂದನೆ
ಜ್ಯೋತಿಷಿ ಡಾ.ಪ್ರಭಾಕರ ರಾವ್ ಮತ್ತು ದೇವಸ್ಥಾನದ ಧರ್ಮದರ್ಶಿಗಳು.



ರಂಗಭೂಮಿ ಉಡುಪಿ 'ಸಂಗೀತ ವಿಭೂಷಣ' ಪ್ರಶಸ್ತಿ ಸಲ್ಲಿಸುತ್ತಿರುವ ಸಂದರ್ಭ ಆನಂದ ಗಾ
ಡಾ.ಎಚ್.ಶಾಂತಾರಾಂ,ಡಯಾನ ಮೋಹನದಾಸ ಪೈ, ಅಣ್ಣಾಜಿ ಬಲ್ಲಾಳ್ ರೊಂದಿಗೆ



ನೂತನ್ ಪಬ್ಲಿಕೇಶನ್ಸ್ ಸಮಾರಂಭದಲ್ಲಿ ವಾಸುದೇವ ಭಟ್ ದಂಪತಿಗಳಿಗೆ ಸನ್ಮಾನ.
ರಾಮದಾಸ್,ವಾಮನ್ ನಂದಾವರ,ಗೋಪಾಲ್ ಶೆಟ್ಟಿ ಮತ್ತು ಜಯಕರ ಶೆಟ್ಟಿಯವರೊಂದಿಗೆ



ಲಯನ್ಸ್ ಕ್ಲಬ್, ಗವರ್ನರ್-ಇಂದ್ರಾಳಿ,ಉಡುಪಿ ಇವರಿಂದ ಸನ್ಮಾನ.



ವಿಪ್ರ ಸಮಾಗಮ, ಮಂಗಳೂರು ಇವರಿಂದ ಅಭಿವಂದನೆ. ಕರ್ನಾಟಕ ಬ್ಯಾಂಕ್ ಅಧ್ಯಕ್ಷ ಅನಂತಕ
ಡಾ.ಸಿ.ಆರ್.ಬಲ್ಲಾಳ್ ಉಪಸ್ಥಿತಿಯಲ್ಲಿ.



'ನೆಲಸಂಪಿಗೆ' ಬಿಡುಗಡೆ ಸಂದರ್ಭದಲ್ಲಿ ಲೇಖಕ ಡಾ. ಉಪ್ಪಂಗಳರಿಂದ ಅಭಿನಂದನೆ.



ಉಡುಪಿಯ ಹಿರಿಯ ಚೇತನ ಕೆ.ಕೆ.ಪೈಯವರಿಂದ ಅಭಿನಂದನೆ.



ಕೆ.ಎಸ್.ಅನಂತ ಪದ್ಮನಾಭ ಅಚಾರ್ಯರ ಪುಣ್ಯ ಸಂಸ್ಮರಣ ಸಮಾರಂಭದಲ್ಲಿ ಸನ್ಮಾನ.



ಪರ್ಕಳ ಗೋಪಾಲಕೃಷ್ಣ ಉಪಾಧ್ಯಾಯರ ಮನೆಯಲ್ಲಿ ಜರುಗಿದ 'ನಡುಮನೆ'
ಸಾಹಿತಿ ಮಿತ್ರರೊಂದಿಗೆ ವಾಸುದೇವ ಭಟ್ಟರು.



ನಾದವೈಭವಂ ಸಂಗೀತ ಕಾರ್ಯಕ್ರಮದಲ್ಲಿ ಮಾಧವಾಚಾರ್,
ಸುಮಾ ಎಲ್.ಎಸ್.ಶಾಸ್ತ್ರಿ,ವಸುದಾ,ದೇವರಾಜ್ ಮತ್ತು ವಾಸುದೇವ ಭಟ್ಟರು



ಜ್ಯೋತಿಷಿ, ಸಂಗೀತ ತೆರಪಿಯಲ್ಲಿ ಮಾರ್ಗದರ್ಶಕ
ಕೆ.ಜಿ.ರಾಮಚಂದ್ರರೊಂದಿಗೆ ವಾಸುದೇವ ಭಟ್ಟರು.



ನಾದವೈಭವಂನ ಹಿತೈಷಿ, ಮಾರ್ಗದರ್ಶಕ ,ದೀರ್ಘಕಾಲದ ಮಿತ್ರ
ಮೈಸೂರಿನ ಉದ್ಯಮಿ ಶ್ರೀನಿವಾಸ ತಂತ್ರಿ ಗಳೊಂದಿಗೆ.



'ನಾದವೈಭವಂ'ನಲ್ಲಿ ನಾದಾಭ್ಯಾಸ



'ನಾದವೈಭವಂ'ನಲ್ಲಿ ನಾದಾಭ್ಯಾಸ



'ನಾದವೈಭವಂ'ನಲ್ಲಿ ನಾದಾಭ್ಯಾಸ



'ನಾದವೈಭವಂ'ನಲ್ಲಿ ನಾದಾಭ್ಯಾಸ



'ನಾದವೈಭವಂ'ನಲ್ಲಿ ನಾದಾಭ್ಯಾಸ



ನಾದವೈಭವಂನ ಹಿತೈಷಿ, ಮಾರ್ಗದರ್ಶಕ, ಕವಿ ಮಿತ್ರ ಡಾ.ನಾ. ಮೊಗಸಾಲೆಯವರೊಂದಿ
ಒಂದು ಆತ್ಮೀಯ ಕ್ಷಣ



ಉಡುಪಿಯ ಮಹಿಳಾ ಸರಕಾರಿ ಶಿಕ್ಷಕ ತರಬೇತಿ ಸಂಸ್ಥೆಯ ವಜ್ರಮಹೋತ್ಸವದ ಸಂದರ್ಭದಲ್ಲಿ
ಮಾ,ವಸುದಾ,ಬಾಲಕೃಷ್ಣ ಆಚಾರ್ಯ,ಮಾಧವಾಚಾರ್ಯ,ಮುರಳಿ ಮತ್ತು ಮಹೇಶ್‌ರೊಂದಿಗೆ.



ಉಡುಪಿ ಜಿಲ್ಲಾ ಬ್ರಾಹ್ಮಣ ಸಂಘದ ದಶಮಾನೋತ್ಸವ ಸಂದರ್ಭದಲ್ಲಿ
ಪರ್ಯಾಯ ಶ್ರೀ ಕೃಷ್ಣಾಪುರ ಮಠಾದೀಶರಿಂದ ಸಮ್ಮಾನ.



ಸಂಜೆ ಬಾನಿನ ತುಂಬ ಹಗಲು ಗನಸಿನ ಚಿತ್ರ.



'ನಾದವೈಭವಂ'ನ ಸಂಪರ್ಕಾಧಿಕಾರಿ
ಎಚ್.ರಾಘವೇಂದ್ರರೊಂದಿಗೆ

ವಾಸುದೇವ ಉವಾಚ



ಕನ್ನಡ ಭಾಷೆಯಲ್ಲೇ ವಿಪುಲವಾಗಿರುವ ಸಾಹಿತ್ಯವನ್ನು ಬಳಸಿಕೊಂಡೇ ನಮ್ಮ ಕರ್ನಾಟಕ ಸಂಗೀತ ಮೆರೆಯಬೇಕು.ತನ್ಮೂಲಕ ಕನ್ನಡದ ಎಲ್ಲಾ ಪ್ರಕಾರಗಳ ಕಾವ್ಯವನ್ನು ಪರಿಚಯಿಸಿಕೊಂಡು ಭಾಷೆಯ ಮಹತ್ವದ ಅರಿವಿನೊಂದಿಗೆ, ಸಂಗೀತದ ಪ್ರಭಾವವೂ ವಿಪ್ಪಿದೆಯೆಂಬುದನ್ನು ಅರಿಯುವಂತಾಗಬೇಕು

–ಇದು ನನ್ನ ಕನಸು

'ವಚನ ಸಾಹಿತ್ಯ'–ಇದು ಕನ್ನಡ ಭಾಷೆಯಲ್ಲಿ ಮಾತ್ರವೇ ಇರುವ ಸಾಹಿತ್ಯ ಪ್ರಕಾರ.ಅಪಾರ ಅರ್ಥ–ಆಶಯ(ಪಾರಮಾರ್ಥಿಕ–ಲೌಕಿಕ) ಹೊಂದಿರುವ ಈ ವಚನಗಳು ಸಂಗೀತ ಮಾಧ್ಯಮದ ಮೂಲಕ ಜನಮನ ತಟ್ಟುವಂತಾಗಬೇಕು.

–ಇದು ನನ್ನ ಆಶಯ

ಎಪ್ಪತ್ತೆರಡು ಜನಕರಾಗಗಳ ಪೈಕಿ ಪ್ರತಿಯೊಂದರಲ್ಲೂ ಸೃಷ್ಟಿಯಾಗುವ 484 ಜನ್ಯರಾಗಗಳ ಬಗೆಗಿನ ಪ್ರಾಥಮಿಕ ಪರಿಚಯ ಕೃತಿಗಳನ್ನು ಒಂದೊಂದಾಗಿ 'ನಾದವೈಭವಂ' ಪ್ರಕಾಶನದಡಿಯಲ್ಲಿ ಹೊರತರಬೇಕು.

–ಇದು ನನ್ನ ಮುಂದಿನ ಹೆಜ್ಜೆ

ನಾದವೈಭವಂ ಸಂಸ್ಥೆಯ 'ನಾದಚಿಕಿತ್ಸೆ'(ನಾದತೆರಪಿ) ಯೋಜನೆ ಸಹೃದಯರ ಸಹಕಾರದಿಂದ ಲೋಕಾರ್ಪಣೆಗೊಂಡು ಯಶಸ್ಸು ಪಡೆಯಬೇಕು.

–ಇದು ನನ್ನ ಸಂಕಲ್ಪ

ಪ್ರಕಾಶಕರು :

'ನಾದವೈಭವಂ' ಉಡುಪಿ ವಾಸುದೇವಭಟ್ಟರ ಅಭಿನಂದನ ಸಮಿತಿಯ ಪರವಾಗಿ

ಕಾಂತಾವರ ಕನ್ನಡ ಸಂಘ

ಕಾಂತಾವರ–574129

ಕಾರ್ಕಳ ತಾಲೂಕು,ಉಡುಪಿ ಜಿಲ್ಲೆ.

ಬೆಲೆ ರೂ. 250/–